
ರಘುಕುಲ ಚರಿತಂ

(ಕಾಳಿದಾಸನ ರಘುವಂಶ ಕಾವ್ಯದ ಗದ್ಯಾನುವಾದ)

ಅನುವಾದಕರು:
ದೊಡ್ಡಬೆಲೆ ನಾರಾಯಣಶಾಸ್ತ್ರಿ

ಸಂಪಾದಕರು:
ಪ್ರೊ. ಜಿ. ಅಶ್ವತ್ಥನಾರಾಯಣ



ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು-೫೬೦೦೫೬

ಸಾಹಿತ್ಯ ಪ್ರಕಾರ
ಅನುವಾದ

ಲೇಖಕರ ಪ್ರತಿ
ಉಚಿತ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೪೮೩

ರಘುಕುಲ ಚರಿತಂ

ರಘುಕುಲ ಚರಿತಂ

(ಕಾಳಿದಾಸನ ರಘುವಂಶ ಕಾವ್ಯದ ಗದ್ಯಾನುವಾದ)

ಅನುವಾದಕರು

ದೊಡ್ಡಬೆಲೆ ನಾರಾಯಣಶಾಸ್ತ್ರಿ

ಸಂಪಾದಕರು

ಪ್ರೊ. ಜಿ. ಅಶ್ವತ್ಥನಾರಾಯಣ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ ಅಂಚೆ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬

RAGHUKULA CHARITHAM : Translation of Kalidasa's Raghuvamsha (Sanskrit) translated by Doddabele Narayana Shastri. Published by Ishwar K. Mirji, Registrar, Kuvempu Bhasha Bharathi Pradikara; Kalagrama, Jnana Bharathi Post, Mallattahalli, Bangalore-560 056.

Third Edition	: 2022
Pages	: lx +296
Price	: 220/-

ಎರಡನೇ ಮುದ್ರಣ	:	೨೦೨೨
ಪುಟಗಳು	:	lx + ೨೯೬
ಬೆಲೆ	:	ರೂ. ೨೨೦/-
ಪ್ರತಿಗಳು	:	೫೦೦
ISBN	:	೯೭೮-೯೩-೯೧೮೧೨-೨೨-೫

ಪ್ರಕಾಶಕರು
ಈಶ್ವರ್ ಕೆ. ಮಿರ್ಜಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ ಅಂಚೆ
ಮಲ್ಲತ್ತಹಳ್ಳಿ, ಬೆಂಗಳೂರು-೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

Title	: **RAGHUKULA CHARITHAM**
Author's Name	: Kalidasa
Translator's Name	: Doddabele Narayana Shastri
Published By	: Ishwar K. Mirji, Registrar Kuvempu Bhasha Bharathi Pradhikara
Publisher's Address	: Kuvempu Bhasha Bharathi Pradhikara Kalagrama, Jnana Bharathi Post Mallathahalli, Bengaluru-560056
Printer's Details	: Raja Printers, Bengaluru
Edition Details	: 3rd Edition
ISBN	: 978-93-91812-22-5
Copyright	: Kuvempu Bhasha Bharathi Pradhikara

ಮುದ್ರಕರು
ರಾಜಾ ಪ್ರಿಂಟರ್ಸ್,
ನಂ. ೨೦/೧, ೧ನೇ ಅಡ್ಡರಸ್ತೆ, ೩ನೇ ಮುಖ್ಯ ರಸ್ತೆ
ಪುಖ್‌ರಾಜ್ ಲೇಔಟ್, ಬನ್ನೇರುಘಟ್ಟ ರಸ್ತೆ
ಬೆಂಗಳೂರು - ೫೬೦೦೩೦. ದೂ : ೦೮೦-೨೨೨೩೪೦೬೬

ಅಧ್ಯಕ್ಷರ ಮಾತು

'ಜ್ಞಾನ ಮತ್ತು ಸಾಹಿತ್ಯದ ನಿರಂತರ ಕೊಡುಕೊಳ್ಳುವಿಕೆಯ ಮೂಲಕ ಕನ್ನಡ ಸಂಸ್ಕೃತಿಯ ಸಂವರ್ಧನೆ' ಎಂಬುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಧ್ಯೇಯವಾಕ್ಯವಾಗಿದೆ. ಈ ಕೊಡುಕೊಳ್ಳುವಿಕೆಯು ವ್ಯಕ್ತಿ, ಸಂಸ್ಥೆ, ಭಾಷೆ ಇವೆಲ್ಲ ಘಟಕಗಳ ನಡುವೆ ಪರಸ್ಪರ ನಡೆಯಬೇಕಾಗುತ್ತದೆ. ಹೀಗಾಗಿ ಕನ್ನಡದಲ್ಲಿ ಹುಟ್ಟಿರುವ ಜ್ಞಾನ ಮತ್ತು ಸಾಹಿತ್ಯವನ್ನು ಸಾಧ್ಯವಾದಷ್ಟು ಹೆಚ್ಚು ಕನ್ನಡಿಗರಿಗೆ ಮತ್ತು ಕನ್ನಡೇತರರಿಗೆ ತಲುಪಿಸಬೇಕಾಗಿದೆ. ಅದೇ ರೀತಿ ಹೊರಗಿನ ಜ್ಞಾನ ಮತ್ತು ಸಾಹಿತ್ಯವು ಕನ್ನಡಿಗರಿಗೆ ಸುಲಭವಾಗಿ ಸಿಗುವಂತೆ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಪ್ರಾಧಿಕಾರವು ಕಾರ್ಯೋನ್ಮುಖವಾಗಿದೆ.

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಕಾಳಿದಾಸ ಮಹಾಕವಿಗೆ ಇರುವ ಸ್ಥಾನ ಏನು ಎನ್ನುವುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಜಗತ್ತಿನಲ್ಲಿಯೇ ಪ್ರಸಿದ್ಧನಾದ ಕವಿ ಕಾಳಿದಾಸ. ಅವನು ರಚಿಸಿದ್ದೆಲ್ಲವೂ ಮಹಾನ್ ಕೃತಿಗಳೇ. ರಘುವಂಶವು ಸೂರ್ಯವಂಶದ ಮಹಾರಾಜರ ಚರಿತ್ರೆಯನ್ನು ಹೇಳುವ ಕಾವ್ಯ. ರಘುವಂಶ ಕಾವ್ಯಕ್ಕೆ ಅನೇಕ ಮಹಾಮಹಾ ಪಂಡಿತರು ಟೀಕೆಗಳನ್ನು ರಚಿಸಿದ್ದಾರೆ ಎನ್ನುವುದು ಈ ಕಾವ್ಯದ ಮಹತ್ತ್ವವನ್ನು ಹೇಳುತ್ತದೆ. ಇಂದಿಗೂ ದೇಶದ ವಿವಿಧ ಕಡೆಗಳಲ್ಲಿ ಸಂಸ್ಕೃತ ವಿದ್ವಾಂಸರು ಈ ಕಾವ್ಯದ ಬಗ್ಗೆ ಪ್ರವಚನಗಳನ್ನು, ವ್ಯಾಖ್ಯಾನಗಳನ್ನು ನೀಡುತ್ತಾ ಕಾವ್ಯರಸಿಕರ ಮನಸ್ಸನ್ನು ತಣಿಸುತ್ತಿದ್ದಾರೆ.

ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ದೊಡ್ಡ ವಿದ್ವಾಂಸರಾಗಿದ್ದವರು. ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ ಬಸವಪ್ಪ ಶಾಸ್ತ್ರಿಗಳೂ ಸೇರಿದಂತೆ ಕೆಲವರು ವಿದ್ವಾಂಸರು ಕಾಳಿದಾಸನ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದರು. ಕನ್ನಡಿಗರಿಗೆ ಅದರಲ್ಲೂ ಸಂಸ್ಕೃತದ ಪರಿಚಯ ಅಷ್ಟಾಗಿ ಇಲ್ಲದವರಿಗೆ ಕನ್ನಡ ಗದ್ಯಾನುವಾದವೇ ಸೂಕ್ತ. ಇಪ್ಪತ್ತನೇ ಶತಮಾನದಲ್ಲಿ ಕಾಳಿದಾಸನ ರಘುವಂಶವನ್ನು ಗದ್ಯಾನುವಾದ ಮಾಡಿ ಕಾಳಿದಾಸನನ್ನು ಜನಮನಕ್ಕೆ ಹತ್ತಿರವಾಗಿಸಿದವರು ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು. ಈಗಿನ ಓದುಗರಿಗೂ ಈ ಗದ್ಯಾನುವಾದ ಲಭ್ಯವಾಗಬೇಕು ಎನ್ನುವ ನಿಟ್ಟಿನಲ್ಲಿ ಪ್ರಾಧಿಕಾರವು ಮರುಮುದ್ರಣಕ್ಕೆ

ಮುಂದಾಯಿತು. ಈ ಕನ್ನಡ ಗದ್ಯಾನುವಾದವನ್ನು ಈಗ ಸಂಪಾದಿಸಿ ಸೂಕ್ತ ಪ್ರಾಸ್ತಾವಿಕ ಮಾತುಗಳೊಂದಿಗೆ ಸಿದ್ಧಪಡಿಸಿಕೊಟ್ಟ ಹಿರಿಯ ವಿದ್ವಾಂಸರಾದ ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ವತಿಯಿಂದ ಈ ಕೃತಿಯನ್ನು ಪ್ರಕಟಿಸಲು ತುಂಬು ಮನಸ್ಸಿನಿಂದ ಸಹಕರಿಸಿದ ಪ್ರಾಧಿಕಾರದ ಸದಸ್ಯರಿಗೆ, ಪ್ರಾಧಿಕಾರದ ಕೆಲಸಗಳಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಂಡಿರುವ ರಿಜಿಸ್ಟ್ರಾರ್ ಶ್ರೀ ಈಶ್ವರ್ ಕು ಮಿರ್ಜಿ ಅವರಿಗೆ, ಪ್ರಾಧಿಕಾರದ ಸಿಬ್ಬಂದಿ ವರ್ಗದವರಿಗೆ, ಅಂದವಾಗಿ ಮುದ್ರಿಸಿರುವ ಮುದ್ರಣಾಲಯದ ಮಾಲಿಕರಿಗೆ ಹಾಗೂ ಅಲ್ಲಿಯ ಎಲ್ಲಾ ಸಿಬ್ಬಂದಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಡಾ. ಅಜಕ್ಕಳ ಗಿರೀಶ ಭಟ್
ಅಧ್ಯಕ್ಷರು

ಅನುವಾದಕನ ಅರಿಕೆ

(೧೯೧೧ರಲ್ಲಿ ಮೊದಲ ಭಾಗಕ್ಕೆ ಬರೆದದ್ದು)

ಈ ಕಾವ್ಯದ ಕಥಾಸಾರವು – ಬಹು ರಮಣೀಯವಾಗಿರುವುದರಿಂದಲೂ, ಲೋಕಾನುಭವವನ್ನು ಬಹುತರವಾಗಿ ತಿಳಿಸುವುದರಿಂದಲೂ, ಆಮೂಲಾಗ್ರವಾಗಿ ಕಥನಭಾಗವು ಬಹುಮಂದಿಗೆ ತಿಳಿಯದಿರುವುದರಿಂದಲೂ, ಸಂಸ್ಕೃತವನ್ನರಿಯದ ನಮ್ಮ ಕನ್ನಡಿಗರಿಗೆ ಕೈಲಾದಮಟ್ಟಿಗೆ ಸುಲಭವಾಗಿ ತಿಳಿಸಬೇಕೆಂಬ ಬಯಕೆಯಿಂದ ಕಾಳಿದಾಸನ ಕಾವ್ಯಕ್ರಮವನ್ನನುಸರಿಸಿ ಈ ಕಥೆಯನ್ನು ಬರೆಯಬೇಕೆಂದು ಪ್ರಯತ್ನಿಸಿ ಕಥಾಮುಖದಿಂದ ದಿಲೀಪ, ರಘು, ಅಜ, ಇವರ ಚರಿತ್ರವು ಪೂರ್ಣವಾಗಿ ದಶರಥನ ಆಧಿಪತ್ಯದ ಆರಂಭದವರೆಗೆ ಈ ಮೊದಲನೆಯ ಸಂಪುಟವನ್ನು ಸಿದ್ಧಪಡಿಸಿದೆನು, ಎರಡನೆಯ ಸಂಪುಟವೂ ಅಣಿಯಾಗುತ್ತಲಿದೆ. ಮುಂದೆ ಈತನ ಕಾವ್ಯನಾಟಕಗಳನ್ನೆಲ್ಲ ಹೀಗೆಯೇ ಬರೆಯಬೇಕೆಂಬ ಬಯಕೆಯುಂಟು.

ಆದರೆ ಈ ನಮ್ಮ ನಾಡಿನಲ್ಲಿ ಪ್ರೋತ್ಸಾಹಕರು ವಿರಳರಾಗಿದ್ದಾರೆ. ಕಾಲಕ್ರಮದಲ್ಲಿ ಹೇರಳರಾಗಿ ಸರಳರೂ ಆಗಬಹುದು. ಭ್ರಮಪ್ರಮಾದಗಳು ಮನುಷ್ಯ ಸಾಧಾರಣಧರ್ಮಗಳಾದುದರಿಂದ ಈ ನನ್ನ ರಚನೆಯಲ್ಲಿ ವ್ಯತ್ಯಾಸಗಳನ್ನು ಪ್ರಾಜ್ಞರು ತಿಳಿಸಿದರೆ ಕೃತಜ್ಞತೆಯಿಂದ ಸ್ವೀಕರಿಸಿ ಭವಿಷ್ಯನ್ಮುದ್ರಣದಲ್ಲಿ ಸರಿಪಡಿಸುವೆನು.

ಬೆಂಗಳೂರುಸಿಟಿ
1911

ದೊಡ್ಡಬೆಲೆ ನಾರಾಯಣಶಾಸ್ತ್ರಿ
ಪರಿವರ್ತನಕಾರ

ಉಪಹಾರ

(೧೯೧೩ರಲ್ಲಿ ಎರಡನೆಯ ಭಾಗಕ್ಕೆ ಬರೆದದ್ದು)

ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪೂರ್ಣ ಪಾಂಡಿತ್ಯವನ್ನು ಪಡೆದು, ಶ್ರೀಮನ್ಮಹೀಶೂರ ಸಂಸ್ಥಾನದಲ್ಲಿ ವಿದ್ಯಾಭ್ಯಾಸ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಪದವಿಯನ್ನು ಅಲಂಕರಿಸುತ್ತಾ ದೇಶವತ್ಸಲರಾಗಿ, ಉದಾರಹೃದಯರೆನಿಸಿ, ಶಾಂತಿ, ಮಹತ್ವ, ರಾಜಭಕ್ತಿ ಯಶಸ್ಸು, ಋಜುತ್ವ, ಏತದಾದ್ಯಸ್ಥಾನವಾಗಿರುವ ಶ್ರೀಮಾನ್, ಎಂ, ಶಾಮರಾಯರು, ಎಂ, ಎ, ಇವರು–ಕವಿಕುಲಲಲಾಮನಾದ ಕಾಳಿದಾಸ ಮಹಾಕವಿಯ ವಿಚಿತ್ರಸೃಷ್ಟಿಯಾಗಿರುವ ರಘುವಂಶ ಮಹಾಕಾವ್ಯದಲ್ಲಿನ ಮಧುರರಸವನ್ನು ಕನ್ನಡಿಗರು ಆಸ್ವಾದಿಸಿ ಆನಂದಿಸಲಿ, ಎಂಬುದಾಗಿ ಅಪ್ಪಣೆ ಕೊಡಿಸಿದ್ದನ್ನು ಆದರ ಪೂರ್ವಕವಾಗಿ ಅಂಗೀಕರಿಸಿ, ಹತ್ತೊಂಬತ್ತು ಸರ್ಗಗಳ ಕಥೆಯನ್ನೂ ಕನ್ನಡ ಭಾಷೆಯಲ್ಲಿ ವಚನರೂಪದಿಂದ ಬರೆದಿದ್ದೇನೆ. ಚೀಫ್ ಇಂಜಿನಿಯರ್, ರಾಜಸಭಾಭೂಷಣಂ, ಶ್ರೀಮಾನ್ ಕರ್ಪೂರ ಶ್ರೀನಿವಾಸರಾವ್, ಬಿ, ಎಸ್, ಸಿ, ಎಲ್, ಸಿ, ಇ, ಇವರ ಅಪ್ಪಣೆಯನ್ನನುಸರಿಸಿ ಸಂಸ್ಕೃತ ವಚನರೂಪದಲ್ಲಿ ಬರೆಯಲು ಪ್ರಯತ್ನಿಸಿದ್ದೇನೆ. ಭ್ರಮಪ್ರಮಾದಗಳು ಮನುಷ್ಯ ಸಾಧಾರಣ ವಾಗಿರುವುದರಿಂದಲೂ, ಕೇವಲ ಗುಣಮಯವೇ ಆಗಿಯಾಗಲಿ, ಅಥವಾ ದೋಷಮಯವೇ ಆಗಿಯಾಗಲೀ, ಇರುವ ವಿಷಯವೇ ಇಲ್ಲದಿರುವುದರಿಂದಲೂ, ದೋಷಜ್ಞರು ಗುಣಾಂಶಗ್ರಹಣದಿಂದ ಸಂತೋಷಿಸಬೇಕು ಎಂದು ಪ್ರಾರ್ಥಿಸುವ,

ಬೆಂಗಳೂರು ಸಿಟಿ
೧೯೧೩

ದೊಡ್ಡಬೆಲೆ ನಾರಾಯಣ ಶಾಸ್ತ್ರಿ
ಪರಿವರ್ತನಕಾರ

ದ್ವಿತೀಯ ಮುದ್ರಣದ ವಿನಂತಿ
(೧೯೨೩ರಲ್ಲಿ ೨ನೇ ಮುದ್ರಣಕ್ಕೆ ಬರೆದಿದ್ದು)

ನಮ್ಮ ನಾಡಿನ ಭಾಷಾಭಿಮಾನಿಗಳಾದ ಧರ್ಮಬಾಂಧವರ ಉದಾರವಾದ ಆಶ್ರಯದಿಂದ ಪ್ರಥಮ ಮುದ್ರಣದ ಸಂಪುಟಗಳೆಲ್ಲಾ (ಭಾಗ 1 ಮತ್ತು 2) ವೆಚ್ಚವಾದವು. ವಿದ್ಯಾಶಾಖೆಯ ಪ್ರಭುಗಳೂ ಟೆಕ್ಸ್ಟ್‌ಬುಕ್ ಕಮಿಟಿಯವರೂ ದಯೆತೋರಿ ಶಾಲೆಗಳಲ್ಲಿ ಪಠ್ಯಪುಸ್ತಕವನ್ನಾಗಿ ನಿಯಮಿಸಿದ್ದರಿಂದ ಈ ದ್ವಿತೀಯಮುದ್ರಣಕ್ಕೆ ಪ್ರೋತ್ಸಾಹವು ದೊರೆಯಿತು.

ಅವರೆಲ್ಲರಿಗೂ ವಿಧೇಯನಾಗಿ ಕೃತಜ್ಞತೆಯನ್ನು ಸಮರ್ಪಿಸುತ್ತಿದ್ದೇನೆ.

ಬೆಂಗಳೂರು ಸಿಟಿ
೧೯೨೩

ಆಸ್ಥಾನ ವಿದ್ವಾನ್ ದೊಡ್ಡಬೆಲೆ ನಾರಾಯಣಶಾಸ್ತ್ರಿ
ಪ್ರಧಾನಪಂಡಿತ,
ವೆಸ್ಲಿಯನ್ ಮಿಷನ್ ಕೊಲಿಜಿಯೇಟ್ ಹೈಸ್ಕೂಲ್

ಕಥಾಮುಖಂ

ಈ ಭೂಮಂಡಲದಲ್ಲಿ ಸರಸಕವಿತಾಸಾಮ್ರಾಜ್ಯ ಸಾರ್ವಭೌಮನೆಂದರೆ ಕಾಳಿದಾಸ ಮಹಾಕವಿಯೊಬ್ಬನಲ್ಲದೆ ಬೇರಾರೂ ಅಲ್ಲ, ಇದರಿಂದ ಇತರ ಮಹಾ ಕವಿಗಳಿಗೆ ದೂಷಣೆಯಲ್ಲ, ಎಷ್ಟೋ ಮಂದಿ ಮಹಾಕವಿಗಳೂ ಇದ್ದಾರೆ. ಅವರೊಳಗೆ ಈತನು ಪ್ರಥಮಗಣನೀಯನೆನಿಸಿದಾನೆ....

ಶ್ಲೋ ॥ ಪುರಾಕವೀನಾಂ ಗಣನಾಪ್ರಸಂಗೇ ।
ಕನಿಷ್ಠಿಕಾಽಧಿಷ್ಠಿತ ಕಾಳಿದಾಸಃ ॥
ಅದ್ಯಾಪಿ ತತ್ತುಲ್ಯ ಕವೇರಭಾವಾತ್ ।
ಅನಾಮಿಕಾ ಸಾರ್ಥವತೀ ಬಭೂವ ।

(ಹರಿಹಾರಾವಳಿ)

"ಪೂರ್ವಕವಿಗಳೊಳಗೆ ಹೆಸರುವಾಸಿಯಲ್ಲಿ ಮೊದಲನೆಯವರಾರು? ಎಂದು ಕೈಬೆರಳುಗಳಿಂದ ಲೆಕ್ಕಮಾಡಲಿಕ್ಕೆ ಹೊರಟಾಗ–ಕಿರಿಬೆರಳು, ಮೊಟ್ಟಮೊದಲು ಕಾಳಿದಾಸನ ಹೆಸರಿಗಾಸರೆಯಾಯಿತು. ಬಳಿಕ ಆತನಿಗೆಣೆಯಾದ ಮತ್ತೊಬ್ಬ ಕವಿಯ ಹೆಸರಾವುದು? ಎಂದು ಎಣಿಕೆ ಮಾಡುವಲ್ಲಿ – ಇಂದಿನವರೆಗೆ ನೋಡುತ್ತ ಬಂದರೂ ಕಿರಿಬೆರಳಿನಂತೆ ಮಡಿಸಿ ಎಣಿಸಲಿಕ್ಕೆ ಕಾಳಿದಾಸನಿಗೆ ಸಮಾನನಾದ ಕವಿಯ ಹೆಸರೇ ದೊರೆಯದೆ ಹೋದುದರಿಂದ, ಕಿರಿಬೆರಳಿನ ಪಕ್ಕದ ಬೆರಳಿಗೆ ಅನಾಮಿಕಯೆಂದಿದ್ದ ರೂಢನಾಮವು ಅನ್ವರ್ಥನಾಮವಾಯಿತು" ಎಂದು ಕಾಳಿದಾಸ ಕವಿಯ ವಿಷಯವಾದ ಶ್ಲಾಘ್ಯಶ್ಲೋಕವು ಲೋಕದಲ್ಲಿ ವಾಡಿಕೆಯಾಗಿದೆ. ಷೇಕ್ಸ್ಪಿಯರ್ ಕವಿಯು ಹೆಸರಿನಂತೆ ಕಾಳಿದಾಸನ ಹೆಸರೂ ಈ ದೇಶದಲ್ಲಿ ಮಾತ್ರವಲ್ಲದೆ ದೇಶಾಂತರಗಳಲ್ಲಿಯೂ ಪ್ರಸಿದ್ಧಿಗೊಂಡಿದೆ.

ಕವಿತಾಕಾಂತೆಗೆ ಚೋರಕವಿಯು ಮುಂಗೂದಲು, ಮಯೂರನು ಕರ್ಣಾಭರಣ, ಭಾಸನೇ ಹಾಸ, ಕವಿ ಕುಲಗುರುವಾದ ಕಾಳಿದಾಸನೇ ವಿಲಾಸ, ಹರ್ಷನೇ ಹರ್ಷ, ಬಾಣನೇ ಹೃದಯಗತನಾದ ಪಂಚಬಾಣ, ಇಂತಹ ಕಮನೀಯಳಾದ ಈ ಕವಿತಾಕಾಂತೆಯು ಯಾರಿಗೆ ಕೌತುಕವನ್ನುಂಟುಮಾಡದಿರಳು? ಎಂದು ಜಯದೇವ

ಕವಿಯು ಕಾಳಿದಾಸನಿಗೆ ವಿಶೇಷ ಮಾನ್ಯತೆಯನ್ನು ಕೊಟ್ಟಿದ್ದಾನೆ. (ಜಯದೇವ ಕವಿಯ: ಪ್ರಸನ್ನ ರಾಘವ 1–22)

ಇಂತಹ ಮಹಾಪುರುಷನ ಜನ್ಮಚರಿತ್ರೆಯು ತತ್ತ್ವತಃ ದೊರೆಯದಿರುವುದು ಬಹು ಶೋಚನೀಯವಾಗಿದೆ. ಬಹುಮಂದಿ ವಿದ್ವಾಂಸರು ಇದನ್ನು ಕಂಡುಹಿಡಿಯಲು ಬಹುಧಾ ಪ್ರಯತ್ನಿಸಿ, ಬಗೆಬಗೆಯಾಗಿ ತರ್ಕಿಸಿ ಇದ್ದಾರೆ. ಅಂಥವರೊಳಗೆ ಈತನ ಕಾಲತತ್ತ್ವಾನ್ವೇಷಣೆಯ ವಿಷಯದಲ್ಲಿ ಮೆ॥ ಗುರುನಾಥ ವೆಂಕಟೇಶ ಕಿತ್ತೂರ ಬಿ. ಎ., ಡೆಪ್ಯುಟಿ ಇನಸ್ಪೆಕ್ಟರ್ ಧಾರವಾಡ, ಇವರು–ಕರ್ಣಾಟಕ ವಾಗ್ಭೂಷಣ ಭೂಷಣರೆನಿಸಿ, ಬಹುಶೋಧಕರಾದ ಮಹಾಪಂಡಿತರ ತರ್ಕಗಳನ್ನೆಲ್ಲ ಕ್ರಮವಾಗಿ ಉದಾಹರಿಸಿ, ಕಟ್ಟಕಡೆಗೆ ಕ್ರಿ. ಪೂ. 144ನೆಯ ಇಸವಿ ಅಥವಾ ಕ್ರಿ.ಶ. 78ನೆಯ ಇಸವಿಯು ಬಹುಶಃ ಸರಿಯಾದ ತರ್ಕವೆಂತಲೂ, ಅಜರಾಮರ ಯಶಶ್ಶರೀರನಾದ ಈ ಮಹಾಕವಿಯು ವಿಕ್ರಮಭೋಜನ ಸಭಾಜೀವರತ್ನವಾಗಿದ್ದುದು ಸಂಗತವೆಂದೂ ಅಂಗೀಕಾರವೆಂತಲೂ ಅಭಿಪ್ರಾಯಪಟ್ಟಿದ್ದಾರೆ.

ಈ ಕವಿಪಿತಾಮಹನ ಕಾವ್ಯನಾಟಕರೂಪ ಸೃಷ್ಟಿಕಾರ್ಯಗಳೊಳಗೆ ರಘುವಂಶ ಮಹಾಕಾವ್ಯವು ರಸದ ಮುದ್ದೆಯಾಗಿದೆ ಎಂದೂ ಉದಾಹರಿಸಿ ಇದ್ದಾರೆ.

ಈ ರಘುವಂಶ ಕಾವ್ಯವು 19 ಸರ್ಗಗಳುಳ್ಳದಾಗಿ, ಸೂರ್ಯವಂಶದಲ್ಲಿ ಜನಿಸಿದ ದಿಲೀಪ, ರಘು, ಅಜ, ದಶರಥ, ರಾಮ ಕುಶ, ಅತಿಥಿ, ನಿಷಧ, ನಲ, ನಭಶ್ಶಬ್ದ, ಪುಂಡರೀಕ, ಕ್ಷೇಮಧನ್ವ, ದೇವಾನೀಕ, ಅಹೀನಗು, ಪಾರಿಯಾತ್ರ, ಶಿಲ, ಉನ್ನಾಭ, ವಜ್ರನಾಭ, ಶಂಖಣ, ವ್ಯುಶಿತಾಶ್ವ, ವಿಶ್ವಸಹ, ಹಿರಣ್ಯನಾಭ, ಕೌಸಲ್ಯ, ಬ್ರಹ್ಮಿಷ್ಠ, ಪುತ್ರ, ಧ್ರುವಸಂಧಿ, ಸುದರ್ಶನ, ಅಗ್ನಿವರ್ಣರೆಂಬ ಮಹಾರಾಜರ ಚಿತ್ರಚರಿತ್ರ ಗಳನ್ನೊಳಗೊಂಡಿದೆ.

ಈ ಮಹಾಕಾವ್ಯಕ್ಕೆ (1) ಮಲ್ಲಿನಾಥ (2) ದಿನಕರ (3) ವಲ್ಲಭ (4) ಚಾರಿತ್ರವರ್ಧನ (5) ಹೇಮಾದ್ರಿ (6) ವಿಜಯಾನಂದ ಸೂರೀಶ್ವರ ಚರಣಸೇವಕ (7) ವಿಜಯಗಣಿ (8) ಪಂಡಿತ ಸುಮತಿವಿಜಯ (9) ಬೃಹಸ್ಪತಿಮಿಶ್ರ (10) ಭರತಸೇನ (11) ದಕ್ಷಿಣಾವರ್ತ (12) ನಾಥ (13) ಧರ್ಮಮೇರು ಎಂಬ ಮಹಾಪಂಡಿತರುಗಳು ಟೀಕೆಗಳನ್ನು ರಚಿಸಿ ಇದ್ದಾರೆಂದು ತಿಳಿದುಬರುತ್ತದೆ, ಇದರಿಂದ ಕಾವ್ಯದ ಮಹತ್ತ್ವವೆಂಥದು ಎಂಬುದನ್ನು ವಾಚಕ ಮಹಾಶಯರು ಯೋಚಿಸಿ ತಿಳಿಯ ಬೇಕಾಗಿದೆ.

ಈ ಕಾವ್ಯದ ಕಥಾಭಾಗವು–ದುಃಖಪರ್ಯವಸಾನವಾಗಿರುವುದರಿಂದಲೂ, ನಮ್ಮ ಭಾರತಮಂಡಲದ ಕವಿಗಳು ಮಧುರರಸ ಸಮಾಪನದ ಪದ್ಧತಿಯನ್ನು ಅನುಸರಿಸಿ

ಇರುವುದರಿಂದಲೂ ಕಥಾಸಂವಿಧಾನವು ಮುಗಿದಿರುವಂತೆ ಕಾಣಬರದಿರುವುದರಿಂದಲೂ, 20 – 25ನೆಯ ಸರ್ಗಗಳು ದೊರೆತಿರುವಂತೆ ತಿಳಿದುಬರುವುದರಿಂದಲೂ 19 ಸರ್ಗಕ್ಕಿಂತಲೂ ಗ್ರಂಥವು ಹೆಚ್ಚಾಗಿರುವಂತೆ ತೋರುತ್ತದೆ.

ಕಾಳಿಕಾಪುರಿಯಲ್ಲಿ ಕಾಳೀಯಶರ್ಮನೆಂಬ ಬ್ರಾಹ್ಮಣನಿಗೆ ಒಬ್ಬ ಕುಮಾರನಿದ್ದು ಆ ಬಾಲಕನ ಮಾತಾಪಿತೃಗಳು ಸರ್ಪಹತರಾಗಿ ಒಂದೇ ದಿವಸ ದಿವಂಗತರಾದರು. ಅವರ ಪಶುಪಾಲಕನು ಈ ಶಿಶುವನ್ನು ಸಂರಕ್ಷಿಸುತ್ತಿದ್ದನು. ಆ ದೇಶದ ಅರಸಿನ ಮಗಳು ಎಂತಹ ರಾಜಕುಮಾರನನ್ನೂ ಪತಿಯನ್ನಾಗಿ ವರಿಸಲು ಒಪ್ಪದೆ ತಿರಸ್ಕರಿಸುತ್ತಿದ್ದ ಕಾರಣ, ರಾಜಮಂತ್ರಿಯು ಬೇಸರಪಟ್ಟು, ಒಂದುದಿವಸ ದನಗಳನ್ನು ಮೇಯಿಸುತ್ತಿದ್ದು ಸಾಯಂಕಾಲದ ಹೊತ್ತಿನಲ್ಲಿ ಬರುತ್ತಿದ್ದ ಈ ತರುಣನನ್ನು ಕಂಡು ಇವನಿಂದ ರಾಜಪುತ್ರಿಯನ್ನು ವಂಚಿಸಬೇಕೆಂದು ಬಗೆದನು. ಮಾರನೆಯ ದಿವಸ ಈ ಯುವಕನನ್ನು ವಸ್ತ್ರಾಭರಣಗಳಿಂದಲಂಕರಿಸಿ, ಆ ಪಟ್ಟಣದ ಪಂಡಿತರನ್ನೆಲ್ಲ ಅವನ ಶಿಷ್ಯರನ್ನಾಗಿ ಕಲ್ಪಿಸಿ, ರಾಜಸ್ಥಾನದಲ್ಲಿ ಆ ತರುಣನನ್ನು ಮೌನದಿಂದಿರುವಂತೆ ಏರ್ಪಡಿಸಿ, ಶಿಷ್ಯರಿಗೂ ರಾಜಕುವರಿಗೂ ಕಥಾಪ್ರಸಂಗವು ನಡೆದ ಬಳಿಕ ಅಂತೇವಾಸಿಗಳಿಂದ ಪರಾಜಿತಳಾದವಳು. ಆಚಾರ್ಯನನ್ನು ಪರೀಕ್ಷಿಸಕೂಡದೆಂದು ನಿರೋಧಿಸಿ, ವಿವಾಹ ಮಹೋತ್ಸವವನ್ನು ನೆರವೇರಿಸಿದನು. ತರುವಾಯ ವಂಚಿತಳಾದ ಭೂಪಾಲಪುತ್ರಿಯು ಆ ರಾತ್ರಿ ಪತಿಯನ್ನು ಕರೆದೊಯ್ದು, ಕಾಳಿಕಾದೇವಾಲಯದಲ್ಲಿ ದೇವತೆಯನ್ನು ಅರ್ಚಿಸಿ, ತನ್ನ ಶಿರವನ್ನು ಬಲಿಕೊಡಲು ಉದ್ಯುಕ್ತಳಾದಳು. ಪ್ರತ್ಯಕ್ಷಳಾದ ಮಹಾದೇವಿಯು ಆ ತರುಣನ ನಾಲಗೆಯಲ್ಲಿ "ಅಸ್ತಿಕ್ಚಿದ್ವಾಗ್ವಿಶೇಷಃ" ಎಂಬ ಅಕ್ಷರಗಳನ್ನು ಬರೆದಳು. ಆ ಮೇಲೆ ಜ್ಞಾನಸ್ನಾನವನ್ನು ಪಡೆದ ಕಾಳಿದಾಸನು ಅಸ್ತ್ಯುತ್ತರಸ್ಯಾಂ ದಿಶಿ ದೇವತಾತ್ಮಾ" ಎಂದು ಕುಮಾರಸಂಭವ ಕಾವ್ಯವನ್ನೂ, "ಕಶ್ಚಿತ್ಕಾಂತಾವಿರಹಗುರುಣಾ" ಎಂದು ಮೇಘದೂತವನ್ನೂ, "ವಾಗರ್ಥಾವಿವ ಸಂಪೃಕ್ತೌ" ಎಂದು ರಘುವಂಶ ಕಾವ್ಯವನ್ನೂ, ವಿಶೇಷ ಶಬ್ದಾರಂಭದಿಂದ ಬೇರೊಂದು ಕಾವ್ಯವನ್ನೂ, ತತಶ್ಚ – ಶಾಕುಂತಲ, ವಿಕ್ರಮೋರ್ವಶೀಯ ಮೊದಲಾದ 16 ಗ್ರಂಥಗಳನ್ನೂ ಬರೆದನಲ್ಲದೆ, ಪೂರ್ವಪತ್ನಿಯನ್ನು ಗೌರವಬುದ್ಧಿಯಿಂದ ಬಿಟ್ಟು, ದೇಶಾಟನ ಕ್ರಮದಿಂದ ವಿಕ್ರಮಭೋಜನಲ್ಲಿ ಬಂದು ಸೇರಿದನು ಎಂದು ಕರ್ಣಾಕರ್ಣಿಕೆಯಗಿ ಬಂದಿರುವ ಅಜ್ಞಾತಮೂಲವಕ್ತೃಕವಾದ ಉದಂತಕಥೆಯು ಎಲ್ಲ ದೇಶಗಳಲ್ಲಿಯೂ ಹರಡಿ ಇದೆ, ಇಷ್ಟೇ ಹೊರತು, ಈತನ ಜನ್ಮಚರಿತ್ರೆಯು ಯಥಾವತ್ತಾಗಿ ತಿಳಿದು ಬಂದಿಲ್ಲ.

******

ರಘುವಂಶದ ಅನುವಾದಕರಾದ
ದೊಡ್ಡಬೆಲೆ ನಾರಾಯಣಶಾಸ್ತ್ರಿಗಳ ಜೀವನ-ಕೃತಿಗಳು

19ನೇ ಶತಮಾನದಲ್ಲಿ ಅಚ್ಚಿನಯುಗ ಪ್ರಾರಂಭವಾದ ಮೇಲೆ ಕನ್ನಡದಲ್ಲಿ ಆರಂಭದಲ್ಲಿ ಕಲ್ಲಚ್ಚಿನ ಮುದ್ರಣ, ಅನಂತರ ಮೊಳೆಜೋಡಣೆ ಯಂತ್ರಗಳ ಮೂಲಕ ಕನ್ನಡಪುಸ್ತಕಗಳ ಪ್ರಕಟಣೆ ಪ್ರಾರಂಭವಾಯಿತು. ಮೊದಲಿಗೆ ಮಿಷನರಿಗಳು ಕನ್ನಡ ಶಬ್ದಕೋಶ,



ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು

ಕಾವ್ಯ, ವ್ಯಾಕರಣ, ಭಾಷಾ ಕಲಿಕೆ, ಬೈಬಲ್ ಗ್ರಂಥಗಳು ಮೊದಲಾದವನ್ನು ಪ್ರಕಟಿಸಿದರು.

ಆಗ ಜೊತೆಜೊತೆಯಲ್ಲಿ ದೇಶೀಯವಿದ್ವಾಂಸರು ಕನ್ನಡದಲ್ಲಿ ಕಾವ್ಯ ಶಾಸ್ತ್ರಗ್ರಂಥಗಳನ್ನು ಸ್ವತಂತ್ರವಾಗಿ ಹಾಗೂ ಇಂಗ್ಲಿಷ್, ಸಂಸ್ಕೃತ ಗ್ರಂಥಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸಲು ತೊಡಗಿದರು. ಈ ಪೈಕಿ, ಸಂಸ್ಕೃತದ ಕಾವ್ಯ, ನಾಟಕ, ಸ್ತೋತ್ರ, ವ್ಯಾಕರಣ, ಕೋಶ, ಅಲಂಕಾರ, ಛಂದಸ್ಸು, ಸಾಹಿತ್ಯ ಗ್ರಂಥಗಳು ಅನುವಾದವಾಗಿ ಪ್ರಕಟವಾಗತೊಡಗಿದವು.

19ನೇ ಶತಮಾನದಲ್ಲಿ ಕನ್ನಡದ ವಿದ್ವಾಂಸರು ಬಹಳಮಂದಿ ಸಂಸ್ಕೃತವಿದ್ವಾಂಸರೂ ಕನ್ನಡಪಂಡಿತರೂ ಆಗಿದ್ದರು. ಅನೇಕ ಉಭಯಭಾಷಾ ವಿದ್ವಾಂಸರು 19ನೇ ಶತಮಾನದ ಉತ್ತರಾರ್ಧ ಮತ್ತು 20ನೇ ಶತಮಾನದ ಪೂರ್ವಾರ್ಧದಲ್ಲಿ ಬೇಕಾದಷ್ಟು ಕನ್ನಡಸೇವೆ ಮಾಡಿದ್ದಾರೆ. ಹೊಸಗನ್ನಡ ಸಾಹಿತ್ಯದ ಅರುಣೋದಯಕ್ಕೆ ಕಾರಣಕರ್ತರಾಗಿ ದುಡಿದಿದ್ದಾರೆ. ಕನ್ನಡಕ್ಕೆ ಸಂಸ್ಕೃತದ ಶ್ರೇಷ್ಠಕೃತಿಗಳನ್ನು ನೀಡಿದ್ದಾರೆ. ಅಭಿನವಕಾಳಿದಾಸ ಬಸವಪ್ಪಶಾಸ್ತ್ರಿಗಳು ಒಂದು ಉದಾಹರಣೆ ಅಷ್ಟೇ. ಅವರಷ್ಟೇ ಪ್ರತಿಭಾವಂತರಾಗಿ ಸಂಸ್ಕೃತ ಕಾವ್ಯ, ಶಾಸ್ತ್ರ, ಸ್ತೋತ್ರ, ಗ್ರಂಥಗಳನ್ನು ನೇರಅನುವಾದ, ಸ್ವತಂತ್ರಅನುವಾದ, ಗದ್ಯಾನುವಾದ ಸಂಗ್ರಹಾನುವಾದ ಮಾಡಿದ ಖ್ಯಾತ ಉಭಯಭಾಷಾ ವಿದ್ವಾಂಸರ ಪೈಕಿ ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳು ಒಬ್ಬರು. ಸುಮಾರು 1850ರಲ್ಲಿ ಜನಿಸಿದ ಇವರು ಅರವತ್ತಕ್ಕೂ ಮಿಕ್ಕು ಸಂಸ್ಕೃತ ಗ್ರಂಥಗಳನ್ನು ಅನುವಾದಿಸಿದ್ದಾರೆ. ಟೀಕೆ, ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಸ್ವತಂತ್ರ ಗ್ರಂಥಗಳನ್ನು ರಚಿಸಿದ್ದಾರೆ.

ಕನ್ನಡಕ್ಕೆ ಕಾಳಿದಾಸನನ್ನು ತಂದ ವಿದ್ವಾಂಸರಲ್ಲಿ ಇವರು ಅಗ್ರಗಣ್ಯರಾಗಿದ್ದಾರೆ. ಸಂಸ್ಕೃತದ ಪಂಚ ಮಹಾಕಾವ್ಯಗಳನ್ನು ಟೀಕೆ–ಟಿಪ್ಪಣಿಗಳೊಡನೆ ಅನುವಾದಿಸಬೇಕು ಎಂದಿದ್ದ ಅವರು ಮೊದಲಿಗೆ ಕಾಳಿದಾಸನ ಮಹಾಕಾವ್ಯಗಳಲ್ಲಿ ಎರಡನ್ನು ಕನ್ನಡಕ್ಕೆ ನೀಡಲು ನಿರ್ಧರಿಸಿ ರಘುವಂಶದ ಕೆಲವು (1–5) ಸರ್ಗಗಳನ್ನು ಮೂಲ– ಪದ– ಶಬ್ದ– ಅನ್ವಯ– ತಾತ್ಪರ್ಯ– ಆಕಾಂಕ್ಷೆ– ವ್ಯಾಕರಣ ಮೊದಲಾದವುಗಳನ್ನು ನೀಡುವುದರ ಮೂಲಕ ಪ್ರಕಟಿಸಿದರು. ಕುಮಾರಸಂಭವ 1 ಮತ್ತು 2ನೆಯ ಸರ್ಗಗಳಿಗೆ ಟೀಕೆ ರಚಿಸಿದರು. ಭಾಗವತ, ರಾಮಾಯಣ ಮೊದಲಾದವುಗಳಿಗೆ ಟೀಕೆ ಬರೆದರು. ಕಾಳಿದಾಸನ ಕಾವ್ಯಗಳನ್ನು ಸಮಗ್ರವಾಗಿ ಕನ್ನಡಕ್ಕೆ ನೀಡಲು ಹೊರಟವರು ರಘುಕುಲ ಚರಿತಂ ಎಂಬ ಹೆಸರಿನಲ್ಲಿ (ಎರಡು ಭಾಗಗಳಲ್ಲಿ– (ಭಾಗ–1–1911, ಭಾಗ–2–1913) ಗದ್ಯಾನುವಾದ ಮಾಡಿದರು.

ಇದು ಜನಪ್ರಿಯವಾಗಿ 1923ರಲ್ಲಿ ಶಾಲಾಪಠ್ಯವಾಗಿ ದ್ವಿತೀಯ ಮುದ್ರಣವಾಯಿತು. ಅಲ್ಲಿಂದೀಚೆಗೆ 118 ವರ್ಷಗಳಾದರೂ ಪುನರ್ಮುದ್ರಣವಾಗದೆ ಜನಮಾನಸದಿಂದ ಮರೆಯಾಗಿತ್ತು. ಇಂತಹ ಒಂದು ಗ್ರಂಥವಿದೆ ಎಂಬುದೇ ಈಚಿನ ಜನಕ್ಕೆ ತಿಳಿದೇ ಇರಲಿಲ್ಲ. ಇದೀಗ 2022ರಲ್ಲಿ 3ನೆಯ ಮುದ್ರಣವಾಗಿ ಪ್ರಕಟವಾಗುತ್ತಿರುವುದು ಕನ್ನಡಿಗರ ಭಾಗ್ಯವೆನ್ನಬಹುದು.

ಕಾಳಿದಾಸನ ಕಾವ್ಯಗಳು ಹತ್ತಾರು ಏಕೆ ನೂರಾರು ಪದ್ಯಗಳು ಪಂಪ ಪೊನ್ನರಿಂದ ಮೊದಲ್ಗೊಂಡು 19ನೇ ಶತಮಾನದವರೆಗೆ ಆಂಶಿಕವಾಗಿ ಪ್ರಕಟವಾಗಿವೆ. ಕಾಳಿದಾಸನ 200ಕ್ಕೂ ಹೆಚ್ಚಿನ ಪದ್ಯಗಳು ಕನ್ನಡ ಮಾರ್ಗ ಕಾವ್ಯಪರಂಪರೆಯಲ್ಲಿ ದೊರೆತಿವೆ. ಆ ಪೈಕಿ ಪೊನ್ನನೊಬ್ಬನೇ 160ಕ್ಕೂ ಹೆಚ್ಚಿನ ಪದ್ಯಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾನೆ. ಪಂಪ ಪೊನ್ನರ ಅನುವಾದಗಳು ಕೇವಲ ಅನುವಾದಗಳಾಗಿರದೆ ಸೃಷ್ಟಿಯ ಸ್ವೋಪಜ್ಞತೆಯಿಂದ ಕೂಡಿವೆ ಎಂದು ಡಾ. ಶ್ರೀರಾಮಭಟ್ಟ ಅವರು ತಮ್ಮ ಮಹಾಪ್ರಬಂಧದಲ್ಲಿ ಹೇಳಿದ್ದಾರೆ.

ಆದರೆ 20ನೇ ಶತಮಾನದವರೆಗೆ ಅವುಗಳ ಸಮಗ್ರ ಅನುವಾದ ಆಗಿರಲಿಲ್ಲ ಎಂಬುದು ಅಚ್ಚರಿಯೇ ಸರಿ. ರಘುವಂಶದಂತಹ ಕಾಳಿದಾನ ಕಾವ್ಯ ಮತ್ತು ಇತರ ಕೃತಿಗಳು ಸಮಗ್ರವಾಗಿ ಕನ್ನಡಕ್ಕೆ ಏಕೆ ಬರಲಿಲ್ಲ ಎನ್ನುವುದನ್ನು ಎ ಆರ್ ಕೃಷ್ಣಶಾಸ್ತ್ರಿಗಳು ಹೀಗೆ ತಿಳಿಸುತ್ತಾರೆ: "ಕನ್ನಡ ಸಾಹಿತ್ಯ ಹುಟ್ಟಿ ಬೆಳೆದಿರುವುದು ಸಂಸ್ಕೃತಸಾಹಿತ್ಯದ ಹಿನ್ನೆಲೆಯಲ್ಲಿ. ಕಾಳಿದಾಸನ ಕಾವ್ಯಗಳನ್ನು ಓದದಿರುವ ಹಳಗನ್ನಡ ಕವಿಯೇ ಇಲ್ಲ. ಆದರೂ ಅವನ ಹೆಸರನ್ನೇ ಒಬ್ಬಿಬ್ಬರು ಹೇಳಿದ್ದರೂ ಮಿಕ್ಕವರು ಅವನ ಭಾವಗಳನ್ನು ಎಷ್ಟೋ ಕಡೆ ತೆಗೆದುಕೊಂಡಿದ್ದಾರೆ. ಶ್ಲೋಕಗಳನ್ನು ಕನ್ನಡಿಸಿಕೊಂಡಿದ್ದಾರೆ. ಆದರೆ ಅವನ ಕಾವ್ಯಗಳನ್ನು ಆಗಲಿ ನಾಟಕಗಳನ್ನು ಆಗಲಿ ಸಮಗ್ರವಾಗಿ ಕನ್ನಡಿಸಬೇಕೆಂಬ ಯೋಚನೆ ಅವರಾರಿಗೂ ಬಂದ ಹಾಗಿಲ್ಲ. ಪ್ರಾಯಶಃ ಇದಕ್ಕೆ ಒಂದು ದೊಡ್ಡಕಾರಣವೆಂದರೆ ಹಿಂದಿನ ಕನ್ನಡಕವಿಗಳು ಮತ್ತು ವಿದ್ಯಾವಂತರೆನಿಸಿಕೊಂಡವರು ಎಲ್ಲರೂ ಸಾಮಾನ್ಯವಾಗಿ ಸಂಸ್ಕೃತವನ್ನು ತಿಳಿದಿದ್ದು ಕಾಳಿದಾಸನ ಕಾವ್ಯ ನಾಟಕಗಳನ್ನು ಮೂಲದಲ್ಲೇ ಓದುತ್ತಿದ್ದುದ್ದು" . ಹೀಗಾಗಿ ಸಮಗ್ರವಾಗಿ ಕಾಳಿದಾಸನ ಕಾವ್ಯ ಅನುವಾದದ ಮೂಲಕ ಕನ್ನಡಕ್ಕೆ ಬರಲು 19ನೇ ಶತಮಾನದವರೆಗೆ ಹೊಸಗನ್ನಡದ ಕಾಲದವರೆಗೆ ಕಾಯಬೇಕಾಯಿತು.

ಹೊಸಗನ್ನಡ ಕಾಲದಲ್ಲಿ 19ನೇ ಶತಮಾನದಲ್ಲಿ ಬಸವಪ್ಪ ಶಾಸ್ತ್ರಿ(1883) ಚುರುಮರಿ ಶೇಷಗಿರಿರಾವ್(1870) ಸೋಸಲೆ ಅಯ್ಯಾಶಾಸ್ತ್ರಿ(1891), ಧೋಂಡೊ ನರಸಿಂಹ

ಮುಳಬಾಗಿಲು (1887) ಮೊದಲಾದವರು ಕಾಳಿದಾಸನ ನಾಟಕಗಳು ನಾಟಕರೂಪದಲ್ಲಿಯೇ ಅನುವಾದಿಸಿದರು.

20ನೇ ಶತಮಾನದಲ್ಲಿ ಕಾಳಿದಾಸನ ಮಹಾಕಾವ್ಯ ರಘುವಂಶವನ್ನು ಸಮಗ್ರವಾಗಿ ಗದ್ಯಾನುವಾದ ಮಾಡಿದ ಮೊದಲಿಗರು ಎಂದರೆ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು. ಸಂಕ್ಷಿಪ್ತವಾಗಿ ಸಿ.ಕೆ. ವೆಂಕಟರಾಮಯ್ಯ ಅವರು ರಘುವಂಶವನ್ನು ಅನುವಾದಿಸಿದರೆ ವೈ ನಾಗೇಶಶಾಸ್ತ್ರಿ, ಎಸ್ ವಿ ಪರಮೇಶ್ವರ ಭಟ್ಟರು ಮತ್ತು ಇತರ ಕೆಲವರು ರಘುವಂಶವನ್ನು ಪೂರ್ಣವಾಗಿ ಕಾವ್ಯರೂಪದಲ್ಲಿಯೇ ಅನುವಾದಿಸಿದ್ದಾರೆ. ಎಸ್ ವಿ ಪರಮೇಶ್ವರಭಟ್ಟರು ಕನ್ನಡ ಕಾಳಿದಾಸ ಮಹಾಸಂಪುಟದಲ್ಲಿ(1972) ಕಾಳಿದಾಸನ ಸಮಗ್ರ ಕಾವ್ಯನಾಟಕಗಳನ್ನು ಅನುವಾದಿಸಿರುವ ಏಕೈಕ ಕನ್ನಡ ಅನುವಾದಕರಾಗಿದ್ದಾರೆ. ರಘುವಂಶವನ್ನು ಮೂಲಶ್ಲೋಕಗಳ ಜೊತೆಗೆ ಸಮಗ್ರಗದ್ಯವ್ಯಾಖ್ಯಾನ ಹಾಗೂ ಟಿಪ್ಪಣಿಗಳು ಸಹಿತ ಬಿ. ಗೋಪಾಲರಾವ್ ಪ್ರಕಟಿಸಿರುವುದನ್ನು ಇಲ್ಲಿ ಉಲ್ಲೇಖಿಸಲೇಬೇಕಾಗಿದೆ. ರಘುವಂಶದ ಗದ್ಯಾನುವಾದಗಳಲ್ಲಿ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಪ್ರಥಮ ಪೂರ್ಣಗದ್ಯಾನುವಾದಕರಾಗಿ ಟೀಕಾಕಾರರಾಗಿ ಕಂಡುಬಂದರೆ ಗೋಪಾಲರಾಯರು ದ್ವಿತೀಯ ಗದ್ಯಾನುವಾದ ಟೀಕಾಕಾರರಾಗಿದ್ದಾರೆ.

ಮಹಾಕಾವ್ಯವನ್ನು ಸಮಗ್ರವಾಗಿ ಅಚ್ಚುಕಟ್ಟಾಗಿ ರಸವತ್ತಾಗಿ ಕಥಾರೂಪದಂತೆ ಮೊದಲ ಬಾರಿಗೆ ಪ್ರಕಟಿಸಿದ ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳ ಜೀವನ ವಿವರ ಸಮಗ್ರವಾಗಿ ದೊರೆತಿಲ್ಲ. ದೊರೆತ ಮಾಹಿತಿಗಳನ್ನು ಇಲ್ಲಿ ಓದುಗರ ಅವಗಾಹನೆಗೆ ತರಲಾಗಿದೆ.

ಜೀವನ: ದೊಡ್ಡಬೆಲೆ ಒಂದುಕಾಲಕ್ಕೆ ವಿದ್ವಾಂಸರ ನೆಲೆವೀಡಾಗಿತ್ತು. ಕನ್ನಡದ ಘನವಿದ್ವಾಂಸರಾದ ಡಿ ಎಲ್ ನರಸಿಂಹಾಚಾರ್ ಅವರು ದೊಡ್ಡಬೆಲೆ ಊರಿನವರೇ. ದೊಡ್ಡಬೆಲೆ ನಾರಾಯಣಶಾಸ್ತ್ರಿಗಳ ಹಿರಿಯರು ಯಾವಸ್ಥಳದಿಂದ ಬಂದು ಅಲ್ಲಿ ನೆಲೆಸಿದರೋ ತಿಳಿಯದು. ಆದರೆ ಸಾಕಷ್ಟುಕಾಲದಿಂದ ದೊಡ್ಡಬೆಲೆಯಲ್ಲಿದ್ದರು ಎಂದು ತಿಳಿದುಬರುತ್ತದೆ.

ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಜನಿಸಿದ್ದು ಕ್ರಿಸ್ತಶಕ ಸುಮಾರು 1850ರಲ್ಲಿ. ಇವರ ನಿಧನ 10–05–1937. ಸುಮಾರು 87 ವರ್ಷಗಳ ಕಾಲ ಬದುಕಿ ಬಾಳಿದವರು ಎಂದು ಹೇಳಬಹುದಾಗಿದೆ. 1929ರಲ್ಲಿ ಕವಿಚರಿತೆಯ ಮೂರನೇ ಭಾಗ ಪ್ರಕಟವಾಯಿತು. ಆರ್ ನರಸಿಂಹಾಚಾರ್ ಇವರ ಸಮಕಾಲೀನರಾಗಿದ್ದರು. ಆದರೆ ದೊಡ್ಡಬೆಲೆ ಅವರ ಬಗ್ಗೆ ಪ್ರಸ್ತಾಪಿಸಿಲ್ಲ. ಏಕೆಂದರೆ ಆಗ ದೊಡ್ಡಬೆಲೆ ಅವರು ಬದುಕಿದ್ದರು. ಕವಿಚರಿತೆಯ ಬರೆಯುವಾಗ ಆರ್. ನರಸಿಂಹಾಚಾರ್ ಅವರು

ಹಾಕಿಕೊಂಡ ನಿಯಮ ಹೀಗಿತ್ತು: "ಜೀವಂತರಾದ ಗ್ರಂಥಕರ್ತರ ಹೆಸರನ್ನು ನಾವು ಎತ್ತುವುದಿಲ್ಲ. ಸ್ವಲ್ಪಕಾಲಕ್ಕೆ ಹಿಂದೆ ಗತಿಸಿದವರ ಚರಿತ್ರೆಯನ್ನು ಅವಲಂಬಿಸಿ ಬರೆಯುವುದು ನಮ್ಮ ಉದ್ದೇಶವಲ್ಲ. ಆದ್ದರಿಂದ ಅಂತಹವರ ವಿಷಯವನ್ನು ಗ್ರಂಥಗಳನ್ನು ನಮಗೆ ತಿಳಿದಮಟ್ಟಿಗೆ ಬಹಳ ಸಂಕ್ಷೇಪವಾಗಿ ತಿಳಿಸುತ್ತೇವೆ"

1923ರಲ್ಲಿ ರಘುಕುಲ ಚರಿತಂ ಎರಡು ಭಾಗಗಳು ಪುನರ್ಮುದ್ರಣವಾಗಿದ್ದವು. ಅವರೇ ಅದನ್ನು ಪ್ರಕಟಿಸಿದ್ದಾರೆ. ಆಗ ಅವರು ಆಸ್ಥಾನ ವಿದ್ವಾಂಸರು ಆಗಿದ್ದರು. ಬೆಂಗಳೂರಿನಲ್ಲಿ ಕೊಲಿಜಿಯೇಟ್ ಹೈಸ್ಕೂಲ್ ಪಂಡಿತರು ಆಗಿದ್ದರು. ದೊಡ್ಡಬೆಲೆ ಅವರ ಬಗ್ಗೆ ನಾನು ಮಾಹಿತಿ ಸಂಗ್ರಹಿಸುತ್ತಿದ್ದಾಗ ಡಿಸೆಂಬರ್ 31, 1999 ರಲ್ಲಿ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳ ಮೊಮ್ಮಗ ಡಿ. ಲಕ್ಷ್ಮಣ್ ಅವರನ್ನು ಭೇಟಿಯಾದಾಗ ಅವರು ತಮ್ಮ ತಾತನವರ ಬಗ್ಗೆ ಕೆಲವು ಸಂಗತಿಗಳನ್ನು ತಿಳಿಸಿದರು. ಅವರ ಪ್ರಕಾರ 1936–37ರಲ್ಲಿ ತಾತನವರು ತೀರಿಹೋದರು ಎಂದು ತಿಳಿಸಿದರು. ಈಚೆಗೆ ಅವರ ಬಂಧುವರ್ಗದ ಹಿರಿಯರೊಬ್ಬರಿಂದ ದೊಡ್ಡಬೆಲೆ ಅವರ ನಿಧನ 10–05–1037ರಂದು ಎಂದು ತಿಳಿದುಬಂದಿತು.

ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳು 19ನೇ ಶತಮಾನದ ಉತ್ತರಾರ್ಧದಲ್ಲಿ ಮತ್ತು 20ನೇ ಶತಮಾನದ ಪೂರ್ವಾರ್ಧದಲ್ಲಿ ಇದ್ದುದ್ದು ಖಚಿತವಾದ ಸಂಗತಿ. ಈ ಕಾಲದಲ್ಲಿ ಇವರು ವಾಸವಾಗಿದ್ದುದು ಬೆಂಗಳೂರಿನ ಸಿಟಿ ಮಾರ್ಕೆಟ್ ಬಳಿ ಇದ್ದ ಸೀಗೆಬೇಲಿ ಎಂಬ ಬ್ರಾಹ್ಮಣ ಪಂಡಿತರ ಅಗ್ರಹಾರದಲ್ಲಿ. ಈ ಸ್ಥಳ ಆ ಕಾಲದಲ್ಲಿ ಹೇಗಿತ್ತು ಎಂಬುದರ ಚಿತ್ರಣವನ್ನು ಡಿವಿಜಿ ಅವರು ಜ್ಞಾಪಕ ಚಿತ್ರಶಾಲೆ ಭಾಗ 5, ಪುಟ 89–91ರಲ್ಲಿ "ಪ್ರಸಿದ್ಧ ವಿದ್ವಾಂಸರ ನೆಲೆ ಗುಂಡೋಪಂತ ರಸ್ತೆ" ಎಂಬ ಲೇಖನದಲ್ಲಿ ವರ್ಣಿಸಿದ್ದಾರೆ. "... ಇಲ್ಲಿ ವಿದ್ಯಾನಿಧಿ ವಾಸುದೇವಶಾಸ್ತ್ರಿಗಳ ಮನೆ ಇತ್ತು.... ಇವರು ದೊಡ್ಡಬೆಲೆ ನಾರಾಯಣಶಾಸ್ತ್ರಿಗಳ ಗುರುಗಳು.... ಆ ಕಾಲದಲ್ಲಿ ಅಲ್ಲಿ ಮಾಧ್ವಬ್ರಾಹ್ಮಣರ ಸ್ಮಾರ್ತ ಬ್ರಾಹ್ಮಣರ ಕೇರಿಗಳಿದ್ದವು. ವಾಸುದೇವಶಾಸ್ತ್ರಿಗಳ ಮನೆ ಸ್ಮಾರ್ತಮಂಡಲಿಯ ಕೇಂದ್ರಸ್ಥಾನ. ಪೂರ್ಣಯ್ಯನವರ ಛತ್ರ ಮಾಧ್ವಮಂಡಲಿಯ ರಾಜಧಾನಿ. ಎರಡೂಕಡೆಗಳಲ್ಲಿ ವಿದ್ಯಾರ್ಥಿಗಳೂ ಅಶನಾರ್ಥಿಗಳೂ ಭರ್ತಿಯಾಗಿದ್ದರು. ವಾಸುದೇವಶಾಸ್ತ್ರಿಗಳು ತರ್ಕ, ವ್ಯಾಕರಣ ಮೀಮಾಂಸಾಶಾಸ್ತ್ರಗಳಲ್ಲಿ ಅಪ್ರತಿಮರು. ಬೆಂಗಳೂರಿನಲ್ಲಿ ಪ್ರಸಿದ್ಧರಾದ ಪಂಡಿತರಲ್ಲಿ ಬಹುಮಂದಿ ಅವರ ಶಿಷ್ಯರು. ಅವರಲ್ಲಿ ಒಬ್ಬಿಬ್ಬರನ್ನು ಕಂಡು ಮಾತನಾಡಿದ ಭಾಗ್ಯ ನನಗೆ (ಡಿವಿಜಿ ಅವರಿಗೆ) ದೊರೆತಿತ್ತು. ಅವರಲ್ಲಿ ಮುಖ್ಯರಾದವರು ಸಾಗ್ಗೆರೆ ನಾರಾಯಣಶಾಸ್ತ್ರಿಗಳು, ದೇವನಗೊಂದಿ ನಾರಾಯಣಶಾಸ್ತ್ರಿಗಳು, ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು.... ವಾಸುದೇವ ಶಾಸ್ತ್ರಿಗಳಿಗೆ ಶ್ರೀಮನ್ಮಹಾರಾಜರು 'ವಿದ್ಯಾನಿಧಿ'

ಎಂಬ ಪ್ರಶಸ್ತಿಕೊಟ್ಟಿದ್ದರು. ಮೈಸೂರಿನ ವಿದ್ಯಾನಿಧಿ ಶ್ರೇಣಿಯಲ್ಲಿ ಬಹುಶಃ ಅವರೇ ಪ್ರಥಮರು. ಶೃಂಗೇರಿಯಲ್ಲಿ ಜಗದ್ಗುರುಗಳ ಸನ್ನಿಧಿಯ ವಿದ್ವತ್ ಪರಿಷತ್ತಿನಲ್ಲಿ ವಾಕ್ಯಾರ್ಥ ನಡೆದಾಗ ವಾಸುದೇವಶಾಸ್ತ್ರಿಗಳು 'ಬ್ರಹ್ಮಂಸತ್ಯಂ ಜಗನ್ಮಿಥ್ಯಾ' ಎಂಬ ಅದ್ಭುತ ಸಿದ್ಧಾಂತವನ್ನು ಪ್ರತಿಪಾದನೆ ಮಾಡಿ ಜಗನ್ಮಿಥ್ಯಾವಾದವು ಪ್ರಮಾಣವತ್ತಾದುದೆಂದು ಶ್ರುತಿಯುಕ್ತಿಗಳಿಂದ ಸಾಧಿಸಿದರು. ಆಗ ಅವರು ತೋರಿದ ಪಾಂಡಿತ್ಯವನ್ನು ವಾಗ್ವೈಖರಿಯುನ್ನು ಜಗದ್ಗುರುಗಳು ಮೆಚ್ಚಿಕೊಂಡು ಜಗನ್ಮಿಥ್ಯಾವಾಸುದೇವಶಾಸ್ತ್ರಿಗಳು ಎಂದು ಪ್ರಶಂಸೆ ಮಾಡಿದರಂತೆ. ಇಂಥವರ ಶಿಷ್ಯರು ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು, ಡಿವಿಜಿ ಅವರು "ವಾಸುದೇವಶಾಸ್ತ್ರಿಗಳ ಶಿಷ್ಯರಲ್ಲಿ ಒಬ್ಬಿಬ್ಬರನ್ನು ಕಂಡು ಮಾತನಾಡಿದ ಭಾಗ್ಯ ನನಗೆ ದೊರಕಿತ್ತು' ಎಂದು ಹೇಳಿ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳನ್ನು ಇತರ ಶಿಷ್ಯರನ್ನು ಭೇಟಿ ಆದ ಸಂಗತಿಯನ್ನು (ಸು. 1902–1905) ಜ್ಞಾಪಕ ಚಿತ್ರಶಾಲೆ–5 ರಲ್ಲಿ ವರ್ಣಿಸಿದ್ದಾರೆ. ಎಂದರೆ 1900ರ ವೇಳೆಗೆ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳ ಗುರುಗಳು ಇರಲಿಲ್ಲ ಎನ್ನಬಹುದು.

ಶಿಕ್ಷಣ : ದೊಡ್ಡಬೆಲೆ ನಾರಾಯಣಶಾಸ್ತ್ರಿಗಳ ವಿದ್ಯಾಭ್ಯಾಸದ ವಿವರಗಳು ತಿಳಿದಿಲ್ಲ. ಬೆಂಗಳೂರು ಸಿಟಿಯ ವೆಸ್ಲಿಯನ್ ಮಿಷನ್ನಿನ ಕೊಲಿಜಿಯಟ್ ಹೈಸ್ಕೂಲಿನಲ್ಲಿ ಪ್ರಧಾನ ಕನ್ನಡ ಪಂಡಿತರು ಆಗಿದ್ದರು. ಇವರ ಬಗ್ಗೆ ಆಡಳಿತಾಧಿಕಾರಿಗಳಿಗೆ, ಶಾಲೆಯ ಮುಖ್ಯೋಪಾಧ್ಯಾಯರಿಗೆ ಬಹಳ ಗೌರವವಿತ್ತು. ಇವರು ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಿದದಿನಗಳಲ್ಲಿ ಶಾಲೆಗೆ ಬರುತ್ತಿರಲಿಲ್ಲವಂತೆ, ಬಂದದಿನಗಳಲ್ಲಿ ಪಾಠ ಮಾಡಿದಾಗ ಸೊಗಸಾಗಿರುತ್ತಿತ್ತು ಎಂದು ಅವರ ವಿದ್ಯಾರ್ಥಿಯಾಗಿದ್ದ (ನಮ್ಮ ಭಾವ) ರಾಮಕೃಷ್ಣರಾವ್ ಹೇಳಿದ್ದಾರೆ.

ದೊಡ್ಡಬೆಲೆಯವರು ಶ್ರೇಷ್ಠ ಅಧ್ಯಾಪಕರಾಗಿದ್ದರು ಎಂಬುದನ್ನು ಅವರ ವಿದ್ಯಾರ್ಥಿಯಾಗಿದ್ದ ಪ್ರಸಿದ್ಧ ಸಾಹಿತಿ ವಿ. ಸೀತಾರಾಮಯ್ಯನವರು ಸ್ಮೃತಿ ಚಿತ್ರಸಂಪುಟ(1997, ಪುಟ–14)ದಲ್ಲಿ ಹೀಗೆ ಹೇಳಿದ್ದಾರೆ: "ನನ್ನ ಅನುಭವದಲ್ಲಿ ಆವರೆಗೆ ಸಿಕ್ಕಿದ ಕನ್ನಡ ಅಧ್ಯಾಪಕರಲ್ಲಿ ಜಯರಾಮವೆಂಕಟಾಚಾರ್ಯರು, ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ವಿಶೇಷವಾಗಿ ಶಕ್ತಿಯುಳ್ಳ ಉಪಾಧ್ಯಾಯರು, ಧೀಮಂತರು."

ದೊಡ್ಡಬೆಲೆಯಲ್ಲಿ ಇದ್ದ ಇವರ ತಂದೆ, ಬಾಲ್ಯದಲ್ಲಿ ಶಾಸ್ತ್ರಿಗಳು ದಡ್ಡರಾಗಿದ್ದಾರೆ ಜಾಣರಾಗಲಿ ಎಂದು ಊರಿನಿಂದ ಕರೆತಂದು ಸೀಗೆಬೇಲಿಯಲ್ಲಿ ವಾಸುದೇವಶಾಸ್ತ್ರಿಗಳ ಬಳಿ ಬಿಟ್ಟಿದ್ದರಂತೆ, ಒಂದು ದೀಪಾವಳಿ ದಿನ ಮನೆ ಹೊಸ್ತಿಲಿನ ಎರಡೂಭಾಗಗಳಲ್ಲಿ

ಎರಡು ಹಣತೆಗಳನ್ನು ಹಚ್ಚಿಟ್ಟು ಸಂಜೆಯಲ್ಲಿ ನಾರಾಯಣಶಾಸ್ತ್ರಿಗಳು ಮನೆಬಿಟ್ಟು ಹೊರಟುಬಿಟ್ಟರಂತೆ. ಹಿಂತಿರುಗಿ ಬರುವಾಗ ವಿದ್ಯಾವಂತರಾಗಿದ್ದರಂತೆ. ಎಲ್ಲಿ ಹೋಗಿದ್ದರು, ಹೇಗೆ ಅಭ್ಯಾಸ ಮಾಡಿದರು ಗೊತ್ತಿಲ್ಲ (ಅವರ ಬಂಧುಗಳೊಬ್ಬರು ಹೇಳಿದಸಂಗತಿ) ಅರಮನೆವಿದ್ವಾಂಸರಾಗಿದ್ದ ದೊಡ್ಡಬೆಲೆ ಅವರು ಬಹುಶಃ ಶೃಂಗೇರಿಯಲ್ಲಿ ವಿದ್ಯಾಭ್ಯಾಸ ಮಾಡಿರಬಹುದೇ? ಏಕೆಂದರೆ ಅವರು ಶ್ರೀ ಶಾರದಾ ಪ್ರೆಸ್ ಎಂದು ಹೆಸರಿಟ್ಟಿದ್ದೂ ಶ್ರೀ ಶಾರದಾ ಮಾಸಪತ್ರಿಕೆ ಹೊರಡಿಸಿದ್ದೂ ತಂದಿರುವುದೂ ಶಂಕರ ಸಾಹಿತ್ಯವನ್ನು ವಿಶೇಷವಾಗಿ ಕನ್ನಡದಲ್ಲಿ ತಂದಿರುವುದೂ ಶೃಂಗೇರಿ ಜಗದ್ಗುರುಗಳ ಆರಾಧಕರಾಗಿದ್ದುದೂ ಈ ಊಹೆಗೆ ಕಾರಣ.

ಕುಟುಂಬ: ದೊಡ್ಡಬೆಲೆ ನಾರಾಯಣಶಾಸ್ತ್ರಿಗಳಿಗೆ ಒಬ್ಬಳೇ ಮಗಳು (ಮಹಾಲಕ್ಷಮ್ಮ) ಈಕೆಗೆ 6 ಜನ ಮಕ್ಕಳು. ಒಬ್ಬನೇ ಮಗ ರಾಮಶೇಷಶಾಸ್ತ್ರಿ. ಈತ ಎಸ್.ಎಸ್.ಎಲ್.ಸಿ.ವರೆಗೆ ಓದಿದ್ದ ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದನು. ಎಸ್.ಎಸ್.ಎಲ್.ಸಿ. ಫಲಿತಾಂಶ ಬಂದ ದಿನವೇ ಪ್ಲೇಗ್‌ಮಾರಿಯಿಂದ ಸತ್ತನು. ಆಗ ಅವನಿಗೆ ಸುಮಾರು 15–16 ವರ್ಷ ಇರಬಹುದು. ಪುತ್ರಶೋಕದಿಂದ ಮೊಮ್ಮಗ ಡಿ. ಲಕ್ಷ್ಮಿ ನರಸಿಂಹಶಾಸ್ತ್ರಿ ಎಂಬುವನನ್ನು ಶಾಸ್ತ್ರಿಗಳು ದತ್ತು ತೆಗೆದುಕೊಂಡಿದ್ದರಂತೆ. ಈತನೇ ಶಾಸ್ತ್ರಿಗಳ ಉತ್ತರಾಧಿಕಾರಿ ಆಗಿದ್ದ ಎಂದು ಕಾಣುತ್ತದೆ. (1909ರಲ್ಲಿ ಪ್ರಕಟವಾದ ದೇವರಸೇವೆ ಎಂಬ ಗ್ರಂಥದಲ್ಲಿ ಆ ವೇಳೆಗೆ ಶಾಸ್ತ್ರಿಗಳು ಬರೆದಿದ್ದ 22 ಗ್ರಂಥಗಳ ಪಟ್ಟಿಯನ್ನು ಕೊಟ್ಟು ಕೆಳಗೆ ಡಿ. ಲಕ್ಷ್ಮೀನರಸಿಂಹ ಶಾಸ್ತ್ರೀ, ಶ್ರೀ ಶಾರದಾ ಆಫೀಸ್, ಸೀಗೆಬೇಲಿ. ಬೆಂಗಳೂರು ಸಿಟಿ. ಎಂದಿದೆ.)

ಮಗ ರಾಮಶೇಷನ ಬಗ್ಗೆ ಮಹಾಲಕ್ಷ್ಮಮ್ಮ (ಮಗಳು) ತನ್ನ ಆರನೆಯ ಮಗ ಡಿ. ಲಕ್ಷ್ಮಣನಿಗೆ ತಿಳಿಸಿದ ಸಂಗತಿಯೊಂದು ಹೀಗಿದೆ:

ಒಮ್ಮೆ ತನ್ನ ಸ್ನೇಹಿತರನ್ನು ಮಗ ರಾಮಶೇಷ ಕರೆದುಕೊಂಡು ತನ್ನ ತಂದೆಯ ಭಾಷಣ ಕೇಳಲು ಕರೆದುಕೊಂಡು ಹೋಗಿದ್ದ. ಆಗ ತಂದೆಯವರು ಭಾಷಣಕ್ಕೆ ಇನ್ನೂ ಬಂದಿರಲಿಲ್ಲ. ಆ ವೇಳೆಗೆ ಕಾರ್ಯಕ್ರಮ ತಡವಾಗಿತ್ತು. ಸ್ನೇಹಿತರು ನೀನೇ ಭಾಷಣ ಮಾಡೋ ಎಂದು ಒತ್ತಾಯಿಸಿದಾಗ ತನ್ನ ತಂದೆಯು ಅನಿವಾರ್ಯವಾಗಿ ಬರಲಾಗಲಿಲ್ಲವೆಂದು ತಾನೇ ಮಾತನಾಡತೊಡಗಿದನು. ಆ ವೇಳೆಗೆ ಶಾಸ್ತ್ರಿಗಳು ಅಲ್ಲಿಗೆ ಬಂದರು. ದೂರದಿಂದ ಮಗನ ಭಾಷಣ ಕೇಳಿ ಹಾಗೆಯೇ ಹಿಂದಿರುಗಿದರು. ಮನೆಗೆ ಬಂದು ಅವನ ತಾಯಿಗೆ 'ಇನ್ನು ರಾಮಶೇಷ ಜಾಸ್ತಿದಿನಬದುಕೋಲ್ಲ ಅವನು ಕೇಳಿದ ತಿಂಡಿಯೆಲ್ಲಾ ಮಾಡಿಕೊಡು; ಬೇಕಾದ ಬಟ್ಟೆಬರೆ ಎಲ್ಲಾ ತೆಗೆದುಕೊಡು'

ಎಂದರಂತೆ. ಮನೆಯವರು ಹಾಗೆಯೇ ನಡೆದುಕೊಂಡು ಘಟನೆ ನಡೆದ ಒಂದು ವರ್ಷಕ್ಕೆ ಸರಿಯಾಗಿ ಮಗ ರಾಮಶೇಷ ಸತ್ತನು.

ದೊಡ್ಡಬೆಲೆ ನಾರಾಯಣಶಾಸ್ತ್ರಿಗಳಿಗೆ ಜ್ಯೋತಿಷ್ಯ ಚೆನ್ನಾಗಿ ತಿಳಿದಿತ್ತು. ಹಲವಾರು ಜೋತಿಷ್ಯದ ಗ್ರಂಥಗಳನ್ನು ಬರೆದಿದ್ದಾರೆ. ಸುಮಾರು ಒಂದುವರ್ಷದ ಮೊದಲೇ ಅವರಿಗೆ ಸಾಯುವ ದಿನ, ವೇಳೆ ತಿಳಿದಿತ್ತು. ಪ್ರತಿವರ್ಷ ದಸರೆಗೆ ವಿಶೇಷ ಆಹ್ವಾನಿತರಾಗಿ ಹೋಗಿಬರುತ್ತಿದ್ದರು. ಅವರು ಸಾಯುವವರ್ಷ ದಸರೆಗೆ ಹೋದಾಗ, ಪ್ರಭುಗಳನ್ನು ದರ್ಶನಮಾಡಿದಾಗ "ಮಹಾಪ್ರಭುಗಳ ದರ್ಶನ ದಸರೆಯಲ್ಲಿ ನನಗೆ ಇದೇ ಕೊನೆಯದು ಅಂತ ಕಾಣುತ್ತೆ ಎಂದರಂತೆ" ಯಾಕೆ ಹಾಗೆ ಹೇಳುತ್ತೀರಿ? ಎಂದು ಮಹಾಪ್ರಭುಗಳು ಕೇಳಿದಾಗ "ಯಾಕೋ ನನಗೆ ಹಾಗೆ ಅನ್ನಿಸಿದೆ" ಎಂದಷ್ಟೇ ಹೇಳಿದರಂತೆ. ಆ ಮಾತಿಗೆ ಸರಿಯಾಗಿ ಒಂದು ವರ್ಷದೊಳಗೆ ತೀರಿಕೊಂಡರು.

ಅವರು ನಿಧನರಾದ ಸಂದರ್ಭವನ್ನು ಕುರಿತು ಅವರ ಮೊಮ್ಮಗನಿಂದ ತಿಳಿದು ಬಂದ ಸಂಗತಿ ಇದು. "ಅವರು ನಿಧನರಾಗುವ ಒಂದು ವಾರಕ್ಕೆ ಮುಂಚೆ ಚಾಮರಾಜಪೇಟೆಯ ಕೆಂಪಾಂಬುಧಿ ಕೆರೆಯ ಸ್ಮಶಾನದವನ ಬಳಿಗೆ ಹೋಗಿ (ಅನೇಕರಿಗೆ ಶವಸಂಸ್ಕಾರ ಮಾಡಿಸಿದ್ದರಿಂದ ಆ ಸ್ಮಶಾನದವನ ಪರಿಚಯ ಶಾಸ್ತ್ರಿಗಳಿಗೆ ಚೆನ್ನಾಗಿ ಇತ್ತು) 'ನಮ್ಮ ಮನೆಯವರೇನಾದರೂ ಮುಂದಿನವಾರ ಬಂದರೆ ಅವರಿಗೆ ಸಹಕರಿಸಿ ಅನುಕೂಲ ಮಾಡಿಕೊಡಪ್ಪಾ' ಎಂದಿದ್ದರಂತೆ, ಹಾಗೆಯೇ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿ ಅವರ ಮನೆವೈದ್ಯರಾಗಿದ್ದ, ಅವರ ಮನೆಗೆ ಬರುತ್ತಿದ್ದ ಡಾಕ್ಟರ ಬಳಿಗೆ ಹೋಗಿ ನಮ್ಮ ಮನೆಯವರು ಹೇಳಿ ಕಳಿಸಿದರೆ ನೀವೇನೂ ಬರಬೇಡಿ, ಸಣ್ಣಪುಟ್ಟದ್ದಕ್ಕೆಲ್ಲಾ ಹೇಳಿ ಕಳಿಸುತ್ತಾರೆ. ನಿಮಗೆ ಗಾಬರಿಬೇಡ ಎಂದಿದ್ದರಂತೆ. ಹಿಂದಿನ ದಿನ ಮಗಳು ಮಹಾಲಕ್ಷಮ್ಮನನ್ನು ಕರೆದುಕೊಂಡು ಮೈಸೂರು ಬ್ಯಾಂಕಿಗೆ ಹೋಗಿ ಹಣತಂದಿಟ್ಟರು. ಸಾಯುವ ದಿನ ಬೆಳಗ್ಗೆ ದೇವರುಪೂಜೆ ಮಾಡುತ್ತಿದ್ದಾಗ ಸ್ವಲ್ಪ ತಲೆಸುತ್ತು ಬಂದಂತಾಗಿ ತನ್ನನ್ನು ಕೆಳಗೆ ನೆಲಕ್ಕೆ ಇಳಿಸಿ ಎಂದರಂತೆ. ಅವರ ಮನೆಯಲ್ಲಿ ಎತ್ತರವಾದ ಜಗಲಿ ಪ್ರದೇಶದಲ್ಲಿ ದೇವರ ವಿಗ್ರಹಗಳನ್ನು ಇಟ್ಟು ಆ ಜಗಲಿ ಮೇಲೆ ಕುಳಿತು ದೇವರು ಪೂಜೆ ಮಾಡುತ್ತಿದ್ದರು. ಹಾಗೆ ನೆಲಕ್ಕೆ ಇಳಿಸಿದಾಗ ಈ ದಿನ ನಕ್ಷತ್ರ ಚೆನ್ನಾಗಿಲ್ಲ ಹೊರಗಡೆ ರೂಮಿನಲ್ಲಿ ಮಲಗಿಸಿ ಎಂದು ಹೇಳಿದರು. ಸ್ವಲ್ಪ ಹೊತ್ತಿನಲ್ಲಿಯೇ ಪ್ರಾಣಪಕ್ಷಿ ಹಾರಿಹೋಗಿತ್ತು. ಸಾಯುವ ಮುಂಚೆ "ಬೀದಿ ಬಾಗಿಲಿನಲ್ಲಿ ಶವ ತೆಗೆದುಕೊಂಡು ಹೋಗಬೇಡಿ ಬೀದಿ ಕಡೆಯಿರುವ ಕೊಠಡಿಯ ಕಿಟಕಿ ಒಡೆದು ಕೊಠಡಿಯಿಂದಲೇ ಶವಸಾಗಿಸಿ" ಎಂದು ಹೇಳಿದ್ದರಂತೆ. ಕುಟುಂಬದವರು ಹಾಗೆಯೇ ಮಾಡಿದರು. ಗೋಡೆ ಒಡೆದು ಶವವನ್ನು ಹೊರಕ್ಕೆ

ತಂದರು. ಇದಕ್ಕೆ ಮುಂಚೆ 32 ಪುಟದ ಗೆರೆಗಳ ಹಳೆಯ ಪುಸ್ತಕದಲ್ಲಿ ತಾನು ತೀರಿಕೊಂಡ ಮೇಲೆ ಏನು ಮಾಡಬೇಕೆಂದು ಬರೆದಿಟ್ಟಿದ್ದರು.

ಶಾಸ್ತ್ರಿ ಅವರ ಮಗಳು ಮಹಾಲಕ್ಷ್ಮಮ್ಮ 1958 ರವರೆಗೆ ಬದುಕಿದ್ದರು. ಶಾಸ್ತ್ರಿಗಳು ಸತ್ತಾಗ 89 ವರ್ಷ 9 ತಿಂಗಳು ಆಗಿತ್ತಂತೆ.

ಬೀದಿಕಡೆ ಕಿಟಕಿ ಇದ್ದ ಮನೆಮುಂದೆ ಎಡಕ್ಕೆ ಬಲಕ್ಕೆ ಜಗಲಿ ಇದ್ದ ದೊಡ್ಡಮನೆ ಶಾಸ್ತ್ರಿಗಳದು ಸೀಗೆಬೇಲಿಯಲ್ಲಿ, ಮನೆಗೆ ಶಾರದಾನಿಲಯ ಎಂಬ ಫಲಕವಿತ್ತು. ಆ ಕಾಲಕ್ಕೆ ಅದು ಅಗ್ರಹಾರ, ಸಿಟಿ ಮಾರ್ಕೆಟ್ ಪಕ್ಕದಲ್ಲಿದ್ದ ಮೈನ್‌ರಸ್ತೆಯಲ್ಲಿತ್ತು. ಆ ರಸ್ತೆಯಲ್ಲಿ ಹೋಗಿ ಬರುತ್ತಿದ್ದ ಶಿಷ್ಯರು, ಸಾರ್ವಜನಿಕರು, ಶಾಸ್ತ್ರಿಗಳು ನಿಧನಾನಂತರವೂ ಮನೆ ಮುಂದುಗಡೆ ಹಾದು ಹೋಗುವಾಗ ನಮಸ್ಕಾರ ಮಾಡಿ ಹೋಗುತ್ತಿದ್ದರಂತೆ. ಅದನ್ನು ಕಂಡ ಮಗಳು ತನ್ನ ಮಗನಿಗೆ, "ಶಾಸ್ತ್ರಿಗಳು ಇರಲಿ, ಇಲ್ಲದಿರಲಿ ನೋಡು, ಮನೆ ದೇವಸ್ಥಾನ ಆಗಿಹೋಗಿದೆ ನಿಮ್ಮ ತಾತನಿಂದ" ದೇವಸ್ಥಾನಕ್ಕೆ ನಮಸ್ಕಾರ ಹಾಕಿದ ಹಾಗೆ ಮನೆ ಕಂಡಕೂಡಲೇ ಶಾಸ್ತ್ರಿಗಳು ಇರಲಿ ಇಲ್ಲದಿರಲಿ ನಮಸ್ಕಾರ ಮಾಡುತ್ತಾರೆ ಜನರು" ಎಂದು ಹೇಳುತ್ತಿದ್ದಳಂತೆ. ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ (ಬೆಂಗಳೂರು) ಅವರು ಕೆಲಸ ಮಾಡುತ್ತಿದ್ದಾಗ ಯಾರಾದರೂ ಅನ್ಯಧರ್ಮೀಯರು ಷೇಕ್ ಹ್ಯಾಂಡ್ ಕೊಟ್ಟರೆ ಮನೆಗೆ ಬಂದು ಸ್ನಾನ ಮಾಡುತ್ತಿದ್ದರು.

ವ್ಯಕ್ತಿತ್ವ: ದೊಡ್ಡಬೆಲೆ ಅವರ ವ್ಯಕ್ತಿತ್ವ ವರ್ಣರಂಜಿತ ವ್ಯಕ್ತಿತ್ವ, ಉದ್ದಕ್ಕೆ ಎತ್ತರವಾಗಿದ್ದರು. ಪೇಟಾ ಧರಿಸಿ ಶಾಲು ಹೊದೆಯುತ್ತಿದ್ದರು. ಡಿವಿಜಿ ಅವರ ಜ್ಞಾಪಕ ಚಿತ್ರಶಾಲೆಯಲ್ಲಿ ಅವರ ಭಾವಚಿತ್ರ ನೋಡಿದರೆ ಅವರ ಗಾಂಭೀರ್ಯ ಎದ್ದು ಕಾಣುತ್ತದೆ. ದೊಡ್ಡಬೆಲೆಯವರ ಪಾಂಡಿತ್ಯದ. ವ್ಯಕ್ತಿತ್ವ ಕುರಿತು ಡಿವಿಜಿ ಅವರು ಒಂದು ಪ್ರಸಂಗವನ್ನು ಉಲ್ಲೇಖಿಸಿದ್ದಾರೆ.

"ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಘನಪಂಡಿತರಾಗಿದ್ದರೂ ಅಹಂಕಾರವಿರಲಿಲ್ಲ. ವಿನಯವಂತರಾಗಿದ್ದರು. ಸುಮಾರು 1903-10ರ ಸುಮಾರಿನಲ್ಲಿ ನಡೆದ ಪ್ರಸಂಗ ಇದು. ಡಿವಿಜಿ ಆಗ ಮೈಸೂರು ಟೈಂಸ್ ಎಂಬ ಪತ್ರಿಕೆಯ ಸಹಾಯಕ-ಸಂಪಾದಕರಾಗಿದ್ದರು. ಬೆಂಗಳೂರಿನ ಐರಿಷ್ ಪ್ರೆಸ್ಸಿನಲ್ಲಿ ತಾವು ರಚಿಸಿದ್ದ 3-4 ಸಂಸ್ಕೃತಪದ್ಯಗಳನ್ನು ಅಚ್ಚಿಗೆ ಕೊಟ್ಟಿದ್ದರು. ಅಚ್ಚಿನವರು ಮೊಳೆಜೋಡಿಸಿ ಪ್ರೂಫ್ ತೆಗೆದು ಇರಿಸಿದ್ದರು. ಅದನ್ನು ಕೆಲವು ಪಂಡಿತರು ಓದಿ ತಿದ್ದಿದ್ದರು. ಮಧ್ಯಾಹ್ನ ಅಲ್ಲಿಗೆ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ದಯಮಾಡಿಸಿದರು. ಅವರ ವಿದ್ಯಾನಂದ ಮಾಸಪತ್ರಿಕೆ ಅಲ್ಲಿ ಅಚ್ಚಾಗುತ್ತಿತ್ತು. ಅದರ ಪ್ರೂಫ್ ನೋಡಲು ಬಂದಿದ್ದರು. ಅಲ್ಲಿದ್ದ ಡಿವಿಜಿ ಅವರ ಸಂಸ್ಕೃತ ಪದ್ಯಗಳ ಪ್ರೂಫನ್ನು ತೆಗೆದುಕೊಂಡು ನೋಡಿ ಶಾಸ್ತ್ರಿಗಳು

ತಿದ್ದಲು ಹೊರಟರು. ಕೆಲಸಗಾರರು ಸಾರ್ ಅದು ಡಿವಿಜಿ ಅವರ ಪ್ರೂಫ್ ಎಂದರಂತೆ. ಈತ ನಮ್ಮ ಹುಡುಗನೆ ಎಂದು ವಿವರಣೆ ನೀಡುತ್ತಾ ಆ ಪ್ರೂಫನ್ನು ತಿದ್ದಿದರು."

ಡಿವಿಜಿ ಅವರ ಪ್ರೂಫಿನಲ್ಲಿ ಇದ್ದುದ್ದು ಹೀಗೆ: "ಜಯ ಶಂಕರ ಜಯಶಂಕರ। ಗುರುಶೇಖರ ಭಗವನ್."

ಇದನ್ನು ಶಾಸ್ತ್ರಿಗಳು ತಿದ್ದಿದ್ದು ಹೀಗೆ: "ಜಯಶಂಕರ ಜಯಶಂಕರ। ವರದೇಶಿಕ ಭಗವನ್" ಆ ಮಧ್ಯಾಹ್ನ ಅಲ್ಲಿಗೆ ಬಾಲ ಸರಸ್ವತಿ, ವೆಂಕಟಾಚಾರ್ಯರು ಇತರೆ ವಿದ್ವಾಂಸ ಸ್ನೇಹಿತರು ಪ್ರೆಸ್ಸಿಗೆ ಬಂದರು. ತಾವು ನೋಡಿ ಒಪ್ಪಿದ್ದ ಡಿವಿಜಿ ಪದ್ಯ ತಿದ್ದುಪಾಟಾದುದನ್ನು ನೋಡಿದರು. ಆಗ ಡಿವಿಜಿ "ದೊಡ್ಡಬೆಲೆ ತಿದ್ದಿದ್ದಾರೆ, ಇದ್ದುಕೊಳ್ಳಲಿ ಬಿಡಿ" ಎಂದರಂತೆ ವೆಂಕಟಾಚಾರ್ ಅವರು "ಇದ್ದುಕೊಳ್ಳಲಿ ಅದೇಕೆ?" ಎಂದರೆ ಬಾಲ ಸರಸ್ವತಿಯವರು ಇರತಕ್ಕದ್ದೇ ಅಲ್ಲ, ನೀವು ಸುಮ್ಮನೆ ಕೂಡಿ ಎಂದರು ಡಿವಿಜಿಗೆ. ಆಮೇಲೆ ಅವರೆಲ್ಲ ದೊಡ್ಡಬೆಲೆ ಅವರ ಮನೆಗೆ ಹೋದರು ಆ ತಿದ್ದುಪಡಿ ಬಗ್ಗೆ ಸಾಕಷ್ಟು ಜೋರಾಗಿ ವಾಗ್ವಾದ ನಡೆಯಿತು. ಮಧ್ಯಾಹ್ನ ಎರಡೂವರೆ ಗಂಟೆಯ ವೇಳೆಗೆ ಅವರು ಶಾಸ್ತಿಗಳನ್ನು ಕರೆದುಕೊಂಡು ಡಿವಿಜಿ ಅವರ ಬಳಿಗೆ ಬಂದರು. ಆಗ ದೊಡ್ಡಬೆಲೆ ಹೇಳಿದರು: "ಇದೇನಪ್ಪಾ ಪಡೆ ಕಳಿಸಿಬಿಟ್ಟಿದ್ದೀಯ ಇವರ ಕೈಗೆ ಸಿಕ್ಕರೆ ನಾನು ಬದುಕಿಯೇನೇ.. ನಾನು ಪದ್ಯಗಳನ್ನು ಓದಿದೆ. ಎಲ್ಲಾ ಚೆನ್ನಾಗಿತ್ತು. ಆದರೆ ಗುರುಶೇಖರ ಭಗವನ್ ಎಂದು ಒಡೆದರೆ ಆಭಾಸವಾಗುತ್ತದೆ. ಯತಿಸ್ಥಾನ ಶೇ ಆದಮೇಲೆ ಬರಬೇಕಾಗಿದೆಯಲ್ಲಾ ಅದಕ್ಕಾಗಿ ತಿದ್ದಿದೆ" ಎಂದರು.

ವೆಂಕಟಾಚಾರ್ಯರು, ಬಾಲಸರಸ್ವತಿಗಳೂ, ಕಣ್ಣುಗಳನ್ನು ವಿಕಟಮಾಡಿಕೊಂಡು "ಇದೇನು ತಿದ್ದಾವಣೆ?" ವರದೇ ಶಿಕಭಗವನ್ ಎಂದರೆ ಹೇಗೆ ಸರಿಹೋಗುತ್ತದೆ ಶಂಕರಾಚಾರ್ಯರು ಸಿಖ್ಖರೇ?... ಹೀಗೆಲ್ಲ ಆರ್ಭಟಿಸಿದರು. ಆಗ ಡಿವಿಜಿ "ಎರಡು ಪಕ್ಷಗಳವರಿಗೂ ಕಾಲುಮುಟ್ಟಿ ನಮಸ್ಕಾರ ಮಾಡಿ ವಿವಾದವು ಅಲ್ಲಿಗೇ ಬಿಡಬೇಕೆಂದು ಕೇಳಿಕೊಂಡರು. ಆಗ ನಾರಾಯಣ ಶಾಸ್ತ್ರಿಗಳು ಇದೇನಪ್ಪಾ ಇವರು ಇಂದ್ರಜಿತ್ತು ಕಾಳಗಕ್ಕೆ ಬಂದ ಹಾಗೆ ಬರುತ್ತಾರಲ್ಲ ನನ್ನ ಯೋಗ ಚೆನ್ನಾಗಿತ್ತು! ಸದ್ಯ ಪ್ರಾಣ ತೆಗೆಯಲಿಲ್ಲ! ಎಂದರು. ಡಿವಿಜಿ ಹೇಳುತ್ತಾರೆ, 'ಇಂದು ಅಂಥ ವಿದ್ವತ್ ಶಾಸ್ತ್ರಿಗಳೂ ಇಲ್ಲ, ಅಂಥ ಜೆಟ್ಟಿಗಳೂ ಇಲ್ಲ'. ಅಖಾಡದ ರುಸ್ತುಂಗಳಲ್ಲಿ ದೊಡ್ಡಬೆಲೆ ಒಬ್ಬರಾಗಿದ್ದರು. ಡಿವಿಜಿಯವರ ಈ ಪ್ರಸಂಗ ದೊಡ್ಡಬೆಲೆ ಅವರ ಗುಣಸ್ವಭಾವಕ್ಕೆ ಕನ್ನಡಿ ಹಿಡಿದಿದೆ.

ಪತ್ರಿಕಾಸಂಪಾದನೆ: ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಕೇವಲ ಪಂಡಿತರು, ಉಪಾಧ್ಯಾಯ, ಲೇಖಕರು ಅಷ್ಟೇ ಆಗಿರಲಿಲ್ಲ. ಪತ್ರಿಕಾಸಂಪಾದಕರೂ ಆಗಿದ್ದರು. ದೊಡ್ಡಬೆಲೆ ನಾರಾಯಣಶಾಸ್ತ್ರಿಗಳಿಗೆ ಅವರ ಗುರುಗಳಾದ ವಾಸುದೇವಶಾಸ್ತ್ರಿಗಳನ್ನು ಕಂಡರೆ ಅಪಾರಗುರುಭಕ್ತಿ, ದೊಡ್ಡಬಳ್ಳಾಪುರದ ವಾಸುದೇವಶಾಸ್ತ್ರಿಗಳಿಗೆ ಮಹಾರಾಜರಿಂದ ವಿದ್ಯಾನಿಧಿ ಎಂಬ ಬಿರುದು ಬಂದಿತ್ತು. (ಈ ಬಿರುದು ವಿದ್ಯಾನಂದ ಎಂದು ಇರಬೇಕು ಎನ್ನುತ್ತಾರೆ ಡಿವಿಜಿ) ಶಾಸ್ತ್ರಿಗಳು ಗುರುಗಳ ಬಿರುದಿನ ಹೆಸರಿನಲ್ಲಿ 'ವಿದ್ಯಾನಂದ' ಎಂಬ ಮಾಸಪತ್ರಿಕೆಯನ್ನು ನಡೆಸಿದರು. ಇದರ ಜತೆಗೆಶೃಂಗೇರಿ ಜಗದ್ಗುರುಗಳ ಪರಮಭಕ್ತರಾದ ದೊಡ್ಡಬೆಲೆಯವರು ಶ್ರೀಶಾರದಾಪ್ರೆಸ್ ಎಂಬುದನ್ನು ನಡೆಸಿ, "ಶ್ರೀಶಾರದಾ" ಎಂಬ ಮಾಸಪತ್ರಿಕೆಯನ್ನು ಶ್ರೀಶಿವಗಂಗಾ ಸಂಸ್ಥಾನದ ಆಶ್ರಯದಲ್ಲಿ ಪ್ರಕಟಿಸಿದರು. ಶ್ರೀ ಶಾರದಾ ಪತ್ರಿಕೆಯಲ್ಲಿ ಪ್ರಕಟವಾದ ಪ್ರಕಟನೆಯೊಂದು ಹೀಗಿದೆ: "12–8–1910ರಲ್ಲಿ ಪತ್ರಿಕೆ ಆರಂಭವಾಗಿದೆ. ವರ್ಷಕ್ಕೆ ಚಂದಾ 2 ರೂ. ಶ್ರೀ ಶೃಂಗೇರಿಮಠ, ಶ್ರೀ ಮನ್ಮಹಾರಾಜರು ಮತ್ತು ಬಹುಮಂದಿ ದೊಡ್ಡ ಮನುಷ್ಯರು ಇವರಿಂದ ಪೋಷಿಸಲ್ಪಡುತ್ತಿದೆ" ಈ ಪತ್ರಿಕೆಯಲ್ಲಿ ಶಾಸ್ತ್ರಿಗಳು ರಚಿಸಿದ ದಶೋಪನಿಷತ್ತು. ಶ್ರೀ ಶಂಕರಾಚಾಯರ್ಯರ ಚರಿತ್ರಕಾಲ ವಿಚಾರ, ಸಂಧ್ಯಾವಂದನೆಯ ಅರ್ಥವಿಚಾರ, ಬಾಲಕರ ಭಂಡಾರ, ಕುಮಾರ ಸಂಭವ ಕಾವ್ಯ, ಧರ್ಮಸಿಂಧುಸಾರ, ಪುಸ್ತಕಗಳು ಪ್ರಕಟವಾಗಿವೆ. ಡಿವಿಜಿ ಅವರು ಈ ಪತ್ರಿಕೆಗಳ ಬಗ್ಗೆ ಹೇಳಿದ ಮಾತುಗಳಿವು "ಶ್ರೀ ಶಾರದಾ ಮತ್ತು ವಿದ್ಯಾನಂದ ಮಾಸಪತ್ರಿಕೆಗಳಲ್ಲಿ ಗೀತೆ, ವಿವೇಕ ಚೂಡಾಮಣಿ ಮೊದಲಾದ ಮೇಲೆ ಹೇಳಿದ ಗ್ರಂಥಗಳು ಮೊದಲು ಪ್ರಕಟವಾಗಿ ಆಮೇಲೆ ಪುಸ್ತಕಗಳಾದುವು. ಉಪಯುಕ್ತಗ್ರಂಥಗಳ ಜೊತೆಗೆ ಪ್ರಸಂಗಗಳನ್ನು ಸಾಹಿತ್ಯದ ಪ್ರಕರಣಗಳನ್ನೂ ಪ್ರಕಟಪಡಿಸುತ್ತಿದ್ದರು. ಅವರ ಲೇಖನ ಶೈಲಿ ಸಾಮಾನ್ಯ ಜನರನ್ನು ಉದ್ದೇಶಿಸಿದ್ದಾಗಿ ಸರಳವಾಗಿತ್ತು".

ದೊಡ್ಡಬೆಲೆ ನಾರಾಯಣಶಾಸ್ತ್ರಿಗಳ ಸಾಹಿತ್ಯ ಸೇವೆಯನ್ನು ವಿವೇಚಿಸುವ ಮುನ್ನ ಅವರ ಕಾಲದ ಕನ್ನಡ ಸಾಹಿತ್ಯದ ಸ್ಥಿತಿಗತಿ ಹೇಗಿತ್ತು ಎಂಬುದನ್ನು ಸ್ವಲ್ಪ ಗಮನಿಸುವುದು ಅಗತ್ಯವಿದೆ. ಶ್ರೀನಿವಾಸ ಹಾವನೂರರು ತಮ್ಮ ಹೊಸಗನ್ನಡ ಅರುಣೋದಯದಲ್ಲಿ ಈ ಬಗ್ಗೆ ಹೇಳಿರುವ ಮಾತುಗಳು ಗಮನಾರ್ಹವಾಗಿವೆ. ದೊಡ್ಡಬೆಲೆ ಅವರು 19ನೇ ಶತಮಾನದ ಉತ್ತರಾರ್ಧದಲ್ಲಿ ಜನಿಸಿ 20ನೇ ಶತಮಾನದ ಪೂರ್ವಾರ್ಧದಲ್ಲಿ ಇದ್ದರು. ಸಾಂಪ್ರದಾಯಿಕ ಗದ್ಯ ಲೇಖಕರು ಮತ್ತು ಹೊಸದೃಷ್ಟಿಯ ಗದ್ಯಲೇಖಕರು ಎಂದು ಹಾವನೂರರು ಎರಡು ಬಗೆಯಾಗಿ ವರ್ಗೀಕರಿಸಿದ್ದಾರೆ. ಇದರಲ್ಲಿ ಸಾಂಪ್ರದಾಯಿಕ ಗದ್ಯಲೇಖಕರ ವಿಭಾಗದಲ್ಲಿ ಬೇಗೂರು ಮಲ್ಲಪ್ಪ (1839–1907) ಕುಂಡಲಗಿರಿಯಾಚಾರ್ಯ (1865–1904) ಪಿ.ಆರ್. ಕರಿಬಸವಶಾಸ್ತ್ರಿ (1848–

1931) ಎನ್.ಆರ್. ಕರಿಬಸವಶಾಸ್ತ್ರಿ(182751923) ದೊಡ್ಡಬೆಲೆ ನಾರಾಯಣಶಾಸ್ತ್ರಿ, ಹೊಳಕಲ್ಲು ನರಸಿಂಹಯ್ಯ ಎಂ. ರಾಮಸ್ವಾಮಿಶಾಸ್ತ್ರಿ, ಪುಸ್ತಕಂ ಅಳಸಿಂಗರಾಚಾರ್, ಹೆಸರುಘಟ್ಟದ ಹೊನ್ನಪ್ಪ ಇವರನ್ನು ಉಲ್ಲೇಖಿಸಿ ಅವರ ಸಾಹಿತ್ಯಸೇವೆಯನ್ನು ಪ್ರಸ್ತಾಪಿಸಿದ್ದಾರೆ. ಸಾಂಪ್ರದಾಯಿಕ ಗದ್ಯಲೇಖಕರ ಅವಧಿಯ ಲಕ್ಷಣಗಳನ್ನು ಶ್ರೀನಿವಾಸ ಹಾವನೂರರು ಹೀಗೆ ಚಿತ್ರಿಸಿದ್ದಾರೆ:

"ಇತ್ತ ಹೊಸ ಶಿಕ್ಷಣದ ಪರಿಣಾಮವಾಗಿ, ಸಾಮಾನ್ಯಮಟ್ಟದ ವಾಚನಾಭಿರುಚಿಯನ್ನು ಬೆಳೆಯಿಸಿಕೊಂಡ ಕನ್ನಡಿಗರ ಸಂಖ್ಯೆ ಭರದಿಂದ ಹೆಚ್ಚುತಲಿದ್ದಿತು. ಅವರಿಗೆ ಬೇಕಾಗಿದ್ದ ಕೃತಿಗಳೆಂದರೆ, ಜನಪ್ರಿಯ ಮಟ್ಟದ ಕಾವ್ಯಗಳು, ಬತ್ತೀಸಪುತ್ಥಳಿಯಂಥ ಕಥೆಗಳು ಮತ್ತು ಆಧ್ಯಾತ್ಮಿಕ ಗ್ರಂಥಗಳು. ಇವುಗಳನ್ನು ಪೂರೈಸುವುದಕ್ಕೆ ದೇಶೀಯ ಮುದ್ರಕ ಪ್ರಕಾಶಕರು. 19ನೆಯ ಶತಮಾನದ ಉತ್ತರಾರ್ಧದಲ್ಲಿ ಸಿದ್ಧರಾಗಿಯೇ ಇದ್ದರು. ಪರಿಣಾಮವಾಗಿ ಸಾಂಪ್ರದಾಯಿಕ ಸಾಹಿತ್ಯದಲ್ಲಿಯೇ ತಮ್ಮ ದೃಷ್ಟಿಯಿರಿಸಿಕೊಂಡ ಗದ್ಯಲೇಖಕರು ಕ್ರಮೇಣ ತಲೆಯೆತ್ತಿದರು. ಕನ್ನಡವನ್ನು ಕಲಿಯುತ್ತಿದ್ದವರಿಗಾಗಿ ವ್ಯಾಕರಣಾದಿ ಗ್ರಂಥಗಳನ್ನು ರಚಿಸುವ ಹಾಗೂ ಹಳೆಯ ಕಾವ್ಯಗಳನ್ನು ಟೀಕೆ ಟಿಪ್ಪಣಿಗಳೊಡನೆ ಪ್ರಕಟಿಸುವ ಹೊಣೆಯೂ ಅವರ ಮೇಲೆ ಇದ್ದಿತು. ಹೀಗೆ ಚಾಮರಾಜ ಒಡೆಯರ್ ಕಾಲದಲ್ಲಿದ್ದ ಸಂಸ್ಕೃತ ಕನ್ನಡಪಂಡಿತರು ಸಾಮಾನ್ಯ ಮಟ್ಟದ ವಾಚಕನನ್ನು ಗಮನದಲ್ಲಿರಿಸಿಕೊಂಡು ಸುಲಭಸಾಹಿತ್ಯವನ್ನು ರಚಿಸುವ ಪ್ರವೃತ್ತಿಯುಳ್ಳವರಾಗಿದ್ದನ್ನು ನಾವು ಕಾಣುತ್ತೇವೆ. ಕನ್ನಡ ಸಾಹಿತ್ಯ ವಾಹಿನಿಯು ಹೆಚ್ಚೆಚ್ಚು ಜನಾಭಿಮುಖವಾಗುತ್ತ ನಡೆದುದರ ಲಕ್ಷಣವಿದು.

ಇಂಥ ವಿದ್ವಾಂಸರು, ಶಾಲೆ, ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಮುಂದಿನ ಪೀಳಿಗೆಯವರಲ್ಲಿ ಕನ್ನಡ ಪ್ರೇಮವನ್ನು ಬೆಳೆಸುತ್ತ ಕನ್ನಡಭಾಷೆಯ ಪರಿಶುದ್ಧತೆಯನ್ನು ಕಾಯ್ದುಕೊಳ್ಳುವ ವಿಚಾರದಲ್ಲಿ ಶ್ರದ್ಧೆಯಿಂದ ಕೆಲಸ ಮಾಡಿದ್ದಾರೆ. ಅವರಲ್ಲಿ ಕೆಲವರು ಮಿಷನರಿಗಳಿಗೆ ಕನ್ನಡಪಾಠ ಹೇಳಿ ಅವರ ಬರವಣಿಗೆಯನ್ನು ಆಗೀಗ ತಿದ್ದಿದ್ದಾರೆ. ಇತರ ರೀತಿಯಿಂದಲೂ ನೆರವಾಗಿದ್ದಾರೆ".

ಈ ಮಾತುಗಳು ಹೆಚ್ಚಿಗೆ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳಿಗೆ ಅನ್ವಯವಾಗುತ್ತದೆ. ಹಾವನೂರರು ಉಲ್ಲೇಖಿಸಿರುವ ಸಾಹಿತಿಗಳಲ್ಲಿ ಹೆಚ್ಚು ಕೆಲಸಮಾಡಿ ಹೆಚ್ಚುಕೃತಿಗಳನ್ನು ರಚಿಸಿರುವವರಲ್ಲಿ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಗಣ್ಯರಾಗಿದ್ದಾರೆ. ಅವರು ರಚಿಸಿರುವ ಕೃತಿಗಳ ಪಟ್ಟಿಯನ್ನು ಗಮನಿಸಿದರೆ ಅವುಗಳ ಆಳ, ವಿಸ್ತಾರ ವೈವಿಧ್ಯಗಳನ್ನು ಅರಿಯಬಹುದಾಗಿದೆ. ದೊಡ್ಡಬೆಲೆಯವರ ಸಮಗ್ರ ಕೃತಿಗಳನ್ನು ಕಲೆಹಾಕಿ ಅಧ್ಯಯನಮಾಡಿದರೆ ಕನ್ನಡಕ್ಕೆ ಅವರು ಸಲ್ಲಿಸಿದ ವಿಶಿಷ್ಟಸೇವೆ ವೇದ್ಯವಾಗುತ್ತದೆ.

ಈ ಶತಮಾನದ ಪ್ರಾರಂಭದಲ್ಲಿ ಕನ್ನಡಗದ್ಯದಲ್ಲಿ ನಾವೀನ್ಯತಂದು ಜನಪ್ರಿಯಗೊಳಿಸಿದವರಲ್ಲಿ ದೊಡ್ಡಬೆಲೆಯವರೂ ಒಬ್ಬರು ಮತ್ತು ಆ ಕಾಲದ ಗಣ್ಯವಿದ್ವಾಂಸರಲ್ಲಿ ಒಬ್ಬರಾಗಿದ್ದು ಸಾರ್ವಜನಿಕರಂಗದಲ್ಲಿ ಪ್ರಸಿದ್ಧಿ ಪಡೆದಿದ್ದರು.

ವಿದ್ವಾಂಸಕವಿಗಳು ಮತ್ತು ಗದ್ಯ ಸಾಹಿತಿ ಆಗಿ 60ಕ್ಕೂ ಮಿಕ್ಕು ಗ್ರಂಥಗಳನ್ನು ಅನುವಾದಿಸಿ/ರಚಿಸಿದ ಶಾಸ್ತ್ರಿಗಳ ಕೆಲವು ಗ್ರಂಥಗಳ ಪರಿಚಯ ಹೀಗಿದೆ:

ದೊಡ್ಡಬೆಲೆ ನಾರಾಯಣಶಾಸ್ತ್ರಿಗಳ ಗ್ರಂಥಪಟ್ಟಿ ಕಂಡರೆ ಅವರು ಘನಸಂಸ್ಕೃತ ವಿದ್ವಾಂಸರು ಮತ್ತು ಕನ್ನಡ ಪಂಡಿತರು ಎಂದು ತಿಳಿಯುತ್ತದೆ. ಕಾಳಿದಾಸನ ಕೃತಿಗಳ ಅನುವಾದ ಇದಕ್ಕೆ ಶ್ರೇಷ್ಠನಿದರ್ಶನ. ಮೊದಲಬಾರಿಗೆ ಕನ್ನಡದಲ್ಲಿ 'ರಘುವಂಶ' ಮಹಾಕಾವ್ಯವನ್ನು ಸೊಗಸಾದ ಕನ್ನಡದಲ್ಲಿ ಗದ್ಯದಲ್ಲಿ ನೀಡಿದ ಹಿರಿಮೆ ಅವರದು. ಬಾಣನ ಕಾದಂಬರಿಯನ್ನು ಕನ್ನಡಕ್ಕೆ ನೀಡಿದ ಗಂಗಾಧರ ಮಡಿವಾಳೇಶ್ವರ ತುರಮರಿ ಅವರನ್ನು ವಿಶೇಷವಾಗಿ ಕನ್ನಡ ಸಾಹಿತ್ಯ ಚರಿತ್ರಕಾರರೆಲ್ಲ ಹೊಗಳಿದ್ದಾರೆ. ಆದರೆ ಅವರ ಕಣ್ಣಿಗೆ ದೊಡ್ಡಬೆಲೆ ಅವರ ಗ್ರಂಥ ಬಿದ್ದಿಲ್ಲ.

ರಘುಕುಲಚರಿತಂ ಎಂಬ ಹೆಸರಿನಲ್ಲಿ 2 ಭಾಗಗಳಲ್ಲಿ (1923) ಮರು ಮುದ್ರಣ ಮಾಡಿ ಪ್ರಕಟಿಸಿದರು. ಆಗಿನ ವಿದ್ಯಾಧಿಕಾರಿಗಳಾದ ಎಂ. ಶಾಮರಾವ್ ಅವರು ಶಾಲೆಗಳಿಗೆ ಇದನ್ನು ಪಠ್ಯವಾಗಿ ಅಂಗೀಕರಿಸಿದರು. ಸಂಸ್ಕೃತ ಕಾವ್ಯವನ್ನು ಕನ್ನಡ ಗದ್ಯದಲ್ಲಿ ಹೇಗೆ ತರಬೇಕು ಎಂದು ಮಡಿವಾಳೇಶ್ವರರ ಕೃತಿಯಂತೆ ಇದೂ ಮಾದರಿ ಗದ್ಯಗ್ರಂಥವಾಗಿದೆ.

ದೇವರ ಸೇವೆ ಎಂಬ ಇನ್ನೊಂದು ನೀತಿಗ್ರಂಥ ಇವರು ಕನ್ನಡದ ಕವಿಗಳು ಎಂಬುದನ್ನು ಸಾಬೀತು ಪಡಿಸುತ್ತದೆ. ಈಗ್ರಂಥದಲ್ಲಿ ಇರುವ ಕಂದ, ಷಟ್ಪದಿಗಳಲ್ಲಿ ರಚಿತವಾದ ದೇವರಪ್ರಾರ್ಥನೆ, ನೀತಿ ಕುಸುಮಾಂಜಲಿ, ಬಾಲ ದಿನಚರಿ ಪದ್ಯಗಳು ಲಲಿತವಾಗಿದ್ದು ನೀತಿಬೋಧಕವಾಗಿದ್ದು 1909ರಲ್ಲಿ ರಚಿತವಾಗಿದೆ. ದೇವರ ಸೇವೆ ಎಂಬ ಪ್ರಬಂಧ ಸರಳಗದ್ಯದಲ್ಲಿ ವಿದ್ಯಾರ್ಥಿಗಳಿಗಾಗಿ ಬರೆಯಲ್ಪಟ್ಟಿದೆ. ಆರ್. ನರಸಿಂಹಾಚಾರ್, ಚ, ವಾಸುದೇವಯ್ಯ ಮೊದಲಾದವರೆಲ್ಲ ಇಲ್ಲಿಯ ಪದ್ಯಗದ್ಯಗಳ ಸೊಗಸನ್ನು ಮೆಚ್ಚಿದ್ದಾರೆ.

ಟೀಕಾಕಾರರು: 1912ರಲ್ಲಿ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ರಚಿಸಿರುವ ಕನ್ನಡ ಟೀಕಾಗ್ರಂಥಗಳಲ್ಲಿ ಮಹತ್ತರವೂ ಬೃಹತ್ತರವೂ ಆದ ನೂರಾರು ಪುಟಗಳ ಎರಡುಗ್ರಂಥಗಳಲ್ಲಿ ಒಂದು ಜೈಮಿನಿಭಾರತದ ಟೀಕೆ ಇನ್ನೊಂದು ರಾಮಾಯಣದ ಸುಂದರಕಾಂಡದ ಟೀಕೆ ಗ್ರಂಥ. ಕನ್ನಡದಲ್ಲಿಯೇ ವಿಶಿಷ್ಟವಾದವು. ದೊಡ್ಡಬೆಲೆ ಅವರ ಪಾಂಡಿತ್ಯ ಪ್ರತಿಭೆಗಳಿಗೆ ಈ ಗ್ರಂಥಗಳು ನಿದರ್ಶನಗಳಾಗಿವೆ.

ಜೈಮಿನಿಭಾರತಕ್ಕೆ ಕನ್ನಡದಲ್ಲಿ ಹಲವಾರು ಟೀಕೆಗಳಿವೆ. ಕರಿಬಸವ ಶಾಸ್ತ್ರಿಗಳು, ಕಡಬದ ನಂಜುಂಡ ಶಾಸ್ತ್ರಿಗಳು, ಹೆಚ್. ನಾಗಪ್ಪ, ಬೆಳ್ಳಾವೆ ನರಹರಿಶಾಸ್ತ್ರಿ ಮುಂತಾದವರು ಟೀಕೆ, ಬರೆದಿದ್ದಾರೆ. ದೊಡ್ಡಬೆಲೆ ಅವರ ಭಾನುಪ್ರಭೆ ಟೀಕೆಯನ್ನು ಇತರರ ಟೀಕೆಗೆ ಹೋಲಿಸಿದರೆ ಹೆಚ್ಚು ವಿಸ್ತಾರವಾದುದು; ವೈವಿಧ್ಯಮಯವಾದುದು. ಉದಾಹರಣೆಗೆ ಮೊದಲ ಪದ್ಯ ಶ್ರೀವಧುವಿನಂಬಕ....) ಪದ್ಯದ ಟೀಕೆಯನ್ನು ಗಮನಿಸಬಹುದು. ಆ ಪದ್ಯಕ್ಕೆ ವಿಷ್ಣುಪರ ಬ್ರಹ್ಮ ಪರ ಶಿವಪರ 3 ಬಗೆಯಲ್ಲಿ ಅರ್ಥ ಮಾಡಿದ್ದಾರೆ. ಪ್ರತಿ ಪದ್ಯಕ್ಕೂ, ಅನ್ವಯಾರ್ಥ ತಾತ್ಪರ್ಯ ನೀಡುವುದರ ಜತೆಗೆ ಅಧಿಕ – ವಿಶೇಷವೆಂಬ ಶೀರ್ಷಿಕೆಯಲ್ಲಿ ವಿಶೇಷ ಪೂರ್ವಕಥೆಗಳನ್ನು ವ್ಯಾಕರಣ, ಅಲಂಕಾರದ ಸಂಗತಿಗಳನ್ನು ತಿಳಿಸುತ್ತಾರೆ. ಈ ಟೀಕೆಯನ್ನು ರಚಿಸುವಲ್ಲಿ ದೇವನಹಳ್ಳಿ ಶಂಕರಭಟ್ಟರ ನೆರವನ್ನು ಪಡೆದಿದ್ದಾರೆ. 930ಕ್ಕೂ ಹೆಚ್ಚಿನ ಪುಟಗಳ ಬೃಹದ್ಗ್ರಂಥ ಇದು. ವಾಲ್ಮೀಕಿ ರಾಮಾಯಣದ ಸುಂದರಕಾಂಡದ ಟೀಕಾಗ್ರಂಥದಲ್ಲಿ 960 ಪುಟಗಳಿಗೂ ಹೆಚ್ಚಿನ ಪುಟಗಳಿವೆ. ವಿಸ್ತೃತ ವ್ಯಾಖ್ಯಾನವಿದೆ. ಮೂಲ, ಅನ್ವಯ, ತಾತ್ಪರ್ಯಗಳ ಜತೆಗೆ ವಿಸ್ತಾರವಾದ ಪೀಠಿಕೆ ಇದೆ. ಇದರಲ್ಲಿ ರಾಮಾಯಣ ಪಾರಾಯಣ ವಿಧಾನಗಳ ಬಗ್ಗೆ ವಿವಿಧ ಸಂಪ್ರದಾಯಗಳನ್ನು ವಿವರವಾಗಿ ತಿಳಿಸಿದೆ. ಕನ್ನಡದಲ್ಲಿ 20ನೇ ಶತಮಾನದ ಪ್ರಾರಂಭದಲ್ಲಿ ಪ್ರಕಟವಾದ ಕೆಲವೇ ಬೃಹದ್ಗ್ರಂಥಗಳಲ್ಲಿ ಇದೊಂದು.

ಅದ್ವೈತ ವಿದ್ವಾಂಸರು: ಕನ್ನಡದ ವಿದ್ವಾಂಸರಲ್ಲಿ ಸಂಸ್ಕೃತದ ಶಾಸ್ತ್ರ ಗ್ರಂಥಗಳನ್ನು ಓದಿ ಪಾಂಡಿತ್ಯ ಗಳಿಸಿಯೂ ಕನ್ನಡದಲ್ಲಿ ಶ್ರೇಷ್ಠ ಬರಹಗಾರರಾಗಿರುವರು ಕಡಿಮೆ ಮಂದಿ. ಅದ್ವೈತಸಿದ್ಧಾಂತದ ಗ್ರಂಥರಚನೆ ವಿಚಾರದಲ್ಲಿ ಹೊಸಕೆರೆ ಚಿದಂಬರಯ್ಯ, ದೇವುಡು ನರಸಿಂಹಶಾಸ್ತ್ರಿಗಳ ಸಾಲಿಗೆ ಸೇರಿದವರು ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಗುರುಭಕ್ತಿಯಲ್ಲಿ ಅಸೀಮರಾಗಿದ್ದರು. ದೊಡ್ಡಬಳ್ಳಾಪುರದ ವಾಸುದೇವಶಾಸ್ತ್ರಿಗಳು ಇವರ ಗುರುಗಳು. ದೊಡ್ಡಬೆಲೆ ಅವರು ತಮ್ಮಗ್ರಂಥಗಳನ್ನು ಬರೆದು ಪೂರೈಸಿದಾಗ ಶ್ರೀವಾಸುದೇವಾರ್ಪಣಂ ಎಂದು ತಮ್ಮಗುರುಗಳಿಗೆ ಅರ್ಪಿಸುತ್ತಿದ್ದರು. ಹಾಗೆಯೇ ಗ್ರಂಥವನ್ನು ಮುಗಿಸುತ್ತಿದ್ದರು.

ವಾಸುದೇವ ಮನನವೆಂಬ ಅದ್ವೈತಸಿದ್ಧಾಂತದ ಗ್ರಂಥವನ್ನು ಸಂಸ್ಕೃತದಲ್ಲಿ ರಚಿಸಿದ್ದನ್ನು ಇವರು ಕನ್ನಡದಲ್ಲಿ ಗದ್ಯರೂಪದಲ್ಲಿ ಅನುವಾದಿಸಿದ್ದಾರೆ. ವಾಸುದೇವ ಮನನವೆಂಬ ಅದ್ವೈತ ಸಿದ್ಧಾಂತ ಗ್ರಂಥವನ್ನು ರಚಿಸಿದ್ದು ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳ ಗುರುಗಳ ಗುರುಗಳಾದ ವಾಸುದೇವ ಯತೀಶ್ವರರಿಂದ. ಇದನ್ನು ತಮ್ಮ ಗುರುಗಳಿಂದ ಕೇಳಿ ಆ ಸಂಸ್ಕೃತ ಗ್ರಂಥವನ್ನು ಕನ್ನಡಕ್ಕೆ ಇಳಿಸಿದ್ದಾರೆ. ಉಪೋದ್ಘಾತದಲ್ಲಿ ಈ ಬಗ್ಗೆ ಹೇಳಿರುವ ಮಾತುಗಳಿವು.

"ಪೂರ್ವಕಾಲದೊಳು ವಾಸುದೇವಯತೀಶ್ವರರು ಎಂಬುದಾಗಿ ಭೂಲೋಕದಲ್ಲಿ ಅವತರಿಸಿ... ಜ್ಞಾನ ಸಂಪಾದನಕ್ಕೊಸ್ಕರ ಮನನವೆಂಬ ಹೆಸರುಳ್ಳ ಅನ್ಯಾದೃಶವಾದ ಗ್ರಂಥವನ್ನು ರಚಿಸಿದರು. ಆ ಅಮೂಲ್ಯ ಗ್ರಂಥವನ್ನೇ ಸಾಮಾನ್ಯಜನರ ಸಹಾಯಾರ್ಥವಾಗಿ... ವಿದ್ಯಾನಿಧಿಗಳೆಂಬುದಾಗಿ ಬಿರುದನ್ನು ಪಡೆದಿರುವ ದೊಡ್ಡಬೆಲೆ ವಾಸುದೇವಶಾಸ್ತ್ರಿಗಳೆಂಬ ಗುರುಗಳ ಅಮೋಘವಾದ ಉಪದೇಶಬಲದಿಂದ ದೇಶ ಭಾಷೆಯೊಳು ವಿರಚಿಸಲಾರಂಭಿಸಿದೆನು."

ವಿದ್ಯಾರ್ಥಿಗಳ ಜ್ಞಾನದೀಪ

ದೊಡ್ಡಬೆಲೆಯವರು ಅಧ್ಯಾಪಕರೂ ಆಗಿದ್ದರು. ವಿದ್ಯಾರ್ಥಿಗಳಿಗಾಗಿ ಸಾಕಷ್ಟು ಸಾಹಿತ್ಯರಚಿಸಿದ್ದಾರೆ. ಬಾಲಕರ ಭಂಡಾರ 1 ಮತ್ತು 2 ಭಾಗಗಳಲ್ಲಿ ಹಿತೋಕ್ತಿ (14 ಪುಟ) ಯಕ್ಷಪ್ರಶ್ನೆ (50 ಪುಟಗಳು) ಎಂಬ ಪುಟ್ಟಗ್ರಂಥಗಳನ್ನು ರಚಿಸಿದ್ದಾರೆ. ಯಕ್ಷಪ್ರಶ್ನೆ ಎಂಬುದು ಮಹಾಭಾರತದಲ್ಲಿ ಬರುವ ಯಕ್ಷಪ್ರಸಂಗದ ಅನುವಾದ ಮತ್ತು ವಿವರಣೆ. ಹಿತೋಕ್ತಿ ಎಂಬುದು ಉಪನಿಷತ್ತಿನಲ್ಲಿ ಬರುವ ಉಪಮನ್ಯು ಕಥೆ, ಅರುಣಿಯ ಕಥೆ, ಗಿಣಿ' ಕಥೆ, ಬೈದ್ಯನ ಕಥೆ ಎಂಬ 4 ಕಥೆಗಳನ್ನು ಸರಳ ಗದ್ಯದಲ್ಲಿ ಹೇಳಿದ್ದಾರೆ. ಮಕ್ಕಳಿಗೆ ಓದಲು ಹಿತವಾಗಿದೆ.

ದೇವರಸೇವೆ ಎಂಬ ಪ್ರಬಂಧ ಮತ್ತು ಅದರಲ್ಲಿರುವ ಷಟ್ಪದಿ, ಕಂದ ನೀತಿ ಪದ್ಯಗಳು ಮಾಧ್ಯಮಿಕ ಶಾಲೆಗಳ ಮಕ್ಕಳಿಗೆ ಉಪಯುಕ್ತವಾಗಿವೆ. ಹಿಂದೆ ಶಾಲೆಗಳಲ್ಲಿ ನೀತಿಶಿಕ್ಷಣಕ್ಕೆ ಪ್ರಾಶಸ್ತ್ಯವಿತ್ತು. ನೀತಿಗ್ರಂಥಗಳನ್ನು ಪಠ್ಯವಾಗಿಡುತ್ತಿದ್ದರು. ಸೋಮೇಶ್ವರಶತಕ, ಚೂಡಾಮಣಿಶತಕ, ನೀತಿಚಿಂತಾಮಣಿ, ನೀತಿಗಳ ನೆಲೆಗಟ್ಟು ಮುಂತಾದ ಪಠ್ಯಗ್ರಂಥಗಳೇ ಇದಕ್ಕೆ ಸಾಕ್ಷಿ. ಈಗ ಆ ಪದ್ಧತಿ ಕ್ಷೀಣಿಸಿದೆ. ದೊಡ್ಡಬೆಲೆ ಅವರು ಸಂಸ್ಕೃತ-ಕನ್ನಡ ವಿದ್ವಾಂಸರು, ಮಕ್ಕಳಿಗೆ ದೇವುಡು ಅವರಂತೆ ಸರಳವಾಗಿ ಬರೆಯಬಲ್ಲವರಾಗಿದ್ದರು. ನಿದರ್ಶನಕ್ಕೆ ಬಾಲದಿನಚರ್ಯೆಯ ಈ ಪದ್ಯಗಳನ್ನು ಗಮನಿಸಿ:

ಮಗುವೆ! ನಿನ್ನಯ ಕೋಮಲಾಂಗಕೆ
ಸೊಗಸುವಂತಹ ಪುಷ್ಟಿಯೆಸಗುವ
ಬೊಗುರಿ ಗಜ್ಜುಗ ಗೋಲಿ ಚೆಂಡುಗಳನಾಡುತಲಿ
ಸೊಗದ ಗಾಳಿಯಲಿರುತೆ ಬೈಲಲಿ
ಮಗುಳ ಹಕ್ಕಿಯು ತನ್ನ ಗೂಡನು
ಹೊಗುವ ಕಾಲದೆ ಮನೆಯ ಸೇರಲು ಬೇಗಮನೆಗೈದಿ

ಚೂಡಾರತ್ನಶತಕದಂತೆ ಕಂದಪದ್ಯಗಳ ಪೈಕಿ ದೃಷ್ಟಾಂತಗಳೊಡನೆ ನೀತಿ ಹೇಳುವ ಪದ್ಯಗಳು ಹೃದಯಂಗಮವಾಗಿದೆ.

ಸಿರಿವಂತನು ಕರುಣಾಳುವು
ಸಿರಿತನದೊಳ್ ಗೆಳೆಯನನುರೆ ಮರೆವುದುಮಿಲ್ಲೈ
ಸಿರಿವಂತಂ ಸಿರಿಕೃಷ್ಣಂ
ಮರೆದನೆ? ತಾಂ ಪೇಳ್ ಕುಚೇಲಮಿತ್ರನನಾಗಳ್

ಸ್ವಸುಖವನೆಣಿಸದೆ ಸಾಧುಗ
ಳಸುವಿಂದಂ ಸಲೆ ಪರೋಪಕಾರಮನೆಸೆಪರ್
ಒಸದೀಯುತೆ ಮಾಂಸವ ಶಿಬಿ
ಯಸವಸದಿಂ ಗಡ ಕಪೋತಪಕ್ಷಿಯ ಕಾಯ್ದಂ

ಇನ್ನು ರಘುವಂಶ, ಕುಮಾರಸಂಭವ ಕಾವ್ಯಭಾಗಗಳಿಗೆ ಬರೆದ ಟೀಕೆ ವಿದ್ವತ್ಪೂರ್ಣವಾಗಿದ್ದು ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾಗಿದೆ. ಸಂಸ್ಕೃತ ಕಾವ್ಯಭ್ಯಾಸಿಗಳಿಗೆ ಕೈದೀವಿಗೆ ಆಗಿದೆ. ಪ್ರತಿ ಶ್ಲೋಕಕ್ಕೂ ಪದವಿಭಾಗ ಶಬ್ದರೂಪ, ಅನ್ವಯ, ಅರ್ಥ, ತಾತ್ಪರ್ಯ, ಆಕಾಂಕ್ಷೆ, ಸಂಧಿ, ವಿಗ್ರಹ, ಧಾತ್ವರ್ಥ, ವಿಶೇಷ ಎಂಬ ವಿಭಾಗಗಳಲ್ಲಿ ವಿವರಣೆ ನೀಡಿರುವುದು ಇದರ ವೈಶಿಷ್ಟ್ಯ. ಕನ್ನಡದಲ್ಲಿ ಇಷ್ಟು ವಿಸ್ತೃತ ವ್ಯಾಖ್ಯಾನವನ್ನು ಸಂಸ್ಕೃತ ಕಾವ್ಯಕ್ಕೆ ಬರೆದವರು ಇಲ್ಲ ಎಂದರೆ ಅತಿಶಯೋಕ್ತಿ ಆಗಲಾರದು.

ಸರ್ವಧರ್ಮಪ್ರೇಮಿ ದೊಡ್ಡಬೆಲೆ

ದೊಡ್ಡಬೆಲೆ ನಾರಾಯಣಶಾಸ್ತ್ರಿಗಳಿಗೆ ಸ್ತೋತ್ರಸಾಹಿತ್ಯದಲ್ಲಿ ವಿಶೇಷಾಸಕ್ತಿ ಇತ್ತು. ಆದಿಶಂಕರರ ಸ್ತೋತ್ರಗಳಿಗೆ, ಪ್ರಕರಣಗ್ರಂಥಗಳಿಗೆ ಟೀಕೆಗಳನ್ನು ಬರೆದಿದ್ದಾರೆ. ಶಿವಾಪರಾಧಸ್ತೋತ್ರ, ವಿವೇಕಚೂಡಾಮಣಿ ಮೊದಲಾದ ಸ್ತೋತ್ರಗಳಿಗೆ ಟೀಕೆ ರಚಿಸಿದ್ದಾರೆ. ಶಾಸ್ತ್ರಿಗಳು ಅದ್ವೈತಿಗಳಾದರೂ ದ್ವೈತ, ಅತ, ವಿಶಿಷ್ಟಾದ್ವೈತ ಮೂರನ್ನೂ ಅಧ್ಯಯನಮಾಡಿ ಮೆಚ್ಚಿಕೊಂಡ ವಿಶಾಲಭಾವನೆಯುಳ್ಳವರಾಗಿದ್ದರು. ಅದಕ್ಕೆ ಅವರು ರಾಘವೇಂದ್ರ ಸ್ತೋತ್ರ, ಮುಕುಂದಮಾಲಾಸ್ತೋತ್ರ; ನಿಜಗುಣರ ಪರಮಾನಂದಬೋಧೆ, ಸರ್ಪಭೂಷಣರ ಕೈವಲ್ಯಕಲ್ಪವಲ್ಲರಿಗಳಿಗೆ ಬರೆದ ಟೀಕೆ ಇತ್ಯಾದಿಗಳು ನಿದರ್ಶನವಾಗಿವೆ. ಸುಮಾರು–60 ಗ್ರಂಥಗಳನ್ನು ಅವರು ಬರೆದಿದ್ದಾರೆ. ನಮಗೆ ತಿಳಿದು ಬಂದಿರುವುದು ಅವರ ಬರಹಗಳಲ್ಲಿ ಮುಕ್ಕಾಲು ವಿಭಾಗ ಎನ್ನಬಹುದು. ಒಂದು ಅಂದಾಜಿನಂತೆ ಸುಮಾರು 10000ಕ್ಕೂ ಹೆಚ್ಚಿನ ಪುಟದ ಸಾಹಿತ್ಯ ರಚಿಸಿದ್ದಾರೆ. ಭಗವದ್ಗೀತೆ, ಭಾಗವತ, ರಾಮಾಯಣ ಭಾರತ, ಜ್ಯೋತಿಷ್ಯ, ಶತಕಸಾಹಿತ್ಯ, ನಿತ್ಯಪೂಜಾವಿಧಿ, ಕಾವ್ಯ, ಟೀಕಾಗ್ರಂಥಗಳು, ಸಿದ್ಧಾಂತ, ಸಾಹಿತ್ಯ, ವೈಷ್ಣವ, ವೀರಶೈವ, ದ್ವೈತ, ಅದ್ವೈತ ಸಾಹಿತ್ಯಕ್ಕೆ ಸಂಬಂಧಿಸಿದ ಗ್ರಂಥರಚನೆ. ಹೀಗೆ ನಾನಾಪರಿಯಾಗಿ ಧಾರ್ಮಿಕ ಸಾಹಿತ್ಯ

ಕ್ಷೇತ್ರದಲ್ಲಿ ಅನುಪಮಸೇವೆ ಸಲ್ಲಿಸಿರುವ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳನ್ನು ನಮ್ಮ ಜನ ಮರೆತಿರುವುದು ಶೋಚನೀಯಸಂಗತಿ. ದೊಡ್ಡಬೆಲೆ ಅವರಿಂದ ಸಂಪಾದಿತ/ ಅನುವಾದಿತ/ ಸ್ವರಚಿತ ಗ್ರಂಥಗಳ ಪಟ್ಟಿಯನ್ನು ಈ ಲೇಖನದ ಕೊನೆಗೆ ಕೊಟ್ಟಿದೆ. ಆ ಪೈಕಿ ಕೆಲವು ಕೃತಿಗಳನ್ನು ಕುರಿತಷ್ಟೇ ಈಗಾಗಲೇ ಪ್ರಸ್ತಾಪಿಸಿದೆ.

ಜನ ಮರೆತ ವಿದ್ವಾಂಸ

ಇನ್ನು ಅವರ ಬಗ್ಗೆ ಅವರ ಕೃತಿಗಳ ಬಗ್ಗೆ ವಿಸ್ತೃತ ಅಧಿಕೃತ ಲೇಖನ ಆಗಲಿ, ಗ್ರಂಥವಾಗಲಿ ಬಂದಿಲ್ಲ. ಡಿ.ವಿ.ಜಿ. ಅವರು ಬರೆದ ಜ್ಞಾಪಕಚಿತ್ರ ಶಾಲೆ ಬರಹವೊಂದು ಇದ್ದುದರಲ್ಲಿ ಸ್ವಲ್ಪ ಮಾಹಿತಿಯನ್ನು ಹೊಂದಿ ಉಪಯುಕ್ತ ಲೇಖನವಾಗಿದೆ. ಶ್ರೀನಿವಾಸ ಹಾವನೂರರು ತಮ್ಮ ಹೊಸಗನ್ನಡ ಅರುಣೋದಯದಲ್ಲಿ ಪ್ರಸ್ತಾಪಿಸಿದ್ದರೂ ಅವರ ಕೃತಿಗಳ ಬಗ್ಗೆ ಸಾಕಷ್ಟು ಮಾಹಿತಿ ನೀಡಿಲ್ಲ. ಕರ್ಣಾಟಕ ವಿಷಯಕೋಶದಲ್ಲಿ ಅತಿಸಂಕ್ಷಿಪ್ತ ಬರಹವಿದೆ. ಇನ್ನು ಈಬಗ್ಗೆ 19ನೇ ಶತಮಾನದ ಪ್ರಮುಖ ಲೇಖನಕರನ್ನು ಕುರಿತು ಲೇಖನಗಳಿರುವ 'ಹೊಂಬಿದಿರು' ಗ್ರಂಥದಲ್ಲಿ ಪ್ರಸ್ತಾಪವೇ ಇಲ್ಲ. ಹೀಗಾಗಿ ಸಿರಿಗನ್ನಡ ಗ್ರಂಥಕರ್ತರ ಚರಿತ್ರೆಕೋಶದಲ್ಲಿ ಅವರ ಗ್ರಂಥಪಟ್ಟಿ ಸುಮಾರಾಗಿ ಸಿಗುತ್ತದೆ (ಪು. 35, ಎರಡನೇ ಮುದ್ರಣ) ಇಲ್ಲಿ ಜನನ. ಸು. 1850 ಎಂದು ಹೇಳಿದೆ. ಇನ್ನು ಇವರ ಸಮಕಾಲೀನರಾದ ಕರ್ನಾಟಕ ಕವಿಚರಿತೆಯ ಆರ್. ನರಸಿಂಹಾಚಾರ್ ಅವರು ತಮ್ಮ ಕರ್ನಾಟಕ ಕವಿಚರಿತೆ ಭಾಗ 3 ಪುಟ 218–253ರಲ್ಲಿ ಜೀವಂತರಾಗಿರುವ ಗ್ರಂಥಕರ್ತೃಗಳ ಮತ್ತು ಅವರ ಗ್ರಂಥಗಳ ಹೆಸರನ್ನು ಎತ್ತುವುದಿಲ್ಲ ಮತ್ತು ಸ್ವಲ್ಪ ಕಾಲಕ್ಕೆ ಹಿಂದೆ ಗತಿಸಿದವರ ಚರಿತ್ರೆಯನ್ನವಲಂಬಿಸಿ ಬರೆಯುವುದು ನಮ್ಮ ಉದ್ದೇಶವಲ್ಲ ಎಂದು ಹೇಳಿದ್ದಾರೆ ಹೀಗಾಗಿ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಕರ್ನಾಟಕ ಕವಿಚರಿತೆಯಲ್ಲಿ ಕಾಣಿಸಿಲ್ಲ. ಯಾವ ವಿವರಗಳೂ ಸಿಗುವುದಿಲ್ಲ. ಇನ್ನು ಅವರ ಮನೆತನಕ್ಕೆ ಸೇರಿದವರು ಯಾರೂ ಈ ಬಗ್ಗೆ ಶ್ರಮವಹಿಸಿ ವಿವರಗಳನ್ನು, ಗ್ರಂಥಗಳನ್ನು ಕಲೆಹಾಕಲು ಹೊರಟಂತೆ ಕಾಣಲಿಲ್ಲ ಹೀಗಾಗಿ ಒಂದುಕಾಲಕ್ಕೆ ಕನ್ನಡಕ್ಕೆ ಅರ್ಧಶತಮಾನ ಕಾಲ ಅನುಪಮಸೇವೆಯಲ್ಲಿ ಕವಿ, ವಿದ್ವಾಂಸ, ಟೀಕಾಕಾರ ಅನುವಾದಕ ದೊಡ್ಡಬೆಲೆ ನಾರಾಯಣಶಾಸ್ತ್ರಿ ಅವರು "ಕನ್ನಡ ಜನ ಮರೆತ" ಉಭಯಭಾಷಾವಿದ್ವಾಂಸರಾಗಿದ್ದಾರೆ ಎಂದರೆ ತಪ್ಪಾಗದು. ಇದೀಗ ಅವರ ವಿಶಿಷ್ಟ ಕೃತಿಗಳಲ್ಲಿ ಒಂದಾದ ರಘುಕುಲಚರಿತ ವನ್ನು ಕುವೆಂಪು ಭಾಷಾ ಭಾರತಿ ಅವರು ಪುನರ್ಮುದ್ರಿಸುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ. ಉಳಿದ ಗ್ರಂಥಗಳ ಪ್ರಕಟನೆಗೆ ದಿಕ್ಸೂಚಿಯಾಗಿದೆ.

ದೊಡ್ಡಬೆಲೆ ನಾರಾಯಣಶಾಸ್ತ್ರಿಗಳ ಪ್ರಕಟಿತ ಕೃತಿಗಳು

ಜ್ಯೋತಿಷ್ಯ ಗ್ರಂಥಗಳು

1. **ಜ್ಯೋತಿಷ್ಯ ಬಾಲಬೋಧೆ** (ಮೊದಲ ಮುದ್ರಣ 1931?). ಎರಡನೇ ಮುದ್ರಣ 968, ಪ್ರಕಾಶಕರು ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್ ಬೆಂಗಳೂರು. ಪುಟ 64 ಬೆಲೆ 0.75 ರೂ.

2. **ಸ್ವಪ್ನ ಫಲ ಚಿಂತಾಮಣಿ** (ತಾತ್ಪರ್ಯ ಸಹಿತ) 1967

   ಪೂರ್ವಕವಿಗಳ ಗ್ರಂಥಗಳಲ್ಲಿ ಹೇಳಿರುವ ಸ್ವಪ್ನಗಳ ಶುಭಾಶುಭ ಲಕ್ಷಣಗಳ ವಿವರ. ಪುಟ 80. ಪ್ರಕಾಶಕರು: ?

3. **ಸ್ವಪ್ನ ಮಂಜರಿಯು** (1896) ಪುಟ 179.

   ಕಾಲತತ್ವವಿವೇಕಮಂಜರಿ ಎಂಬ ಸಂಸ್ಕೃತ ಗ್ರಂಥದಿಂದ ಸ್ವಪ್ನ ಕುರಿತು ಒಂದು ಭಾಗದ ಪಠ್ಯ ಮತ್ತು ಟೀಕೆ.

4. **ಸಟೀಕಾಷ್ಟಕವರ್ಗ** (1893). ಪುಟ 93.

   ಪ್ರಕಟಣೆ: ವಾಜಪೇಯಿ ಕೃಷ್ಣಯ್ಯ ಅಂಡ್ ಸನ್ಸ್, ಬೆಂಗಳೂರು.

ನಿತ್ಯಕರ್ಮದ ಗ್ರಂಥಗಳು

5. **ಋಗ್ವೇದ ಸಂಧ್ಯಾರ್ಥ ವಿಚಾರ** (1912, ಮೊದಲ ಮುದ್ರಣ,1917, ಎರಡನೇ ಮುದ್ರಣ), 177 ಪುಟಗಳು (ರತ್ನ ಪ್ರದೀಪವೆಂಬ ವಿಸ್ತತವ್ಯಾಖ್ಯಾನ ಸಹಿತ)

   ಪ್ರಕಾಶಕರು: ಶಾರದಾ ಗ್ರಂಥಮಾಲಾ ಶಾರದಾವಿಲಾಸ ಮುದ್ರಾಕ್ಷರ ಶಾಲೆ, ಸೀಗೆ ಬೇಲಿ, ಬೆಂಗಳೂರು.

6. **ಯಜುರ್ವೇದ ಸಂಧ್ಯಾರ್ಥ ವಿಚಾರ** (1926)

   ಪ್ರಕಟಣೆ: ವಾಜಪೇಯಿ ಗೋವಿಂದಯ್ಯ ಅಂಡ್ ಸನ್ಸ್ ಬೆಂಗಳೂರು.

7. **ಸೂರ್ಯ ನಮಸ್ಕಾರ** (1908) ಪುಟಗಳು 36 (ಸೂರ್ಯ ನಮಸ್ಕಾರ ವಿಧಿ ಸೂರ್ಯನಾರಾಯಣ ನಾಮಾವಳಿ ಪೂಜಾವಿಧಿಗಳು)
ಪ್ರಕಟಣೆ: ಬೆಂಗಳೂರು ಪ್ರಿಂಟ್ ಮುದ್ರಣ ಶಾಲೆ.

ಸ್ತೋತ್ರಸಾಹಿತ್ಯ

8. **ಶ್ರೀಹರಿ ಸ್ತುತಿ ಅಥವಾ ಪಾಂಡವಗೀತೆ (ಮೂಲ, ಟೀಕಾ, ತಾತ್ಪರ್ಯ)**
9. **ಮುಕುಂದಮಾಲಾ (ಮೂಲ, ಟೀಕಾ, ತಾತ್ಪರ್ಯ)**
10. **ಶಿವಾಪರಾಧ ಕ್ಷಮಾಪಣಾ ಸ್ತೋತ್ರ (ಮೂಲ, ಟೀಕಾ, ತಾತ್ಪರ್ಯ)1911)**
11. **ರಾಘವೇಂದ್ರ ಸ್ತೋತ್ರ (ಮೂಲ, ಟೀಕಾ, ತಾತ್ಪರ್ಯ)** ಪುಟಗಳು 24
12. **ಶ್ರೀಹರಿ, ಕೃಷ್ಣ, ಶಿವ, ದೇವೀ, ರಾಮು, ಹನುಮನ್ನಾಮಾಮೃತ**
13. **ವಿಷ್ಣುಸಹಸ್ರನಾಮ ರತ್ನಂ (ಪ್ರತಿಪದ ಟೀಕಾ)**
14. **ವಾಯುಸ್ತುತಿ(ಸಟೀಕಾ) ಸಂಸ್ಕೃತ ಕಾವ್ಯ ಟೀಕೆಗಳು**
15. **ಸಹಿತ ಶ್ರೀಮದ್ವಾಲ್ಮೀಕಿರಾಮಾಯಣ ಸುಂದರಕಾಂಡ ಟೀಕಾ ತಾತ್ಪರ್ಯ** (ಮೊದಲ ಮುದ್ರಣ 1913, ಪುಟಗಳು 897, ರಸಾಯನವೆಂಬ ಟೀಕೆ) ಪ್ರಕಟಣೆ: ಬಿ ಸೀತಾರಾಮಶಾಸ್ತ್ರಿ, ಡಿ ಲಕ್ಷ್ಮಿನರಸಿಂಹಶಾಸ್ತ್ರಿ ಸೀಗೆ ಬೇಲಿ, ಬೆಂಗಳೂರು. ಮುದ್ರಕರು ಕೆ ಎಸ್ ಕೃಷ್ಣಯ್ಯರ್ ಐರಿಷ್ ಮುದ್ರಣಾಲಯ ಬೆಂಗಳೂರು. ಎರಡನೆಯ ಮುದ್ರಣ 2009, ಪ್ರಕಾಶಕರು: ಐ ಬಿ ಎಚ್ ಪ್ರಕಾಶನ, ಬೆಂಗಳೂರು
16. **ಕುಮಾರ ಸಂಭವ ಕಾವ್ಯಂ** (ಒಂದನೇ ಸರ್ಗ) (ಮೂಲ ಟೀಕೆ ತಾತ್ಪರ್ಯ ಸಹಿತ) 19 12, ಪುಟಗಳು 135 ಐರಿಷ್ ಮುದ್ರಣ ಶಾಲೆ ಬೆಂಗಳೂರು
17. **ಕುಮಾರಸಂಭವ 2ನೇ ಸರ್ಗ** (ಮೂಲ ಟೀಕೆ ತಾತ್ಪರ್ಯ ಸಹಿತ)
18. ಕುಮಾರಸಂಭವ 3ನೇ ಸರ್ಗ (ದೊಡ್ಡಬೆಲೆ ಗೋಪಾಲಚಾರ್ಯ ದೊಡ್ಡಬೆಲೆ ವೆಂಕಟೇಶಾಚಾರ್ಯ ಇವರ ಟೀಕೆ ತಾತ್ಪರ್ಯ) ಪರಿಷ್ಕರಣೆ ದೊಡ್ಡಬೆಲೆ ನಾರಾಯಣಶಾಸ್ತ್ರಿ 1924, ಪುಟಗಳು 100 ಪ್ರಕಟನೆ ಚೌಡೇಶ್ವರಿ ಮುದ್ರಣಾಲಯ ಬೆಂಗಳೂರು ಸಿಟಿ
19. **ರಘುವಂಶ ಕಾವ್ಯ** (ಒಂದನೇ ಸರ್ಗ) (ಮೂಲ ತಾತ್ಪರ್ಯ ಟೀಕೆ)

20. **ರಘುವಂಶ ಕಾವ್ಯ** (ಎರಡನೇ ಸರ್ಗ) (ಮೂಲ ತಾತ್ಪರ್ಯ ಟೀಕೆ)

21. **ರಘುವಂಶ ಕಾವ್ಯ** (ಮೂರನೇ ಸರ್ಗ) (ಮುಕ್ತಾಫಲವೆಂಬ ಟೀಕಾ ಸಹಿತ) 1911, ಎಚ್ ಎನ್ ರಾವ್ ಬ್ರದರ್ಸ್ ಮತ್ತು ಟಿ ಆದಿನಾರಾಯಣ ಶಾಸ್ತ್ರಿ ಪುಟಗಳು 179

22. **ರಘುವಂಶ** (ಐದನೇ ಸರ್ಗ) (ಮೂಲ ತಾತ್ಪರ್ಯ ಟೀಕೆ, ಅನ್ವಯ – ಶಬ್ದ-ಆಕಾಂಕ್ಷೆ –ವ್ಯಾಕರಣ)

23. ಶ್ರೀಮದ್ಭಾಗವತ (ಪ್ರತಿಪದ ಟೀಕು, ತಾತ್ಪರ್ಯ ಸಹಿತ) 1,2,3 ಸ್ಕಂಧಗಳ ಟೀಕೆ.

    ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು. ಪುಟಗಳು–270

24. **ಶ್ರೀಮದ್ಭಾಗವತ**– 11ನೇ ಸ್ಕಂಧ (ಮೂಲ, ಟೀಕೆ) 323 ಪುಟಗಳು

25. **ಧರ್ಮಸಿಂಧು ಸಾರ** (ಮೂಲ ಅನುಸಾರ ಕನ್ನಡ ಅನುವಾದ) 1, 2 ಪರಿಚ್ಛೇದಗಳು.

26. **ಧರ್ಮಸಿಂಧು** (ಪರಿಷ್ಕರಣೆ) (ಮೂಲ ಮಾತ್ರ ತೆಲುಗು ಲಿಪಿಯಲ್ಲಿ) 1896. ಪುಟಗಳು 632 ಪ್ರಕಟಣೆ ವೆಲನಾಡು ಬಿ ಸುಬ್ಬಯ್ಯ ಅಂಡ್ ಸನ್ಸ್ ಮೈಸೂರು ಬುಕ್ ಡಿಪೋ.

27. **ವಾಸುದೇವ ಮನನ** (ವಾಸುದೇವ ಯತಿಗಳ ಸಂಸ್ಕೃತ ಗ್ರಂಥದ ಭಾಷಾಂತರ) 1897, ಪುಟಗಳು 117

28. **ಶಂಕರಾಚಾರ್ಯರ ವಿವೇಕ ಚೂಡಾಮಣಿ** (ಸಟೀಕ) 1911. ಪ್ರಕಾಶಕರು ಹೆಚ್. ಎನ್. ರಾವ್ ಅಂಡ್ ಬ್ರದರ್ಸ್ ಬೆಂಗಳೂರು

29. **ನಿಜದೀಪಿಕಾ ಶಿರೋರತ್ನ** (ರತ್ನಪ್ರಭಾ ಟೀಕೆ) ಮೂಲ ಲೇಖಕರು: ಶಾಲ್ಯದ ಕೃಷ್ಣರಾಜರು (1893) ಟೀಕಾಕಾರರು: ದೊಡ್ಡಬೆಲೆ ನಾರಾಯಣಶಾಸ್ತ್ರಿ

30. **ಭರ್ತೃಹರಿ ಶತಕತ್ರಯ** (ನೀತಿಶತಕ ಶೃಂಗಾರಶತಕ ವೈರಾಗ್ಯ ಶತಕ) 1891, 260 ಪುಟಗಳು, ಪ್ರಕಟಣೆ ಮೈಸೂರು ಬುಕ್‌ಡಿಪೋ ಮೈಸೂರು, (1896–1906 ಇಸವಿಗಳಲ್ಲಿ ಬಿಡಿಮುದ್ರಣಗಳಾಗಿವೆ.)

31. **ದಶೋಪನಿಷತ್ತುಗಳು** ಇವು ಬಿಡಿಬಿಡಿಯಾಗಿ ಮೂಲ ಮತ್ತು ತಾತ್ಪರ್ಯಸಾರ ಸಹಿತ ಪ್ರಕಟವಾಗಿವೆ. 1911.

32. **ಈಶ ಕೇನ ಕಠೋಪನಿಷತ್** (ತಾತ್ಪರ್ಯಸಾರ ಮತ್ತು ಸಮೂಲ)

33. **ಪ್ರಶ್ನೆ ಮುಂಡಕ ಶಿಕ್ಷಾವಲ್ಲಿ** ತಾತ್ಪರ್ಯ ಮತ್ತು ಸಮೂಲ

34. **ಶ್ರೀಮದ್ಭಗವದ್ಗೀತಾ ಬಾಲ ಬೋಧಿನೀ** (ಟೀಕಾ ಸಹಿತ 1913) ಪುಟ 411, 1913, (ಪ್ರತಿಪದಾರ್ಥ ಕನ್ನಡ ತಾತ್ಪರ್ಯದೊಡನೆ)

35. **ಯಕ್ಷಪ್ರಶ್ನೆ** (ಮೂಲ, ತಾತ್ಪರ್ಯ)

36. **ಗುರು ಬಾಲಪ್ರಬೋಧಿನಿ ವಿವರಣವೆಂಬ ಕರ್ನಾಟಕಟೀಕೆಯು ಅಮರಕೋಶಟೀಕೆಯು.**
(ತೆಲುಗು ಟೀಕೆ ವಾವಿಳ್ಳ ಪ್ರಕಾಶನದ ಗ್ರಂಥದ ಅನುವಾದ) ಟೀಕಾಕಾರರು ಸೋಸಲೆ ವೆಂಕಟೇಶಶಾಸ್ತ್ರಿಗಳು, ದೊಡ್ಡಬೆಲೆ ರಾಮಶೇಷಶಾಸ್ತ್ರಿಗಳು, ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ದೇವನಹಳ್ಳಿ ನಾರಾಯಣಶಾಸ್ತ್ರಿಗಳು ಪ್ರಕಾಶನ ಬೆಂಗಳೂರು ಬುಕ್ ಡಿಪೋ, ಏಜೆಂಟ್ ವಾಜಪೇಯಿ ಕೃಷ್ಣಯ್ಯ.1898, (ಮೊದಲ ಮುದ್ರಣ), 1909 (ದ್ವಿತೀಯ ಮುದ್ರಣ, 605 ಪುಟಗಳು), ಪರಿಷ್ಕೃತ ತೃತೀಯ ಮುದ್ರಣ–2011. 778 ಪುಟಗಳು ಸಂಪಾದಕರು, ಪರಿಷ್ಕರಣಕಾರರು: ಡಿ ಗಣಪತಿಶಾಸ್ತ್ರಿ, ಪ್ರಕಟಣೆ: ಪುಸ್ತಕಶಕ್ತಿ ಪ್ರಕಾಶನ ಟಾಟಾಸಿಲ್ಕ್ ಫಾರ್ಮ್ ಬಸವನಗುಡಿ ಬೆಂಗಳೂರು. ಮೂರು ಕಾಂಡಗಳ ಶಬ್ದಗಳ ಅಕಾರಾದಿ ಇದೆ (ಅರ್ಥಸಹಿತ)

37. **ಅಮರಕೋಶ** (ಪ್ರಥಮ ಕಾಂಡ) ದೊಡ್ಡಬೆಲೆ ನಾರಾಯಣಶಾಸ್ತ್ರಿ, 1928. ಸರಸ್ವತಿ ರತ್ನಾಕರ ಬುಕ್ ಡಿಪೋ, ಬೆಂಗಳೂರು–

ಕನ್ನಡ ಕಾವ್ಯಗಳ ಟೀಕೆ

38. **ಕನ್ನಡ ಜೈಮಿನಿ ಭಾರತ** (ಭಾನುಪ್ರಭೆ ಟೀಕೆ) 1932 ಶುದ್ಧಪಡಿಸಿದ ದ್ವಿತೀಯ ಮುದ್ರಣ. ಪುಟಗಳು 936
ಟೀಕಾಕಾರರು: ದೊಡ್ಡಬೆಲೆ ನಾರಾಯಣಶಾಸ್ತ್ರಿ ಮತ್ತು ದೇವನಹಳ್ಳಿ ಶಂಕರಭಟ್ಟರು.

39. **ಸಟೀಕ ಪರಮಾನುಭವ ಬೋಧೆ** (1892) 432 ಪುಟಗಳು. ಮೂಲ ನಿಜಗುಣ ಶಿವಯೋಗಿ, ಸಂಪಾದನೆ: ದೊಡ್ಡಬೆಲೆ ನಾರಾಯಣಶಾಸ್ತ್ರಿ, ಪ್ರಕಾಶನ: ಮದ್ರಾಸ್‌ನಲ್ಲಿರುವ ಸಂಸ್ಥೆ

40. **ಕೈವಲ್ಯಕಲ್ಪವಲ್ಲರಿ** (ಸರ್ಪಭೂಷಣ ಶಿವಯೋಗಿ) 1895(ಮೊದಲ ಮುದ್ರಣ), 1911 (ದ್ವಿತೀಯ ಮುದ್ರಣ), ಮೂಲ ವಿವರಣೆ, 159 ಪುಟಗಳು ಪ್ರಕಟಣೆ ಬಳ್ಳಾರಿ

ಸ್ವತಂತ್ರ ರಚನೆಗಳು

41. **ಚಮತ್ಕಾರ ಚಿಂತಾಮಣಿ** ಲೇಖಕ : ದೊಡ್ಡಬೆಲೆ ನಾರಾಯಣಶಾಸ್ತ್ರಿ
42. **ಶಿವ ಪುರಾಣದ ಕಥೆ** ಲೇಖಕ : ದೊಡ್ಡಬೆಲೆ ನಾರಾಯಣಶಾಸ್ತ್ರಿ, ಪ್ರ. ಶಾರದಾ ಆಫೀಸ್ ಸೀಗೇಬೇಲಿ, ಬೆಂಗಳೂರು ಸಿಟಿ.
43. **ದೇವಿ ಭಾಗವತದ ಕಥೆ**, ಶ್ರೀ ಶಾರದಾ ಆಫೀಸ್, ಸೀಗೇಬೇಲಿ ಬೆಂಗಳೂರು.
44. **ಶ್ರೀ ಶಂಕರಾಚಾರ್ಯರ ಚರಿತ್ರೆ** ಶ್ರೀ ಶಾರದಾ ಆಫೀಸ್, ಸೀಗೇಬೇಲಿ ಬೆಂಗಳೂರು.
45. **ರಘುಕುಲ ಚರಿತಂ** (ಸರ್ಗ 1–8) ಭಾಗ–1(ಗದ್ಯಾನುವಾದ) ಮೊದಲ ಮುದ್ರಣ 1911. ಪರಿವರ್ತನಕಾರ ದೊಡ್ಡಬೆಲೆ ನಾರಾಯಣಶಾಸ್ತ್ರಿ, ಪ್ರಕಟಣೆ ಶ್ರೀಶಾರದಾ ಆಫೀಸ್, ಸೀಗೇಬೇಲಿ ಬೆಂಗಳೂರು, ದ್ವಿತೀಯ ಮುದ್ರಣ(1923)
46. **ರಘುಕುಲ ಚರಿತಂ (ಸರ್ಗ 9–19) ಭಾಗ–2** (ಗದ್ಯಾನುವಾದ) ಮೊದಲ ಮುದ್ರಣ 1913. ಪ್ರಕಟಣೆ– ಶ್ರೀ ಶಾರದಾ ಆಫೀಸ್ ಸೀಗೇಬೇಲಿ ಬೆಂಗಳೂರು. ಎರಡನೆಯ ಮುದ್ರಣ –1923. ಪ್ರಕಟಣೆ– ಶ್ರೀ ಶಾರದಾ ಆಫೀಸ್ ಸೀಗೇಬೇಲಿ ಬೆಂಗಳೂರು.
47. **ದೇವರ ಸೇವೆ(ನೀತಿ ಗ್ರಂಥ) ಗದ್ಯ–ಪದ್ಯ ರೂಪ** (1901) 84 ಪುಟಗಳು ಪ್ರಕಟಣೆ – ಶ್ರೀಶಾರದಾ ಆಫೀಸ್ ಸೀಗೇಬೇಲಿ, ಬೆಂಗಳೂರು.
48. **ಶ್ರೀಕೃಷ್ಣ ಬೋಧಾಮೃತ** (12 ಜನ ರಾಜಪುತ್ರರ ಕಥೆಗಳು) (ಗೋಕುಲ ರಾಮಗೋಪಾಲ ಮತ್ತು ಶೇಷಾಚಲ ನಾಯ್ಡು ಕೃತ ತೆಲುಗು ಪುಸ್ತಕದ ಭಾಷಾಂತರ) 226 ಪುಟಗಳು ಮುದಲ ಮುದ್ರಣ 1848, ಎರಡನೆಯ ಮುದ್ರಣ 1910. ಪ್ರಕಾಶನ: ಮೈಸೂರು ವಾಣಿವಿಲಾಸ ಬುಕ್‌ಡಿಪೊ
49. **ಸೂರ್ಯನಮಸ್ಕಾರ** (ಸಂಸ್ಕೃತ– ಕನ್ನಡ) ಪ್ರಕಟಣೆ : ಶ್ರೀ ಶಾರದಾ ಆಫೀಸ್ ಸೀಗೇಬೇಲಿ, ಬೆಂಗಳೂರು.
50. **ಶ್ರೀಮದ್ವೇಂಕಟಪುರ ವೈಷ್ಣವಾದಿ ನಾನಾ ಮತೋತ್ಪತ್ತಿ ಸಿದ್ಧಾಂತ ಸುಧಾರಸ** (ತಿರುಪತಿಯ ವೈಷ್ಣವರ ವೇದಾಂತ ವ್ರತ ಪೂಜಾ ಐತಿಹ್ಯಗಳಿಂದ ಕೂಡಿದೆ) 568 ಪುಟಗಳು, 1894. ಪ್ರಕಾಶನ ಬೆಂಗಳೂರು.

51. **ಶುಕ್ರನೀತಿ** (ಮೂಲ ಮತ್ತು ಅನುವಾದ)

52. **ಕನ್ನಡ ಟೀಕಾ ತಾತ್ಪರ್ಯ ಸಹಿತವಾದ ವ್ರತರಾಜ ಭಾಗ–1** (1906) ಮೂರನೇ ಮುದ್ರಣ, ಪುಟಗಳು 209, ಲೇಖಕರು: ದೊಡ್ಡಬೆಲೆ ನಾರಾಯಣಶಾಸ್ತ್ರಿ, ಮೋಟಗಾನಹಳ್ಳಿ ರಾಮಕೃಷ್ಣಶಾಸ್ತ್ರಿ, ಸಾಂಬಶಾಸ್ತ್ರಿ (ವ್ರತಗಳ ವಿವರಣೆ ಪೂಜಾ ವಿಧಾನ ಮತ್ತು ನಾಮಾವಳಿಗಳು)

53. **ಶ್ರೀ ಸತ್ಯನಾರಾಯಣ ವ್ರತ** (1910) 32 ಪುಟಗಳು (ಸ್ಕಂದಪುರಾಣದ ರೇವಾಖಂಡದ ಸತ್ಯನಾರಾಯಣ ವ್ರತಕಥೆ) ಪ್ರಕಟಣೆ: ಟಿ ಎನ್ ಕೃಷ್ಣಯ್ಯ ಶೆಟ್ಟಿ, ಬೆಂಗಳೂರು. ಲೇಖಕರು: ದೊಡ್ಡಬೆಲೆ ನಾರಾಯಣಶಾಸ್ತ್ರಿ

54. **ಕನ್ನಡ ಟೀಕಾ ತಾತ್ಪರ್ಯ ಸಹಿತವಾದ ವ್ರತರಾಜ ಭಾಗ–2** (1906) ಮೂರನೇ ಮುದ್ರಣ, 1922, ಪುಟಗಳು 260, ಲೇಖಕರು: ದೊಡ್ಡಬೆಲೆ ನಾರಾಯಣಶಾಸ್ತ್ರಿ ಮೋಟಗಾನಹಳ್ಳಿ ರಾಮಕೃಷ್ಣಶಾಸ್ತ್ರಿ ಸಾಂಬಶಾಸ್ತ್ರಿ (ವ್ರತಗಳ ವಿವರಣೆ ಪೂಜಾವಿಧಾನ ಮತ್ತು ನಾಮಾವಳಿಗಳು) ಪ್ರಕಟಣೆ: ಬೆಂಗಳೂರು ವಾಜಪೇಯಿ ಗೋವಿಂದಯ್ಯ.

55. **ಆದಿಚುಂಚನಗಿರಿ ಮಾಹಾತ್ಮ್ಯವು.** (ಕನ್ನಡ ಅನುವಾದ) ಬೆಳ್ಳೂರಿನ ಅಮೃತೂರು ದಾಸಪ್ಪನವರು. ಪರಿಷ್ಕರಣೆ: ದೊಡ್ಡಬೆಲೆ ನಾರಾಯಣಶಾಸ್ತ್ರಿ 1897, ಪ್ರಕಟಣೆ: ಬೆಂಗಳೂರು ಬುಕ್ ಡಿಪೋ ಬೆಂಗಳೂರು.

56. **ನಂದಿ ಕ್ಷೇತ್ರ ಮಹಿಮೆ** 1897.

57. **ಶಬ್ದಮಂಜರಿ** (ಅವ್ಯಯಗಳು ಧಾತುಗಳು, ಸಮಾಸಕುಸುಮಾವಳಿ ಮತ್ತು ಶ್ರೀ ರಾಮಾಯಣ ಸಂಗ್ರಹ) 1973, ಮರುಮುದ್ರಣ ಪ್ರಕಟಣೆ: ಟಿಎಂ ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಬೆಂಗಳೂರು.

58. **ಬಾಲಕನ ಭಂಡಾರ–2 (ಹಿತೋಕ್ತಿ)** ಶ್ರೀ ಶಾರದಾ ಆಫೀಸ್ ಸೀಗೇಬೇಲಿ, ಬೆಂಗಳೂರು.

59. **ಋಗ್ವೇದ ಸಂಧ್ಯಾರ್ಥ ವಿಚಾರ** ಲೇ: ದೊಡ್ಡಬೆಲೆ ನಾರಾಯಣಶಾಸ್ತ್ರಿ, 1917, ದ್ವಿತೀಯ ಮುದ್ರಣ (ರತ್ನಪ್ರದೀಪ ವ್ಯಾಖ್ಯಾನ ಸಹಿತ) ಪ್ರ: ಶ್ರೀ ಶಾರದಾ ಆಫೀಸ್ ಸೀಗೇಬೇಲಿ, ಬೆಂಗಳೂರು. 177 ಪುಟಗಳು

60. **ಋಗ್ವೇದ ಬ್ರಹ್ಮಕರ್ಮ** (ಸಂಧ್ಯಾದಿ) ಲೇ: ದೊಡ್ಡಬೆಲೆ ನಾರಾಯಣಶಾಸ್ತ್ರಿ

61. **ಸಂಧ್ಯಾವಂದನೆಯ ಅರ್ಥವಿಚಾರ** (ಯಜುರ್ವೇದ) ಲೇ: ದೊಡ್ಡಬೆಲೆ ನಾರಾಯಣಶಾಸ್ತ್ರಿ, 6 ಆಣೆ. ಪ್ರ: ಶ್ರೀ ಶಾರದಾ ಆಫೀಸ್ ಸೀಗೇಬೇಲಿ,

ಬೆಂಗಳೂರು. (ಟಿಪ್ಪಣಿ: ಈ ಪಟ್ಟಿಯಲ್ಲಿರುವ ಕೆಲವು ಗ್ರಂಥಗಳ ಮಾಹಿತಿಯನ್ನು ಶ್ರೀ ಎಸ್. ಕಾರ್ತಿಕ್ ಅವರು ಒದಗಿಸಿದ್ದಾರೆ. ಅವರಿಗೆ ವಂದನೆಗಳು)

******

ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳ ಜೀವನ- ಕೃತಿಗಳನ್ನು ಕುರಿತ ಆಕರ ಗ್ರಂಥಗಳು

ಗ್ರಂಥಗಳು

1. ಕರ್ನಾಟಕ ಕವಿಚರಿತೆ– ಭಾಗ–3 ಲೇಖಕ: ಆರ್ ನರಸಿಂಹಾಚಾರ್ ಎರಡನೇ ಮುದ್ರಣ, ಪ್ರಕಟಣೆ ಕನ್ನಡ ಸಾಹಿತ್ಯ ಪರಿಷತ್ತು, 1974.
2. ಸಿರಿಗನ್ನಡ ಗ್ರಂಥಕರ್ತರ ಚರಿತ್ರೆ ಕೋಶ: ಲೇಖಕ ವೆಂಕಟೇಶ ಸಾಂಗ್ಲಿ, 2000, ಪ್ರಕಟಣೆ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.
3. ಕರ್ನಾಟಕ ವಿಷಯ ವಿಶ್ವಕೋಶ(1979) ಪ್ರಕಟಣೆ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು
4. ಹೊಸಗನ್ನಡದ ಅರುಣೋದಯ(2000, ಎರಡನೇ ಮುದ್ರಣ) ಲೇಖಕ ಡಾಕ್ಟರ್ ಶ್ರೀನಿವಾಸ ಹಾವನೂರ, ಪ್ರಕಟಣೆ: ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.
5. ಹೊಂಬಿದಿರು
6. ಕನ್ನಡ ಗ್ರಂಥ ಸೂಚಿ ಸಂಪುಟಗಳು ಪ್ರಕಟಣೆ ಮೈಸೂರು ವಿಶ್ವವಿದ್ಯಾಲಯ.
7. ಜ್ಞಾಪಕ ಚಿತ್ರಶಾಲೆ ಲೇಖಕ: ಡಿವಿಜಿ
8. ಪದಾರ್ಥ ಸಂಪದ, ಲೇಖಕ: ಎಸ್ ಕಾರ್ತಿಕ್

ಸಂದರ್ಶನ

1. ಸಂಜಯ ಅಡಿಗ, ಪ್ರಕಾಶಕರು, ಐಬಿಎಚ್ ಪ್ರಕಾಶನ, ಬೆಂಗಳೂರು.
2. ಲಕ್ಷ್ಮಣ್ (ದೊಡ್ಡಬೆಲೆ ನಾರಾಯಣಶಾಸ್ತ್ರಿಗಳ ಮೊಮ್ಮಗ)
3. ಡಿ ನಾರಾಯಣಶಾಸ್ತ್ರಿ (ದೊಡ್ಡಬೆಲೆ ನಾರಾಯಣಶಾಸ್ತ್ರಿಗಳ ದತ್ತುಪುತ್ರ)

******

ಸಂಪಾದಕರ ಪ್ರಸ್ತಾವನೆ

ಕನ್ನಡದಲ್ಲಿ ಕಾಳಿದಾಸ

ಸಂಸ್ಕೃತ ಸಾಹಿತ್ಯವೆಂದರೆ ಕಾವ್ಯ–ನಾಟಕ–ಗದ್ಯಸಾಹಿತ್ಯ ಈ ಪೈಕಿ ಗದ್ಯಸಾಹಿತ್ಯ ಸಾಕಷ್ಟಿಲ್ಲ. ಬಹುತೇಕ ನೂರಕ್ಕೆ ತೊಂಬತ್ತರಷ್ಟು ಕಾವ್ಯನಾಟಕಗಳೇ ಎಂದರೆ ತಪ್ಪಲ್ಲ. ವಿವಿಧ ಶಾಸ್ತ್ರಗಳೂ, ಪ್ರಕರಣಗಳು ಪದ್ಯರೂಪದಲ್ಲೇ ರಚಿತವಾಗಿವೆ. ಆದಕಾರಣ ಸಂಸ್ಕೃತಸಾಹಿತ್ಯವೆಂದರೆ ಕಾವ್ಯ–ನಾಟಕ ಸಾಹಿತ್ಯವೆಂದರೆ ತಪ್ಪಲ್ಲ. ಈಚೆಗೆ 20ನೆಯ ಶತಮಾನದಲ್ಲಿ ಆಕಾಶವಾಣಿ, ದೂರದರ್ಶನ, ಪತ್ರಿಕೆ, ಪುಸ್ತಕ ಮಾಧ್ಯಮಗಳಲ್ಲಿ ಸಂಭಾಷಣಾ ಕಲಿಕೆ ಶಿಬಿರಗಳ ಮೂಲಕ ಸಂಸ್ಕೃತ ಗದ್ಯ ಸಾಕಷ್ಟು ಪ್ರಚಾರಕ್ಕೆ ಬರುತ್ತಿದೆ.

ಸಂಸ್ಕೃತಸಾಹಿತ್ಯವನ್ನು ಕನ್ನಡಕ್ಕೆ ತರುವಲ್ಲಿ ಕಾವ್ಯಸಾಹಿತ್ಯವನ್ನು ಗದ್ಯದಲ್ಲೂ ಮೂಲರೂಪವಾದ ಕಾವ್ಯ–ನಾಟಕ ರೂಪಗಳಲ್ಲಿಯೂ ಕನ್ನಡ ವಿದ್ವಾಂಸರು ಅನುವಾದಿಸಿದ್ದಾರೆ.

ಸಂಸ್ಕೃತದ ಪ್ರಸಿದ್ಧ ಕಾವ್ಯ–ನಾಟಕಗಳು ಕನ್ನಡಕ್ಕೆ ಅನುವಾದವಾಗಿವೆ. ಆ ಪೈಕಿ ಅಗ್ರಸ್ಥಾನ ಕಾಳಿದಾಸನ ಕೃತಿಗಳಿಗೆ ಸಲ್ಲುತ್ತವೆ. ಏಕೆಂದರೆ ಕಾಳಿದಾಸನ ಕೃತಿಗಳನ್ನು ಅಧಿಕಸಂಖ್ಯೆಯ ಕವಿಗಳೂ ನಾಟಕಕಾರರು ಅನುವಾದಿಸಿದ್ದಾರೆ. ಉಳಿದವರ ಕೃತಿಗಳನ್ನು ಅನುವಾದಿಸಿದವರ ಸಂಖ್ಯೆ ಕಡಿಮೆ. ಈ ದೃಷ್ಟಿಯಿಂದ ಕಾಳಿದಾಸ ಕನ್ನಡದಲ್ಲಿ ಜನಪ್ರಿಯ ಸಂಸ್ಕೃತಕವಿ ಎಂದು ಹೇಳಬಹುದು. ಕಾಳಿದಾಸನ ಎಲ್ಲ ಕೃತಿಗಳೂ ಕನ್ನಡಕ್ಕೆ ಅನುವಾದವಾಗಿವೆ. ಒಂದೊಂದು ಕೃತಿಯನ್ನು ಹಲವರು ಅನುವಾದಿಸಿದ್ದಾರೆ. ಕೆಲವು ಕೃತಿಗಳನ್ನು ಮತ್ತೆ ಕೆಲವರು ಅನುವಾದಿಸಿದ್ದಾರೆ.

ಕಾಳಿದಾಸನ ಮೂಲಕೃತಿಗಳನ್ನಷ್ಟೇ ಅಲ್ಲದೆ ಆ ಕೃತಿಗಳ ಬಗ್ಗೆ ಪರಿಚಯದ ಲೇಖನಗಳೂ ವಿಮರ್ಶಾಬರಹಗಳೂ ಸಾಕಷ್ಟು ಕನ್ನಡದಲ್ಲಿ ಪ್ರಕಟವಾಗಿವೆ.

ಕಾಳಿದಾಸನ ಕಾವ್ಯಗಳು ಪದ್ಯರೂಪದಲ್ಲೇ ರೈನಾಪೂರ, ಬೇಂದ್ರೆ, ಪಿ ಬಸವಣ್ಣ, ಎಚ್. ಎಸ್. ವೆಂಕಟೇಶಮೂರ್ತಿ, ಎಸ್.ವಿ ಪರಮೇಶ್ವರಭಟ್ಟ, ವೈ ನಾಗೇಶಶಾಸ್ತ್ರಿ ಮತ್ತಿತರರು ಹತ್ತಾರು ಮಂದಿ ಅನುವಾದಿಸಿದ್ದಾರೆ.

ಕಾಳಿದಾಸನ ನಾಟಕಗಳನ್ನು ಬಸವಪ್ಪಶಾಸ್ತ್ರೀ, ಪರಮೇಶ್ವರಭಟ್ಟ ಡಾ. ಕೆ. ಕೃಷ್ಣಮೂರ್ತಿ, ವೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರೀ ಮೊದಲಾದವರು ಅನುವಾದಿಸಿದ್ದಾರೆ. ಈ ಪೈಕಿ ಅಭಿಜ್ಞಾನ ಶಾಕುಂತಲ ನಾಟಕವನ್ನು ಅಧಿಕಮಂದಿ ಕವಿಗಳು ಅನುವಾದಿಸಿದ್ದಾರೆ.

ಕಾಳಿದಾಸನ ಇತಿವೃತ್ತ

ರಘುವಂಶವನ್ನು ಪ್ರಸ್ತಾಪ ಮಾಡುವ ಮುಂಚೆ ಕಾಳಿದಾಸನ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪಿಸಬಹುದು. ಕಾಳಿದಾಸನ ದೇಶ, ಕಾಲ, ಜೀವನ ವಿಚಾರವಾಗಿ ಸಾಕಷ್ಟು ಚರ್ಚೆಗಳು ನಡೆದಿವೆ. ಇಲ್ಲಿ ಸಂಕ್ಷಿಪ್ತವಾಗಿ ಕಾಳಿದಾಸನ ಬಗ್ಗೆ ಕೆಲವು ಗಮನಾರ್ಹಸಂಗತಿಗಳನ್ನು ಪರಿಚಯಿಸಿದೆ.

ಕಾಳಿದಾಸನ ಕಾಲ

ಕಾಳಿದಾಸನ ಕಾಲದ ಕ್ರಿ.ಪೂ. 5ನೆಯ ಶತಮಾನದಿಂದ ಹಿಡಿದು ಕ್ರಿ.ಶ. 12ನೆಯ ಶತಮಾನದವರೆಗೂ ಇರಬಹುದು ಎಂಬುದರ ಬಗ್ಗೆ ವಿದ್ವಾಂಸರು ಚರ್ಚಿಸಿದ್ದಾರೆ. ಒಬ್ಬೊಬ್ಬರೂ ತಮ್ಮದೇ ಆದ ವಾದಕ್ಕೆ ಸಮರ್ಥನೆಗಳನ್ನು ನೀಡಿದ್ದಾರೆ. ಕೆಲವರು ಇತರರ ವಾದವನ್ನು ಖಂಡಿಸಿ ತಮ್ಮ ವಾದವನ್ನು ಮುಂದೆ ಇಟ್ಟಿದ್ದಾರೆ.

ಭಾರತೀಯವಿದ್ವಾಂಸರೂ ಪಾಶ್ಚಾತ್ಯವಿದ್ವಾಂಸರೂ ತಂತಮ್ಮ ವಾದಗಳನ್ನು ವಿದ್ವತ್‌ಪೂರ್ಣವಾಗಿಯೇ ಮಂಡಿಸಿದ್ದಾರೆ. ಆದಾಗ್ಯೂ ಕಾಳಿದಾಸನ ಕಾಲದ ಬಗ್ಗೆ ಸರ್ವಾನುಮತದ ಕಾಲನಿರ್ಣಯ ಆಗಿಲ್ಲ. ಪ್ರೊ. ಪಾಠಕ್, ಕರ್ನಲ್ ವಿಲ್‌ಫ್ರೆಡ್, ವಿಲ್ಸನ್, ಡಾ. ಗ್ರಿಯರ್‌ಸನ್, ಬಿ.ಸಿ. ಮಜುಂದಾರ್ ಮನಮೋಹನ್ ಚಕ್ರವರ್ತಿ, ಪ್ರೊ. ಭಿಡೆ ಮೊದಲಾದವರು ಕಾಳಿದಾಸನ ಕಾಲ 5ನೆಯ ಶತಮಾನದವರೆಂದು ವಾದಿಸಿದ್ದಾರೆ.

ಪ್ರೊ. ಆರ್‌ನ್ಲೆ, ಹರ್‌ಪ್ರಸಾದ್‌ಶಾಸ್ತ್ರಿ , ಡಿ.ಆರ್. ಭಂಡಾರ್‌ಕರ್, ಡಾ. ಚೌದಾಜಿ ಕರ್ನ್ ಮ್ಯಾಕ್ಸ್‌ಮುಲ್ಲರ್ ಸಿಲ್ವೆನ್, ಲೆವಿ ಮುಂತಾದವರ ಪ್ರಕಾರ ಕಾಳಿದಾಸನ ಕಾಲ 6ನೆಯ ಶತಮಾನ, ಇತರರು ಬೇರೆ ಬೇರೆ ಕಾಲಮಂಡನೆ ಮಾಡಿದ್ದಾರೆ. ಯಾಕೋಬಿ (ಕ್ರಿ.ಶ. 380–412, ದಶರಥಶರ್ಮ (ಕ್ರಿ.ಶ. 4ನೆಯ ಶತಮಾನಕ್ಕೆ ಮುಂಚಿನವನು), ಪ್ರೊ. ಲಾಸನ್ (ಕ್ರಿ.ಶ. 3ನೆಯ ಶತಮಾನ), ಪ್ರೊ. ಮೋನಿಯರ್ ವಿಲಿಯಂಸ್ (ಕ್ರಿ.ಶ. 3ನೆಯ ಶತಮಾನ) ಡಾ. ಕುನ್ಹನ್ ರಾಜ (ಕ್ರಿ.ಪೂ. 184–72) ಘೌಷ್ (ಕ್ರಿ.ಪೂ. 8ನೆಯ ಶತಮಾನ) ಟೀಕು ನಾರಾಯಣಶಾಸ್ತ್ರೀ (ಕ್ರಿ.ಶ. 5ನೆಯ ಶತಮಾನ).

ಈ ಎಲ್ಲ ವಿದ್ವಾಂಸರ ವಾದಗಳನ್ನು ವಿವರವಾಗಿ ತಮ್ಮ ಕಾಳಿದಾಸನ ಗ್ರಂಥದಲ್ಲಿ ಎಂ. ಲಕ್ಷ್ಮೀನರಸಿಂಹಯ್ಯನವರು ಪ್ರಸ್ತಾಪಿಸಿ (ಪುಟ 41–78) ಕಾಳಿದಾಸನ ಕಾಲ 1ನೆಯ ಶತಮಾನ ಎಂಬ ಮತವೇ ಗ್ರಾಹ್ಯವೆನ್ನುತ್ತಾರೆ. ಆದರೆ ಎ.ಆರ್. ಕೃ ಅವರು ಸಂಸ್ಕೃತನಾಟಕ ಗ್ರಂಥದಲ್ಲಿ ಈತನ ಕಾಲ ಕ್ರಿ.ಶ. 400 ಎಂದು ಅಭಿಪ್ರಾಯಪಟ್ಟಿದ್ದಾರೆ. ಇದು ಬಹುಸಮ್ಮತ ಅಭಿಪ್ರಾಯವಾಗಿದೆ.

ಕಾಳಿದಾಸನ ಜನ್ಮಸ್ಥಳ

ಒಬ್ಬ ಪ್ರಸಿದ್ಧವ್ಯಕ್ತಿಯ ಜನ್ಮಸ್ಥಳದ ಬಗ್ಗೆ ಜನರಿಗೆ ಕುತೂಹಲ, ಅಭಿಮಾನ ಸಹಜವಾಗಿರುತ್ತದೆ. ಅವನು ನಮ್ಮವನು ಎಂದು ಹೇಳಲು ಅನೇಕರು ಹಾತೊರೆಯುತ್ತಾರೆ. ಕಾಳಿದಾಸನೂ ಇದಕ್ಕೆ ಅಪವಾದವಲ್ಲ. ಕಾವ್ಯಗಳ ಆಂತರಿಕ ಪ್ರಮಾಣಗಳಿಂದ ಹೇಳಬಹುದಾದರೆ, ಉಜ್ಜಯಿನಿ ಎಂದು ಹೇಳಬಹುದು ಎನ್ನುವರೂ ಇದ್ದಾರೆ. ಇತರ ವಿದ್ವಾಂಸರ ಹಲವು ವಾದಗಳು ಹೀಗಿವೆ–

1. ಭೋಜಪ್ರಬಂಧದ ಉಪಾಖ್ಯಾನಗಳ ಆಧಾರದಮೇಲೆ ಭೋಜನ ಆಸ್ಥಾನಕವಿಯಾಗಿದ್ದರಿಂದ ಧಾರಾನಗರ ಇವನ ಜನ್ಮಭೂಮಿ.

2. ಕಾಳಿದಾಸನಿಗೂ ವಿಕ್ರಮಾದಿತ್ಯನಿಗೂ ಪೋಷ್ಯ–ಪೋಷಕಭಾವ ಕಲಿಸುವುದರಿಂದ ಈತ ಆಂಧ್ರದೇಶೀಯ

3. ವಿದರ್ಭಾಧಿಪತಿಯನ್ನು ಉಲ್ಲೇಖಿಸುವುದರಿಂದ ವಿದರ್ಭದೇಶದವನು.

4. ಬಂಗಾಳದ ಕಾಲಮಾನದ ಪರಿಗಣನೆ ಇವನ ಕಾವ್ಯದಲ್ಲಿ ಕಂಡುಬರುವುದರಿಂದ ಈತ ಬಂಗಾಳ ದೇಶದವನು.

5. ಕಾಳಿದಾಸನ ಗ್ರಂಥಗಳಲ್ಲಿ ಮಾಳವದೇಶದ ವರ್ಣನೆಗೆ ಪ್ರಾಶಸ್ತ್ಯವಿದೆ. ಆದ್ದರಿಂದ ಆ ದೇಶದ ದಶಪುರವೇ ಕವಿಯ ಜನ್ಮಭೂಮಿ.

6. ಕಾಳಿದಾಸಕೃತ 7 ಗ್ರಂಥಗಳಲ್ಲಿ ಹಿಮಾಲಯದ ವರ್ಣನೆ ಪ್ರಧಾನವಾಗಿದೆ. ಆದ್ದರಿಂದ ಇವನು ಕಾಶ್ಮೀರಿಕವಿ ಕೇಸರಿಯನ್ನು ಬೆಳೆಯುವ ಪ್ರದೇಶ ಕಾಶ್ಮೀರ ಮತ್ತು ಶಾಲಿ ಎಂಬ ಬತ್ತ ಅಲ್ಲಿಯದು. ಇವನ ಕೃತಿಗಳಲ್ಲಿ ಕಂಡುಬರುವ ಶೈವಾದ್ವೈತ ಕಾಶ್ಮೀರದಲ್ಲಿತ್ತು. ಇವನ ಕೃತಿಗಳಲ್ಲಿ ಇದರ ಸಂಗತಿಗಳು ಕಂಡುಬರುವುದರಿಂದ ಇವನು ಕಾಶ್ಮೀರಿ ಹೀಗೆ ಇನ್ನೂ ಹಲವು ಕಾರಣಗಳಿಂದ ಕಾಳಿದಾಸನ ಜನ್ಮಭೂಮಿ ಕಾಶ್ಮೀರವೆಂದೆನ್ನುವರು.

ಕಾಳಿದಾಸನ ಕೃತಿಗಳು

ಕಾಳಿದಾಸನ ಹೆಸರಿನಲ್ಲಿ ಬೇಕಾದಷ್ಟು ಕೃತಿಗಳೂ ಸ್ತೋತ್ರಗಳು ಇವೆ. ಆದರೆ ವಿದ್ವಾಂಸರು ಪರಿಗಣಿಸಿರುವುದು ಏಳು ಕೃತಿಗಳನ್ನು ಮಾತ್ರ ಅವಾವುವೆಂದರೆ, ಕಾವ್ಯ (4) ರಘುವಂಶ, ಕುಮಾರಸಂಭವ, ಮೇಘದೂತ, ಋತುಸಂಹಾರ ನಾಟಕ (3), ಮಾಳವಿಕಾಗ್ನಿಮಿತ್ರ. ವಿಕ್ರಮೋರ್ವಶೀಯ ಮತ್ತು ಶಾಕುಂತಲಾ ಉಳಿದ ಎಷ್ಟೋ ಕೃತಿಗಳೂ ಸ್ತೋತ್ರಗಳೂ ಕಾಳಿದಾಸನ ಹೆಸರಿನಲ್ಲಿ ಕಂಡುಬಂದರೂ ಅವು ಕಾಳಿದಾಸನದು ಎಂಬುದರಲ್ಲಿ ಏಕಾಭಿಪ್ರಾಯವಿಲ್ಲ.

ಮತದ ವಿಚಾರದಲ್ಲಿ ಹೇಳುವುದಾದರೆ, ಕಾಳಿದಾಸ, ಸಿದ್ಧಾಂತದಲ್ಲಿ ಸಮನ್ವಯವಾದಿ ಆದರೂ ಅಂತರಂಗದಲ್ಲಿ ಶಿವಾರಾಧಕನೆಂದು ಹೇಳಬಹುದು.

ರಘುವಂಶ ಕಾವ್ಯದ ಹಿರಿಮೆ

ಕಾಳಿದಾಸನ ಮೂಲ ಕೃತಿಗಳ ಅನುವಾದಗಳಲ್ಲದೆ ಅವುಗಳನ್ನು ಕುರಿತ ಗ್ರಂಥಗಳು ಲೇಖನಗಳು ಸಾಕಷ್ಟು ಪ್ರಕಟವಾಗಿವೆ. ಸಿ.ಕೆ.ವೆಂ. ಅವರ ಕನ್ನಡ ಕಾಳಿದಾಸ, ಎಸ್.ವಿ. ರಂಗಣ್ಣ ನವರ ಕಾಳಿದಾಸನ ನಾಟಕಗಳ ವಿಮರ್ಶೆ, ಡಾ. ಕೆ. ಕೃಷ್ಣಮೂರ್ತಿ ಅವರ ಸಂಸ್ಕೃತ ಕಾವ್ಯ, ಕಾಳಿದಾಸನ ಕೃತಿಗಳ ಬಗ್ಗೆ ಬಂದ ಸಮೀಕ್ಷೆ, ಶ್ರೀರಾಮಭಟ್ಟರ ಮಹಾಪ್ರಬಂಧ "ಕನ್ನಡ ಮಾರ್ಗಕಾವ್ಯದ ಮೇಲೆ ಕಾಳಿದಾಸನ ಪ್ರಭಾವ" ಮೊದಲಾದ ಗ್ರಂಥಗಳು ಪ್ರಕಟವಾಗಿವೆ.

ಸಂಸ್ಕೃತದಲ್ಲಿ ಪಂಚಮಹಾಕಾವ್ಯಗಳೆಂದು ಪ್ರಸಿದ್ಧವಾಗಿರುವ ರಘುವಂಶ ಕುಮಾರಸಂಭವ ಕಿರಾತಾರ್ಜುನೀಯ ಶಿಶುಪಾಲವಧ ನೈಷಧೀಯ ಚರಿತಂ ಕಾವ್ಯಗಳು ಕನ್ನಡಕ್ಕೆ ಅನುವಾದವಾಗಿವೆ. ಈ ಪೈಕಿ ಕಾಳಿದಾಸನ ರಘುವಂಶದ ಅನುವಾದಗಳು ಗಣನೀಯವಾಗಿವೆ.

ಕನ್ನಡದಲ್ಲಿ ಕಾಳಿದಾಸನ ರಘುವಂಶದ ಜನಪ್ರಿಯತೆಗೆ ಕಾರಣವೇನೆಂದರೆ ಅದನ್ನು ಬಾಲಕರಿಂದ ಹಿಡಿದು ವಿದ್ವಾಂಸರವರೆಗೆ ಅಧ್ಯಯನಕ್ಕೆ ಪಠ್ಯವಾಗಿರಿಸಿರುವುದು ಒಂದು ಕಾರಣವಾಗಿದೆ. ಕನ್ನಡದಲ್ಲಿ ಕಾಳಿದಾಸನ ಕಾವ್ಯನಾಟಕಗಳು ಶಾಲಾ ಕಾಲೇಜುಗಳಿಗೆ ಪಠ್ಯವಾಗಿರುವ ಹಾಗೆ ಉಳಿದ ಸಂಸ್ಕೃತಕವಿಗಳ ಕಾವ್ಯಗಳು ಹೆಚ್ಚಾಗಿ ಪಠ್ಯವಾಗಿಲ್ಲ. ಹೀಗಾಗಿ ಕಾಳಿದಾಸನ ಜನಪ್ರಿಯತೆ ಹೆಚ್ಚಿದೆ. ಕಾಳಿದಾಸನ ಕೃತಿಗಳಲ್ಲಿ ನಾಟಕಗಳ ಪೈಕಿ ಶಾಕುಂತಲಾ, ಕಾವ್ಯಗಳ ಪೈಕಿ ರಘುವಂಶ ಅತಿ ಜನಪ್ರಿಯ ಕೃತಿಗಳಾಗಿವೆ.

ರಘುವಂಶವನ್ನು ಕುರಿತು ಎ.ಆರ್. ಕೃ ಹೇಳಿದ ಮಾತನ್ನು ಈಗ ನೆನೆಯಬಹುದು. ಅವರು ಹೇಳುವ ಮಾತಿದು. ಈಗ್ಗೆ 50 ವರ್ಷಗಳಿಗಿಂತ ಹಿಂದೆಯೇ (1905 ರ ಸುಮಾರಿನಲ್ಲಿ) ರಘುವಂಶವನ್ನು ಓದಲು ಪ್ರಾರಂಭಿಸಿದೆ. ಇಂದಿಗೂ ಆಗಾಗ್ಗೆ ಓದುತ್ತಿದ್ದೇನೆ– ಓದಿದಾಗಲೆಲ್ಲ ಹೊಸ ಸೊಗಸು ಕಾಣುತ್ತದೆ. ರಘುವಂಶ ನಿತ್ಯ ಹರಿದ್ವರ್ಣ ಅರಣ್ಯದಂತೆ ನಿತ್ಯನವನೂತನ ಕೃತಿ ಎನಿಸುತ್ತದೆ.

ರಘುವಂಶದ ವ್ಯಾಖ್ಯಾನಗಳು

ರಘುವಂಶದ ಜನಪ್ರಿಯತೆಗೆ ಒಂದು ಸಾಕ್ಷಿಯೆಂದರೆ ಅದರ ಮೇಲೆ ಬಂದಿರುವ ಟೀಕಾಗ್ರಂಥಗಳು. ಸುಮಾರು 30ಕ್ಕೂ ಹೆಚ್ಚಿನ ಟೀಕೆಗಳು ರಘುವಂಶವನ್ನು ಕುರಿತು ರಚಿತವಾಗಿವೆ. ಈ ಪೈಕಿ 13 ಟೀಕೆಗಳ ಕರ್ತೃಗಳನ್ನು ಶಂಕರ ಪಾಂಡುರಂಗ ಪಂಡಿತರು ಹೆಸರಿಸಿದ್ದಾರೆ. ಆ ಪೈಕಿ 8 ಜನರ ಟೀಕೆಗಳ ಬಗ್ಗೆ ಹೇಳಿರುವ ಮಾತುಗಳು ಮನನೀಯವಾಗಿವೆ. ರಘುವಂಶವನ್ನು ಬರೆದಿರುವ ಟೀಕೆಗಳಲ್ಲಿ 8 ಮುಖ್ಯ ಟೀಕೆಗಳ ವಿವರ ಹೀಗಿದೆ–

1. ಮಲ್ಲಿನಾಥ– ಸಂಜೀವಿನೀ ಟೀಕೆ (ಕಾಲ ಸುಮಾರು 14ನೆಯ ಶತಕ) ರಘುವಂಶದ ಬಗ್ಗೆ ಇರುವ ಟೀಕೆಗಳಲ್ಲೆಲ್ಲಾ ಅತ್ಯುತ್ತಮವಾದದ್ದೂ ಜನಪ್ರಿಯವೂ ಆದ ಟೀಕೆ ಇದು.
2. ವಲ್ಲಭ– ರಘುಪಂಚಿಕೆ ಟೀಕೆ (ಕಾಲ 1701)
3. ದಿನಕರ– ಸುಬೋಧಿನಿ ಟೀಕೆ (ಕ್ರಿ.ಶ. 1385)
4. ಚಾರಿತ್ರವರ್ಧನ– ಶಿಶುಹಿತೈಷಿಣಿ ಟೀಕೆ (ಕ್ರಿ.ಶ. 1500)
5. ಹೇಮಾದ್ರಿ– ದರ್ಪಣ ಟೀಕೆ (ಕಾಲ ?)
6. ವಿಜಯಗಣಿ (ಜೈನಪಂಡಿತ)– ಸುಬೋಧಿನೀ ಟೀಕೆ (ಕಾಲ ?)
7. ವಿಜಯಾನಂದ ಸೂರಿಚರಣ ಸೇವಕ– (ಕ್ರಿ.ಶ. 1708)
8. ಸುಮತಿ ವಿಜಯ (1635–1643) ಸುಗಮಾರ್ಥ ಪ್ರಬೋಧಿಕೆ ಟೀಕೆ

ರಘುವಂಶದ ಸರ್ಗಗಳ ಸಂಖ್ಯಾವಿಚಾರ

ಈಗ ಜನಪ್ರಿಯವಾಗಿರುವ ರಘುವಂಶ ಕಾವ್ಯದಲ್ಲಿ 19 ಸರ್ಗಗಳಿವೆ. ಆದರೆ 20–25 ಸರ್ಗಗಳಿರಬೇಕು ಎಂಬ ವಾದವೂ ಇದೆ. ಈಗ ದೊರೆತಿರುವುವು 19 ಅಷ್ಟೆ ಎಂಬ ವಾದವೂ ಇದೆ. ಇದರ ಬಗ್ಗೆ ವಿದ್ವಾಂಸರು ಸಾಕಷ್ಟು ಚರ್ಚಿಸಿದ್ದಾರೆ.

ಈ ವಿಚಾರವಾಗಿ ಪರ-ವಿರೋಧ ವಾದಗಳು ಸಾಕಷ್ಟಿವೆ. ಡಾ. ಎಸ್.ವಿ. ಸೋಹನಿ ಎಂಬುವವರು ರಘುವಂಶವು 25 ಸರ್ಗಗಳಷ್ಟು ವಿಸ್ತಾರವಾಗಿತ್ತು ಎಂದು ಹೇಳಿ ತಮ್ಮದೇ ಆದ ಕಾರಣಗಳನ್ನು ನೀಡುತ್ತಾರೆ. ಇದನ್ನು ಅನುಮೋದಿಸುವವರೂ ಇದ್ದಾರೆ. ಸೋಹನಿ ಅವರು ಈಗ ದೊರಕಿರುವ 19 ಸರ್ಗಗಳ ಮುಂದಿನ 6 ಸರ್ಗಗಳು ಚೀನೀಯರ ಸಾರಿಘೋವೈಯಲ್ಲಿ ಹಸ್ತಲಿಖಿತ ಸಂಗ್ರಹದಲ್ಲೇ ಇರುವ ಸಂಭವವಿದೆ ಎನ್ನುತ್ತಾರೆ. ಈಗಿರುವ 19 ಸರ್ಗಗಳಲ್ಲಿ 18, 19 ಕಾಳಿದಾಸನದಲ್ಲ. 18 ರಿಂದ 25 ರವರೆಗಿನ ಸರ್ಗಗಳು ಕಳೆದುಹೋಗಿವೆ ಅಥವಾ ಬೇರೊಬ್ಬ ಕವಿ ಬರೆದಿದ್ದಾನೆ ಎಂಬ ವಾದವಿದೆ. ಸಂಸ್ಕೃತವಿದ್ವಾಂಸರಾದ ಕವಿ ಪಾಂಡುರಂಗಿ ಅವರು 17ನೆಯ ಸರ್ಗಕ್ಕೆ ರಘುವಂಶ ಮುಗಿದಿದೆ. ಉಳಿದವು ಅನ್ಯಕೃತವೆಂದು ವಾದಮಂಡನೆ ಮಾಡಿದ್ದಾರೆ (ಸಂಸ್ಕೃತಕವಿ-ಕಾವ್ಯದರ್ಶಿನಿ, ಪು 178)

ಗದ್ಯಾನುವಾದಗಳು

ದೊಡ್ಡಬೆಲೆ ಅವರು ರಚಿಸಿದ 60ಕ್ಕೂ ಮೇಲ್ಪಟ್ಟ ಗ್ರಂಥಗಳಲ್ಲಿ ಕಾಳಿದಾಸನ ಕೃತಿಗಳನ್ನು ಕುರಿತು ಬರೆದ ಗ್ರಂಥಗಳ ವಿವರ ಹೀಗಿದೆ.

ಕುಮಾರಸಂಭವ (ಸರ್ಗ 1 ರಿಂದ 5) ಟೀಕೆ
ರಘುವಂಶ 1,2,3,4,5 ಸರ್ಗಗಳು) ಟೀಕೆ
ರಘುಕುಲಚರಿತಂ (ಭಾಗ-1, ಸರ್ಗ 1-8, ಭಾಗ-2, ಸರ್ಗ 9-19)

ರಘುವಂಶದ ಗದ್ಯಾನುವಾದ ಕನ್ನಡದ ಅನುವಾದಗಳ ಪೈಕಿ ವಿಶಿಷ್ಟಕೃತಿ ಆಗಿದೆ. ಈಗಾಗಲೇ ಹಲವು ಸಂಸ್ಕೃತ ಕಾವ್ಯಗಳ ಗದ್ಯಾನುವಾದಗಳ ಪೈಕಿ ತುರಮರಿ ಅವರ ಬಾಣನ ಕಾದಂಬರಿ (ಸಂಗ್ರಹಾನುವಾದ) ಬನ್ನಂಜೆ ಗೋವಿಂದಾಚಾರ್ಯರ ಪೂರ್ಣಾನುವಾದ ಜನಪ್ರಿಯವಾಗಿವೆ. ಅನೇಕ ವಿಮರ್ಶಾಕೃತಿಗಳು ಕರ್ನಾಟಕ ಕಾದಂಬರಿ ಬಗ್ಗೆ ಬಂದಿವೆ. ಹೀಗೆ ಹಲವಾರು ಗದ್ಯಾನುವಾದಗಳು ಬಾಣನ ಕಾದಂಬರಿ ಬಗ್ಗೆ ಬಂದ ಹಾಗೆ (ಇತರ ಕನ್ನಡ-ಸಂಸ್ಕೃತ ಕಾವ್ಯಗಳ ಬಗ್ಗೆಯೂ ಬಂದಿವೆ) ಕಾಳಿದಾನ ಕೃತಿಗಳು ಕನ್ನಡದಲ್ಲಿ ಸಂಗ್ರಹರೂಪದಲ್ಲಿ, ಮೂಲರೂಪದಲ್ಲಿ, ಗದ್ಯದಲ್ಲಿ ಅನುವಾದವಾಗಿವೆ.

ರಘುವಂಶದ ಗದ್ಯಾನುವಾದವನ್ನು ದೊಡ್ಡಬೆಲೆಯವರಷ್ಟೆ ಅಲ್ಲದೆ ಸಿ.ಕೆ. ವೆಂಕಟರಾಮಯ್ಯ, ಲಕ್ಷ್ಮೀನರಸಿಂಹಯ್ಯ ಮುಂತಾದವರು ಮಾಡಿದ್ದಾರೆ. ಪ್ರಕೃತದಲ್ಲಿ ದೊಡ್ಡಬೆಲೆ ಅವರ ಗದ್ಯಾನುವಾದವನ್ನು ಕುರಿತು ಹೇಳುವುದಾದರೆ, ಕನ್ನಡದಲ್ಲಿ ರಘುವಂಶದ ಪೂರ್ಣ ಗದ್ಯಾನುವಾದ ಮೊದಲಬಾರಿಗೆ ಕನ್ನಡದಲ್ಲಿ ಮಾಡಿದವರು ದೊಡ್ಡಬೆಲೆ ಅವರೇ. ಮುಖ್ಯವಾಗಿ ವಿದ್ಯಾರ್ಥಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು

ಅನುವಾದಿಸಿದ್ದಾರೆ. ಮೊದಲನೆ ಮುದ್ರಣದ ರಘುವಂಶದ ಗದ್ಯಾನುವಾದದಲ್ಲಿ ಹೇಳಿರುವ ಮಾತುಗಳಿವು. "ಈ ಕಾವ್ಯದ ಕಥಾಸಾರವು ಬಹು ರಮಣೀಯವಾಗಿರುವುದರಿಂದ ಲೋಕಾನುಭವವನ್ನು ಬಹುತರವಾಗಿ ತಿಳಿಸುವುದರಿಂದಲೂ ಅಮೂಲಾಗ್ರವಾಗಿ ಕಥಾಭಾಗವು ಬಹುಮಂದಿಗೆ ತಿಳಿಯದಿರುವುದರಿಂದಲೂ, ಸಂಸ್ಕೃತವನ್ನು ಅರಿಯದ ನಮ್ಮ ಕನ್ನಡಿಗರಿಗೆ ಕೈಲಾದಮಟ್ಟಿಗೆ ಸುಲಭವಾಗಿ ತಿಳಿಸಬೇಕೆಂಬ ಬಯಕೆಯಿಂದ ಕಾಳಿದಾಸನ ಕಾವ್ಯಕ್ರಮವನ್ನು ಅನುಸರಿಸಿ ಈ ಕಥೆಯನ್ನು ಬರೆಯಬೇಕೆಂದು ಪ್ರಯತ್ನಿಸಿ, ಈ ಸಂಪುಟವನ್ನು ಸಿದ್ಧಪಡಿಸಿರುವೆ. ಮುಂದೆ ಈತನ ಕಾವ್ಯನಾಟಕಗಳನ್ನೆಲ್ಲ ಹೀಗೆಯೇ ಬರೆಯಬೇಕೆಂಬ ಬಯಕೆಯುಂಟು" ಎಂದಿದ್ದಾರೆ. (ಮೊದಲನೆಯ ಮುದ್ರಣ 1911)

ಪ್ರಸ್ತಾವನೆ – ಕಥಾಸಾರ

ದೊಡ್ಡಬೆಲೆಯವರು ಈಗ ದೊರೆತಿರುವ ರಘುವಂಶ ಕಾವ್ಯದ 1564 ಶ್ಲೋಕಗಳ 19 ಸರ್ಗಗಳಿಗೆ ಗದ್ಯಾನುವಾದ ಮಾಡಿದ್ದರೂ "ಈ ಕಾವ್ಯದ ಕಥಾಭಾಗವು ದುಃಖ ಪರ್ಯಾವಸಾನವಾಗಿರುವುದರಿಂದ ನಮ್ಮ ಭಾರತ ಮಂಡಲದ ಕವಿಗಳು ಮಧುರರಸ ಸಮಾಪನದ ಪದ್ಧತಿಯನ್ನು (ಸುಖಾಂತ್ಯ ಪದ್ಧತಿ) ಅನುಸರಿಸಿ ಇರುವುದರಿಂದಲೂ ಕಥಾಸಂವಿಧಾನವು ಮುಗಿದಿರುವಂತೆ ಕಾಣಬರದಿರುವುದರಿಂದಲೂ 20–25ನೆ ಸರ್ಗಗಳು ದೊರೆತಿರುವಂತೆ ತಿಳಿದುಬಂದಿರುವುದರಿಂದಲೂ 19 ಸರ್ಗಗಳಿಗಿಂತ ಈ ಗ್ರಂಥವು ಹೆಚ್ಚಾಗಿರುವಂತೆ ತೋರುವುದು" ಎಂದಿದ್ದಾರೆ (ಕಥಾಮುಖ ಭಾಗ 2)

ಕಥಾಸಾರ

19 ಸರ್ಗಗಳನ್ನು ದೊಡ್ಡಬೆಲೆಯವರು ಅಧ್ಯಾಯಗಳೆಂದು ಕರೆದಿದ್ದಾರೆ. ಪ್ರತಿ ಅಧ್ಯಾಯದ ಪ್ರಾರಂಭದಲ್ಲಿ ಸೂಚನಾ ಕಂದಪದ್ಯವೊಂದನ್ನು ಬರೆದು ಆಯಾ ಅಧ್ಯಾಯದ ಕಥಾವಸ್ತು ಏನೆಂದು ತಿಳಿಸಿದ್ದಾರೆ.

ಉದಾಹರಣೆಗೆ 2ನೆಯ ಅಧ್ಯಾಯದ ಕಥಾಸಾರದ ಸೂಚನಾಪದ್ಯ ಹೀಗಿದೆ–

ಸೂಚನೆ॥ ಸುರಭಿಯು ತನ್ನಂ ಸೇವಿಪ
ನರಪನ ಗುರುಭಕ್ತಿಯರಿದು ಮೆಚ್ಚುತೆ ವರಮಂ ।
ಕರುಣಿಸೆಯರಸಿತಿ ಬಾಂದೊರೆ
ಹರತೇಜವ ತಳೆದ ತೆರದಿ ಗರ್ಭವ ತಾಳ್ದಳ್ ॥

ಪ್ರತಿ ಅಧ್ಯಾಯದ ಕೊನೆಗೆ ಆಯಾ ಅಧ್ಯಾಯದ ಕಥಾವಸ್ತುವಿಗೆ ತಕ್ಕಂತೆ ಶೀರ್ಷಿಕೆಗಳನ್ನು ತಿಳಿಸಿದ್ದಾರೆ. 2ನೆಯ ಅಧ್ಯಾಯದ ಶೀರ್ಷಿಕೆ ನಂದಿನೀ ವರಪ್ರಸಾದ ಎಂದಿದೆ. ಅಧ್ಯಾಯದ ಪ್ರಾರಂಭದಲ್ಲಿ ಅಧ್ಯಾಯದ ಸಂಖ್ಯೆ ಇದೆ.

ರಘುವಂಶದ ಕಥಾಸಾರವನ್ನು 19 ಅಧ್ಯಾಯಗಳ ಶೀರ್ಷಿಕೆಗಳಿಂದಲೇ ಊಹಿಸಬಹುದಾಗಿದೆ. (ಪರಿವಿಡಿ 2 ನೋಡಿ) ಆದರೂ ಕಥಾಸಾರದ ಸ್ಪಷ್ಟೀಕರಣಕ್ಕಾಗಿ ಒಂದೊಂದೇ ಸಂಕ್ಷಿಪ್ತವಾಗಿ ಕಥೆಯನ್ನು ಹೀಗೆ ತಿಳಿಸಬಹುದು.

ದಿಲೀಪ ಚಕ್ರವರ್ತಿಯು ಆಳ್ವಿಕೆ ಆದರ್ಶಪ್ರಾಯವಾಗಿರುತ್ತದೆ. ಆದರೆ ಸಂತಾನಭಾಗ್ಯವಿಲ್ಲದೆ ವಶಿಷ್ಠರ ಆಶ್ರಮಕ್ಕೆ ಬಂದಾಗ ನಂದಿನಿ ಸೇವೆಯನ್ನು ಮಾಡಲು ದಿಲೀಪ – ಸುದಕ್ಷಿಣಾ ದಂಪತಿಗಳಿಗೆ ಸೂಚಿಸುತ್ತಾರೆ. (ಸರ್ಗ1–2) ಆಗ ನಂದಿನಿ ಅನುಗ್ರಹದಿಂದ ರಘು ಮಹಾರಾಜ ಜನಿಸುತ್ತಾನೆ (ಸರ್ಗ–3) ಅವನು ದೇಶದಿಂದ ದೇಶಕ್ಕೆ ದಿಗ್ವಿಜಯಕ್ಕೆ ಹೊರಡುತ್ತಾನೆ (ಸರ್ಗ 4) ವಿಶ್ವಜಿತ್‌ಯಾಗದಿಂದ ಔದಾರ್ಯದಿಂದ ಅತಿದಾನದಿಂದ ರಘುವಿಗೆ ದಾರಿದ್ರ್ಯ ಬಂದಾಗ ಕೌತ್ಸನೆಂಬ ಗುರು ವರತಂತುವಿನ ಶಿಷ್ಯ ಗುರುದಕ್ಷಿಣೆಗಾಗಿ, ಯಾಚಿಸಲು ರಘು ಬಳಿ ಬಂದಾಗ ಕುಬೇರನ ಅನುಗ್ರಹದಿಂದ ಸುವರ್ಣ ವೃಷ್ಟಿಯಾಗಿ ಅವನಿಗೆ ಗುರುದಕ್ಷಿಣೆ ಸಲ್ಲಿಸುತ್ತಾನೆ (ಸರ್ಗ 5)

ರಘುವಿಗೆ ಅಜನು ಜನಿಸಿ ಯುವಕನಾಗಿ ಇಂದುಮತಿ ಸ್ವಯಂವರಕ್ಕೆ ಬಂದು ಅವಳನ್ನು ವರಿಸುತ್ತಾನೆ (ಸರ್ಗ 6) ಅಜ–ಇಂದುಮತಿಯರ ವಿವಾಹ ನೆರವೇರುತ್ತದೆ. ಅಸೂಯೆಯಿಂದ ಮೇಲೇರಿ ಬಂದ ರಾಜರನ್ನು ಅಜ ಸೋಲಿಸುತ್ತಾನೆ (ಸರ್ಗ 7). ಅನಂತರ ರಘು ಮಗ ಅಜನಿಗೆ ರಾಜ್ಯ ಒಪ್ಪಿಸಿ ತಪಸ್ಸಿಗೆ ತೆರಳುತ್ತಾನೆ. ಕೆಲವುಕಾಲದ ನಂತರ ಇಂದುಮತಿ ಸಾವಾಗುತ್ತದೆ. ಅಜ ಅತಿಯಾಗಿ ರೋದಿಸುತ್ತಾನೆ (ಸರ್ಗ 8).

ಅನಂತರ ಅಜ ದಶರಥನಿಗೆ ರಾಜ್ಯಭಾರ ವಹಿಸುತ್ತಾನೆ. ದಶರಥನು ರಾಜ್ಯಭಾರ ಮಾಡುತ್ತಿದ್ದಾಗ ಒಮ್ಮೆ ಜಿಂಕೆಯ ಬೇಟೆಗೆ (ಮೃಗಯಾವಿಹಾರಕ್ಕೆ) ಹೊರಟು ಶಬ್ದವೇಧಿ ಬಾಣದಿಂದ ಋಷಿಪುತ್ರನನ್ನು ಕೊಂದು ಅವನ ತಾಯಿತಂದೆಯರಿಂದ ಶಾಪಗ್ರಸ್ತನಾಗುತ್ತಾನೆ (ಸರ್ಗ 9). ಅನಂತರ ರಾಮ ಲಕ್ಷ್ಮಣ ಭರತ ಶತ್ರುಘ್ನರು ದಶರಥನ ರಾಣಿಯರಲ್ಲಿ ಜನಿಸುತ್ತಾರೆ. ಅಯೋಧ್ಯೆ ಆನಂದಸಾಗರದಲ್ಲಿ ತೇಲುತ್ತದೆ. (ಸರ್ಗ 10) ರಾಮಲಕ್ಷ್ಮಣರು ವಿದ್ಯಾಭ್ಯಾಸಕ್ಕೆ ವಿಶ್ವಾಮಿತ್ರರೊಂದಿಗೆ ತೆರಳುತ್ತಾರೆ. ಸೀತೆಯನ್ನು ರಾಮ ಸ್ವಯಂವರದಲ್ಲಿ ವರಿಸುತ್ತಾನೆ. ದಾರಿಯಲ್ಲಿ ಪರಶುರಾಮನನ್ನು ಜಯಿಸುತ್ತಾನೆ. ಅಯೋಧ್ಯೆಗೆ ಹಿಂದಿರುಗುತ್ತಾನೆ (ಸರ್ಗ 11)

ರಾಮನಿಗೆ ದಶರಥನು ಪಟ್ಟಾಭಿಷೇಕ ಮಾಡುವ ಸಂಭ್ರಮದಲ್ಲಿದ್ದಾಗ ಕೈಕೇಯಿ ಕೇಳಿಕೊಂಡ ವರಗಳಿಂದ ರಾಮ ಅರಣ್ಯಕ್ಕೆ ತೆರಳುತ್ತಾನೆ. ಅರಣ್ಯದಲ್ಲಿ ಸೀತಾಪಹರಣವಾಗುತ್ತದೆ. ಲಂಕೆಗೆ ಹೋಗಿ ರಾವಣನೊಡನೆ ಹೋರಾಡಿ ಸೀತೆಯನ್ನು ಅಯೋಧ್ಯೆಗೆ ಕರೆತರುತ್ತಾನೆ (ಸರ್ಗ 12) ಪ್ರಜೆಯೊಬ್ಬನ ನಿಂದಾರ್ಥಕ ನುಡಿ ಕೇಳಿ ಜನಾಪವಾದಕ್ಕೆ ಅಂಜಿ ಸೀತೆಯನ್ನು ಕಾಡಿಗೆ ಬಿಟ್ಟುಬರಲು ಲಕ್ಷ್ಮಣನಿಗೆ ಆಜ್ಞಾಪಿಸುತ್ತಾನೆ (ಸರ್ಗ 13). ರಾಮನು ಸೀತೆಯ ಸ್ವರ್ಣಪುತ್ಥಳಿಯಿಟ್ಟುಕೊಂಡು ಅಶ್ವಮೇಧ ಯಜ್ಞ ನೆರವೇರಿಸುತ್ತಾನೆ. ಅಗ ವಾಲ್ಮೀಕಿ ಆಶ್ರಮದಿಂದ ಬಂದ ಕುಶಲವರು ರಾಮಾಯಣ ಹಾಡುತ್ತಾರೆ. ಸೀತೆಯನ್ನು ಕಂಡ ಶ್ರೀರಾಮ ಕ್ಷಮೆಬೇಡಿ ಅವಳ ನಡತೆ ಬಗ್ಗೆ ಪ್ರಮಾಣ ಕೇಳಿದಾಗ ಆಕೆ ಭೂಗರ್ಭ ಸೇರುತ್ತಾಳೆ (ಸರ್ಗ 14). ಶ್ರೀರಾಮ ಅನಂತರ ಮಕ್ಕಳಿಗೆ ರಾಜ್ಯವಹಿಸಿ ದಿವ್ಯ ವಿಮಾನದಲ್ಲಿ ಸ್ವರ್ಗಾರೋಹಣ ಮಾಡುತ್ತಾನೆ (ಸರ್ಗ 15).

ರಾಮನ ನಂತರ ಕುಶನು ಒಂದು ಭಾಗದಲ್ಲಿ ಲವನು ಒಂದು ಭಾಗದಲ್ಲಿ ರಾಜ್ಯವಾಳುತ್ತಾರೆ (ಸರ್ಗ 16) ಅವನನಂತರ ಅವರಲ್ಲಿ ಕುಶನ ನಂತರ ಅತಿಥಿ ರಾಜ್ಯವಾಳುತ್ತಾನೆ (ಸರ್ಗ 17) ಅನಂತರ ನಿಷಧ ನಲ ನಭ ಪುಂಡರೀಕ ಮೊದಲಾದ ಹತ್ತಾರುಜನ ಮಕ್ಕಳ ಮಕ್ಕಳು ಕ್ರಮವಾಗಿ ರಾಜ್ಯವಾಳಿದ ಮೇಲೆ ಸುದರ್ಶನ ರಾಜನಾಗುತ್ತಾನೆ (ಸರ್ಗ 18) ಸುದರ್ಶನನ ಮಗ ಅಗ್ನಿವರ್ಣ ರಾಜನಾಗುತ್ತಾನೆ. ಕಾಮುಕನಾಗಿ ವಿಷಯಲಂಪಟನಾಗಿ ರಾಜ್ಯವಾಳಿ ಕ್ಷಯದಿಂದ ಮರಣಹೊಂದುತ್ತಾನೆ. ಆ ವೇಳೆಗೆ ರಾಣಿ ಗರ್ಭಿಣಿಯಾಗಿರುತ್ತಾಳೆ. ಅವಳೇ ಮಂತ್ರಿಗಳ ನೆರವಿನಿಂದ ರಾಜ್ಯವಾಳಲು ಪ್ರಾರಂಭಿಸುವ ಘಟ್ಟದಲ್ಲಿ ಕಾವ್ಯ ಮುಕ್ತಾಯವಾಗುತ್ತದೆ (ಸರ್ಗ 19) ಓದುಗರಿಗೆ ಕಾವ್ಯ ಅಪೂರ್ಣವಾಗಿದ್ದಂತೆ ಭಾಸವಾಗುತ್ತದೆ.

ಕಾವ್ಯದ ಹಿರಿಮೆ

ರಘುವಂಶ ಕಾವ್ಯಕ್ಕೆ ಹಲವಾರು ವೈಶಿಷ್ಟ್ಯಗಳಿವೆ. ಕಾಳಿದಾಸನ ಶ್ರೇಷ್ಠ ಕಾವ್ಯಕೃತಿ ಎಂಬುದು ಒಂದು ಹೆಗ್ಗಳಿಕೆ ಮತ್ತು ಅವನಿಗೆ ಉಪಮಾಕವಿಯೆಂಬ ಅಗ್ಗಳಿಕೆಗೆ ರಘುವಂಶ ಕಾವ್ಯ ಆಕರವಾಗಿದೆ ಎಂದರೆ ತಪ್ಪಲ್ಲ. ಕಾಳಿದಾಸ ಎಂದರೆ ಉಪಮೆ, ಉಪಮೆ ಎಂದರೆ ಕಾಳಿದಾಸ ಎಂಬಷ್ಟರಮಟ್ಟಿಗೆ ಉಪಮಾಲಂಕಾರಗಳನ್ನು ತನ್ನ ಕಾವ್ಯದಲ್ಲಿ ಬಳಸಿದ್ದಾನೆ. ಅವನ ಕಾವ್ಯಗಳಲ್ಲಿ ಬಳಸಿರುವ ಸುಮಾರು 1250 ಉಪಮಾಲಂಕಾರಗಳಲ್ಲಿ 550 ಉಪಮಾಲಂಕಾರಗಳು ರಘುವಂಶವೊಂದರಲ್ಲೇ ಕಂಡುಬರುತ್ತದೆ ಎಂಬಂಶ ಗಮನಿಸುವಂಥದ್ದು. ಅವನಿಗೆ ಉಪಮಾಲಂಕಾರಗಳು ಎಷ್ಟರಮಟ್ಟಿಗೆ ಪ್ರಸಿದ್ಧಿಯನ್ನು ತಂದುಕೊಟ್ಟಿವೆಯೆಂದರೆ, ರಘುವಂಶದಲ್ಲಿ ಅವನು

ಅಜ-ಇಂದುಮತಿಯರ ಸ್ವಯಂವರದ ಸಂದರ್ಭದಲ್ಲಿ ಬಳಸಿರುವ ದೀಪಶಿಖಾ ಉಪಮಾಲಂಕಾರವು ಕಾಳಿದಾಸನನ್ನು ದೀಪಶಿಖಾಕವಿ ಎಂದು ಕರೆಯುವಷ್ಟರಮಟ್ಟಿಗೆ ಅದ್ಭುತವಾಗಿದೆ

ಇನ್ನು ರಾಮಾಯಣದ ಕಥೆಯನ್ನು ವಾಲ್ಮೀಕಿ ರಾಮಾಯಣ ಮತ್ತು ವಿಷ್ಣುಪುರಾಣದಿಂದ ತೆಗೆದುಕೊಂಡಿದ್ದರೂ ಹೆಜ್ಜೆಹೆಜ್ಜೆಗೂ ತನ್ನದೇ ಆದ ಪ್ರತಿಭೆಯಿಂದ ಸ್ವತಂತ್ರಕಾವ್ಯದ ವಸ್ತುವಿನಂತೆ ಕಥೆಯನ್ನು ಅಳವಡಿಸಿದ್ದಾನೆ.

ಕಾವ್ಯಸೌಂದರ್ಯದಲ್ಲಿ ವರ್ಣನೆಗಳಲ್ಲಿ ಕಥಾಸಂವಿಧಾನದಲ್ಲಿ ಪದವಿನ್ಯಾಸದಲ್ಲಿ ಅಕ್ಷರಸಂಯೋಜನೆಯಲ್ಲಿ ಕಾಳಿದಾಸನ ಪ್ರತಿಭಾ ಉತ್ತುಂಗತೆಯನ್ನು ರಘುವಂಶದಲ್ಲಿ ನಿಚ್ಚಳವಾಗಿ ಕಾಣುತ್ತವೆ. ಇವುಗಳನ್ನು ಯಾವುದೇ ಅನುವಾದದಲ್ಲಿ ತರಲು ಶಕ್ಯವಿಲ್ಲ. ಉದಾಹರಣೆಗೆ ರಘುವಂಶದ ಪ್ರಾರಂಭಶ್ಲೋಕ ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ. ಈ ಶ್ಲೋಕದಲ್ಲಿ ವಾಗರ್ಥಗಳ ಅವಿನಾಭಾವವನ್ನು ಅಕ್ಷರ ವಿನ್ಯಾಸದಲ್ಲೂ ಕವಿ ಸೂಚಿಸಿದ್ದಾನೆ. ಸಂಪೃಕ್ತೌ ಪ್ರತಿಪತ್ತಯೇ ಪಿತರೌ ಪಾರ್ವತೀ ಪರಮೇಶ್ವರೌ ಪದಗಳಲ್ಲಿ ಪ ಕಾರ ಬಳಕೆಯಾಗಿದೆ. ಎರಡು ತುಟಿಗಳ ಸಂಸ್ಪರ್ಶವಿಲ್ಲದೆ ಪಕಾರವನ್ನು ಉಚ್ಚರಿಸಲಾಗದು. ವಾಗರ್ಥಗಳು ಪಾರ್ವತೀ ಪರಮೇಶ್ವರರನ್ನು ಪ ಕಾರದಿಂದ ಒಂದಾದವರು ಜೋಡಿಯಾದವರು. ಅವಿಭಾಜ್ಯರು ಎಂಬುದನ್ನು ಚಮತ್ಕಾರವಾಗಿ ರಸಪೂರ್ಣವಾಗಿ ಕಾಳಿದಾಸ ಚಿತ್ರಿಸಿದ್ದಾನೆ. ಹೀಗೆ ಸಮಸ್ತ ದೃಷ್ಟಿಯಲ್ಲೂ ಸಂಪೂರ್ಣ ಲಕ್ಷಣಕಾವ್ಯ ರಘುವಂಶ ಕಾವ್ಯವಾಗಿದೆ.

ರಘುವಂಶ ಕಾವ್ಯದ ನಾಯಕರು ಯಾರು?

ರಘುವಂಶ ಕಾವ್ಯದ ಹೆಸರೇ ವಿಶಿಷ್ಟವಾದುದು. ಸಾಮಾನ್ಯವಾಗಿ ಕಾವ್ಯದಲ್ಲಿ ಕಥಾನಾಯಕ ಒಬ್ಬನಿರುತ್ತಾನೆ. ಇಲ್ಲಿ ಒಬ್ಬನಲ್ಲ ಹಲವಾರು ಮಂದಿ, ಹತ್ತಾರು ಮಂದಿ ನಾಯಕರ ಪ್ರಸ್ತಾಪವಿದೆ. ರಘುವೊಬ್ಬನದ್ದಲ್ಲ. ರಘುಕುಲದಲ್ಲಿ ಜನಿಸಿದ ರಾಜರ ಗುಣಗಳ ಆಕರ್ಷಣೆಗೆ ಒಳಗಾಗಿ ಕಾಳಿದಾಸ ಈ ಕಾವ್ಯ ಬರೆದೆನೆಂದು ಹೇಳುತ್ತಾನೆ "ತದ್ಗುಣೈಃ ಕರ್ಣಮಾಗತ್ಯ ಚಾಪಲಾಯ ಪ್ರಚೋದಿತಃ" "ರಘುವಂಶದಲ್ಲಿಯ ಧೀರೋದಾತ್ತ ಪುರುಷರ ಗುಣಗಳು ನನ್ನನ್ನು ಈ ಕಾವ್ಯ ಬರೆಯಲು ಪ್ರಚೋದಿಸಿದವು" ಎನ್ನುತ್ತಾನೆ.

ರಘುವಂಶದ ರಾಜರಲ್ಲಿ ದಿಲೀಪ, ರಘು, ಅಜ, ರಾಮ ಈ ನಾಲ್ವರನ್ನು ಕವಿ ಮುಖ್ಯವಾಗಿ ಆಯ್ದುಕೊಂಡು ಅವರ ಆದರ್ಶಗುಣಗಳನ್ನು ಉನ್ನತ ಸಾಧನೆಗಳನ್ನು ಚಿತ್ರಿಸುತ್ತಾನೆ. ಈ ನಾಲ್ವರು ಧರ್ಮ ಅರ್ಥ ಕಾಮ ಮೋಕ್ಷಗಳೆಂಬ 4

ಪುರುಷಾರ್ಥಗಳಿಗೆ ಅಥವಾ ಜೀವನ ಮೌಲ್ಯಗಳಿಗೆ ಸಾಕ್ಷಿಯಾಗಿದ್ದಾರೆ" ಎನ್ನುತ್ತಾರೆ ಕೆ.ಟಿ. ಪಾಂಡುರಂಗಿ ಅವರು.

ಇವರ ಪೈಕಿ ಶ್ರೀರಾಮನ ಚರಿತ್ರೆಯೇ 19 ಸರ್ಗಗಳಲ್ಲಿ 6 ಸರ್ಗಗಳಷ್ಟು (ಸರ್ಗ 10 ರಿಂದ 15) ನಿರೂಪಿತವಾಗಿದೆ. ಈ ದೃಷ್ಟಿಯಲ್ಲಿ ರಘುವಂಶವೆಂದರೆ ಶ್ರೀರಾಮಚಂದ್ರ ಚರಿತ್ರವೆಂದೇ ಹೇಳಬಹುದು ಎಂಬುದು ಗುರುನಾಥ ವೆಂಕಟೇಶ ಕಿತ್ತೂರರ ಅಭಿಪ್ರಾಯವಾಗಿದೆ. ಶ್ರೀರಾಮನ ಅನಂತರದ 24 ಜನ ರಾಜರು ಅಗ್ನಿವರ್ಣನವರೆಗೆ ಹೀಗಿವೆ : 15, 17, 18ನೆಯ ಸರ್ಗಗಳಲ್ಲಿ ಇವರ ಪ್ರಸ್ತಾಪ ಕಾಣುತ್ತೇವೆ. ಈ ರಾಜರ ಹೆಸರುಗಳು ಉಲ್ಲೇಖಗಳಂತೆ, ಸಂಕ್ಷಿಪ್ತ ಪರಿಚಯಗಳಂತೆ ಕಂಡುಬರುತ್ತವೆ. ಈ 24 ರಾಜರ ಹೆಸರುಗಳು ಹೀಗಿವೆ– 1. ಕುಶ (15–96) 2. ಅತಿಥಿ (17–1) 3. ನಿಷಧ (18–1) 4. ನಲ (18–4) 5. ನಭ (15–5) 6. ಪುಂಡರೀಕ (15–7) 7. ಕ್ಷೇಮಧನ್ವಾ (15–8) 8. ದೇವಾನಿಕ (15–9) 9. ಅಹೀನನು (15–13) 10. ಪಾರಿಯಾತ್ರ (15–15) 11. ಶಿಲ (15–16) 12. ಉನ್ನಾಭ (15–19) 13. ವಜ್ರನಾಭ (18–20) 14. ಶಂಖಣ (18–21) 15. ವ್ಯುಶಿತಾಶ್ವ (18–22) 16. ವಿಶ್ವಸಹ (18–23) 17. ಹಿರಣ್ಯನಾಭ (18–24) 18. ಕೌಸಲ್ಯ (18–26) 19. ಬ್ರಹ್ಮಿಷ್ಠ (18–27) 20. ಪುತ್ರ (18–29) 21. ಪೌಷ್ಯ (18–31) 22. ಧ್ರುವಸಂಧಿ (18–33) 23. ಸುದರ್ಶನ (18–34) 24. ಅಗ್ನಿವರ್ಣ (18–35)

ಕನ್ನಡದಲ್ಲಿ ರಘುವಂಶದ ಕೃತಿಗಳು

ಸಂಸ್ಕೃತದಲ್ಲಿ ಪಂಚಮಹಾಕಾವ್ಯಗಳಲ್ಲಿ ಒಂದಾಗಿ ಕಾಳಿದಾಸನ ಶ್ರೇಷ್ಠಕೃತಿಯಾಗಿರುವ ರಘುವಂಶವನ್ನು ಪೂರ್ಣವಾಗಿ 18ನೆಯ ಶತಮಾನದವರೆಗೂ ಯಾರೂ ಏಕೆ ಅನುವಾದಿಸಲಿಲ್ಲ ಎಂಬ ಪ್ರಶ್ನೆಗೆ ಉತ್ತರವಾಗಿ ಎ.ಆರ್. ಕೃ ಅವರು ಹೇಳಿರುವುದು ಹೀಗೆ: "...ಹಿಂದಿನ ಕನ್ನಡ ಕವಿಗಳು ಮತ್ತು ವಿದ್ಯಾವಂತರೆನ್ನಿಸಿಕೊಂಡವರೆಲ್ಲರೂ ಸಾಮಾನ್ಯವಾಗಿ ಸಂಸ್ಕೃತವನ್ನು ತಿಳಿದೇ ಇದ್ದು ಕಾಳಿದಾಸನ ನಾಟಕಗಳನ್ನು ಮೂಲದಲ್ಲೇ ಓದುತ್ತಿದ್ದರು" (ಕನ್ನಡ ರಘುವಂಶಕ್ಕೆ (ಅನುವಾದಕ– ಎಸ್ ವಿ ಪರಮೇಶ್ವರಭಟ್ಟ) ಬರೆದ ಮುನ್ನುಡಿ ಪುಟ 4) ಹೀಗಾಗಿ ಸಮಗ್ರವಾಗಿ ಕಾಳಿದಾಸನ ರಘುವಂಶವಾಗಲಿ, ಇತರ ಕಾವ್ಯವಾಗಲಿ ಬರಲಿಲ್ಲ. ಆದರೆ ಅವನ ಕಾವ್ಯಗಳ ಪ್ರಭಾವಕ್ಕೆ ಒಳಗಾಗಿ ಭಾಗಶಃ ಅನುವಾದಿಸಿದರು. ಪಂಪ ಪೊನ್ನರಲ್ಲಿ ನಿದರ್ಶನಗಳನ್ನು ಕಾಣಬಹುದು.

ಆದರೆ "ಕನ್ನಡ ಮಾರ್ಗಕಾವ್ಯದ ಮೇಲೆ ಕಾಳಿದಾಸನ ಪ್ರಭಾವ" ಎಂಬ ಮಹಾಪ್ರಬಂಧದಲ್ಲಿ ಡಾ. ಶ್ರೀರಾಮಭಟ್ಟರು ಹೇಳುವುದು ಹೀಗೆ: "ಕನ್ನಡ

ಮಾರ್ಗಕವಿಗಳು ಕಾಳಿದಾಸನ ಕಾವ್ಯವನ್ನು ಇಡಿಯಾಗಿ ಅನುವಾದಿಸದಿದ್ದುದಕ್ಕೆ ಕಾರಣವೆಂದರೆ, ಕಾಳಿದಾಸನಲ್ಲಿ ಧಾರ್ಮಿಕವಾಗಿ ಮುಕ್ತತೆ ಇದ್ದರೆ, ಕನ್ನಡ ಮಾರ್ಗಗಳ ಕವಿಗಳಲ್ಲಿ ಬದ್ಧತೆ ಇತ್ತು. ಹೀಗಾಗಿ ಕಾಳಿದಾಸನ ದೃಷ್ಟಿಧೋರಣೆಗಳಿಗಿಂತ ಮಾರ್ಗಕವಿಗಳ ದೃಷ್ಟಿಧೋರಣೆಗಳು ಭಿನ್ನವಾಗಿದ್ದವು. ಆದ ಕಾರಣ ಕಾಳಿದಾಸನ ಕಾವ್ಯಶೈಲಿಯನ್ನು ಒಪ್ಪುತ್ತಾರೆ. ದೃಷ್ಟಿಧೋರಣೆಗಳನ್ನಲ್ಲ. ಅತ್ಯುತ್ತಮ ವಿಲಕ್ಷಣ ವಿಶಿಷ್ಟ ಪ್ರತಿಭೆಯನ್ನು ಬದಲಿಸುವುದು ಸಂಕೋಚದ ಸಂಗತಿಯಾಗಿ ಕಂಡು, ಕನ್ನಡಕವಿಗಳು ತಮ್ಮ ಕಾವ್ಯದ ಚೌಕಟ್ಟಿಗೆ ಹೊಂದುವ ಭಾಗಗಳನ್ನು ಸ್ವೀಕರಿಸುವುದರ ಮೂಲಕ ಕಾಳಿದಾಸನಿಗೆ ತಮ್ಮ ಗೌರವ ಸೂಚಿಸಿದರು" ಹೀಗಾಗಿ ರಘುವಂಶವಾಗಲಿ, ಇತರ ಕಾವ್ಯ ಸಮಗ್ರವಾಗಿ 20ನೆಯ ಶತಮಾನದವರೆಗೆ ಕನ್ನಡಕ್ಕೆ ಬರಲಿಲ್ಲ ಎನ್ನಬಹುದು.

ಕನ್ನಡದಲ್ಲಿ ಪ್ರಕಟವಾಗಿರುವ ರಘುವಂಶದ ಅನುವಾದ ಕೃತಿಗಳು ಹತ್ತಾರಿವೆ. (ಅನುಬಂಧ ನೋಡಿ)

ಗ್ರಂಥಸಂಪಾದನೆ ವಿಚಾರ

ಗ್ರಂಥಸಂಪಾದನೆ

ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಅವರ ಕಾಲಕ್ಕೆ ತಕ್ಕಂತೆ ಸಾಕಷ್ಟು ಆಧುನಿಕವಾಗಿ ಪರಿಷ್ಕೃತ ರೂಪದಲ್ಲಿ ರಘುಕುಲಚರಿತವನ್ನಾಗಲಿ ಕಾಳಿದಾಸನ ಇತರ ಕೃತಿಗಳನ್ನಾಗಲಿ ಸಂಪಾದಿಸಿ, ಅನುವಾದಿಸುವ ಕಾರ್ಯವನ್ನು ಕೈಗೊಂಡಾಗ ಅವರ ಕಾಲಕ್ಕೆ ತಕ್ಕಂತೆ ಸಾಕಷ್ಟು ಪರಿಷ್ಕಾರಮಾಡಿದ್ದಾರೆ. ಮೂಲಕೃತಿಗೆ ಧಕ್ಕೆಬಾರದಂತೆ ಎಚ್ಚರವಹಿಸಿ ಸಣ್ಣಪುಟ್ಟ ಬದಲಾವಣೆಗಳನ್ನಷ್ಟೇ ಮಾಡಿದ್ದಾರೆ. ಆದರೆ ಈ ಕಾಲಕ್ಕೆ ತಕ್ಕಂತೆ ಮೂಲ ಅನುವಾದಕ್ಕೆ ಧಕ್ಕೆ ಬಾರದಂತೆ ಕೆಳಕಂಡ ಸುಧಾರಣೆಗಳನ್ನು ಮಾಡಿದೆ.

1. ಅಧ್ಯಾಯಗಳ ಏಕರೂಪತೆ

ಪ್ರತಿ ಅಧ್ಯಾಯದ ಸಂಖ್ಯೆಯನ್ನು ಪ್ರಾರಂಭದಲ್ಲಿ ಸಂಸ್ಕೃತ–ಕನ್ನಡ ರೂಪಗಳಲ್ಲಿ ಕೊಟ್ಟಿದ್ದಾರೆ. ಉದಾ: ನವಮಾಧ್ಯಾಯಂ ಹನ್ನೊಂದನೇ ಅಧ್ಯಾಯ ಷಷ್ಠಾಧ್ಯಾಯಂ ದ್ವಿತೀಯಾಧ್ಯಾಯಂ ಹತ್ತನೆಯ ಅಧ್ಯಾಯಂ ಇತ್ಯಾದಿ. ಈ ಎರಡೂ ರೂಪಗಳಲ್ಲಿ ಕನ್ನಡರೂಪವನ್ನು ಒಂದನೆಯ ಅಧ್ಯಾಯ ಎರಡನೆಯ ಅಧ್ಯಾಯ ಇತ್ಯಾದಿ ಏಕರೂಪವನ್ನು ಬಳಸಲಾಗಿದೆ.

2. ಅಧ್ಯಾಯಗಳ ಶೀರ್ಷಿಕೆ ವಿಚಾರ

ಪ್ರತಿ ಅಧ್ಯಾಯದ ಕೊನೆಗೆ ಅಧ್ಯಾಯದ ಶೀರ್ಷಿಕೆಯನ್ನು ಕೊಟ್ಟಿದ್ದಾರೆ.

ಉದಾ: ಹನ್ನೊಂದನೆಯ ಅಧ್ಯಾಯದ ಕೊನೆಗೆ ಕೊಟ್ಟ **ಇಂತು ಮೃಗಯಾವರ್ಣನಂ** ಇತ್ಯಾದಿ ಶೀರ್ಷಿಕೆಗಳನ್ನು ಪ್ರತಿ ಅಧ್ಯಾಯದ ಪ್ರಾರಂಭಕ್ಕೆ ಕೊಡಲಾಗಿದೆ.

3. ಸೂಚನಾ ಪದ್ಯಗಳ ರಚನೆ

ನಮ್ಮ ಷಟ್ಪದಿಕಾವ್ಯಗಳಲ್ಲಿರುವಂತೆ ಪ್ರತಿ ಅಧ್ಯಾಯದ ಪ್ರಾರಂಭದಲ್ಲಿ ಆಯಾ ಅಧ್ಯಾಯದ ಕಥಾಸಾರವನ್ನು ತಿಳಿಸುವಂತೆ ಕಂದಪದ್ಯದಲ್ಲಿ ಸೂಚನಾಪದ್ಯವನ್ನಾಗಿ ಕೊಟ್ಟಿದ್ದಾರೆ. ಇದು ಸಂಸ್ಕೃತ ಮೂಲಕೃತಿಯಲ್ಲಿಲ್ಲ ಕನ್ನಡ ಕಾವ್ಯಸಂಪ್ರದಾಯದಲ್ಲಿ ಕಂಡುಬರುವ ಪದ್ಧತಿ ಇದನ್ನು ಹಾಗೆಯೇ ಉಳಿಸಿಕೊಂಡಿದೆ.

4. ಸರ್ಗಗಳೇ ಅಧ್ಯಾಯಗಳು

ಮೂಲ ಸಂಸ್ಕೃತಕಾವ್ಯದಲ್ಲಿ ಅಧ್ಯಾಯಗಳನ್ನು ಸರ್ಗಗಳೆಂದು ಕರೆಯಲಾಗಿದೆ. ಪ್ರಥಮ ಸರ್ಗ, ದ್ವಿತೀಯ ಸರ್ಗ ಇತ್ಯಾದಿ. ದೊಡ್ಡಬೆಲೆಯವರು ಇವನ್ನು ಅಧ್ಯಾಯಗಳೆಂದು ಕರೆದಿದ್ದಾರೆ. ಇಲ್ಲಿ ಅಧ್ಯಾಯಗಳೆಂದೇ ಶೀರ್ಷಿಕೆಗಳ ಸಂಖ್ಯೆಯನ್ನು ಕೊಡಲಾಗಿದೆ.

5. ಪ್ರಾರಂಭದ ಶ್ಲೋಕದ ವಿಚಾರ

ರಘುವಂಶದ ಪ್ರಾರಂಭದ ಶ್ಲೋಕದ ಅನುವಾದವನ್ನು ಪ್ರಾರ್ಥನಾರೂಪವಾಗಿ ಸೂಚನಾಪದ್ಯದ ಮೊದಲಿಗೆ ಒಂದನೆಯ ಅಧ್ಯಾಯದಲ್ಲಿ ಕೊಟ್ಟಿದ್ದಾರೆ. ಇದು ಗ್ರಂಥದ ಭಾಗವಾದ್ದರಿಂದ ಸೂಚನಾಪದ್ಯದ ಅನಂತರ ಕೊಡಲಾಗಿದೆ.

6. ಎರಡೂ ಭಾಗಗಳೂ ಒಟ್ಟಿಗೆ ಪ್ರಕಟ

ರಘುಕುಲಚರಿತಂ ಎಂದು ಎರಡು ಭಾಗಗಳಲ್ಲಿ ಪ್ರಕಟಿಸಿದ್ದಾರೆ. ಎರಡು ಮುದ್ರಣಗಳಾಗಿವೆ (1ನೆಯ ಮುದ್ರಣ 1911 ಭಾಗ 1,1ನೇ ಮುದ್ರಣ 1913 ಭಾಗ 2, 2ನೆಯ ಮುದ್ರಣ 1923, 2 ಭಾಗಗಳು). 1ನೆಯ ಮುದ್ರಣದ ಪ್ರತಿಯನ್ನು ಇಲ್ಲಿ ಬಳಸಿದೆ. ಎರಡು ಭಾಗಗಳ ಪುಟಗಳನ್ನೂ ಒಗ್ಗೂಡಿಸಿ ಒಂದೇ ಕ್ರಮಸಂಖ್ಯೆಯನ್ನು ಕೊಡಲಾಗಿದೆ.

7. ಹಿಂದಿನ ಅಧ್ಯಾಯಗಳ ತಿದ್ದುಪಡಿ

ಎರಡೂ ಭಾಗಗಳನ್ನು ಪ್ರತ್ಯೇಕ ಪುಸ್ತಕಗಳನ್ನಾಗಿ (ಭಾಗ 1, ಭಾಗ 2) ಎಂದು ಪ್ರಕಟಿಸಿ ಎರಡೂ ಭಾಗಗಳಿಗೆ ಅಚ್ಚಿನ ದೋಷಗಳನ್ನು ಗುರುತಿಸಿ ಆಯಾ ಭಾಗದ ಕೊನೆಗೆ ಶುದ್ಧಪತ್ರವೆಂದು ಕೊಟ್ಟಿದ್ದಾರೆ. ಅವೆಲ್ಲವನ್ನೂ ಈ ಮುದ್ರಣದಲ್ಲಿ ತಿದ್ದಲಾಗಿದೆ.

8. ಅನುವಾದಕರ ವಿನಂತಿಗಳು

ಎರಡೂ ಭಾಗಗಳ ಪ್ರಾರಂಭದಲ್ಲಿ ಕಥಾಮುಖಂ ಎಂದು ಕೃತಿಯನ್ನು ಕುರಿತು ಉಪಹಾರವೆಂದು ಕೃತಿರಚನೆಗೆ ಕಾರಣಕರ್ತರಾದವರನ್ನು ನೆನೆದಿದ್ದಾರೆ. ದ್ವಿತೀಯಮುದ್ರಣದ ವಿನಂತಿಯನ್ನೂ ಬರೆದಿದ್ದಾರೆ. ಇವುಗಳನ್ನು ಹಾಗೆಯೇ ಉಳಿಸಿಕೊಂಡಿದೆ. 1911ರಲ್ಲಿ ಮೊದಲ ಭಾಗ ಪ್ರಕಟವಾದಾಗ ಬರೆದ ವಿನಂತಿಯನ್ನು ಪ್ರಕಟಿಸಿದೆ.

9. ಕೃತಿಗಳ ಪಟ್ಟಿ ಸೇರ್ಪಡೆ

ಎರಡೂ ಭಾಗಗಳ ಕೊನೆಯಲ್ಲಿ ರಕ್ಷಾಪುಟದ ಮೇಲೆ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ರಚಿಸಿದ ಕೃತಿಗಳ ಪಟ್ಟಿ ಇದೆ. ಇದನ್ನು ಲೇಖಕರ ಜೀವನ ಪರಿಚಯದಲ್ಲಿ ಅಳವಡಿಸಿದೆ.

10. ಅಧ್ಯಾಯಗಳ ಪರಿವಿಡಿ

19 ಅಧ್ಯಾಯಗಳ ಪರಿವಿಡಿಯನ್ನು ಸಿದ್ಧಗೊಳಿಸಿ ಪ್ರಾರಂಭದಲ್ಲಿ ಕೊಡಲಾಗಿದೆ. ದೊಡ್ಡಬೆಲೆ ಅವರ ಪ್ರಕಟನೆಯಲ್ಲಿ ಈ ಪರಿವಿಡಿ ಇಲ್ಲ.

11. ಅನುವಾದಕರ ಜೀವನ ವಿವರ

ರಘುವಂಶ ಕಾವ್ಯದ ಪರಿವರ್ತನಕಾರರಾದ (ಹಾಗೆಯೇ ದೊಡ್ಡಬೆಲೆಯವರು ಕರೆದುಕೊಂಡಿದ್ದಾರೆ) ನಾರಾಯಣಶಾಸ್ತ್ರಿಗಳ ಜೀವನಪರಿಚಯ ಮತ್ತು ಕೃತಿಗಳ ಪಟ್ಟಿಯನ್ನು ಹೊಸದಾಗಿ ಬರೆದು ಸೇರಿಸಿದೆ ಮತ್ತು ಅವರ ಭಾವಚಿತ್ರವನ್ನು ಸೇರಿಸಿದೆ.

12. ಪೂರಕ ಸಂಗತಿಗಳ ಸೇರ್ಪಡೆ

ಕಾಳಿದಾಸ ಮತ್ತು ರಘುವಂಶವನ್ನು ಕುರಿತು ಸಂಕ್ಷಿಪ್ತ ಪರಿಚಯವನ್ನು ದೊಡ್ಡಬೆಲೆಯವರು ನೀಡಿದ್ದಾರೆ. ಇದಕ್ಕೆ ಪೂರಕವಾಗಿ ಪ್ರಸ್ತಾವನೆಯಲ್ಲಿ ಕೆಲವು ವಿಷಯ ತಿಳಿಸಲಾಗಿದೆ.

13. ಶಬ್ದಾರ್ಥ– ಟಿಪ್ಪಣಿಗಳ ಸೇರ್ಪಡೆ

ಸರಳ ಆಕರ್ಷಕ ಶೈಲಿಯಲ್ಲಿ ಶಾಸ್ತ್ರಿಗಳು ರಘುವಂಶ ಕಾವ್ಯವನ್ನು ಸೊಗಸಾದ ಗದ್ಯದಲ್ಲಿ ಅನುವಾದಿಸಿದ್ದಾರೆ. ಅಲ್ಲಲ್ಲಿ ತಮ್ಮದೇ ಆದ ಕನ್ನಡ ಪದಗಳನ್ನು ಅನುವಾದದಲ್ಲಿ ಬಳಸಿದ್ದಾರೆ. ಮೂಲದ ಪಾರಿಭಾಷಿಕ ಪದಗಳನ್ನು ಹಾಗೆಯೇ ಕೆಲವೆಡೆ ಬಳಸಿದ್ದಾರೆ. ಅವುಗಳ ಬಗ್ಗೆ ಅಗತ್ಯವಿರುವಲ್ಲೆಲ್ಲಾ ಟಿಪ್ಪಣಿಗಳನ್ನು ಕೊಡಲಾಗಿದೆ. ಅಕ್ಷರ ಸ್ಖಾಲಿತ್ಯಗಳನ್ನು ತಿದ್ದಲಾಗಿದೆ. ಕಠಿಣ ಶಬ್ದಗಳಿಗೆ ಅರ್ಥವನ್ನು ನೀಡಲಾಗಿದೆ.

14. ಮಲ್ಲಿನಾಥನ ವ್ಯಾಖ್ಯಾನದ ಬಳಕೆ

ದೊಡ್ಡಬೆಲೆಯವರು ಕೇವಲ ಮೂಲಶ್ಲೋಕವನ್ನು ಯಾಂತ್ರಿಕವಾಗಿ ಪದಕ್ಕೆ ಪದ ಅರ್ಥ ಇದ್ದರೆ ಸರಿ ಎಂಬಂತೆ ಅನುವಾದಿಸಿಲ್ಲ. ವಿಷಯ, ಸಂದರ್ಭಗಳಿಗೆ ಸಂಬಂಧಿಸಿದ ಹಾಗೆ ಕೆಲವು ಶ್ಲೋಕಗಳನ್ನು ಸಂಕ್ಷಿಪ್ತವಾಗಿ ಅನುವಾದಿಸಿದ್ದರೆ ಮತ್ತೆ ಕೆಲವು ಶ್ಲೋಕಗಳನ್ನು ವಿಸ್ತಾರವಾಗಿ ವಿವರಿಸಿದ್ದಾರೆ. 6ನೆಯ ಅಧ್ಯಾಯದ 13 ರಿಂದ 19ನೆಯ ಶ್ಲೋಕದವರೆಗೆ ಇಂದುಮತಿ ಸ್ವಯಂವರಕ್ಕೆ ಬಂದ ರಾಜಕುಮಾರರ ಆಶಯಗಳನ್ನು ವ್ಯಕ್ತಪಡಿಸಿದ ರೀತಿ, ಅದನ್ನು ಇಂದುಮತಿ ಅರ್ಥಮಾಡಿಕೊಂಡ ರೀತಿಯೇ ಬೇರೆ ಆಗಿತ್ತು ಎಂಬುದನ್ನು ಮಲ್ಲಿನಾಥನ ವ್ಯಾಖ್ಯಾನದಿಂದ ಅನುವಾದಿಸಿದ್ದಾರೆ. ಮತ್ತೆ ಕೆಲವೆಡೆ ಒಂದೆರಡು ಶ್ಲೋಕಗಳು ವಿದ್ಯಾರ್ಥಿ ಓದುಗರಿಗೆ ಸೂಕ್ತವಲ್ಲ ಎಂದು ಅನುವಾದಿಸದೆ ಬಿಟ್ಟಿದ್ದಾರೆ. ಹೀಗೆ ದೊಡ್ಡಬೆಲೆ ಅವರ ಅನುವಾದದಲ್ಲಿ ವೈವಿಧ್ಯವನ್ನು ವೈಶಿಷ್ಟ್ಯಗಳನ್ನು ಕಾಣಬಹುದಾಗಿದೆ.

15. ದೇಸಿ ಪದಗಳ ಬಳಕೆ

ಮೂಲದ ಸಂಸ್ಕೃತಪದಗಳನ್ನು ಬಳಸುವಷ್ಟೇ ಧಾರಾಳವಾಗಿ ಸಲೀಸಾಗಿ ದೇಸಿಪದಗಳನ್ನು ಬಳಸುತ್ತಾರೆ. ಉದಾಹರಣೆಗೆ ನೋಡಿ: ಸಾಸರಗಣ್ಣನಾದ ಬಿಸುಗಣ್ಣೊಡೆಯ, ಕಾವು, ಸೇಸೆ, ಟಿಂಕಿ ಸೆಟ್ಟೆ ಬೆಳಗಂಡಿ, ಕಾಟಿಕೆ, ಬಾಪುರಿ ಪಾದೆಗಟ್ಟು ಬೆಟ್ಟಮಲ್ಲಿಗೆ ಹೂ ಬಾಗೇಮರ ಬಲಗಾರ ಮುರಮುರ, ಮೈತೀಟೆ, ಮರದ ತಾಳು ವೇಲು ಹೊದಿಕೆ ಸರಿದುಹೊಳೆ, ಹಾಲುಮಡ್ಡಿಮರ ದೊಂಬಿಯ ಕಾಳಗ ಮುಂತಾದುವು.

16. ವಾಕ್ಯವೃಂದಗಳ ವಿಂಗಡನೆ

ಒಂದು ಶ್ಲೋಕಕ್ಕೂ ಇನ್ನೊಂದು ಶ್ಲೋಕಕ್ಕೂ ಸಾತತ್ಯ ಕಲ್ಪಿಸುತ್ತಾ, ಅನುವಾದಿಸುತ್ತಾ ಹೋಗುವ ಭರದಲ್ಲಿ ಪುಟಗಟ್ಟಲೆ ಪ್ಯಾರಾವಿಂಗಡನೆ ಹಲವಾರು ಕಡೆ ಕಂಡು

ಬರುವುದಿಲ್ಲ. ಒಂದು ಪುಟ, ಎರಡು ಪುಟದಷ್ಟು ಒಂದೇ ಪ್ಯಾರಾ ಕಂಡುಬರುತ್ತದೆ. ಅಂಥ ಕಡೆಗಳಲ್ಲಿ ಚಿಕ್ಕ ಚಿಕ್ಕ ಪ್ಯಾರಾಗಳನ್ನಾಗಿ ಸುದೀರ್ಘ ಪ್ಯಾರಾಗಳನ್ನು ವಿಂಗಡಿಸಿ ಓದುಗರಿಗೆ ಏಕತಾನವಾಗದಂತೆ ಮಾಡಲಾಗಿದೆ.

17. ಸಾತತ್ಯವಿಧಾನ

ದೊಡ್ಡಬೆಲೆ ಅವರ ಅನುವಾದದ ವೈಶಿಷ್ಟ್ಯವೆಂದರೆ ಉಳಿದವರಂತೆ ಬಿಡಿಬಿಡಿಯಾಗಿ ಶ್ಲೋಕಗಳನ್ನು ಅನುವಾದಿಸಿಲ್ಲ. ಹಿಂದಿನ ಶ್ಲೋಕಕ್ಕೂ ಮುಂದಿನ ಶ್ಲೋಕಾನುವಾದಕ್ಕೂ ಸಂಬಂಧವಿರುವಂತೆ ಸಣ್ಣ ವಿವರಣೆಗಳನ್ನು(ಅವತರಣಿಕೆ) ಸೇರಿಸಿ ಶ್ಲೋಕಾನುವಾದ ಮಾಡುತ್ತಾರೆ. ಹೀಗಾಗಿ ಓದುಗರಿಗೆ ಕಾದಂಬರಿಯಂತೆ ಉದ್ದಕ್ಕೂ ಓದಿಸಿಕೊಂಡು ಹೋಗುತ್ತದೆ. ಉದಾಹರಣೆಗೆ, ಅಧ್ಯಾಯ 2 ರ 9ನೆಯ ಶ್ಲೋಕಾನುವಾದವನ್ನು ಗಮನಿಸಬಹುದು.

"ಬೇಟೆಗಾರನಂತೆ ಬಿಲ್ಲುಧಾರಿಯಾಗಿ ವೇಷಧರಿಸಿ ನಂದಿನಿಯ ಹಿಂದೆ ಹೋಗುತ್ತಿದ್ದ ದಿಲೀಪನು "ದಿಲೀಪ ಮಹಾರಾಜನೇನು ಸಾಧಾರಣನೇ? ಮಹಾನುಭಾವನಾದ ಚಕ್ರವರ್ತಿಯಲ್ಲವೇ? ಆತನ ಮಹಿಮೆಯು ಲೋಕದಲ್ಲೆಲ್ಲಾ ಹರಡಿಕೊಂಡಿದ್ದಿತು. ಆ ಮಹಾರಣ್ಯದಲ್ಲಿಯೂ ಕಾಡುಮರ ಮೊದಲಾದವುಗಳು ಆತನಿಗೆ ರಾಜೋಪಚಾರವನ್ನು ಮಾಡುವಂತೆ ಕಾಣಬಂದವು" ಈ ವಿವರಣೆಯನ್ನು ದೊಡ್ಡಬೆಲೆಯವರು ಸೇರಿಸಿ ಅನಂತರ ಮುಂದಿನ ಶ್ಲೋಕ (2-9)ವನ್ನು ಅನುವಾದಿಸುತ್ತಾರೆ. "ವರುಣನಿಗೆಣೆಯೆನಿಸಿದ ಮಹಾರಾಜನು ಅರಣ್ಯದ ದಾರಿಯುದ್ದಕ್ಕೂ ಬರುತ್ತಲಿರುವಾಗ ಹತ್ತಿರದಲ್ಲಿ ಹೊಗಳುಭಟ್ಟರಿರಲಿಲ್ಲ. ಹಕ್ಕಿಗಳು ದನಿಯ ನೆಪದಿಂದ ಮಹಾರಾಜನಿಗೆ ಜಯವಾಗಲಿ ಪರಾಕು ಎಂದೀ ಪ್ರಕಾರ ವೈತಾಳಿಕರ ಕೆಲಸವನ್ನು ಮಾಡುವಂತಿದ್ದವು."

18. ಶಬ್ದಾರ್ಥ - ಟಿಪ್ಪಣಿಗಳ ವಿಚಾರ

ಮೂಲಕಾವ್ಯದ ಶ್ಲೋಕ-ಸರ್ಗಗಳ ಸಂಖ್ಯೆಯನ್ನು ಅನುವಾದದ ಪುಟಗಳ ಸಂಖ್ಯೆಗೆ ಬದಲಾಗಿ ಉಲ್ಲೇಖಿಸಿ, ಶಬ್ದಾರ್ಥ ಟಿಪ್ಪಣಿಗಳಲ್ಲಿ ಬಳಸಿದೆ. ಏಕೆಂದರೆ ಮೂಲಶಬ್ದಗಳನ್ನು ಗುರುತಿಸಲು ನೆರವಾಗುತ್ತದೆ. ಅದರ ಕಡೆಗೆ ಹಸ್ತಪ್ರತಿಯ ಅಥವಾ ಅಚ್ಚಿನ ಪುಸ್ತಕದ ಪುಟಸಂಖ್ಯೆ, ಕೊಟ್ಟರೆ ಯಾವ ಮುದ್ರಣದಲ್ಲಿ ಎಂಬುದು ತಿಳಿಯುವುದಿಲ್ಲ ಮತ್ತು ಮರುಮುದ್ರಣದಲ್ಲಿ ಪುಟಸಂಖ್ಯೆ ನೀಡುವುದೂ ಕಷ್ಟವಾಗುತ್ತದೆ. ದೊಡ್ಡಬೆಲೆ ಅವರು ಸರ್ಗ ಶ್ಲೋಕಗಳ ಸಂಖ್ಯೆಗಳನ್ನು ಅಧ್ಯಾಯ ಪದ್ಯಗಳೆಂದು ಅನುವಾದಿಸಿದ್ದಾರೆ.

19. ಪುಟಸಂಖ್ಯೆಗಳ ಮಾರ್ಪಾಡು

15. ಎರಡು ಭಾಗಗಳಾಗಿ (ಭಾಗ 1 ಸರ್ಗ 1–8, ಭಾಗ–2, ಸರ್ಗ 9–19) ಪ್ರಕಟವಾದ ಪ್ರತಿಯನ್ನು ಒಟ್ಟಾಗಿ ಪ್ರಕಟಿಸಿ ಕ್ರಮವಾಗಿ ಪುಟದ ಸಂಖ್ಯೆ ಕೊಡಲಾಗಿದೆ. ಮೂಲಕೃತಿಯ ಯಥಾರ್ಥರೂಪ ಹಾಗೆಯೇ ಇದೆ. ಪ್ರಕಟಣೆಯ ದೃಷ್ಟಿಯಿಂದ ಅಲ್ಪಸ್ವಲ್ಪ ಮಾರ್ಪಾಟು ಮಾಡಲಾಗಿದೆ.

20. ಸುಭಾಷಿತಗಳ ಅಳವಡಿಕೆ

ಮೂಲದಲ್ಲಿ ಇಲ್ಲದ ಸಂಸ್ಕೃತದ ಸುಭಾಷಿತಗಳನ್ನು ಅನುವಾದದಲ್ಲಿ ಒಂದೆರಡು ಕಡೆ ಸೇರ್ಪಡೆ ಮಾಡಿದ್ದಾರೆ (ಮೂಲ ಸರ್ಗ 8–ಶ್ಲೋಕ 31 ಅನುವಾದದ ಪುಟ 102) ನಿದರ್ಶನಕ್ಕೆ ಹೇಳಬಹುದು.

ವಿದ್ಯಾವಿವಾದಾಯ ಧನಂ ಮದಾಯ
ಶಕ್ತಿಃ ಪರೇಷಾಂ ಪರಪೀಡನಾಯ
ಖಲಸ್ಯ ಸಾಧೋರ್ವಿಪರೀತಮೇತತ್
ಜ್ಞಾನಾಯ ದಾನಾಯ ಚ ಶಿಕ್ಷಣಾಯ

[ನೀಚನ ವಿದ್ಯೆಯು ವಿವಾದಕ್ಕೂ, ಹಣವು ಹೆಮ್ಮೆಗೂ, ಬಲವು ಹೆರರನ್ನು ಹಿಂಸಿಸಲಿಕ್ಕೂ ವಿನಿಯೋಗವಾಗುವುದು. ಇದು – ಸಾಧುವಿನ ವಿಷಯದಲ್ಲಿ ತಲೆಕೆಳಕಾಗುವುದು. ಹೇಗೆಂದರೆ– ಸಜ್ಜನನ ವಿದ್ಯೆಯು ಜ್ಞಾನಕ್ಕೂ ದ್ರವ್ಯವು ಕಾಲ, ದೇಶವನ್ನರಿತು ಸತ್ಪಾತ್ರದಾನಕ್ಕೂ, ಶಕ್ತಿಯು ಅಶಕ್ತರ ಸಂರಕ್ಷಣೆಗೂ ಸಾರ್ಥಕವಾಗುವುದು ಎಂಬುದಾಗಿ ಹಿರಿಯರು ಹೇಳುವ ಮಾತು ಸಟೆಯಲ್ಲ] ಏಕೆಂದರೆ, ಆ ಅಜಭೂಪಾಲನ ಧನವು ಮಾತ್ರವೇ ಪರರಿಗೆ ಉಪಕರಿಸಲು ಸಾಧಕವೆನಿಸಿದುದಾಗಿರಲಿಲ್ಲ. ಪೌರುಷವು ಅಸನ್ನರಾದವರ ಭಯವನ್ನು ಪರಿಹರಿಸಲಿಕ್ಕೆ ವಿನಿಯೋಗವಾಗುತ್ತಲಿದ್ದಿತು. ಶಾಸ್ತ್ರಜ್ಞಾನವು– ವಿದ್ಯಾವಂತರನ್ನು ಸತ್ಕರಿಸಲಿಕ್ಕೇ ಉಪಯೋಗಿಸತ್ತಲಿದ್ದಿತು. ಹೀಗೆ ಆತನ ಸುಗುಣಗಳೆಲ್ಲವೂ ಪರೋಪಕೃತಿಗಾಗಿಯೇ ವೆಚ್ಚವಾಗುತ್ತಲಿದ್ದವು.

21. ಭಾಷಾವೈಖರಿ

ದೊಡ್ಡಬೆಲೆಯವರು ಗ್ರಂಥದುದ್ದಕ್ಕೂ ಹೊಸಗನ್ನಡವನ್ನು ಬಳಸಿದ್ದರೂ ಅಲ್ಲಲ್ಲಿ ಹಳಗನ್ನಡ ಶೈಲಿಯ ಪದಪುಂಜಗಳನ್ನು ಬಳಸುತ್ತಾರೆ. ಉದಾಹರಣೆಗೆ ಪುಟ 66 (ಮೂಲಶ್ಲೋಕ 5– ಶ್ಲೋಕ 75)ರ ಈ ವಾಕ್ಯವನ್ನು ಗಮನಿಸಬಹುದು– "ಇಂತು ಬಾಂದೊರೆಯ ಪುಳಿನದೊಳು ಸವಳಿಸಿದ್ದ ಸುಪ್ರತೀಕವೆಂಬ ಸುರಗಜವು

ಮದವೇರಿದಂಚೆಗಳ ನಿನದಗಳಿಂದೆಳ್ಚರಂಗೊಂಬಂತೆ ರಘುನಂದನು ವಂದಿಪುತ್ರರಭಿನಂದನ ವಚನಗಳಿಂದೆ ಸುಪ್ಪತ್ತಿಗೆಯಿಂದುಪ್ಪವಳಿಸಿದನು"

22. ಕ್ರಿಯಾವಾಚಕಗಳ ರೂಪಗಳು

ದೊಡ್ಡಬೆಲೆ ಅವರ ಅನುವಾದದ ಭಾಷಾವೈಖರಿಯಲ್ಲಿ ಎದ್ದು ಕಾಣುವ ಅಂಶಗಳಲ್ಲಿ ಒಂದೆಂದರೆ, ಕ್ರಿಯಾಪದಗಳನ್ನು ಬಳಸುವಾಗ ಹೊಸಗನ್ನಡದ ದ್ವಿತೀಯ ವಿಭಕ್ತಿ ಅನ್ನು ಪ್ರತ್ಯಯಕ್ಕೆ ಬದಲಾಗಿ ಹಳಗನ್ನಡದ ಅಂ ಪ್ರತ್ಯಯವನ್ನು ಬಳಸುತ್ತಾರೆ. ಪುರವಂ (ಪುರವನ್ನು) ನಿನದಗಳಂ (ನಿನದಗಳನ್ನು) ಇತ್ಯಾದಿ

ಪೂರ್ಣ ಹಾಗೂ ಅಪೂರ್ಣ ಕ್ರಿಯಾಪದಗಳನ್ನು ಬಳಸುವಾಗ ವರ್ತಮಾನ ಕಾಲದ ಉತ್ತ ಇದ್ದ ಇತ್ಯಾದಿ ಪ್ರತ್ಯಯಗಳಿಗೆ ಉತ ಇದ ರೂಪಗಳನ್ನು ಅನುವಾದದ ಉದ್ದಕ್ಕೂ ಬಳಸುತ್ತಾರೆ. ಹೆಜ್ಜೆ ಹೆಜ್ಜೆಗೂ ಬಳಸುವ ಈ ರೂಪಗಳ ಪದಗಳನ್ನು ಕಂಡಾಗ ಇವು ಅಚ್ಚಿನ ದೋಷಗಳೆಂದು ಎನಿಸುವುದಿಲ್ಲ ಆ ಕಾಲದ ಎಂದರೆ ಶತಮಾನದ ಹಿಂದಿನ (20ನೆಯ ಶತಮಾನದ ಪ್ರಾರಂಭದ) ಗದ್ಯಲೇಖಕರ ಶೈಲಿಯೆಂದು ಭಾವಿಸಬೇಕಾಗಿದೆ.

ಉದಾ: ನುಡಿಯತಲಿದೆ, ತಂದೋಡಿಸುತ ಇದಾರೆಂದು

ನೋಡಿಕೊಳುತ ತಹತಹಪಡುತ. . .ಇತ್ಯಾದಿ

ಅಂತೆಯೇ ಅಂತಪ್ಪ ಇಂತಪ್ಪ ಎಂಬ ಹಳಗನ್ನಡ ಪದರೂಪಗಳನ್ನು ಬಳಸಿದ್ದಾರೆ

ಇವುಗಳನ್ನೆಲ್ಲಾ ಈ ಕಾಲದ ಓದುಗರಿಗಾಗಿ ನುಡಿಯುತ್ತಲಿದೆ. ತರಿದೋಡಿಸುತ್ತ ಇದ್ದಾರೆ. ಅಂತಹ ಇಂತಹ ಇತ್ಯಾದಿಯಾಗಿ ಈ ಕಾಲದ ಶೈಲಿಗೆ ತಕ್ಕಂತೆ ಮಾರ್ಪಡಿಸಿದೆ.

ಈ ರೀತಿ ಬಳಕೆಗೆ ಬಹುಶಃ ಆಗ ಕನ್ನಡ ಕಲಿಸುವವರೇ ಈ ರೀತಿ ರೂಪಗಳನ್ನು ಬಳಸುತ್ತಿದ್ದರು ಎನಿಸುತ್ತದೆ. ಏಕೆಂದರೆ 100 ವರ್ಷಗಳ ಹಿಂದೆ ಮರಳಿನಲ್ಲಿ ಅಕ್ಷರಾಭ್ಯಾಸ ಮಾಡುತ್ತಿದ್ದ ಕಾಲದ ಚ. ವಾಸುದೇವಯ್ಯನವರ ಕನ್ನಡ ಬಾಲಬೋಧೆಯಲ್ಲಿ ಪಾಠ 37ರಲ್ಲಿ ಆಡುತೇನೆ ಓದುತಾಳೆ ಇತ್ಯಾದಿ ರೂಪಗಳ ಪದಗಳನ್ನು ಬಳಸಿದ್ದಾರೆ.

23. ಪಾರಿಭಾಷಿಕ ಪದಗಳ ಬಳಕೆ

ಕಾಳಿದಾಸ ರಘುವಂಶದಲ್ಲಿ ಹಲವಾರು ಕಡೆ ಹತ್ತಾರು ಪಾರಿಭಾಷಿಕ ಪದಗಳನ್ನು ಬಳಸಿದ್ದಾರೆ. ಅವುಗಳನ್ನು ಹಲವಾರೆಡೆ ಹಾಗೆಯೇ ಅನುವಾದದಲ್ಲಿ

ಉಳಿಸಿಕೊಂಡಿದ್ದಾರೆ. ಉದಾಹರಣೆಗೆ ಔರ್ಧ್ವ ದೈಹಿಕಕರ್ಮ (ಪು 101 ಮೂಲಶ್ಲೋಕ 26 ಸರ್ಗ 8) ಅಂತ್ಯೇಷ್ಟಿ (ಸರ್ಗ 8, ಶ್ಲೋಕ 25 ಪುಟ 101) ಇತ್ಯಾದಿ ಕೆಲವೆಡೆ ಪಾರಿಭಾಷಿಕಪದವನ್ನು ವಿವರಿಸುತ್ತ ಬಳಸಿದ್ದಾರೆ. ಉದಾ: (ಸರ್ಗ 3–ಶ್ಲೋಕ 52 ಪುಟ 40) ಆಲೀಢವೆಂಬ ಶರಸಂಧಾನದ ಭಂಗಿಯನ್ನು ಅನುವಾದಿಸಿರುವುದು ಹೀಗೆ: "ಬಲಗಾಲಿನ ಮಂಡಿಯನ್ನು ಮುಂದಕ್ಕೆ ನೀಡಿ, ಎಡಗಾಲನ್ನು ಹಿಂದಕ್ಕೆ ಸರಿಸಿ ಮಂಡಿಯನ್ನು ತಗ್ಗಿಸಿ ಬಿಲ್ಲಾಳು ಕಾಳಗದಲ್ಲಿ ನಿಲ್ಲುವಾಲೀಢವೆಂಬ ಮೋಡಿಯ (ಭಂಗಿಯ) ಒಡಲಿನಿಂದ ಪಿನಾಕಪಾಣಿಯಂತೆ ಬೆಡಗುಗೊಂಡು ನಿಂತನು"

24. ಸಂಬೋಧನಾ ವಿಭಕ್ತಿ ಬಳಕೆ

ಮೂಲದಲ್ಲಿಲ್ಲದ ಸಮಯೋಚಿತ ಸಂಬೋಧನಾಪದಗಳನ್ನು ಕಾವ್ಯಮಯವಾಗಿ ಬಳಸಿದ್ದಾರೆ. ಈ ಪದಗಳು ಮೂಲದಲ್ಲಿಲ್ಲ.

ಉದಾ: ಇಂದುಮತಿಯನ್ನು ಉದ್ದೇಶಿಸಿ ಹೇಳಿದ ಪದಗಳನ್ನು ಗಮನಿಸಬಹುದು "ಪ್ರಿಯವಲ್ಲಭೆ, ಅಯಿಸುಂದರಿ, ಎಲೆ ಪ್ರಿಯಳೆ, ಎಲೆ ದಯಿತೆ, ಎಲೆ ಕಿನ್ನರಕಂಠಿ, ಎಲೆ ಸಹೃದಯೆ, ಎಲೆ ಭಾಮಿನಿ, ಓ ನನ್ನ ಸರ್ವಸ್ವವೇ, ಎಲೆ ಮದಿರಲೋಚನೆ, ಎಲೆ ಸುಮಂಗಲಿ. . ."

25. ಪೂರ್ವಕಥೆಯ ಉಲ್ಲೇಖ

ಕೆಲವು ಕಡೆ ಮಾತ್ರ ಪೂರ್ವಕಥೆ ವಿವರಣೆಗಳನ್ನು ಅಡಿಟಿಪ್ಪಣಿಯಾಗಿ ಕೊಟ್ಟಿದ್ದಾರೆ. ಉದಾಹರಣೆಗೆ ಭಾಗ 2 (ಸಂಧಿ 10–13 ಮೂಲ) ಅನುವಾದ ಪುಟ 17ರಕ್ಕು ". . . ಅಂಜಲೀಬದ್ಧನಾಗಿ ನಿಂತಿರುವ ಗರುತ್ಮಂತನ ಸೇವೆಯನ್ನು (ವಿಷ್ಣು) ಕೈಗೊಳ್ಳುತ್ತಿದ್ದನು ಎಂಬಲ್ಲಿ ಗರುಡನ ಗರ್ವಭಂಗದ ಕಥೆಯನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ.

(ಭಾಗ 2 ಪುಟ 18 ಮೂಲ 10–19)ರಲ್ಲಿ 6 ಮಂದಿ ನಿತ್ಯದುಃಖಿಗಳು ಯಾರು ಎಂದು ವಿವರಣೆಯನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ. ಇಂಥ ವಿವರಣೆ, ಪೂರ್ವಕಥೆಗಳನ್ನು ಅನುಬಂಧದಲ್ಲಿ ಟಿಪ್ಪಣಿಗಳು ವಿಭಾಗಕ್ಕೆ ವರ್ಗಾಯಿಸಿದೆ.

26. ಪ್ರತಿ ಪುಟದ ಮೇಲಣ ಶೀರ್ಷಿಕೆ

ಮೊದಲು ಈ ಅನುವಾದವು ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಪ್ರಕಟಿಸುತ್ತಿದ್ದ ಶ್ರೀಶಾರದಾ ಮಾಸಪತ್ರಿಕೆಯಲ್ಲಿ ಹಲವು ಸಂಚಿಕೆಗಳಾಗಿ ಪ್ರಕಟವಾಗಿದೆ. ಅನಂತರ ಗ್ರಂಥರೂಪದಲ್ಲಿ ಬಂದಿದೆ. ಆದಕಾರಣ 1913ರ ಮುದ್ರಣದಲ್ಲಿ ಪ್ರತಿ ಎಡಪುಟದ

ಮೇಲ್ಭಾಗದಲ್ಲಿ ಶ್ರೀ ಶಾರದಾ ಎಂದಿದೆ. ಅದನ್ನು ಇಲ್ಲಿ ಬಿಡಲಾಗಿದೆ. 2ನೆಯ ಮುದ್ರಣದಲ್ಲಿ ಅದನ್ನು ತೆಗೆದುಹಾಕಿ ಪ್ರತಿಪುಟದ ಮೇಲ್ಭಾಗದಲ್ಲಿ ರಘುಕುಲ ಚರಿತಂ ಎಂದು ಅಚ್ಚಿಸಿದೆ.

27. ಅನುವಾದದ ರೀತಿ – ಎ ಆರ್ ಕೃ ಮಾದರಿ

ಹೀಗೆ ಗೌಣವಾಗಿ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಂಡಿದ್ದರೂ ಕಾಳಿದಾಸನು ಬರೆದ ರಘುವಂಶ ಎಂಥ ಕೃತಿ ಎಂಬುದನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ಈ ಸಂದರ್ಭದಲ್ಲಿ ರಘುವಂಶದ ಹಿರಿಮೆಯನ್ನು ಕುರಿತು ಎ.ಆರ್. ಕೃ ಹೇಳಿದ ಮಾತುಗಳು ಮನನೀಯವಾಗಿವೆ. (ಕನ್ನಡ ರಘುವಂಶ ಎಸ್‌ವಿಪಿ ಮುನ್ನುಡಿ)

"ಕಾಳಿದಾಸನು ಎಷ್ಟು ಸರಳವಾಗಿ ಬರೆಯುತ್ತಾನೆಂದರೆ ಇಂದಿಗೂ ಅವನ ರಘುವಂಶವನ್ನು ಬಾಲಪಾಠವಾಗಿ ಹೇಳಿಕೊಡುತ್ತಾರೆ. ಮಗುವಿಗೆ ಹಸುವಿನ ಹಾಲನ್ನು ಕುಡಿಸುವಂತೆ ಸರಳವಾದುದ್ದಕ್ಕೂ ಸುಲಭವಾದುದ್ದಕ್ಕೂ ಎಲ್ಲರಿಂದಲೂ ಯಾವಾಗಲೂ ಗೌರವ ಸಿಗುವುದಿಲ್ಲ. ಮೋದಕಪ್ರಿಯನು ಮೆಚ್ಚದಿದ್ದ ಮಾತ್ರಕ್ಕೆ ಹಾಲಿಗೂ ಹಸುವಿಗೂ ಬೆಲೆ ಕಡಿಮೆಯಾದೀತೇ? ಹಾಲು ಬಾಲರಿಗೂ ಬೇಕು, ವೃದ್ಧರಿಗೂ ಬೇಕು.

ಇಂಥ ರಘುವಂಶ ಕಾವ್ಯವನ್ನು ಕನ್ನಡಕ್ಕೆ ಹೇಗೆ ಅನುವಾದಿಸಬೇಕಾದದ್ದು ಎಂಬುದನ್ನು ಎ.ಆರ್. ಕೃ ಹೇಳಿರುವುದು ಎಲ್ಲ ಭಾಷಾಂತರಕಾರರಿಗೂ ಅನ್ವಯಿಸುವ ಸಾರ್ವಕಾಲಿಕ ನಿಯಮವಾಗಿದೆ. ಆ ಮಾತುಗಳು ಹೀಗಿವೆ :

"ಮೂಲವನ್ನು ಓದಬಲ್ಲ ಪ್ರಾಪ್ತಿ ಎಲ್ಲರಿಗೂ ಇರುವುದಿಲ್ಲ. ಅಂಥವರು ಭಾಷಾಂತರದಿಂದ ಆದಷ್ಟು ತೃಪ್ತಿ ಹೊಂದಬೇಕು. ಸಂತೋಷ ಪಡೆಯಬೇಕು. ಉತ್ತಮ ಭಾಷಾಂತರಕಾರರು ಎರಡು ಭಾಷೆಗಳಲ್ಲೂ ಪಂಡಿತರಾಗಿದ್ದು, ರಸಿಕರಾಗಿದ್ದು, ಅವುಗಳ ಜೀವಾಳವನ್ನು ಅರಿತವರಾಗಿದ್ದು, ಮೂಲದ ಬಣ್ಣ, ಛಾಯೆ, ಕಾಂತಿ ಕೆಡದಂತೆ ಅಥವಾ ಆದಷ್ಟು ಹೆಚ್ಚು ಪ್ರಮಾಣ ಭಾಷಾಂತರದಲ್ಲಿಯೂ ಬರುವಂತೆ ತರಬಲ್ಲವರಾಗಿರಬೇಕು"

28. ಯಶಸ್ವೀ ಅನುವಾದ

ಈ ಎಲ್ಲ ಮಾತುಗಳೂ ದೊಡ್ಡಬೆಲೆ ಅವರಿಗೆ ಚೆನ್ನಾಗಿ ಅನ್ವಯಿಸುತ್ತೆ. "ಉಭಯ ಭಾಷಾ ವಿದ್ವಾಂಸರಾದ ದೊಡ್ಡಬೆಲೆ ಅವರು ರಘುಕುಲ ಚರಿತವನ್ನು ಅನುವಾದಿಸಲು ಹೇಳಿರುವ ಕಾರಣ ಇದು. "ಈ ಕಾವ್ಯದ ಕಥಾಸಾರ ಬಹು ರಮಣೀಯವಾಗಿದೆ. ಸಂಸ್ಕೃತವನ್ನರಿಯದ ನಮ್ಮ ಕನ್ನಡಿಗರಿಗೆ ಕೈಲಾದಮಟ್ಟಿಗೆ ಸುಲಭವಾಗಿ ತಿಳಿಸಬೇಕು

ಎಂಬ ಬಯಕೆಯಿಂದ ಕಾಳಿದಾಸನ ಕಾವ್ಯಕ್ರಮವನ್ನು ಅನುಸರಿಸಿ, ಈ ಕಥೆಯಲ್ಲಿ ಬರೆಯಲು ಪ್ರಯತ್ನಿಸಿದೆನು" ಈ ಪ್ರಯತ್ನದಲ್ಲಿ ಅವರು ಯಶಸ್ವಿಗಳಾಗಿರುವುದು ನಿಸ್ಸಂದೇಹ.

ಕೃತಜ್ಞತೆಗಳು

ದೊಡ್ಡಬೆಲೆ ನಾರಾಯಣಶಾಸ್ತ್ರಿಗಳ ಜೀವನ ಮತ್ತು ಕೃತಿಗಳ ಬಗ್ಗೆ ಆಸಕ್ತಿ ತಳೆಯಲು ಆ ಬಗೆಗೆ ಮಾಹಿತಿಯನ್ನು ಪುಸ್ತಕಗಳನ್ನು ಕಲೆಹಾಕಲು ಪ್ರೇರಕರಾದವರು ಬಿಎಂಶ್ರೀ ಪ್ರತಿಷ್ಠಾನದ ಆಗಿನ ಅಧ್ಯಕ್ಷರಾಗಿದ್ದ ಎನ್. ಬಸವರಾಧ್ಯರು. ಕನ್ನಡ ನಿಘಂಟಿಗೆ ಜೀವಮಾನವೆಲ್ಲ ಶ್ರಮಿಸಿದವರು. ದೊಡ್ಡಬೆಲೆ ಅವರ ಬಗ್ಗೆ ಉಪನ್ಯಾಸನೀಡಲು ಅವಕಾಶನೀಡಿ ಲೇಖನ ಬರೆಯಲು ಹುರಿದುಂಬಿಸಿದರು. ಹೀಗಾಗಿ ಅವರ ಜೀವನ, ಕೃತಿಗಳ ಅನ್ವೇಷಣೆಮಾಡಲು ಹೊರಟಾಗ ಡಿವಿಜಿ ಅವರು ಜ್ಞಾಪಕಚಿತ್ರಶಾಲೆಯಲ್ಲಿ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳನ್ನು ಕುರಿತ ಲೇಖನ ಮತ್ತು ದೊಡ್ಡಬೆಲೆಯವರ ಮೊಮ್ಮಗ ಲಕ್ಷ್ಮಣರ ಭೇಟಿ ಸ್ಫೂರ್ತಿ ನೀಡಿತು. ಲಕ್ಷ್ಮಣರಂತೂ ಅಪೂರ್ವ ಮಾಹಿತಿ ನೀಡಿದರು. ಆದರೆ ಅವರನ್ನು ಭೇಟಿ ಆದದ್ದು ಒಂದೇಸಲ ಮತ್ತೊಮ್ಮೆ ನೋಡಲಾಗಲಿಲ್ಲ. ಅವರ ಬಳಿ ಅವರ ತಾತನ ಬಗ್ಗೆ ಬೇಕಾದಷ್ಟು ಮಾಹಿತಿಗಳಿದ್ದವು. ಅವರು ತಿಳಿಸಿದ ಒಂದೊಂದು ಸಂಗತಿಯೂ ರೋಚಕವಾಗಿತ್ತು. ದೊಡ್ಡಬೆಲೆ ಅವರ ಬಗ್ಗೆ ಇನ್ನೊಬ್ಬ ಮಗ ನಾರಾಯಣಶಾಸ್ತ್ರಿ ಮತ್ತು ಅವರ ನಿಕಟ ಪರಿಚಯವಿದ್ದ ಐಬಿಎಚ್ ಪ್ರಕಾಶನದ ಸಂಜಯ ಅಡಿಗರು ನೀಡಿದ ಭಾವಚಿತ್ರ ಮತ್ತು ಮಾಹಿತಿಗಳು ಉಪಯುಕ್ತವಾದವು ಇವರಿಗೆಲ್ಲಾ ನಾನು ಕೃತಜ್ಞನಾಗಿದ್ದೇನೆ.

ನನ್ನಲ್ಲಿ ಇದ್ದ 2ನೇ ಮುದ್ರಣದ ಪ್ರತಿಯ ಜತೆಗೆ ದೊಡ್ಡಬೆಲೆ ಅವರ ರಘುಕುಲ ಚರಿತೆಯ ಮೊದಲಮುದ್ರಣದ 2 ಭಾಗಗಳನ್ನು ದೊರಕಿಸಿಕೊಟ್ಟು ನೆರವಾದವರು ತರುಣ ವಿದ್ವಾಂಸರಾದ ಎಸ್. ಕಾರ್ತಿಕ್ ಅವರು. ದೊಡ್ಡಬೆಲೆ ಅವರ ಕೃತಿಗಳ ಬಗ್ಗೆ ಕೆಲವು ಮಾಹಿತಿಗಳನ್ನು ನೀಡಿದ್ದಾರೆ. ಅವರಿಗೆ ನನ್ನ ಅಭಿನಂದನೆಗಳು. ಪರಿಷ್ಕೃತ ಮುದ್ರಣವನ್ನು ಹೊರತರುವಲ್ಲಿ ಡಿಟಿಪಿ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟ ಕನ್ನಡ ಗಣಕ ಪರಿಷತ್ತಿನ ಜಿ.ಎನ್. ನರಸಿಂಹಮೂರ್ತಿಯವರ ನೆರವು ದೊಡ್ಡದು. ಕೇವಲ ಡಿಟಿಪಿ ಮಾಡಿಕೊಡದೆ ಕೃತಿಯನ್ನು ಅಮೂಲಾಗ್ರವಾಗಿ ಓದಿ ಉತ್ತಮ ಸಲಹೆಗಳನ್ನು ನೀಡಿದ್ದಾರೆ. ಅವರಿಗೆ ವಂದನೆಗಳು.

ಇನ್ನು ರಘುಕುಲ ಚರಿತೆಯ ಗ್ರಂಥಸಂಪಾದನೆಯಲ್ಲಿ ತೊಡಗಿದಾಗ ಪ್ರೋತ್ಸಾಹಿಸಿದ ಪತ್ನಿ ಎಂ.ಆರ್. ಲಕ್ಷ್ಮೀದೇವಿ, ಅಮೆರಿಕೆಯಲ್ಲಿರುವ ಮಗಳು ಡಾ. ಕ್ಷಮಾ ಅಶ್ವತ್ಥ ಇಬ್ಬರನ್ನು ನೆನೆಯುವುದು ನನ್ನ ಕರ್ತವ್ಯವಾಗಿದೆ.

ರಘುವಂಶದ ಮೂಲಕೃತಿಯನ್ನು ಸಾಕಷ್ಟು ವಿವರವಾಗಿ ವಿವರಿಸಿರುವ ಗ್ರಂಥ ಬಿ. ಗೋಪಾಲರಾಯರು ಸಮಗ್ರ ರಘುವಂಶ ಮಹಾಕಾವ್ಯದ ಅನುವಾದಕರು, ಎಸ್.ವಿ. ಪರಮೇಶ್ವರಭಟ್ಟರು (ಸಮಗ್ರ ಕನ್ನಡ ಕಾಳಿದಾಸ ಸಂಪುಟ ಹೊರತಂದವರು. ಸಚ್ಚಿದಾನಂದೇಂದ್ರ ಸ್ವಾಮಿಗಳ 1 ಮತ್ತು 10ನೇ ಸರ್ಗಗಳ ಟೀಕೆ, ಕರ್ಮರಕರ್ ಅವರ ರಘುವಂಶದ ಟಿಪ್ಪಣಿಗಳು (ಇಂಗ್ಲಿಷ್). ಕಾಳಿದಾಸನ ಕೃತಿಗಳ ಬಗ್ಗೆ ಮಹಾಪ್ರಬಂಧ ರಚಿಸಿದ ಶ್ರೀರಾಮಭಟ್ಟರ ಲೇಖನಗಳು, ಲಕ್ಷ್ಮೀನರಸಿಂಹಯ್ಯನವರ ಕಾಳಿದಾಸ ಗ್ರಂಥ ಎ.ಆರ್. ಕೃ ಅವರ ಸಂಸ್ಕೃತನಾಟಕ 'ಕನ್ನಡ ರಘುವಂಶಕ್ಕೆ ಬರೆದ ಮುನ್ನುಡಿ" ಮುಂತಾದ ಕೃತಿಗಳ ಗ್ರಂಥಕರ್ತರಿಗೆ ನಾನು ಋಣಿಯಾಗಿದ್ದೇನೆ (ಗ್ರಂಥವಿವರಗಳಿಗೆ ಅನುಬಂಧ ನೋಡಿ).

1911–1913ರಲ್ಲಿ ಮೊದಲಬಾರಿಗೆ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳ ರಘುವಂಶದ ಗದ್ಯಾನುವಾದ ರಘುಕುಲ ಚರಿತ ಪ್ರಕಟವಾಯಿತು. ಸುಮಾರು 110 ವರ್ಷಗಳ ಹಿಂದಿನ ಶ್ರೇಷ್ಠ ಗದ್ಯಾನುವಾದವೊಂದನ್ನು ಉಭಯ ಭಾಷಾವಿದ್ವಾಂಸರಾಗಿ 60ಕ್ಕೂ ಹೆಚ್ಚಿನ ಸಂಸ್ಕೃತ ಕೃತಿಗಳನ್ನು ಕನ್ನಡಕ್ಕೆ ತಂದ ದೊಡ್ಡಬೆಲೆಯವರ ರಘುವಂಶ ಅನುವಾದದ ಕೃತಿಯನ್ನು ಮತ್ತೆ ಬೆಳಕಿಗೆ ತಂದು ಕನ್ನಡಿಗರಿಗೆ ದೊರಕಿಸಿಕೊಡಲು ಅವಕಾಶ ಒದಗಿಸಿದ ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಅಜಕ್ಕಳ ಗಿರೀಶಭಟ್ ಅವರಿಗೂ ಅವರ ಕಛೇರಿ ಸಿಬ್ಬಂದಿ, ಅಧಿಕಾರವರ್ಗಕ್ಕೂ ಕೃತಜ್ಞನಾಗಿದ್ದೇನೆ. ಅಚ್ಚುಕಟ್ಟಾಗಿ ವಿನ್ಯಾಸಗೊಳಿಸಿ ಅಚ್ಚುಮಾಡಿದ ಮುದ್ರಕರಿಗೂ ನನ್ನ ವಂದನೆಗಳು.

ನೂರು ವರ್ಷಗಳ ಹಿಂದೆ ಪ್ರಕಟವಾಗಿ ಜನಾದರಣೀಯವಾದ ಕಾಳಿದಾಸ ಮಹಾಕವಿಯ ರಘುವಂಶ ಮಹಾಕಾವ್ಯದ ಸುಂದರ ಗದ್ಯಾನುವಾದ ಕೃತಿಯನ್ನು ರಚಿಸಿದ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳ ಕನ್ನಡಕ್ಕೆ ಕೊಡುಗೆಗಳಾದ ಇತರ ಶ್ರೇಷ್ಠಾನುವಾದಗಳು ಮರುಮುದ್ರಣವಾಗಲು ಈ ಪ್ರಕಟಣೆ ದಿಕ್ಸೂಚಿಯಾಗುವಂತೆ ಮಾಡಿದ ಅಧ್ಯಕ್ಷರಾದ ಡಾ. ಅಜಕ್ಕಳ ಗಿರೀಶಭಟ್ಟರಿಗೆ ಮತ್ತೊಮ್ಮೆ ವಂದಿಸುತ್ತೇನೆ.

ಬೆಂಗಳೂರು — ಜಿ ಅಶ್ವತ್ಥನಾರಾಯಣ

14–9–2021 — (ಸಂಪಾದಕ)

ಪರಿವಿಡಿ

10. ಅನುಬಂಧಗಳು

ರಘುಕುಲ ಚರಿತಂ

ಮೊದಲನೆಯ ಅಧ್ಯಾಯ
ವಶಿಷ್ಠಾಶ್ರಮಗಮನ

ಸೂಚನೆ ॥ ವೈವಸ್ವತ ಕುಲದೇಳ್ಗೆಗೆ
ಭೂವಲ್ಲಭನಾ ದಿಲೀಪನರಸಿತಿಯಿಂದಂ ।
ಭಾವಿಸಿ ಗುರುವಂ ವಿಪಿನದೆ ॥
ಸೇವಿಸೆ ತಾ ಮುನಿಯು ಸುರಭಿಯಂ ಪೊರಮಟ್ಟಂ ॥

ಕಂದ॥ ವಾಗರ್ಥಂಗಳ ತೆರದಿಂ ।
ದಾಗಳುಮೊಡವೆರದು ತೋರ್ಪುಮಾ ಪರಮೇಶ ।
ಗೀರ್ಗಳೆ ವಿಶ್ವಪಿತರ್ಗಂ ॥
ವಾಗರ್ಥ ಜ್ಞಾನಕಾಗಿಯಭಿನಮಿಸಿದಪೆಂ ॥

– *ಕಾಳಿದಾಸವಾಙ್ಮುಖಂ*–

ಸೂರ್ಯನು ಮೂಲಪುರುಷನಾಗಿರುವ ರಘುಕುಲವು– ಬಹು ವಿಸ್ತಾರವಾಗಿದೆ, ಕೆಲವು ವಿಷಯಗಳನ್ನು ಮಾತ್ರವೇ ಬಲ್ಲ ನನ್ನ ಬುದ್ಧಿಯು– ಆ ವಂಶದರಸರ ಚರಿತೆಯನ್ನು ವಿವರಿಸಿ ಹೇಳುವಷ್ಟು ಶಕ್ತವಾಗಿಲ್ಲ, ಹಾಗಿದ್ದರೂ ಆ ಕೆಲಸದಲ್ಲಿ ನಾನು ಉದ್ಯೋಗಿಸಿರುವುದು–ಸಣ್ಣದೋಣಿಯಿಂದ ದೊಡ್ಡ ಕಡಲನ್ನು ದಾಟಲಿಕ್ಕೆ ಪ್ರಯತ್ನಿಸುವಂತಾಗಿದೆ. ಈ ಮಹಾಕಾರ್ಯವನ್ನು ಮಹಾಕವಿಗಳು ಮಾಡಬೇಕು. ಅಲ್ಪಬುದ್ಧಿಯುಳ್ಳ ಈ ನಾನು–ಅವರ ಹೆಸರುವಾಸಿಯನ್ನು ಗಳಿಸಬೇಕೆಂದು ಬಯಸಿ, ಕೈಹಾಕುತ್ತಿರುವುದನ್ನು ನೋಡಿದರೆ, ಎತ್ತರವಾದ ಮನುಷ್ಯನ ಕೈಗೆ ಸಿಕ್ಕಬಹುದಾಗಿರುವ

ಗಿಡದಲ್ಲಿನ ಹಣ್ಣಿಗೆ ಆಶೆಪಟ್ಟು, ಕಯ್ಯನೆತ್ತಿದ ಗುಜ್ಜಾರಿಯಂತೆ ಜನರ ನಗೆಗೀಡಾಗುವುದೆಂದು ಕಾಣಬರುತ್ತದೆ.

ಹಾಗಾದರೆ–ಅಂತಹ ಕೈಲಾಗದ ಕೆಲಸಕ್ಕೆ ಏಕೆ ಪ್ರಯತ್ನಿಸಬೇಕು? ಸುಮ್ಮನಿರಬಹುದಲ್ಲ, ಎನ್ನಬಹುದು, ಆದರೆ–ವಜ್ರದ ಬೈರಿಗೆಯಿಂದ ರತ್ನವನ್ನು ಕೊರೆದರೆ ಆ ತೂಬಿನಲ್ಲಿ ದಾರವು–ಒಳಹೊಗಲು ದಾರಿಯುಂಟಷ್ಟೆ? ಹಾಗೆಯೇ, ಪೂರ್ವಿಕರಾದ ವಾಲ್ಮೀಕಿ ಮುಂತಾದ ಮಹಾಕವಿಗಳು – ಆ ರಘುಕುಲದರಸರ ಚರಿತೆಯನ್ನು ಸ್ವಲ್ಪಮಟ್ಟಿಗೆ ವಿವರಿಸಿ, ದಾರಿಯನ್ನು ಕಲ್ಪಿಸಿ (ತೋರಿ) ಇದ್ದಾರೆ. ನಾನೂ ಅದೇ ಹಾದಿಯನ್ನು ಹಿಡಿದು ಮುಂದುವರಿಯಲು ಅವಕಾಶವುಂಟು, ಅದರಿಂದ ಆ ಕೆಲಸವನ್ನು ಕೈಗೊಂಡಿರುವೆನು.

ರಘುಕುಲದರಸರು ಸಾಮಾನ್ಯರಲ್ಲ–ಹುಟ್ಟಿದಂದಿನಿಂದಲೂ ಬಹುಪವಿತ್ರರಾದವರು, ಹಿಡಿದ ಕೆಲಸವು ಕೈಗೂಡುವವರೆಗೂ ಮಾಡಿ, ಮುಗಿಸತಕ್ಕವರಲ್ಲದೆ ನಡುವೆ ಅಳುಕಿನಿಂದ ಕೈಬಿಡತಕ್ಕವರಲ್ಲ, ನಾಲ್ಕು ಕಡಲುಗಳ ನಡುವೆ ಇರುವ ಪೊಡವಿಯ ಒಡೆತನವೆಲ್ಲ ಅವರದೇ ಅಲ್ಲದೆ ಬೇರೊಬ್ಬರದಲ್ಲ. ಒಳ್ಗಜ್ಜಗಳನ್ನೆಸಗಿ ಆರ್ಜಿಸಿದ ಧರ್ಮವೆಂಬ ತೇರನ್ನೇರಿ, ಸ್ವರ್ಗಕ್ಕೆ ತೆರಳುವಾಗ ಅವರ ಹಾದಿಗೆ ಅಡ್ಡಿಯೇ ಇಲ್ಲ. ವಿಧಿಯನ್ನನುಸರಿಸಿಯೇ ಯಜ್ಞ ಯಾಗಾದಿಗಳನ್ನು ಮಾಡುತ್ತಲಿದ್ದವರು, ಅವರ ಬಳಿಗೆ ಬಂದ ಯಾಚಕರು ತಮ್ಮ ಬಯಕೆಗೆ ಮೀರಿದ ಫಲವನ್ನು ಈಡೇರಿಸಿಕೊಂಡು ತೆರಳುತ್ತಲಿದ್ದರಲ್ಲದೆ ಕೊರತೆಯಿಂದ ಹಿಂದಿರುಗುತ್ತಲಿರಲಿಲ್ಲ. ಅವರ ಆಳ್ವಿಕೆಗೊಳಪಟ್ಟ ಪ್ರಜೆಗಳಲ್ಲಿ ಅಪರಾಧಿಗಳು ತಮ್ಮ ತಪ್ಪಿತಕ್ಕೆ ತಕ್ಕದಂಡನೆಯನ್ನು ಪಡೆಯುತ್ತಲಿದ್ದರು. ಆ ಪೊಡವಿಯಾಣ್ಮರು–ಕಾಲವನ್ನರಿತು ಎಚ್ಚರದಪ್ಪದೆ ಹಂಚಿಕೆಯಿಂದ ಕೆಲಸಗಳನ್ನು ಮಾಡುತ್ತಲಿರುವರಲ್ಲದೆ, ಸೋಮಾರಿಗಳಾಗಿಯಾಗಲಿ, ಮದೋನ್ಮತ್ತರಾಗಿಯಾಗಲಿ ಇದ್ದವರಲ್ಲ.

ಇಂಥಾ ಮನುವಂಶದ ಮಹಾರಾಜರಲ್ಲಿ–ದೇವತಾರಾಧನೆ, ಅತಿಥಿಸತ್ಕಾರ, ಶಿಕ್ಷಣಕ್ರಮ, ಪ್ರಜಾಪಾಲನ ಪರಿಪಾಟಿ ಎಂಬಿವು– ಬಲು ಅಚ್ಚುಕಟ್ಟಿನಿಂದ ನೆಲೆಗೊಂಡು ಹೆಚ್ಚಳಗೊಳಿಸುತ್ತಲಿದ್ದುವು. ಆ ನರನಾಥರು ಗಳಿಸಿದ ಹಣವೆಲ್ಲ ಸತ್ಪಾತ್ರದಲ್ಲಿ ವಿನಿಯೋಗವಾಗುತ್ತಲಿದ್ದಿತಲ್ಲದೆ ದುರ್ಮಾರ್ಗದಲ್ಲಿ ವೆಚ್ಚವಾಗುತ್ತಲಿರಲಿಲ್ಲ. ಸತ್ಯಸಂರಕ್ಷಣೆಗಾಗಿ ಮಿತಭಾಷಣವು ಅವರಲ್ಲಿ ನೆಲೆಗೊಂಡಿದ್ದಿತಲ್ಲದೆ, ಹೆಮ್ಮೆಯಿಂದಾಗಲಿ, ಹೆರರನ್ನು ಅಸಡ್ಡೆಮಾಡಿಯಾಗಲೀ ಅಲ್ಲ. ಹಗೆಗಳನ್ನಡಗಿಸಲಿಕ್ಕೂ, ಯಶೋವಂತರಾಗಲಿಕ್ಕೂ, ದಿಗ್ವಿಜಯವನ್ನು ಗೆಯ್ಯುತ್ತಲಿದ್ದರಲ್ಲದೆ ಹಣದಾಶೆಯಿಂದಲಾಗಲಿ, ತೋಳುಬಲದ ಪೊಗರಿನಿಂದಲಾಗಲೀ ಅಲ್ಲ. ಸಂತತಿಯ

ತಂತುವು ಕತ್ತರಿಸಿ ಹೋಗಬಾರದೆಂಬ ಧರ್ಮವನ್ನು ಪರಿಪಾಲಿಸಲಿಕ್ಕೆ ಗೃಹಸ್ಥಾಶ್ರಮವನ್ನು ಪರಿಗ್ರಹಿಸುತ್ತಿದ್ದರಲ್ಲದೆ, ಕಾಮಭೋಗಗಳ ಕುತೂಹಲದಿಂದಲ್ಲ. ಮತ್ತು ಬಾಲ್ಯದಲ್ಲಿಯೇ ವಿದ್ಯೆಗಳನ್ನೆಲ್ಲ ಕಲಿತು, ಪ್ರಾಯದೊಳಗೆ ಗೃಹಸ್ಥಾಶ್ರಮದಿಂದ ಸಂಸಾರಸುಖದಲ್ಲಿ ಆಸಕ್ತರಾಗಿ, ಮುಪ್ಪು ಬರುತ್ತಲಿರುವಾಗ ವಾನಪ್ರಸ್ಥಾಶ್ರಮ ಸ್ವೀಕಾರದಿಂದ ಮುನಿಧರ್ಮಗಳನ್ನು ಆಶ್ರಯಿಸಿ, ಅವಸಾನಕಾಲದೊಳಗೆ ಸಂನ್ಯಾಸವನ್ನವಲಂಬಿಸಿ, ಪರಮಾತ್ಮಧ್ಯಾನದಿಂದ ಶರೀರವನ್ನು ಬಿಡುವ ಸಂಪ್ರದಾಯವು – ಅವರ ಕುಲಕ್ರಮವಾಗಿ ಬರುತ್ತಲಿದ್ದುದರಿಂದ ನಾಲ್ಕಾಶ್ರಮಗಳ ಧರ್ಮಗಳೂ ಈ ವಂಶದ ಅರಸರಲ್ಲಿ ಆಯಾಯ ಕಾಲದೊಳಗೆ ತಪ್ಪದೆ ಆಚರಣೆಯಲ್ಲಿದ್ದುವು.

ಯದ್ಯಪಿ–ರಘುರಾಜರ ಚರಿತ್ರೆಯ ವಿಭವವನ್ನೆಲ್ಲ ವಿವರಿಸುವಷ್ಟು ವಾಗ್ವೈಭವದ ತಿರುಳು ನನಗೆ ಇಲ್ಲ. ಆದರೆ– ಆ ಅವನಿಪಾಲರ ಸುಗುಣರತ್ನಾವಳಿಯು–ಬಗೆಬಗೆಯಿಂದ ನನ್ನ ಕರ್ಣಾಲಂಕಾರವಾಗಿ, ಅವರ ಅನ್ವಯಕ್ರಮವನ್ನು ವರ್ಣಿಸಲಿಕ್ಕೆ ನನ್ನನ್ನು ವಿಚಾರವಿಲ್ಲದೆ ಪ್ರೇರಿಸುತ್ತಲಿದೆ. ಇದರಿಂದ ಚಾಪಲ್ಯಕ್ಕೊಳಗಾಗಿ, ದುಡುಕಿ, ಹೇಳತೊಡಗಿದೆನು. ಚಿನ್ನವನ್ನು ಬೆಂಕಿಯಲ್ಲಿ ಪುಟವಿಡುವುದರಿಂದ ಹೊನ್ನಿನ ಒಳ್ಬಣ್ಣವಾಗಲಿ, ಇತರ ಲೋಹದ ಬೆರಕೆಯಿಂದುಂಟಾದ ಕಲೆ(ಒಚ್ಚ)ಯೇ ಆಗಲೀ ತಿಳಿದು ಬರುವ ಹಾಗೆ, ಈ ನನ್ನ ರಘುಕುಲಚರಿತವು–ಕಾವ್ಯಭಾವನಾಪರಿಪಕ್ವ ಬುದ್ಧಿಯುಳ್ಳ ಸತ್ಪುರುಷರ ಕಿವಿಯನ್ನು ಹೊಕ್ಕರೇ ಅದರ ಗುಣದೋಷಗಳ ವಿಭಾಗವು ವ್ಯಕ್ತವಾಗುವುದು, ಅದರಿಂದ ಮುಂದುವರಿಯುವೆನು.

–ಇಂತು ವಾಙ್ಮುಖಂ–

ಕಥಾರಂಭಂ

ಶ್ರೀಃ

ವೇದಗಳೊಳಗೆ ಓಂಕಾರವು ಹೇಗೋ ಹಾಗೆ, ವೈವಸ್ವತನೆಂಬ ಮನುವು-ವಿದ್ಯಾವಂತರಿಗೆ ಮಾನ್ಯನೆನಿಸಿ, ಮೊಟ್ಟಮೊದಲನೆಯ ಅರಸಾಗಿ ನೆಲಸಿದನು. ಪವಿತ್ರತರಮಾದ ಆತನ ವಂಶದಲ್ಲಿ ಅತಿ ಪರಿಶುದ್ಧನಾದ ದಿಲೀಪನೆಂಬ ರಾಜರಾಜನು-ಪರಿಪೂತವಾದ ಪಾಲ್ಗಡಲೊಳಗೆ ಪೂರ್ಣಚಂದ್ರನಂತೆ ಜನಿಸಿ ಬೆಳಗುತ್ತಲಿದ್ದನು. ಈತನಿಗೆ ಬಲು ಅಗಲವಾದ ಎದೆಯೂ, ಗೂಳಿಯಹಿಳಿಲಿನಂತೆ ಎತ್ತರವಾದ ಹೆಗಲೂ, ಮರದತಾಳಿನಂತೆ ನೀಳವಾದ ತೋಳೂ ಇದ್ದುದರಿಂದ ನೆಲದಾಳ್ವಿಕೆಯೆಂಬ ಕ್ಷತ್ರಧರ್ಮವು, ಅಥವಾ ಪರಾಕ್ರಮವು – ತನ್ನ ಕರ್ತವ್ಯವನ್ನು ನೆರವೇರಿಸಲೋಸುಗ ಈ ರೂಪವಾದ ಉಚಿತದೇಹವನ್ನಾಂತು ಬಂದಿರುವುದೋ ಎಂಬಂತೆ ಕಾಣಬರುತ್ತಲಿದ್ದನು. ಇದಲ್ಲದೆ –ಆ ದಿಲೀಪರಾಜನು ಎಲ್ಲ ವಸ್ತುಗಳಿಗಿಂತ ಮಿಗಿಲೆನಿಸಿದ ಬಲವನ್ನೊಳಗೊಂಡು ಎಲ್ಲ ಪ್ರಾಣಿಗಳಿಗಿಂತಲೂ ಮೇಲೆನಿಸಿದ ತೇಜಸ್ಸನ್ನು ಹೊಂದಿ ಎಲ್ಲರಿಗಿಂತ ಉನ್ನತನೂ ಆಗಿ, ಮೇರುವಿನಂತೆ ಭೂಮಿಯನ್ನೆಲ್ಲ ಆಕ್ರಮಿಸಿ ಎಂದರೆ–ತನ್ನ ಆಳ್ವಿಕೆಗೊಳಪಡಿಸಿಕೊಂಡು ಇದ್ದನು. ಅಷ್ಟದಿಕ್ಪಾಲಕರ ಅಂಶಗಳೂ ಒಟ್ಟಾಗಿ ಈತನಲ್ಲಿ ಕಲೆತಿದ್ದುವು. ತನ್ನ ಶ್ರೇಷ್ಠವಾದ ಆಕಾರಕ್ಕೆ ತಕ್ಕ ಪ್ರಜ್ಞೆಯನ್ನುಳ್ಳವನಾಗಿ, ಆ ಪ್ರಜ್ಞೆಗನುಗುಣವಾದ ಶಾಸ್ತ್ರಪರಿಚಯವನ್ನು ಪಡೆದು, ಆ ಶಾಸ್ತ್ರಾಭ್ಯಾಸಕ್ಕೆ ಅನುರೂಪವಾದ ಕಾರ್ಯವನ್ನು ಆರಂಭಿಸಿ, ಅದಕ್ಕೆ ಸರಿಯಾದ ಫಲಸಿದ್ಧಿಯನ್ನೂ ಹೊಂದುತ್ತಲಿದ್ದನು. ದುರುಳರನ್ನಡಗಿಸುವ ಶೌರ್ಯ, ಪ್ರತಾಪ, ರಾಜತೇಜಸ್ಸು ಮುಂತಾದ ಭಯಂಕರಗುಣಗಳೂ, ಶಿಷ್ಟರನ್ನು ಸಲಹುವ ಸತ್ಕುಲಜನ್ಮ, ಶೀಲ, ದಯೆ, ದಾಕ್ಷಿಣ್ಯ ಮೊದಲಾದ ಮನೋಹರ ಸುಗುಣಗಳೂ ಈತನಲ್ಲಿ ಒಡಗೂಡಿದ್ದುದರಿಂದ, ಈ ದೊರೆಯು-ಮೊಸಳೆ ಮುಂತಾದ ಕ್ರೂರಜಂತುಗಳಿಂದಲೂ, ಮುತ್ತು ರತ್ನ ಮೊದಲಾದ ಸನ್ಮಣಿಗಳಿಂದಲೂ ಸಮುದ್ರವು ಹೇಗೋ ಹಾಗೆ, ದುರ್ವೃತ್ತಿಯಿಂದ ಹಗೆಗಳತಿಕ್ರಮಿಸಲಿಕ್ಕೆ ಅಸದಳನಾಗಿಯೂ, ಸದ್ವ್ಯಾಪಾರದಿಂದ ಸಾಧುಗಳು ಆಶ್ರಯಿಸಲು ಸುಲಭನಾಗಿಯೂ ಇರುತ್ತಿದ್ದನು.

ಜಾಣನಾದ ಸಾರಥಿಯು–ನಡೆಯಿಸುವ ತೇರಿನ ಗಾಲಿಯ ಪಟ್ಟೆಯು–ಜಾಡನ್ನು ಬಿಟ್ಟು ಅತ್ತಿತ್ತ ಒತ್ತಿಹೋಗದ ಹಾಗೆ, ಸುಶಿಕ್ಷಣದಿಂದ ಸರಿಯಾಗಿ ಪಳಗಿದ್ದ ದಿಲೀಪನ ಪ್ರಜೆಗಳು–ಮನುವಿನ ಕಾಲದಿಂದ ಬಳಕೆಯಲ್ಲಿ ಬಂದಿರುವ ಸದಾಚಾರದ ಪದ್ಧತಿಯನ್ನು ಎಷ್ಟಾದರೂ ದಾಟಿ ಹೋಗುತ್ತಿರಲಿಲ್ಲ. ಸೂರ್ಯನು ಬೇಸಗೆಯಲ್ಲಿ ನೆಲದಲ್ಲಿನ ನೀರನ್ನು ತನ್ನ ಕಿರಣಗಳಿಂದ ಹೀರಿ, ಒಂದಕ್ಕೆ ಸಾವಿರ ಪಾಲಿನಷ್ಟು ಹೆಚ್ಚಾಗಿ ಭೂಮಂಡಲಕ್ಕೆ ಮಳೆಗರೆಯುವ ಹಾಗೆ, ದಿಲೀಪ ಭೂಪನೂ–ತನ್ನ ಆಳ್ವಿಕೆಯ ನೆಲದ ಹುಟ್ಟುವಳಿಯಲ್ಲಿ ಆರನೆಯ ಒಂದು ಪಾಲನ್ನು ಕಂದಾಯವನ್ನಾಗಿ ತೆಗೆದುಕೊಂಡರೂ, ಅದನ್ನೆಲ್ಲ ಪ್ರಜೆಗಳ ಮೇಲ್ಮೆಗಾಗಿಯೇ ವಿನಿಯೋಗಿಸುತ್ತಲಿದ್ದನು. ಕಂದಾಯದ ಹಣವು ಯಜ್ಞಯಾಗಾದಿ ಸತ್ಕಾರ್ಯಗಳಿಗೆ ಉಪಯೋಗಿಸುತ್ತಲಿದ್ದಿತು. ಅದರಿಂದ ಸಂತುಷ್ಟರಾದ ದೇವತೆಗಳು–ಹೇರಳವಾಗಿ ಮಳೆಗರೆಯುತ್ತಲಿದ್ದರು. ಇದರಿಂದ ಬೆಳೆಯು ಹುಲುಸಾಗಿ, ಪ್ರಜೆಗಳಿಗೆ ತೃಪ್ತಿಯುಂಟಾಗುತ್ತಲಿದ್ದಿತು. ಆ ಅವನಿಪಾಲನು– ಅಸಹಾಯಶೂರನಾಗಿದ್ದುದರಿಂದ, ಆತನಿಗೆ ಚತುರಂಗಬಲವು–ಛತ್ರ ಚಾಮರಗಳಂತೆ ಅಲಂಕಾರವಾಗಿ ಮಾತ್ರವೇ ಇರುತ್ತಿತ್ತು, ತಡೆಯಿಲ್ಲದ ಶಾಸ್ತ್ರಜ್ಞಾನ, ಬಿಲ್ಲನೇರಿಸಿದ ಬಾಣ, ಇವೆರಡೇ ಎಲ್ಲ ಕೆಲಸಗಳನ್ನೂ ಕೈಗೂಡಿಸುತ್ತಲಿದ್ದುವು. ಲೋಕದಲ್ಲಿ ಯಾವನಾದರೊಬ್ಬ ಮನುಷ್ಯನಿಗೆ ಹಠಾತ್ತಾಗಿ, ಹಣವು ದೊರೆತರೆ, ಆಗ–ಅವನ ಪೂರ್ವಪುಣ್ಯವು ಉತ್ತಮವಾದುದೆಂತಲೂ, ಅದೇ ಮನುಷ್ಯನು ಅಕಸ್ಮಾತ್ತಾಗಿ ಅಕಾಲಮರಣವನ್ನೈದಿದರೆ, ಅವನ ಪೂರ್ವಸುಕೃತವು–ಹೀನವಾದುದೆಂತಲೂ, ಜನರು–ಊಹಿಸಿ ತಿಳಿಯುವ ಹಾಗೆ, ಆ ಧರಾನಾಥನು–ಮೂರನೆಯವರರಿಯದಂತೆ ಗುಟ್ಟಾಗಿ ಯೋಚಿಸಿ ಮಾಡಿದ ಉದ್ಯೋಗವು, ಸಾಮಾದಿ ಉಪಾಯಗಳ ಪ್ರಯೋಗದಿಂದ ಕೆಲಸವು ಮುಗಿದ ಮೇಲೆಯೇ ಹೆರರಿಗೆ ಗೊತ್ತಾಗುತ್ತಲಿದ್ದಿತು. ಅದು ಹೊರತು, ನಡುಗಾಲದಲ್ಲಿ– ಹಿಗ್ಗುವುದು, ತಗ್ಗುವುದು ಮೊದಲಾದ ಮುಖವಿಕಾರದಿಂದಲಾಗಲೀ, ಮಾತುಗಳ ಹೋರೆಯಿಂದ ಹೊರಪಡುವ ಮನೋಭಾವದಿಂದಲಾಗಲಿ, ವ್ಯಕ್ತಪಡುತ್ತಿರಲಿಲ್ಲ.

ಇಂತಹ ಸುಗುಣಮಣಿಗಳಿಗೆ ಗಣಿಯಾದ ಆ ಭೂರಮಣನು ಭಯವು ಬಂದಮೇಲೆ ಕಳವಳ ಪಡದಹಾಗೆ, ಮೊದಲೇ ರಾಜ್ಯಭಾರವನ್ನೆಲ್ಲ ಅಣಿಮಾಡಿಟ್ಟು, ಭಯಪ್ರವೇಶಕ್ಕೆ ಸಂಚಿಲ್ಲದಂತೆಸಗಿ, ಧರ್ಮಾರ್ಥಕಾಮಗಳಿಗೆ ಮೂಲವಾದ ದೇಹವನ್ನು ಕಾಪಾಡಿಕೊಂಡನು. ರೋಗಾದ್ಯುಪದ್ರವಗಳ ಹಾವಳಿಗೆ ಅವಕಾಶವಿಲ್ಲದಂತೆ, ಮುಂಚೆಯೇ ದೇವತಾರಾಧನಾದಿಗಳಿಂದ ಧರ್ಮವನ್ನಾರ್ಜಿಸಿಟ್ಟಿದ್ದನು. ಹಣವನ್ನು ಗಳಿಸಬೇಕೆಂದು ತಹತಹ ಪಡದೆಯೇ, ದ್ರವ್ಯವನ್ನು ಸಂಪಾದಿಸಿದನು. ಸುಖಪಡಬೇಕೆಂದು ಆಶೆಯಲ್ಲಿ ಮುಳುಗದೆಯೇ, ಸುಖವನ್ನೂ ಅನುಭವಿಸಿದನು.

ಹೆರರ ವೃತ್ತಾಂತವೇ ಮುಂತಾದ ಸಕಲ ವಿಷಯಗಳನ್ನೂ ಬಲ್ಲವನಾಗಿದ್ದರೂ ಮೌನದಿಂದಿರುತ್ತಿದ್ದನು. ಎಲ್ಲರನ್ನೂ ದಂಡಿಸುವ ಶಕ್ತಿಯಿದ್ದರೂ ಆತನಿಗೆ ಬಹು ತಾಳ್ಮೆಯಿದ್ದಿತು. ಕೊಡುಗಯ್ಯುವನಾದರೂ ಹೆಮ್ಮೆಯಿಂದ ತನ್ನನ್ನು ತಾನು-ಹೊಗಳಿಕೊಳ್ಳದೆಯೂ, ಹೆರರ ಹೊಗಳಿಕೆಗೆ ಹಿಗ್ಗದೆಯೂ ಇರುತ್ತಿದ್ದನು. ಆದಕಾರಣ-ಜ್ಞಾನ, ದಂಡಶಕ್ತಿ, ದಾತೃತ್ವ, ಎಂಬೀ ಗುಣಗಳು-ಮೌನ, ಸೈರಣೆ, ಹೊಗಳಿಕೊಳ್ಳದಿರೋಣ ಎಂಬೀ ಗುಣಗಳೊಡನೆ ಪರಸ್ಪರ ವಿರುದ್ಧಗುಣಗಳಾಗಿದ್ದರೂ ವೈರವನ್ನು ತೊರೆದು ಆತನಲ್ಲಿ ಒಡಹುಟ್ಟಿದವುಗಳಂತೆ ಗೆಳೆತನದಿಂದಿದ್ದವು.

ಧೀರನಾದ ಆ ಧರಿತ್ರೀನಾಥನು ಹೂವು, ಹಣ್ಣು, ಹೆಣ್ಣು, ಹೊನ್ನು, ಹಾಡು, ಮೊದಲಾದ ವಿಷಯಗಳಿಗೆ ವಶನಾಗಿರಲಿಲ್ಲ. ಸಕಲವಿದ್ಯಾಪಾರಂಗತನೆನಿಸಿ, ಮಹಾಧರ್ಮಾತ್ಮನೂ ಆಗಿದ್ದನು. ಆದುದರಿಂದಲೇ ಆತನಿಗೆ ಜ್ಞಾನದಿಂದ ಮುಪ್ಪು ಬಂದಿದ್ದಿತಲ್ಲದೆ ವಯಸ್ಸಿನಿಂದ ಬಂದಿರಲಿಲ್ಲ. ಇಂತು-ಸತ್ಯ ಧರ್ಮ, ಜ್ಞಾನಾದಿ ಗುಣಗಳಿಗೆ ನಿಧಿಯಾದ ಆ ಭೂವಲ್ಲಭನು-ತನ್ನ ದೇಶದ ಪ್ರಜೆಗಳ ಮಕ್ಕಳಿಗೆ ವಿದ್ಯಾಬುದ್ಧಿಗಳನ್ನು ಕಲಿಸಿದ ವಿನಯನದಿಂದಲೂ, ಭಯವಿಲ್ಲದಂತೆ ಮಾಡಿದ ರಕ್ಷಣೆಯಿಂದಲೂ ಧರ್ಮಸಂಬಂಧದ ತಂದೆಯಾಗಿರುತ್ತಿದ್ದನು. ಆಯಾ ಮಕ್ಕಳ ತಾಯಿತಂದೆಗಳು-ಆ ಹಸುಳೆಗಳ ಜನನಕ್ಕೆ ಮಾತ್ರವೇ ಕಾರಣರಾಗಿರುತ್ತಿದ್ದರು. ಲೋಕವ್ಯವಹಾರದ ಮರ್ಯಾದೆಯನ್ನು ಕಾಪಾಡಲೋಸುಗ ಅಪರಾಧಿಗಳಿಂದ ದಂಡದ ತೆರಿಗೆಯನ್ನು ತೆಗೆದುಕೊಳ್ಳುತ್ತ, ವಂಶಾಭಿವೃದ್ಧಿಯ ಧರ್ಮಾರ್ಥವಾಗಿ ವಿವಾಹವನ್ನು ಮಾಡಿಕೊಂಡು, ತನ್ನ ತಪ್ಪುಗಳನ್ನೆಲ್ಲ ತಿಳಿದು ತಿದ್ದಿಕೊಳ್ಳುವ ವಿದ್ವಾಂಸನಾಗಿದ್ದ ಆ ತಿರೆಯಾಣ್ಮನಿಗೆ, ಧನಕಾಮಲಾಭಗಳೆರಡೂ ಧರ್ಮಲಾಭವಾಗಿಯೇ ಪರಿಣಮಿಸಿದ್ದುವು.

ಇದಲ್ಲದೆ ಆ ಅರಸು-ಪ್ರಜೆಗಳಿಂದೆತ್ತಿದ ಕಂದಾಯ ಕವಳಿಗೆಗಳಿಂದ ಯಜ್ಞ ಯಾಗಾದಿ ಹಬ್ಬಗಳನ್ನು ಮಾಡಿ, ದೇವರ್ಕಳನ್ನು ತಣಿಸುತ್ತ ಬಂದನು. ಅದರಿಂದ ತೃಪ್ತನಾದ ಇಂದ್ರನು-ನೆಲವು ಹೆಚ್ಚಿಗೆ ಬೆಳೆ ಕೊಡುವಂತೆ ಮಳೆಗರೆಯಿಸುತ್ತಿದ್ದನು. ಹೀಗೆ ಆ ಸುರನರದೇವರುಗಳು - ಮುಯ್ಯಿಗೆ ಮುಯ್ಯಿ ಮಾಡುವುದರ ಮೂಲಕ, ದೇವಭೂಲೋಕಗಳನ್ನು ಪೋಷಿಸಿಕೊಳ್ಳುತ್ತಲಿದ್ದರು. ದಿಲೀಪ ಭೂಪನ ಒಳ್ಳೆಯ ಹೆಸರುವಾಸಿಯು-ಇತರ ಮಹೀಪಾಲರೊಳಗೊಬ್ಬರಿಗೂ ಉಂಟಾಗಿರಲೇ ಇಲ್ಲ. ಏಕೆಂದರೆ-ಪ್ರಜೆಗಳಿಗಾವುದೊಂದು ಕುಂದೂ ಇಲ್ಲದಂತೆ ಆಡಳಿತವನ್ನು ಅರಸು ಅಣಿಮಾಡಿಟ್ಟಿದ್ದನು. ಆ ನಾಡಿನ ಜನರೆಲ್ಲ ನೆಮ್ಮದಿಯಾಗಿದ್ದುದರಿಂದ ಕಳ್ಳತನವೆಂಬ ಶಬ್ದಕ್ಕೆ ಎಡೆಯಿಲ್ಲದೆ, ತನ್ನನ್ನು ತಾನೇ ಕಳವುಮಾಡಿಕೊಂಡು, ಅರ್ಥವಿಲ್ಲದ ಶಬ್ದವಾಗಿದ್ದಿತು(ಮೊಲದ ಕೊಂಬು ಎಂಬಂತೆ). ಆ ಪೊಡವಿಯೊಡೆಯನಲ್ಲಿ ಮತ್ತೊಂದು ವಿಶೇಷ ಗುಣವಿದ್ದಿತು, ಅದೇನೆಂದರೆ-ಯಾವನಾದರೊಬ್ಬನು

ಸುಗುಣಿಯಾಗಿದ್ದರೆ, ಅಂಥವನು-ಹಗೆಯೇ ಆಗಿದ್ದರೂ, ರೋಗಿಗೆ ಮದ್ದು ಹಿತವಾಗುವಂತೆ ಆತನಿಗೆ ಆಪ್ತನಾಗುತ್ತಿದ್ದನು. ಮತ್ತೊಬ್ಬನು- ಪರಮಾಪ್ತನೇ ಆಗಿದ್ದರೂ ದುಷ್ಟನಾಗಿದ್ದರೆ, ಅಂಥವನು-ಹಾವು ಕಡಿದ ಬೆರಳು ಹಗೆಯಾಗುವಂತೆ ಅನಿಷ್ಟನೇ ಆಗುವವನು. ಇಂತಪ್ಪ ಗುಣರಾಶಿಯಾದ ಆ ಮಹೀಶನ ಗುಣಗಳಲ್ಲಿ ಪರಾರ್ಥಗಳಾಗಿದ್ದುವಲ್ಲದೆ ಸ್ವಾರ್ಥಪರಗಳಾಗಿರಲಿಲ್ಲ; ಆದುದರಿಂದಲೇ ಸೃಷ್ಟಿಕರ್ತನಾದ ಬ್ರಹ್ಮನು-ರೂಪ, ರಸ, ಗಂಧ, ಸ್ಪರ್ಶ, ಶಬ್ದಗಳಿಂದ ಪರೋಪಕಾರಿಗಳಾಗಿರಲೆಂಬ ನೇಮದಿಂದ-ನೆಲ, ನೀರು, ಗಾಳಿ, ಬೆಳಕು, ಬೈಲುಗಳೆಂಬ ಪಂಚಭೂತಗಳನ್ನೂ ಯಾವೆಲ್ಲ ಕಾರಣದಿಂದ ನಿರ್ಮಿಸಿದನೋ, ಆ ಕಾರಣ ಸಾಮಗ್ರಿಯಿಂದಲೇ ಈ ಮಹಾರಾಜನನ್ನೂ ನಿಜವಾಗಿ ನಿರ್ಮಿಸಿ ಇರಬೇಕು ಎಂದು ತೋರುತ್ತಿತ್ತು. ಆ ರಾಜನ ಶಾಸನಕ್ಕೊಳಗಾದ ನೆಲಕ್ಕೆ, ನಾಲ್ಕು ಕಡಲುಗಳ ದಡವೇ ಸುತ್ತುಕೋಟೆಯ ಗೋಡೆಯಾಗಿಯೂ, ಚತುಸ್ಸಾಗರಗಳಿಗೂ ಮಂಡಲಾಕಾರವಾದ ಕಂದಕವಾಗಿಯೂ ಇದ್ದುವು. ಇದರಿಂದ ಅರಸು-ಇದಿರಾಳಿಲ್ಲದೆ ಭೂಮಂಡಲವನ್ನೆಲ್ಲ ಒಂದೇ ಪಟ್ಟಣವನ್ನು ಹೇಗೋ ಹಾಗೆ ಆಳುತ್ತಲಿದ್ದನು. ಮಗಧರಾಜಪುತ್ರಿಯಾಗಿ, ದಾಕ್ಷಿಣ್ಯಗುಣದ ಸಂಬಂಧದಿಂದ ಸುದಕ್ಷಿಣೆಯೆಂದು ಬಳಕೆಗೆ ಬಂದ ಹೆಸರನ್ನು ಪಡೆದಿದ್ದ ಸಾಧ್ವಿಯು-ಯಜ್ಞಕ್ಕೆ ಸಾದ್ಗುಣ್ಯವನ್ನಾಗಿಸುವ ದಕ್ಷಿಣೆಯು ಹೇಗೋ ಹಾಗೆ, ಆ ಮಹಾರಾಜನಿಗೆ ಧರ್ಮಪತ್ನಿಯಾಗಿದ್ದಳು, ಆ ದಿಲೀಪರಾಜನಿಗೆ ಬಹುಮಂದಿ ಹೆಂಡತಿಯರಿದ್ದರು. ಆದರೂ ಆತನು ತನ್ನ ಮನೋಗತವನ್ನನುಸರಿಸಿ ಬಾಳುವ ಸುದಕ್ಷಿಣೆಯಿಂದಲೂ, ರಾಜ್ಯಲಕ್ಷ್ಮಿಯಿಂದಲೂ ತನ್ನನ್ನು ಸಪತ್ನೀಕನನ್ನಾಗಿ ಭಾವಿಸಿ ಇದ್ದನು.

ಅಂತಾ ಮನದನ್ನೆಯೊಡನೆ ಸಂಸರಿಸುತ್ತಲಿರುವಲ್ಲಿ, ಅರಸಿಗೆ ಸಂತಾನ ಲಾಭವಾಗಲಿಲ್ಲ. ಫಲವು ದೂರವಾಗಿದ್ದಿತು, ಕಳವಳವೇನೋ ಹೆಚ್ಚುತ್ತಲಿತ್ತು. ಈ ತಿಂಗಳಲ್ಲಿ, ಇಲ್ಲವೆ ಮುಂದಿನ ತಿಂಗಳಲ್ಲಿ, ಅಥವಾ ಆಚೆಯ ತಿಂಗಳೊಳಗೆ ಫಲವು ನಿಲ್ಲಬಹುದೆಂದು ತಹತಹಪಡುತ್ತ ಕಾಲವನ್ನು ಕಳೆಯುತ್ತ ಬಂದನು. ಆದರೂ ಫಲಸೂಚನೆಯಾಗಲಿಲ್ಲ, ಉಪಾಯಾಂತರವನ್ನು ಹುಡುಕಬೇಕಾಯಿತು. ಆಗ ಅರಸು-ಮನದೆಣಿಕೆಯನ್ನಾಚರಿಸಲು ತನ್ನ ಹೆಗಲಮೇಲಿದ್ದ ನಾಡಿನ ಆಡಳಿತದ ಹೊರೆಯನ್ನು ನಂಬುಗೆಗೊಳಗಾದ ಮಂತ್ರಿಗಳಿಗೆ ಒಪ್ಪಿಸಿದನು. ಬಳಿಕ ಆ ರಾಜದಂಪತಿಗಳು-ಸ್ನಾನಾದಿಗಳಿಂದ ಪರಿಶುದ್ಧರಾಗಿ "ಬ್ರಹ್ಮನು ಸೃಷ್ಟಿ ಕಾಲದಲ್ಲಿ ತನ್ನ ಸೃಷ್ಟಿಯ ಸೌಕರ್ಯಕ್ಕಾಗಿ-ದಕ್ಷ, ಮರೀಚಿ, ಪುಲಸ್ತ್ಯ, ಪುಲಹ, ಕ್ರತು, ವಿಶ್ವೇಶ ಮೊದಲಾದ ಹದಿನಾಲ್ಕು ಮಂದಿ ಪ್ರಜೇಶ್ವರರನ್ನು ತನ್ನ ಮನಸ್ಸಿನಿಂದ ಕಲ್ಪಿಸಿದನು, ಅವರಿಂದ ಲೋಕವೆಲ್ಲ ಹರಡಿತು" ಎಂದು-ಸಂತತಿಗೆ ಮೂಲಕಾರಣನಾದ ವಿಶ್ವೇಶನೆಂಬ

ಬ್ರಹ್ಮನನ್ನು ಭಕ್ತಿಯಿಂದ ಪೂಜಿಸಿ, ಸಂತಾನಾಭಿಲಾಷೆಯಿಂದ ತಮ್ಮ ಮನೆತನಕ್ಕೆ ಗುರುವಾದ ವಸಿಷ್ಠ ಮುನಿಯನ್ನು ದರ್ಶನ ಮಾಡಬೇಕೆಂದು ಆತನ ತಪೋವನವನ್ನು ಕುರಿತು ಹೊರಟರು. ಅಷ್ಟು ಹೊತ್ತಿಗೆ ಕಿವಿಗಿಂಪಾಗಿ ದನಿಗೈವ ರಥವು ಬಂದು ಸಿದ್ಧವಾಯಿತು. ಸತಿಪತಿಗಳಿಬ್ಬರೂ ಏರಿದರು, ಆಗ ಕಾರ್ಮುಗಿಲನ್ನು ಏರಿದ ಮಿಂಚು ಮತ್ತು ನೀರು ತುಂಬಿದ ಮೋಡ ಅಥವಾ ಐರಾವತವೆಂಬ ಇಂದ್ರನ ಆನೆ ಇವುಗಳಂತೆ ಕಂಗೊಳಿಸುತ್ತಿದ್ದರು. ತಪೋವನವಾಸಿಗಳಿಗೆ ತೊಂದರೆಯಾಗಬಾರದು, ವಿನೀತವೇಷದಿಂದ ಪ್ರವೇಶಿಸಬೇಕು ಎಂದು, ಮಿತವಾದ ಪರಿವಾರದಿಂದೊಡಗೂಡಿದ್ದರೂ ಬೆಳಗುತ್ತಲಿರುವ ರಾಜತೇಜಸ್ಸಿನ ಮಹಿಮೆಯಿಂದ ಬಹುಸೇನೆಯೊಡಗೂಡಿರುವವರ ಹಾಗೆ ಕಾಣಬರುತ್ತಲಿದ್ದರು.

ಆಗ–ಹಾಲುಮಡ್ಡಿಯ ಗಿಡಗಳೊಳಗೆ ನುಗ್ಗಿ, ಹೂಗಳೊಳಗಣ ರಜಗಳನ್ನು ಕೆದರಿ, ಕಾಡು ಮರಗಳ ಮೇಲೆ ಹರಿದು, ಶುಭವನ್ನು ಸೂಚಿಸುತ್ತ, ಹಾಯಾಗಿರುವ ಗಾಳಿಯು ಬೀಸುತ್ತಲಿದ್ದಿತು. ಇಂತು ಸುಖಪ್ರಯಾಣವನ್ನು ಬೆಳೆಸುತ್ತಲಿರುವಲ್ಲಿ–ತೇರಿನ ಗಾಲಿಯ ಸದ್ದನ್ನು ಕೇಳಿದ ಕೂಡಲೇ, ಮಳೆಗಾಲದ ಮೋಡವು ಗುಡುಗುತ್ತಿದೆಯೆಂದು ಭ್ರಾಂತಿಗೊಂಡು, ಇದಿರಾಗಿ ತಮ್ಮ ಕೊರಳನ್ನೆತ್ತಿ, ಷಡ್ಜಸ್ವರವನ್ನು ಹೋಲುತ್ತಿರತಕ್ಕ ಶುದ್ಧ, ವಿಕೃತವೆಂಬೆರಡು ಬಗೆಯಿಂದ, ಇಂಪಾಗಿ ದನಿಗೈವ ಹೆಣ್ಣು ಗಂಡು ನವಿಲುಗಳ ಕೇಕಾರವಗಳನ್ನು ಕೇಳಿದರು. ಹಾಗೆಯೇ ಮುಂದೆ ಹೊರಟು, ಸ್ವಲ್ಪ ಹೊತ್ತಿನಲ್ಲಿಯೇ ಹಳುವವನ್ನು ಹೊಕ್ಕರು, ಆಗ–ಇಕ್ಕೆಲದಲ್ಲಿ ಹುಲ್ಲನ್ನು ಮೇಯುತ್ತಲಿದ್ದ ಹುಲ್ಲೆಗಳು–ಎಂದೂ ಭಯಗೊಂಡವುಗಳಲ್ಲ, ಅಂತಹ ಬಂಡಿಗಳನ್ನು ನೋಡಿದವುಗಳೂ ಅಲ್ಲ. ಅದರಿಂದ ಹತ್ತಿರದಲ್ಲಿಯೇ ನಿಂತು, ರಥದಲ್ಲಿ ನೆಟ್ಟದಿಟ್ಟಿಯುಳ್ಳವಾಗಿ ದುರುದುರುನೆ ನೋಡುತ್ತಲಿದ್ದುವು, ಸುದಕ್ಷಿಣೆಯು ಗಂಡುಜಿಂಕೆಗಳಲ್ಲಿ ತನ್ನ ಮನದನ್ನನ ಕಣ್ಣಹೋಲಿಕೆಯನ್ನೂ, ದಿಲೀಪನು–ಹೆಣ್ಣು ಹುಲ್ಲೆಗಳೊಳಗೆ ತನ್ನ ಸತಿಯನಯನಗಳ ಸಾಮ್ಯವನ್ನೂ ನೋಡಿಕೊಳ್ಳುತ್ತ ಮುಂದುವರಿಯುವಲ್ಲಿ, ಮಾರ್ಗದ ಮೇಲ್ಭಾಗದೊಳಗೆ, ಆಕಾಶದ ಬೈಲಿನಲ್ಲಿ–ಸಾರಸಪಕ್ಷಿಗಳ ಹಿಂಡು ಸಾಲುಗಟ್ಟಿ ಹೋಗುತ್ತಿದ್ದರೆ, ರಾಜದಂಪತಿಗಳ ಪ್ರಯಾಣಸಮಯದಲ್ಲಿ ವಿಚಿತ್ರವಾಗಿರುವಂತೆ ಎಡಬಲ ಭಾಗಗಳ ಕಂಬಗಳಿಲ್ಲದೆ ಕಟ್ಟಿರುವ ತೋರಣ ಮಾಲೆಯ ಹಾಗೆ ಕ್ಷಣಕಾಲ ಮಾತ್ರ ಕಂಡುಬರುವುದನ್ನು ತಲೆಯೆತ್ತಿ ನೋಡುತ್ತ ತೆರಳಿದರು. ಮಂದಮಾರುತವು–ಅವರು ಪಯಣಮಾಡುವ ಕಡೆಗೇ ಹಿತವಾಗಿ ಬೀಸುತ್ತ, ನಿಮ್ಮ ಕೋರಿಕೆಯು ಕೈಗೂಡುವುದೆಂದು ಸೂಚಿಸುತ್ತಲಿದ್ದಿತು, ಕುದುರೆಗಳ ಕಾಲತುಳಿತದಿಂದ ಮೇಲಕ್ಕೆದ್ದ ಧೂಳಿಯು–ಸುದಕ್ಷಿಣೆಯ ಮುಂಗೂದಲನ್ನೂ, ದಿಲೀಪನ ತಲೆಯಪಾಗನ್ನೂ ಮುಟ್ಟುತ್ತಲಿರಲಿಲ್ಲ,

ಸುದಕ್ಷಿಣಾದಿಲೀಪರು-ಸಾಮುದ್ರಿಕ ಶಾಸ್ತ್ರದಲ್ಲಿ ಹೇಳಿ ಇರುವಂತೆ ಉತ್ತಮಜಾತಿಯ ಸ್ತ್ರೀಪುರುಷರು, ಮಾರ್ಗದಲ್ಲಿ-ಅತ್ತಿತ್ತ ಹತ್ತಿರದಲ್ಲಿ ಕಾಣಬರುವ ತಂಪಾದ ಕೊಳಗಳೊಳಗೆ ಕಂಗೊಳಿಸುವ ಕಮಲಗಳ ಮೇಲಣ ತಂಗಾಳಿಯು ಬೀಸುತ್ತಲಿದ್ದಿತು, ಆಗಲಾ ಗಂಡಹೆಂಡಿರು-ಆ ವಾಯುವಿನಲ್ಲಿ ತಮ್ಮ ಉಸಿರಿನ ಸುವಾಸನೆಯನ್ನು ಹೋಲುತ್ತಿರುವ ಗಮಲನ್ನು ಗಮನಿಸುತ್ತ ನಡೆವಾಗ-ತಾವೂ ಮತ್ತು ತಮ್ಮ ಪೂರ್ವಿಕರೂ ಬ್ರಾಹ್ಮಣರಿಗೆ ದಾನಮಾಡಿದ ಅಗ್ರಹಾರಗಳು- ಯೂಪಸ್ತಂಭಗಳೊಡನೆ ಎತ್ತೆತ್ತಲೂ ಕಾಣಬರುತ್ತಿದ್ದುವು, ಅವುಗಳಲ್ಲಿ ವಾಸಮಾಡುವ ಶ್ರೋತ್ರೀಯರು ಬಂದು, ಇದಿರ್ಗೊಂಡು ಆಚರಿಸಿದ ಸತ್ಕಾರಗಳನ್ನೂ, ಬಳಿಕ ವೇದಘೋಷದಿಂದ ಹರಸಿದ ಸಫಲಗಳಾಗುವ ಹರಕೆಗಳನ್ನೂ, ಬಾಗಿದ ಶಿರಸ್ಸಿನಿಂದ ಸ್ವೀಕರಿಸುತ್ತ ಬಂದರು, ಮತ್ತೆ ಸ್ವಲ್ಪ ಹೊತ್ತಿಗೆ ನಮ್ಮನ್ನಾಳುವ ದೊರೆಯು-ಪಟ್ಟದರಸಿಯೊಡನೆ ಪಯಣಮಾಡುತ್ತಿರುವನು, ಆ ನಮ್ಮೊಡೆಯನನ್ನು ಕಾಣಬೇಕು' ಎಂದು ಮುನ್ನಿನಿರುಳಿನಲ್ಲಿ ಹೆಪ್ಪಿಟ್ಟದ್ದು ಆಗ ತಾನೆ ಕಡೆದು ತೆಗೆದ ಬೆಣ್ಣೆಯನ್ನು ಕಾಯಿಸಿದ ತುಪ್ಪವನ್ನು ಅಕ್ಕರೆಯಿಂದ ತೆಗೆದುಕೊಂಡು, ತವಕದಿಂದ ಬಂದು ಇದಿರ್ಗೊಂಡ ಹಳ್ಳಿಯ ಮುದುಗೌಡರನ್ನು ಮಮತೆಯಿಂದ ಕಂಡು, ನಗುನಗುತ್ತ ಅವರ ಯೋಗಕ್ಷೇಮವನ್ನು ವಿಚಾರಿಸಿ, ಕಾಡುಹಾದಿಯಲ್ಲಿ ಬೆಳೆದಿರುವ ಗಿಡಗಳನ್ನು ಅವರಿಗೆ ತೋರಿಸಿ, ಈ ಗಿಡದ ಹೆಸರೇನು? ಈ ಬಳ್ಳಿಯ ಹೆಸರೇನು? ಎಂದು ಕೇಳುತ್ತಾ ಬರುತ್ತಿದ್ದರು, ಅಂದವಾದ ಅಲಂಕಾರದಿಂದ ಪಯಣಮಾಡುತ್ತಲಿರುವ ಸುದಕ್ಷಿಣಾ ದಿಲೀಪರಿಗೆ ಶಿಶಿರಋತುವು ಕಳೆದ ಬಳಿಕ ಚೈತ್ರಮಾಸದ ಹುಣ್ಣಿಮೆಯಲ್ಲಿ ಚಿತ್ರಾ ನಕ್ಷತ್ರ ಮತ್ತು ಪೂರ್ಣಚಂದ್ರರಿಗೆ ಹೇಗೋ ಹಾಗೆ, ಹೊಳಪು- ಬೆಳಗುತ್ತಲಿದ್ದಿತು. ಸುಂದರನಾದ ದಿಲೀಪನು ಅಲ್ಲಲ್ಲಿ ಕಾಣಬರುವ ವಿಶೇಷ ಸಂಗತಿಗಳನ್ನೆಲ್ಲ ತನ್ನ ಪ್ರಿಯಪತ್ನಿಗೆ ತಿಳಿಸುತ್ತಾ ತೆರಳುತ್ತಿರುವಾಗ, ಬಹು ಶಾಂತನೂ ಸುಂದರನೂ ಆದ ದಿಲೀಪನು-ಅದುವರೆಗೆ ದಾಟಿಬಂದ ಬಹುದೂರವಾದ ದಾರಿಯ ದೂರವನ್ನೇ ಇಷ್ಟೆಂದು ತಿಳಿಯಲಾರದಿದ್ದನು. ಹೆರರಿಗೆ ಅಸದಳವೆನಿಸಿದ ಯಶಸ್ಸನ್ನು ಪಡೆದಿರುವ ರಾಜನು- ರಾಣಿಯೊಡನೆ ರಥಪ್ರಯಾಣದಿಂದ ಅನೇಕ ಅರಣ್ಯಗಳನ್ನು ದಾಟಿ, ಸಂಜೆಯ ಹೊತ್ತಿಗೆ, ನಿಯಮಪರನಾದ ಮುನಿಯ ತಪೋವನದ ಬಳಿಗೆ ಬಂದನು, ಅದುವರೆಗೆ ತೇರಿನ ಕುದುರೆಗಳೂ ದಾರಿಯನ್ನು ನಡೆದು ಬಳಲಿದ್ದುವು.

ಆಗ ಆ ಆಶ್ರಮ ಪದವು ಹೇಗೆ ಇತ್ತೆಂದರೆ:-ಅಲ್ಲಲ್ಲಿ ವಾಸಮಾಡುವ ತಪಸ್ವಿಗಳು-ಪ್ರಾತಃಕಾಲದ ಅನುಷ್ಠಾನಗಳನ್ನು ತೀರಿಸಿಕೊಂಡು, ದೂರದಲ್ಲಿನ ಅರಣ್ಯಗಳಿಗೆ ಹೋಗಿ, ಸಮಿತ್ತು, ದರ್ಭೆ, ಹಣ್ಣು ಮುಂತಾದವುಗಳನ್ನು ತೆಗೆದುಕೊಂಡು, ಅಲ್ಲಿಂದ ಹಿಂದಿರುಗಿ, ಸಂಜೆಯ ಹೊತ್ತಿನಲ್ಲಿ ತಮ್ಮ ತಪೋವನದೆಡೆಗೆ ಬಂದು ಸೇರುವಾಗ್ಗೆ,

ತಂತಮ್ಮ ಎಲೆಮನೆಗಳೊಳಗೆ ಬೆಳಗುತ್ತಿರುವ ಅಗ್ನಿಗಳು–ಅದೃಶ್ಯಗಳಾಗಿ ಅವರನ್ನು ಇದಿರ್ಗೊಳ್ಳುತ್ತಲಿದ್ದುವು. ಚಿಕ್ಕಮಕ್ಕಳು ತಮ್ಮ ಹಡೆದ ತಾಯಿಯರನ್ನು ಕಂಡು ತಿಂಡಿಯನ್ನು ಬೇಡುತ್ತ ಸುತ್ತಿಕೊಳ್ಳುವಂತೆ, ಹುಲ್ಲೆಗಳು–ಬಾಗಿಲು ಮುಂದೆ ಹರಡಿರುವ ಹುಲ್ಲುಕಾಳುಗಳಲ್ಲಿ ತಮ್ಮ ಪಾಲನ್ನು ಬೇಡುವಂತೆ ಎಲೆ ಮನೆಗಳ ಬಳಿಯಲ್ಲಿ ಮುನಿಪತ್ನಿಯರನ್ನು ಮುತ್ತಿಕೊಂಡಿದ್ದುವು. ಆ ಪುಣ್ಯಾಶ್ರಮದ ಗಿಡಗಳ ಬುಡಗಳಲ್ಲಿನ ಪಾತೆಗಳೊಳಗೆ ನಿಲ್ಲುವ ನೀರನ್ನು ಹಕ್ಕಿಗಳು ಹೆದರದೆ ಕುಳಿತು ಕುಡಿಯುವುದು ವಾಡಿಕೆಯಾಗಿದ್ದುದರಿಂದ, ಋಷಿಕನ್ಯೆಯರು–ಆ ಪಕ್ಷಿಗಳ ನಂಬುಗೆಗಾಗಿ ಹೂವಿನಗಿಡಗಳಿಗೆ ನೀರೆರೆದ ಕೂಡಲೆ ದೂರವಾಗಿ ಸರಿಯುತ್ತಲಿದ್ದರು. ಪರ್ಣಶಾಲೆಗಳ ಮುಂದೆ ಅಂಗಳಗಳೊಳಗೆ ಒಣಗಿಹಾಕಿದ್ದ ಕಾಳುಕಡ್ಡಿಗಳನ್ನು ಬಿಸಿಲು ತಂಪಾಗುತ್ತ ಬರಲು, ಗುಡ್ಡೆ ಮಾಡುತ್ತಲಿದ್ದರು. ಕಾಡಿನಲ್ಲಿ ಮೇಯಲಿಕ್ಕೆ ಹೋಗಿದ್ದು ಹಿಂದಿರುಗಿಬಂದ ಮೃಗಗಳು–ಆ ಬೈಲುಗಳಲ್ಲಿ ನಿರ್ಭಯವಾಗಿ ಮಲಗಿ, ಮೆಲಕು ಹಾಕತೊಡಗಿದ್ದವು. ಇಂತಹ ಪುಣ್ಯವನದ ಬಾಗಿಲಿನ ಬಳಿಗೆ ಬರುವಾಗ್ಗೆ, ಮುನಿಗಳು–ಅಲ್ಲಲ್ಲಿ ಸಾಯಂಕಾಲದ ಹೋಮಗಳನ್ನು ಮಾಡುತ್ತಲಿದ್ದರು, ಮಂತ್ರಪೂರ್ವಕವಾಗಿ ಕೊಟ್ಟ ತುಪ್ಪವೇ ಮೊದಲಾದ ಆಹುತಿಗಳನ್ನು ಕೈಗೊಂಡ ಅಗ್ನಿಗಳು ಪ್ರಜ್ವಲಿಸುತ್ತಲಿರುವುದನ್ನು ಸೂಚಿಸುತ್ತ, ಅವುಗಳಿಂದ ಹೊರಟ ಹೊಗೆಗಳು–ಗಾಳಿಯ ಮೂಲಕ ಆಶ್ರಮದ ಹೊರಗೆ ಬಂದು, ತಪೋವನಕ್ಕೆ ಅತಿಥಿಗಳಾಗಿ ಬರುವ ಪಾಂಥರಿಗೆ ತಮ್ಮ ಸುವಾಸನೆಯಿಂದ ಇಂಪುಕೊಡುತ್ತಾ, ಅವರನ್ನು ಪವಿತ್ರರನ್ನಾಗಿಯೂ ಮಾಡುತ್ತಲಿದ್ದುವು. ಆ ಬಳಿಕ–ದಿಲೀಪ ಮಹಾರಾಜನು – ರಥವನ್ನು ನಿಲ್ಲಿಸಿ, ಬಳಲಿದ ಕುದುರೆಗಳನ್ನು ಸುಧಾರಿಸಿಕೊಳ್ಳುವಂತೆ ಮಾಡೆಂದು ಸಾರಥಿಗೆ ಆಜ್ಞಾಪಿಸಿ, ಮೊದಲು ತನ್ನ ಹೆಂಡತಿಯನ್ನು ಕೆಳಗೆ ಇಳಿಸಿ, ತಾನೂ ತೇರಿನಿಂದಿಳಿದನು. ಅಲ್ಲಿಂದ ವನವನ್ನು ಒಳಹೊಕ್ಕು ಬರುತ್ತಲಿರುವಾಗ–ಸಕಲ ರಾಜನೀತಿ ಕುಶಲನಾಗಿ, ತಮಗೆ ಸಂರಕ್ಷಕನೆನಿಸಿದ ಭೂಪಾಲನು ಭಾರ್ಯೆಯೊಡನೆ ಬರುತ್ತಲಿರುವುದನ್ನು ಕಂಡು, ಜಿತೇಂದ್ರಿಯರೂ, ಸದಾಚಾರ ಸಂಪನ್ನರೂ ಆಗಿರುವ ತಪಸ್ವಿಗಳು–ಬಹುಮಾನ್ಯನಾದ ಆತನಿಗೆ ಕ್ರಮವಾಗಿ ಉಚಿತ ಸತ್ಕಾರಗಳನ್ನಿತ್ತರು. ಆಗಲಾ ಅರಸು–ಅವರಾಚರಿಸಿದ ಪೂಜೆಪುರಸ್ಕಾರಗಳನ್ನು ವಿನಯಪೂರ್ವಕವಾಗಿ ಪರಿಗ್ರಹಿಸಿ ಮುಂದುವರಿದು, ಸಾಯಂಕಾಲದ ಹೋಮಾನುಷ್ಠಾನವನ್ನು ಮುಗಿಸಿ, ಸ್ವಾಹಾದೇವಿಯಿಂದೊಡಗೂಡಿದ ಯಜ್ಞೇಶ್ವರನಂತೆ ಅರುಂಧತಿಯ ಸೇವೆಯನ್ನು ಕೈಗೊಳ್ಳುತ್ತ ಕುಳಿತಿರುವ ತಪೋನಿಧಿಯಾದ ವಶಿಷ್ಠಮುನಿಯ ಸಂದರ್ಶನವನ್ನು ಮಾಡಿಕೊಂಡನು. ಬಳಿಕ– ತನ್ನ ಹೆಂಡತಿಯೂ ತಾನೂ ಭಯಭಕ್ತಿಗಳೊಡನೆ,

ಬೇಗನೆ ಹತ್ತಿರಕ್ಕೆ ಬಂದು, ಮುನಿದಂಪತಿಗಳ ಆಡಿದಾವರೆಗಳನ್ನು ಪಿಡಿಯಲು, ಅರುಂಧತೀವಶಿಷ್ಠರು–ಅರಸಿತಿಗೂ ಅರಸನಿಗೂ ಪ್ರೀತಿಪೂರ್ವಕವಾಗಿ ಹರಸಿದರು. ಆಮೇಲೆ– ಮಹಾ ಮುನಿಯು– ಮಹಾರಾಜನಿಗೆ ಮನ್ನಣೆಯನ್ನು ಗೈದು, ಆತನಿಗೆ ಮಾರ್ಗಾಯಾಸವು ಕಳೆದ ಬಳಿಕ ರಾಜ್ಯವೆಂಬ ಆಶ್ರಮದಲ್ಲಿ ಮುನಿಯಂತಿರುವ ಆತನನ್ನು ಕುರಿತು, ರಾಜ್ಯಾಂಗಗಳ ವಿಷಯವಾಗಿ ಕುಶಲ ಪ್ರಶ್ನೆ ಮಾಡಿದನು:–

ಹಗೆಗಳನ್ನು ಅಡಗಿಸಿದವನೂ, ವಾಚಾಲಕರೊಳಗೆ ಮೊದಲನೆಯವನೂ ಆಗಿರುವ ಅರಸು– ವೇದನಿಧಿಯಾದ ವಶಿಷ್ಠಮುನಿಯ ಪ್ರಶ್ನಾನಂತರದಲ್ಲಿ ಅರ್ಥಗರ್ಭಿತವಾದ ಮಾತುಗಳನ್ನಾಡತೊಡಗಿದನು: –

ಎಲೈ ಕುಲಗುರುವೇ! ನನಗೆ ಒದಗಬಹುದಾಗಿರುವ ದೈವಿಕಗಳೂ, ಮಾನುಷಗಳೂ ಆದ ಆಪತ್ತುಗಳ ಸುಳಿವಿಲ್ಲದಂತೆ ಮಾಡಲು ನೀನು ಬದ್ಧಕಂಕಣನಾಗಿರುವಲ್ಲಿ, ನನ್ನ ರಾಜ್ಯಾಂಗಗಳಲ್ಲಿ ಕುಶಲವು ನೆಲೆಗೊಳ್ಳದಿರಲು ಕಾರಣವೇನು? ಸಕಲವೂ ಸಂಪನ್ನವಾಗಿಯೇ ಇದೆ; ಮಂತ್ರಕರ್ತನೂ ಪ್ರಯೋಗಕರ್ತನೂ ಆಗಿರುವ ನಿನ್ನ ಮಂತ್ರಪ್ರಯೋಗದಿಂದಲೇ ಹಗೆಗಳೆಲ್ಲ ಅಡಗಿ, ಅವರ ಸುಳಿವೇ ಇಲ್ಲದಂತಾಗಿರುವಲ್ಲಿ, ಇದಿರಿಗೆ ಕಂಡುದನ್ನು ಮಾತ್ರವೇ ಗುರಿಹಿಡಿದು ಹೊಡೆವ ನನ್ನ ಶರಗಳಿಗೆ ಕೆಲಸವೇ ಇಲ್ಲದಂತಾಗಿದೆ. ಆದುದರಿಂದಲೇ ಮಾನುಷವಾದ ಆಪದಕ್ಕೆ ಎಡೆಯಿಲ್ಲ. ಕರ್ಮಠನಾದ ನೀನು–ವಿಧಿಯನ್ನನುಸರಿಸಿ ಅಗ್ನಿಗಳಲ್ಲಿ ಕೊಡುವ ಆಹುತಿಯೇ–ಮಳೆಯಿಲ್ಲದೆ ಒಣಗುವ ಪೈರುಗಳಿಗೆ ಸೆಬ್ಬೆಯನ್ನನುಸರಿಸಿದ ಮಳೆಯಾಗಿ ಪರಿಣಮಿಸಿ, ಬೆಳೆಯು ಹುಲುಸಾಗಲು ಕಾರಣವಾಗುತ್ತಿರುವಲ್ಲಿ, ದೈವಿಕವಾದ ಕೇಡಿಗೆಡೆಯೆಲ್ಲಿ? ಎಲೈ ಮಹಾಮುನಿಯೇ! ನನ್ನ ದೇಶದ ಪ್ರಜೆಗಳೆಲ್ಲ ಈತಿ ಬಾಧೆಗಳ ಸುದ್ದಿಯನ್ನೇ ಅರಿಯದೆ ನೂರುವರ್ಷಗಳ ಕಾಲವೂ ಬದುಕುತ್ತ, ಸುಖದಿಂದಿರುವುದಕ್ಕೆ ನಿನ್ನ ತಪೋಮಹಿಮೆಯೇ ನಿಮಿತ್ತವು. ಬ್ರಹ್ಮನ ಮಾನಸಪುತ್ರನೂ ಆಚಾರ್ಯನೂ ಆಗಿರುವ ನೀನು–ಹೀಗೆ ನನ್ನ ಯೋಗಕ್ಷೇಮಗಳನ್ನು ಯಾವಾಗಲೂ ವಿಚಾರಿಸಿಕೊಳ್ಳುತ್ತಲಿರುವಲ್ಲಿ, ನನ್ನ ಸಂಪತ್ತುಗಳಿಗೆ ಯಾವುದೊಂದು ಕುಂದೂ ಇಲ್ಲದಂತಾಗಿದೆ.

ಆದರೆ– ಸಕಲೈಶ್ವರ್ಯವೂ ಇಷ್ಟು ಅಣಿಯಾಗಿರುವಲ್ಲಿ, ನೀನೀಗ ಇಲ್ಲಿಗೆ ಬರಲು ಕಾರಣವೇನು ಎಂಬೆಯೊ? ಬಿನ್ನವಿಸುವೆನು ಲಾಲಿಸು– ಎಲೈಗುರುವೇ! ನಿನ್ನ ಸೊಸೆಯಾದ ಈ ಸುದಕ್ಷಿಣೆಯಲ್ಲಿ ಸಂತಾನದ ಮುಖವನ್ನು ಕಾಣದಿರುವುದರಿಂದ ಸಪ್ತದ್ವೀಪಗಳಿಂದೊಡಗೂಡಿದ ವಸುಮತಿಯು–ರತ್ನಗಳನ್ನೇ ಬೆಳೆದುಕೊಡುತ್ತಲಿದ್ದರೂ ನನಗೆ ಸುಖಕರವಾಗಿಲ್ಲವು. ಏತಕೆಂದರೆ–ನನ್ನ ಅನಂತರದಲ್ಲಿ ಪಿಂಡದಾನವು ದೊರೆಯುವುದಿಲ್ಲವೆಂಬ ಶಂಕೆಯಿಂದ ಪಿತೃದೇವತೆಗಳು–ಶ್ರಾದ್ಧಗಳಲ್ಲಿ ನಾನು ಕೊಡುವ

ಪಿಂಡಗಳನ್ನು ಹೊಟ್ಟೆತುಂಬ ತಿನ್ನದೆ, ಸ್ವಲ್ಪ ಸ್ವಲ್ಪವಾಗಿ ಉಳಿಸಿಟ್ಟುಕೊಳ್ಳುತಿರುವರಲ್ಲಾ ಎಂದು ದುಃಖಿಸುತ್ತೇನೆ. ಮತ್ತು- ನನ್ನ ತರುವಾಯ ತಮಗೆ ತರ್ಪಣೋದಕ ಪಾನವು ದುರ್ಲಭವೆಂದು ತಿಳಿದು, ಹಬ್ಬ ಹರಿದಿನಗಳಲ್ಲಿ ನಾನು ಕೊಡುವ ತರ್ಪಣ ಜಲವು-ಸಂಕಟದ ನಿಟ್ಟುಸಿರಿನಿಂದ ತುಸಬಿಸಿಯಾಗಲು, ಅದನ್ನೇ ಕುಡಿಯುತ್ತಲಿರುವ ರೆಂದು ವ್ಯಥೆಪಡುತ್ತಲಿದ್ದೇನೆ. ಇದಲ್ಲದೆ-ಯಜ್ಞ ಯಾಗಾದಿಗಳನ್ನಾಚರಿಸಿ, ದೇವಋಣದಿಂದ ಬಿಡುಗಡೆಯನ್ನು ಹೊಂದಿ, ಶುದ್ಧಚಿತ್ತನಾಗಿದ್ದೇನೆ, ಆದರೆ ಸಂತತಿಯ ಮುಖವನ್ನು ಕಾಣದೆ ಪಿತೃಋಣದಿಂದ ಮುಕ್ತನಾಗದೆಯಿರುವ ಕೊರತೆಯಿಂದ ಮಲಿನಾತ್ಮನಾಗಿರುವೆನು. ಈ ಕಾರಣದಿಂದಲೇ ಒಂದೆಡೆ ಬೆಳಗುತ್ತಲೂ, ಮತ್ತೊಂದೆಡೆ ಬೆಳಗದೆಯೂ ಇರುವ ಲೋಕಾಲೋಕಪರ್ವತದಂತಿರುವೆನು.

ಎಲೈ ಸರ್ವಜ್ಞನಾದ ಆಚಾರ್ಯನೇ! ತಪಸ್ಸು, ದಾನ, ಮುಂತಾದ ಸತ್ಕರ್ಮಗಳಿಂದೊಗೆವ ಸುಕೃತವು ಪರಲೋಕದಲ್ಲಿನ ಸುಖವನ್ನು ಕಲ್ಪಿಸುವುದು. ಸತ್ಕುಲದೊಳುದಿಸಿದ ಸಂತಾನವು- ಇಹಪರಸುಖ ಗಳೆರಡನ್ನೂ ಅನುಗೊಳಿಸುವುದಲ್ಲವೆ? ಎಲೈ ಹಿತಚಿಂತಕನಾದ ಗುರುವೇ! ಈ ನಿನ್ನ ತಪೋವನದಲ್ಲಿ ನೀನೇ ಒಂದು ಬಿತ್ತವನ್ನು ನಟ್ಟು, ಗಿಡವಾದ ಬಳಿಕ ಅಕ್ಕರೆಯಿಂದ ನೀರೆರೆದು ಸಾಕುತ್ತಲಿದ್ದು, ತರುವಾಯ ಆ ತರುವು -ಹೂತು ಹಣ್ಣು ಬಿಡದೆ ಗೊಡ್ಡಾದರೆ, ಅದರಿಂದ ನಿನ್ನ ಮನಸ್ಸಿಗೆ ನೋವುಂಟಾಗುವುದಿಲ್ಲವೆ? ಹಾಗೆಯೇ-ನಿನ್ನವನಾದ ಈ ನಾನು ಸಂತಾನಶೂನ್ಯನಾಗಿರುವಲ್ಲಿ, ಇಂತಹ ನನ್ನನ್ನು ನೋಡಿ, ನೀನು ಸಂಕಟಪಡದಿರಬಹುದೆ? ಎಲೈ ಪೂಜ್ಯನೇ! ಮಜ್ಜನಕ್ಕೆ ಬಿಡದೆ ಒಂದೆಡೆಯಲ್ಲಿಯೇ ಕಟ್ಟಿದ್ದರೆ, ಆ ಕಟ್ಟು ಗೊತ್ತು- ಆನೆಯನ್ನು ಸಂಕಟಪಡಿಸುವ ಹಾಗೆ, ಪಿತೃಗಳ ಕಟ್ಟ ಕಡೆಯ ಸಾಲವು ಸಂತತಿಯಿಲ್ಲದ ನನ್ನನ್ನು ತಡೆಯಲಾಗದ ತಾಪಕ್ಕೊಳಗುಮಾಡಿದೆ. ಇದೇ ನನ್ನ ಮುಗಿವಳಿಯ ಬಿನ್ನಪವು. ನಾನಾ ಋಣದಿಂದ ಮುಕ್ತನಾಗುವುದೆಂಬುದು ನಿನ್ನ ಕರಗತವಾಗಿದೆ ಏಕೆಂದರೆ- ಇಕ್ಷ್ವಾಕು ಕುಲದರಸರಿಗೆ ಅಸದಳವೆನಿಸಿದ ಆಯವು- ನಿನ್ನಿಂದಾಗತಕ್ಕುದು ಎಂಬುದು ಸಿದ್ಧವಾಗಿಯೇ ಇದೆ ಎಂದು ಹೇಳಿ ಸುಮ್ಮನಾದನು.

ಇಂತಾ ದಿಲೀಪನ ಬಿನ್ನಪವನಾಲಿಸಿ, ತಪೋನಿಧಿಯಾದ ಮುನಿಯು ಮೌನದಿಂದ ಅರೆಮುಗಿದ ಕಣ್ಣುಗಳುಳ್ಳವನಾಗಿ, ಎವೆಯಿಕ್ಕದೆ, ಮಲಗಿದ ಮೀನುಳ್ಳಮಡುವಿನಂತೆ ಅರೆಗಳಿಗೆಯವರೆಗೆ ಅಲುಗದೆ ಸುಮ್ಮನಿದ್ದು, ಚಿತ್ತೈಕಾಗ್ರ್ಯದಲ್ಲಿ ಸಮಾಧಿದೃಷ್ಟಿಯಿಂದ ಅರಸಿನ ಸಂತಾನಲಾಭದ ತಡೆಗೆ ಕಾರಣವನ್ನರಿತು, ತರುವಾಯ ಧರಾನಾಥನನ್ನು ಕುರಿತು ಇಂತೆಂದನು:-

ಎಲೈ ಧರಣೀಪಾಲನೆ! ಕೇಳು– ಪೂರ್ವದಲ್ಲಿ ಒಂದುವೇಳೆ– ನೀನು ಸ್ವರ್ಗಕ್ಕೆ ತೆರಳಿದ್ದು, ಇಂದ್ರನನ್ನು ಸೇವಿಸಿ, ಮರಳಿ ಹಿಂದಿರುಗಿ ಬರುತ್ತಿರುವಾಗ ನಿನ್ನ ಹಾದಿಯಲ್ಲಿಯೇ ಕಲ್ಪವೃಕ್ಷದ ತಡಿಯಲ್ಲಿ ಕಾಮಧೇನುವು ವಿಶ್ರಮಿಸಿಕೊಂಡಿದ್ದಿತು, ಅಂದು ಈ ನಿನ್ನ ಹೆಂಡತಿಗೆ ಋತುಸ್ನಾನದ ದಿವಸವಾಗಿದ್ದಿತು, ಆದಕಾರಣ ಧರ್ಮ ಲೋಪವಾಗುವುದೆಂಬ ಭಯದಿಂದ ನೀನು ಈಕೆಯನ್ನೇ ಮನದೊಳಗೆ ನೆನೆಯುತ್ತ ಬರುತಲಿದ್ದೆ, ಪ್ರದಕ್ಷಿಣೆ, ನಮಸ್ಕಾರ ಮುಂತಾದ ಪೂಜೆಗೆ ಯೋಗ್ಯವಾಗಿದ್ದರೂ ಆ ಧೇನುವಿಗೆ ಉಚಿತ ಸತ್ಕಾರವನ್ನು ಆಚರಿಸಲಿಲ್ಲ, ಆಗಲಾ ಧೇನುವಿಗೆ ತನ್ನನ್ನು ತಿರಸ್ಕರಿಸಿದನೆಂದು ಸಿಟ್ಟು ಹತ್ತಿತು.

ಆ ಬಳಿಕ: "ನನ್ನನ್ನು ಅಸಡ್ಡೆ ಮಾಡಿದೆಯಾದ ಕಾರಣ–ನನ್ನ ಸಂತತಿಯನ್ನು ಪೂಜಿಸದೆ ನಿನಗೆ ಸಂತಾನ ಲಾಭವುಂಟಾಗದು" ಎಂದು ನಿನಗೆ ಶಾಪವನ್ನು ಕೊಟ್ಟಿತು, ಆಗಲಲ್ಲಿ–ಬಾಂದೊರೆಯೊಳಗೆ ಇಂದ್ರನಾನೆಯು ಮಜ್ಜನವನ್ನು ಗೆಯ್ಯುತ್ತಲಿದ್ದಿತು, ಹೊಳೆಯ ಶಬ್ದವು ಬಲವಾಗಿದ್ದುದರಿಂದ ಆ ಧೇನುವಿನ ಶಾಪದ ಬಿರುನುಡಿಯು ನಿನಗಾಗಲಿ, ನಿನ್ನ ಸಾರಥಿಗಾಗಲಿ ಕೇಳಬರಲಿಲ್ಲ, ಇಂತಾ ಸುರಭಿಯ ಮನ್ನಣೆಗೆ ಕೊರತೆಯುಂಟಾದುದೇ ನಿನ್ನ ಕೋರಿಕೆಯು ಕೈಗೂಡದಿರಲು ಕಾರಣವಾಯಿತು. ಲೋಕದಲ್ಲಿ ಮಾನ್ಯರನ್ನು ಮಾನಿಸದೆ ಮೀರುವುದು ಮೇಲ್ಮೆಗೆ ಅಡ್ಡಿಯೆಂದು ತಿಳಿ. ಈಗಲಾ ಸುರಸುರಭಿಯನ್ನೇ ಸೇವಿಸಿ ಅನುಗ್ರಹವನ್ನು ಪಡೆದು ಬರೋಣ ಎಂದರೆ – ಪಾತಾಳಲೋಕದಲ್ಲಿ ವರುಣನು ಯಜ್ಞವನ್ನು ಮಾಡುತ್ತಿರುವನು, ಹೋಮಸಾಧನವಾದ ಹಾಲುಮೊಸರು ತುಪ್ಪ ಮೊದಲಾದುವನ್ನು ಹವಣಿಸಿಕೊಡಲು ಹೋಗಿರುವುದು, ಅಲ್ಲಿಗೇ ಹೋಗಿ ಬರಬಹುದೆಂದರೆ–ಪಾತಾಳದ ಬಾಗಿಲು ಸರ್ಪಗಳ ಕಾವಲಿನಿಂದ ಒಳಹೊಗಲಸದಳವಾಗಿದೆ. ಆದಕಾರಣ ಆ ಸುರಭಿಗೆ ಬದಲಾಗಿ ಅದರ ನಂದನೆಯಾದ ಈ ನಂದಿನಿಯನ್ನು ನಿನ್ನ ಧರ್ಮಪತ್ನಿಯೊಡನೆ ಪರಿಶುದ್ಧನಾಗಿ ಆರಾಧಿಸು. ಸುಪ್ರೀತವಾದ ಈ ಧೇನುವೇ ನಿನ್ನ ಕೋರಿಕೆಯನ್ನೆಲ್ಲ ಈಡೇರಿಸುವುದು ಎಂದಿಂತು ವಶಿಷ್ಠ ಮುನಿಯು ವಸುಧಾಧಿಪನೊಡನೆ ಉಸಿರುತ್ತಿದ್ದನು. ಹುಲ್ಲಮೇಯಲಿಕ್ಕೆ ತೆರಳಿದ್ದ ನಂದಿನಿಯೆಂಬ ಶ್ರೇಷ್ಠವಾದ ಆ ಮುನಿಧೇನುವು ಕಾಡಿನಿಂದ ಹಿಂದಿರುಗಿ ಆಹೊತ್ತಿಗೆ ಸರಿಯಾಗಿ ಬಂದು ಶುಭವನ್ನು ಸೂಚಿಸಿತು. ಮತ್ತು–ಕಪಿಲವರ್ಣದ ಆ ಆಕಳು–ಹಣೆಯಲ್ಲಿರುವ ಡೊಂಕಾಗಿ ಬೆಳೆದ ಬೆಳ್ಗೂದಲಿನ ಹುಟ್ಟುಮಚ್ಚೆಯಿಂದ, ಚಂದಿರನಿಂದ ಸಂಜೆಯು ಬೆಳಗುವಂತೆ, ಕಂಗೊಳಿಸುತ್ತಲಿದ್ದಿತಲ್ಲದೆ ಎಳೆಗರುವನ್ನು ಕಂಡಕೂಡಲೆ ಕುಂಭದಂತೆ ತೋರವಾದ ತನ್ನ ಕೆಚ್ಚಲಿನಿಂದ ಹನಿಯಿಡುತ್ತ, ಯಾಗದ ಮುಗಿವಳಿಯಲ್ಲಿನ ಮಂಗಳಸ್ನಾನಕ್ಕಿಂತಲೂ ಶುಭಕರವೆನಿಸಿದ, ತುಸಬಿಸಿಯಾಗಿರುವ ಹಾಲಿನಿಂದ ನೆಲವನ್ನು ನನೆಯಿಸುತ್ತ ನಿಂತಿತು.

ಇದರ ಮೇಲೆ – ತನ್ನ ಕಾಲಗೊರಸಿನ ತುಳಿತದಿಂದೆದ್ದ ಧೂಳಿನ ಸಂಸ್ಪರ್ಶದಿಂದ ಹತ್ತಿರದಲ್ಲಿರುವ ಮಹೀಪತಿಗೆ ತೀರ್ಥಸ್ನಾನಕ್ಕಿಂತ ಅಧಿಕವಾದ ಪವಿತ್ರತೆಯನ್ನುಂಟುಮಾಡಿತು. ಆಗ ಶಕುನಶಾಸ್ತ್ರವನ್ನೆಲ್ಲ ಬಲ್ಲ ತಪೋನಿಧಿಯು–ದರ್ಶನಮಾತ್ರದಿಂದ ಪಾವನವನ್ನು ಗೈವ ನಂದಿನಿಯ ಇರವನ್ನು ಕಂಡು, ಶಿಷ್ಯನ ಮನದೆಣಿಕೆಯು ಕೈಗೂಡುವುದೆಂದು ಬಗೆದು, ಭೂನಾಥನನ್ನು ಕುರಿತು ಮತ್ತಿಂತೆಂದನು–

ಎಲೈ ರಘುಕುಲಲಲಾಮನೇ! ಮಂಗಳಾಂಗಿಯಾದ ಈ ನಂದಿನಿಯು–ತನ್ನ ಹೆಸರನ್ನು ಹೇಳುತ್ತಿರುವ ಸಮಯಕ್ಕೆ ಸರಿಯಾಗಿ ಬಂದು ನಿಂತಿತಾದಕಾರಣ ನಿನ್ನ ಮನೋರಥವು ಬಹುಬೇಗನೆ ಸಿದ್ಧಿಸುವುದೆಂದು ಭಾವಿಸು. ಇನ್ನುಮೇಲೆ ನಿಯಮಾಧ್ಯಯನದಿಂದ ವಿದ್ಯೆಯನ್ನು ಪಡೆಯುವ ಹಾಗೆ, ಮುನಿವೃತ್ತಿಯಳ್ಳವನಾಗಿ ನಿತ್ಯವೂ ಈ ಧೇನುವನ್ನು ಹಿಂಬಾಲಿಸಿ, ಸೇವಿಸುತ್ತಿದ್ದು ಅನುಗ್ರಹವನ್ನು ಪಡೆ, ಆದರೆ – ವನದೊಳಗೆ ಈ ಸುರಭಿಯು ಮುಂದೆ ಹೊರಟರೆ ನೀನು ಅದರ ಹಿಂದೆಯೇ ನಡೆ, ನಿಂತಾಗ ನಿಲ್ಲು, ಕುಳಿತಾಗ ಕೂಡು, ಅದು ನೀರು ಕುಡಿದರೆ ನೀನೂ ಕುಡಿ. ಇದೇ ಸೇವಾಪ್ರಕಾರವೆಂದರಿ. ಮತ್ತು ನಿನ್ನ ಈ ಧರ್ಮಪತ್ನಿಯು–ನಿತ್ಯವೂ ಭಕ್ತಿಭರಿತಳಾಗಿ ಮುಂಜಾನೆಯಲ್ಲಿ ಈ ಧೇನುವನ್ನು ಗಂಧ ಪುಷ್ಪಾಕ್ಷತೆಗಳಿಂದ ಅರ್ಚಿಸಿ, ತಪೋವನದ ಎಲ್ಲೆಯವರೆಗೂ ಅದನ್ನು ಹಿಂಬಾಲಿಸುತ್ತಲೂ, ಹಾಗೆಯೇ ಸಂಜೆಯಲ್ಲಿ ಇದಿರ್ಗೊಳ್ಳುತ್ತಲೂ ಇರಬೇಕು. ನಿನ್ನಲ್ಲಿ ಅನುಗ್ರಹವುಂಟಾಗುವವರೆಗೂ ನಾನು ಹೇಳಿದ ರೀತಿಯಿಂದ ನೀನು ಈ ಧೇನುವಿನ ಸೇವೆಯಲ್ಲಿ ತಪ್ಪದೆ ಆಸಕ್ತನಾಗಿರು. ನಿನ್ನ ಕಾರ್ಯವು ನಿರ್ವಿಘ್ನವಾಗಿ ನಡೆಯಲಿ, ಯೋಗ್ಯರಾದ ಮಕ್ಕಳನ್ನು ಪಡೆದಿರುವವರೊಳಗೆ ನೀನು ಅಗ್ರಗಣ್ಯನಾಗು ಎಂದು ಹರಸಿದನು.

ಆ ಬಳಿಕ–ಮುನಿಯ ಪ್ರಿಯಶಿಷ್ಯನಾದ ದಿಲೀಪನು – ಪತ್ನೀಸಹಿತನಾಗಿ, ತಪೋನಿಧಿಯು–ಅಗ್ನಿ ಸಾನ್ನಿಧ್ಯದಲ್ಲಿ ಪ್ರೀತಿಪೂರ್ವಕವಾಗಿ ಹೇಳಿದ ನುಡಿಯು ಎಂದಿಗೂ, ಸಟೆಯಾಗತಕ್ಕುದಲ್ಲವೆಂದು ಭಾವಿಸಿ, ಆನಂದಭರಿತನಾಗಿ, ಬಾಗಿದ ಶಿರಸ್ಸಿನಿಂದ ತಮ್ಮಪ್ಪಣೆಯಂತಾಗಲೆಂದು ಒಪ್ಪಿಕೊಂಡನು. ಆ ಹಿಂದೆ ವಿದ್ಯಾವಂತನೂ, ಬ್ರಹ್ಮಮಾನಸಪುತ್ರನೂ, ಸತ್ಯಪ್ರಿಯವಚನನೂ ಆಗಿರುವ ಮುನಿಯು–ರಾತ್ರಿಯು ಹೆಚ್ಚುತ್ತಾ ಬರುವುದನ್ನು ಕಂಡು, ವಿಶ್ವಂಭರಾಧಿಪತಿಗೆ ವಿಶ್ರಮಿಸಿಕೊಳ್ಳಲಿಕ್ಕೆ ಅಪ್ಪಣೆಯನಿತ್ತನು.

ಆದರೆ–ತಪೋನಿಧಿಯಾದ ವಶಿಷ್ಠನು–ತನ್ನಯ ತಪೋಮಹಿಮೆಯಿಂದ ಆತನಿಗೆ ರಾಜಾರ್ಹವಾದ ಸಕಲ ಸಲಕರಣೆಗಳನ್ನೆಲ್ಲ ಅಣಿಮಾಡಿಕೊಡುವಷ್ಟು ಶಕ್ತನಾಗಿದ್ದರೂ,

ಶಾಸ್ತ್ರದ ಪ್ರಕಾರ ಅರಸನನ್ನು ನಿಯಮಪರನನ್ನಾಗಿ ಇಟ್ಟಿರಬೇಕಾದುದು ಧರ್ಮವೆಂದು ಭಾವಿಸಿ, ವನವಾಸೋಚಿತವಾಗಿರುವ ದರ್ಭೆಯ ಹಾಸಿಗೆಯೇ ಮುಂತಾದ ಸಾಮಗ್ರಿಯನ್ನು ಒದಗಿಸಿಕೊಟ್ಟನು. ತದನಂತರದಲ್ಲಿ ದಿಲೀಪಮಹಾರಾಜನು– ಕುಲಪತಿಯಾದ ಮುನಿಯು ತೋರಿದ ಎಲೆಮನೆಯನ್ನು ತನ್ನ ಧರ್ಮಪತ್ನಿಯೊಡನೆ ಒಳಹೊಕ್ಕು, ಪರಿಶುದ್ಧನಾಗಿ, ನೇಮದಿಂದಿರುವ ಆಕೆಯೊಡನೆ ದರ್ಭೆಯ ಹಾಸಿಗೆಯಲ್ಲಿ ಪವಳಿಸಿದ್ದು, ಬೆಳಗ್ಗಿನ ಜಾವದಲ್ಲಿ ಮುನಿಶಿಷ್ಯರ ಅಧ್ಯಯನಾವೃತ್ತಿಯಿಂದ ಬೆಳಗಾಗುತ್ತ ಬಂದಿತೆಂದು ತಿಳಿದು ಎಚ್ಚೆತ್ತನು.

****

ಎರಡನೆಯ ಅಧ್ಯಾಯ

ನಂದಿನೀ ವರಪ್ರಸಾದ

ಸೂಚನೆ । ಸುರಭಿಯು ತನ್ನಂ ಸೇವಿಪ
ನರಪನ ಗುರುಭಕ್ತಿಯರಿದು ಮೆಚ್ಚುತೆ ವರಮಂ ।
ಕರುಣಿಸೆಯರಸಿತಿ ಬಾಂದೊರೆ
ಹರತೇಜವ ತಳೆದ ತೆರದಿ ಗರ್ಭವ ತಾಳ್ದಳ್ ॥

ಆಮೇಲೆ ಚೆನ್ನಾಗಿ ಬೆಳಗಾಯಿತು, ಅರಸಿತಿಯೂ ಎಚ್ಚತ್ತು ಹೂವು ಗಂಧ ಮೊದಲಾದವುಗಳಿಂದ ಆಕಳನ್ನು ಪೂಜಿಸಿದಳು, ಒಳ್ಳೆಯ ಹೆಸರುವಾಸಿಯನ್ನೇ ಹಣವನ್ನಾಗಿ ತಿಳದವನೆನಿಸಿದ ಜನರೊಡೆಯನು – ಹಾಲಕುಡಿದ ಕರುವನ್ನು ಕಟ್ಟಿದ ಬಳಿಕ ಕಾಡಿನಲ್ಲಿ ಮೇಯಿಸಲಿಕ್ಕೆ ಮುನಿಧೇನುವನ್ನು ಕಣ್ಣಿಯ ಕಳಚಿ ಬಿಟ್ಟನು, ತರುವಾಯ – ಹೆಜ್ಜೆಯೂರಿದ ತಾವನ್ನೆಲ್ಲ ಪವಿತ್ರವಾದುದನ್ನಾಗಿ ಮಾಡುತ್ತ ಆಕಳು ಮುಂದೆ ಹೊರಟಿತು, ಗರತಿಯರೊಳಗೆ ಮೊದಲನೆಯವಳೆನಿಸಿದ ಸುದಕ್ಷಿಣೆಯು – ತಪಸ್ವಿಯ ಆಣತಿಯಂತೆ ತಪೋವನದ ಎಲ್ಲೆಯುವರೆಗೂ ಅದನ್ನು ಹಿಂಬಾಲಿಸತೊಡಗಿದಳು, ವೇದಾರ್ಥವನ್ನು ಅನುಸರಿಸುವ ಸ್ಮೃತಿಯಂತೆ ಕಂಗೊಳಿಸಿದಳು. ಬಳಿಕ ಯಶೋವಂತನೆನಿಸಿ ಮನೋಹರನಾಗಿರುವ ದೊರೆಯು– ಬಹು ದಯಾಳು, ತನ್ನ ಪ್ರಿಯ ಪತ್ನಿಯನ್ನು ಅಲ್ಲಿಂದ ಹಿಂದಕ್ಕೆ ಕಳುಹಿ, ನಾಲ್ಕುಕಡಲುಗಳನ್ನು ನಾಲ್ಕುಮೊಲೆಗಳನ್ನಾಗಿ ಮಾಡಿಕೊಂಡು, ಗೋರೂಪವನ್ನು ಧರಿಸಿದ ಧರೆಯನ್ನು ಪೊರೆಯುವಷ್ಟು ಪ್ರಯತ್ನದಿಂದ ನಂದಿನಿಯನ್ನು, ಮುನಿಯಾಣತಿಯಂತೆ ಸಂರಕ್ಷಿಸತೊಡಗಿದನು. ಇದಲ್ಲದೆ – ಆ ಆಕಳನ್ನು ಕಾಪಿಡುವ ನೋಂಪಿಯಲ್ಲಿ ತಾನೊಬ್ಬನೇ ಕಂಕಣವನ್ನು ಕಟ್ಟಿಕೊಂಡಿರುವುದರಿಂದ ತನ್ನನ್ನು ಹಿಂಬಾಲಿಸಿ ಬರುತ್ತಲಿದ್ದ ಇತರ ಅನುಚರರನ್ನೂ ಹಿಂದಿರುಗಹೇಳಿದನು. ಮನುವಂಶದರಸರೆಲ್ಲ ತಂತಮ್ಮ ತೋಳುಬಲದಿಂದಲೇ ತಮ್ಮನ್ನು ಕಾಪಾಡಿಕೊಂಬುದು ವಾಡಿಕೆ, ಈತನ ಶರೀರ ಸಂರಕ್ಷಣೆಯ ವಿಷಯದಲ್ಲಿ ಪರಾಪೇಕ್ಷೆಯೇ ಇಲ್ಲ. ಅಸಹಾಯಶೂರನಲ್ಲವೆ?

ಬಳಿಕಲಾ ಪೊಡವಿಯೊಡೆಯನು ಪಶುವನ್ನು ಪೊರೆದ ಪರಿಯೆಂತೆಂದರೆ:- ಬಲುಸವಿಯಾಗಿರುವ ಎಳೆಹುಲ್ಲಿನ ಹಿಡಿಗಳನ್ನು ಕೊಡುತ್ತಬಂದನು. ಆಗಾಗ ಆಕಳಿನ ಮೈತುರಿಸುತ್ತಲಿದ್ದನು. ಅದರ ಮೈಮೇಲೆ ನೊಣಗಳು ಬಂದು ಕುಳಿತರೆ ಮೈತಡವಿ ಹಾರಿಸುತ್ತಲಿದ್ದನು. ಅದು ಹೇಗೆಹೇಗೆ ತಿರುಗಿನಡೆದರೆ ಹಾಗೆಹಾಗೆಲ್ಲ ತಾನೂ, ಅದರ ಮನವೊಪ್ಪುವಂತೆ ಅನುಸರಿಸುತ್ತಲಿದ್ದನು. ನಿಂತರೆ ನಿಂತುಕೊಂಬನು, ಹೊರಟರೆ ಮುಂದುವರಿವನು, ಮಲಗಿದರೆ ಕುಳಿತುಕೊಂಬನು, ಜಲಪಾನವನ್ನು ಮಾಡಿದರೆ ತಾನೂ ನೀರನ್ನು ಕುಡಿವನು. ಈ ಪ್ರಕಾರ ಅದರ ನೆಳಲು ಹೇಗೋಹಾಗೆ ಅನುವರ್ತಿಸುತ್ತಿದ್ದನು. ಹೀಗೆ ಬರುತ್ತಲಿರುವ ರಾಜನು - ತನ್ನ ದೊರೆತನದ ತೊಡವಾಗಿರುವ ಛತ್ರ ಚಾಮರಗಳನ್ನು ತೆಗೆದಿಟ್ಟು ಬಂದಿದ್ದರೂ ಮುಖದಲ್ಲಿ ಬೆಳಗುವ ಹೊಳಪಿನಿಂದ, ನೋಡಿದವರಿಗೆ 'ಈತನು ದೊರೆಯೇ ಸರಿ' ಎಂದು ಊಹಿಸಲು ತಕ್ಕವನಾಗಿದ್ದನು. ಇದರಿಂದ ಹೊರಗೆ ಕಾಣಬರದ ಮದಜಲಧಾರೆಯನ್ನೊಳಗೊಂಡಿರುವ ಕೊಬ್ಬಿದ ಮದದಾನೆಯಂತೆ ಕಾಣಬರುತ್ತಿದ್ದನು. ಆಮೇಲೆ ಸಣ್ಣ ಸಣ್ಣ ಬಳ್ಳಿಗಳನ್ನು ತೆಗೆದು ಸುರಳೆಯನ್ನು ಸುತ್ತಿ ಕೆದರಿದ್ದ ತಲೆಗೂದಲನ್ನೆಲ್ಲ ಏರಗಟ್ಟಿದನು, ಹೆದೆಯನ್ನೇರಿಸಿದ ಬಿಲ್ಲನ್ನು ಕಯ್ಯಲ್ಲಿ ಹಿಡಿದನು, ಮುನಿಯ ಆಕಳನ್ನು ಕಾಪಿಡುವ ನೆಪದಿಂದ ಕಾಡೊಳಿರುವ ಕೆಟ್ಟ ಮಿಕಗಳನ್ನು ಸದೆಬಡಿಯಲುಜ್ಜುಗಿಸಿರುವಂತೆ ಕಾಣಬರುತ್ತಾ ಸಂಚರಿಸುತ್ತಿದ್ದನು.

ದಿಲೀಪ ಮಹಾರಾಜನೇನು ಸಾಧಾರಣನೆ? ಮಹಾನುಭಾವನಾದ ಚಕ್ರವರ್ತಿಯಲ್ಲವೆ? ಆತನ ಮಹಿಮೆಯು ಲೋಕದಲ್ಲೆಲ್ಲ ಹರಡಿಕೊಂಡಿದ್ದಿತು, ಆ ಮಹಾರಣ್ಯದಲ್ಲಿ ಕೂಡ ಕಾಡಮರ ಮೊದಲಾದವುಗಳೂ ಆತನಿಗೆ ರಾಜೋಪಚಾರವನ್ನು ಮಾಡುವಂತೆ ಕಾಣಬಂದುವು:-

ವರುಣನಿಗೆಣೆಯೆನಿಸಿದ ಮಹಾರಾಜನು ಅರಣ್ಯದ ದಾರಿಯುದ್ದಕ್ಕೂ ಬರುತ್ತಲಿರುವಾಗ-ಹತ್ತಿರದಲ್ಲಿ ಹೊಗಳುಭಟರಿರಲಿಲ್ಲ, ಇಕ್ಕೆಲದ ಸಾಲುಮರಗಳು-ತಮ್ಮಲ್ಲಿ ಕುಳಿತು ಕೊಬ್ಬಿ ಕೂಗುತ್ತಲಿರುವ ಹಕ್ಕಿಗಳ ದನಿಯ ನೆಪದಿಂದ 'ಮಹಾರಾಜನಿಗೆ ಜಯವಾಗಲಿ, ಪರಾಕು, ಎಂದೀಪ್ರಕಾರ ವೈತಾಳಿಕರ ಕೆಲಸವನ್ನು ಮಾಡುವಂತಿದ್ದುವು. ದೊರೆಯು-ಊರಬಿಟ್ಟು ಹೊರಗೆ ಹೊರಡುವಾಗ, ಪುರವಾಸಿಗಳಾದ ಹೆಣ್ಣು ಮಕ್ಕಳು ಮಂಗಳಕರವಾದ ಅರಳನ್ನು ಅರಸಿನ ಶಿರದಮೇಲೆ ಎರಚುವುದು ವಾಡಿಕೆ. ಇಲ್ಲಿಯೂ ಮರಗಳಮೇಲೆ ಹಬ್ಬಿರುವ ಎಳಬಳ್ಳಿಗಳು-ಅಗ್ನಿಯಂತೆ ಬೆಳಗುತ್ತ ಪೂಜ್ಯನೆನಿಸಿ, ತಮ್ಮ ಬಳಿಯೊಳು ಬರುತ್ತಲಿರುವ ಆತನನ್ನು, ಎಲರಿನಿಂದ ಅಲುಗಿ, ತಮ್ಮಿಂದ ಉದುರುತ್ತಲಿರುವ ಹೂಗಳಿಂದ ಅರ್ಚಿಸುವಂತಿದ್ದುವು. ಯದ್ಯಪಿ -

ಅರಸು ಹೆರರನ್ನಂಜಿಸುವ ಬಿಲ್ಲನ್ನು ಕಯ್ಯಲ್ಲಿ ಹಿಡಿದು ಬರುತ್ತಲಿದ್ದಾನೆ. ಆದರೂ, ಈತನು ಬಹುಶಾಂತನೂ ಮನೋಹರನೂ ಆಗಿ, ದಯಾರಸದಿಂದ ತುಂಬಿದ ಮನಸ್ಸುಳ್ಳವನೆಂದು ಹತ್ತಿರದಲ್ಲಿ ಮೇಯುತ್ತಲಿರುವ ಹುಲ್ಲೆಗಳ ಅಂತಃಕರಣಕ್ಕೆ ಗೊತ್ತಾಗುತ್ತಲಿದ್ದಿತು, ಅದರಿಂದಲೇ ಅವು ದೂರಸರಿಯದೆ, ತಲೆಯನ್ನೆತ್ತಿ, ಅಲುಗದೆಯೂ, ರೆಪ್ಪೆ ಬಡಿಯದೆಯೂ, ಆತನನ್ನು ನಿರ್ಭಯವಾಗಿ ನೋಡುತ್ತಿದ್ದುವು, ತಮ್ಮ ಕಣ್ಣುಗಳು ಬಲು ಅಗಲವಾಗಿ ಹುಟ್ಟಿದುದು ಸಫಲವಾಯಿತೆಂದು ಸಂಭಾವಿಸುವಂತೆ ಕಾಣಬಂದುವು. ನಿರ್ಮಲವಾದ ಇಲ್ಲವೆ ಮಲಿನವಾದ ಮನಸ್ಸೇ, ಇವನು ಗೆಳೆಯ ಅಥವಾ ಹಗೆ ಎಂಬುದನ್ನು ಸೂಚಿಸುತ್ತದೆಯಲ್ಲವೆ? ಹೀಗೆ ಇನ್ನು ಸ್ವಲ್ಪ ಮುಂದೆ ಬರುವಲ್ಲಿ–ಬಿದಿರುಮೆಳೆಗಳ ಜಳವೆಯ ಸಂದುಗಳೊಳಗೆ ಗಾಳಿಯು ತೂರಿ, ಸದ್ದಾಗುತ್ತಲಿದ್ದುದರಿಂದ, ವನದೇವತೆಗಳು–ಪೊದೆಗಳಲ್ಲಿ ಕುಳಿತು, ಕೊಳಲನ್ನೂದುತ್ತ, ತನ್ನ ವಂಶಾವಳಿಯ ಹೆಸರುವಾಸಿಯನ್ನು, ಹಾಡುಗಳನ್ನಾಗಿ ಹೇಳಿಕೊಳ್ಳುವಂತಿರುವುದನ್ನು ಕೇಳುತ್ತ ಬಂದನು. ಅಷ್ಟು ಹೊತ್ತಿಗೆ ಬೆಟ್ಟಗಳ ಸಂದು ಹೊಳೆಗಳ ತುಂತುರು ಹನಿಗಳಿಂದ ನೆನೆದು ಕಾಡುಮರಗಳನ್ನಲುಗಿಸಿ, ಅವುಗಳಲ್ಲಿನ ಹೂವಿನ ಕಂಪನ್ನೊಳಗೊಂಡು, ಹರಿದುಬರುವ ಮಾರುತವು – ಬಹುದೂರದಿಂದ ನಡೆದು, ವ್ರತಪರಿಪಾಲನೆಗಾಗಿ : ಹಿಡಿಯಲಿಕ್ಕೆ ಕೊಡೆಯಿಲ್ಲದೆ, ಬಳಲುತ್ತಲಿರುವ ಸದಾಚಾರಸಂಪನ್ನನಾದ ಅರಸನನ್ನು ಸೇವಿಸುತ್ತಲಿದ್ದಿತು. ಮಹಾಧಾರ್ಮಿಕನಾದ ದೊರೆಯ ಮಹಿಮೆಯ ಇಷ್ಟೆಂದು ಹೇಳಲಳವಲ್ಲ, ಆ ನಾಡಿನೊಡೆಯನು ಕಾಡನ್ನು ಹೊಕ್ಕ ಕೂಡಲೆ–ಹತ್ತಿರದಲ್ಲಿ ಉರಿಯುತ್ತಲಿದ್ದ ಕಾಡ್ಗಿಚ್ಚು ಮಳೆಗರೆಯದಿದ್ದರೂ ಆರಿ ತಣ್ಣಗಾಗುತ್ತಿತ್ತು, ಮರಗಿಡಬಳ್ಳಿಗಳಲ್ಲಿ ಹೂವು ಹಣ್ಣುಗಳ ಬೆಳೆಯು ಹುಲುಸಾಗುತ್ತಲಿದ್ದಿತು. ಬಲಾಧಿಕವಾದ ಹುಲಿ ಸಿಂಹ ಘಾತುಕ ಜಂತುಗಳು – ಬಲಹೀನವಾದ ಹುಲ್ಲೆ ಮುಂತಾದ ಪ್ರಾಣಿಯನ್ನು ಹಿಂಸಿಸುತ್ತಿರಲಿಲ್ಲ.

ಸಂಜೆಯಾಗುತ್ತ ಬಂದಿತು. ಹೊಸ ತಳಿರಿನಂತೆ ಕೆಂಬಣ್ಣದ ಸೂರ್ಯಪ್ರಭೆಯು–ತನ್ನ ಸಂಚಾರದಿಂದ ಎಲ್ಲದೆಸೆಗಳನ್ನೂ ಪವಿತ್ರವಾದವುಗಳನ್ನಾಗಿಮಾಡಿ, ಅಸ್ತಾಭಿಮುಖವಾಯಿತು. ಹಾಗೆಯೇ ಇರುವ ಮುನಿ ಧೇನುವೂ ತನ್ನ ಮನೆಯ ಕಡೆಗೆ ಹೊರಟಿತು. ಬಳಿಕ ನೆಲದೊಡೆಯನಾದ ದಿಲೀಪನು – ದೇವತೆಗಳು, ಪಿತೃಗಳು, ಅತಿಥಿಗಳು ಈ ಮೊದಲಾದವರ ಸತ್ಕಾರಕ್ಕೆ ಸಾಧಕವಾಗಿರುವ ಆ ಧೇನುವನ್ನನುಸರಿಸಿ, ತಾನೂ ಹಿಂದಿರುಗಿದನು, ಸಜ್ಜನಪೂಜ್ಯವಾದ ಆಕಳು ಮುಂದೆಯೂ, ಸಾಧುಮಾನ್ಯನಾದ ಅರಸು ಹಿಂದೆಯೂ ಬರುತ್ತಲಿದ್ದರು; ಸತ್ಪುರುಷ ಸಮ್ಮತವೆನಿಸಿದ ಶರೀರವನ್ನಾಂತು ಬಂದಿರುವ ವಿಧಿಯಿಂದೊಡಗೂಡಿದ ಶ್ರದ್ಧೆ (ಆಸ್ತಿಕ್ಯಬುದ್ಧಿ)ಯಂತೆ ಶೋಭಿಸುತ್ತಲಿದ್ದರು. ಆ ಸಂಜೆಯ ಹೊತ್ತಿನೊಳಗೆ ಅಲ್ಲಲ್ಲಿ

ಕೊಳಗಳಿಗೆ ಇಳಿಯಬಿದ್ದಿದ್ದ ಹಂದಿಗಳ ಹಿಂಡು ಮೇಲಕ್ಕೆ ಹತ್ತುತ್ತಲಿದ್ದಿತು. ನವಿಲುಗಳು – ತಮ್ಮ ವಾಸವೃಕ್ಷಗಳ ಕಡೆಗೆ ಹಾರಿಹೋಗುತ್ತಲಿದ್ದುವು. ಹಸಿರು ಹುಲ್ಲಿನ ಬೈಲುಗಳಲ್ಲಿ ಹುಲ್ಲೆಗಳು ಗುಂಪುಕೂಡುತ್ತಲಿದ್ದುವು. ಆಗ – ಕಪ್ಪಗೆ ಕಾಣಬರುವ ಕಾಡುಗಳನ್ನು ನೋಡುತ್ತಾ ಬರುತ್ತಿದ್ದನು. ಹಾಲು ತುಂಬಿದ ಕೆಚ್ಚಲಿನ ಹೊರೆಯನ್ನು ಹೊರಲಾರದೆ ಅಲ್ಲಾಟದ ಮುದ್ದು ನಡಗೆಯಿಂದ ಮುಂದೆ ಬರುವ ಒಂಟಿಗರುವಿನ ಆ ಕನ್ನೆಗಡಸೂ, ಸುಖಶರೀರದ ಭಾರದಿಂದ ಜಗ್ಗು ಹಾಕುತ್ತಾ ಹಿಂದೆ ಬರುವ ಅರಸೂ ತಪೋವನದಿಂದ ಹಿಂದಿರುಗಿ ಬರುವ ದಾರಿಯನ್ನು ಅಂದವಾದ ತಮ್ಮ ನಡಿಗೆಯಿಂದ ಸಿಂಗರಿಸುತ್ತಲಿದ್ದರು.

ಅಷ್ಟು ಹೊತ್ತಿಗೆ ಸುದಕ್ಷಿಣೆಯು – ಪುಣ್ಯಾಶ್ರಮದ ಎಲ್ಲೆಯಲ್ಲಿ ನಿಂತು ಇದಿರುನೋಡುತ್ತಲಿದ್ದಳು. ವನದಿಂದ ಹಿಂದಿರುಗಿ ಮುನಿಧೇನುವನ್ನು ಹಿಂಬಾಲಿಸಿ ಬರುತ್ತಲಿರುವ ತನ್ನ ಪ್ರಿಯವಲ್ಲಭನನ್ನು ರೆಪ್ಪೆ ಬಡಿಯದೆ ಉಪವಾಸವಿದ್ದವುಗಳಂತಿರುವ ಎರಡು ಕಣ್ಣುಗಳಿಂದಲೂ ತಣಿವಾರ ಕುಡಿದಳು. ಆ ಹಾದಿಯಲ್ಲಿ ದಿಲೀಪನ ಧರ್ಮಪತ್ನಿಯಿಂದ ಇದಿರ್ಗೊಳ್ಳಲ್ಪಟ್ಟುದ್ದೂ, ಪೊಡವಿಯೊಡೆಯನಿಂದ ಮುಂದುವರಿಸಲ್ಪಟ್ಟುದ್ದೂ ಆಗಿರುವ ಆ ಧೇನುವು–ಹಗಲಿರುಳುಗಳ ನಡುವಣ ಸಂಜೆಯಂತೆ ಕಂಗೊಳಿಸುತ್ತಲಿದ್ದಿತು.

ಆಗಲಾ ಸುದಕ್ಷಿಣೆಯು – ಆ ಪಯಸ್ವಿನಿಗೆ ಬಲವಂದು, ತಲೆಬಾಗಿ ಅಡ್ಡಬಿದ್ದು, ಮನೋರಥಸಿದ್ಧಿಯ ಬಾಗಿಲಿನಂತಿರುವ ಆ ಧೇನುವಿನ ಕೋಡುಗಳ ಅಗಲವಾದ ನಡುಭಾಗವನ್ನು ಪುಷ್ಪಾಕ್ಷತೆಗಳಿಂದ ಪೂಜಿಸಿದಳು. ಆಹಾ! ಸಂಜೆಯವರೆಗೂ ಅಗಲಿದ್ದ ಎಳೆಗರುವಿನ ತಾಯಿಗೆ ತನ್ನ ಕಂದನನ್ನು ಕಾಣಬೇಕೆಂಬ ತವಕವು ಹೆಚ್ಚಲ್ಲವೆ? ಆದರೂ, ದುಡುಕದೆ ನಿಂತು, ಅರ್ಚನೆಯನ್ನು ಆ ಧೇನುವು ಕೈಗೊಂಡಿತಲ್ಲಾ ಎಂದು ಆ ದಂಪತಿಗಳು ಆನಂದಿಸಿದರು. ಆದರೆ – ಆ ಧೇನುವಿನಂತಹ ಸತ್ಪಾತ್ರಗಳು (ಮಹಾತ್ಮರು) ತಮ್ಮ ಪ್ರಿಯ ಭಕ್ತರಲ್ಲಿ ತೋರುವ ಅನುಗ್ರಹದ ಕುರುಹುಗಳಿಂದ ಇಷ್ಟಸಿದ್ಧಿಗಳು ಇದಿರಿನಲ್ಲಿವೆಯೆಂದೇ ಅರಿಯಬೇಕು.

ಇಂತಾದಬಳಿಕ–ಶೂರನಾದ ದಿಲೀಪನು–ತನ್ನ ಧರ್ಮಪತ್ನಿಯೊಡನೆ ಪರ್ಣಶಾಲೆಯನ್ನು ಹೊಕ್ಕು, ಸಹಧರ್ಮಿಣಿಯೊಡನೆ ಸುಖಾಸೀನನಾಗಿದ್ದ ವಶಿಷ್ಠಮುನಿಯ ಅಡಿದಾವರೆಗಳಿಗೆ ಅಭಿವಂದಿಸಿ, ಸಾಯಂಕಾಲದ ಅನುಷ್ಠಾನವನ್ನು ಆಚರಿಸಿ, ಕರುವನ್ನು ಕುಡಿಸಿ, ಆಕಳಿನಲ್ಲಿ ಹಾಲು ಕರೆದನು. ಬಳಿಕ ವಿಶ್ರಮಿಸಿಕೊಂಡ ಆ ಧೇನುವಿನ ಬಳಿಗೆ ಸೇವಾರ್ಥವಾಗಿ ತೆರಳಿದನು. ಮತ್ತು ಪೂಜಾಸಾಮಗ್ರಿಗಳನ್ನೂ, ನೇಮದ ದೀಪವನ್ನೂ, ಅದರ ಹತ್ತಿರದಲ್ಲಿಟ್ಟು, ಅದು ನಿದ್ದೆಗೈದ ಬಳಿಕ, ತಾನೂ ಅಲ್ಲಿಯೆ ಪವಳಿಸಿದನು. ಬೆಳಗಾಗುತ್ತ ಬಂದಮೇಲೆ ಅದು ಎಚ್ಚರಗೊಳ್ಳಲು ತಾನೂ ಎಚ್ಚೆತ್ತನು.

ಬಡವರಿಗೆ ಆಸರೆಯೆನಿಸಿ, ಕೀರ್ತಿಸಂಪನ್ನನಾಗಿರುವ ಆ ದೊರೆಯು ತನ್ನ ಹೆಂಡತಿಯೊಡನೆ ಮಕ್ಕಳ ಫಲಕ್ಕೋಸ್ಕರ ಆಕಳನ್ನು ಸೇವಿಸುವ ನೋಂಪಿಯನ್ನು ಕ್ರಮತಪ್ಪದೆ ನೇಮದಿಂದ ಆಚರಿಸುತ್ತಾ, ಇಪ್ಪತ್ತೊಂದು ದಿವಸಗಳನ್ನು ಕಳೆದನು. ಮಾರನೆಯ ದಿನವೂ ಎಂದಿನಂತೆ ಆಕಳನ್ನು ಬಿಟ್ಟುಕೊಂಡು ಕಾಡಿಗೆ ಬಂದನು. ಮುನಿಯ ಹೋಮಧೇನುವು–ತನ್ನ ಆಳುತನದಲ್ಲಿರುವ ಮಹಾರಾಜನಿಗೆ ತನ್ನಲ್ಲಿರುವ ಭಕ್ತಿಯ ಬಗೆಯನ್ನು ಪರಿಕಿಸಬೇಕೆಂದು ನೆನೆಯಿತು. ತಾನು ಹುಲ್ಲಮೇಯುತ್ತಲಿರುವಾಗ – ದೊರೆಯ ದಿಟ್ಟಿಯು ಮತ್ತೊಂದೆಡೆಯಲ್ಲಿ ನಟ್ಟಿರುವುದನ್ನು ಕಂಡು, ಇದೇ ಸಮಯವೆಂದು ಭಾವಿಸಿ, ಹತ್ತಿರದಲ್ಲಿದ್ದ, ಗೌರಿಗೆ ತವರ್ಮನೆಯಾದ ಬೆಟ್ಟದ ತಪ್ಪಲಲ್ಲಿ ದೇವಗಂಗೆಯು ಹರಿಯುತ್ತಲಿದ್ದುದರಿಂದ, ಅದರ ಇಕ್ಕೆಲದಲ್ಲಿ ಹುಲ್ಲು ಬಲುಸೊಂಪಾಗಿ ಬೆಳೆದಿದ್ದುದನ್ನು ಕಂಡು, ಅದರ ಪಕ್ಕದೊಳಿರುವ ಗವಿಯನ್ನು ಹೊಗುತ್ತಲಿದ್ದಿತು. ಆದರೆ ಸಿಂಗವೇ ಮೊದಲಾದ ದುಷ್ಟಮಿಕಗಳು ಮಹಾಮಹಿಮೆಯ ಮುನಿಯಾಕಳನ್ನು ತೊಂದರೆಪಡಿಸಬೇಕೆಂದು ತಮ್ಮ ಮನದೊಳಗೂ ನೆನೆಯಲಾರವು ಎಂದು ಅರಿತಿದ್ದುದರಿಂದಲೇ – ದೊರೆಯ ದೃಷ್ಟಿಯು–ಆ ಬೆಟ್ಟದ ಚಲುವಿಕೆಯನ್ನು ನೋಡುವುದರಲ್ಲಿ ನೆಲೆಗೊಂಡಿದ್ದಿತು. ಆಗ ಆತನಿಗೆ ಅರಿವಿಲ್ಲದೆಯೇ ಎಲ್ಲಿಂದಲೋ ಹಾರಿಬಂದ ಒಂದು ಸಿಂಹವು ಆ ಧೇನುವನ್ನು, ಹಾ! ಹಿಡಿದು ಸೆಳೆಯಿತಲ್ಲಾ!! ಹಾಗಾದ ಕೂಡಲೆ ಆಕಳು ಬಹು ದೀನಸ್ವರದಿಂದ ಅಮ್ಮಾ ಎಂದು ಕೂಗಿಕೊಂಡಿತು. ಒಡನೆ ಆ ಗವಿಯಿಂದ ಆ ಕೂಗಿನಂತೆ ಸೆಲೆಯೂ ಹೊರಟಿತು.ಆ ಸದ್ದು – ದೀನರಲ್ಲಿ ಬಲುದಯೆಯನ್ನು ತೋರುವ ದೊರೆಯ ಬೆಟ್ಟದಲ್ಲಿ ನಟ್ಟಿದ್ದ ದಿಟ್ಟಿಯನ್ನು, ಹಗ್ಗವನ್ನೆಸೆದು ಸೆಳೆದಂತೆ ತನ್ನ ಕಡೆಗೆ ಎಳೆದು ತಿರುಗಿಸಿತು. ತತ್‌ಕ್ಷಣವೇ ಬಿಲ್ಲಾಳಾದ ಅರಸು–ಹಿಂದಿರುಗಿ ನೋಡಿದನು, ಆದರೇನು? ಇನ್ನು ಹೇಳತಕ್ಕುದೇನು? ಪಾಟಲವರ್ಣದ ಆಕಳಿನಮೇಲೆ ಕೆದರಿದ ತಲೆಗೂದಲಿನಿಂದ ತುಂಬಿದ ಮೋರೆಯುಳ್ಳ ಸಿಂಹವು ಕುಳಿತಿದೆ, ಬೆಟ್ಟದ ಟೊಂಕದೊಳಗೆ ಕೆಂಗಾವಿಗಲ್ಲಿನಿಂದ ತುಂಬಿದ ನೆಲದಮೇಲೆ ಅರಳಿದ ಹೂಗಳಿಂದ ತುಂಬಿ ನಿಂತಿರುವ ಬಾಗೆಯ ಮರದಂತೆ ಕಾಣಬರುತ್ತಲಿದೆ.

ದೊರೆಯು – ಸಿಂಹದಂತೆ ಗಂಭೀರಗಮನವುಳ್ಳವನು, ಹಗೆಗಳ ಹುಟ್ಟನ್ನಡಗಿಸಿದವನು, ಮರೆಹೊಕ್ಕವರನ್ನು ಕಾಪಾಡತಕ್ಕವನೂ ಹೌದು. ಅದರಿಂದ ಸಿಟ್ಟು ಹತ್ತಿತು, ಕಣ್ಣು ಕೆಂಪಡರಿತು, ಸಿಂಹವನ್ನು ಕೊಲ್ಲತಕ್ಕುದೇ ಸರಿಯೆಂದು ಗೊತ್ತುಮಾಡಿಕೊಂಡನು. ತನಗಾದ ತಿರಸ್ಕಾರವನ್ನು ಸಹಿಸಲಾರದೆ ಹೋದ; ಹೆದೆಯನ್ನೇರಿಸಿದ; ಬಿಲ್ಲಿನಲ್ಲಿ ಬಾಣವನ್ನು ತೊಟ್ಟು ಇಡಬೇಕೆಂದು ಸರಳನ್ನು ಹಿರಿದೆತ್ತಲು ಬತ್ತಳಿಕೆಗೆ ಬೆರಳನ್ನು ಹಾಕಿದನು.

ಅಹಹ! ಇದೊಂದಚ್ಚರಿ!! ಹೊಡಿಯಲಿಕ್ಕೆ ಅಣಿಯಾಗುತ್ತಲಿರುವ ಅರಸನ ಬಲಗೈ ಬತ್ತಳಿಕೆಯ ಬಾಣದ ಬುಡದಲ್ಲಿ ನೆಲಸಿದೆ, ಬೆರಳಿನ ಉಗುರಿನ ಕಳೆಯು ಸರಳಿನ ಗರಿಯಲ್ಲಿ ಹರಡಿದೆ, ಮುಂದೆ ಏನೊಂದು ಕೆಲಸವೂ ನಡೆಯದೆ, ಅರಸು-ಅಲುಗದೆ ನಿಂತಹಾಗೆಯೇ ನಿಂತು, ಚಿತ್ರದಲ್ಲಿ ಬರೆದ ಗೊಂಬೆಯಂತೆ ಇರುತ್ತಿದ್ದನು. ಅಯ್ಯೋ! ತೋಳುಬಲಕ್ಕೆ ತಡೆಯುಂಟಾಯಿತು, ಅರಸಿನ ರೋಷಕ್ಕೆ ಪಾರವಿಲ್ಲದಂತಾಯಿತು. ತನ್ನ ತೇಜಸ್ಸು – ಇದಿರಿಗೆ ಅಪರಾಧಿಯಾಗಿ ನಿಂತಿರುವ ಸಿಂಹವನ್ನು ತಾಗದೆ ಹೋಯಿತು. ಆಗ ಏನಮಾಡಬಲ್ಲನು? ಮಂತ್ರದಿಂದಲೂ ಮೂಲಿಕೆಯಿಂದಲೂ ಶೌರ್ಯವನ್ನು ತಡೆದಾಗ ಮಹಾಸರ್ಪವು ಹೇಗೋ ಹಾಗೆ, ಮಹಾರಾಜನು – ಹೊಟ್ಟೆಯಲ್ಲಡಗಿದ ಪೌರುಷದ ಅಥವಾ ಶೌರ್ಯದ ಇಲ್ಲವೇ ತೇಜಸ್ಸಿನ ಹೊಮ್ಮಿನಿಂದ ಕಳವಳಿಸಿ, ಕುದಿಯುತ್ತಲಿದ್ದನು. ಬಹು ದೊಡ್ಡಮನುಷ್ಯರಲ್ಲಿ ಮೊದಲನೆಯವನೆಂದು ಗಣನೆಗೆ ಬಂದಿದ್ದಾನೆ. ಮನುಕುಲಲಲಾಮನೂ ಹೌದು. ಸಿಂಹಕ್ಕಿಂತ ಅಧಿಕವಾದ ಸತ್ತ್ವವುಳ್ಳವನೆಂಬುದರಲ್ಲಿ ಸಂದೇಹವೇ ಇಲ್ಲ, ಆದರೇನು? ತನಗಾದ ಅವಸ್ಥೆಯನ್ನು ಕಂಡು ನಾಚಿಕೆಯಿಂದ ಅಚ್ಚರಿಗೊಂಡಿದ್ದಾನೆ. ಅಂತಹ ಸಮಯದಲ್ಲಿ ಆಕಳನ್ನು ಅಡಗಿಸಿಕೊಂಡಿರುವ ಸಿಂಹವು – ವಸುಮತೀಶನಿಗೆ ವಿಸ್ಮಯವನ್ನುಂಟುಮಾಡುತ್ತಾ, ಮನುಷ್ಯರ ಮಾತಿನಿಂದ ಇಂತೆಂದಿತು:-

ಎಲೈ ಮಹೀಪಾಲನೇ! ಸಾಕು, ಸಾಕು, ಇನ್ನು ಸುಮ್ಮನಿರು ವೃಥಾ ಏಕೆ ಶ್ರಮಪಡುತ್ತೀಯೆ? ಬಲು ಒದ್ದಾಟದಿಂದ ನೀನೊಂದು ವೇಳೆ ಬಾಣವನ್ನು ಇಟ್ಟರೂ, ಅದು-ಈ ನನ್ನಲ್ಲಿ ಏನೊಂದು ಕೆಲಸವನ್ನೂ ಮಾಡಲಾರದು. ಸುಮ್ಮನೆ ತಿಬ್ಬಳಿಯಿಲ್ಲದ ಕಜ್ಜವಮಾಡಲುಜ್ಜಗಿಸಬೇಡ. ಮರವನ್ನುರುಳಿಸುವ ಮಾರುತನ ವೇಗವು-ಬೆಟ್ಟವನ್ನುರುಳಿಸುವುದರಲ್ಲಿ ಮುಂದುವರಿಯುವುದುಂಟೆ? ಚೆನ್ನಾಗಿ ಯೋಚಿಸಿನೋಡು; ಮತ್ತು ನಾನಾರು? ಎಂಬುದನ್ನು ಅರುಹುವೆನು ಕೇಳು:-

ಪರಮೇಶ್ವರನು – ಮೊಟ್ಟಮೊದಲು ನನ್ನ ಬೆನ್ನಿನಮೇಲೆ ಒಂದು ಹೆಜ್ಜೆಯನ್ನೂರಿ, ಬಳಿಕ ಕೈಲಾಸಗಿರಿಯಂತೆ ಬೆಳ್ಳಗಿರುವ ತನ್ನ ವಾಹನವಾದ ಗೂಳಿಯನ್ನು ಏರುತ್ತಾನೆ. ಈ ನನ್ನ ಬೆನ್ನು ಆತನ ಒಲುಮೆಯಿಂದ ಪವಿತ್ರವಾದುದು. ಪರಶಿವನ ಸೇವಕನಾದ ನಿಕುಂಭನಿಗೆ ನಾನು ಮಿತ್ರನು. ಹೆಸರಿನಲ್ಲಿ ನನ್ನನ್ನು ಕುಂಭೋದರನೆಂದು ಕರೆಯುತ್ತಾರೆ. ಇದಕೋ, ಇದಿರಿಗೆ ಇತ್ತ ಕಾಣಬರುವ ದೇವದಾರು ತರುವನ್ನು ನೋಡು. ಇದನ್ನು ಶಂಕರನು – ತನ್ನ ಮಗನಂತೆ ಭಾವಿಸಿಕೊಂಡಿದ್ದಾನೆ. ಕುಮಾರಸ್ವಾಮಿಯು-ತನ್ನ ತಾಯಿಯ ಹಾಲಿನ ರುಚಿಯನ್ನು ಕಂಡಿರುವ ಹಾಗೆ ಈ ದೇವದಾರುವೂ, ಗೌರಿಯು ತನ್ನ ಕರದಲ್ಲಿನ ಚಿನ್ನದ ಕೊಡದಿಂದೆರೆದ ಅಮೃತರಸದ ರುಚಿಯನ್ನು ಬಲ್ಲುದು.

ಹಿಂದೆ ಒಂದು ಸಾರಿ–ಮದವೇರಿದ ಕಾಡಾನೆಯೊಂದು ಇಲ್ಲಿಗೆ ಬಂದು, ತನ್ನ ಮೈತೀಟೆಯನ್ನು ಕಳೆದುಕೊಳ್ಳಲು ಈ ಮರದ ತಾಳನ್ನು ತನ್ನ ಕೆನ್ನೆಯಿಂದ ತೀಡಿತು. ಇದರ ತಿಗಡು ಮೇಲಕ್ಕೆದ್ದಿತು. ಆಗ – ಸರ್ವಮಂಗಳೆಯು–ರಕ್ಕಸರ ಬಾಣದ ಪೆಟ್ಟಿನಿಂದ ಗಾಯವಾಗಿ ಚರ್ಮವು ಸುಲಿದ ತನ್ನ ಕುಮಾರನನ್ನು ನೋಡಿದರೆ ಹೇಗೋ ಹಾಗೆ, ಈ ದೇವದಾರುವನ್ನು ನೋಡಿ ದುಃಖಿಸಿದಳು. ಇದರಲ್ಲಿ ಆಕೆಗಿರುವ ಪುತ್ರವಾತ್ಸಲ್ಯವನ್ನು ಇನ್ನು ಹೇಳತಕ್ಕುದೇನು? ಇದನ್ನು ನೋಡಿ ಕನಿಕರಪಟ್ಟ ಶಿವನು–ಸಿಟ್ಟುಗೊಂಡು, ಅಂದು ಮೊದಲ್ಗೊಂಡು ನನಗೆ ಸಿಂಹದ ರೂಪವನ್ನು ಕೊಟ್ಟು ಇಲ್ಲಿರುವಂತೆ ಕಟ್ಟುಮಾಡಿದನು. ಆತನ ನೇಮದಿಂದ ಆನೆ ಮೊದಲಾದ ಮೃಗಗಳಿಗೆ ಎಡೆಯಿಲ್ಲದಂತೆ ನಾನು ಈ ಬೆಟ್ಟದ ಗವಿಯೊಳಗೆ ವಾಸಮಾಡುತ್ತಲಿದ್ದೇನೆ. ಮಹಾದೇವನು–ಹಸಿದಹೊತ್ತಿಗೆ ಇಲ್ಲಿಗೆ ಬರುವ ಪ್ರಾಣಿಗಳ ನಿನಗೆ ಆಹಾರವೆಂದೂ ಗೊತ್ತುಮಾಡಿರುವನು. ಮುಕ್ಕಣ್ಣನ ಕಟ್ಟಲೆಯಿಂದ ಹೊತ್ತಿಗೆ ಸರಿಯಾಗಿ ನನಗೆ ಒದಗಿರುವ ಈ ಮಿಕದ ರಕುತವು – ರಾಹುವಿಗೆ ಚಂದಿರನ ಸೊದೆಯು ದೊರೆತಂತಾಗಿದೆ. ಹಸಿವೆಗೊಂಡಿರುವ ನನ್ನ ತಣಿವಿಗೆ ಇಷ್ಟು ಸಾಕು. ನಿನ್ನ ಬಲದ ಹುರುಡು–ನನ್ನಲ್ಲಿ ಬೆಲೆಗೊಳ್ಳಲರಿಯದು. ನೀನಿದರಿಂದ ನಾಚಿಕೆಗೊಳ್ಳಬೇಡ, ಇನ್ನು ಹಿಂತಿರುಗು, ಗುರುಧನವನ್ನು ಕಳೆದು ನಾನು ತೆರಳುವದೆಂತು? ಎಂದು ಚಿಂತಿಸಬೇಡ. ಇದುವರೆಗೆ ನಡೆಸಿದ ಉದ್ಯೋಗದಿಂದ ಮನಮುಟ್ಟ ಗುರುಭಕುತಿಯನ್ನು ತೋರಿದ್ದೀಯೆ. ಆದರೆ– ಕೋಲಿನ ಕಾವಲಿನಿಂದ ಕಾಪಾಡಬೇಕಾದ ವಸ್ತುವು ಸರಳಿನ ಪೆಟ್ಟಿಗೆ ಅಸದಳವೆನಿಸಿದರೆ–ಅದು, ಬಿಲ್ಲಾಳುಗಳ ಹೆಸರುವಾಸಿಗೆ ಕೊರತೆಯನ್ನುಂಟುಮಾಡದು – ಎಂದಿತು.

ಹೀಗೆ – ಚಮತ್ಕಾರವಾಗಿ ಹೇಳಿದ ಮೃಗರಾಜನ ಮಾತನ್ನು ಕೇಳಿ ಜನಾಧಿಪನು – ಓಹೋ! ಶಿವನ ಶಕ್ತಿಯಿಂದ ನನ್ನ ಅಸ್ತ್ರಪ್ರಯೋಗಕ್ಕೆ ತಡೆಯುಂಟಾಯಿತಲ್ಲದೆ ನನ್ನ ಸಮಾನರಿಂದಾಗಲಿ, ಕೀಳರಿಂದಾಗಲಿ ಅಲ್ಲ– ಎಂದುಕೊಂಡು, ಹೆರರಿಂದ ತನಗಪಮಾನವಾಯ್ತೆಂಬ ಕೊರತೆಯನ್ನು ಸಡಿಲಿಸಿದನು. ಆದರೆ – ತನ್ನ ಬಾಣ ಪ್ರಯೋಗಕ್ಕೆ ಅಡ್ಡಿಯೆಂಬುದು ಇಂದೇ ಅಲ್ಲದೆ ಮುನ್ನೆಲ್ಲಿಯೂ ಇಲ್ಲ. ಪ್ರಯತ್ನವು ವಿಫಲವಾಯಿತು, ಹಿಂದೆ ಹರನಮೇಲೆ ವಜ್ರವನ್ನಿಡಲು ಹೊರಟಾಗ – ಉಗ್ರನು ಕಣ್ಣುಬಿಟ್ಟ ಕೂಡಲೆ, ಅಲುಗದೆ ಜಡನಾಗಿ ನಿಂತ ವಜ್ರಹಸ್ತನ ಹಾಗೆ, ತನ್ನ ತೋಳೂ ನಿಂತಿರಲು ಸಿಂಹವನ್ನು ಕುರಿತು ಇಂತೆಂದನು :

ಎಲೈ ಮೃಗೇಂದ್ರನೇ! ನಿನ್ನಿಂದ ನನ್ನ ಕೈ ಕಟ್ಟಿತು, ನಾನು ನಿನ್ನೊಡನೆ ಹೇಳಹೋಗುವ ನುಡಿಯು ಕಡುನಗೆಗೀಡಾಗುವದು ದಿಟ. ಪರಮೇಶ್ವರನ

ಪರಮಾನುಗ್ರಹಕ್ಕೆ ಪಾತ್ರನಾದ ನೀನು ಪ್ರಾಣಿಗಳ ಮನೋಗತವನ್ನೆಲ್ಲ ಬಲ್ಲೆ; ಅದರಿಂದ ಹೇಳುವೆನು.–

ಯದ್ಯಪಿ – ಪ್ರಪಂಚದ ಉತ್ಪತ್ತಿ ಸ್ಥಿತಿಲಯಗಳಿಗೆ ಮೂಲ ಕಾರಣನಾಗಿರುವ ಮಹಾದೇವನು – ಮಾನ್ಯನೇ ಹೌದು. ಆದರೆ ಕುಲಗುರುವಿನೊಡವೆಯಾದ ಈ ಗೋಧನವು, ಕಣ್ಣೆದುರಿಗೆ ಹಾಳಾಗುತ್ತಿದ್ದರೆ ಅಸಡ್ಡೆಮಾಡಿ, ಬಿಡಲಿಕ್ಕೂ ಆಗುವುದಿಲ್ಲ, ಗುರುದೈವದ್ರೋಹಿಗಳ ನಡುವೆ ಸಿಲುಕಿದ್ದೇನೆ, ಅದರಿಂದ ದೇವನಾಣತಿಗೊಳಗಾಗಿರುವ ನೀನು ಈ ನನ್ನೊಡಲಿನಿಂದ ನಿನ್ನಾಹಾರವನ್ನು ನೆರವೇರಿಸಿ, ಪ್ರಸನ್ನತೆಯನ್ನು ತೋರು. ಈ ಸಂಜೆಯ ಹೊತ್ತಿನಲ್ಲಿ ತನ್ನ ಎಳೆಯ ಕಂದನನ್ನು ಕಾಣಬೇಕೆಂದು ತವಕಿಸುತ್ತಲಿರುವ ಈ ಮುನಿಧೇನುವನ್ನು ಬಿಟ್ಟು ಕಳುಹು, ನಂಟು ರತುನಗಳೆರಡೂ ಉಳಿದಂತಾಗುವುದು – ಎಂದನು.

ಆ ಬಳಿಕ – ಭೂತನಾಥನಿಗೆ ಕಿಂಕರನೆನಿಸಿದ ಸಿಂಹವು – ತನ್ನ ಕೋರೆ ಹಲ್ಲಿನ ಬೆಳಕಿನಿಂದ ಗವಿಯೊಳಗಣ ಕತ್ತಲನ್ನು ಕತ್ತರಿಸುವಂತೆ ಕಿರುನಗೆಯನ್ನು ತೋರುತ್ತ, ಭೂಪತಿಯನ್ನು ಕುರಿತು ಮರಳಿ ಇಂತೆಂದಿತು:–

ಎಲೈ ಅರಸೇ! ಇದಿರಾಳಿಲ್ಲದ ನಾಡಿನೊಡೆತನ, ಹೊಸತೆನಿಸಿದ ಹರೆಯ, ಅಂದವಾದ ಒಡಲು ಇಂತೀ ಮೇಲಾದ ಮೂರನ್ನೂ ಅಲ್ಪ ಬೆಲೆಯ ಈ ಕೀಳೊಡವೆಗೋಸುಗ ತೊರೆಯಲೆಳಸುವ ನೀನು ನನಗೆ, ಮುಂದಾಲೋಚನೆಯಿಲ್ಲದ ಎಗ್ಗನಂತೆ ಕಾಣಬರುತ್ತೀಯೆ? ಅಯ್ಯೋ ಒಂದುವೇಳೆ – ನಿನಗೆ ಭೂತದಯೆಯಿದ್ದು ಒಡಲನ್ನು ತೊರೆದರೂ, ಕಟ್ಟಕಡೆಗೆ ಈ ಆಕಳೊಂದಲ್ಲವೆ ಮೇಲುಳ್ಳದ್ದಾಗಿರುವುದು? ಎಲೈ ಜನರೊಡೆಯನೆ, ನಾಡಿನ ಪ್ರಜೆಗಳನ್ನೆಲ್ಲ ಅಡ್ಡಿವಿಡ್ಡೂರಗಳ ಎಡರಿಲ್ಲದಂತೆ ಅಡಿಗಡಿಗೂ ತಂದೆಯ ಹಾಗೆ ಸಲಹುತ್ತಿರುವೆಯಲ್ಲವೆ? ಇದಕ್ಕಿಂತ ಮಿಂಚಿದ ಕಜ್ಜಮಿನ್ನಾವುದುಂಟು? ಅಥವಾ ತನ್ನದಾಗಿರುವ ಈ ಒಂದಾಕಳನ್ನು ಕಳೆದನೆಂದು ಸಿಟ್ಟುಗೊಂಬ ಅಗ್ನಿಗೆಣೆಯೆನಿಸಿದ ಮಾರಿಸಿಗೆ ಭಯಪಡುವೆಯೋ? ಹಾಗಾದರೆ – ಕೊಡಗಳಂತೆ ತೋರವಾದ ಕೆಚ್ಚಲುಗಳನ್ನೊಳಗೊಂಡಿರುವ ಇಂತಹ ಕೋಟ್ಯನುಕೋಟಿ ಆಕಳುಗಳನ್ನಿತ್ತು, ಆತನ ಸಿಟ್ಟನ್ನಿಳುಪಲು ನಿನ್ನಿಂದ ಶಕ್ಯವಾಗುವುದು. ಅದರಿಂದ ಸೊಗಸಂತಸಗಳ ಸಾಲುಗಳನ್ನು ಅನುಭವಿಸತಕ್ಕುದಾಗಿ ಬೆಳಗುತ್ತಲಿರುವ ನಿನ್ನ ದೇಹವನ್ನು ಸಂರಕ್ಷಿಸಿಕೊಂಬುದು ಉತ್ತಮ. ಒಂದುವೇಳೆ–ಆತ್ಮರಕ್ಷಣೆಗಾಗಿ ಗೋವನ್ನುಪೇಕ್ಷೆ ಮಾಡಿದರೆ ಪರಲೋಕ ಹಾನಿಯುಂಟಾಗುವುದೆಂದು ನೀನು ಬಗೆವುದಾದರೆ, ನೆಲದ ಸೋಂಕಿನಿಂದ ಮಾತ್ರವೇ ಬೇರೆನಿಸಿಕೊಂಡಿರುವ ನಿನ್ನಯ ಸಾಮ್ರಾಜ್ಯವು–ಇಂದ್ರಪದವಿಗಿಂತ ಕೀಳಾದುದಲ್ಲವೆಂದು ಬಲ್ಲವರೆಲ್ಲ ಹೇಳುತ್ತಾರೆ.

ಎಂದಿಷ್ಟು ಸಂಗತಿಯನ್ನು ಹೇಳಿ ಮೃಗಾಧಿಪನು–ಸುಮ್ಮನಾಗುತ್ತಿರಲು, ಗವಿಯಿಂದ ಹೊರಟ ಸೆಲೆಯಿಂದ ಪಕ್ಕದೊಳಿರುವ ಪರ್ವತವೂ ಅಕ್ಕರೆಯಿಂದ ಭೂಪಾಲನನ್ನು ಕುರಿತು ಅದೇ ಅರ್ಥವನ್ನೇ ಹೇಳುವಂತಿದ್ದಿತು.

ಕೇಸರಿಯ ಆಕ್ರಮಣದಿಂದ ಆಕಳು ಕಾತರಿಸಿ, ಮಿಣಮಿಣನೆ ಬಿಡುತ್ತಲಿರುವ ಕಣ್ಣುಗಳಿಂದ ನೋಡುತ್ತಲಿದೆ. ಅದನ್ನು ನೋಡುತ್ತಲಿರುವ ಅರಸನಿಗೆ ಕನಿಕರವು ಉಕ್ಕುಳಿಸುತ್ತಲಿದೆ. ಆ ಮನುಜದೇವನು–ಮಾದೇವನನುಚರನಾದ ಹರಿಯ ಮಾತನ್ನು ಕೇಳಿ ಮಗುಳಿಂತೆಂದನು –

ಎಲೈ ಪಂಚಾನನನೆ! ಮರೆಹೊಕ್ಕವರನ್ನು ಗಾಯಪಡದಂತೆ ಕಾಪಿಡುವವನು, ಎಂಬರ್ಥದಿಂದಲಲ್ಲವೆ ಲೋಕದಲ್ಲಿ ಉದಾರವಾದ ಕ್ಷತ್ರಶಬ್ದವು ಬಳಕೆಗೆ ಬಂದಿದೆ? ಅದಕ್ಕೆ ತಲೆಕೆಳಕಾದ ನಡತೆಯಲ್ಲಿರುವ ನನಗೆ ಸಾಮ್ರಾಜ್ಯದಿಂದಾಗಲಿ, ಜಿಹಾಸೆಗೊಳಗಾಗಿ ಮಲಿನಗಳೆನಿಸಿದ ಹರಣಗಳಿಂದಾಗಲಿ ಉಪಯೋಗವೇನು? ಜಾತಿ ಧರ್ಮವನ್ನು ತೊರೆವುದಕ್ಕಿಂತಲೂ ಜೀವನವನ್ನು ತೊರೆವುದೇ ಮೇಲಲ್ಲವೆ? ಬೇರೆ ಗೋವುಗಳನ್ನು ಕೊಟ್ಟು, ಮಹಾಮುನಿಯ ಮುನಿಸನ್ನು ಇಳಿಸೋಣವೆಂದರೆ, ಸರ್ವಥಾ ಸಾಧ್ಯವಲ್ಲ. ಈ ಆಕಳು ಸಾಧಾರಣವಾದ ಆಕಳಲ್ಲ. ಕಾಮಧೇನುವಿಗಿಂತ ಕಿಂಚಿತ್ತಾದರೂ ಕಡಮೆಯೆನಿಸಿದುದಲ್ಲವೆಂದು ತಿಳಿ. ಮಹೇಶ್ವರನ ಮಹಿಮೆಯಿಂದಲೇ ಇದರಲ್ಲಿ ನಿನ್ನ ಪೆಟ್ಟು ಬಿದ್ದುದು. ಈ ಪಯಸ್ವಿನಿಗೆ ಪ್ರತಿಯಾಗಿ ನನ್ನ ದೇಹವನ್ನು ನಿನಗೆ ಒಪ್ಪಿಸಿ, ನಿನ್ನಿಂದ ಇದನ್ನು ಬಿಡಿಸತಕ್ಕುದ್ದೇ ಸರಿ. ಹಾಗಾದರೆ ನಿನ್ನ ಆರೋಗಣೆಗೂ ಕೊರತೆಯುಂಟಾಗುವುದಿಲ್ಲ. ಮಹರ್ಷಿಯ ಹೋಮವೇ ಮೊದಲಾದ ಸತ್ಕರ್ಮಕ್ಕೂ ನ್ಯೂನತೆಯುಂಟಾಗದು. ನಾನು ದ್ರೋಹಿಯಾಗುವುದೂ ಇಲ್ಲ. ಸ್ವಾಮಿಭಕ್ತಿಯುಳ್ಳ ನಿನಗೂ ಈ ವಿಷಯವು ಚೆನ್ನಾಗಿ ಗೊತ್ತಿದೆ. ಅದರಿಂದಲೇ ಈ ದೇವದಾರು ತರುವನ್ನು ಪೊರೆವುದರಲ್ಲಿ ಪರಿಪೂರ್ಣವಾದ ಪ್ರಯತ್ನವುಳ್ಳವನಾಗಿದ್ದೀಯೆ. ಕಾವಲುಗಾರನು –ಗಾಯಪಡದೆ, ಸಂರಕ್ಷಿಸುತಕ್ಕುದಾದ ಸ್ವತ್ತನ್ನು ನಾಶಗೊಳಿಸಿ, ಬರಿಗೈಯಿಂದ ಸ್ವಾಮಿಯ ಇದಿರಿಗೆ ಹೋಗಿ ನಿಲ್ಲುವುದು ಶಕ್ಯವಲ್ಲ. ತೊಂದರೆಯನ್ನುಂಟುಮಾಡದೆ ನನ್ನನ್ನು ಉಳುಹಬೇಕೆಂದು ನಿನಗೆ ಕನಿಕರವಿದ್ದುದೇ ಆದರೆ, ನನ್ನ ಕೀರ್ತಿದೇಹವನ್ನು ನಿಲ್ಲಿಸುವುದರಲ್ಲಿ ನಿನ್ನ ದಯಾಳತೆಯನ್ನು ತೋರು. "ಪಾಂಚಭೌತಿಕಶರೀರಗಳು ನಾಶವನ್ನು ಪಡೆಯತಕ್ಕುವು" ಎಂಬುದು ಸಿದ್ಧವಾಗಿರುವಲ್ಲಿ, ನನ್ನಂಥವರಿಗೆ ಅವುಗಳೊಳಗೆ ದಿಟವಾಗಿ ಎಂದಿಗೂ ಆದರವುಂಟಾಗುವುದಿಲ್ಲ,

ಇದರಮೇಲೆ ಇನ್ನೊಂದು ವಿಶೇಷವುಂಟು –ಬಲ್ಲವರು ಅನ್ಯೋನ್ಯಸಲ್ಲಾಪದಿಂದ ಗೆಳೆತನವು ಮೊಳೆಯುವುದೆಂದು ಹೇಳುವರು. ಈ ಹಳುವದೊಳು ಕಲೆತ ನಮ್ಮಿಬ್ಬರಿಗೂ ಅದು ನೆರವೇರಿದೆ. ಆದಕಾರಣ ಪಶುಪತಿಯ ಅನುಚರನಾದ ನೀನು ಒಡನಾಡಿಯಾದ ನನ್ನ ಬಯಕೆಯನ್ನು ಭಂಗಪಡಿಸಬಾರದು ಎಂದು ಹೇಳಿ ವಿರಮಿಸಿದನು.

ಇಂತೆಂದ ದಿಲೀಪನ ನುಡಿಯನ್ನಾಲಿಸಿ, ಕೇಸರಿಯು–ಅವನ ಮನದೆಣಿಕೆಯಂತೆ ನಡೆಯಿಸಲು ಹಾಗೆಯೇ ಆಗಲೆಂದು ಮಾತುಕೊಟ್ಟಿತು. ಕೂಡಲೆ ಕ್ಷಿತಿಪತಿಯ ಕೈಕಟ್ಟು ಬಿಟ್ಟಿತು. ಭೂಪತಿಯು–ಬಾಣ ಬತ್ತಳಿಕೆಗಳನ್ನೊಂದೆಡೆಯೊಳು ತೆಗೆದಿಟ್ಟು, ದೇಹಾಭಿಮಾನವನ್ನು ಬಿಟ್ಟು, ಆ ಹರಿಯ ಇದಿರಿಗೆ ತನ್ನ ದೇಹವನ್ನು ಅಡಗಿನುಂಡೆಯಂತೆ ಒಪ್ಪಿಸಲು ಹತ್ತಿರಕ್ಕೆ ಬಂದನು. ಮತ್ತು – ಶಿರಬಾಗಿ ನೆಲಮೊಗನಾಗಿ ಮಲಗಿದನು. ಈಗಾಗ ಹರಿಯು ತನ್ನ ಮೇಲೆ ತೀವ್ರವಾಗಿ ಕುಪ್ಪಳಿಸಿ ಬೀಳುವುದೆಂದು ಇದಿರುನೋಡುತ್ತಲಿದ್ದನು. ಆಗ–ಮುಗಿಲಿನಲ್ಲಿ ನಿಂತ ದೇವರ್ಕಳು ತಮ್ಮ ಕರಗಳಿಂದ ನರಪತಿಯಮೇಲೆ ಹೂಮಳೆಗರೆದರು.

ಆ ಬಳಿಕ – ಸೊದೆಯಂತೆ ಸೊಗಯಿಸುತ್ತಲಿರುವ 'ಎನ್ನ ಮುದ್ದು ಕಂದನೇ ಮೇಲಕ್ಕೇಳು ' ಎಂದು ಕೇಳಬಂದ ನುಡಿಯನ್ನು ಕೇಳಿದ ನರಪತಿಯು–ಎದ್ದು ನಿಂತು, ತನ್ನನ್ನು ಹಡೆದ ತಾಯಿಯಂತೆ ಇದಿರಿಗೆ ನಿಂತು ಹಾಲನ್ನು ಬಟ್ಟಿಡಿಸುತ್ತಲಿರುವ ಪಯಸ್ವಿನಿಯನ್ನು ಮಾತ್ರ ಕಂಡನಲ್ಲದೆ, ಸಿಂಹವನ್ನು ಕಾಣಲೇ ಇಲ್ಲ. ಮುಂದೋರದೆ ಅಚ್ಚರಿಗೊಂಡು ಅಲುಗದೆ ನಿಂತನು. ಆಗಲಾ ಮುನಿಧೇನುವು – ಎಲೈ ಸಾಧುವೇ! ನಿನ್ನ ಭಕುತಿಯ ನೆಲೆಯನ್ನರಿಯಲು ಇದೊಂದು ಇಂದ್ರಜಾಲವನ್ನು ಕಲ್ಪಿಸಿ ಪರಿಕಿಸಿದೆನು. ಮುನಿಯ ಮೈಮೆಯಿಂದ ಮೃತ್ಯುವೂ ನನ್ನನ್ನು ಇರಿಯಲಾರದು. ಇನ್ನುಳಿದ ಕ್ರೂರಮಿಕಗಳು ಇದಿರಿಸಬಲ್ಲವೆ? ಎಲೈ ಕಂದನೇ! ನೀನು ನಿನ್ನ ಕುಲಗುರುವಿನಲ್ಲಿ ತೋರಿದ ಭಕ್ತಿಯಿಂದಲೂ ನನ್ನಲ್ಲಿ ತೋರಿದ ಕನಿಕರದಿಂದಲೂ ಮನವಾರ ಮೆಚ್ಚಿರುವೆನು, ನಿನಗೆ ಬೇಕಾದ ವರವನ್ನು ಕೇಳು. ಹಾಲನ್ನು ಮಾತ್ರ ಕರೆವ ಪಶುವನ್ನಾಗಿ ನನ್ನನ್ನು ನೆನೆಯಬೇಡ. ಪ್ರಸನ್ನಳಾದರೆ, ಕೋರಿದ ಕೋರಿಕೆಗಳನ್ನೆಲ್ಲ ಕರೆವ ಕಾಮಧೇನುವೆಂದು ತಿಳಿ – ಎಂದಿತು.

ತರುವಾಯ–ಬೇಡುವವರ ಮನವನ್ನು ತಣಿಸುವನೆನಿಸಿ, ತೋಳಬಲದಿಂದ ಮಹಾವೀರನೆಂಬ ಹೆಸರುವಾಸಿಯನ್ನು ಗಳಿಸಿರುವ ತಿರೆಯಾಣ್ಮನು–ಕರಗಳನ್ನು ಜೋಡಿಸಿ ನಿಂತು, ಎಲೆ ತಾಯೇ! ಕುಲದೇಳಿಗೆಗಣಿಯಾಗುತ್ತ, ಅಪಾರ ಕೀರ್ತಿಸಂಪನ್ನನಾಗಿ ಬಾಳುವ ಕುಮಾರನನ್ನು ಸುದಕ್ಷಿಣೆಯಲ್ಲಿ ಕರುಣಿಸಬೇಕು ಎಂದು ಕೇಳಿಕೊಂಡನು.

ಆಮೇಲೆ ಆ ಪಯಸ್ವಿನಿಯು – ಪುತ್ರಕಾಮನಾಗಿರುವ ಪೃಥ್ವೀಪತಿಗೆ ಹಾಗೆಯೇ ಆಗಲೆಂದು ವರವನ್ನು ಕರುಣಿಸಿದುದಲ್ಲದೆ, ಪುತ್ರವಾತ್ಸಲ್ಯದಿಂದ ಎಲೈ ಪುತ್ರನೇ! ಪತ್ರಪಟದಲ್ಲೆನ್ನ ಹಾಲನ್ನು ಕರೆದು ಪಾನ ಮಾಡು, – ಎಂದಾಣತಿಯನಿತ್ತುದು.

ಆಗಲಾ ಅರಸು – ಎಲೆ ಮಾತೆಯೇ! ಕರುವನ್ನು ಕುಡಿಸಿ, ನಿನ್ನ ಹಾಲನ್ನು ಕರೆದು, ಮುನಿಯ ಹೋಮಕ್ಕೆ ವಿನಿಯೋಗಿಸಿ, ಉಳಿದ ಪ್ರಸಾದವನ್ನು, ನನ್ನಿಂದ ಆಳಲ್ಪಡುವ ಭೂಮಿಯ ಹುಟ್ಟುವಳಿಯಲ್ಲಿನ ಆರನೆಯ ಒಂದು ಭಾಗವನ್ನು ಹೇಗೊ ಹಾಗೆ, ಮಹರ್ಷಿಯ ಆಣತಿಯನ್ನು ಪಡೆದು, ಅನುಭವಿಸಬೇಕೆಂದು ಬಯಸುತ್ತೇನೆ ; ಎಂದು ವಿಜ್ಞಾಪಿಸಲು, ವಶಿಷ್ಠ ಧೇನುವು – ವಿಶೇಷವಾಗಿ ಪ್ರೀತಿಸಿತು; ಮತ್ತು – ಆ ದೊರೆಯಿಂದೊಡಗೂಡಿ ಹಿಮಶೈಲದ ತಡಿಯಿಂದ ಆಶ್ರಮದ ಕಡೆಗೆ ತಿರುಗಿತು.

ತಪೋವನವನ್ನು ಸೇರಿದ ಬಳಿಕ ನಗೆಮೊಗದ ಜನರೊಡೆಯನು ತನ್ನ ಸಂತಸದ ಕುರುಹುಗಳಿಂದ ನಂದಿನಿಯ ಅನುಗ್ರಹವನ್ನು ಮೊದಲೇ ಊಹಿಸಿ ತಿಳಿದಿದ್ದರೂ, ಪುನರುಕ್ತಿಯಂತಿರುವ ಮಾತಿನಿಂದ ಮುನಿಗೆ ಬಿನ್ನವಿಸಿ, ತರುವಾಯ ಪ್ರಿಯಳಿಗೂ ತಿಳಿಸಿ, ಆಮೇಲೆ ದೋಷಲೇಶವಿಲ್ಲದೆ ಸಾಧುಪ್ರಿಯನೆನಿಸಿದಾ ಪಾರ್ಥಿವನು– ಕರುವಿಗೂ, ಮುನಿಯ ಹೋಮಕ್ಕೂ ಉಪಯೋಗಿಸಿ ಉಳಿದ, ತನ್ನ ಪರಿಶುದ್ಧವಾದ ಕೀರ್ತಿಯಂತಿರುವ ಧೇನುವಿನ ಕ್ಷೀರವನ್ನು, ವಶಿಷ್ಠಮುನಿಯ ಅಪ್ಪಣೆಯಿಂದ ಅತ್ಯಾಶೆಗೊಂಡು ಪಾನಮಾಡಿದನು.

ಹೀಗೆ ನೇಮದಿಂದ ಇಪ್ಪತ್ತೆರಡನೆಯ ದಿವಸಕ್ಕೆ ವ್ರತವು ಪೂರಯಿಸಿತು. ಇಪ್ಪತ್ತಮೂರನೆಯ ದಿನ ಬೆಳಗಾದಕೂಡಲೆ – ವ್ರತಸಾಂಗತೆಯ ಪಾರಣೆಯಾಯಿತು. ಪತ್ನಿಯೊಡನೆ, ದಿಲೀಪನು ಪುರಪ್ರಯಾಣಕ್ಕೆ ಅಣಿಯಾದನು. ಜಿತೇಂದ್ರಿಯನಾದ ವಶಿಷ್ಠ ಮುನಿಯು ಆ ದಂಪತಿಗಳಿಗೆ, ಹೊರಡುವಾಗ– ಮಂಗಳಾಶಾಸನವನ್ನು ಮಾಡಿ, ಸುಖಪ್ರಯಾಣವನ್ನು ಮಾಡಿಸಿದನು.

ತದನಂತರದಲ್ಲಿ ಮಂಗಳಕಾರದ ಮಹಾಮಹಿಮೆಯ ದಿಲೀಪ ಮಹಾರಾಜನು– ಧರ್ಮಪತ್ನಿಯೊಡನೆ ಹವಿಸ್ಸಿನಿಂದ ಬೆಳಗುತ್ತಲಿರುವ ಅಗ್ನಿಯನ್ನೂ, ಕುಲಗುರುವನ್ನೂ, ಗುರುಪತ್ನಿಯನ್ನೂ, ಕರುವಿನೊಡನೆ ಸಹಿತವಾದ ನಂದಿನಿಯನ್ನೂ, ಕ್ರಮವಾಗಿ ಬಲವಂದು, ಪ್ರಯಾಣಾಭಿಮುಖನಾಗಿ ರಥವನ್ನೇರಿದನು. ತಡೆಯಿಲ್ಲದೆ ಕೈಗೂಡಿದ ಕೋರಿಕೆಯಂತೆ, ಹಳ್ಳದಿಣ್ಣೆಗಳಿಲ್ಲದೆ ಸಮನಾದ ಹಾದಿಯಲ್ಲಿ, ಕಿವಿಗಿಂಪಾಗಿ ದನಿಗೆಯ್ಯುತ ನಡೆಯುವ ತೇರು ಹಾಯಾಗಿದ್ದಿತು. ಇಂತು ಸಪತ್ನೀಕನಾಗಿ ತಾಳ್ಮೆಯಿಂದ ಹೊರಟು, ದಾರಿಯನ್ನು ದಾಟಿ, ತನ್ನ ಪುರದ ಬಳಿಗೈತಂದನು. ಪ್ರಜೆಗಳಿಗೆ

ಧರ್ಮದರ್ಶಕನಾಗಿ, ಪ್ರೀತಿಯಿಂದ ಅವರನ್ನು ಪಾಲಿಸುತ್ತಾ, ಅವರ ಪೂರ್ಣಾನುರಾಗಕ್ಕೆ ಪಾತ್ರನೆನಿಸಿ, ಸರ್ವಸಮ್ಮತನಾಗಿದ್ದುದರಿಂದಲೇ ಆತನ ಅಗಲಿಕೆಯನ್ನು ತಾಳಲಾರದೆ ತಹತಹಪಡುತ್ತಲಿದ್ದ ಪ್ರಜೆಗಳೆಲ್ಲರೂ, ಪ್ರಜಾಕಾಮನಾಗಿ, ವ್ರತವನ್ನಾಚರಿಸಿ, ಬಹು ಕೃಶನಾಗಿದ್ದರೂ ವರಲಾಭದಿಂದ ಪೊಸತೆನಿಸಿದ ಕಳೆಯನ್ನು ಹೊಂದಿರುವ ಪ್ರಜಾನಾಥನನ್ನು, ಹೊಸದಾಗಿ ಉದಿಸಿದ ಚಂದಿರನನ್ನು ಹೇಗೋಹಾಗೆ ಎಷ್ಟು ಸಾರಿ ನೋಡಿದರೂ ತಣಿಯಲೇ ಇಲ್ಲ.

ವಿಬುಧೇಶನ ವೈಭವವುಳ್ಳ ವಸುಮತೀಶನು ಬಂದನೆಂಬ ಸುದ್ದಿಯು ಪುರದೊಳೆಲ್ಲ ಹರಡಿತು. ಪುರಜನರು ತೋರಣ ಧ್ವಜಸ್ತಂಭಾದಿಗಳಿಂದ ಪ್ರೀತಿಪೂರ್ವಕವಾಗಿ ಪಟ್ಟಣವನ್ನು ಅಲಂಕರಿಸಿ, ಮಹಾರಾಜನನ್ನು ಇದಿರ್ಗೊಂಡು, ತಂತಮ್ಮ ಸಂತೋಷವನ್ನು ತೋರ್ಪಡಿಸುತ್ತ ಅಭಿನಂದಿಸಿದರು.

ದೊರೆಯು–ಅವರ ಆನಂದವನ್ನು ಆದರಪೂರ್ವಕವಾಗಿ ಪರಿಗ್ರಹಿಸುತ್ತಾ, ಪುರಪ್ರವೇಶವನ್ನುಗೈದು, ಆದಿಶೇಷನಿಗೆಣೆಯೆನಿಸಿದ ತನ್ನ ಬಾಹುವಿನಲ್ಲಿ ಎಂದಿನಂತೆ ರಾಜ್ಯಭಾರವನ್ನು ವಹಿಸಿದನು.

ಇಂತು ಧರ್ಮದಿಂದ ಕೆಲಕಾಲ ರಾಜ್ಯವನ್ನಾಳುತ್ತಿರಲು, ಮಹಾತ್ಮರ ಅನುಗ್ರಹವು ವಿಫಲವಾಗುವುದುಂಟೆ? ಅತ್ರಿಮುನಿಯು ನೇತ್ರದಿಂದ ಜನಿಸಿದ ಜಲವನ್ನು ದಿಗಂಗನೆಯರು ಧರಿಸಿದ್ದು, ಅವರಿಂದ ಆವಿರ್ಭವಿಸಿ, ಲೋಕಾನಂದವೆನಿಸಿರುವ ಚಂದ್ರರೂಪವಾದ ತೇಜಸ್ಸನ್ನು ಆಕಾಶದಂತೆಯೂ, ಅಗ್ನಿಯು ಕೊಟ್ಟ ಶಿವನ ತೇಜವನ್ನು ದೇವಗಂಗೆಯ ಹಾಗೂ, ದಿಲೀಪನ ಧರ್ಮಪತ್ನಿಯು – ರಘುಕುಲದೇಳಿಗೆಗಾಗಿ, ಅಷ್ಟದಿಕ್ಪಾಲಕರ ಅಂಶದಿಂದೊಡಗೂಡಿದ ಗರ್ಭವನ್ನು ಧರಿಸಿದಳು.

****

ಮೂರನೆಯ ಅಧ್ಯಾಯ

ರಘುರಾಜ್ಯಾಭಿಷೇಕ

ಸೂಚನೆ ॥ ರಘುವೆನಿಪಾತ್ಮಜನಿಂದಂ ।
ಮಘವಂತನ ಜೈಸಿಯಶ್ವಮೇಧವ ಗೈದಂ ।
ಲಘು ಭವಜಲಧಿಯ ದಾಂಟಲ್ ।
ರಘುವಶಮಂಗೈದನಾ ದಿಲೀಪಂ ಧುರಮಂ ।

ಸುದಕ್ಷಿಣೆಯ ಗರ್ಭಧಾರಣವು – ದಿಲೀಪನಿಗೆ ಬಹಳ ಇಷ್ಟವಾಗಿದ್ದಿತು, ಭಾವಿಶ್ರೇಯವನ್ನು ಸೂಚಿಸುತ್ತಲಿತ್ತು, ಗೆಳತಿಯರ ಮೇಲ್ತರದ ನೋಟಕ್ಕೆ ಬೆಳ್ದಿಂಗಳಿನಂತೆ ಬೆಳಗುತ್ತಲಿದ್ದಿತು. ಇಕ್ಷ್ವಾಕುರಾಜನ ಕುಲದೇಳಿಗೆಗೆ ಮೂಲವಾಯಿತು. ಬಳಿಕ ಗರ್ಭದ ಕುರುಹುಗಳು ಕಾಣುತ್ತ ಬಂದುವು – ಒಡತಿಯ ಒಡಲು ಬಡವಾಗುತ್ತ ಬಂದಿತು. ಅರಸಿತಿಯು ತೊಡವುಗಳನ್ನೆಲ್ಲ ತೊಡಲು ಶಕ್ತಳಾಗದಿದ್ದಳು, ಬಾಗೆಯ ಹೂವಿನಂತೆ ಮೋರೆಯು ಬಿಳುಪೇರಿತು. ಇದರಿಂದ ಬೆಳಕು ಹರಿಯುತ್ತ ಬಂದು, ವಿರಳವಾದ ತಾರೆಗಳನೊಳಗೊಂಡಿರುವ ತನುಕಾಂತಿಯು ಚಂದಿರನಿಂದ ಸಹಿತವಾದ ಮುಂಜಾನೆಯ ಇರುಳಿನಂತೆ ಕಾಣಬರುತ್ತಿದ್ದಳು. ಗರ್ಭದ ಬಯಕೆಯಿಂದ ಸುದಕ್ಷಿಣೆಯೊಂದುಬಾರಿ – ಕೆಮ್ಮಣ್ಣನ್ನು ತಿಂದಿದ್ದಳು. ಅರಸು – ಒಂದುದಿನ ಏಕಾಂತದಲ್ಲಿ ಆಕೆಯ ಮುಖವನ್ನು ಆಘ್ರಾಣಿಸಿದನು, ಬಹುಹಿತವಾಗಿದ್ದಿತು. ಬಿಸಿಲಿನಬೇಗೆಯಿಂದ ಬತ್ತಿದ ಕಾಡುಕೊಳದೊಳಗಣ ಬಿರಿದ ನೆಲವನ್ನು, ಮುಂಗಾರು ಹನಿಗಳು ಬೀಳುತ್ತಲಿರುವಾಗ, ಆಘ್ರಾಣಿಸುವ ಆನೆಯಂತೆ, ತಿರೆಯಾಣ್ಮನೂ ತಣಿಯಲೇ ಇಲ್ಲ. ಎಣ್ದೆಸೆಯೊಳಿದಿರಾಳಿಲ್ಲದ ಚಕ್ರವರ್ತ್ತಿಯಾಗುವ ತನ್ನ ಸುತನು–ದೇವಲೋಕವನ್ನು ದೇವೇಂದ್ರನು ಹೇಗೋಹಾಗೆ, ಈ ಭೂಲೋಕವನ್ನು ಭುಜಿಸುವನು ಎಂದು ತಿಳಿದೇ, ರಸವತ್ತರಗಳಾದ ಭೋಗ್ಯವಸ್ತುಗಳು ಬಹಳವಾಗಿದ್ದರೂ, ಅವುಗಳನ್ನೆಲ್ಲ ತೊರೆದು, ಮಹಾರಾಣಿಯು ಮೊಟ್ಟಮೊದಲು ಅಂತು ಇನಿದೆನಿಸಿದ ಮಣ್ಣನ್ನು ತಿನ್ನಲು ಮನವಿಟ್ಟಳು. ಹೀಗಿರಲೊಮ್ಮೆ ಕೋಸಲೇಶನು – ಮಗಧರಾಜನಂದನೆಯಾದ

ಎನ್ನ ಮನದನ್ನೆಯು– ನಾಚಿಕೆಗೊಂಡು ತನ್ನ ಮನದ ಬಯಕೆಯನ್ನು ನನ್ನೊಂದಿಗೆ ತುಸವಾದರು ತಿಳಿಸದಿರುವವಳು. ಆವುದನ್ನು ಬಯಸುವಳೆಂಬುವದನ್ನು ನೀವಾದರು ತಿಳಿದು ಹೇಳಿ, ಎಂದು ಸುದಕ್ಷಿಣೆಯ ಗೆಳತಿಯರನ್ನು ಆದರದಿಂದ ಅಡಿಗಡಿಗೂ ಬೆಸಗೊಳ್ಳುತ್ತಲಿದ್ದನು.

ಮಾಗಧಿಯು – ಬಯಕೆಯ ಹೊಯಿಲನ್ನು ತಾಳಲಾರದೆ, ಆವಾವುದನು ಬಯಸುತ್ತಬಂದಳೋ, ಆ ಕೂಡಲೆ ತಂದು ಇದಿರೊಳಣಿಮಾಡುತ್ತಲಿರುವ ಆಯಾಯ ವಸ್ತುವನ್ನೂ ನೋಡುತ್ತಬಂದಳು. ಹೆದೆಯನೇರಿಸಿದ ಬಿಲ್ಲನ್ನು ಹಿಡಿದು ಹೊರಡುವ ಆ ದೊರೆಗೆ ಇಷ್ಟವಾದುದು – ದೇವಲೋಕದಲ್ಲಿಯೂ ಅಸದಳವೆನಿಸುತ್ತಲಿರಲಿಲ್ಲ. ಕಾಲಕ್ರಮದಿಂದ ಬಯಕೆಯ ಬಲ್ಮೆಯು ಕಡವೆಯಾಗುತ್ತ ಬಂದಿತು, ಅವಯವಗಳು ಹೊರವಾಗುತ್ತ ಬಂದುವು. ಅರಸಿತಿಯ–ಹಣ್ಣೆಲೆಗಳುದಿರುತ್ತ ಬರುವಲ್ಲಿ, ಹೊಸತೆನಿಸಿ ಹೊಮ್ಮುವ ತಳಿರುಗಳಿಂದ ತುಂಬಿದ ಎಳೆಯ ಬಳ್ಳಿಯಂತೆ ರಾರಾಜಿಸುತ್ತಲಿದ್ದಳು.

ಆಗಲಾ ಧೀರನಾದ ದೊರೆಯು – ಇನ್ನು ಸ್ವಲ್ಪ ಕಾಲ ಕಳೆಯಲು ನಿಧಿಗರ್ಭಳಾದ ವಸುಮತಿಯ ಹಾಗೂ, ಅಂತರದೊಳಗ್ನಿಯನ್ನೊಳಗೊಂಡಿರುವ ಶಮಿಯ ಹಾಗೂ, ಗುಪ್ತಸಲಿಲವಾದ ಸರಸ್ವತೀ ಸರಿತ್ತಿನ ಹಾಗೂ ಗರ್ಭಿಣಿಯಾದ ತನ್ನ ಗೃಹಿಣಿಯನ್ನು ಸಂಭಾವಿಸಿದನು. ಅದುವರೆಗೆ ಒದಗಿದ ಪುಂಸವನವೇ ಮೊದಲಾದ ಉತ್ಸವಗಳನ್ನು ತನ್ನ ಪ್ರಿಯಳಲ್ಲಿರುವ ಪ್ರೇಮಕ್ಕೂ, ಮನಸ್ಸಿನ ಉತ್ಸಾಹಕ್ಕೂ, ತೋಳುಬಲದಿಂದ ದಿಗಂತರಗಳಲ್ಲಿ ಗಳಿಸಿದ ಸಂಪದಗಳಿಗೂ, ತನ್ನ ಉದಾರಭಾವಕ್ಕೂ ತಕ್ಕಂತೆ ಕ್ರಮವಾಗಿ ನೆರವೇರಿಸಿದನು. ಅರಸಿತಿಯು ಪೂರ್ಣಗರ್ಭಿಣಿಯಾದಳು, ಅಷ್ಟದಿಕ್ಪಾಲಕರ ಅಂಶಗಳ ಮೊತ್ತವೇ ಆಕೆಯ ಗರ್ಭದಲ್ಲಿನ ಶಿಶುವಾಗಿದ್ದಿತು. ಒಂದಾನೊಂದು ದಿವಸ – ರಾಜನು ರಾಣಿವಾಸಕ್ಕೆ ಬರುತ್ತಿದ್ದನು. ಅರಸಿಯು–ಇನಿಯನನ್ನಿದಿರ್ಗೊಂಡು ಅಂಜಲಿಯನ್ನು ಜೋಡಿಸಿ, ಮರ್ಯಾದೆಯನ್ನು ಪಾಲಿಸಬೇಕೆಂದು, ಗರ್ಭಭಾರದಿಂದ ಪೀಠವನ್ನು ಬಿಟ್ಟೇಳುವ ಸಡಗರದಲ್ಲಿ ಬಳಲುತ್ತ ಚಂಚಲಾಕ್ಷಿಯಾದಳು. ಆ ಮಡದಿಯನ್ನು ಮಹಾರಾಜನು ನೋಡಿ, ಆನಂದಭರಿತನಾದನು.

ಬಾಲಚಿಕಿತ್ಸೆಗಳನ್ನು ಬಲ್ಲ ಜಾಣರಾದ ಭಿಷಗ್ವರರು – ಗರ್ಭವು ಸುಖವಾಗಿ ಬೆಳೆಯುವಂತೆ ಚಿಕಿತ್ಸೆಗಳನ್ನಾಚರಿಸಿದರು, ಅರಸತಿಯು ಪ್ರಸವಾಭಿಮುಖಿಯಾಗುತ್ತಲಿದ್ದಳು, ಆಗಲಾ ಭೂಮಿಪಾಲನು – ಮಳೆಗಾಲದ ಮೋಡಗಳನ್ನೊಳಗೊಂಡ ಮುಗಿಲಿನಂತಿರುವ ಮಹಿಷಿಯನ್ನು ನೋಡಿ ಹರ್ಷಗೊಂಡನು.

ಇನ್ನೇನು! ಹತ್ತನೆಯ ತಿಂಗಳು ಬಂದಿತು, ಸೂರ್ಯನೇ ಮೊದಲಾದ ಐದು ಗ್ರಹಗಳೂ–ಅಸ್ತಮಯವನ್ನು ಪಡೆಯದೆ, ತಂತಮ್ಮ ಉಚ್ಚಸ್ಥಾನಗಳಲ್ಲಿದ್ದು, ಭೂಪಾಲಪುತ್ರನ ಭಾಗ್ಯಸಂಪದವನ್ನು ಸೂಚಿಸುತ್ತಲಿದ್ದುವು. ಶಚೀದೇವಿಗೆಣೆಯಾದ ಸುದಕ್ಷಿಣೆಯು–ಪ್ರಭಾವಮಂತ್ರೋತ್ಸಾಹಗಳೆಂಬ ಸಾಧನಗಳನ್ನೊಳಗೊಂಡಿರುವ ಶಕ್ತಿಯು ಅಪಾರವಾದ ಅರ್ಥವನ್ನು ಹೇಗೋಹಾಗೆ, ಶುಭಸಮಯದಲ್ಲಿ ಸುಕುಮಾರನನ್ನು ಹಡೆದಳು. ದೆಸೆಗಳು ನಿರ್ಮಲಗಳಾಗಿ ಕಾಣಬರುತ್ತಿದ್ದುವು, ವಾಯುಗಳು ಹಾಯಾಗಿ ಬೀಸತೊಡಗಿದವು, ಅಗ್ನಿಯು ಬಲವಂದು ಹವಿಸ್ಸನ್ನು ಕೈಗೊಂಡನು, ಆ ಕಾಲದಲ್ಲಿ ಎಲ್ಲವು ಶುಭವನ್ನು ಸೂಚಿಸುತ್ತಲಿದ್ದಿತು. ಇಂತವರ ಹುಟ್ಟೇ ನಾಡಿನ ಮೇಲ್ಮೆಗಲ್ಲವೆ? ಹೊಲೆಮನೆಯೊಳಗೆ ಹಾಸಿಗೆಯಲ್ಲಿ ಪವಳಿಸಿರುವ ಮೇಲಾದ ಹುಟ್ಟುಳ್ಳ ಹಸುಳೆಯ ಮೈಬೆಳಕು ಸುತ್ತಲೂ ಹರಡಿದ್ದಿತು, ಆ ಮನೆಯಲ್ಲಿ ನಟ್ಟಿರುಳೊಳಿಟ್ಟ ದೀವಿಗೆಗಳು – ಚಿತ್ರದಲ್ಲಿ ಬರೆದವುಗಳಂತೆ ಕಳೆಗುಂದಿದ್ದುವು. ಕೂಡಲೆ ರಾಣಿವಾಸದ ಜನರು ಜನರು – ದುಡದುಡನೆ ಓಡಿಬಂದು "ಪುತ್ರೋತ್ಸವವಾಯಿತು – ಪ್ರಭುವೇ" ಎಂದಮರ್ದಕ್ಕೆಣೆಯಾದ ವರ್ಣಾವಳಿಯನ್ನು ಉಸಿರಿದರು, ಅರಸು – ಅವರಿಗೆ ಚಂದಿರನಂತೆಸೆವ ಛತ್ರ ಮತ್ತು ಚಾಮರಗಳನ್ನು ಮಾತ್ರವೇ ಕೊಡಲಿಕ್ಕಾಗಲಿಲ್ಲ. ಆಮೇಲೆ ಭೂಪಾಲನು ಬಲುಬೇಗನೆ ಸೂತಿಕಾಗೃಹದ ಬಳಿಗೆ ಬಂದನು, ಗಾಳಿಯಿಲ್ಲದೆಡೆಯೊಳಿಟ್ಟಿರುವ ದೀವಿಗೆಯಂತಲುಗದಿರುವ ದಿಟ್ಟಿಯಿಂದ ಮನೋಹರವಾದ ಮಗನ ಮೆಯ್ಯನ್ನು ನೋಡಿದನು. ಹುಣ್ಣಿಮೆಯ ಚಂದಿರನನ್ನು ನೋಡಿದೊಡನೆ ಕಡಲಿನ ಪಾತ್ರೆಯೊಳಗಣ ಜಲರಾಶಿಯಂತೆ, ಹೇರಳವಾದ ಹರ್ಷವು – ಅಂತರಂಗದಲ್ಲಡಗದೆ ಉಕ್ಕುಳಿಸುತ್ತಲಿದ್ದಿತು. ಈ ಶುಭ ಸಮಾಚಾರವು ಕುಲಗುರುವಿಗೆ ತಿಳಿಯಿತು, ತಪಸ್ವಿಯು ತಪೋವನದಿಂದ ತಡಮಾಡದೆ ಬಂದನು. ಜಾತಕರ್ಮವೇ ಮೊದಲಾದ ಸಂಸ್ಕಾರಗಳನ್ನು ಸಂತಸದಿಂದ ನೆರವೇರಿಸಿದನು. ಆಗ – ದಿಲೀಪಕುಮಾರನು ಗಣಿಯಿಂದೆತ್ತಿ, ಸಾಣೆಯ ಬೇಸಾಯವನ್ನು ಪಡೆದ ರತುನದ ಹಾಗೆ ಮಿಗಿಲು ಬೆಳಗುತ್ತಲಿದ್ದನು. ಮಂಗಳವಾದ್ಯನಾದಗಳು ಕಿವಿಗಿಂಪಾಗಿ ಮೊಳಗುತ್ತಲಿದ್ದುವು, ಬೆಲೆವೆಣ್ಗಳ ಸಂತಸದ ಕುಣಿತಗಳೂ ಕಂಗೊಳಿಸಿದುವು. ಈ ಉತ್ಸವವು ದಿಲೀಪನ ಮನೆಯಲ್ಲಿ ಮಾತ್ರವಲ್ಲ; ಅಮರರ ಹಾದಿಯಲ್ಲಿಯೂ ನಡೆಯುತ್ತಲಿದ್ದಿತು, ಇಂತಹ ಮಹೋತ್ಸವಗಳ ಸಮಯದೊಳಗೆ ಅರಸರು– – ಸೆರೆಯಲ್ಲಿರುವವರನ್ನು ಬಿಡಿಸುವುದು ವಾಡಿಕೆ, ಧರ್ಮದಿಂದ ರಾಜ್ಯವನ್ನಾಳುವ ದಿಲೀಪನ ಬಂದೀಗೃಹದಲ್ಲಿ, ಹಾಗೆ ಅಪರಾಧದಿಂದ ಬದ್ಧರಾದವರೇ ಇರಲಿಲ್ಲ. ಸಂತಾನದ ಸಂತಸದಿಂದಾರನ್ನು ಬಿಡಿಸುವುದು? ಆದಕಾರಣ ಪಿತೃಋಣದಿಂದ ಬದ್ಧನಾಗಿದ್ದ ತಾನೇ ಬಿಡುಗಡೆಯನ್ನು ಹೊಂದಿದನು.

ಬಳಿಕ ಅರ್ಥಜ್ಞನಾದ ಪಾರ್ಥಿವನು –ಶಾಸ್ತ್ರಗಳ ಕೊನೆಯನ್ನೂ ಕಾಳಗದಲ್ಲಿ ಹಗೆಗಳ ಕೊನೆಯನ್ನೂ, ಈ ಆತ್ಮಜನು ಕಾಣುವನು (ಗಮನಿಸುವನು) ಎಂದು ತಿಳಿದೇ, ಗಮನಾರ್ಥದ ಧಾತುವಿನಿಂದ ಸಿದ್ಧವಾದ ರಘು ಎಂಬ ಹೆಸರಿನಿಂದ ಕುಮಾರನಿಗೆ ನಾಮಕರಣದ ಹಬ್ಬವನ್ನು ನೆರವೇರಿಸಿದನು. ರಘುವು– ಪೂರ್ಣಸಂಪನ್ನನಾದ ತಂದೆಯ ಪ್ರಯತ್ನವಿಶೇಷದ ಮೂಲಕ ಹೊಮ್ಮುತ್ತಲಿರುವ ಅಂದವಾದ ಅವಯುವಗಳಿಂದ ಬೆಳಗಿದನು. ರವಿಯು ಕಿರಣಗಳು ಒಳಹೊಗುವುದರಿಂದ ಬಾಲಚಂದ್ರನಂತೆ ದಿನದಿನಕ್ಕೂ ಬೆಳವಳಿಗೆಯನ್ನು ಹೊಂದುತ್ತಲಿದ್ದನು. ಕುಮಾರಸ್ವಾಮಿಯಿಂದ ಉಮಾಮಹೇಶ್ವರರ ಹಾಗೂ, ಜಯಂತನಿಂದ ಶಚೀಪುರಂದರರಂತೆಯೂ, ಸುದಕ್ಷಿಣಾ ದಿಲೀಪರು – ಆ ಕುಮಾರರಿಗೆಣೆಯಾದ ಕುಮಾರನಿಂದ ತಾವೂ, ಆ ದಂಪತಿಗಳಿಗೆಣೆಯೆನಿಸಿ ಆನಂದಿಸುತ್ತಲಿದ್ದರು. ಆ ಗಂಡಹೆಂಡಿರುಗಳೊಳಗೆ ಜಕ್ಕವಕ್ಕಿಗಳಂತೆ – ಒಬ್ಬರಮೇಲೊಬ್ಬರಿಗಿದ್ದ ಪ್ರೇಮವು–ಆ ಹಸುಳೆಯಿಂದ ಹಂಚಿಕೆಯನ್ನು ಪಡೆದರೂ, ಈಕೆಯಿಂದ ನನಗೆ ಇಂತಹ ಸಂತಾನವಾಯಿತೆಂದು ಆತನಿಗೂ, ಈತನಿಂದ ತನಗೆ ಇಂತಹ ಸುಕುಮಾರನು ಸಂಭವಿಸಿದನೆಂದು ಆಕೆಗೂ ಅನ್ಯೋನ್ಯತೆಯಿಂದ ಹೆಚ್ಚುತ್ತಲೇ ಇದ್ದಿತು. ಆಮೇಲೆ ಆ ಕಂದನು – ದಾದಿಯ ಕಯ್ಯೂಡು ಮಾಡಿಕೊಂಡು, ತಪ್ಪು ಹೆಜ್ಜೆಯನ್ನಿಡುತ್ತಾ, ನಡೆಯಲಿಕ್ಕೆ ಮೊದಲಿಟ್ಟನು. ಆಕೆಯು ಮೊಟ್ಟಮೊದಲು ಹೇಳಿಕೊಡುವ ಮಾತುಗಳನ್ನು ತೊದಲಿತೊದಲಿ ಮುದ್ದುಮುದ್ದಾಗಿ ಆಡತೊಡಗಿದನು. ಪೊಡಮಡುವ ಕಲಿಕೆಯಿಂದ ನಮ್ರನೂ ಆಗುತ್ತಲಿದ್ದನು, ಇದರಿಂದ – ಹೆತ್ತವರಿಗೆ ಹೆಚ್ಚಳವನ್ನು ಹೆಚ್ಚಿಸಿದನು. ಅರಸು – ಮೈಸೋಂಕಿನಿಂದುಂಟಾದ ಸುಖಗಳಿಂದ ತನ್ನ ಶರೀರದಲ್ಲಿ ಅಮೃತವನ್ನು ಹೊಗಿಸುವಂತಿರುವ ತನೂಭವನನ್ನು ತಬ್ಬಿ, ತೊಡೆಯಮೇಲೆ ಕೂಡಿಸಿಕೊಂಡು, ಅರೆಮುಗಿದ ಕಣ್ಣುಳ್ಳವನಾಗಿ, ಬಹುಕಾಲದಮೇಲೆ ಮಕ್ಕಳನ್ನೆತ್ತಿಕೊಂಬುದರಿಂದುಂಟಾಗುವ ರುಚಿಯು ಇಂಥದು ಎಂಬುದನ್ನು ಅರಿತನು. ಮತ್ತು ಚತುರ್ಮುಖನು – ಸತ್ತ್ವ, ರಜ, ತಮಗಳೆಂಬ ಗುಣಗಳೊಳಗೆ ಮೊದಲನೆಯದಕ್ಕೆ ಆಸರೆಯಾಗಿ, ತನ್ನ ಬೇರೊಂದು ರೂಪವಾಗಿರುವ ವಿಷ್ಣುವಿನಿಂದ, ತನ್ನ ಸೃಷ್ಟಿಯು ತೊಂದರೆಯಿಲ್ಲದಿರುವುದೆಂದರಿಯುವ ಹಾಗೆ, ಲೋಕಮರ್ಯಾದೆಯನ್ನು ಬಲ್ಲ ಅರಸು – ವಿದ್ಯಾವಿನಯಾದಿ ಸತ್ತ್ವಗುಣಗಳಿಗೆಡೆಯಾಗಿ, ತನ್ನ ರೂಪಾಂತರವಾಗಿರುವ ಉತ್ತಮನಾದ ಕುಮಾರನಿಂದ, ತನ್ನ ಸಂತತಿಯೂ ಸುಖವಾಗಿ ನೆಲೆಗೊಂಡಿರುವುದೆಂದು ತಿಳಿದುಕೊಂಡನು.

ರಘುವಿಗೆ ಜುಟ್ಟುಬಿಡಿಸುವ ಹಬ್ಬವಾಯಿತು. ತನ್ನಂತೆ ಜುಳುಪೆಕೂದಲಿನವರೂ, ಓರಗೆಯ ವಯಸ್ಸಿನವರೂ ಆಗಿರುವ ಮಂತ್ರಿಕುಮಾರರೊಡನೆ ಓದು ಕಲಿಯತೊಡಗಿ,

ಮೊಸಳೆ ಮೊದಲಾದ ಪ್ರಾಣಿಯು ಹೊಳೆಯ ಮೂಲಕ ಕಡಲನ್ನು ಹೊಗುವಂತೆ, ವರ್ಣಮಾಲೆಯ ಅರಿವಿನ ಮೂಲಕ-ಶಬ್ದ ಜಾಲವನ್ನು ಪ್ರವೇಶಿಸಿದನು. ಅದುವರೆಗೆ ಹನ್ನೊಂದನೆಯ ವಯಸ್ಸಿನವನಾದನು, ಕ್ರಮಪ್ರಕಾರ ಮುಂಜಿಯಾಯಿತು. ವಿದ್ಯಾವಂತರಾದ ಗುರುಗಳು – ತಮಗೆ ಬಹು ಇಷ್ಟನಾಗಿರುವ ಆ ಅರಸು ಮಗನಿಗೆ ವಿದ್ಯಾಬುದ್ಧಿಗಳನ್ನು ಕಲಿಸುವಾಗ – ಅವರ ಉದ್ಯೋಗವು ವ್ಯರ್ಥವಾಗಲಿಲ್ಲ, ಸತ್ಪಾತ್ರದಲ್ಲಿ ವಿನಿಯೋಗಿಸಿದ ಶಿಕ್ಷೆಯು ವಿಫಲವಾಗುವುದುಂಟೆ? ರವಿಯು – ಪವನನಿಗಿಮ್ಮಡಿಯಾಗಿ ನಡೆವ ವಾಜಿಗಳಿಂದ ದೆಸೆಗಳನ್ನು ದಾಂಟುವ ಹಾಗೆ, ಉತ್ತಮಬುದ್ಧಿಯುಳ್ಳ ರಘುವು ಬುದ್ಧಿಯ * ಪೂರ್ಣ ಗುಣಗಳಿಂದ ನಾಲ್ಕು ಕಡಲುಗಳಿಗೆಣೆಯೆನಿಸಿದ ನಾಲ್ಕು ವಿದ್ಯೆಗಳನ್ನೂ ದಾಟಿದನು, ಆಮೇಲೆ – ರುರುಮೃಗದ ಪಾವನವಾದ ಚರ್ಮವನ್ನು ಹೊದೆದು, ಅಸ್ತ್ರವಿದ್ಯೆಯನ್ನೆಲ್ಲ ಮಂತ್ರಸಹಿತವಾಗಿ ತನ್ನ ತಂದೆಯಿಂದಲೇ ಕಲಿತನು. ಆದರೆ–ದಿಲೀಪನು ಇದಿರಾಳಿಲ್ಲದ ದೊರೆಯು ಮಾತ್ರವೇ ಆಗಿರಲಿಲ್ಲ ; ನೆಲದಲ್ಲಿ ಎಣೆಯಿಲ್ಲದ ಬಿಲ್ಲಾಳೂ ಆಗಿದ್ದನು. ಎಳೆಗರುವು – ದೊಡ್ಡ ಗೂಳಿಯಾಗುವ ಹಾಗೂ, ಆನೆಯ ಮರಿಯು–ಹಿರಿಯಾನೆಯೆನಿಸಿದ ಸಲಗನಾಗುವ ಹಾಗೂ, ಕಾಲಕ್ರಮದಲ್ಲಿ ಹುಡುಗತನವನ್ನು ದಾಟಿ, ದೊಡ್ಡತನದಿಂದ ಅಂದವಾದ ಹೊರವನ್ನು ಪಡೆದನು.

ಹೀಗೆ ಜ್ಞಾನಗುಣಗಳೊಡನೆ ಬೆಳೆಯುತ್ತಲಿರುವ ರಘುವಿಗೆ ಇಪ್ಪತ್ತೊಂದು ವರ್ಷಗಳು ಕಳೆದುವು, ಬಳಿಕ– ತಂದೆಯು ಈತನಿಗೆ–ಗೋದಾನ ವಿಧಿಯನ್ನು ನೆರವೇರಿಸಿ, ವಿಧಿಪ್ರಕಾರ ವಿವಾಹ ಮಹೋತ್ಸವವನ್ನೂ ನೆರವೇರಿಸಿದನು. ದಕ್ಷಪುತ್ರಿಯರು – ಕತ್ತಲನ್ನು ಕತ್ತರಿಸುವ ಸತ್ಪತಿಯನ್ನು ಪಡೆದು ಸಂತೋಷಿಸುವ ಹಾಗೆ, ರಾಜಕನ್ಯೆಯರೂ – ಉತ್ತಮನೆನಿಸಿರುವ ಸತ್ಪತಿಯಾದ ರಘುವನ್ನು ವರಿಸಿ ಸಂತೋಷಿಸುತಿದ್ದರು, ತರುಣನಾದ ರಘುವಿಗೆ ಪ್ರಾಯದ ಹೊಮ್ಮಿನಿಂದ ತೋಳುಗಳು ನೊಗದಂತೆ ಬಲು ನೀಳವಾಗಿಯೂ, ತೋರವಾಗಿಯೂ, ದುಂಡಾಗಿಯೂ ಇದ್ದುವು. ಕದದಂತೆ ಎದೆಯು ಬಲು ಅಗಲವಾಗಿದ್ದಿತು. ಹೆಗ್ಗತ್ತು ಬಲಿತು ದುಂಡಗೆ ಬಹು ಅಂದವಾಯಿತು. ಹೀಗೆ ಒಡಲಿನ ಬೆಡಗಿನಿಂದ ತಂದೆಯನ್ನು ಗೆದ್ದನು. ಆದರೆ ವಿನಯದಲ್ಲಿ ಮಾತ್ರ ಬಲು ತಗ್ಗಿದವನಾಗಿಯೇ ಇದ್ದನು.

ಆ ಬಳಿಕ ಪ್ರಜಾನಾಥನಾದ ದಿಲೀಪನು ಬಹುಕಾಲದಿಂದ ತನ್ನ ಹೆಗಲಮೇಲೆ ಹೊತ್ತಿರುವ ಪ್ರಜೆಗಳನ್ನಾಳತಕ್ಕ ಹೇರಳವಾದ ಹೊರೆಯನ್ನು ಸ್ವಲ್ಪ ಹಗುರವಾಗುವಂತೆ ಮಾಡಿಕೊಳ್ಳಬೇಕೆಂದು ನೆನೆದು, "ಹುಟ್ಟಿದ್ದು ಮೊದಲು ಸ್ವಭಾವದಿಂದಲೂ, ವಿದ್ಯಾಭ್ಯಾಸದಿಂದಲೂ ತನ್ನ ಮಗನು ಚೆನ್ನಾಗಿ ಪಳಗಿ, ವಿನಯಾದಿ ಸುಗುಣಸಂಪನ್ನನಾಗಿದ್ದಾನೆ, ಇನ್ನು ಮೇಲೆ ಖಂಡಿತವಾಗಿ ಹೆಮ್ಮೆಗೆ ಒಳಗಾಗುವುದಿಲ್ಲ"

ಎಂದು ತಿಳಿದು, ಅವನನ್ನು ಯುವರಾಜಪದವಿಯಲ್ಲಿ ನೆಲೆಗೊಳಿಸಿದನು, ಚೆನ್ನಾಗಿ ಅರಳಿರುವ, ತಾವರೆಯಲ್ಲಿ ಬಹಳ ಹೊತ್ತಿನಿಂದ ನೆಲೆಗೊಂಡಿದ್ದ ಕಾಂತಿಲಕ್ಷ್ಮಿಯು – ಹೊಸದಾಗಿ ಅರಳುತ್ತಲಿರುವ ನೈದಿಲೆಯಲ್ಲಿ ಸುವಾಸನೆಯೇ ಮೊದಲಾದ ಗುಣದ ಆಶೆಯಿಂದ, ತನ್ನ ಒಂದು ಭಾಗವನ್ನು ನೆಲೆಗೊಳಿಸುವ ಹಾಗೆ – ದಿಲೀಪನಲ್ಲಿ ಬಹುಕಾಲದಿಂದ ನೆಲೆಗೊಂಡಿರುವ ರಾಜ್ಯಲಕ್ಷ್ಮಿಯೂ ಹೊಸದಾಗಿ ಯುವರಾಜ ಪದವಿಯನ್ನು ಪಡೆದಿರುವ ರಘುವಿನಲ್ಲಿ ವಿನಯಾದಿ ಸುಗುಣಗಳ ಬಯಕೆಯಿಂದ, ಮೆಲ್ಲಗೆ ಒಂದಡಿಯನ್ನಿಟ್ಟಳು. ಆಗ ಅನಿಲನಿಂದ ಅನಲನ ಹಾಗೂ, ಮಳೆಗಾಲವು ತೊಲಗುತ್ತ ಬರುವುದರಿಂದ ರವಿಯ ಹಾಗೂ ಮದವೇರುತ್ತ ಬರುವಲ್ಲಿ ಕಪೋಲದ ಬಿರಿತದಿಂದ ಆನೆಯ ಹಾಗೂ, ತನಗೆ ಊಡಾಗುತ್ತಲಿರುವ ರಘುವಿನಿಂದ ಅರಸು ಬಲು ಅಸದಳನೆನಿಸಿದನು.

ತರುವಾಯ – ಶತಮಖನಿಗೆಣೆಯೆನಿಸಿದ್ದ ದಿಲೀಪನು ರಾಜಕುಮಾರನಿಂದ ಹಿಂಬಾಲಿಸಲ್ಪಟ್ಟಿರುವ ಬಿಲ್ಲಾಳಾದ ರಘುವನ್ನು ಹೋಮಾಶ್ವಗಳ ರಕ್ಷಣೆಗಾಗಿ ನೇಮಿಸುತ್ತಾ, ಒಂದು ಕಡಮೆ ನೂರು ಯಾಗಗಳನ್ನು ಕ್ರಮವಾಗಿ ಅಡ್ಡಿಯಿಲ್ಲದಂತೆ ಆಚರಿಸಿದನು. ಆ ಹಿಂದೆ – ವಿಧಿಯಪ್ರಕಾರ ಕ್ರತುವನ್ನೆಸಗುತ್ತಲಿರುವ ದಿಲೀಪನು – ಉಳಿದ ನೂರನೆಯ ಯಜ್ಞವನ್ನೂ ನೆರವೇರಿಸಬೇಕೆಂದು ಬಗೆದು, ಮರಳಿಬಿಟ್ಟ ಅಧ್ವರದ ಅಶ್ವವು ತಡೆಯಿಲ್ಲದೆ ನಡೆಯುತ್ತಲಿರುವಲ್ಲಿ, ಕಾವಲುಗಾರರಾದ ಬಿಲ್ಲಾಳುಗಳ ಇದಿರಿಗೇ, ಅರಿತಕ್ಕೆ ಬಾರದ ಮೆಯ್ಯುಳ್ಳವನಾಗಿ ಇಂದ್ರನು ಅದನ್ನು, ಅಹಹ! ಅಪಹರಿಸಿದನು. ಆಗ ರಘುವಿನ ಸೇನೆಯು–ಬಲು ಕಳವಳಗೊಂಡಿತು, ಮುಂದೇನು ಮಾಡಬೇಕೆಂಬುದನ್ನು ಅರಿಯಲಿಲ್ಲ. ಅಚ್ಚರಿಗೆಡೆಯಿಲ್ಲದಂತಾಯಿತು ; ಜಡವಾಗಿ ನಿಂತಿತು. ಮುಂದಿನ ಆಗುಹೋಗುಗಳನ್ನು ಮೊದಲೇ ಕಾಣುವವರಾರು? ಅಷ್ಟುಹೊತ್ತಿಗೆ ಸರಿಯಾಗಿ ಎಲ್ಲಿಂದಲೋ, ಯಾವ ಕಾರಣದಿಂದಲೋ ಮಹಾಮಹಿಮೆಯ ವಶಿಷ್ಠ ಮುನಿಧೇನುವಾದ ನಂದಿನಿಯು – ರಘುವು ತನ್ನ ವರಕುಮಾರನೆಂಬ ಮಮತೆಯಿಂದ ಅನುಗ್ರಹಿಸಲಿಕ್ಕೆಂಬಂತೆ ಹೇಗೋ ಬಂದು ಕಾಣಿಸಿಕೊಂಡಿತು. ಸಜ್ಜನರೊಳಗೆ ಮೊದಲನೆಯವನೆನಿಸಿದ ರಘುವು ಆ ಧೇನುವಿನ ದರ್ಶನವಾದ ಕೂಡಲೇ ಭಕುತಿಯಿಂದ ಶಿರಬಾಗಿ, ಅದರ ಪಾವನವಾದ ಗಂಜಲವನ್ನೆತ್ತಿ ಕಣ್ಣಿಗೊತ್ತಿ, ತೊಡೆದುಕೊಂಡನು. ಕೂಡಲೇ ಕಣ್ಣಿಗೆ ಕಾಣಬರದ ವಸ್ತುವನ್ನೂ ಕಣ್ಣಿನಿಂದ ನೋಡತಕ್ಕ ಶಕ್ತಿಯನ್ನು ಪಡೆದನು. ಜನಪಾಲತನಯನು – ಹಾಗೆಯೇ ತಲೆಯನ್ನೆತ್ತಿ ಮೂಡಲಕಡೆಗೆ ಕಣ್ಣುತೆರೆದನು, ಇದಿರಿಗೆ ಬಾಂದಳದೊಳಗೆ ತನ್ನ ಕುದುರೆಯನ್ನು ತೇರಿನ ಹಗ್ಗದಿಂದ ಕಟ್ಟಿದೆ, ಅದನ್ನು ಬಿಡಿಸಿಕೊಳ್ಳಲು ಕುದುರೆಯು ಮೆಯ್ಯನ್ನು ಕೊಡಹುತ್ತಲಿದೆ, ಸಾರಥಿಯು ಅದರ ಚೇಷ್ಟೆಯನ್ನು ತಡೆಯುತ್ತಲಿದಾನೆ.

ಈ ದಶೆಯೊಳಿರುವ ತನ್ನ ಅಶ್ವವನ್ನು ಒಯ್ಯುತ್ತಾ, ಬೆಟ್ಟಗಳ ರೆಕ್ಕೆಗಳನ್ನು ಕತ್ತರಿಸಿದ ಇಂದ್ರನು ರಥದ ಮೇಲೆ ಕುಳಿತಿರುವುದನ್ನು ಕಂಡನು. ರಘುವು – ಕುದುರೆಯ ಕಳ್ಳನನ್ನು ರೆಪ್ಪೆಬಡಿಯದ ನೂರು ಕಣ್ಣುಗಳಿಂದಲೂ, ತೇರಿಗೆ ಕಟ್ಟಿರುವ ಹಸಿರುಬಣ್ಣದ ಕುದುರೆಗಳಿಂದಲೂ, ದೇವೇಂದ್ರನನ್ನಾಗಿ ಅರಿತು, ಮುಗಿಲನ್ನು ಮುಟ್ಟುತ್ತಲಿರುವ ನೀಳವಾದ ದನಿಯಿಂದ, ಅವನನ್ನು ತಡೆದು ಹಿಂತಿರುಗಿಸುವವನಂತೆ ಇಂತೆಂದನು:

ಅಹಹ! ಎಲೈ ದೇವತೆಗಳಿಗೊಡೆಯನೇ! ಯಜ್ಞದ ಹವಿಸ್ಸಿನ ಭಾಗಗಳನ್ನು ಭುಜಿಸುವವರೊಳಗೆ ನೀನೇ ಮೊದಲನೆಯವನೆಂದು ವಿದ್ಯಾವಂತರೆಲ್ಲ ಯಾವಾಗಲೂ ನಿನ್ನನ್ನು ಹೊಗಳುತ್ತಾರೆ, ಇಂತಹ ನೀನೇ ಅನವರತವೂ ಅಧ್ವರದ ದೀಕ್ಷೆಯೊಳಿರುವ ನಮ್ಮ ತಂದೆಯ ಸತ್ಕರ್ಮವನ್ನು ಹಾಳುಮಾಡಲಿಕ್ಕೆ ಹೀಗೆ ಮುಂದುವರಿಯುತ್ತೀಯೆ? ಓಹೋ – ಬಹಳ ಚೆನ್ನಾಯಿತು!! ನೀನು ಮೂಲೋಕವನ್ನಾಳುವ ನಾಯಕನಲ್ಲವೆ? ಜ್ಞಾನದೃಷ್ಟಿಯಿಂದರಿತು, ಯಾಗಗಳಿಗೆ ಅಡ್ಡಿ ಮಾಡುವ ಹಗೆಗಳನ್ನು ನೀನೇ ಅಡಗಿಸಬೇಕಲ್ಲವೆ? ಹಾಗಿಲ್ಲದೆ ಯಜ್ಞವೇ ಮುಂತಾದ ಧರ್ಮಕಾರ್ಯಗಳನ್ನು ಮಾಡುವವರಿಗೆ ನೀನೇ ತಡೆಯಾಗುವುದಾದರೆ, ಲೋಕದಲ್ಲಿ ಸತ್ಕರ್ಮಾಚರಣೆಯ ಸುದ್ದಿಯೇ ಮುಳುಗಿಹೋಯಿತೆಂಬುದರಲ್ಲಿ ಸಂದೇಹವೇನು? ಅದರಿಂದ ಎಲೈ ಅಮರೇಶ್ವರನೆ! ಮಹತ್ತಾದ ಅಶ್ವಮೇಧಕ್ಕೆ ಅಂಗವಾಗಿ ಶ್ರೇಷ್ಠವೆನಿಸಿರುವ ಈ ಹರಿಯನ್ನು ನೀನು ಬಿಟ್ಟು ಕಳುಹುವುದು ಧರ್ಮ. ಲೋಕದಲ್ಲಿ ವೇದವಿಹಿತವಾದ ಸನ್ಮಾರ್ಗವನ್ನು ತಿಳುಹತಕ್ಕವರು – ಮಲಿನವಾದ ಹಾದಿಯಲ್ಲೆಂದಿಗೂ ಹೆಜ್ಜೆಯನ್ನಿಡುವುದಿಲ್ಲ.

ಇಂತು ಬಹು ಪ್ರೌಢಿಮೆಯಿಂದ ಹೇಳುತ್ತಲಿರುವ ರಘುವಿನ ನುಡಿಯನ್ನಾಲಿಸಿ, ಅಚ್ಚರಿಗೊಂಡ ದಿವೌಕಸರೊಡೆಯನು –ತಟ್ಟನೆ ತೇರನ್ನು ತಿರುಗಿಸಿ ಮಾರುತ್ತರವನಿಂತು ಕೈಗೊಂಡನು–

ಎಲೈ ಅರಸುಮಗನೇ! ನೀನು ಹೇಳಿದುದೆಲ್ಲ ದಿಟ. ಆದರೆ – ಲೋಕದಲ್ಲಿ ಯಾರಾದರೆ ಒಳ್ಳೆಯ ಹೆಸರುವಾಸಿಯನ್ನೇ ಹಣವನ್ನಾಗಿ ನಿಶ್ಚಯಿಸಿರುವರೋ, ಅಂಥವರು – ಆ ತಮ್ಮ ಹೆಸರಿಗೆ ಕುಂದುಂಟಾಗದಂತೆ ಕಾಪಾಡಿಕೊಳ್ಳಲೇಬೇಕು, ನಿಮ್ಮ ತಂದೆಯು – ಈ ಯಾಗವನ್ನು ಮಾಡಿ, ಜಗತ್ತಿನಲ್ಲೆಲ್ಲ ಬೆಳಗುತ್ತಲಿರುವ ನನ್ನ ಕೀರ್ತಿಯನ್ನು ಅತಿಕ್ರಮಿಸಲಿಕ್ಕೆ ಪ್ರಯತ್ನಿಸಿ ಇದ್ದಾನೆ.

ಪ್ರಪಂಚದಲ್ಲಿ – ಪುರುಷೋತ್ತಮನೆಂಬ ಬಿರುದು ಶ್ರೀಹರಿಗೊಬ್ಬನಿಗಲ್ಲದೆ ಬೇರೊಬ್ಬನಿಗೆ ಸಲ್ಲದು, ಮುಕ್ಕಣ್ಣನೊಬ್ಬನೇ ಮಹೇಶ್ವರನೆಂಬ ಹೆಸರಿಗೆ ಗುರಿಯಲ್ಲದೆ ಬೇರಾರೂ ಅಲ್ಲ. ಹಾಗೆಯೇ ಮುನಿಗಳೆಲ್ಲರೂ ನನ್ನನ್ನು ಶತಮಖನೆಂದು ಕರೆಯುತ್ತಾರೆ, ಈ ನನ್ನ ಹೆಸರೂ ಎರಡನೆಯವರಿಗೆ ಸಲ್ಲತಕ್ಕುದಲ್ಲ, ಇಂತು ಶತಕ್ರತುವೆನಿಸಿದ

ನಾನು – ಕಪಿಲ ಮುನಿಯಂತೆ ನಿಮ್ಮಪ್ಪನ ಈ ಕುದುರೆಯನ್ನು ಕಳುವು ಮಾಡಿದ್ದೇನೆ, ಇದನ್ನು ಬಿಡಿಸಿಕೊಂಬ ವಿಷಯದಲ್ಲಿ ನಿನ್ನ ಪ್ರಯತ್ನವನ್ನು ನಿಲ್ಲಿಸು. ಸಗರ ಚಕ್ರವರ್ತಿಯ ಮಕ್ಕಳ ಹಾದಿಯಲ್ಲಿ ಅಡಿಯನ್ನಿಟ್ಟು ಕೆಡಬೇಡ ಎನಲು, ಅಶ್ವಮೇಧಾಶ್ವದ ಅಂಗರಕ್ಷಕನಾದ ರಘುವು ಆ ಪುರಂದರನ ನುಡಿಗೆ ತುಸ ನಕ್ಕು, ಎಲೈ ಪುರೂಹುತನೇ! ಈ ಕುದುರೆಯನ್ನು ಬಿಟ್ಟು ಕೊಡುವುದಿಲ್ಲವೆಂಬುದೇ ನಿನ್ನ ನಿಜವಾದ ಸಂಕಲ್ಪವಾಗಿದ್ದರೆ, ಕಯ್ಯಲ್ಲಿ ಬಿಲ್ಲನ್ನು ಹಿಡಿ, ಸರಳನ್ನು ತೊಡು, ಈ ರಘುವನ್ನು ಗೆಲ್ಲದೆ ನಿನ್ನನ್ನು ಕೃತಕೃತ್ಯನೆಂದು ಎಂದಿಗೂ ಭಾವಿಸಬೇಡ ಎಂದು ಹೇಳಿದುದಲ್ಲದೆ, ಅವನಿದಿರಿಗೆ ಚಾಪದಲ್ಲಿ ಹೆದೆಯನ್ನೇರಿಸಿ, ಶರಸಂಧಾನವನ್ನು ಮಾಡಲು ಅಣಿಯಾಗುತ್ತಾ, ಬಲಗಾಲಿನ ಮಂಡಿಯನ್ನು ಮುಂದಕ್ಕೆ ನೀಡಿ, ಎಡಗಾಲನ್ನು ಹಿಂದಕ್ಕೆ ಸರಿಸಿ, ಮಂಡಿಯನ್ನು ತಗ್ಗಿಸಿ ಬಿಲ್ಲಾಳುಗಳು ಕಾಳಗದಲ್ಲಿ ನಿಲ್ಲುವ ಆಲೀಢವೆಂಬ ಮೋಡಿಯ ಒಡಲಿನಿಂದ ಪಿನಾಕಪಾಣಿಯಂತೆ ಬೆಡಗುಗೊಂಡು ನಿಂತನು. ಕೂಡಲೆ ಕಂಬದಂತೆ ಬಲು ಗಡುಸಾದ ಬಾಣದಪೆಟ್ಟು ಎದೆಗೆ ಬಡಿಯಿತು, ಗಾಯವಾಯಿತು, ಗೋತ್ರಾರಿಗೆ ಬಲು ಸಿಟ್ಟು ಹತ್ತಿತು, ಮುಂಗಾರಿನ ಮೋಡಗಳ ಹಿಂಡಿಗೆ ಕ್ಷಣಕಾಲ ಸಿಂಗರವಾಗಿರುವ ತನ್ನ ಬಿಲ್ಲಿನಲ್ಲಿ ಕೂಡಲೇ ಸಫಲವಾಗತಕ್ಕುದೆನಿಸಿದ ಶರವನ್ನು ತೊಟ್ಟು ಬಿಟ್ಟನು. ಇಂದ್ರನ ಅಂಬು ಅಂದಿನವರೆಗೆ ಭಯಂಕರರೆನಿಸಿದ ರಕ್ಕಸರೊಡಲ ರಕುತದ ರುಚಿಯನ್ನು ಮಾತ್ರವೇ ಬಲ್ಲುದಾಗಿದ್ದಿತು. ರಘುವಿನ ಇಂಬಾದ ಭುಜಾಂತರವನ್ನು ಹೊಕ್ಕಿತು, ಹಿಂದೆ ಕುಡಿದು ಸವಿಗಂಡರಿಯದ ಮನುಷ್ಯ ಶೋಣಿತವನ್ನು ಬಯಕೆಗೊಂಡಿರುವುದೆಂಬಂತೆ ಕುಡಿಯಿತು.

ಬಳಿಕ ಕುಮಾರ–ವಿಕ್ರಮನಾದ ರಘುಕುಮಾರನೂ–ಐರಾವತದ ಕೊರಳನ್ನು ಆಗಾಗ ತಟ್ಟುವುದರಿಂದ ಪೆಡಸಾದ ಬೆರಳುಳ್ಳುದೂ, ಶಚೀದೇವಿಯ ಕಪೋಲದ ಕಸ್ತೂರಿಯ ಗುರುತುಳ್ಳುದೂ ಆಗಿರುವ ಇಂದ್ರನ ತೋಳಿನಲ್ಲಿ, ತನ್ನ ನಾಮಾಕ್ಷರಗಳಿಂದ ಬೆಳಗುವ ಸರಳನ್ನು ನೆಟ್ಟನು, ಮತ್ತು – ವೇಗಕ್ಕೋಸುಗ ಇಕ್ಕೆಲದಲ್ಲಿಯೂ ನವಿಲುಗರಿಯನ್ನು ತಗುಲಿಸಿರುವ ಮತ್ತೊಂದು ಬಾಣವನ್ನು ಬಿಟ್ಟು, ಶಕ್ರನ ತೇರಿನ ವಜ್ರರೂಪವಾದ ದಾಳನ್ನು ಕತ್ತರಿಸಿದನು ಅದರಿಂದ ಸುರನಾಯಕನು – ಸ್ವರ್ಲೋಕದ ಸಾಮ್ರಾಜ್ಯಲಕ್ಷ್ಮಿಯ ಮುಂದಲೆಯನ್ನು ಬಲಾತ್ಕಾರವಾಗಿ ಹಿಡಿದೆಳೆದರೆ ಹೇಗೋಹಾಗೆ, ಅಪಾರವಾದ ರೋಷವನ್ನು ತಾಳಿದನು. ಹೀಗೆ ಒಬ್ಬರನ್ನೊಬ್ಬರು ಗೆಲ್ಲಬೇಕೆಂಬ ಕುತೂಹಲವು ಹೆಚ್ಚುತ್ತಲಿದ್ದಿತು. ಬಾಂದಳದೊಳು ನಿಂತು ಕೆಳಮುಖವಾಗಿಯೂ, ನೆಲದಲ್ಲಿ ನಿಂತು ಮೇಲುಮೊಗನಾಗಿಯೂ ಇಡುತ್ತಲಿರುವ ಭಯಂಕರಗಳಾದ ಸರ್ಪಗರುಡರಂತಹ ಸರಳುಗಳಿಂದ ಇಂದ್ರ ರಘುಗಳಿಬ್ಬರಿಗೂ ದೊಂಬಿಯ ಕಾಳಗವು ನಡೆಯುತ್ತಲಿದ್ದಿತು. ಸುರಾಧಿಪನ ಸಮೀಪದಲ್ಲಿ ಸಿದ್ಧರೂ, ದಿಲೀಪ ಕುಮಾರನ

ಇಕ್ಕೆಲದಲ್ಲಿ ಸೈನಿಕರೂ ನಿಂತು ನೋಡುತ್ತಲಿದ್ದರು. ಆಗ ಮೋಡವು ತನ್ನ ಮೂಲಕವೇ ಹೊರಗೆ ಹೊರಟ ಸಿಡಿಲಿನ ಬೇಗೆಯನ್ನು, ತನ್ನಿಂದ ಉದುರಿದ ಹನಿಗಳಿಂದ ಆರಿಸಲಳವಲ್ಲದ ಹಾಗೆ, ಎಡೆಬಿಡದೆ ಬಿಡುತ್ತಲಿರುವ ಬಾಣಗಳ ಹೊಯಿಲಿನಿಂದ ಅಸದಳವೆನಿಸಿದ ಪ್ರತಾಪಕ್ಕಾಸರೆಯಾದ ರಘುವನ್ನು ಅಡಗಿಸಲು ಸುರಪತಿಯು ಶಕ್ತನಾಗಲಿಲ್ಲ. ಇಂದ್ರನ ಕಯ್ಯ ಮಣಿಕಟ್ಟು - ಕಲ್ಪತರುವಿನ ಚಂದನದ ಗುರುತನ್ನೊಳಗೊಂಡಿರುವುದು. ಕಡೆತದ ವೇಳೆಯಲ್ಲಿನ ಕಡಲಿನಂತೆ ಬಿಲ್ಲಿನ ಹೆದೆಯಲ್ಲಿ ದನಿಗೈಸುತ ಶೌರ್ಯಸಂಪನ್ನನಾದ ಆ ಶಕ್ರನ ಬಿಲ್ಲಿನ ಹೆದೆಯನ್ನು, ಅರ್ಧಚಂದ್ರಾಕಾರವಾದ ಅಲಗನ್ನಾಂತಿರುವ ತನ್ನ ಶರದಿಂದ ರಘುವು ಕತ್ತರಿಸಿದನು. ಆಗ ಇಂದ್ರನಿಗೆ ರೋಷವು ತಲೆಗೇರಿತು, ಮತ್ಸರವು ಹೆಚ್ಚಿತು, ಪ್ರಬಲನಾದ ಹಗೆಯನ್ನು ಮುಗಿಸಲೇಬೇಕೆಂದು ನೆನೆದನು, ಬೆಟ್ಟಗಳ ರೆಕ್ಕೆಗಳನ್ನು ಕತ್ತರಿಸಲಿಕ್ಕೆ ತಕ್ಕುದೆನಿಸಿ, ಮಂಡಲಾಕಾರವಾದ ಬೆಳಕನ್ನು ತಳೆದಿರುವ ವಜ್ರವನ್ನು ಕಯ್ಯಲ್ಲಿ ಹಿಡಿದೆಸೆದನು. ಅದರ ಬಿರುಸಿನ ಪೆಟ್ಟು ರಘುವಿನೆದೆಯನ್ನು ಬಾರಿಸಿತು, ಸೇನಾಜನರ ಕಣ್ಣೀರುಗಳೊಡನೆ ನೆಲದಲ್ಲಿ ಉರುಳಿದನು, ಆದರೂ ನಿಮಿಷಮಾತ್ರದಲ್ಲಿ ಆ ನೋವನ್ನು ತಿರಸ್ಕರಿಸಿ ಸೈನಿಕರ ಸಂತೋಷದ ಸಿಂಹನಾದಗಳೊಡನೆ ತಟ್ಟನೆ ಎದ್ದು ನಿಂತನು ಅಹಹ! ವಜ್ರಾಯುಧದ ಪೆಟ್ಟು ಬಿದ್ದರೂ ಹಿಂಜರಿಯದೆ ಮರಳಿ ಸರಳಿನ ಹೋರಾಟದಿಂದ ಕ್ರೂರವಾಗಿರುವ ಹಗೆತನದಲ್ಲಿ ಚಲದಿಂದ ನಿಂದ ರಘುವಿನ ಹೇರಳವಾದ ಶೌರ್ಯವನ್ನು ಕಂಡು, ವೃತ್ರಾರಿಯು – ಸಂತೋಷಪಟ್ಟನು, ವೀರನೇ ವೀರನ ಪರಿಯನ್ನು ಬಲ್ಲನು, ಎಲ್ಲೆಲ್ಲಿಯೂ ಸುಗುಣಗಳೇ ಮನವನ್ನು ಸೆಳೆಯತಕ್ಕುವಲ್ಲವೆ? ಇಂತಾದಬಳಿಕ – ರಘುವನ್ನು ಕುರಿತು ಶಕ್ರನು –

ಎಲೈ ವೀರಕುಮಾರನೇ! ಬೆಟ್ಟಗಳಲ್ಲಿಯೂ ಕಟ್ಟಿಲ್ಲದ ನನ್ನ ಈ ವಜ್ರಾಯುಧದ ಹೊಡೆತವನ್ನು ಇದುವರೆಗೆ ನೀನೊಬ್ಬನು ಹೊರತು ಮತ್ತಾರೂ ಸಹಿಸಿದುದೇ ಇಲ್ಲ. ಅದರಿಂದ ಈ ನಿನ್ನ ಯಾಗದ ತುರಗವನ್ನು ಬಿಟ್ಟುಕೊಡುವುದೊಂದನ್ನು ಬಿಟ್ಟು, ಮತ್ತಾವ ವರವನ್ನಾದರೂ ಕೇಳು, ಸಂತೋಷದಿಂದ ಕೊಡುತ್ತೇನೆ ಎಂದು ಸ್ಪಷ್ಟವಾಗಿ ಹೇಳಿದನು. ಬಂಗಾರದ ಗರಿಯ ಬೆಳಕಿನಿಂದ ಬೆಳಗುತ್ತಲಿರುವ ಬೆರಳುಗಳಿಂದ ಬಾಣವನ್ನು ಹಿರಿಯಲು ಬತ್ತಳಿಕೆಯೊಳಿಟ್ಟಿದ್ದ ಆ ಕರವನ್ನು ಮುಂದುವರಿಸದೆ ನಿಲ್ಲಿಸಿ, ಪ್ರಿಯಭಾಷಣನಾದ ನರನಾಥನಂದನನು ವೃತ್ರಾರಿಯನ್ನು ನೋಡಿ –

ಎಲೈ ದೇವನೇ! ಇನ್ನು ನಾನು ಬಾಣವನ್ನು ಬಿಡಬಾರದೆಂಬುದು ನಿನ್ನ ಮನದೆಣಿಕೆಯಾಗಿದ್ದರೆ, ನೇಮದಿಂದ ಯಾಗದೀಕ್ಷೆಯಲ್ಲಿಯೇ ನೆಲೆಗೊಂಡಿರುವ ನಮ್ಮ ತಂದೆಗೆ ನೂರನೆಯ ಯಾಗದ ಫಲವೂ ಸಲ್ಲುವಂತೆ ಅನುಗ್ರಹಿಸು, ಮತ್ತು

ಎಲೈ ಮೂಲೋಕದೊಡೆಯನೆ! ಮುಕ್ಕಣ್ಣನಂಶವನ್ನೊಳಗೊಂಡು ನನ್ನಂಥವರಿಂದ ಅತಿಕ್ರಮಿಸಲಸದಳನೆನಿಸಿರುವ ಪ್ರಜಾನಾಥನು – ಯಜ್ಞವಾಟದೊಳಿರುವನಷ್ಟೆ? ಆತನಿಗೆ ಈ ಸುದ್ದಿಯನ್ನು ನಿನ್ನ ದೂತನಿಂದಲೇ ತಿಳಿಸಬೇಕು ಎಂದನು.

ಅದನ್ನು ಕೇಳಿ – ಮಘವಂತನು ಹಾಗೆಯೇ ಆಗಲಿ ಎಂದು ಹೇಳಿ, ತನ್ನ ಸಾರಥಿಯಾದ ಮಾತಲಿಯೊಡನೆ ಸ್ವರ್ಗಾಭಿಮುಖನಾದನು, ಸುದಕ್ಷಿಣಾಸೂನುವು – ಅಂತಾದರೂ ತಾನು ಪೂರ್ಣಕಾಮನಾದಷ್ಟು ಸಂತೋಷಿಸದೆ, ದಿಲೀಪನ ಯಾಗಶಾಲೆಯನ್ನು ಕುರಿತು ಹಿಂದಿರುಗಿದನು.–

ಅದುವರೆಗೆ ಪಾಕಶಾಸನನ ಶಾಸನವನ್ನು ಶಿರದೊಳಾಂತು ಬಂದ ದೇವದೂತನೊಬ್ಬನಿಂದ ಯಜ್ಞಭೂಮಿಯೊಳಿದ್ದ ಮನುಜೇಶ್ವರನು ಮೊದಲೇ ಆ ಸಂಗತಿಯನ್ನರಿತಿದ್ದನು. ಹಾಗೆಯೇ–ಇದಿರಿಗೈತಂದ ನಂದನನಂ ಕಂಡ ಭೂಮಂಡಲಾಧಿಪನು – ಆನಂದಾಮೃತಭರದಿಂದ ಜಡವಾದ ಕರತಲದಿಂದ ಕುಮಾರನನ್ನು ಅಪ್ಪಿದನು, ಕುಲಿಶಾಯುಧದ ಗಾಯದಿಂದ ಜಡ್ಡುಗಟ್ಟಿದ ತನಯನ ಮೆಯ್ಯನ್ನು ತಡಹುತ್ತಾ ಸಂತೋಷಿಸಿದನು. ಇಂತು–ಅಡ್ಡಿಯಿಲ್ಲದಂತೆ ಅಪ್ಪಣೆಯನ್ನು ನಡೆಯಿಸುತ್ತಲಿದ್ದ ಆ ಪೊಡವಿಯೊಡೆಯನು– ಆಯುಷ್ಯದ ಮುಗುವಳಿಯಲ್ಲಿ ನಾಕಲೋಕವನ್ನೇರಲು ಸೋಪಾನಗಳಂತಿರುವ ತೊಂಬತ್ತೊಂಬತ್ತು ಮಹಾಶ್ವಮೇಧಗಳನ್ನಾಚರಿಸಿ ಸುಕೃತವನ್ನಣಿಮಾಡಿಟ್ಟನು. ಆ ಬಳಿಕ – ರೂಪರಸಾದಿ ಸಮಸ್ತ ವಿಷಯಗಳಿಂದಲೂ ಮನಸ್ಸನ್ನು ಹಿಂದಿರುಗಿಸಿ, ರಾಜಲಕ್ಷಣವಾದ ಛತ್ರ ಚಾಮರಗಳನ್ನು ವಿಧಿಪ್ರಕಾರ ಮಗನಿಗೊಪ್ಪಿಸಿ, ತನ್ನ ಧರ್ಮಪತ್ನಿಯೊಡನೆ ತಪೋವನ ತರುವಿನ ನೆಳಲನ್ನು ಆಶ್ರಯಿಸಿದನು. ಮುಪ್ಪಿಗೆ ಬಂದ ಮನುಕುಲದರಸರಿಗೆಲ್ಲ ಇದೇ ಮನೆತನದ ಸಂಪ್ರದಾಯವು.

****

ನಾಲ್ಕನೆಯ ಅಧ್ಯಾಯ

ರಘುದಿಗ್ವಿಜಯ

ಸೂಚನೆ ॥ ಒಡೆತನವ ಪಡೆದು ಪಿತನಿಂ
ಬಿಡದರಸರ ಗೆಲಿದು ತಂದನಾ ರಘು ಸಿರಿಯಂ ।
ಪಡೆವುದು ಕೊಡುವುದೆಕೆನ್ನುತೆ
ತಡೆಯದೆ ಗೈದಂ ಸುವಿಶ್ವಜಿತ್ಸವಮನಹೋ! ।

ಬಳಿಕ ರಘುವು – ತನ್ನ ತಂದೆಯು ಕೊಟ್ಟ ದೊರೆತನವನ್ನು ಪಡೆದನು. ಆಗ – ಸಂಜೆಯಲ್ಲಿ ಸೂರ್ಯನಿತ್ತ ತೇಜವನ್ನು ಪಡೆದುಕೊಂಡ ಅಗ್ನಿಯಂತೆ ಹೇರಳವಾಗಿ ಬೆಳಗುತ್ತಲಿದ್ದನು. ದಿಲೀಪನ ತರುವಾಯ ರಘುವು – ರಾಜ್ಯದಲ್ಲಿ ನೆಲೆಗೊಂಡನೆಂಬ ಸುದ್ದಿಯು ನಾಡುಗಳೊಳಗೆಲ್ಲ ಹರಡಿತು. ಮುನ್ನರಸಿನ ಆಳ್ವಿಕೆಯಲ್ಲಿ ಹಗೆಗಳೆದೆಯೊಳಗೆ ಹೊಗೆಯಾಡುತ್ತಲಿದ್ದ ಬೆಂಕಿಯು ಹೊತ್ತಿ ಉರಿಯುವಂತಾದುದು. ಅರಮನೆಯ ಮುಂದೆ ಧ್ವಜವನ್ನು ನೆಟ್ಟು ಪೂಜಿಸಿ, ಕಾಲಕಾಲದಲ್ಲಿ ಮಳೆಗರೆಯಲೆಂದು ಇಂದ್ರನಿಗೆ ಹಬ್ಬವನ್ನು ಮಾಡುವುದುಂಟು. ದೇಶದ ಪ್ರಜೆಗಳೆಲ್ಲ ತಂತಮ್ಮ ಮಕ್ಕಳೊಡನೆ ಆ ಇಂದ್ರಧ್ವಜವನ್ನು ನೋಡುವಂತೆ, ರಘುವಿನ ಹೊಸದಾದ ಏಳಿಗೆಯನ್ನು ಕಣ್ಣೆತ್ತಿ ನೋಡುತ್ತ ಆನಂದಿಸುತ್ತಿದ್ದರು. ರಘುವು – ಅಭಿವೃದ್ಧಿಗೆ ಬಂದು, ಎಲ್ಲರ ಸಂತೋಷಕ್ಕೂ ಈಡಾದನು. ಆನೆಯಂತೆ ಅಂದವಾದ ನಡಗೆಯುಳ್ಳ ರಘುವು – ತನ್ನ ತಂದೆಯ ಸಿಂಹಾಸನದಲ್ಲಿಯೂ ಶತ್ರುಗಳ ರಾಜ್ಯದಲ್ಲಿಯೂ ಒಂದೇ ಸಮಯದೊಳಗೆ ಹೆಜ್ಜೆಯನ್ನೂರಿದನು. ಆ ರಘುವು ಸಾಮ್ರಾಜ್ಯದಲ್ಲಿ ಪಟ್ಟವನ್ನು ಕೈಗೊಂಡನಷ್ಟೆ? ಆಗ –ಸಿರಿಯು ಕಾಣಿಸಿಕೊಳ್ಳದಂತೆಯೇ ಛಾಯಾಮಂಡಲದಿಂದ ಊಹಿಸತಕ್ಕುದಾಗಿರುವ ತಾವರೆಯೆಂಬ ಕೊಡೆಯ ಕುರುಹಿನಿಂದ ಆತನನ್ನು ಸೇವಿಸಿದಳು. ಹೊಗಳುಭಟರು–ಆಗಾಗ ಅರಸನನ್ನು ಹೊಗಳತೊಡಗುತ್ತಲಿದ್ದರು. ಆ ಸಮಯದಲ್ಲಿ ಸರಸ್ವತಿಯೂ ಅವರಲ್ಲಿದ್ದು, ಅರ್ಥವನ್ನು ಅನುಸರಿಸುವ ನುತಿಗಳಿಂದ ತಾನೂ ದೇವತಾಂಶನಾಗಿ ಪೂಜ್ಯನೆನಿಸಿದ ಆತನನ್ನು ಸೇವಿಸುತ್ತಿದ್ದಳು. ಮನು

ಮೊದಲ್ಗೊಂಡು ಹಲವುಮಂದಿ ಮಹಾರಾಜರು ಆ ಮಹಿಯನ್ನು ಅನುಭವಿಸಿದ್ದುದು ದಿಟ. ಆದರೂ – ಆ ವಸುಮತಿಯು ರಘುವಿನ ವಿಷಯದಲ್ಲಿ ಹೆರರ ಕೈಹಿಡಿಯದವಳಂತೆ ಇರುತ್ತಿದ್ದಳು. ಅರಸು – ದುರುಳರನ್ನು ದಂಡಿಸುತ್ತಲೂ ಸಾಧುಗಳನ್ನು ಮನ್ನಿಸುತ್ತಲೂ ಇದ್ದುದರಿಂದ, ಬಲುಬಿಸಿಯೂ ತನುವೂ ಅಲ್ಲದ ತೆಂಕಲಗಾಳಿಯಂತೆ ಎಲ್ಲರ ಮನವನ್ನೂ ಸೆಳೆಯುತ್ತಲಿದ್ದನು. ತಂದೆಗಿಂತಲೂ ಗುಣವಂತನಾದನು. ಮಾವಿನ ಹೂವು ಕಾಯಾಗಿ ಹಣ್ಣಾಗುತ್ತ ಬಂದಾಗ, ಹೂವಿನಲ್ಲಿ ಪ್ರೀತಿಯು ಕಡಮೆಯಾಗುತ್ತ ಬರುವಹಾಗೆ, ಪ್ರಜೆಗಳಲ್ಲಿ ದಿಲೀಪನ ಪ್ರೀತಿಯು ಹಳೆಯದಾಗುತ್ತಲೇ ಬಂದಿತು. (ಮುಂದಿನದು ಗುಣವುಳ್ಳುದಾದರೆ ಹಿಂದಿನದನ್ನು ಮರೆಯಿಸುವುದು) ಈ ಹೊಸದೊರೆಯು ಬಂದಬಳಿಕ ರಾಜನೀತಿಯನ್ನು ಚೆನ್ನಾಗಿ ಬಲ್ಲವರು ಧರ್ಮಾಧರ್ಮ ಯುದ್ಧಗಳ ಎರಡು ದಾರಿಗಳನ್ನೂ ತಿಳಿಸಿದರು. ಆದರೆ – ಆತನಿಗೆ ಮೊದಲನೆಯದೇ ರುಚಿಸಿತು. ನೆಲ, ನೀರು, ಗಾಳಿ, ಬೆಳಕು ಬೈಲುಗಳಲ್ಲಿನ ಗಂಧ, ರುಚಿ, ಸ್ಪರ್ಶ, ತೇಜ, ಶಬ್ದ ಎಂಬ ಗುಣಗಳು ಹೆಚ್ಚಿಕೆಯನ್ನು ಪಡೆಯುತ್ತಿದ್ದುವು. ಇದರಿಂದ ದೊರೆಯು ಹೊಸಬನಾಗಲು, ಅವೂ ಹೊಸವಾದವೆಂಬಂತೆ ಕಾಣಬಂದುವು, ಜನರಿಗೆ ಹರ್ಷಗೊಳಿಸುವುದರಿಂದ ಚಂದ್ರನ ಹಾಗೂ, ತಾಪಗೊಳಿಸುವುದರಿಂದ ತಪನನ ಹಾಗೂ, ಆ ರಾಜನೂ ತನ್ನ ಆಳ್ವಿಕೆಯಿಂದ ಪ್ರಜೆಗಳ ಮನವನ್ನು ಮೆಚ್ಚಿಸುತ ಬಂದುದರಿಂದ ಅರ್ಥಕ್ಕೆ ಸರಿಯಾದ ಹೆಸರುಳ್ಳವನಾದನು,

ಆತನ ಕಣ್ಣುಗಳು ಕಿವಿಗಳವರೆಗೂ ಹರಡಿ, ಬಲು ಅಗಲವಾಗಿಯೇ ಅಂದವೆನಿಸಿಯೇ ಇದ್ದುವು, ಆದರೂ ಕೆಲಸಗಳ ನವುರನ್ನು ಕಾಣುವ ಕೆಲಸವು – ಶಾಸ್ತ್ರಗಳಿಂದಲೇ ಆಗುತ್ತಲಿದ್ದಿತು. ಆ ಪೊಡವಿಯೊಡೆಯನು–ಒಳನಾಡಿನ ಹಗೆಗಳನ್ನೆಲ್ಲ ಅಡಗಿಸಿದನು, ಪ್ರಜೆಗಳನ್ನೆಲ್ಲ ಮೆಚ್ಚಿಸಿದನು, ಆಡಳಿತವನ್ನೆಲ್ಲ ನೆಲೆಗೆ ತಂದನು. ಮನವು ಸಮಾಧಾನಕ್ಕೆ ಬಂದಿತ್ತು. ಅದುವರೆಗೆ ಕಮಲಧಾರಿಣಿಯಾಗಿ ಎರಡನೆಯ ರಾಜ್ಯಲಕ್ಷ್ಮಿಯು ಬರುವಂತೆ, ತಾವರೆಗೆ ಸುಗ್ಗಿಯಾಗಿರುವ ಆಶ್ವಯುಜ ಮಾಸವೂ ಬಂದಿತು. ಮಳೆಗಾಲದ ಮೋಡಗಳು ಚೆನ್ನಾಗಿ ಮಳೆಗರೆದು, ಹಗುರಗಳಾಗಿ ದಾರಿಕೊಟ್ಟುದರಿಂದ ಸೂರ್ಯನ ಬಿಸಿಲು ಎಲ್ಲೆಲ್ಲಿಯೂ ಹರಡಿ ತಾಳಲಾರದಂತಾಯಿತು, ರಘುರಾಜನ ಪ್ರತಾಪವು – ಎಲ್ಲ ಕಡೆಗಳಲ್ಲಿಯೂ ವ್ಯಾಪಿಸಿ ತಡೆಯದ ಹಾಗಾಯಿತು. ಮುಂಗಾರಿನ ಮುಗಿಲಿನಲ್ಲಿ ಮೂಡುವ ತನ್ನ ಬಿಲ್ಲನ್ನು ಇಂದ್ರನು ಎತ್ತಿಕೊಂಡನು, ರಘುವು ಹಗೆಗಳನ್ನು ಅಡಗಿಸಲು ಊಡಾಗಿರುವ ತನ್ನ ಚಾಪವನ್ನು ಕಯ್ಯಲ್ಲಿ ಹಿಡಿದನು, ಇಂದ್ರ ರಘುಗಳು – ಜನರಿಗೆ ಬೇಕಾದುದನ್ನೆಲ್ಲ ಅಣಿಮಾಡುವ ವಿಷಯದಲ್ಲಿ ಒಬ್ಬರಾದ ಮೇಲೊಬ್ಬರಂತೆ ಬಿಲ್ಲನ್ನು ಕೈಗೊಳ್ಳುವುದೇ ಕ್ರಮವಾಗಿದ್ದಿತು. ಬೆಳ್ಗೊಡೆಯೂ

ಚಾಮರವೂ ಅರಸನಿಗೆ ತೊಡವಾಗಿರುವುದಷ್ಟೆ? ಶರದೃತುವು ಬೆಳ್ದಾವರೆಯಿಂದಲೂ ಕಾಚಿಯ ಹೂವಿನಿಂದಲೂ ಸಿಂಗರಿಸಿಕೊಂಡು ಅರಸನನ್ನು ಅನುಸರಿಸಿತು, ಸಿರಿಯಲ್ಲಿ ವಿಡಂಬಿಸಲಾಗಲಿಲ್ಲ. ಕಳಕಳನೆ ಹೊಳೆಯುತ್ತಲಿರುವ ಚಂದಿರನನ್ನು ಕಂಡು ಸಂತಸಂಗೊಂಬಂತೆ ಆವಾಗಲೂ ನಗೆಮೊಗದಿಂದಿರುವ ಆ ತಿರೆಯಾಣ್ಮನನ್ನು ಕಾಣುವ ಪ್ರಜೆಗಳಿಗೆಲ್ಲ ಪ್ರೀತಿಯು ಹೆಚ್ಚುತ್ತಲಿದ್ದಿತು. ಅಂಚೆಗಳ ಹಿಂಡುಗಳೊಳಗೂ, ತಾರೆಗಳೊಳಗೂ, ಕುಮುದವನ್ನೊಳಗೊಂಡಿರುವ ಕೊಳಗಳೊಳಗೂ ಆತನ ಯಶೋರಾಶಿಯು–ಹರಡಿದಂತಿದ್ದಿತು. ಕಬ್ಬಿನ ತೋಟದ ನೆಳಲಿನಲ್ಲಿ ಕುಳಿತು, ಹಕ್ಕಿ ಮೊದಲಾದವುಗಳ ಕಾಟವಿಲ್ಲದಂತೆ ಗದ್ದೆಗಳನ್ನು ಕಾಯುತ್ತಲಿರುವ ಹೆಂಗಸರು ಚಿಕ್ಕಂದು ಮೊದಲು ಅಂದಿನವರೆಗೂ ನಡೆದ ರಘುಚರಿತ್ರೆಯನ್ನು ಹಾಡುಗಳನ್ನಾಗಿ ಹೇಳಿಕೊಳ್ಳುತ್ತಾ ನಲಿಯುತ್ತಲಿರುವರು.

ಹೀಗಿರುವಲ್ಲಿ ತೆಂಕಲದೆಸೆಯ ಮುಗಿಲಿನೊಳಗೆ ಅಗಸ್ತ್ಯ ನಕ್ಷತ್ರವು ಮೂಡಿತು, ಕೆರೆತೊರೆಗಳ ನೀರೆಲ್ಲ ತಿಳಿಯಾಗುತ್ತ ಬಂದಿತು. ರಘುವಿನ ಏಳಿಗೆಯು ಕುಂದಲೆಂದೆಣಿಸುವ ಹಗೆಗಳ ಎದೆಯು ತಲ್ಲಣಿಸಿ ಒಂಡಾಯಿತು. ತೋರವಾದ ಹಿಳಲುಗಳನ್ನೊಳಗೊಂಡಿರುವ ದೊಡ್ಡ ಗೂಳಿಗಳು ಹೊಳೆಗಳ ದಡಗಳನ್ನು ಗೂಟಾಡುತ, ಕಾಳಗದಲ್ಲಿ ರಘುವು ಹಗೆಗಳನ್ನಿರಿಯುವ ಲೀಲೆಯ ಪರಿಯನ್ನು ತೋರುತ್ತಲಿದ್ದುವು. ಖುತುಧರ್ಮದಿಂದ ಏಳೆಲೆಯ ಬಾಳೆಗಳೊಳಗೆ ಹೂಗಳು ಕಾಣಿಸಿದುವು. ಗಾಳಿಯು ಅವುಗಳೊಳಗಣ ಧೂಳಿಯನ್ನು ತಂದು, ಆನೆಗಳಮೇಲೆ ಎರಚಿತು, ಆನೆಗಳಿಗೆ ಇದಿರಾನೆಗಳು ಬಂದುವೆಂದು ಹೊಟ್ಟೆಯ ಕಿಚ್ಚು ಹೆಚ್ಚಿದಂತಾಯಿತು, ಮದವೇರಿತು, ತಮ್ಮ ಮೈಗಳೊಳಗೆ ಏಳವಯವಗಳಿಂದ ಮದಜಲಧಾರೆಯನ್ನು ಕರೆದುವು. ಮಳೆಗಾಲವೆಲ್ಲ ಕಳೆಯಿತು. ಹೊಳೆಗಳು ಹೆಚ್ಚಿ ಹರಿಯುವುದು ತಗ್ಗಿತು, ನಡಗೆಯಿಂದ ದಾಟಿಹೋಗಲು ತಕ್ಕುವಾದುವು, ಕಾಲುದಾರಿಗಳ ಕೆಸರೆಲ್ಲ ಒಣಗಿತ್ತು, ಉತ್ಸಾಹ ಶಕ್ತಿಯು ರಾಜನನ್ನು ದಿಗ್ವಿಜಯಕ್ಕೆ ಹೊರಡುವಂತೆ ಪ್ರೇರಿಸುವುದಕ್ಕಿಂತ ಮೊದಲೇ ಶರತ್ಕಾಲವು ಯಾತ್ರೆಗೆ ಎಚ್ಚರಿಸಿತು.

ಅರಸು – ಹಗೆಗಳಮೇಲೆ ದಂಡೆತ್ತಿ ಹೋಗುವ ಸಮಯವೊದಗಿತೆಂದು ಅರಿತು, ಆನೆ ಕುದುರೆ ಮೊದಲಾದವುಗಳಿಗೆ ಆರತಿಮಾಡುವ ಹಬ್ಬವನ್ನು ನಡೆಸಿದನು. ಆಗ – ಅಗ್ನಿಪ್ರತಿಷ್ಠೆ ಮಾಡಿ ಕಟ್ಟಲೆಯಂತೆ ಹವನಮಾಡಿದನು, ಅಗ್ನಿಯಿಂದ ಉರಿಯು ಬಲಮೊಗನಾಗಿ ಸುತ್ತಿ ಮೇಲಕ್ಕೆ ಬರುತ್ತಲಿದ್ದಿತು, ಇದರಿಂದ ಅಗ್ನಿಯು–ಅರಸನಿಗೆ ಕಯ್ಯೆತ್ತಿ ಜಯವನ್ನು ಕೊಡುವಂತೆ ಕಂಗೊಳಿಸುತ್ತಲಿದ್ದಿತು. ಬಳಿಕ – ಮೊಟ್ಟ ಮೊದಲು ಒಳನಾಡಿಗೆ ಹೋಕುಬಾರದಂತೆ ಭದ್ರಪಡಿಸಿದನು, ಕೋಟೆಗೆ ಸರಿಯಾದ ಕಾವಲಿಟ್ಟನು, ಬೆಂಗಡೆಯ ನಾಡುಗಳ ಹಾವಳಿಯಿಲ್ಲದ ಹಾಗೆ ಅಣಿಮಾಡಿದನು,

ಆಮೇಲೆ ಶುಭಕರ್ಮಗಳನ್ನು ಆಚರಿಸಿ, ಶಕುನ ಮುಂತಾದವುಗಳನ್ನು ನೋಡಿಕೊಂಡು, ರಾಜನು ದಿಗ್ವಿಜಯವನ್ನು ಬಯಸಿ ಹೊರಟನು. ರಾಜಬೀದಿಯಲ್ಲಿ ಬರುತ್ತಲಿರುವಾಗ ಊರ ಮುತ್ತೈದೆಯರು ವಾಡಿಕೆಯನ್ನನುಸರಿಸಿ ಎರಚುತ್ತಲಿರುವ ಅರಳು – ಅರಸನ ಶಿರದ ಮೇಲೆ ಬೀಳುತ್ತಲಿದ್ದುದು. ಹಿಂದೆ ಬಿಡುಗಣ್ಣರೂ ರಕ್ಕಸರೂ ಪಾಲ್ಗಡಲನ್ನು ಕಡೆವಾಗ ಮಂದರ ಪರ್ವತದಿಂದ ಮೇಲಕ್ಕೆ ಹಾರಿದ ತೆರೆಗಳ ತುಂತುರುಗಳು – ಪಕ್ಕದಲ್ಲಿ ಪವಳಿಸಿರುವ ನಾರಾಯಣನಮೇಲೆ ಬೀಳುವಂತಿದ್ದಿತು.

ಬಿಡುಗಣ್ಣರೊಡೆಯನಿಗೆಣೆಯೆನಿಸಿದ ಪೊಡವಿಯಾಣ್ಮನು–ಮೊದಲು ಮೂಡಲಕಡೆಗೆ ಪಯಣಮಾಡಿದನು. ದಂಡಿನಾಳುಗಳು ದಾಳಗಳನ್ನು ಎತ್ತಿ ಹಿಡಿದಿದ್ದರು, ಗಾಳಿಯಿಂದ ಅಲುಗುವ ತುದಿಯ ಬಟ್ಟೆಗಳು– ಹಗೆಗಳನ್ನು ಬೆದರಿಸುವಂತೆ ಬೆಳಗುತ್ತಲಿದ್ದುವು. ತಿರೆಯಾಣ್ಮನ ಪೌರುಷದ ಹಸರುವಾಸಿಯು ಮುಂದುವರಿದಿತ್ತು, ದಂಡಿನ ಕೋಲಾಹಲವು ಅದರ ಹಿಂದೆ ಹೊರಟಿತು, ಸೇನೆಯ ಧೂಳಿಯು ಅದನ್ನು ಹಿಂಬಾಲಿಸಿತು, ಚತುರಂಗದ ಪಡೆಯು ಅದನ್ನು ಹಿಂದಟ್ಟಿತು. ಇಂತು ಆ ಸೈನ್ಯವು ನಾಲ್ಕು ಹೆಗಲುಳ್ಳುವಂತೆ, ಇಲ್ಲವೆ ನಾಲ್ಮೊಗದ ರಚನೆಯುಳ್ಳುದರ ಹಾಗೆ ನಡೆಯುತ್ತಲಿದ್ದಿತು. ಒಡೆಯನಾಣತಿಯಿಂದ ಮರುಭೂಮಿಗಳೆಲ್ಲ ಜಲಭೂಮಿಗಳಾದುವು, ಹಡಗಿನಿಂದ ದಾಟತಕ್ಕ ಹೊಳೆಗಳೆಲ್ಲ ಕಾಲ್ನಡೆಯಿಂದ ಸುಲಭವಾಗಿ ದಾಟಲಣಿಯಾದುವು, ಕಾಡುಬೀಡುಗಳೆಲ್ಲ ಅಂದವಾದ ಬೀದಿಗಳಾದುವು, ರಘುವು ದೊಡ್ಡ ದಂಡನ್ನು ಮೂಡಲ ಕಡಲಕಡೆಗೆ ಕರೆದೊಯ್ಯುತ್ತಲಿದ್ದನು, ಹರನ ಶಿರದಿಂದಿಳಿದ ಬಾಂದೊರೆಯನ್ನು ಕೊಂಡುಹೋಗುತ್ತಲಿದ್ದ ಭಗೀರಥನಂತೆ ಕಂಗೊಳಿಸಿದನು. ಅಲ್ಲಲ್ಲಿ ಅರಸರಿಗೆ ಬರುತ್ತಲಿದ್ದ ಆಯವೆಲ್ಲ ಅಡಗಿತು, ಬವರದಲ್ಲಿ ಸೋತುದರಿಂದ ತಾವು ತಪ್ಪಿದಂತಾಯ್ತು, ರಾಯನ ದಾರಿಗೆ ಅಡ್ಡಿಯೇ ಇಲ್ಲವಾಯಿತು. ಹೂವು. ಹಣ್ಣುಗಳನ್ನೆಲ್ಲ ಉದುರಿಸಿ, ಕೊನೆಕೊಂಬುಗಳನ್ನೆಲ್ಲ ಮುರಿದು, ಮರಗಿಡ ಬಳ್ಳಿಗಳನ್ನು ಬುಡಸಹಿತ ಕಿತ್ತೆಸೆದು, ಇದಿರಿಲ್ಲದೆ ಬರುವ ಆನೆಯ ದಾರಿಯಂತಾಯ್ತು.

ಗೆಲ್ಲಾಳಾದ ಇಳೆಯಾಣ್ಮನು – ಇಂತು ಮೂಡಣ ದೆಸೆಯ ಅರಸರ ನಾಡುಗಳನ್ನೆಲ್ಲ ವಶಪಡಿಸಿಕೊಂಡು, ಓಲೆಯಮರಗಳ ತೋಪುಗಳಿಂದ ಕಪ್ಪಗೆ ಕಾಣಬರುವ ಕಡಲತಡಿಗೆ ಬಂದು ಸೇರಿದನು. ಅಲ್ಲಿಯೇ ಸುಹ್ಮದೇಶ. ತೊರೆಯ ಅಂಗಳದಲ್ಲಿ ಬೆಳೆದಿರುವ ಹುಲ್ಲು – ಹೊಳೆಯು ಹೆಚ್ಚಿ ಹರಿವಾಗ, ತಲೆಯನ್ನು ತಗ್ಗಿಸಿದ್ದು ತನ್ನನ್ನು ಕಾಪಾಡಿಕೊಳ್ಳುವಂತೆ ಅಲ್ಲಿಯ ದೊರೆಗಳು – ರಘುವಿಗೆ ಆ ತೃಣದಂತೆ ವಿಧೇಯರಾಗಿ ಪ್ರಾಣಗಳನ್ನು ಉಳಿಸಿಕೊಂಡರು. ಅವನಿಪಾಲನು– ಅಣಗದಿರುವವರನ್ನೆಲ್ಲ ಅಡಗಿಸತಕ್ಕವನು. ವಂಗದೇಶದ ದೊರೆಗಳು ಹಡಗಿನ ಬಲವನ್ನು ಕಟ್ಟಿಕೊಂಡು ಇದಿರುಬಿದ್ದರು. ಅವರ ಬೇರನ್ನು ಶೌರ್ಯದಿಂದ ಸಡಲಿಸಿದನು.

ಗೆಲುವು ಕೈಗೂಡಿದುದು, ಗಂಗಾನದಿಯ ನಡುವಣ ದ್ವೀಪಗಳಲ್ಲಿ ಜಯದ ಕುರುಹಿನ ಕಂಬಗಳನ್ನು ನೆಡಿಸಿದನು. ಒಟ್ಟು ಹುಯ್ದಿದ್ದು, ಕಿತ್ತು ಮರಳಿ ನೆಟ್ಟ ಪೈರು – ಹೊರವಾಗಿ ಬೆಳೆದು ಬಾಗಿ, ಹುಲುಸಾದ ಬೆಳೆಯನ್ನು ಕೊಡುವುದು ವಾಡಿಕೆ. ರಘುವು – ವಂಗದೇಶೀಯರನ್ನು ಸ್ಥಲ ತಪ್ಪಿಸಿದಂತೆ ಮಾಡಿ, ಮರಳಿ ಅಲ್ಲಿಯೇ ನಿಲ್ಲಿಸಿದನು. ಅವರು ಸಂತದಿಂದುಬ್ಬಿ ರಘುವಿನ ಅಡಿದಾವರೆಗಳವರೆಗೂ ತಗ್ಗಿ, ತಕ್ಕ ಕಾಣಿಕೆಗಳನ್ನೊಪ್ಪಿಸಿ ಗೌರವಿಸಿದರು. ಅಲ್ಲಿಂದ ಮುಂದೆ – ಕಪಿಶಾನದಿಯೊಳಗೆ ಆನೆಗಳನ್ನು ಸೇತುವೆಯಂತೆ ಸಾಲಾಗಿ ನಿಲ್ಲಿಸಿ, ಬಲದೊಡನೆ ಹೊಳೆಯನ್ನು ದಾಟಿದನು. ವಶರಾದ ಉತ್ಕಲರಿಂದ ದಾರಿಯನ್ನರಿತು, ಕಲಿಂಗ ದೇಶಕ್ಕೆ ಇದಿರಾಗಿ ಬಿಜಯಂಗೈದನು. ಅಲ್ಲಿ – ಗಂಭೀರವೇದಿಯೆಂಬ ಆನೆಯ ಶಿರದಮೇಲೆ ಮಾವಟಿಗನು ಮೊನೆಯಾದ ಅಂಕುಶವನ್ನಿಡುವಂತೆ, ರಘುವು ಮಹೇಂದ್ರ ಪರ್ವತದಲ್ಲಿನ ಅರಸರ ಮೇಲೆ ತನ್ನ ಪ್ರತಾಪವನ್ನು ತೋರಿದನು. ಹಿಂದೆ ರಕ್ಕೆಗಳನ್ನೊಕ್ಕಲಿಕ್ಕಲುಜ್ಜುಗಿಸಿದ ಇಂದ್ರನನ್ನು ಕಲ್ಮಳೆಗರೆಯುತ ಇದಿರ್ಗೊಂಡ ದೊಡ್ಡ ಬೆಟ್ಟದಂತೆ, ಆನೆಯಬಲವುಳ್ಳ ಕಾಳಿಂಗನು ಅಂಬುಗಳನ್ನಿಡುತ ರಘುವನ್ನಿದಿರ್ಗೊಂಡನು. ಬಳಿಕ –ಕಾಕುತ್‌ಸ್ಥನು ಹಗೆಗಳ ಬಾಣದ ಮಳೆಯಲ್ಲಿ ಮುಳುಗಿ, ಸೈರಿಸಿ, ಯಾಗದಲ್ಲಿ ಮಂಗಳಸ್ನಾನ ಮಾಡಿದವನಂತೆ, ಜಯಲಕ್ಷ್ಮಿಯ ಕೈಹಿಡಿದನು. ಅದುವರೆಗೆ ದಂಡಿನ ವೀರರೆಲ್ಲ ಬಳಲಿದ್ದರು. ಮಹೇಂದ್ರಪರ್ವತದಲ್ಲಿ ಬೀಡುಬಿಟ್ಟು, ಎಡೆಗೊಂಡು, ಹಗೆಗಳ ಹೆಸರುವಾಸಿಯನ್ನು ಹೀರಿದಂತೆ, ವೀಳೆಯದೆಲೆಯ ದೊನ್ನೆಗಳಿಂದ ತೆಂಗಿನ ಹೆಂಡವನ್ನು ಕುಡಿದು ತಣಿದರು. ಧರ್ಮಕಾರ್ಯಕ್ಕೋಸುಗವೇ ದಿಗ್ವಿಜಯವನ್ನು ಬಳಸುತ್ತಲಿರುವ ರಘುವು – ಮಹೇಂದ್ರನಾಥನ ಸಿರಿಯನ್ನು ಮಾತ್ರವೇ ಕಸುಗೊಂಡನಲ್ಲದೆ ಧರೆಯನ್ನಲ್ಲ. ಕೈಸೆರೆ ಹಿಡಿದಿದ್ದು ಕಪ್ಪವನೊಪ್ಪಿಸುವ ಅರಸನನ್ನಾಗಿ ಅಲ್ಲಿಯೇ ನೆಲೆಗೊಳಿಸಿದನು.

ಇಂತು ರಘುರಾಜನಿಗೆ ಪೂರ್ವದಲ್ಲಿ ಅಪೂರ್ವ ದಿಗ್ವಿಜಯವಾಯಿತು. ಕಡಲಿನ ದಡದ ದಾರಿಯುದ್ದಕ್ಕೂ ಹೊಂಬಾಳೆಯ ಬೆಳೆಯಿಂದ ತುಂಬಿದ ಅಡಕೆಯ ಗಿಡಗಳ ಸಾಲು ಕಂಗೊಳಿಸುತ್ತಲಿದ್ದಿತು. ಆ ಹಾದಿಯಿಂದಲೇ, ಬಯಸದೆಯೇ ಬರುತ್ತಲಿರುವ ಜಯಲಕ್ಷ್ಮಿಯೊಂದಿಗೆ ಅಗಸ್ತ್ಯ ಮುನಿಗಾಸರೆಯೆನಿಸಿದ ತೆಂಕಲದೆಸೆಗೆ ತಿರುಗಿದನು. ಸಮೀಪದಲ್ಲಿ ಕಾವೇರಿಯು ಕಾಣಬಂದಿತು, ಮದವೇರಿದ ಆನೆಗಳೆಲ್ಲ ಮಜ್ಜನಸುಖವನ್ನನುಭವಿಸಿದುವು, ಸೈನಿಕರೆಲ್ಲ ಸ್ನಾನಪಾನಾದಿಗಳನ್ನಾಚರಿಸಿದರು, ಹೀಗೆ–ಅಲ್ಲಿ ವಿಶ್ರಮಿಸಿಕೊಂಡು, ಮುಂದಕ್ಕೆ ಪಯಣವನ್ನು ಬೆಳೆಸಿದರು. ಜಯಶಾಲಿಯಾದ ರಘುವು – ದಂಡಿನೊಡನೆ ದಾರಿಯನ್ನು ದಾಟಿ, ಮಲಯ ಪರ್ವತದ ತಪ್ಪಲಿನ ವಿಸ್ತಾರವಾದ ಮೆಣಸಿನ ತೋಟಗಳಲ್ಲಿ ಬಂದಿಳಿದನು. ಸೈನಿಕರ

ಹಾವಳಿಯಿಂದ ಅಲ್ಲಿ ನೆಲೆಗೊಂಡಿದ್ದ ಕಾರಂಡ ಪಕ್ಷಿಗಳೆಲ್ಲ ಹಾರಿಹೋದುವು. ಮತ್ತು ಹೇರಳವಾಗಿದ್ದ ಏಲಕ್ಕಿ ತೋಟಗಳನ್ನೆಲ್ಲ ಕುದುರೆಗಳು ತುಳಿಯಲು, ಕಾಯಿಗಳ ದೂಳಿಯು – ಸಮಾನವಾದ ವಾಸನೆಯುಳ್ಳ ಮದದಾನೆಗಳ ಮದಜಲದಿಂದ ತುಂಬಿದ ಕಪೋಲಗಳಲ್ಲಿ ಮೆರೆಯಿತು. ಮಲಯಾದ್ರಿಯ ಬುಡದಲ್ಲಿ ಗಂಧದ ಮರಗಳು ತುಂಬಿದ್ದುವು. ಆ ಗಿಡಗಳ ತಾಳುಗಳಲ್ಲಿ ಸರ್ಪಗಳು ನಿತ್ಯವೂ ಸುತ್ತಿಕೊಳ್ಳುತ್ತಲಿದ್ದುದರಿಂದ, ನಿಲುವಿನ ಸುತ್ತಲೂ ಮರಗಳು ಕಡೆದಂತಾಗಿದ್ದುವು, ಆ ಮರಗಳಲ್ಲಿಯೇ ದಂಡಿನ ಆನೆಗಳನ್ನು ಕಟ್ಟಿದ್ದರು, ಅದರಿಂದಲೇ ಗಜಗಳ ಹಿಂಗಟ್ಟುಗಳು ಸರಿದರೂ ಮುಂಗಟ್ಟುಗಳು ಸರಿಯಲಿಲ್ಲ. ದಕ್ಷಿಣ ದಿಕ್ಕಿಗೆ ತೆರಳಿದಾಗ ರವಿಗೂ ತಾಪವು ತಗ್ಗುವುದು, ಆದರೆ ದಕ್ಷಿಣ ದಿಕ್ಕಿನಲ್ಲಿ ಪಾಂಡುದೇಶದ ಅರಸರು– ರಘುರಾಜನ ಪ್ರತಾಪವನ್ನು ತಾಳಲಾರದೆ ಹೋದರು, ಅದರಿಂದಲೇ ತಾಮ್ರಪರ್ಣೀ ನದಿಯ ಸಂಗಮಸ್ಥಳದಲ್ಲಿ ಕಡಲಿನೊಳಗಿನಿಂದ ಎತ್ತಿ ಇಟ್ಟಿದ್ದ ಸಾರತರವಾದ ಮುತ್ತುಗಳನ್ನು ಆತನಿಗೆ ಶರಣಾಗತರಾಗಿ ಒಪ್ಪಿಸಿದುದು– ತಾವು ಗಳಿಸಿದ್ದ ಯಶಸ್ಸನ್ನೊಪ್ಪಿಸುವಂತಿದ್ದಿತು.

ಬಳಿಕ ಧೀರನಾದ ದೊರೆಯು– ಚಂದನತರುಗಳಿಂದ ತುಂಬಿ, ತೆಂಕಲದೆಸೆಗೆ ಅಲಂಕಾರವಾಗಿದ್ದ ಮಲಯ ದುರ್ದುರಗಳೆಂಬ ಬೆಟ್ಟಗಳಲ್ಲಿ ಸುಖವಾಗಿ ತಂಗಿಯಿದ್ದು, ಕಡಲಿಗೆ ಸ್ವಲ್ಪ ದೂರದಲ್ಲಿರುವ ಭೂಮಿಯ ಬೈಲನ್ನು ದಾಟಿದನು. ಪಡೆಯು ಪಡುವಣ ಅರಸರನ್ನು ಗೆಲ್ಲಬೇಕೆಂಬ ಹುರುಡಿನಿಂದ ಹರಡಿ ನಡೆಯುತ್ತಲಿದ್ದಿತು. ಮುನ್ನ ಪರಶುರಾಮನು – ಅಂಬನ್ನೆಸೆದು ಕಡಲನ್ನು ದೂರಸರಿಯುವಂತೆಸಗಿದ್ದರೂ, ಮರಳಿ ಸಹ್ಯಪರ್ವತದ ತಡಿಗೈದಿತೆಂಬಂತಿದ್ದಿತು. ದಂಡು ಮುತ್ತಿದೊಡನೆಯೇ ಕೇರಳ ದೇಶದರಸರು – ತಲೆತಪ್ಪಿಸಿಕೊಂಡು ಪಲಾಯನವಾದರು, ಅರಸಿತಿಯರು– ಅಂದವಾದ ಉಡಿಗೆತೊಡಿಗೆಗಳನ್ನೆಲ್ಲ ಕಳಚಿ ಬಿಟ್ಟರು, ಸೇನೆಯ ತುಳಿತದಿಂದೆದ್ದ ರಜವು–ಅವರ ಬೈತಲೆಯ ಬಳಿಯಣ ಹಣೆಗಳಲ್ಲಿ ಕುಂಕುಮಚೂರ್ಣದಂತೆ ಸಿಂಗರಿಸಿತು. ಅಲ್ಲಿಗೆ ಹತ್ತಿರದಲ್ಲಿ ಹರಿಯುತ್ತಲಿದ್ದ ಮುರಳಾನದಿಯ ಮೇಲಣ ತಂಗಾಳಿಯು – ಹೊಳೆಯ ಇಕ್ಕೆಲದ ಗೇದಗೆಗಳಮೇಲೆ ಬೀಸುತ್ತಲಿದ್ದಿತು. ಹೂಗಳಿಂದೆದ್ದ ರಜವು ಸೈನಿಕರ ಉಡಿಗೆಗಳಲ್ಲಿ ಬಿದ್ದು, ಉಜ್ಜುಗಿಸದೆಯೇ ಸಜ್ಜುಗೊಂಡ ಗಂದುಡಿಯಾಯಿತು. ಪಡೆಯು ವಾಜಿಗಳ ನಡಗೆಯಲ್ಲಿ ಜೀನು ಮೊದಲಾದವುಗಳಿಂದ ಹೇರಳವಾಗಿ ಮುರಮುರವೆಂಬ ಸದ್ದಾಗುತ್ತಲಿದ್ದಿತು. ಆಗ ಆ ಪ್ರಾಂತದ ತಾಳೆಯ ಮರಗಳಲ್ಲಿ ಗಾಳಿಯ ಹೊಡೆತದಿಂದುಂಟಾಗುತ್ತಲಿರುವ ಎಲೆಗಳ ಗಲಗಲ ಶಬ್ದವು ಕೇಳಬರಲೇ ಇಲ್ಲ. ಖರ್ಜೂರದ ಗಿಡಗಳ ತಾಳುಗಳಲ್ಲಿ ಮದವೇರಿದ ಆನೆಗಳನ್ನು ಕಟ್ಟಿದ್ದರು. ಅವುಗಳ ಕಪೋಲಗಳು ಮದಜಲದ ಹರಿತದಿಂದ ಸುವಾಸನೆಯಾಗಿದ್ದುವು.

ಇಕ್ಕೆಲಗಳಲ್ಲಿ ಬೆಳೆದಿದ್ದ ಸುರಹೊನ್ನೆಯ ಹೂಗಳನ್ನು ತೊರೆದು ದುಂಬಿಗಳು ಆನೆಗಳ ಗಲ್ಲಗಳಲ್ಲಿ ಬಂದಿಳಿದುವು. ಪಡುವಣ ಕಡಲತಡಿಯ ನಾಡುಗಳರಸರು ಕಾಳಗಕ್ಕೆಳಸದೆ ಕಾಣಿಕೆಗಳನ್ನೊಪ್ಪಿಸಿ ರಘುರಾಜನಿಗೆ ಅಡಿಯಾಳುಗಳಾದರು, ಹಿಂದೆ ಜಮದಗ್ನಿಕುಮಾರನು ತಪವಂಗೆಯ್ಯಲು ಬೇಡಿಕೊಂಡುದರಿಂದ ತಾವನ್ನು ಕೊಟ್ಟ ಕಡಲು – ಈಗ, ತಾನೂ ಒಬ್ಬ ಅರಸೆಂದು ಅಧೀನವಾಗಿ ಕಪ್ಪವನ್ನೊಪ್ಪಿಸುವಂತಿದ್ದಿತು.

ಆಗ – ರಘು ರಾಜನ ಪಡೆಯೊಳಿದ್ದ ಮದವೇರಿದ ಆನೆಗಳು – ಅಲ್ಲಿರುವ ತ್ರಿಕೂಟ ಪರ್ವತದ ದೊಡ್ಡ ಬಂಡೆಗಳನ್ನು ಕೊಂಬುಗಳಿಂದ ತಿವಿದು ಗೂಟಾಡಿದುವು. ಅಲ್ಲಲ್ಲಿ ಕಲ್ಲಿನ ಚಕ್ಕೆಗಳೆದ್ದು ಗುರುತಾಯಿತು. ಅದರಿಂದ ರಘುವು – ನಾನಾ ನಾಡುಗಳನ್ನು ಜಯಿಸಿದುದಕ್ಕೆ ತ್ರಿಕೂಟವನ್ನೇ ತನ್ನ ಪೌರುಷದ ಪರಿಯನ್ನು ಸೂಚಿಸುವ ವರ್ಣಾವಳಿಯನ್ನು ಕೆತ್ತಿಸಿದ ಎತ್ತರವಾದ ಜಯಸ್ತಂಭವನ್ನಾಗಿ ಎಸಗಿದನು.

ಆ ಬಳಿಕ ಯೋಗಿಯು – ತತ್ತ್ವಜ್ಞಾನದಿಂದ ಇಂದ್ರಿಯಗಳೆಂಬ ಹಗೆಗಳನ್ನು ಗೆಲ್ಲುವ ಹಾಗೆ, ರಘುವು ಪಾರಸೀ ದೇಶದ ಅರಸನನ್ನು ಜಯಿಸಬೇಕೆಂದು ಬಯಸಿದನು; ಆದರೆ, ಹಡಗಿನಿಂದ ಕಡಲಮೇಲಣ ಹಾದಿಯೇ ಹತ್ತಿರವಾಗಿ ತೋರಿದರೂ, ಅದನ್ನು ಬಿಟ್ಟು, ನೆಲದಮೇಲಣ ಹಾದಿಯಿಂದಲೇ ಹೊರಟನು. ರಘುವು ಯವನರಾಜರರಸಿಯರ ಮೊಗದಾವರೆಗಳಲ್ಲಿ ಮಧುಸೇವನೆಯಿಂದುಂಟಾಗಿದ್ದ ಮದರಾಗವನ್ನು, ಸಹಿಸದೆ ಹೋದುದು, ಅಕಾಲದಲ್ಲಿ ಮುಗಿಲೊಳಗೆ ಮೂಡಿದ ಮೋಡವು ತಾವರೆಗಳಿಗೆರಗುವ ಎಳೆಬಿಸಿಲನ್ನು ತಾಳಲಾರದಂತಿದ್ದಿತು. ಪಡುವಣ ನಾಡುಗಳ ಯವನರು – ಕುದುರೆಗಳ ಬಲವನ್ನೊಳಗೊಂಡು ರಘುವನ್ನಿದಿರಿಸಿದರು. ಇವರೊಡನೆ ನಡೆದ ದೊಂಬಿಯ ಕಾಳಗದ ಧೂಳಿಯಲ್ಲಿ ಕೊಂಬಿನ ಕೂಗಿನಿಂದಲೂ, ಬಿಲ್ಲಿನ ಟಂಕಾರದಿಂದಲೋ, ಇದಿರಾಳನ್ನು ಅರಿಯಬೇಕಾಗಿದ್ದಿತು, ರಘುವು ಯವನರ ಶಿರಗಳನ್ನೆಲ್ಲವನ್ನು ತರಿದು ಬವರದ ತಿರೆಯ ಮೇಲೆ ಹರಡಿ ಒಟ್ಟಿದನು. ರೋಮಗಳ ಬೆಳವಳಿಗೆಯಿಂದ ತುಂಬಿದ ಅವರ ತಲೆಬುರುಡೆಗಳು– ನೊಣಗಳಿಂದ ತುಂಬಿದ ಜೇನುಕೊಡಗಳಂತೆ ಕಾಣಬರುತ್ತಲಿದ್ದುವು. ಕಾಳಗದೊಳಗೆ ಕಳೆದುಳಿದ ಯವನರು – ತಲೆಪಾಗುಗಳನ್ನು ತೆಗೆದು ಅರಸನಿಗೆ ಮರೆಹೊಕ್ಕರು. ಮಹಾತ್ಮರ ಸಿಟ್ಟು ಇದಿರಾಳು ತಗ್ಗುವವರೆಗೆ ಮಾತ್ರವೇ ಇರತಕ್ಕುದು, ಅಥವಾ ಮಹನೀಯರ ರೋಷಕ್ಕೆ ಇದಿರಾಳು ತಗ್ಗೋಣವೇ ಮುಯ್ಯಲ್ಲವೆ?

ತರುವಾಯ ದ್ರಾಕ್ಷೆಯ ಚಪ್ಪರಗಳ ಅಡಿಯಲ್ಲಿ ಕೃಷ್ಣಾಜಿನಗಳನ್ನು ಹರಡಿ ಕುಳಿತು, ದ್ರಾಕ್ಷಾರಸಗಳನ್ನು ಪಾನಮಾಡಿ, ತಣಿದು, ರಘುಸೈನಿಕರು ಕಾಳಗದ ಬಳಲಿಕೆಯನ್ನು ಕಳೆದರು.

ಬಳಿಕ – ಬೆಂಗದಿರನು ಬಡಗಣದೆಸೆಗೆ ಬಂದಾಗ ತನ್ನ ತೇಜದಿಂದ ನೆಲದಲ್ಲಿನ ನೀರನ್ನು ಹೀರುವ ಹಾಗೆ, ತನ್ನ ಅಂಬುಗಳಿಂದ ಹಗೆಗಳ ಉಸಿರನ್ನು ಸೆಳೆಯಲು ರಘುವು–ಕುಬೇರನಾಶೆಗೆ ತಿರುಗಿ, ಸಿಂಧುನದಿಯ ತಡಿಗೆ ಬಂದು, ಕುಂಕುಮಕೇಸರದ ತೋಟದಲ್ಲಿ ತಂಗಿದನು, ದಳದ ಹಯಗಳು ನೆಲದಲ್ಲಿ ಉರುಳಾಡಿ ಕೇಸರದಿಂದ ತುಂಬಿದ ಹೆಗ್ಗತ್ತುಗಳನ್ನು ಒದರಿ ಮಾರ್ಗಾಯಾಸವನ್ನು ಪರಿಹರಿಸಿಕೊಂಡುವು. ಆಮೇಲೆ–ರಘುರಾಜನು ಹೂಣದೊರೆಗಳಲ್ಲಿ ತೋರಿದ ಹೇರಳವಾದ ಪೌರುಷವು – ಅವರ ಹೆಂಡಿರುಗಳ ಕೆನ್ನೆಗಳಲ್ಲಿನ ಕೆಂಪುಬಣ್ಣಕ್ಕೆ ಗುರುವಾಯಿತು. ಕಾಂಭೋಜ ದೇಶದ ಅರಸರು – ಸಮರದಲ್ಲಿ ರಘುವಿನ ಶೌರ್ಯವನ್ನು ತಾಳಲಾರದೆ ತಮ್ಮ ಆನೆಗಳನ್ನು ಬಿಗಿದಿದ್ದ ಅಂಕೋಲೆಯ ಗಿಡಗಳೊಂದಿಗೆ ತಾವೂ ಶಿರಬಾಗಿದರು.

ಆ ಹಿಂದೆ – ಮುಕ್ಕಣ್ಣನರಸಿಗೆ ತವರುಮನೆಯಾದ ಹಿಮಗಿರಿಯನ್ನು ವಾಜಿಗಳ ಊಡಿನಿಂದ ಏರಿದನು. ತೇಜಿಗಳ ತುಳಿತದಿಂದೆದ್ದ ರಜದಿಂದ ಬೆಟ್ಟದ ಕೋಡನ್ನು ಬೆಳೆಸುವನೆಂಬಂತೆ ಕಂಗೊಳಿಸಿದನು. ಧರಾಧರವನ್ನೇರುವಾಗ ದಳದ ಕೋಲಾಹಲವು ಬಲವಾಗಿದ್ದರೂ, ಗವಿಗಳೊಳಗೆ ಅಲುಗದೆ ಮಲಗಿದ್ದ ಸಿಂಗಗಳು ಶಿರಗಳನ್ನು ತಿರುಹಿ ನೋಡಿದ ಕುಡಿನೋಟವು – ಸಮಬಲವನ್ನು ಸೂಚಿಸುತ್ತಲಿದ್ದಿತು. ಆಗ– ಭುಜಪತ್ರೆಯು ಗಿಡಗಳಲ್ಲಿ ಮುರಮುರವೆಂಬ ಸದ್ದನ್ನುಂಟುಮಾಡುತ್ತಾ ಬಿದಿರುಮೆಳೆಗಳಲ್ಲಿ ಒಳಹೊಕ್ಕು ಕೊಳಲದನಿಯನ್ನು ಕಲ್ಪಿಸಿ, ಬಿಡುಗಣ್ಣರ ಪನಲ ಪನಿಯನ್ನಾಂತು ಹರಿದುಬರುವ ಮೆಲ್ಲೆಲರು – ಮಾರಾಯನಿಗೆ ಹಾಯಾಗಿದ್ದಿತು, ಮತ್ತು – ಆ ಪ್ರಾಂತದ ದೇವಹೊನ್ನೆಯ ಮರಗಳ ನೆಳಲುಗಳಲ್ಲಿನ ಬಂಡೆಗಳಮೇಲೆ ಕತ್ತುರಿಯ ಮಿಕಗಳು ಬಿದ್ದುಗೊಂಡು ನಿದ್ದೆಗೈದಿದ್ದುವು. ಆ ಶಿಲೆಗಳು– ಹೊಕ್ಕಳ ಸೋಂಕಿನಿಂದ ಸುವಾಸನೆಗಳಾಗಿದ್ದುವು. ಅಲ್ಲಿಯೇ ರಘುಸೈನಿಕರು ಬಳಲಿಕೆಯನ್ನು ಕಳೆದರು; ಅಂದಿನ ಇರುಳಿನಲ್ಲಿ ಅಂಕೋಲೆ ಗಿಡಗಳಿಗೆ ಕಟ್ಟಿದ್ದ ಆನೆಗಳ ಕೊರಳಿನ ಬಂಗಾರದ ಸರಪಣಿಗಳಲ್ಲಿ, ಆ ನೆಲದಲ್ಲಿ ಬೆಳೆದ ಬಳ್ಳಿಗಳು ಹೊಳೆದು, ದಳದಾಳುಗಳಿಗೆ ಆ ಇರುಳಿನಲ್ಲಿ ಎಣ್ಣೆಯಿಲ್ಲದ ದೀವಿಗೆಗಳಾದುವು. ಮಾರನೆಯ ದಿನ ಅರಸು– ಅಲ್ಲಿಂದ ಮುಂದಕ್ಕೆ ಪಯಣವನ್ನು ಬೆಳೆಸಿದನು. ಅಂದು ಆ ಅಟವಿಗೆ ಬಂದ ಬೇಟೆಗಾರರಿಗೆ ಆನೆಗಳ ಕಟ್ಟುಗಳಿಗೊಳಗಾಗಿದ್ದು ತಿಗಡೆದ್ದಿದ್ದ ಅಂಕೋಲೆ ಗಿಡಗಳು– ದಳದಾನೆಗಳ ಮಟ್ಟದಳತೆಯನ್ನು ತಿಳಿಸಿದುವು. ಹಿಮಗಿರಿಯಲ್ಲಿನ ಉತ್ಸವರೆಂಬ ಗಣದವರೊಡನೆ ರಘುವಿಗೆ ಘೋರವಾದ ಬವರವು ಬೆಳೆಯಿತು, ಗಣದವರಿಡುವ ಕವಣೆಗಲ್ಲುಗಳೂ, ದಳಪತಿಗಳೆಸೆವ ಅಂಬಿನಲಗುಗಳೂ ಒಂದಕ್ಕೊಂದು ತಗಲಿ ಬೆಂಕಿಯ ಕಿಡಿಗಳುದುರುತ್ತಿದ್ದವು, ರಘುವು ತನ್ನ ಶೌರ್ಯದಿಂದ ಉತ್ಸವರ ಉತ್ಸಾಹವನ್ನೆಲ್ಲ ಅಡಗಿಸಿದನು, ಕಿನ್ನರರು ಅರಸಿನ ತೋಳುಬಲವನ್ನು ಹಾಡಿ ಕೊಂಡಾಡಿದರು.

ಬಳಿಕ – ಉತ್ಸವರೆಂಬ ಪರ್ವತೀಯರು – ಕಾಣಿಕೆಗಳನ್ನು ಕಯ್ಯಲ್ಲಿ ಹಿಡಿದರು. ಆಗ– ಹಿಮಗಿರಿಯ ಸಾರವು ರಘುರಾಜನಿಗೂ, ಅರಸಿನ ಸಾರವು ಹಿಮಗಿರಿಗೂ ಗೊತ್ತಾಯಿತು. ತರುವಾಯ– ರಘುವು ಹಿಮಾದ್ರಿಯಲ್ಲಿ ತನ್ನ ಯಶೋರಾಶಿಯನ್ನು ನೆಲೆಗೊಳಿಸಿ, ದಶಗಳನೆತ್ತಿದುದರಿಂದ ಮೊದಲೇ ಪರಾಜಯವನ್ನು ಪಡೆದ ಕೈಲಾಸಕ್ಕೆ ಲಜ್ಜೆಯನ್ನುಂಟುಮಾಡುವವನಂತೆ ಅಲ್ಲಿಗೆ ತೆರಳದೆ ಹಿಂದಿರುಗಿದನು, ಮತ್ತು ಲೌಹಿತ್ಯವೆಂಬ ನದಿಯನ್ನು ದಾಟಿ, ಕಾಮರೂಪ ದೇಶಗಳೊಳವೊಕ್ಕನು. ಕಾಮರೂಪೇಶ್ವರನು – ಮೊದಲೇ ರಘುಪ್ರತಾಪವನ್ನು ಕೇಳಿದ್ದನು, ಹತ್ತಿರಕ್ಕೆ ಬಂದುದನ್ನು ಕೇಳಿ ಹೆದರಿ, ದಳದ ದ್ವಿರದಗಳ ಕಟ್ಟಿಗಾಸರೆಯಾದ ಕಾಲಾಗುರು ತರುಗಳಂತೆ ನಡುಗಿದನು ಸೋನೆಗರೆಯದಿದ್ದರೂ ದಂಡಿನ ತುಳಿತದಿಂದೆದ್ದ ರಜದಿಂದ ರವಿಯು ಕಾಣಬರದೆ ದುರ್ದಿನವಾಯಿತು, ಧೂಳಿ ದರ್ಶನವನ್ನು ತಾಳಲಾರದ ಅರಸು ದಾಳಿಯನ್ನು ತಾಳಬಲ್ಲನೆ? ತರುವಾಯ – ಕಾಮರೂಪರಾಜನು – ರಘುವನ್ನು ಹೊರತು ಉಳಿದರಸರನ್ನೆಲ್ಲ ತನ್ನ ಆನೆಯ ಬಲದಿಂದಲೇ ಗೆದ್ದಿದ್ದನು. ಈಗ–ಅವುಗಳನ್ನೆಲ್ಲ ಇಂದ್ರನಿಗಿಮ್ಮಡಿಯಾದ ಶೌರ್ಯವುಳ್ಳ ರಘುವಿಗೊಪ್ಪಿಸಿ ಶರಣು ಹೊಂದಿದನು. ಮತ್ತು – ರಘುವಿನಡಿದಾವರೆಗಳನ್ನು ಚಿನ್ನದ ಮಣೆಯ ಮೇಲೆ ಕುಳ್ಳಿರಿಸಿ, ದೇವತೆಯಂತೆ ಭಾವಿಸಿ, ರತ್ನಗಳಿಂದ ಪೂಜಿಸಿ, ಆತನನ್ನು ಗೌರವಿಸಿದನು.

ಹೀಗೆ – ಜಯಶೀಲನಾದ ರಘುಮಹಾರಾಜನು ತನ್ನಿದಿರಿಗೆ ಕೊಡೆಯನ್ನು ಹಿಡಿಯದಂತಾದ ಹಗೆಯರಸರ ಶಿರಗಳ ಮೇಲೆ, ತೇರಿನ ರಜವನ್ನೇರಿಸಿ, ಸಕಲ ದಿಗ್ವಿಜಯಮಂಗೈದು, ತನ್ನ ದೇಶದ ಕಡೆಗೆ ತಿರುಗಿದನು.

ತದನಂತರದಲ್ಲಿ ಪುರವನ್ನು ಸೇರಿದ ರಘು ಭೂಪಾಲನು – ಸರ್ವಸ್ವವನ್ನೂ ದಕ್ಷಿಣೆಯನ್ನಾಗಿ ಒಳಗೊಂಬ ಸರ್ವಜಿತ್ತೆಂಬ ಯಾಗವನ್ನು ಮಾಡಲು ಬಲು ಸಡಗರದಿಂದ ಕೈಗೊಂಡನು, ವಾರಿದಗಳಂತೆ ಸಂತರು ಪಡೆವುದೆಲ್ಲ ಕೊಡುವುದಕ್ಕೇ ಅಲ್ಲವೆ?

ಇಂತು – ರಘುವರನು ಸತ್ರವನ್ನು ಶ್ರದ್ಧೆಯಿಂದ ಸಮಗೊಳಿಸಿ, ಶುಭಸ್ನಾನಮಂಗೈದು, ಸಂದಣಿಸಿದ್ದ ಸರ್ವೋರ್ವೀಶರಿಗೂ ಸಕಲಸತ್ಕಾರಗಳನ್ನೂ ಸಚಿವರ ಸಹಾಯದಿಂದ ಸಂತೋಷಪೂರ್ವಕವಾಗಿ ಸಮರ್ಪಿಸಿ ಸಂತಸಗೊಳಿಸಿದನು. ಇದರಿಂದ ಯಾಗಕ್ಕೈತಂದಿದ್ದ ಪರರಾಯರೆಲ್ಲ ಕಾಳಗದಲ್ಲಿ ಕೀಳಾಗಿ ಪರಾಜಯವನ್ನು ಪಡೆದೆನೆಂದು ಮನದೊಳುಂಟಾಗಿದ್ದ ಕಳವಳವನ್ನೆಲ್ಲ ಕಳೆದು ಹರ್ಷಪರವಶರಾದರು. ಇಂತು ಕಾಕುತ್ಸ್ಥನು –ಬಹು ದಿವಸಗಳಿಂದ ಅಂತಃಪುರಗಳನ್ನು ಅಗಲಿ ಬಂದಿದ್ದ

ಅರಸರನ್ನೆಲ್ಲ ತಂತಮ್ಮ ಪುರಗಳನ್ನು ಕುರಿತು ತೆರಳಲು ಸಮ್ಮತಿಸಿದನು. ಬಳಿಕ – ಪಯಣಕಣಿಯಾಗುತ್ತಲಿರುವ ಇಳೆಯಾಣ್ಮರೆಲ್ಲ ಛತ್ರಧ್ವಜಚಾಮರಗಳ ರೇಖೆಗಳಿಂದೊಡಗೂಡಿ, ಆತನ ಅನುಗ್ರಹದಿಂದಲೇ ಲಭಿಸತಕ್ಕುದಾಗಿರುವ ರಘುಸಾರ್ವಭೌಮನ ಅಡಿದಾವರೆಗಳಿಗೆ ಎರಗಿ ಹೊರಟರು, ಬಾಗಿದ ಶಿರಗಳಿಂದುದಿರಿದ ಪುಷ್ಪ ರಜಗಳಿಂದ ಪೊಡವಿಯೊಡೆಯನ ಪಾದಪದ್ಮಗಳು ಹಲತೆರನಾದ ಬಣ್ಣಗಳನ್ನು ತಾಳುತ್ತಲಿದ್ದುವು.

****

ಐದನೆಯ ಅಧ್ಯಾಯ

ಅಜಸ್ವಯಂವರಾಭಿಗಮನ

ಸೂಚನೆ ॥ ಗುರುಧನವ ಬೇಡೆ ಕೌತ್ಸಂ ।
ಗುರುತರಧನ ದಾನಗೈದು ರಘುವರ್ಚಿಸಿದಂ
ಗುರುವರದುದಿಸಿದನಜನುಂ ।
ಗುರುಗುಣದಿಂ ಮೆರೆದು ಭೋಜನಗರಿಗೆ ಸಾರ್ದಂ ।

ವರತಂತುವೆಂಬ ಮಹರ್ಷಿಯೋರ್ವನುಂಟು. ಕೌತ್ಸನೆಂಬ ವಿದ್ಯಾರ್ಥಿಯು ಆತನ ಬಳಿಯಲ್ಲಿ ಸಕಲ ವಿದ್ಯೆಗಳನ್ನೂ ಸಾಂಗವಾಗಿ ಕಲಿತನು. ಗುರುದಕ್ಷಿಣೆ ಕೊಡಬೇಕಾಗಿ ಬಂದಿತು. ದಕ್ಷಿಣಾದ್ರವ್ಯವನ್ನು ಸಂಪಾದಿಸಲು ರಘುಭೂಪಾಲನ ಬಳಿಗೆ ಬಂದನು, ಅದುವರೆಗೆ ವಸುಮತೀಶನು ಸರ್ವಜಿತ್ತೆಂಬ ಯಾಗವನ್ನಾಚರಿಸಿ, ಬೊಕ್ಕಸವು ಬರಿದಾಗುವಂತೆ ಸರ್ವಸ್ವವನ್ನೂ ದಕ್ಷಿಣೆಗೆ ವೆಚ್ಚಮಾಡಿ ಬರಿಗಯ್ಯವನಾಗಿದ್ದನು. ಲೋಕದಲ್ಲೆಲ್ಲ ಹರಡಿಕೊಂಡಿರತಕ್ಕ ಒಳ್ಳೆಯ ಹೆಸರುವಾಸಿಯನ್ನು ಪಡೆದಿರುವ ಒಳ್ನಡೆಯ ಪೊಡವಿಯೊಡೆಯನು– ಅತಿಥಿಗಳನ್ನು ಸತ್ಕರಿಸುವುದರಲ್ಲಿ ಬಹು ಸಮರ್ಥನು, ಶಾಸ್ತ್ರಜ್ಞಾನದಿಂದ ಬೆಳಗುತ್ತಲಿರುವ ಕೌತ್ಸ ಮುನಿಕುಮಾರನು ಅತಿಥಿಯಾಗಿ ಬಂದಿರುವನೆಂಬ ಸುದ್ದಿಯು ದ್ವಾರಪಾಲಕನಿಂದ ತಿಳಿಯಿತು. ಉಚಿತರೀತಿಯಿಂದ ಇದಿರ್ಗೊಳ್ಳಲು ರಾಜಾರ್ಹವಾದ ಚಿನ್ನದ ಪಾತ್ರೆಯೊಂದೂ ಇರಲಿಲ್ಲ. ಮಣ್ಣಿನ ತಟ್ಟೆಬಟ್ಟಲುಗಳಲ್ಲಿಯೇ ಪೂಜೆಗೆ ಬೇಕಾದ ಪದಾರ್ಥಗಳನ್ನೆಲ್ಲ ಅಣಿಮಾಡಿಕೊಂಡು ಹೊರಟನು. ಶಾಸ್ತ್ರಗಳನ್ನೆಲ್ಲ ಚೆನ್ನಾಗಿ ಅರಿತು, ಮಾನಧನರೊಳಗೆ ಮೊದಲನೆಯವನೆನಿಸಿ, ಕಾರ್ಯಗೌರವದ ಸಂದರ್ಭಗಳನ್ನು ಬಲ್ಲವನಾಗಿರುವ ನರನಾಥನು ಉಚಿತಸ್ಥಾನದಲ್ಲಿ ತಪೋಧನನನ್ನು ಇದಿರ್ಗೊಂಡು, ಪೀಠವನ್ನಿತ್ತು, ವಿಧಿಪ್ರಕಾರ ಸತ್ಕರಿಸಿ, ಕೈಜೋಡಿಸಿಕೊಂಡು, ಆತನ ಬಳಿಯೊಳು ನಿಂತು ಇಂತೆಂದನು–

ದರ್ಭೆಯ ತುದಿಯಂತೆ ಮೊನೆಯಾದ ಮತಿಯುಳ್ಳ ಎಲೈ ಮುನಿಯೇ! ಮಂತ್ರಕರ್ತರಾದ ಮಹರ್ಷಿಗಳೊಳಗೆ ಅಗ್ರಗಣ್ಯನೆನಿಸಿದ ನಿನ್ನಯ ಗುರುವು ಕುಶಲದಿಂದಿರುವನೆ? ದಿನನಾಥನಿಂದ ಜನವು ಎಚ್ಚರವನ್ನು ಪಡೆವಂತೆ, ಆತನಿಂದಲೇ

ಅಲ್ಲವೆ ನೀನು ಶಾಸ್ತ್ರಜ್ಞಾನವನ್ನು ಸಂಪಾದಿಸಿದುದು? ಮೈ, ಮಾತು, ಮನ ಎಂಬೀ ಮೂರು ಕರಣಗಳಿಂದ ಆತನು ಗಳಿಸುತ್ತಲಿರುವ ತಪವು – ತನಗೆಲ್ಲಿ ತಾವು ತಪ್ಪುವುದೋ ಎಂದು ಇಂದ್ರನನ್ನೂ ಅಳುಕಿಸತಕ್ಕದು. ಅಂತಹ ತಪಸ್ಸು ಆವುದೊಂದು ಅಡ್ಡಿವಿಡ್ಡೂರದಿಂದಲೂ ಕುಂದದಿರುವುದೆ? ಪಾದೆಗಟ್ಟುವುದು, ಹದವರಿತು ನೀರ ಬಿಡುವುದು, ಸೆಬ್ಬೆಯರಿತು ಗೊಬ್ಬರವಿಡುವುದು ಎಂಬಿವೇ ಮೊದಲಾದ ಬೇಸಾಯಗಳಿಂದ ಹಸುಳೆಗಳನ್ನು ಹೇಗೋ ಹಾಗೆ ಕಾಪಾಡಿದ ನಿಮ್ಮ ತಪೋವನ ತರುಗಳು – ಬಳಲಿಕೆಗಳನ್ನು ಕಳೆಯತಕ್ಕವುಗಳೆನಿಸಿ, ಬಿರುಗಾಳಿ ಮೊದಲಾದವುಗಳಿಂದ ನೋವನ್ನು ಪಡೆಯದಿವೆಯೆ? ಸತ್ಕರ್ಮಾಚರಣೆಗೆ ಬೇಕಾದವುಗಳೆಂದು ಅಕ್ಕರೆಯಿಂದ ಬೆಳೆಯಿಸಿಕೊಂಡಿರುವ ದರ್ಭೆಹುಲ್ಲುಗಳನ್ನು ಮೆಯ್ದರೂ, ಮಮತೆಯಿಂದ ಮುನಿಗಳ ಅಡ್ಡಿಯನ್ನು ಪಡೆಯದಿರುವ ಹುಲ್ಲೆಗಳ ಮರಿಗಳು ತಾನಾಗಿ ಹೊಕ್ಕಳು ಬೀಳುವವರೆಗೂ ತಪಸ್ವಿಗಳ ತೊಡೆಗಳ ಮೇಲೆಯೇ ಬೆಳೆಯುತ್ತಾ ಆವುದೊಂದು ಅಪಾಯವೂ ಇಲ್ಲದೆ ಸುಖದಿಂದಿರುವುವೆ? ನೇಮದ ಸ್ನಾನಗಳೀಡೇರಲು ಊಡಾಗಿ, ಪಿತೃಗಳಿಗೆ ಕೊಡತಕ್ಕ ತರ್ಪಣಗಳಿಗೆ ಆಸರೆಯೆನಿಸಿ, ಹಕ್ಕಲಾಯ್ದು ತಂದ ಕಾಳುಕಡಿಗಳಲ್ಲಿ ಅರಸಿಗೆ ಕೊಡತಕ್ಕ ಕಂದಾಯವೆಂದು ತೆಗೆದಿಡುವ ಆರನೆಯ ಒಂದು ಪಾಲಿಗೆ ತಮ್ಮ ತಡಿಯ ಬೈಲಿನಲ್ಲಿ ಎಡೆಗೊಟ್ಟಿರುವ ನಿಮ್ಮ ತೀರ್ಥೋದಕಗಳು ಆವುದೊಂದು ತೊಂದರೆಗೂ ಒಳಗಾಗದಿರುವುವೆ? ಮಧ್ಯಾಹ್ನಾದಿ ಕಾಲಗಳಲ್ಲಿ ಬರುವ ಅತಿಥಿಗಳ ಸತ್ಕಾರಕ್ಕೆ ತಕ್ಕ ಭಾಗಗಳನ್ನೊಳಗೊಂಡು, ನಿಮ್ಮ ಪ್ರಾಣಧಾರಣೆಗೂ ಅನುಕೂಲಗಳೆನಿಸಿ, ಕಾಡಿನಲ್ಲಿ ಬೆಳೆಯತಕ್ಕವುಗಳಾಗಿರುವ ಯವೆ, ಸಾವೆ ಮೊದಲಾದ ಕಾಳುಕಡ್ಡಿಗಳನ್ನು ನಾಡುಗಳಿಂದ ಓಡಿಬಂದ ತೊಂಡುದನಗಳು ತಿಂದುಹೋಗುವುದಿಲ್ಲವಷ್ಟೆ? ನಿನ್ನನ್ನು ಅಕ್ಕರೆಯಿಂದ ಚೆನ್ನಾಗಿ ಶಿಕ್ಷಿಸಿದ ಮಹಾಮುನಿಯು – ಗೃಹಸ್ಥಾಶ್ರಮವನ್ನು ಪಡೆಯುವಂತೆ ನಗೆಮೊಗದಿಂದ ಒಪ್ಪಿ, ನಿನಗೆ ಅಪ್ಪಣೆಯನ್ನಿತ್ತನೆ? ಉಳಿದ ಆಶ್ರಮದವರಿಗೆಲ್ಲ ಉಚಿತವರಿತು ಉಪಕರಿಸಲು ಎರಡನೆಯ ಆಶ್ರಮವನ್ನು ಸ್ವೀಕರಿಸಲಿಕ್ಕೆ ನಿನಗೆ ಇದು – ಒಳ್ಳೆಯ ಸಮಯವಾಗಿದೆಯಲ್ಲವೆ? ಎಲೈ ಮುನಿಯೆ! ಪೂಜ್ಯನಾದ ನಿನ್ನ ಆಗಮನ ಮಾತ್ರದಿಂದ ನನ್ನ ಮನವು ತಣಿಯಲಿಲ್ಲ. ಮುಂದೆ ನಿನ್ನ ಅಪ್ಪಣೆಯನ್ನರಿತು ಅದರಂತೆ ನಡೆಸಲು ತವಕಿಸುತ್ತಲಿದೆ. ಗುರುಪ್ರಯೋಜನಕ್ಕೋಸ್ಕರ ತಪೋವನದಿಂದ ಬಂದೆಯ? ಅಥವಾ ಸ್ವಾರ್ಥಪರನಾಗಿ ನನ್ನನ್ನು ನೋಡಲಿಕ್ಕೆ ಬಂದಿರುವೆಯ? ಎಂದಿಂತು ಮಹಾರಾಜನು ಮುನಿಗೆ ಸುಖಾಗಮನವನ್ನು ಬಯಸಿ ಕುಶಲಪ್ರಶ್ನೆಯನ್ನು ಗೈದನು.

ವರತಂತು ಮುನಿಯ ಶಿಷ್ಯನಾದ ಕೌತ್ಸನು – ತನ್ನನ್ನು ಇದಿರ್ಗೊಳ್ಳಲು ತಂದಿರುವ ಪಾತ್ರೆಗಳಿಂದಲೇ ರಘುವಿನ ಆಸ್ತಿಯೆಲ್ಲ ವೆಚ್ಚವಾಗಿ ಹೋಗಿದೆಯೆಂಬುದನ್ನು

ತಿಳಿದುಕೊಂಡನು. ಅವನ ಬಲು ಕೊಡುಗಯ್ಯ ಮಾತನ್ನೂ ಕೇಳಿದನು. ತನ್ನ ಕೋರಿಕೆಯು ಈಡೇರುವುದೆಂಬ ಆಶೆಯು ಬಲಗುಂದಿತು. ಆದರೂ ಆತನನ್ನು ಕುರಿತು ಮಾತನಾಡತೊಡಗಿದನು–

ಎಲೈ ಮಹಾರಾಜನೆ! ನಾವು ಎಲ್ಲ ಭಾಗಗಳಲ್ಲಿಯೂ ನೆಮ್ಮದಿಯಾಗಿ ಇದ್ದೇವೆ ಎಂದು ತಿಳಿ. ನೀನು ಸರ್ವರಿಗೂ ನಾಥನಾಗಿರುವಲ್ಲಿ ಪ್ರಜೆಗಳಿಗೆ ಕೊರತೆಯುಂಟಾಗಲು ಕಾರಣವೇನು? ಭಾಸ್ಕರನು ಬೆಳಗುತ್ತಲಿರುವಲ್ಲಿ ಕತ್ತಲು ಕಣ್ಣಿನ ನೋಟಕ್ಕೆ ಅಡ್ಡಿಯಾಗುವುದೆಂತು? ಪೂಜ್ಯರೆನಿಸಿದವರಲ್ಲಿ ಇಂತು ಭಕ್ತಿಯನ್ನು ತೋರುವುದು ನಿನ್ನ ವಂಶಕ್ರಮದಿಂದ ಬಂದಿರುವ ಒಳ್ಳೆಯ ಪದ್ಧತಿಯಾಗಿದೆ. ಎಲೈ ಪುಣ್ಯಾತ್ಮನೇ! ಒಳ್ಳೆಯ ಸಂಪ್ರದಾಯದಲ್ಲಿ ನಿನ್ನ ಹಿರಿಯರನ್ನು ಮೀರುತ್ತಲಿದ್ದೀಯೆ, ಉಚಿತವಾದ ಕಾಲವು ಕಳೆದುಹೋದ ಬಳಿಕ ಯಾಚನೆಗಾಗಿ ನನ್ನನ್ನು ಇದಿರ್ಗೊಳ್ಳಲು ಬಂದೆನಲ್ಲಾ ಎಂದು ನನ್ನ ಮನಸ್ಸಿಗೆ ಬಲು ಕೊರತೆಯುಂಟಾಗಿದೆ. ಎಲೈ ಭೂದೇವೇಂದ್ರನೇ! ಅರಣ್ಯವಾಸಿಗಳಾದ ತಾಪಸರು – ತೆನೆಯನ್ನೆಲ್ಲ ತೆಗೆದುಕೊಂಡ ಬಳಿಕ ದಂಟಿನಿಂದ ಮಾತ್ರವೇ ನಿಂತಿರುವ ಪೈರಿನ ಹಾಗೆ, ಸತ್ಪಾತ್ರಗಳಲ್ಲಿ ಸಂಪದಗಳನ್ನೆಲ್ಲ ವಿನಿಯೋಗಿಸಿದ ನೀನು ಶರೀರ ಮಾತ್ರದಿಂದ ಉಳಿದು ಬೆಳಗುತ್ತಲಿದ್ದೀಯೆ, ಆದರೂ ಚಿಂತೆಯಿಲ್ಲ, ನೀನು ಇದಿರಾಳಿಲ್ಲದ ಅರಸನೆನಿಸಿ, ಯಾಗದಲ್ಲಿ ನಡೆಸಿದ ಭೂರಿದಾನದಿಂದುಂಟಾಗಿರುವ ಹೆಚ್ಚಿದ ಬಡತನವನ್ನು ವ್ಯಕ್ತಪಡಿಸುವುದು ಬಹು ಶ್ಲಾಘ್ಯವಾಗಿದೆ. ಕೃಷ್ಣಪಕ್ಷದ ಪಾಡ್ಯ ಮೊದಲ್ಗೊಂಡು ದಿನಕ್ರಮದಲ್ಲಿ ದೇವತೆಗಳು ಪಾನಮಾಡುವುದರಿಂದ ಚಂದಿರನ ಕಳೆಗಳ (ಕೊರತೆಯು) ತಗ್ಗಲು, ಮುಂದಿನ (ಏಳಿಗೆಗಾಗಿ) ಹೊರವಿಗಾಗಿ ಶ್ಲಾಘ್ಯತರವೆನಿಸುವುದಿಲ್ಲವೆ? ಆದಕಾರಣ ಬೇರೊಂದು ಕೆಲಸವಿಲ್ಲದ ಈ ನಾನು ಮತ್ತೊಬ್ಬ ದಾತನಿಂದ ಗುರುಧನವನ್ನು ಸಂಪಾದಿಸಲು ಪ್ರಯತ್ನಿಸುವೆನು. ನಿನಗೆ ಶುಭವಾಗಲಿ! ಹೊರಡುತ್ತೇನೆ. ಚಾತಕಪಕ್ಷಿಯೂ – ನೀರು ತುಂಬಿಲ್ಲದ ಶರತ್ಕಾಲದ ಮೋಡವನ್ನು ಬೇಡುವುದಿಲ್ಲವಷ್ಟೆ? ಎಂದಿಷ್ಟನ್ನು ಹೇಳಿ, ಬಂದ ದಾರಿಯನ್ನು ಹಿಡಿಯಲಿಕ್ಕೆ ಹೊರಟು ಮಹರ್ಷಿ ಶಿಷ್ಯನನ್ನು ಮಹೀಪತಿಯು – ತಡೆದು, ಎಲೈ ಪ್ರಾಜ್ಞನೇ! ಗುರುವಿಗೆ ನೀನು ಕೊಡಬೇಕಾಗಿರುವ ವಸ್ತುವಾವುದು? ಮತ್ತು ಎಷ್ಟು ಕೊಡಬೇಕಾಗಿದೆ? ಎಂದಾತನನ್ನು ಬೆಸಗೊಂಡನು.

ಬಳಿಕ – ವರ್ಣಗಳಿಗೂ, ಆಶ್ರಮಗಳಿಗೂ ನಿಯಾಮಕನೆನಿಸಿ, ವಿಧಿಪ್ರಕಾರ ಯಾಗವನ್ನಾಚರಿಸಿ, ಹೆಮ್ಮೆಯಿಲ್ಲದೆ ತಗ್ಗಿರುವ ಆ ಧರಾನಾಥನಿಗೆ, ಬಲು ಜಾಣನಾದ ಕೌತ್ಸ ಬ್ರಹ್ಮಚಾರಿಯು ಪ್ರಕೃತಕಾರ್ಯವನ್ನು ಹೇಳತೊಡಗಿದನು –

ಎಲೈ ಕ್ಷಮಾನಾಥನೇ! ಲಾಲಿಸು – ಗುರುವಿನ ಬಳಿಯಲ್ಲಿ ಸಾಂಗವಾಗಿ ವಿದ್ಯೆಗಳನ್ನೆಲ್ಲ ಕಲಿತೆನು, ಬಳಿಕ – ಗುರುವೇ! ಗುರುದಕ್ಷಿಣೆಯನ್ನು ಸ್ವೀಕರಿಸಬೇಕು ಎಂದು ಬಿನ್ನವಿಸಿದೆನು. ಅದಕ್ಕೆ ಆತನು ಬಹುಕಾಲದಿಂದ ನಾನು ಕಷ್ಟಪಟ್ಟು ತಪ್ಪದಾಚರಿಸಿದ ಸೇವೆಯನ್ನೇ ಮುಂದುಮಾಡಿಕೊಂಡು "ನಿನ್ನ ಅಸಾಧಾರಣವಾದ ಭಕ್ತಿಯಿಂದಲೇ ನಾನು ಸಂತುಷ್ಟನಾಗಿದ್ದೇನೆ, ಇನ್ನು – ಬೇರೆ ದಕ್ಷಿಣೆಯೇಕೆ? ಎಂದನು ; ಅಲ್ಲಿಗೆ ನಾನು ಸುಮ್ಮನಾಗಲಿಲ್ಲ. ಅಡಿಗಡಿಗೂ ದಕ್ಷಿಣೆಯ ಸ್ವೀಕಾರಕ್ಕೆ ಬಲಾತ್ಕರಿಸಿದೆನು, ಇದರಿಂದ ಗುರುವಿಗೆ ಸಿಟ್ಟು ಹತ್ತಿತು, ಧನದ ವಿಷಯದಲ್ಲಿ ನನ್ನ ಬಡತನವನ್ನು ಗಣಿಸಲಿಲ್ಲ, ತರುವಾಯ – " ನೀನು ನನ್ನಲ್ಲಿ ಕಲಿತಿರುವುದು ಹದಿನಾಲ್ಕು ವಿದ್ಯೆಗಳು, ಆದಕಾರಣ ವಿದ್ಯೆಗಳ ಲೆಕ್ಕವನ್ನನುಸರಿಸಿ ಹದಿನಾಲ್ಕು ಕೋಟಿ ದ್ರವ್ಯವನ್ನು ದಕ್ಷಿಣೆಯನ್ನಾಗಿ ನನಗೆ ತಂದುಕೊಡು" ಎಂದನು. ನಾನಾದರೋ ಇಂತಹ ಕಟ್ಟೆಗೆ ಸಿಲುಕಿದ್ದೇನೆ. ಪ್ರಭುಶಬ್ದವೊಂದೇ ನಿನಗೆ ಉಳಿದಿದೆ ಎಂಬುದನ್ನು ಪೂಜಾಪಾತ್ರೆಯಿಂದ ತಿಳಿದುಕೊಂಡೆನು. ಗುರುವಿಗೊಪ್ಪಿಸಬೇಕಾದ ವಿದ್ಯಾಮೌಲ್ಯವಾದರೋ ಹೇರಳವಾದುದು. ಆದಕಾರಣ ಈಗ ನಿನ್ನನ್ನು ನಿರ್ಬಂಧಿಸಿ ತೊಂದರೆಗೊಳಿಸಲು ನಾನು ಇಷ್ಟಪಡುವುದಿಲ್ಲ ಎಂದನು. ಅರಸು ಅದ್ವಿತೀಯನೆನಿಸಿದವನು, ಜಿತೇಂದ್ರಿಯನಾಗಿ ಧರ್ಮಾತ್ಮನೆಂದು ಹೆಸರುಗೊಂಡಿರುವನು, ಉಡುರಾಜನಂತೆ ಬೆಳಗುತ್ತಲಿದ್ದಾನೆ. ವೇದವಿದರೊಳಗೆ ಅಗ್ರೇಸರನೆನಿಸಿರುವ ದ್ವಿಜವರನ ವಚನವನ್ನು ಕೇಳಿ ಮರಳಿ ಇಂತೆಂದನು.–

ಎಲೈ ಮುನಿವರನೇ! "ವರತಂತು ಮಹರ್ಷಿಯ ಶಿಷ್ಯನಾದ ಕೌತ್ಸ ಮುನಿಯು– ಸಕಲ ಶಾಸ್ತ್ರ ಪಾರಂಗತನಾಗಿ, ಗುರುದಕ್ಷಿಣೆಯ ಧನವನ್ನು ಬೇಡಲಿಕ್ಕೆ ರಘುವಿನ ಬಳಿಗೆ ಬಂದಿದ್ದನು, ಆದರೆ ಅಲ್ಲಿ ಕೋರಿಕೆಯು ಕೈಗೂಡಲಿಲ್ಲ, ಬರಿಗೈಲಿ ಬೇರೊಬ್ಬ ದಾತನನ್ನು ಅರಸುತ್ತ ಹೋದನು" ಎಂಬೀ ಹೊಸದಾದ ಲೋಕಾಪವಾದವು ನೆಗಳಿದರೆ, ರಘುವು ಲಘುವಾಗುವುದಿಲ್ಲವೆ? ಅಥವಾ ರಘುವಂಶವೇ ಲಘುವಂಶವಾಗುವುದಿಲ್ಲವೆ? ನನಗೀ ಅಪಕೀರ್ತಿಯುಂಟಾಗುವುದು ಬೇಡ. ಆದಕಾರಣ ಗುರುಧನಾಭಿಲಾಷಿಯಾದ ನೀನು–ಪಾವನವಾಗಿ, ಪೂಜ್ಯವೆನಿಸಿರುವ ನನ್ನ ಅಗ್ನಿಹೋತ್ರದ ಮನೆಯಲ್ಲಿ ಎರಡು ಮೂರು ದಿನಗಳು ಮಾತ್ರ ನಾಲ್ಕನೆಯ ಅಗ್ನಿಯಂತೆ ತಾಳ್ಮೆಯಿಂದಿರು. ಅಷ್ಟರೊಳಗೆ ನಿನ್ನ ಪ್ರಯೋಜನವನ್ನು, ಸಂಪಾದಿಸಲಿಕ್ಕೆ ಪ್ರಯತ್ನಿಸುವೆನು ಎನಲು, ಆತನ ಅಮೋಘವಾದ ಪ್ರತಿಜ್ಞಾವಚನವನ್ನು ಕೇಳಿ ದ್ವಿಜವರನಾದ ಕೌತ್ಸನು – ಸಂತುಷ್ಟನಾಗಿ, ಹಾಗೆಯೇ ಆಗಲೆಂದು ಒಪ್ಪಿಕೊಂಡನು. ಬಳಿಕ ರಘುವೂ ತನ್ನ ಧರೆಯ ಸಾರವೆಲ್ಲ ಪರಿಗ್ರಹಿಸಲ್ಪಟ್ಟಿದೆ ಎಂದರಿತು, ಕುಬೇರನಿಂದ ಧನವನ್ನು ತರಬೇಕೆಂದು ನಿಶ್ಚಯಿಸಿದನು. ವಶಿಷ್ಠ ಮುನಿಯು ಮಂತ್ರಿಸಿ ಜಲವನ್ನು

ಪ್ರೋಕ್ಷಿಸಿದ್ದುದರ ಮಹಿಮೆಯಿಂದಲೇ – ನೆಲ, ಮುಗಿಲು, ಕಡಲುಗಳೊಳಗೆಲ್ಲಿಯೂ ಗಾಳಿಯ ಸಹಾಯವುಳ್ಳ ಮೋಡಕ್ಕೆ ಹೇಗೋಹಾಗೆ, ರಘುವಿನ ದಾರಿಗೆ ಅಡ್ಡಿಯೇ ಇರಲಿಲ್ಲ.

ಬಳಿಕ ಧೀರನಾದ ರಘುವು ಕೈಲಾಸಕ್ಕೊಡೆಯನಾದ ಕುಬೇರನನ್ನು, ಇವನೂ ಒಬ್ಬ ಸಾಧಾರಣದ ದೊರೆಯೆಂದು ಭಾವಿಸಿ, ತನ್ನ ತೋಳುಬಲದಿಂದ ಗೆಲ್ಲಬೇಕೆಂದು ಬಯಸಿ, ಆ ದಿನ ಸಾಯಂಕಾಲದ ಹೊತ್ತಿಗೆ ಬಿಲ್ಲು ಬಾಣ ಬತ್ತಳಿಕೆಗಳನ್ನೊಳಗೊಂಡಿರುವ ತನ್ನ ತೇರನ್ನು ಏರಿ ಮಲಗಿದನು.

ಮಾರನೆಯ ದಿನ ಬೆಳಗಾಯಿತು, ರಘುವು ವಿಜಯಪ್ರಯಾಣವನ್ನು ಬೆಳಸಲು ಸಿದ್ಧನಾದನು, ಭಂಡಾರದ ಮನೆಯ ಕಾವಲುಗಾರರಾದ ಅಧಿಕಾರಿಗಳು ಅಚ್ಚರಿಗೊಂಡರು, ಓಡಿಬಂದರು, ಒಡೆಯನನ್ನು ಕಂಡರು, ಅಡ್ಡಬಿದ್ದರು, ಕೈಜೋಡಿಸಿ ನಿಂತರು. ಪ್ರಭುವೇ? ನಿನ್ನೆಯ ಇರುಳು – ಕೋಶಗೃಹದ ನಡುವೆ ಮುಗಿಲಿನಿಂದ ಹಣದ ಮಳೆಗರೆಯಿತು ಎಂದು ಸಂತಸದಿಂದ ಬಿನ್ನವಿಸಿದರು. ರಘುವೂ ಆಶ್ಚರ್ಯಪಟ್ಟನು. ಕೂಡಲೇ ಭಾಂಡಾಗಾರಕ್ಕೆ ಬಂದನು, ಇದಿರಿಸಬೇಕೆಂದಿದ್ದ ಕುಬೇರನಿಂದ ಉಂಟಾಗಿ, ತಳತಳಿಸುತ್ತಲಿರುವ ಸುವರ್ಣವೃಷ್ಟಿಯನ್ನು ಕಂಡನು, ವಜ್ರಾಯುಧದ ಪೆಟ್ಟಿನಿಂದ ಒಡೆದ ಮೇರುಪರ್ವತದ ಗುಡ್ಡದಂತಿರುವ ಆ ಹಣದರಾಶಿಯನ್ನೆಲ್ಲ ಕೌತ್ಸಮುನಿಗೆ ಕೊಟ್ಟುಬಿಟ್ಟನು. ಕೌತ್ಸನು ಬೇಡಿದುದಕ್ಕಿಂತ ಹೆಚ್ಚಾದ ಹಣದಲ್ಲಿ ರಘುವು ಆಶೆಯುಳ್ಳವನಾಗಲಿಲ್ಲ. ಗುರುವಿಗೆ ಕೊಡಬೇಕಾದುದಕ್ಕಿಂತ ಅಧಿಕವಾದ ಧನವನ್ನು, ಕೌತ್ಸನು ಅಭಿಲಾಷಿಸಲೂ ಇಲ್ಲ. ಇದರಿಂದ ಅಯೋಧ್ಯಾಪುರ ನಿವಾಸಿಗಳಾದ ಜನರಿಗೆಲ್ಲ ಕೌತ್ಸರಘುಗಳಿಬ್ಬರೂ ಬಹು ಶ್ಲಾಘನೀಯರೆನಿಸಿದರು.

ಆ ಬಳಿಕ ಕೌತ್ಸಮುನಿಯು–ಸಂತುಷ್ಟಾಂತರಂಗನಾಗಿ, ನೂರಾರು ಒಂಟೆಗಳ ಮೇಲೆಯೂ, ಹೆಣ್ಣುಕುದುರೆಗಳ ಮೇಲೆಯೂ ಹಣವನ್ನು ಹೇರಿಸಿಕೊಂಡು ಹೊರಟು, ಹತ್ತಿರದಲ್ಲಿ ಕರಗಳನ್ನು ಜೋಡಿಸಿಕೊಂಡು ಶಿರಬಾಗಿ ನಿಂತಿರುವ ರಘುವನ್ನು ತನ್ನಕರತಲದಿಂದ ತಡವಿ ಇಂತೆಂದನು–

ಅಯ್ಯಾ ದೊರೆಯೆ! ನ್ಯಾಯಾರ್ಜನೆ, ಧರ್ಮಪರಿಪಾಲನೆ, ಸತ್ಪಾತ್ರ ವಿನಿಯೋಗ, ಈ ಮೊದಲಾದ ಒಳ್ಳೆಯ ನಡತೆಯಲ್ಲಿರುವ ಪ್ರಜಾನಾಥನಾದ ನಿನಗೆ, ಇಳೆಯು–ಕೇಳಿದುದನ್ನೆಲ್ಲ ಕೊಡುವುದೆಂಬುದೇನೂ ಆಶ್ಚರ್ಯವಲ್ಲ, ಮುಗಿಲುಕೂಡ ಮನೋಗತವನ್ನು ಕರೆದುದೇ!! ಇದರಿಂದ ನಿನ್ನ ಮಹಿಮೆಯು ಅಸದಳವೆನಿಸಿದೆ. ಎಲೈ ಉರ್ವರೇಶನೆ! ಇಂತಹ ನಿನಗೆ ನಾನು ಮಂಗಳಾಶಾಸನ ಮಾಡತಕ್ಕುದೇನಿದೆ? ಎಲ್ಲ ಮೇಲ್ಮೆಗಳನ್ನು ಪಡೆದಿರುವ ನಿನಗೆ ಇರುವುದನ್ನೇ ಹರಸಿದಂತಾಗುವುದು.

ಆದಕಾರಣ–ಸ್ತೋತ್ರಾರ್ಹನಾದ ನಿನ್ನನ್ನು ನಿಮ್ಮ ತಂದೆಯು ಪಡೆದಹಾಗೆ ನಿನ್ನಂತಹ ಸುಗುಣಸಂಪನ್ನನಾದ ಸತ್ಪುತ್ರನನ್ನು ನೀನೂ ಪಡೆ. ಎಂದೀಪ್ರಕಾರ ರಾಜನನ್ನು ಆಶೀರ್ವದಿಸಿ, ಭೂಸುರೋತ್ತಮನಾದ ಕೌತ್ಸನು ತನ್ನ ಗುರುವಿನ ಸನ್ನಿಧಾನವನ್ನು ಕುರಿತು ತೆರಳಿದನು. ಮಹಾರಾಜನೂ ಮುನಿಯ ಆಶೀರ್ವಾದದಿಂದ, ಪ್ರಾಣಿವರ್ಗವು–ಪ್ರಭಾಕರನಿಂದ ಬೆಳಕನ್ನು ಪಡೆಯುವಹಾಗೆ, ಸ್ವಲ್ಪ ಕಾಲದಲ್ಲಿಯೇ ಸುಪುತ್ರನನ್ನು ಪಡೆದನು.

ರಘು ಧರ್ಮಪತ್ನಿಯು–ಕುಮಾರಸ್ವಾಮಿಗೆಣೆಯೆನಿಸಿದ ಸುಕುಮಾರನನ್ನು ಬ್ರಹ್ಮನೇ ದೇವತೆಯಾಗಿರುವ ಅಭಿಜಿತ್ತೆಂಬ ಮುಹೂರ್ತದಲ್ಲಿ ಹಡೆದಳು, ಅದರಿಂದ ತಂದೆಯು–ಬ್ರಹ್ಮನಾಮವಾದ ಅಜ ಎಂಬ ಹೆಸರಿನಿಂದಲೇ ತನ್ನ ಮಗನಿಗೆ ನಾಮಕರಣವನ್ನು ಮಾಡಿದನು. ತಂದೆಯು ಹೊರವಾದ ಆಕಾರ, ಆತನಂತೆಯೇ ಶೌರ್ಯ, ಸ್ವಾಭಾವಿಕವಾದ ಎತ್ತರವೂ ತಂದೆಯ ಹಾಗೆಯೇ ಇದ್ದುದರಿಂದ, ಆ ಕುಮಾರನು ದೊಡ್ಡದೀಪದಿಂದ ಹತ್ತಿಸಿದ ಸಣ್ಣದೀಪದ ಹಾಗೆ ಸರ್ವಪ್ರಕಾರದಿಂದಲೂ ತನಗೆ ಕಾರಣನಾದ ತಂದೆಗಿಂತ ಬೇರೆನಿಸಲಿಲ್ಲ, ಹೀಗೆ ಕೆಲವು ಕಾಲ ಕಳೆಯಲು ಅಜಕುಮಾರನು–ವಿಧಿಯನ್ನನುಸರಿಸಿ, ಗುರುಗಳಿಂದ ವಿದ್ಯೆಗಳನ್ನೆಲ್ಲ ಕಲಿತನು. ಹರೆಯದ ಹೊರವಿನಿಂದ ಹೊಮ್ಮಿ ಬಲು ಸೊಗಯಿಸುವಂತಾದನು, ರಾಜ್ಯಲಕ್ಷ್ಮಿಯು–ವಿಶೇಷವಾದ ಅಭಿಲಾಷೆಯುಳ್ಳವಳಾದರೂ, ಸ್ಥಿರಚಿತ್ತಳಾದ ಕನ್ಯೆಯು – ತನ್ನ ತಂದೆಯ ಅಪ್ಪಣೆಯನ್ನು ನಿರೀಕ್ಷಿಸುವಂತೆ ಅಜನ ಕೈಹಿಡಿಯಲು ರಘುವಿನ ಆಣತಿಯನ್ನು ಇದಿರುನೋಡುತ್ತಲಿದ್ದಳು.

ತರುವಾಯ – ಅಜನ ಸುಗುಣಗಳು ಕರ್ಣಾಕರ್ಣಿಕವಾಗಿ ವಿದರ್ಭ ದೇಶಗಳ ರಾಜನಾದ ಭೋಜನ ಕಿವಿಯನ್ನು ಹೊಕ್ಕುವು. ಆತನು ತನ್ನ ತಂಗಿಯಾದ ಇಂದುಮತಿಗೆ ಸ್ವಯಂವರ ಮಹೋತ್ಸವವನ್ನು ಬೆಳಸಬೇಕೆಂದು ಬಯಸಿ, ಅಜಕುಮಾರನನ್ನು ಕರೆತರಲಿಕ್ಕೆ ಆಪ್ತನಾದ ದೂತನನ್ನು ಕಳುಹಿಸಿದನು. ರಘುವು – ಭೋಜನ ವಾರ್ತಾಹರನಿಂದ ಸುದ್ದಿಯನ್ನು ತಿಳಿದನು. ಸಂಬಂಧವನ್ನು ಬೆಳಸಲಿಕ್ಕೆ ಭೋಜನು ಅರ್ಹನೆಂದು ಭಾವಿಸಿದನು. ತನ್ನ ಕುಮಾರನೂ ಪಾಣಿಗ್ರಹಣಕ್ಕೆ ತಕ್ಕವನಾಗಿರುವನೆಂದು ಚಿಂತಿಸಿದನು. ಆಮೇಲೆ – ಅನುಕೂಲವಾದ ಸಲಕರಣೆಗಳನ್ನೆಲ್ಲ ಅಣಿಮಾಡಿಕೊಟ್ಟು, ತನಯನನ್ನು ತಕ್ಕ ಪಡೆಯೊಡನೆ ಭೋಜ ರಾಜಧಾನಿಯನ್ನು ಕುರಿತು ಕಳುಹಿಸಿಕೊಟ್ಟನು. ಆ ರಾಜಕುಮಾರನಿಗೆ ಪ್ರಯಾಣ ಸಮಯದಲ್ಲಿ ಇಳಿದುಕೊಂಡ ಸ್ಥಳಗಳೊಳಗೆ ನೆಟ್ಟ ಗೂಡಾರಗಳಲ್ಲಿ ದೇಶದಿಂದ ಬಂದ ರಾಜಾರ್ಹವಾದ ಪದಾರ್ಥಗಳಿಂದಲೇ ಸಮಸ್ತ ಉಪಚಾರಗಳೂ ನಡೆದುವಲ್ಲದೆ, ವನದಲ್ಲಿ ಬೆಳೆದ ಪದಾರ್ಥಗಳಿಂದಲ್ಲ. ಆದಕಾರಣ,

ಟಂಕಿ(ಮಜಲು)ಗಳೆಲ್ಲವೂ ಉಪವನವಿಹಾರಗಳಂತೆಯೇ ಆಗಿದ್ದುವು. ಹೀಗೆ ದೊರೆಮಗನು ಪಯಣದ ಮೇಲೆ ಪಯಣವನ್ನು ಬೆಳೆಸಿ ನರ್ಮದಾ ನದಿಯ ತಡಿಯೊಳಿಳಿದನು.

ಅದುವರೆಗೆ ಸೇನೆಯೆಲ್ಲ ಬಳಲಿತು. ದಳದ ಧ್ವಜಗಳ ತುದಿಯ ಬಟ್ಟೆಗಳೆಲ್ಲ ಧೂಳಿಯಿಂದ ಮಲಿನಗಳಾದುವು, ಆ ಹೊಳೆಯ ದಡದಲ್ಲಿಯೇ ಬೀಡುಬಿಟ್ಟಿತು, ಪ್ರವಾಹದ ಮೇಲೆ ಹರಿದು, ತುಂತುರುಗಳನ್ನು ಹೊತ್ತು, ಹೊಂಗೆಯ ಮರಗಳೊಳಗೆ ನುಗ್ಗಿ ಬರುತ್ತಲಿರುವ ತಂಗಾಳಿಯು ಬೀಸುತ್ತಲಿದ್ದಿತು. ಇದಿರಿಗೆ ಹರಿಯುತ್ತಲಿರುವ ಪ್ರವಾಹದ ಮೇಲುಗಡೆಯಲ್ಲಿ ಒಂದೇ ಕಡೆಯೊಳಗೆ ಗುಂಪಾಗಿ ದುಂಬಿಗಳು ಹಾರಾಡುತ್ತಲಿದ್ದುವು, ಅದರಿಂದ – ನೀರಿನಲ್ಲಿ ಕಾಡಾನೆಯೊಂದು ಮುಳುಗಿರುವುದೆಂದು ಸೂಚಿತವಾಗುತ್ತಲಿದ್ದಿತು. ಸ್ವಲ್ಪಹೊತ್ತಿನಲ್ಲಿಯೇ ಗಜವು ಮೇಲಕ್ಕೆದ್ದು ಕಾಣಿಸಿಕೊಂಡಿತು. ನೀರಿನಿಂದ ಮದಜಲಧಾರೆಯೆಲ್ಲ ತೊಳೆದುಹೋಗಿದ್ದುದರಿಂದ, ಕಪೋಲವು ನಿರ್ಮಲವಾಗಿ ಕಾಣಬಂದಿತು. ಮೇಲುಗಡೆ ಹತ್ತಿದ್ದ ಕಾವಿ ಮೊದಲಾದ ಕಲ್ಲಿನ ಬಣ್ಣವು ಚೆನ್ನಾಗಿ ತೊಡೆದುಹೋಗಿದ್ದರೂ, ಕಪ್ಪಾಗಿಯೂ, ಮೇಲ್ಮುಖವಾಗಿಯೂ ಕಾಣಬರುವ ಗೆರೆಗಳನ್ನೊಳಗೊಂಡು ಕಲ್ಲಿನ ಪೆಟ್ಟಿನಿಂದ ಚಕ್ಕೆಗಳೆದ್ದಿರುವ ಕೊಂಬುಗಳಿಂದ ಋಕ್ಷವತ್ತೆಂಬ ಪರ್ವತ ಪ್ರಾಂತದಲ್ಲಿ ಗೂಟಾಡಿದ್ದುದನ್ನು ಸೂಚಿಸುತ್ತಲಿದ್ದಿತು. ಇದಲ್ಲದೆ, – ಹಿಂದಕ್ಕೆ ಮುದುರುವ ಮತ್ತು ಮುಂದಕ್ಕೆ ನೀಡುವ ಲಾಘವವುಳ್ಳ ಸೊಂಡಿಲಿನಿಂದ, ಮುಂದೆ ಹರಿಯುವ ದೊಡ್ಡ ದೊಡ್ಡ ತೆರೆಗಳನ್ನು ಬಡಿದೊಡೆಯುತ್ತಾ, ಗಜಶಾಲೆಯ ಬಾಗಿಲಿಗೆ ಅಡ್ಡವಾಗಿ ಹಾಕಿರುವ ಅಗುಳಿಯನ್ನೊಡೆವುದರಲ್ಲಿ ಪ್ರವರ್ತಿಸಿರುವುದರಂತೆ ತೋರುತ್ತಲಿದ್ದಿತು. ಬಳಿಕ ಬೆಟ್ಟಕ್ಕೆಣೆಯಾದ ಆ ದ್ವಿರದವು – ಪಾವಸೆಯ ಪೊದೆಯನ್ನು ಎದೆಯಿಂದ ಸೆಳೆಯುತ್ತಾ, ಮೊದಲು ತಳ್ಳಿದ ಜಲರಾಶಿಯನ್ನು ತಡಿಗೆ ಕಳುಹಿ, ತರುವಾಯ ತಾನೂ ಬಂದಿತು. ಆ ತೋರವಾದ ಕಾಡಾನೆಗೆ ನೀರಿನೊಳಗೆ ಮುಳುಗಿದ್ದ ಕ್ಷಣಕಾಲಮಾತ್ರವೇ ವಿಶಾಲವಾದ ಕಪೋಲಗಳಲ್ಲಿ ಶಾಂತವಾಗಿದ್ದ ಮದಜಲಧಾರೆಯು ನಾಡಾನೆಗಳನ್ನು ನೋಡಿದ ಮಾತ್ರದಲ್ಲಿ ಮರಳಿ ಹರಿಯತೊಡಗಿತು.

ಏಳೆಲೆ ಬಾಳೆಗಿಡಗಳ ಹಾಲಿನಂತೆ ವಾಸನೆಯುಳ್ಳ ಆ ಮದಜಲದ ಕಂಪನ್ನು ವಾಸಿಸಿದ ಕೂಡಲೇ, ದಳದಲ್ಲಿರುವ ದ್ವಿಪಗಳು – ಮಾವಟಿಗರ ಕ್ರೂರವಾದ ಪ್ರಯತ್ನವನ್ನೆಲ್ಲ ಅತಿಕ್ರಮಿಸಿ, ಓಡಲಿಕ್ಕೆ ಮೊದಲಿಟ್ಟವು. ಕಟ್ಟನ್ನು ಹರಿದು, ನೊಗಗಳನ್ನು ತಳ್ಳಿ, ಕುದುರೆಗಳು ಪಲಾಯನವಾದುವು, ತೇರುಗಳ ಅಚ್ಚು ಮುರಿಯಿತು, ರಥಗಳು ಉರುಳುವಾಗ ಮೇಲೆ ಕುಳಿತಿದ್ದ ಹೆಂಗಸರಿಗೆ ಅಪಾಯವಾಗದಂತೆ ಭಟರು ಕಾಪಾಡಿಕೊಂಬುದು ಬಲು ಕಷ್ಟವಾಯಿತು, ಹೀಗೆ – ಆ ಆನೆಯಿಂದ ಪಡೆಯೆಲ್ಲ

ಕಲ್ಲೋಲವಾಯಿತು. ತಡೆಯಿಲ್ಲದೆ ಮಿತಿಮೀರಿ ಹಸ್ತಿಯು ಮೇಲೆ ನುಗ್ಗುತ್ತಿರುವ ಸುದ್ದಿಯು ಅಜಕುಮಾರನಿಗೆ ತಿಳಿಯಿತು. ಅತಿಕ್ರಮಿಸದಂತೆ ಅದನ್ನು ಹಿಂದಿರುಗಿಸಬೇಕೆಂದು ನೆನೆದನು, ಹೆದೆಯನ್ನು ಹೇರಳವಾಗಿ ಸೆಳೆಯದೆ, ಅದರ ಶಿರದಮೇಲೆ ಮೃದುವಾದ ಪೆಟ್ಟು ಬೀಳುವಂತೆ ಸರಳನ್ನು ಇಟ್ಟನು. ಕಾಳಗವನ್ನುಳಿದವೇಳೆಯಲ್ಲಿ ಕರಿಯನ್ನು ಕೊಲ್ಲಬಾರದೆಂದು ಕುಮಾರನು ಕೇಳಿದ್ದನು. ಶರದಪೆಟ್ಟು ತಗಲಿದ ಮಾತ್ರದಲ್ಲಿಯೇ ದಂತಿಯ ದರ್ಶನವಿಲ್ಲವಾಯಿತು, ಮುಗಿಲಿನಲ್ಲಿ ಕಾಂತಿರಾಶಿಯೊಂದು ನೆಲೆಗೊಂಡಿತ್ತು, ಸಭಾಮಂಡಲದ ನಡುವೆ ತೇಜೋಮಯವಾದ ಆಕಾರವೊಂದು ಅಕಸ್ಮಾತ್ತಾಗಿ ಕಾಣಬಂದಿತು ಅದು ಬಲು ಕಮನೀಯವಾಗಿದ್ದಿತು, ಶಿಬಿರದವರೆಲ್ಲ ನೋಡಿ ಬಲು ಅಚ್ಚರಿಗೊಂಡರು.

ಬಳಿಕ– ಆಕಾಶಚರವಾದ ಆ ವ್ಯಕ್ತಿಯು–ತನ್ನ ಮಹಿಮೆಯಿಂದ ಕೈಸೇರಿರುವ ಕಲ್ಪತರುಕುಸುಮಗಳನ್ನು ಕುಮಾರನ ಶಿರದಮೇಲೆ ಮಳೆಗರೆದು, ಮುಗುಳುನಗೆಯ ಬೆಳಕಿನಿಂದ ತನ್ನೆದೆಯ ತೋರವಾದ ಮುತ್ತಿನ ಹಾರಗಳನ್ನು ಬೆಳಗಿಸುತ್ತ, ಬಲು ಜಾಣತನದಿಂದ ಮಾತನಾಡತೊಡಗಿತು–

ಎಲೈ ಅರಗುವರನೆ! ಮತಂಗನೆಂಬ ಮಹಾಮುನಿಯೋರ್ವನುಂಟು. ನಾನೊಂದು ವೇಳೆ ಆತನ ಬಳಿಯಲ್ಲಿ ಹೆಮ್ಮೆಯನ್ನು ತೋರಿದೆನು, ಆತನಿಗೆ ಸಿಟ್ಟು ಹತ್ತಿತು. ಮತಂಗನು ಮತಂಗಜದ ರೂಪವನ್ನು ಪಡೆವಂತೆ ನನ್ನನ್ನು ಶಪಿಸಿದನು, ಅಂದಿನಿಂದ ಆ ರೂಪದಲ್ಲಿದ್ದೆನು, ನಾನು ಪ್ರಿಯದರ್ಶನನೆಂಬ ಗಂಧರ್ವ ರಾಜಕುಮಾರನು, ನನ್ನನ್ನು ಪ್ರಿಯಂವದನೆಂದು ಕರೆಯುತ್ತಾರೆ, ಶಾಪಗ್ರಸ್ತನಾದ ಆ ನಾನು – ತಪೋಧನನ ಅಡಿದಾವರೆಗಳಿಗೆರಗಿ, ಪರಿಹಾರವನ್ನು ಕರುಣಿಸಬೇಕೆಂದು ಕೇಳಿಕೊಂಡೆನು, ಮುನಿಯು ತಾಳ್ಮೆಯಿಂದ ಮೃದುವಾದನು, ಬೆಂಕಿಬಿಸಿಲುಗಳ ಸೋಂಕಿನಿಂದ ಬಿಸಿಯುಂಟಾದರೂ, ನೀರಿಗೆ ಶೈತ್ಯವೇ ಸ್ವಾಭಾವಿಕವಾದ ಗುಣವಲ್ಲವೆ? ಅಂತು ಶಾಂತನಾದ ತಪೋನಿಧಿಯು

– "ಇಕ್ಷ್ವಾಕುಕುಲ ಕುಮಾರನಾದ ಅಜನು ಎಂದು ನಿನ್ನ ಶಿರವನ್ನು ಅಲಗಿನಿಂದ ಭೇದಿಸುವನೋ, ಅಂದೇ ನಿನ್ನ ಸ್ವರೂಪವನ್ನು ಮಹಿಮೆಯೊಂದಿಗೆ ಪಡೆವೆ" ಎಂದು ನನಗೆ ಪರಿಹಾರ ಸಮಯವನ್ನು ಸೂಚಿಸಿದ್ದನು. ಬಹುಕಾಲದಿಂದ ನಿನ್ನ ಬರುವನ್ನು ಬಯಸಿ, ಇದಿರುನೋಡುತ್ತಲಿದ್ದ ನನ್ನಾ ರೂಪವು–ಸತ್ವಗುಣ ಸಂಪನ್ನನಾದ ನಿನ್ನಿಂದ ಪರಿಹರವಾದುದು. ಶಾಪಾಂತವನ್ನಾಂತೆನು. ನಿನ್ನಿಂದ ಪ್ರಿಯವನ್ನು ಪಡೆದ ಈ ನಾನು ನಿನಗೆ ಪ್ರತಿಪ್ರಿಯವನ್ನು ಮಾಡದೆ ಹೋದರೆ ನನ್ನೀ ಪದವಿ ವಿಪದವಾಗುವುದಲ್ಲವೆ? ಆದಕಾರಣ – ನನ್ನಲ್ಲಿ ಸಮ್ಮೋಹನವೆಂಬ ಒಂದು ಅಸ್ತ್ರವುಂಟು, ಅದನ್ನು ತೊಡುವುದಕ್ಕೂ, ತಡೆವುದಕ್ಕೂ ಮಂತ್ರಭೇದವಿದೆ, ಮತ್ತು –

ಅದಕ್ಕೆ ಗಂಧರ್ವನೇ ದೇವತೆ, ಪ್ರಯೋಗದಿಂದ ಹಗೆಗಳಿಗೆ ಪ್ರಾಣಹಿಂಸೆಯೂ ಆಗುವುದಿಲ್ಲ, ಜಯವೂ ಕರಗತವಾಗಿರುವುದು. ಈ ಅಸ್ತ್ರವನ್ನು ಮಂತ್ರವತ್ತಾಗಿ ನೀನು ಪರಿಗ್ರಹಿಸು, ಇದೇ ನಿನ್ನ ಉಪಕಾರಕ್ಕೆ ಪ್ರತ್ಯುಪಕಾರವೆಂದು ಭಾವಿಸು, ಪ್ರಾಣಹರಣದಲ್ಲುದ್ಯುಕ್ತನಾದ ನಾನು ಈ ಪ್ರತಿಪ್ರಿಯವನ್ನು ಹೇಗೆ ಪರಿಗ್ರಹಿಸಲಿ? ಎಂದು ನಾಚಿಕೆಗೊಳ್ಳಬೇಡ, ನೀನು ಸರಳನ್ನಿಡುವಾಗ ಸ್ವಲ್ಪ ಕಾಲ ತಾಳ್ಮೆಯಿಂದ ದಯಾಳುತೆಯನ್ನು ತೋರಿ ಮೃದುವಾಗಿಯೂ ಪ್ರಯೋಗಿಸಿ ಇದ್ದೀಯೆ. ನಾನಾಗಿ ಪ್ರಾರ್ಥಿಸುತ್ತಿರುವಲ್ಲಿ ನೀನು ತಿರಸ್ಕಾರದ ಕ್ರೌರ್ಯವನ್ನು ತೋರಬಾರದು ಎಂದನು.

ಬಳಿಕ – ಹಾಗೆಯೇ ಆಗಲೆಂದು ಸಮ್ಮತಿಸಿ, ಸೋಮನಂತೆಸೆವ ಅಜಕುಮಾರನು – ಸೋಮಸುತೆಯಾದ ನರ್ಮದೆಯ ಪಾವನಜಲದಲ್ಲಿ ಆಚಮನಮಾಡಿ, ಉತ್ತರಾಭಿಮುಖನಾಗಿ, ಶಾಪಪರಿಹಾರದಿಂದ ಪ್ರಿಯವನ್ನು ಪಡೆದ ಪ್ರಿಯಂವದನಿಂದ ಪ್ರತಿಪ್ರಿಯವಾಗಿ ಅಸ್ತ್ರಮಂತ್ರವನ್ನು ಪರಿಗ್ರಹಿಸಿದನು. ಹೀಗೆ – ದೈವವಶದಿಂದ ದಾರಿಯಲ್ಲಿ ಸಂಧಿಸಿದ ಅವರೀರ್ವರಿಗೂ ಕಾಕತಾಳೀಯ ನ್ಯಾಯದಿಂದ ಸಖ್ಯವು ಕಲೆಯಿತು. ಹಾಗೆ – ಸೇರಿದ್ದ ಅವರಿಬ್ಬರಲ್ಲಿ ಪ್ರಿಯಂವದನು ಕುಬೇರೋದ್ಯಾನವನ್ನು ಕುರಿತೂ, ಅಜಕುಮಾರನು ಭೋಜನಗರಿಯನ್ನು ಕುರಿತೂ ಪ್ರಯಾಣವನ್ನು ಬೆಳಸಿದರು. –

ಅಜಕುಮಾರನು ರಾಜಧಾನಿಯ ಸಮೀಪಕ್ಕೆ ಬಂದನೆಂಬ ಸುದ್ದಿಯು ವಿದರ್ಭರಾಜನಿಗೆ ತಿಳಿಯಿತು. ಅವನ ಆಗಮನದಿಂದ ಅತಿ ಹರ್ಷಿತನಾದನು. ಮೂಡಿ ಬೆಳಗುತ್ತಲಿರುವ ಚಂದಿರನನ್ನು ತೆರೆಗಳಂದುಬ್ಬಿ ಮೆರೆಯುವ ಕಡಲಿನಂತೆ ಅರಗುವರನನ್ನು ಇದಿಗೊರ್ಂಡನು. ಭೋಜನಾಣತಿಯನ್ನು ಶಿರದೊಳಾಂತ ಅಧಿಕಾರಿಗಳು ವಿಧೇಯರಾಗಿ ಬಿಡಾರವನ್ನು ತೋರಿದರು. ಆ ರಾಜಭವನದ ಮುಂದಣ ಜಗುಲಿಯ ಇಕ್ಕೆಲದಲ್ಲಿಯೂ ಮಂಗಳಕರವಾದ ಪೂರ್ಣಕುಂಭಗಳನ್ನಿಟ್ಟಿದ್ದರು. ಹೊಸತೆನಿಸಿದ ಆ ಅರಮನೆಯನ್ನು ಅರಸುಕುಮಾರನು ಹೊಕ್ಕುದು ಬಾಲ್ಯಕ್ಕಿಂತ ಎರಡನೆಯದಾದ ಪ್ರಾಯವನ್ನು ಪಂಚಬಾಣನು ಪ್ರವೇಶಿಸುವಂತಿದ್ದಿತು. ಅಜನು ಆ ದಿವ್ಯಭವನದಲ್ಲಿ ಅಂದಿನ ದಿನವನ್ನು ಸುಖವಾಗಿ ಕಳೆದನು. ರಾತ್ರಿಯಾಗಲು ರಾಜಾರ್ಹವಾದ ಭೋಜನವನ್ನು ತೀರಿಸಿಕೊಂಡನು, ದಿವ್ಯ ಹಂಸತೂಲಿಕಾತಲ್ಪದಲ್ಲಿ ಪವಳಿಸಿದನು. ಆದರೆ – ಸ್ವಯಂವರಾರ್ಥವಾಗಿ ರಾಜಕುಮಾರನನ್ನು ಕರೆತರಿಸಿರುವ ಮನೋಹರವಾದ ಕನ್ಯಾರತ್ನವನ್ನು ಪಡೆಯಲು ಬಯಸುತ್ತಲಿರುವ ಅಜಕುಮಾರನ ನಯನಗಳನ್ನು, ನಿದ್ರೆಯು, ಇವನ ಅಂತರಂಗವನ್ನು ಅರಿಯಲು ಅಸಮರ್ಥಳಾದ ಅರಸಿಯಂತೆ ಬಹಳ ಹೊತ್ತಿನಮೇಲೆ ಇದಿರ್ಗೊಂಡಿತ್ತು.

ಇರುಳೂ ಕಳೆದು, ಬೆಳಕು ಹರಿಯುತ್ತ ಬಂದಿತು. ರತ್ನಕರ್ಣಕುಂಡಲಗಳಿಂದ ಕುಮಾರನ ಬಲಿತ ಭುಜಗಳೆರಡೂ ಒತ್ತಲ್ಪಟ್ಟಿದ್ದುವು. ಸುಪ್ಪತ್ತಿಗೆಯ ಮೇಲು ಹಾಸಿಗೆಯಲ್ಲಿ ಅಂಗರಾಗವೆಲ್ಲ ತೊಡೆದು ಹೋಗಿದ್ದಿತು. ಇನ್ನೇನು ಎಚ್ಚರವಾಗುವ ಸಮಯ, ಅಷ್ಟು ಹೊತ್ತಿಗೆ, ವಯಸ್ಸಿನಲ್ಲಿ ಓರಗೆಯವರಾದ ವಂದಿಕುಮಾರರು– ಪ್ರಜ್ಞಾಶಾಲಿಯಾದ ಪಾರ್ಥಿವಾತ್ಮಜನನ್ನು ಸ್ತುತಿಪಾಠಗಳಿಂದ ಎಚ್ಚರಗೊಳಿಸತೊಡಗಿದರು :

ಮತಿವಂತರೊಳಗುತ್ತಮನೆನಿಸಿದ ಎಲೈ ಮಹಾರಾಜನಂದನನೆ! ಮಂಚವನ್ನು ಬಿಟ್ಟು ಎಚ್ಚರಗೊಳ್ಳು. ಬ್ರಹ್ಮನು ಈ ಭೂಮಿಯ ಹೊರೆಯನ್ನು ಎರಡು ಪಾಲನ್ನೇ ಮಾಡಿರುವನು. ಅವುಗಳೊಳಗೆ ಒಂದರ ತುದಿಯನ್ನು ಬಲು ಎಚ್ಚರಿಕೆಯಿಂದಿರುವ ನಿಮ್ಮ ತಂದೆಯು ಹೆಗಲಿನಿಂದ ಹೊತ್ತಿರುವನು, ಮತ್ತೊಂದುಕಡೆಯ ಭಾರಕ್ಕೆ ನಿನ್ನ ಭುಜವೇ ಊಡಲ್ಲವೆ? ನೀನಾದರೆ ನಿದ್ರೆಗೆ ವಶನಾದೆ, ಕಾಂತಿಲಕ್ಷ್ಮಿಯನ್ನುಪೇಕ್ಷಿಸಿದೆ. ಅಬಲೆಯಾದ ಆಕೆಗೆ ಊಡು ತಪ್ಪಿತು, ನಿನ್ನ ಮುಖಕ್ಕೆಣೆಯಾದ ಬೇರೊಂದಾಸರೆಯನ್ನು ತಡಕಬೇಕಾಯಿತು, ನಿನ್ನಗಲಿಕೆಯಿಂದುಂಟಾದ ಮನಸ್ಸಿನ ನೋವನ್ನು ತಾಳಲಾರದೆ ಹೋದಳು, ಸ್ವಲ್ಪ ಸಿಟ್ಟು ಹತ್ತಿದಂತಾಯಿತು, ಚಿತ್ರವು ತುಸ ಒಂಡಾಯಿತು, ಚಂದ್ರನನ್ನಾಶ್ರಯಿಸಿ ಕಿಂಚಿತ್ತು ಸಮಾಧಾನವನ್ನು ಪಡೆದುಕೊಳ್ಳುತ್ತಲಿದ್ದಳು. ಆ ಚಂದಿರನೂ ಪಡುವಣ ದೆಸೆಗಧೀನನಾಗುವ ಹಾಗಾಯಿತು, ನಿನ್ನ. ಮೊಗದ ಸೊಬಗು ಅವನಲ್ಲಿಯೂ ಕಡಮೆಯಾಗುತ್ತ ಬಂದಿತ್ತು, ಅದರಿಂದಲೆ ನೀನೆಚ್ಚತ್ತು ದಿಕ್ಕಿಲ್ಲದ ಆ ಲಕುಮಿಗಾಸರೆಯನ್ನು ನೀಡು, ದಯೆಮಾಡು. ಅಂತಾಲಕ್ಷ್ಮಿಯನ್ನು ಪರಿಗ್ರಹಿಸಿದರೆ, ಒಂದೇ ಹೊತ್ತಿನಲ್ಲಿ ಸಮವಾಗಿ ಅರಳಿ, ಥಳಥಳನೆ ಹೊಳೆಯುತ್ತ ಚಲಿಸುತ್ತಲಿರುವ ಅಂದವಾದ ಕರಿಯ ಗುಡ್ಡೆಯನ್ನೊಳಗೊಂಡಿರತಕ್ಕ ನಿನ್ನ ಕಣ್ಣೂ, ಅಲುಗುತ್ತಲಿರುವ ದುಂಬೆಯನ್ನುಳ್ಳ ತಾವರೆಯೂ, ಒಂದರೊಡನೊಂದು ಹೋಲಿಕೆಯನ್ನು ಪಡೆದು ಬೆಳಗಲಿ. ಮುಂಜಾನೆಯ ಮೆಲ್ಲೆಲರು–ತರುಗಳೊಳಗೆ ತೊಟ್ಟಿನಿಂದ ಕಳಚಿ ಉದಿರುವೆಲರನ್ನು ಸೆಳೆಯುತ್ತಲಿದೆ, ಕೆಂಬಣ್ಣದೆಳಬಿಸಿಲಿನಿಂದರಳುತ್ತಲಿರುವ ತಾವರೆಯೊಡನೆ ಕಲೆಯುತ್ತಲಿದೆ. ಆದಕಾರಣ – ಸ್ವಾಭಾವಿಕವಾಗಿರುವ ನಿನ್ನ ಮುಖಮಾರುತದ ಸುವಾಸನೆಯೊಡನೆ ಸಾಮ್ಯವನ್ನು, ಪರಗುಣದಿಂದ ಪಡೆಯಲೆಳಸುವಂತೆ ಕಾಣಬರುವುದು. ತರುಗಳಲ್ಲಿನ ಕೆಂಪಾದ ತಳಿರುಗಳ ನಡುವೆ ಬಿದ್ದು, ಬಿಳುಪಾದ ಮುತ್ತಿನ ಕಾಂತಿಯನ್ನೊಳಗೊಂಡಿರುವ ಹಿಮದ ಹನಿಯು – ನಿನ್ನಯ ಚೆಲುವಾದ ಕೆಳತುಟಿಯಲ್ಲಿ ಹಲ್ಲಿನ ಬೆಳಕಿನಿಂದೊಡಗೂಡಿರುವ ವಿನೋದದ ಮುಗುಳುನಗೆಯಂತೆ ಬೆಳಗುತ್ತಲಿದೆ. ಹೇರಳವಾದ ತಾಪಕ್ಕೆ ಗಣಿಯಾಗಿರುವ ರವಿಯು– ಮೂಡಣ ಮುಗಿಲಿನಲ್ಲಿ ಮೂಡುವುದಕ್ಕಿಂತ ಮೊದಲೇ ಅರುಣನು ಕತ್ತಲನ್ನು ತರಿದೋಡಿಸುತ್ತಲಿದ್ದಾನೆ.

ಎಲೈ ವೀರನೇ! ಕಾಳಗಗಳೊಳಗೆ ನೀನು ಮುಂದಾಳಾಗುತ್ತಿರುವಲ್ಲಿ – ನಿಮ್ಮ ತಂದೆಯು ಸ್ವತಃ ಹಗೆಗಳನ್ನು ಸದೆಬಡಿವುದುಂಟೆ? ಯೋಗ್ಯರಾದ ಮಕ್ಕಳಲ್ಲಿ ಆಡಳಿತದ ಭಾರವನ್ನೆಲ್ಲ ಹೊರಿಸಿರತಕ್ಕ ಯಜಮಾನರಿಗೆ ವ್ಯವಹಾರದ ಖೇದವಿರುವುದೆ? ಎರಡು ಪಕ್ಕಗಳಲ್ಲಿಯೂ ಕ್ರಮವಾಗಿ ಮಲಗಿ ನಿದ್ದೆಯನ್ನು ಕಳೆದು, ನಿನ್ನ ಆನೆಗಳು ಗಲಗಲನೆ ಸದ್ದುಮಾಡುತ್ತಲಿರುವ ಸರಪಣಿಗಳನ್ನು ಎಳೆದಾಡುತ್ತ ಎಚ್ಚರಗೊಳ್ಳುತ್ತಲಿರುವುವು. ಎಳೆಬಿಸಿಲಿನ ಸಂಬಂಧದಿಂದ ಕೆಂದಾವರೆಯ ಮೊಗ್ಗೆಗಳಂತಿರುವ ಆ ಆನೆಗಳ ಕೋಡುಗಳು – ಕೆಂಗಾವಿಗಲ್ಲಿನಿಂದೊಡಗೂಡಿರುವ ಬೆಟ್ಟದ ಭಾಗದಂತೆ ಕಂಗೊಳಿಸುತ್ತಲಿವೆ. ಎಲೈ ವನಜನಯನನೆ! ನೀಳವಾದ ಗೂಡಾರಗಳೊಳಗೆ ಕಟ್ಟಿರುವ ವನಾಯು ದೇಶದ ವಾಜಿಗಳು ನಿದ್ರೆಯಿಂದೆದ್ದು, ಇದಿರಿಗೆ ಅಣಿಮಾಡಿರುವ ಉಪ್ಪಿನ ಗಡ್ಡೆಗಳನ್ನು ತಮ್ಮ ಉಸಿರಿನ ಬಿಸಿಯಿಂದ ಮಲಿನಗೊಳಿಸುತ್ತಲಿರುವುವು. ನೀನು ಸಿಂಗರಿಸಿಕೊಂಡಿರುವ ಪುಷ್ಪಹಾರಗಳಲ್ಲಿನ ಹೂಗಳು ಬಾಡುತ್ತ ಬಂದುದರಿಂದ ರಚನೆಯಲ್ಲಿ ಬಿಡುವು ಕಾಣಬರುತ್ತಲಿದೆ. ತೋರವಾದ ದೀವಿಗೆಗಳು ತಮ್ಮ ಸುತ್ತಲಿರುವ ಕಾಂತಿಮಂಡಲದಲ್ಲಿ ಹೊಳವು ತಗ್ಗಿದುದರಿಂದ ಕಳೆಗುಂದಿವೆ. ಮುದ್ದು ಮುದ್ದಾಗಿ ಮಾತನಾಡುವ ನಿನ್ನ ಪಂಜರದ ಅರಗಿಳಿಯು–ನಿನ್ನ ಎಚ್ಚರಿಕೆಗಾಗಿ ಹೇಳುತ್ತಲಿರುವ ನಮ್ಮ ನುಡಿಗಳನ್ನು ಅನುಸರಿಸಿ ತಾನೂ ನುಡಿಯುತ್ತಲಿದೆ.–

ಇಂತು–ಬಾಂದೊರೆಯ ಪುಳಿನದೊಳು ಪವಳಿಸಿದ್ದ ಸುಪ್ರತೀಕವೆಂಬ ಸುರಗಜವು – ಮದವೇರಿದಂಚೆಗಳ ನಿನದಂಗಳಿಂದೆಳ್ಚರಂಗೊಂಬಂತೆ ರಘುನಂದನು – ವಂದಿಪುತ್ರರಭಿನಂದನ ವಚನಂಗಳಿಂದ ಸುಪ್ಪತ್ತಿಗೆಯಿಂದುಪ್ಪವಳಿಸಿದನು.

ಬಳಿಕ – ಮುದ್ದಾದ ನಿದ್ದೆಗಣ್ಣಿನ ಆ ಅರಗುವರನು – ಮುಂಜಾನೆಯೊಳು ಮಾಡಬೇಕಾದ ಅನುಷ್ಠಾನಗಳನ್ನು ವಿಧಿಯನ್ನನುಸರಿಸಿ ನೆರವೇರಿಸಿಕೊಂಡು, ಜಾಣ್ಮೆಯಿಂದ ಉಚಿತವಾದ ಉಡಿಗೆತೊಡಿಗೆಗಳ ಸಿಂಗಾರವನ್ನು ತಾಳ್ದು, ಅರಸುಮಕ್ಕಳಿಂದ ಅಲಂಕೃತವಾಗಿರುವ ಸ್ವಯಂವರಮಂಡಪದಲ್ಲಿನ ರಾಜಸಮಾಜಕ್ಕೈತಂದನು.

****

ಆರನೆಯ ಅಧ್ಯಾಯ
ಸ್ವಯಂವರ ವರ್ಣನೆ

ಸೂಚನೆ ॥ ವರಣದ ಶರಣದಿ ತರುಣರ
ನರಗುವರಿಗೆ ನೆರೆ ಸುನಂದೆ ತೋರುತ ಸರಿದಳ್ ।
ವರಿಸಲ್ ವಧು ರಘುಜಾತನ
ನರಗುವರರ್ ಕರುಬಿ ಮೆಯ್ಯೊಳರೆಯಾಗಿರ್ದರ್ ॥

ಸಮನಂತರದಲ್ಲಿ – ಸ್ವಯಂವರ ಮಂಟಪವು ಸುರಚಿರ ಶೃಂಗಾರಗಳಿಂದ ಸಿರಿಗೆ ತವರ್ಮನೆಯಂತೆ ಸಿದ್ಧವಾಗಿದ್ದಿತು. ಸಕಲೋಪಚಾರಗಳಿಂದ ಸಜ್ಜುಗೊಳಿಸಿರುವ ಸಿಂಹಪೀಠಗಳಲ್ಲಿ ಬಗೆಬಗೆಯ ಉಡಿಗೆ ತೊಡಿಗೆಗಳ ಸಿಂಗರಗಳಿಂದ ಸುರರ ಸೊಬಗನ್ನು ಸೂರೆಗೊಂಬ ಸರ್ವಂಸಹಾಧಿಪ ಸುಕುಮಾರರು – ಸಾಲುಗೊಂಡು ಕುಳಿತಿರುವುದನ್ನು ರಘುಕುಮಾರನು ಕಂಡನು. ಈತನಾ ಕಲ್ಯಾಣ ಮಂಟಪವನ್ನು ಹೊಕ್ಕಕೂಡಲೇ, ಅರಸು ಮಕ್ಕಳೆಲ್ಲ ಅವಲೋಕಿಸಿದರು. ರತಿಯ ವಿನಯ ಪ್ರಾರ್ಥನೆಯಿಂದ ಪರಮೇಶ್ವರನು ಅನುಗ್ರಹಿಸಲು, ತನ್ನ ಶರೀರವನ್ನು ಪಡೆದು ಬಂದಿರುವ ಕಂದರ್ಪನಂತೆ ಕಕುತ್ಸ್ಥಕುಲಕುಮಾರನು ಕಾಣಬಂದನು. ಕೂಡಲೆ ನರನಾಥ ನಂದನರ ಮನವು –ಇಂದುಮತಿಯಲಿ ಆಶೆಯನ್ನು ತೊರೆಯಿತು. ಕೂಡಲಿಕ್ಕೆ ಉಚಿತವಾದ ಪೀಠವನ್ನು ವಿದರ್ಭರಾಜನೇ ಮರ್ಯಾದೆಯಿಂದ ತೋರಿದನು. ಕೇಸರಿ ಕಿಶೋರವು – ಕಲ್ಲಿನ ಹಂತಗಳ ಹಾದಿಯಿಂದ ಬೆಟ್ಟದ ತುದಿಯನ್ನು ಹೇಗೋಹಾಗೆ, ಅಜಕುಮಾರನು – ಸೋಪಾನಗಳ ಸರಣಿಯಿಂದ ಮಂಚವನ್ನೇರಿದನು, ಬಗೆಬಗೆಯದೆನಿಸಿ, ಬೆಲೆಯಿಲ್ಲದ ಬಣ್ಣಗಳಿಂದೊಡಗೂಡಿರುವ ರತ್ನಗಳನ್ನು ಕೆತ್ತಿರತಕ್ಕ ಪೀಠದಲ್ಲಿ ಬಲು ಬಿಂಕದಿಂದ ಕುಳಿತ ಅಜಕುಮಾರನು – ನವಿಲ ಬೆನ್ನಿನಮೇಲೆ ಕುಳಿತಿರುವ ಕುಮಾರಸ್ವಾಮಿಯ ಬೆಡಗನ್ನಾಂತು, ಊಹಿಸಿ ತಿಳಿಯುವಷ್ಟು ಕಾಂತಿಯಿಂದ ಸಂಪನ್ನನಾಗಿದ್ದನು. ರವಿಯೊಬ್ಬನಾದರೂ ಕೊಳದೊಳಗಣ ಅಲೆಗಳೊಳಗೆಲ್ಲ ಕಂಗೊಳಿಸುವಂತೆ, ಪ್ರಭಾತಿಶಯದಿಂದ ನೋಡಲಸದಳವೆನಿಸಿದ ಆ ಅಜಕುಮಾರನ ಸ್ವರೂಪವು ರಾಜನ್ಯಕುಮಾರರ

ಶ್ರೇಣಿಗಳೊಳಗೆಲ್ಲ ಸಾವಿರಾರು ಬಗೆಯಾಗಿ ಹರಡಿತು. ಅದರಿಂದ ಮೋಡಗಳ ಪಂತಿಗಳೊಳಗೆ ವ್ಯಾಪಿಸಿರುವ ಮಿಂಚಿನಂತೆ ರಾರಾಜಿಸುತ್ತಲಿದ್ದಿತು. ಬೆಲೆಯಿಲ್ಲದ ಬಗೆಬಗೆಯ ಉಡಿಗೆಗಳನ್ನುಟ್ಟು ಶ್ರೇಷ್ಠತರಗಳೆನಿಸಿದ ಸಿಂಹಾಸನಗಳನ್ನಲಂಕರಿಸಿರುವ ಬಾಹುಜವೀರರೊಳಗೆ ಕಲ್ಪತರುಗಳ ಮಧ್ಯದಲ್ಲಿ ಪಾರಿಜಾತವೃಕ್ಷದಂತೆ ರಘುನಂದನನೊಬ್ಬನೇ ತೇಜೋವಿಶೇಷದಿಂದ ವಿರಾಜಿಸುತ್ತಲಿದ್ದನು. ಆ ಸಭಾಮಂಟಪದಲ್ಲಿ ನೆರೆದಿರುವ ಪುರಜನರ ದೃಷ್ಟಿಸಮೂಹವು – ಕ್ಷತ್ರಿಯಕುಮಾರರನ್ನೆಲ್ಲ ತೊರೆದು, ಅಜಕುಮಾರನಲ್ಲಿಯೇ ಒಟ್ಟಿಗೆ ಇಳಿಯಿತು. ಹೂತಿರುವ ಮರಗಳನ್ನೆಲ್ಲ ಬರಿದಾಗಿ ಮಾಡಿ, ದುಂಬಿಗಳ ಹಿಂಡು – ಕಾಡಾನೆಯ ಮದಜಲಧಾರೆಯಿಂದ ತುಂಬಿರುವ ಗಲ್ಲದಲ್ಲಿ ಗುಂಪಾಗಿ ಬಂದು ಕುಳಿತಂತಿದ್ದಿತು.

ಆ ಬಳಿಕ ವಂಶಾವಳಿಗಳನ್ನೆಲ್ಲ ಚೆನ್ನಾಗಿ ಬಲ್ಲ ಹಳಬರಾದ ವಂದಿಗಳು – ಸೂರ್ಯಚಂದ್ರವಂಶದರಸರ ಚರಿತ್ರೆಗಳನ್ನು ಕ್ರಮವಾಗಿ ಹೊಗಳತೊಡಗಿದರು. ಗಮಗಮಿಸುತ್ತಲಿರುವ ಪರಿಮಳದ ಧೂಪವು ಎಲ್ಲೆಲ್ಲಿಯೂ ಹರಡಿಕೊಂಡಿತು. ಧ್ವಜಪಟಗಳನ್ನೆಲ್ಲ ಸಾಲಾಗಿ ಎತ್ತಿ ಹಿಡಿದರು. ಮಯೂರನೃತ್ಯಕ್ಕೆ ನಿಮಿತ್ತವಾದ ಗುಡುಗಿನಂತೆ ದಿಗಂತಗಳಲ್ಲಿ ಮಂಗಳಶಂಖರಾವಗಳು ಮೊರೆಯಿಡುತ್ತಲಿದ್ದುವು. ಮಂಗಳವಾದ್ಯಘೋಷವು–ನಾಲ್ಕು ಕಡೆಗಳಲ್ಲಿಯೂ ತುಂಬಿ ಇದ್ದಿತು. ಪತಿಯನ್ನು ವರಿಸುವುದರಲ್ಲಿ ಸಿದ್ಧಳಾದ ಮದುವಣಗಿತ್ತಿಯು – ವಿವಾಹೋಚಿತವಾದ ಮಂಗಳಾಲಂಕಾರಗಳಿಂದ ಶೋಭಿಸುತ್ತಾ, ಮನುಷ್ಯರಿಂದ ತೆರಳತಕ್ಕ ಪಲ್ಲಕ್ಕಿಯನ್ನೇರಿ, ಗೆಳತಿಯರ ಮಿತವಾದ ಪರಿವಾರದಿಂದ ಬೆಳಗುತ್ತ, ಕಲ್ಯಾಣಮಂಟಪದೊಳಗೆ – ಇಕ್ಕೆಲಗಳಲ್ಲಿಯೂ ಮಂಚಗಳಮೇಲೆ ಅಂದವಾಗಿ ಕುಳಿತಿರುವ ಅರಸು ಮಕ್ಕಳ ನಡುವಣ ರಾಜಮಾರ್ಗದಲ್ಲಿ ಹೊರಟುಬಂದಳು. ಬ್ರಹ್ಮನ ಸುಂದರವಾದ ಸೃಷ್ಟಿಯೊಳಗೆ ಮೊಟ್ಟ ಮೊದಲನೆಯದೆನಿಸಿ, ನೂರಾರುಮಂದಿ ನರದೇವಕುಮಾರರ ನೋಟಗಳಿಗೆಲ್ಲ ಒಂದೇ ಗುರಿಯಾಗಿರುವ ಆ ಕನ್ಯಾಪದಾರ್ಥದಲ್ಲಿ, ಮಹಾರಾಜನಂದನರೆಲ್ಲ ತಂತಮ್ಮ ಮನಗಳಿಂದ ಬಂದಿಳಿದರು. ಪೀಠಗಳಲ್ಲಿ ತಮ್ಮ ಮೈಗಳಿಂದ ಮಾತ್ರವೇ ಇರುತಿದ್ದರು.

ತರುಗಳ ತಳಿರುಗಳ ಹೊಳಪುಗಳ ಹಾಗೆ, ಕನ್ಯಾರತ್ನವಾದ ಆ ಇಂದುಮತಿಯನ್ನು ಬಯಸುತ್ತಲಿರುವ ಭೂಪತಿಗಳ ಪ್ರೇಮಿಗಳಿಗೆ ಮುಂಚರಿವ ದೂತಿಯರಂತಿರುವ ಶೃಂಗಾರಚೇಷ್ಟೆಗಳು ಬಗೆಬಗೆಯಾಗಿ ಹರಡತೊಡಗಿದುವು; ಅವುಗಳ ವಿವರವೆಂತೆಂದರೆ:–

ಅವರೊಳಗೊಬ್ಬ ರಾಜಕುಮಾರನು ಅಂದವಾಗಿ ಅರಳಿರುವ ಒಂದು ತಾವರೆಯ ಹೂವನ್ನು ಕಾವಿನಲ್ಲಿ ಹಿಡಿದು, ವಿನೋದಕರವಾಗಿ ಸುತ್ತಾಡಿಸುತ್ತಲಿದ್ದನು. ಅದರ ಎಸಳುಗಳು ಮೇಲೆ ಹಾರಾಡುತ್ತಲಿರುವ ದುಂಬೆಗೆ ತಾಗುತ್ತಲಿದ್ದುವು. ಹೂವಿನೊಳಗಡೆಯ ರಜವು–ಮಂಡಲಾಕಾರವಾಗಿ ನಿಲ್ಲುತ್ತಲಿದ್ದಿತು. ಇದರಿಂದ ಎಲೌ ಕನ್ಯೆಯೇ! ನೀನು ನನ್ನ ಕೈಹಿಡಿದರೆ–ನಿನ್ನೊಡನೆ ಹೀಗೆ ವಿನೋದದಿಂದ ವಿಹರಿಸುವೆನು ಎಂಬುದು ಆತನ ಮನೋಗತ. ಕಯ್ಯನಲ್ಲಾಡಿಸುವ ಅಂಗಚೇಷ್ಟೆಯನ್ನು ತೋರುವುದು ಅಪಲಕ್ಷಣವೆಂದು ಇಂದುಮತಿಯ ಆಶಯ.

ಮತ್ತೊಬ್ಬ ವಿಲಾಸಿಯಾದ ವಿಶ್ವಂಭರಾಧಿಪತಿಯು – ರತ್ನಗಳನ್ನು ಕೆತ್ತಿದ್ದ ಬಾಪುರಿಯನ್ನು ತೊಟ್ಟಿದ್ದನು, ಕೊರಳಿಗೆ ಹಾಕಿಕೊಂಡಿದ್ದು ಎದೆಯಮೇಲೆ ಜೋಲಾಡುತ್ತಲಿದ್ದ ಹೂವಿನಹಾರವು, ಅಥವಾ (ವಲ್ಲಿಯು) ಹೆಗಲಿನಿಂದ ಕೆಳಗೆಸರಿದು, ಭುಜಕೀರ್ತಿಯ ತುದಿಗೆ ತಗಲಿಕೊಂಡಿದ್ದಿತು. ಅದನ್ನು ಕಯ್ಯಿಂದೆತ್ತಿ ಮೋರೆಯನ್ನು ಓರೆಗೆ ತಿರುಗಿಸಿ, ಮೊದಲಿದ್ದಂತೆ ಸವರಿಸಿಕೊಳುತ್ತಲಿದ್ದನು. ಎಲೌ ಕಾಂತೆಯೇ! ನೀನು ನನ್ನನ್ನು ಒಪ್ಪಿದರೆ ಈ ಹೂವಿನ ಹಾರವನ್ನು ಹಿಡಿದಂತೆ ವಿಲಾಸದಿಂದ ನಿನ್ನ ಕೈ ಹಿಡಿಯುವೆನು ಎಂದು ಆತನ ಅಭಿಮತ; ತಲೆಯನ್ನು ಡೊಂಕುಮಾಡುವುದರಿಂದ ಮರೆಮಾಡಿಕೊಳ್ಳತಕ್ಕ ಆವುದೋ ಒಂದು ಡೊಂಕು ಇವನಲ್ಲಿರುವುದು, ಇವನು ಅನರ್ಹನು ಎಂಬುದು ಆಕೆಯ ಆಶಯ.

ಬೇರೊಬ್ಬ ಅರಸು – ಓರೆನೋಟದ ಸೊಬಗುಳ್ಳವನಾಗಿ, ಕಾಲ್ಬೆರಳುಗಳ ತುದಿಯನ್ನು ತುಸ ಮಡಿಸಿ, ಚಿನ್ನದ ಕಾಲುಮಣೆಯನ್ನು ಹೆಜ್ಜೆಯಿಂದ ಕೆರೆಯುತ್ತಲಿದ್ದನು, ಬೆರಳಿನುಗುರಿನ ಹೊಳವು – ಅಡ್ಡಲಾಗಿ ಹರಡುತ್ತಲಿದ್ದಿತು ; ಎಲೆ ವಧುವೇ! ನೀನು ಹೆರರನ್ನು ತೊರೆದು ಇಲ್ಲಿಗೆ ಬಂದು ನನ್ನನ್ನು ವರಿಸು ಎಂದು ಅವನ ಇಷ್ಟ ; ಕಾಲಿನಿಂದ ನೆಲವನ್ನು ಗೀಚುವುದು ನಿರ್ಭಾಗ್ಯಲಕ್ಷಣವೆಂದು ಇಂದುಮತಿಯ ಅಭಿಪ್ರಾಯ.

ಇನ್ನೊಬ್ಬ ನರನಾಥನು – ತಾನು ಕುಳಿತಿರುವ ಮಂಚದ ಒರಗುದಿಂಡಿನಮೇಲೆ ಎಡದ ತೋಳನ್ನಿಟ್ಟು, ಎತ್ತರವಾದ ಹೆಗಲುಳ್ಳವನಾಗಿ, ಹಿಂದಕ್ಕೆ ಓರೆಯಾಗಿ ತಿರುಗಿಕೊಂಡು, ತನ್ನ ಮಿತ್ರನೊಡನೆ ಮಾತನಾಡತೊಡಗಿದನು. ಅವನ ಕೊರಳಿನಲ್ಲಿನ ನೀಳವಾದ ಹೂವಿನ ಹಾರದ ತುದಿಯು – ಎಡದ ಟೊಂಕದ ಕೆಳಗಡೆಯಲ್ಲಿ ಜೋಲಾಡುತ್ತಲಿದ್ದಿತು; ಎಲೌ ಸುದತಿ! ನೀನು ನನ್ನ ಪಾಣಿಗ್ರಹಣವನ್ನು ಮಾಡಿಕೊಂಡರೆ ನಿನ್ನನ್ನು ನನ್ನ ಈ ಎಡದ ತೊಡೆಯಮೇಲೆ ಕುಳ್ಳಿರಿಸಿಕೊಂಬೆನು ಎಂಬುದು ಅವನ ಭಾವ; ಕಾಳಗದಲ್ಲಿ ಹಗೆಗಳಿದಿರಾದರೆ ಇವನು ಹಿಮ್ಮೆಟ್ಟುವ ಹೇಡಿ ಎಂಬುದು ಇಂದುಮತಿಯ ಅಂತರಂಗ.

ಮಗುದೊಬ್ಬ ತರುಣ ಮಹೀಪಾಲನು–ವಿಲಾಸವತಿಯಾದ ವನಿತೆಯರು ತಮ್ಮ ಕಿವಿಗಳಿಗಲಂಕರಿಸಿಕೊಳ್ಳುವ ಗೇದಗೆಯ ಹೂವಿನ ಬಿಳಿಯ ರೇಕನ್ನು ಹಿಡಿದು, ವಿಲಾಸಾರ್ಥವಾಗಿ ಉಗುರುಗಳಿಂದ ಸೀಳುತ್ತಲಿದ್ದನು. ಎಲೌ ಲಲನೆಯೇ! ನನ್ನನ್ನು ವಿವಾಹಮಾಡಿಕೊಂಡರೆ, ಇಂತಹ ಸುಕುಮಾರವಾದ ಕುಸುಮಗಳನ್ನು ನಿನಗೆ ಅಲಂಕರಿಸುವೆನು ಎಂದು ಆತನ ಹೃದಯಗತ; ಇವನು – ನಖದಿಂದ ತೃಣವನ್ನು ಛೇದಿಸುವ ದುರ್ಲಕ್ಷಣನು ಎಂಬುದು ರಾಜಪುತ್ರಿಯ ರಹಸ್ಯ.

ಅನ್ಯನಾದ ಒಬ್ಬ ಅವನಿಪಾಲನು – ಧ್ವಜದಂತೆಸೆವ ಗೆರೆಯಿಂದೊಡಗೂಡಿ, ಕೆಂದಾವರೆಯಂತೆ ಕಂಗೊಳಿಸುವ ಕರತಲದಿಂದ – ರತ್ನಗಳನ್ನು ಕೆತ್ತಿರತಕ್ಕ ಉಂಗುರಗಳ ಹೊಳವನ್ನೊಳಗೊಂಡಿರುವ ಪಗಡೆಯ ಕಾಯಿಗಳನ್ನು ಹಾರಿಸುತ್ತಲಿದ್ದನು, ನೀನು ನನಗೆ ಪ್ರಿಯವಲ್ಲಭೆಯಾದರೆ ನಿನ್ನೊಡನೆ ಪರಮಪ್ರೀತಿಯಿಂದ ಪಗಡೆಯನ್ನಾಡುವೆನೆಂದು ನರನಾಥನ ಅಭಿಪ್ರಾಯ. ಇವನು ಸಪ್ತವ್ಯಸನಗಳಲ್ಲೊಬ್ಬನಾದ ಅಕ್ಷವ್ಯಸನಿ, ಅಯೋಗ್ಯನು ಎಂದು ಇಂದುಮತಿಯ ಭಾವ.

ತದಿತರನೊಬ್ಬನು – ತನ್ನ ತಲೆಯಮೇಲಣ ಕಿರೀಟವು ಸ್ವಸ್ಥಾನದಲ್ಲಿ ಸರಿಯಾಗಿ ಕುಳಿತಿದ್ದರೂ, ಸ್ಥಳತಪ್ಪಿ ಸರಿದುಹೋಗಿರುವುದನ್ನು ಸರಿಮಾಡಿಕೊಳ್ಳುವವನಂತೆ, ಕರತಲದಿಂದ ಅಲುಗಿಸಿ ಹೊಂದಿಸಿಕೊಳ್ಳತೊಡಗಿದ್ದನು. ಆ ಮಕುಟಕ್ಕೆ ಕೆತ್ತಿದ್ದ ವಜ್ರಮಣಿಗಳ ಹೊಳವು–ಬೆರಳುಗಳ ಸಂದುಗಳಲ್ಲಿ ಬೆಳಗುತ್ತಲಿದ್ದಿತು. ಎಲೈ ಸುಂದರಾಂಗಿಯೇ ನೀನೆನ್ನ ಒಡತಿಯಾದರೆ ಈ ಕಿರೀಟದಂತೆ ತಲೆಯಮೇಲೆ ಕೂಡಿಸಿಕೊಂಡು ಲಾಲಿಸುವೆನು, ಮತ್ತು ನಿನ್ನ ಹೊರೆಯೇ ನನಗೆ ತೋರುವುದಿಲ್ಲ ಎಂಬುದು ಆ ಭೂರಮಣನ ಬಯಕೆ, ಶಿರದಮೇಲೆ ಕರವನಿಟ್ಟು ಕುಳಿತಿರುವುದು ದುರ್ಲಕ್ಷಣವೆಂದು ಇಂದುಮತಿಯ ಅಭಿಪ್ರಾಯ.

ಹೀಗೆ – ಕೆಲವುಮಂದಿ ಅರಸುಮಕ್ಕಳು – ತಂತಮ್ಮ ಮನೋಭಾವಗಳನ್ನು ಕರಚರಣಾದಿ ಚೇಷ್ಟೆಗಳಿಂದ ವ್ಯಕ್ತಗೊಳಿಸುತ್ತಿದ್ದರು, ರಾಜಕುಮಾರಿಯು – ಅವರಲ್ಲಿರುವ ದೋಷಗಳನ್ನರಿತು ಮುಂದುವರಿದಳು. ಆ ಇಂದುಮತಿಯ ಮುಂದೆ ಮರ್ಯಾದೆಯಿಂದ ದಾರಿತೋರುತ್ತ ಬರುತ್ತಲಿರುವ ಸುನಂದೆಯೆಂಬ ದ್ವಾರಪಾಲಿಕೆಯೋರ್ವಳು – ಆ ದೊರೆಮಕ್ಕಳ ವಂಶಾವಳಿಯ ಚರಿತ್ರೆಯನ್ನೆಲ್ಲ ಚೆನ್ನಾಗಿ ಬಲ್ಲವಳು, ಉತ್ತಮ ಪುರುಷನಂತೆ ಮಾತನಾಡುವುದರಲ್ಲಿ ಬಲು ಜಾಣೆ, ಆ ಅರಗುವರಿಯನ್ನು ರಾಜಮಂಡಲದಲ್ಲಿ ಕುಳಿತಿರುವ ಮಗಧರಾಜನ ಬಳಿಗೆ ಕರೆತಂದು ಕೈತೋರಿ ಇಂತೆಂದಳು:–

ಎಲೈ ರಾಜನ್ಯಕುಮಾರಿಯೇ! ಇದಕೊ, ಈತನು – ಶರಣಾಗತರಾದವರನ್ನು ಕೈಬಿಡದೆ ಅಭಯದಾನವನ್ನು ಮಾಡಿ ಕಾಪಾಡತಕ್ಕವನು, ಬಹು ಗಂಭೀರವಾದ ಸ್ವಭಾವದವನು, ಮಗಧದೇಶಗಳ ಮಹಾರಾಜನ ಪದವಿಯಲ್ಲಿ ನೆಲೆಗೊಂಡಿದ್ದಾನೆ, ಪರಿಪಾಲನ ಪರಿಪಾಟಿಯಿಂದ ಪ್ರಜೆಗಳ ಮನೋರಂಜನವನ್ನು ಮಾಡಿ, ಬಲು ಜಾಣನೆನಿಸಿ, ಉತ್ಕರ್ಷದ ಹೆಸರುವಾಸಿಯನ್ನು ಪಡೆದಿದ್ದಾನೆ, ಪರರನ್ನು ತಪಿಸುವಂತೆ ಮಾಡುವುದರಿಂದಲೇ ಈ ರಾಜನು – ಪರಂತಪನೆಂದು ಅನ್ವರ್ಥನಾಮವನ್ನು ಪಡೆದಿರುವನು. ಈ ಲೋಕದಲ್ಲಿ ಇನ್ನೂ ಬಹುಮಂದಿ ಇಳೆಯಾಣ್ಮರಿರುವರು, ಆದರೂ ಅವರೆಲ್ಲ ಹಾಗಿರಲಿ, ಅಶ್ವಿನಿ ಮೊದಲಾದ ನಕ್ಷತ್ರಗಳೂ, ಇತರ ತಾರೆಗಳೂ, ಗ್ರಹಗಳೂ ಕಂಗೊಳಿಸುತ್ತಲಿದ್ದರೂ, ಇರುಳು – ಚಂದಿರನೊಬ್ಬನಿಂದಲೇ ಪ್ರಶಸ್ತವಾದ ತೇಜಸನ್ನುಳ್ಳುದೆಂದು ಹೆಸರುವಾಸಿಯನ್ನು ಪಡೆದಿರುವ ಹಾಗೆ, ಈ ರಾಜನೋರ್ವನಿಂದಲೇ ಈ ಭೂಮಿಯನ್ನೂ (ರಾಜನ್ವತಿ) ಪ್ರಶಸ್ತ ರಾಜನುಳ್ಳುದ್ದನ್ನಾಗಿ ಪ್ರಾಜ್ಞರೆಲ್ಲ ಹೇಳುತ್ತಾರೆ. ಈ ಪರಂತಪ ರಾಜನು ಸಾಧಾರಣನಲ್ಲ, ಎಡೆಬಿಡದೆ ಯಾವಾಗಲೂ ಯಾಗಗಳನ್ನು ಮಾಡುತಲೇ ಇರುವುದರಿಂದ ಸಾಸಿರಗಣ್ಣನಾದ ಬಿಡುಗಣ್ಣರೊಡೆಯನನ್ನು ಅನವರತವೂ ತನ್ನ ಯಜ್ಞವಾಡದೊಳಿರುವಂತೆ ಮಾಡಿರುವನು. ಆ ಇಂದ್ರನ ಅಗಲಿಕೆಯಿಂದಲೇ ಸ್ವರ್ಗದಲ್ಲಿ ಇಂದ್ರಾಣಿಯು – ತನ್ನ ಬಿಳುಪಾದ ಕಪೋಲತಲಗಳಲ್ಲಿ ಜೋಲಾಡುತಿರುವ ಮುಂಗೂದಲನ್ನು ಏರಗಟ್ಟಿ ಕಲ್ಪತರುಕುಸುಮಗಳಿಂದ ಸಿಂಗರಿಸಿಕೊಳ್ಳದಿರುವಳು. ಎಲೌ ಸುಮಂಗಲಿಯೆ! ಈ ಪೊಡವಿಯಾಣ್ಮನೊಡನೆ ನೀನು – ಪಾಣಿಗ್ರಹಣ ಮಂಗಳವನ್ನು ಒಪ್ಪುವುದಾದರೆ ಬಹು ಚೆನ್ನಾಗಿರುವುದು, ಪ್ರಯಾಣ ಕಾಲದಲ್ಲಿ ಈತನ ಸಂಗಡ ತೆರಳಿ, ರಾಜಧಾನಿಯಾದ ಪಾಟಲೀಪುರವನ್ನು ಪ್ರವೇಶಿಸುವಲ್ಲಿ – ಆ ಪುಷ್ಪಪುರದ ರಾಜವೀಥಿಯ ಇಕ್ಕೆಲದ ಉಪ್ಪರಿಗೆಗಳ ಕಿಟಕಿಗಳೊಳಗೆ ಸಾಲಾಗಿ ನಿಲ್ಲುವ ರಮಣೀಮಣಿಯರ ಕಣ್ಣುಗಳಿಗೆಲ್ಲ ನಿನ್ನ ನೋಟದಿಂದ ಹಬ್ಬವನ್ನು ಮಾಡಬಹುದು. ಎಂದೀ ಪ್ರಕಾರ ವಿವರಿಸುತ್ತಲಿರುವ ಸುನಂದೆಯ ನುಡಿಯನ್ನು ಕೇಳಿದಳು, ಇಂದುಮತಿ ಅವನನ್ನು ನೋಡಿದಳು, ಮನವು ಭಾವಶೂನ್ಯವಾಯಿತು, ಮುಡಿಯೊಳು ಮುಡಿದಿರುವ ಎಳೆಗರಿಕೆಯಿಂದೊಡಗೂಡಿದ ಹಿಪ್ಪೆಯ ಹೂವಿನಸರವು ತುಸ ಸಡಿಲವಾಗುತ್ತಿರಲು, ಆತನನ್ನು ಕುರಿತು ಏನೊಂದು ಮಾತನ್ನೂ ಆಡದೆ, ಕೃಶಾಂಗಿಯಾದ ಇಂದುಮತಿಯು – ನಮಸ್ಕಾರಕ್ರಿಯೆಯಿಂದಲೇ ತಿರಸ್ಕರಿಸಿ ಮುಂಜರಿದಳು. ಅವಳ ಮನೋಭಾವವನ್ನರಿವುದರಲ್ಲಿ ಬಲುಜಾಣೆಯಾದ ಸುನಂದೆಯೇ–ಮಾನಸ ಸರೋವರದೊಳಗೆ ಗಾಳಿಯ ಪೆಟ್ಟಿನಿಂದ ಹುಟ್ಟಿದ ತೆರೆಗಳಸಾಲು – ನೀರಿನಲ್ಲಿ ತೇಲುವ ಅಂಚೆಯನ್ನು ಒಂದು ತಾವರೆಯಿಂದ

ಮತ್ತೊಂದು ತಾವರೆಯಬಳಿಗೆ ಕೊಂಡೊಯ್ಯುವಂತೆ, ರಾಜಪುತ್ರಿಯಾದ ಇಂದುಮತಿಯನ್ನು, ಬೇರೊಬ್ಬ ರಾಜಕುಮಾರನ ಬಳಿಗೆ ಕರೆದೊಯ್ದು ಇಂತೆಂದಳು:-

ಎಲೌ ಕೋಮಲಾಂಗಿಯೇ! ಈತನು – ಅಂಗದೇಶದ ಅರಸು, ಒಂದು ವೇಳೆ ಇಂದ್ರನಿಗೆ ಸಹಾಯ ಮಾಡಲೋಸುಗ ಸ್ವರ್ಗಕ್ಕೆ ತೆರಳಿದ್ದನು, ಆಗ ಈತನ ಹರೆಯದ ಸೊಬಗನ್ನು ಕಂಡ ಸುರಾಂಗನೆಯರೂ ಮನಸೋತು ಈತನನ್ನು ಬಯಸಿದರು, ಮತ್ತು – ಒಂದಾನೊಂದು ಕಾಲದಲ್ಲಿ ದಿಗ್ಗಜಗಳೆಲ್ಲ ಶಾಪಕ್ಕೊಳಗಾಗಿ, ಕಾಡಾನೆಗಳಾಗಿ ಹುಟ್ಟಿ, ನಾಡುಗಳಿಗೆಲ್ಲ ಕೇಡನ್ನೆಸಗುತ್ತ ಬಂದುವು. ಆಗ – ದೇವರ್ಷಿಗಳು ಗಜಶಾಸ್ತ್ರವನ್ನು ಬರೆದಿಟ್ಟರು, ಈ ಅಂಗನಾಥನು – ಆ ಶಾಸ್ತ್ರವನ್ನೆಲ್ಲ ಕಲಿತು, ಆನೆಗಳ ಹಾವಳಿಯನ್ನೆಲ್ಲ ಅಡಗಿಸಿದುದಲ್ಲದೆ ಅವುಗಳನ್ನೆಲ್ಲ ಶಿಕ್ಷಿಸಿ ಸ್ವಾಧೀನಕ್ಕೆ ತಂದನು. ಈಗಲೀತನು- ಭೂಮಿಯಲ್ಲಿದ್ದರೂ, ಸ್ವರ್ಗಭೂಮಿಯ ಸೌಭಾಗ್ಯವನ್ನು ಅನುಭವಿಸುತ್ತ ಭೂದೇವೇಂದ್ರನೆನಿಸಿದ್ದಾನೆ. ಮತ್ತೊಂದುವೇಳೆ- ದಿಗ್ವಿಜಯಾರ್ಥವಾಗಿ ಹೊರಟು, ಹಗೆಯರಸರನೆಲ್ಲ ಸದೆಬಡಿದನು, ಅರಸತಿಯರು – ತೋರವಾದ ಮುತ್ತುಗಳಂತೆ ಕಂಗೊಳಿಪ ಕಣ್ಣೀರಿನ ಹನಿಗಳನ್ನು ಎದೆಗಳಮೇಲೆ ಎಡೆಬಿಡದೆ ಕರೆಯುತ್ತಲಿದ್ದರು, ಇದರಿಂದ ಈ ಅಂಗನಾಥನು – ಆ ಅಂಗನೆಯರ ಕೊರಳುಗಳಲ್ಲಿ ಪೋಣಿಸುವ ದಾರವಿಲ್ಲದೆಯೇ ಮುತ್ತಿನ ಹಾರಗಳನ್ನು ಸಮರ್ಪಿಸುವಂತಿದ್ದಿತು. ಎಲೌ ಕಲ್ಯಾಣಿಯೇ! ಸಿರಿಸರಸತಿಯರಿಬ್ಬರೂ ನಿತ್ಯವೈರಿಗಳಾಗಿದ್ದರೂ, ದಾಕ್ಷಿಣ್ಯಪರನಾದ ಈತನಲ್ಲಿ ಗೆಳೆತನದಿಂದ ನೆಲೆಗೊಂಡಿರುವರು.

ಕಾಂತಿ, ಸತ್ಯ, ಪ್ರಿಯವಾಕ್ಕು ಇವುಗಳೊಡನೆ ಮೂರನೆಯವಳೆನಿಸಿ, ಒಡನಾಡಿಯಾಗಿರಲು ನೀನೇ ತಕ್ಕವಳು ಎಂದಳು. ತರುವಾಯ ಕುಮಾರಿಯು – ಆ ಅಂಗರಾಜನಲ್ಲಿದ್ದ ದೃಷ್ಟಿಯನ್ನು ಕೆಳಗೆ ಇಳಿಸಿ, ಗೆಳತಿಯಾದ ಸುನಂದೆಯನ್ನು, ಮುಂದುವರಿ ಎಂದಳು. ಆದರೆ ಮಂಗಳಾಂಗನಾದ ಅಂಗನಾಥನು – ಕಮನೀಯನೆನಿಸದೆ ಇರಲಿಲ್ಲ. ಸುಂದರಿಯಾದ ಇಂದುಮತಿಯೂ ಆತನ ಯೋಗ್ಯತೆಯನ್ನು ತಿಳಿಯಲಾರದವಳಾಗಿ ಇರಲಿಲ್ಲ. ಆದರೂ ಆ ಕನ್ಯೆಗೆ ಆ ವರನು ರುಚಿಸದಿರಲು ಕಾರಣವೇನು? ಎಂದರೆ – ಲೋಕವು ಭಿನ್ನ ರುಚಿಯುಳ್ಳುದಲ್ಲವೆ?

ಆಮೇಲೆ – ಬಾಗಿಲ ಕಾವಲುಗಾತಿಯಾದ ಸುನಂದನೆಯು – ಬವರಗಳೊಳಗೆ ಇದಿರಿಸುವ ಹಗೆಗಳಿಗೆ ಅಸದಳನೆನಿಸಿ, ಹೊಸದಾಗಿ ಮೂಡುವ ಚಂದಿರನಂತೆ ಬಲು ಸುಂದರನೂ ಆಗಿರುವ ಬೇರೊಬ್ಬ ಭೂಪಾಲನನ್ನು ತೋರಿ ಹೇಳತೊಡಗಿದಳು –

ಎಲೌ ಮಂದಯಾನೆಯಾದ ಇಂದುಮತಿಯೆ! ಇತ್ತ ನೋಡು: ಈತನು ಅವಂತಿದೇಶಾಧೀಶ್ವರನು, ಅಜಾನುಬಾಹುವೆನಿಸಿರುವನು, ಬಲು ಅಗಲವಾದ ಎದೆಯುಳ್ಳವನು, ದುಂಡಾಗಿಯೂ ಬಡತನದಿಂದೊಡಗೂಡಿಯೂ ಇರುವ ನಡುವಿನಿಂದೆಸೆವನು.

ಹಿಂದೆ – ಇನನ ಬೇಗೆಯನ್ನು ತಾಳಲಾರದೆ ಬೇಡಿಕೊಂಡ ಮಗಳ ಮಾತನ್ನು ಕೇಳಿ ವಿಶ್ವಕರ್ಮನು ಸಾಣೆಯಲ್ಲಿ ತೀಡಿದ ಬೆಂಗದಿರನಂತೆ ಬೆಳಗುತ್ತಲಿದ್ದಾನೆ. ಶಕ್ತಿತ್ರಯಸಂಪನ್ನನಾದ ಈ ಮಾರಾಯನು – ದಿಗ್ವಿಜಯಕ್ಕೆ ಹೊರಟಾಗಲೆಲ್ಲ, ಮುಂದುವರಿವ ವಾಜಿಗಳ ತುಳಿತದಿಂದೆದ್ದ ದೂಳಿಗಳು – ಇದಿರಿಸಬೇಕೆಂದಿರುವ ಇಳೆಯಾಣ್ಮರ ಚೂಡಾಮಣಿಗಳ ತೇಜಗಳನ್ನೆಲ್ಲ ಮುತ್ತಿ, ಹುಟ್ಟಿಲ್ಲದಂತೆ ಅಡಗಿಸುತ್ತವೆ. ಮತ್ತು – ತಣ್ಗದಿರನನ್ನು ತಲೆಯೊಳಾಂತಿರುವ ಮುಕ್ಕಣ್ಣನು ಮಹಾಕಾಲವೆಂಬೆಡೆಯಲ್ಲಿ ನೆಲೆಗೊಂಡಿರುವನು. ಅಲ್ಲಿಗೆ ಬಲು ಹತ್ತಿರದಲ್ಲಿಯೇ ಈ ಅವಂತಿನಾಥನೂ ವಾಸಮಾಡುತಲಿದ್ದಾನೆ, ಆದುದರಿಂದಲೇ ಕೃಷ್ಣಪಕ್ಷದಲ್ಲಿಯೂ ಕತ್ತಲಕಾಟವಿಲ್ಲದ ಇರುಳುಗಳನ್ನು ತನ್ನ ಹೆಂಡಿರುಗಳೊಡನೆ ಅನುಭವಿಸುತ್ತಲಿರುವನು. ಎಲೌ ತರುಣಿಯೇ! ಸಿಪ್ರಾನದಿಯ ಅಲೆಗಳ ನಡುವೆ ಹಾಯಾಗಿ ಹರಿದುಬರುವ ವಾಯುವನ್ನು ಸೇವಿಸುತ, ಇಕ್ಕೆಲದ ತೋಟಗಳ ಸಾಲುಗಳಲ್ಲಿ ಈತನೊಡನೆ ವಿಹರಿಸಲು ನಿನ್ನ ಚಿತ್ತವು ರುಚಿಕೊಂಬುದಾದರೆ – ತರುಣನಾದ ಈ ತಿರೆಯಾಣ್ಮನೊಡನೆ ಪಾಣಿಗ್ರಹಣ ಮಂಗಳವನ್ನು ಅನುಭವಿಸು ಎಂದ ಸುನಂದೆಯ ನುಡಿಯನಾಲಿಸಿ, ಬಂಧುಗಳೆಂಬ ತಾವರೆಗಳನ್ನು ಬೆಳಗಿಸುತ್ತ, ಹಗೆಯೆಂಬ ಹೆಸರನ್ನು ತನ್ನ ಪ್ರತಾಪದಿಂದ ಬತ್ತಿಸತಕ್ಕವನೂ ಆಗಿರುವ ಆ ಅವಂತೀಶ್ವರನಲ್ಲಿ. ಬಲು ಸುಕುಮಾರಿಯಾದ ಆ ಕುಮಾರಿಯು – ಭಾಸ್ಕರನಲ್ಲಿ ಕುಮುದಿನಿಯು ಹೇಗೋ ಹಾಗೆ ತನ್ನ ಮನೋಭಾವವನ್ನು ನೆಲೆಗೊಳಿಸಲಿಲ್ಲ.

ಬಳಿಕ ಮುಂದುವರಿವ ಮಂದಯಾನೆಯಾದ ಸುನಂದನೆಯು ಇದಿರಿಗೆ ಭಾವಶೂನ್ಯಳಾಗಿ ನಿಂತಿರುವ ಕುಂದರದನೆಯಾದ ಇಂದುಮತಿಯನ್ನು ನೋಡಿದಳು, ಅರಳಿದ ತಾವರೆಯ ಎಸಳಿನಂತೆ ಹೊಳೆವ ಮೈ ಬೆಳಕು, ಸಕಲಸುಗುಣಸಂಪನ್ನೆ, ವಿಧಿಯ ಮಧುರವಾದ ಸೃಷ್ಟಿ, ಇಂತೆಸೆವ ಆ ಸುಮುಖಿಯ ಭಾವವನ್ನು ಅರಿತಳು, ಹಾಗೆಯೇ ತುಸಮುಂದೆ ಅನೂಪದೇಶದ ಪ್ರತೀಪಭೂಪನ ಬಳಿಗೈತಂದು ಇಂತೆಂದಳು–

ಕುಂದದಿರುವ ಗುಣಗಳಿಂದೆಸೆವ ಓ ಇಂದುಮುಖಿ! ಕಾಳಗಗಳ ಕೇಳಿಗಳೊಳಗೆ ಸಾಸಿರ ತೋಳುಗಳ ಬಲವನ್ನು ತೋರಿ, ಸರ್ವಯಾಗಗಳನ್ನೂ ಆಚರಿಸಿ,

ಹದಿನೆಂಟು ದ್ವೀಪಗಳೊಳಗೂ ಯೂಪಸ್ತಂಭಗಳನ್ನು ನಟ್ಟು ಸರ್ವಪ್ರಜಾ ಮನೋರಂಜನಂಗೈದುದರಿಂದ ಹೆರರು ಪಡೆಯಲು ಅಸದಳವೆನೆಸಿದ ರಾಜಾ ಎಂಬ ಹೆಸರು ವಾಸಿಗೆ ಭಾಗಿಯಾಗಿ, ದತ್ತಾತ್ರೇಯನಿಂದ ಯೋಗವಿದ್ಯೆಯನ್ನು ಕಲಿತು, ಬ್ರಹ್ಮವಿದನೂ ಆಗಿ, ಕೃತವೀರ್ಯ ಮಹಾರಾಜನ ಸತ್ಪುತ್ರನೆನಿಸಿದ್ದ ಕಾರ್ತವೀರ್ಯಾರ್ಜುನನನ್ನು ಕೇಳಿಬಲ್ಲೆಯಷ್ಟೆ? ಆ ಹೇಹಯರಾಜನು ಆವ ನಾಡಿನೊಳಗೆ ಆವ ಮಾನವನೇ ಆಗಲಿ, ಕೆಟ್ಟ ಕೆಲಸವನ್ನು ಮಾಡಬೇಕೆಂದು ಬಗೆದುದೇ ಆದರೆ, ಆ ಕೂಡಲೇ ಬಿಲ್ಲನಾಂತು ಅವನ ಮನದೊಳಗೆ ಕಾಣಿಸಿಕೊಂಡು, ದುರಾಲೋಚನೆಯ ಸುಳಿವನ್ನೇ ಅಡಗಿಸುತ್ತಲಿದ್ದ ಧೀರನಲ್ಲವೆ? ಮತ್ತು – ಕೈಗಳೊಳಗೆ ಬಿಲ್ಲುಗಳನ್ನು ಹಿಡಿದು, ಹೆದೆಯನ್ನೇರಿಸುವವರೆಗೆ ತೋಳುಗಳು ಅಲುಗದೆ ನಿಲ್ಲಲು, ಸಿಟ್ಟೇರಿ, ಕೈಹರಿಯದೆ, ಹತ್ತು ಮೋರೆಗಳಿಂದಲೂ ನಿಟ್ಟುಸಿರನ್ನು ಬಿಡುತ್ತ, ಕಟ್ಟಿಗೊಳಗಾಗಿ, ಇಂದ್ರಾದಿಗಳನ್ನು ಜಯಿಸಿದ್ದ ಲಂಕಾ ಸಾರ್ವಭೌಮನಾದ ರಾವಣನೂ– ಈತನ ಸೆರೆಮನೆಯೊಳಗೇ ಅಲ್ಲವೆ ತಾನಾಗಿ ದಯೆಗೈಯ್ಯುವವರೆಗೂ ನಿಲುಕಿ ನರಳುತ್ತಲಿದ್ದನು. ಇದಕೊ, ಇದಿರಿಗೆ ಕಾಣಬರುವ ಈ ಪ್ರತೀಪನೆಂಬ ಭೂಮಿಪಾಲನು ಆ ಕಾರ್ತವೀರ್ಯ ಮಹಾರಾಜನ ಸಂತತಿಯಲ್ಲಿ ಸಮುದ್ಭವಿಸಿದವನು. ಶಾಸ್ತ್ರವಿದರೆನಿಸಿದ ಹಿರಿಯರನ್ನು ಸೇವಿಸತಕ್ಕವನು, ಇದಲ್ಲದೆ "ಲಕ್ಷ್ಮಿಯು – ಒಂದೆಡೆಯಲ್ಲಿಯೂ ನೆಲೆಯಾಗಿ ನಿಲ್ಲತಕ್ಕವಳಲ್ಲ, ಸ್ವಭಾವದಿಂದಲೇ ಬಹು ಚಪಲಳು ಎಂಬ ಆಕೆಯ ಕೆಟ್ಟ ಹೆಸರುವಾಸಿಯನ್ನು ತೊಡೆದುಬಿಟ್ಟಿರುವನು. ಮತ್ತು – ಧುರಧೀರನಾದ ಈ ದೊರೆಯು – ಆಯೋಧನದಲ್ಲಿ ಅಗ್ನಿಯನ್ನೇ ಸಹಾಯವನ್ನಾಗಿ ಪಡೆದು, ಕ್ಷತ್ರಿಯರ ಕುಲಕ್ಕೆ ಕಾಳರಾತ್ರಿಯೆನಿಸಿದ ಪರಶುರಾಮನ ಗಂಡುಗೊಡಲಿಯ ಮೊನೆಯಾದ ಮೋರೆಯನ್ನು ನೈದಿಲೆ ಹೂವಿನೇಣಿಗೆ ಎಣೆಯಾಗಿ ಎಣಿಸಿದ್ದಾನೆ. ಮಾಹಿಷ್ಮತೀ ನಗರಿಯೆಂಬ ನಾರಿಯ ಪೌಳಿಯ ಬುಡವೆಂಬ ಟೊಂಕಕ್ಕೆ ಒಡ್ಯಾಣದಂತಿರುವ, ಸುತ್ತಲೂ ಹರಿಯತಕ್ಕ ಜಲಪ್ರವಾಹದಿಂದ ರಮಣೀಯವೆನಿಸಿದ ರೇವಾನದಿಯನ್ನು ಉಪ್ಪರಿಗೆಯ ಮೇಲಣ ಕಿಟಕಿಯಿಂದ ನೋಡುತ್ತ, ಆನಂದಿಸಬೇಕೆಂಬ ಬಯಕೆಯು ನಿನಗೆ ಇದ್ದುದೇ ಆದರೆ, ಆಜಾನುಬಾಹುವಾದ ಈ ಪೊಡವಿಯಾಣ್ಮನ ತೊಡೆಯಮೇಲೆ ಲಕ್ಷ್ಮಿಯಂತೆ ಕುಳ್ಳಿರು ಎಂದಳು. ಮಾಹಿಷ್ಮತೀ ನಗರದರಸು ಬಹು ಪ್ರೀತಿಕರವೆನಿಸಿದ ದರ್ಶನವುಳ್ಳವನಾದರೂ, ಇಂದುಮತಿಯ ಮನಸ್ಸಿಗೆ ರುಚಿಸಲಿಲ್ಲ. ಶರದೃತುವಿನಲ್ಲಿ ಮೋಡಗಳ ಆವರಣವಿಲ್ಲದೆ ಚಂದ್ರನು– ಪರಿಪೂರ್ಣ ಕಳೆಗಳುಳ್ಳವನಾಗಿದ್ದರೂ ಕಮಲಲತೆಗೆ ರುಚಿಸುವುದಿಲ್ಲವಲ್ಲವೆ?

ಆ ಹಿಂದೆ – ಸದಾಚಾರದಿಂದ ಪರಿಶುದ್ಧವೆನಿಸಿರುವ ತಾಯಿತಂದೆಗಳ ಕುಲಗಳೆರಡಕ್ಕೂ ಪ್ರಕಾಶಕನೆನಿಸಿ, ಸ್ವರ್ಗಾದಿಲೋಕಗಳಲ್ಲಿಯೂ

ಹೊಗಳಿಸಿಕೊಳ್ಳತಕ್ಕವನಾಗಿರುವ ಶೂರಸೇನ ದೇಶಾಧೀಶ್ವರನಾದ ಸುಷೇಣನನ್ನು ತೋರಿಸಿ, ರಾಣೀವಾಸದ ಸೇವಕಳಾದ ಸುನಂದೆಯು – ಇಂದುಮತಿಯನ್ನು ಕುರಿತು ಮರಳಿ ಹೇಳತೊಡಗಿದಳು –

ಅಮಂದಮತಿಯಾದ ಎಲೆ ಇಂದುಮತಿಯೆ! ಇತ್ತ ನೋಡು, ಈ ಪಾರ್ಥಿವನು – ನೀಪವಂಶದಲ್ಲಿ ಜನಿಸಿದವನು. ವಿಧಿಯನ್ನು ಅನುಸರಿಸಿ ಯಾಗಗಳನ್ನು ಆಚರಿಸುತ್ತಿರುವವನು, ಶಾಂತವಾದ ತಪೋವನವನ್ನು ಹೊಕ್ಕಿರುವ ಗೋ, ವ್ಯಾಘ್ರ, ಗಜ, ಸಿಂಹ ಮೊದಲಾದ ಜಂತುಗಳು–ತಮ್ಮ ಜಾತಿಸಿದ್ಧವಾದ ವೈರವನ್ನು ತೊರೆದು, ಒಂದರೊಡನೊಂದು ಗೆಳತನದಿಂದಿರುವ ಹಾಗೆ, ಈತನಲ್ಲಿ – ಜ್ಞಾನ, ಮೌನ, ಕ್ಷಮಾ, ಶಕ್ತಿ ಮುಂತಾದ ಗುಣಗಳು ಸ್ವಾಭಾವಿಕವಾದ ವಿರೋಧವನ್ನು ಬಿಟ್ಟು ಒಡನಾಡಿಗಳಾಗಿರುವುವು. ತಣ್ಗದಿರನ ಬೆಳ್ದಿಂಗಳಿನಂತೆ ಈತನ ಕಾಂತಿಯು – ನಯನಾನಂದಕರವೆನಿಸಿ, ತನ್ನ ಮನೆಯೊಳಗೆ ಹರಡಿ ಇದೆ. ಸಹಿಸಲಸದಳವೆನಿಸಿದ ಈತನ ಪ್ರತಾಪವಾದರೆ ಉಪ್ಪರಿಗೆಗಳ ಮೇಲೆ ಹೇರಳವಾಗಿ ಹುಲ್ಲು ಬೆಳೆದಿರುವ ಹಗೆಗಳ ಪುರಗಳೊಳಗೆ ಹರಡಿರುವುದು. ಈತನು – ತನ್ನ ರಾಣಿವಾಸದ ರಮಣೀಮಣಿಯರೊಡನೆ ಕಳಿಂದ ಕನ್ಯೆಯಾದ ಯಮುನೆಯಲ್ಲಿ ಜಲಕ್ರೀಡೆಯನ್ನೆಸಗಿದಾಗ ಆ ಸುಂದರಿಯರ ಮೆಯ್ಯ ಚಂದನವೆಲ್ಲ ಕದಡಿಹೋಗುವುದು. ಆಗಲಾ ಸೂರ್ಯತನಯಳು ಈ ಸುಷೇಣ ಭೂರಮಣನ ನಗರಿಯಾದ ಮಧುರೆಯ ಬಳಿಯೊಳಿದ್ದು ಗಂಗಾಸಂಗಮವಿಲ್ಲದಿದ್ದರೂ ಸಂಗಮವನ್ನು ಪಡೆದಿರುವಂತೆ ಬಣ್ಣದಿಂದ ಕಾಣಬರುವಳು. ಮತ್ತು – ಪೂರ್ವದಲ್ಲಿ ಆ ಯಮುನೆಯೊಳಗೆ ಕಾಳಿಯುವೆಂಬ ಒಂದು ಮಹಾಸರ್ಪವು ಮನೆಮಾಡಿಕೊಂಡಿದ್ದಿತು. ಗರುಡನು ಬಂದು ಅದನ್ನು ಬೆದರಿಸಿದನು, ಸುಷೇಣನು ಆ ಭೋಗಿವರನಿಗೆ ಅಭಯದಾನವನ್ನು ಮಾಡಿದುದರಿಂದ, ಅದು ಒಂದು ದಿವ್ಯರತ್ನವನ್ನು ಬಹುಮಾನವಾಗಿ ಕೊಟ್ಟಿತು, ಆ ಮಣಿಯನ್ನು ಆತನು – ವಕ್ಷಸ್ಥಲದಲ್ಲಿ ಸಿಂಗರಿಸಿಕೊಂಡು ತನ್ನ ಸೊಬಗಿನಿಂದ ಕೌಸ್ತುಭರತ್ನದಿಂದ ಅಲಂಕೃತನಾದ ಶ್ರೀ ಕೃಷ್ಣನನ್ನು ಲಜ್ಜೆಗೊಳಿಸುವಂತೆ ಕಾಣಬರುತ್ತಾನೆ. ಎಲೌ ರಮಣಿಯೇ! ಈ ಧರಣೀರಮಣನಾದ ತರುಣನನ್ನು ರಮಣನನ್ನಾಗಿ ಭಾವಿಸು. ಕುಬೇರೋದ್ಯಾನಕ್ಕಿಮ್ಮಡಿಯಾದ ಸೊಬಗಿನಿಂದ ಮೆರೆವ ಈತನ ಪುರೋದ್ಯಾನವಾದ ಬೃಂದಾವನದಲ್ಲಿ – ಕೋಮಲವಾದ ತಳಿರುಗಳ ಮೇಲುಹಾಸಿಗೆಯನ್ನು ಪಡೆದಿರುವ ಹೂವಿನ ಸುಪ್ಪತ್ತಿಗೆಯಲ್ಲಿ ಪವಳಿಸಿ ಆನಂದಿಸಬಹುದು ಇದೂ ಅಲ್ಲದೆ, ಅಲ್ಲಿ – ಗೋವರ್ಧನ ಪರ್ವತವುಂಟು, ಮಳೆಯ ಹನಿಗಳಿಂದ ನನೆದು, ಶಿಲಾಜಿತುವಿನ ಅಥವಾ ಕಲ್ಲುಹೂಗಳ ವಾಸನೆಯನ್ನು ಪಡೆದು, ಬೆಳಗುತ್ತಲಿರುವ ಗವಿಗಳ ಬಳಿಯಲ್ಲಿನ

ಅಂದವಾದ ಬಂಡೆಗಳಮೇಲೆ ಹಾಯಾಗಿ ಕುಳಿತು, ಮಳೆಗಾಲದಲ್ಲಿ ಸಂತೋಷದಿಂದ ಕುಣಿಯುತ್ತಲಿರುವ ನವಿಲುಗಳ ನೃತ್ಯವನ್ನು ನೋಡುತ ಆನಂದಿಸಲೂಬಹುದು. ಎಂದ ಸುನಂದನೆಯ ವಚನವನಾಲಿಸಿ ಇಂದುಮತಿಯು – ಬೇರೊಬ್ಬ ಭೂವರನಿಗೆ ಭಾರ್ಯೆಯಾಗುವುದು ಭವಿತವ್ಯತೆಯಾಗಿದ್ದುದರಿಂದ, ಸಾಗರದಲ್ಲಿಳಿಯಲು ಹರಿದುಹೋಗುತ್ತಲಿರುವ ಹೊಳೆಯು – ದಾರಿಯಲ್ಲಿ ದೊರೆತ ಗಿರಿಯನ್ನು ಮೀರಿಹೋಗುವ ಹಾಗೆ ಆ ನರವರನನ್ನು ಮೀರಿ ಮುಂದಕ್ಕೆ ಸರಿದಳು.

ತದನಂತರದಲ್ಲಿ – ಅಂತಃಪುರದಲ್ಲಿನ ಕಿಂಕರಿಯಾದ ಸುನಂದೆಯು– ಇಂಗಿತವನ್ನರಿವುದರಲ್ಲಿ ಬಹು ಚತುರಳು, ಮುಂದೆ ಹೊರಟಳು. ಹೇಮಾಂಗದಾಲಂಕೃತನಾಗಿರುವ ಹೇಮಾಂಗದನೆಂಬ ಕಳಿಂಗ ದೇಶಾಧಿಪತಿಯ ಬಳಿಗೆ ಬಂದು ನಿಂತಳು, ಆತನು – ಹಗೆಗಳೊಡ್ಡನ್ನೆಲ್ಲ ಗುಡ್ಡೆಗೆಡಹಿದವನು ಎಂಬುದನ್ನು ಬಲ್ಲವಳು. ಪೂರ್ಣೆಂದುವದನೆಯಾದ ಇಂದುಮತಿಯ ಕಡೆಗೆ ತಿರುಗಿ, ಎಲೌ ಬಾಲೆ! ಈತನೇ ಕಲಿಂಗನಾಥನು, ಇವನನ್ನು ಹೇಮಾಂಗದನೆಂದು ಕರೆಯುತ್ತಾರೆ, ಮಹೇಂದ್ರಾದ್ರಿಗೆಣೆಯೆನಿಸಿದ ಬಾಹುಸಾರವುಳ್ಳವನು, ಮಹೇಂದ್ರ ಪರ್ವತಕ್ಕೂ, ಮಹೋದಧಿಗೂ ಸ್ವಾಮಿಯೆನಿಸಿರುವನು. ಅವುಗಳ ಈತನಿಗೆ ಗಿರಿಜಲದುರ್ಗಗಳು. ಈತನು – ದಿಗ್ವಿಜಯಕ್ಕೆ ಹೊರಡುವ ವೇಳೆಯಲ್ಲಿ ದಳದ ದಂತಾವಳಿಗಳು ತೆರಳುತ್ತಲಿರುವುದನ್ನು ನೋಡಿದರೆ, ಮಹೇಂದ್ರಾಚಲವೇ ಅನೇಕಾಕಾರಗಳನ್ನಾಂತು ಮುಂದೆ ತೆರಳುವಂತಿರುವುದು. ಎಲೌ ಲಲನೆ! ನಾನು ಏನು ಹೇಳಲಿ! ಈತನು ಬಿಲ್ಲಾಳುಗಳೊಳಗೆ ಮೊದಲನೆಯವನೆನಿಸಿರುವನು, ಎರಡು ಕೈಗಳಿಂದಲೂ ಹಗೆಗಳಮೇಲೆ ಅಂಬುಗಳನ್ನಿಡುವಾಗ ಹೆದೆಯೇರಿಸುವ ಸಡಗರದಲ್ಲಿ ನೀಳವಾದ ತೋಳುಗಳೊಳಗೆ ಕರೆಗಟ್ಟಿರುವ ಕರಿಯ ಗೆರೆಗಳು ಕಾಣಬರುತಲಿವೆ. ಹಗೆಯರಸರ ಸಿರಿಯನ್ನು ಸೆರೆಹಿಡಿದು ಸೆಳೆದು ತರುವಾಗ – ಅವಳ ಕಣ್ಣುಗಳಿಂದ ಹರಿದ ಕಾಟಕೆಯಿಂದೊಡಗೂಡಿರುವ ಕಣ್ಣೀರಿನ ಕಾಲುವೆಗಳೊ ಎಂಬಂತೆ ತೋರಿಬರುವುವು. ಈ ರಣಧೀರನು – ತನ್ನ ಪ್ರಾಸಾದದೊಳಗೆ ಸುಪ್ಪತ್ತಿಗೆಯಮೇಲೆ ಹಾಯಾಗಿ ಪವಳಿಸಿರುವಾಗ – ವಾತಾಯನದೊಳಗೆ ಹತ್ತಿರದಲ್ಲಿಯೇ ಕಡಲಿನಲೆಗಳು ಕಾಣಬರುತ್ತವೆ. ಆ ಮಹೋದಧಿಯೇ – ಒಂದೊಂದು ಜಾವದ ತುದಿಯನ್ನು ಸೂಚಿಸುವ ವಾದ್ಯಧ್ವನಿಯಿಲ್ಲದೆ ತನ್ನ ಗಂಭೀರವಾದ ದನಿಯಿಂದಲೇ ಭೂವಲ್ಲಭನಿಗೆ ಬೋಧೆಯಗೈಯ್ಯುತ್ತಲಿರುವುದು. ಈ ಮಹಾರಾಯನನ್ನು ಮದುವೆಮಾಡಿಕೊಳ್ಳಲು ಮನವೊಪ್ಪಿದರೆ – ಮುಚ್ಚಂಜೆಯ ಹೊತ್ತಿನಲ್ಲಿ ತಾಳೆಯ ಮರಗಳ ಅಲ್ಲಾಟದಿಂದ ಮರ್ಮರವೆಂಬ ದನಿಯುನ್ನೊಳಗೊಂಡಿರುವ ಮಹೋದಧಿಯ ಮಗ್ಗಲಹಾದಿಯೊಳಗೆ ಮನೋಹರವಾದ ಮಂದಗಮನದಿಂದ ಹಾಯಾಗಿ

ವಿಹರಿಸಬಹುದು, ಮತ್ತು–ಆ ಹೊತ್ತಿನಲ್ಲಿ–ದ್ವೀಪಾಂತರಗಳಿಂದ ತರಿಸಿರುವ ಲವಂಗ ಕುಸುಮಗಳಮೇಲೆ ಹರಿದುಬರುವ ಮಂದಮಾರುತದಿಂದ ಮೈಬೆವರಿನ ಹನಿಗಳನ್ನು ಪರಿಹರಿಸಿಕೊಳ್ಳಬಹುದು ಎಂದು ಹೇಳಿ ವಿರಮಿಸಿದಳು. ಆದರೆ – ಆಕಾರ ವಿಶೇಷದಿಂದ ಅಧೀನತೆಯನ್ನು ಪಡೆಯತಕ್ಕವಳಾಗಿರುವ ಆ ಭೋಜಾನುಜೆಯು – ಈ ಪ್ರಕಾರ ಸುನಂದೆಯಿಂದ ಆಶೆಗೊಳಿಸಲ್ಪಟ್ಟಳಾದರೂ, ಯಾವನಾದರೊಬ್ಬ ಪುರುಷನು – ತನ್ನ ಪೌರುಷವೆಂಬ ನೀತಿಯಿಂದ ಲಕ್ಷ್ಮಿಯನ್ನು ತನಗೊಲಿಯುವಂತೆಸಗಿದರೂ, ದೈವಸಹಾಯವಿಲ್ಲದಿದ್ದರೆ ಆ ಲಕ್ಷ್ಮಿಯು ಒಲಿಯದೆ ತೊಲಗುವಹಾಗೆ, ಆಕೆಯೂ ಹೇಮಾಂಗದನೆಂಬ ನರದೇವನಿಗೆ ವಶಳಾಗದೆ ಆತನಿಂದ ಹಿಂತಿರುಗಿ ಮುಂದಡಿಯನಿಟ್ಟಳು.

ಚತುರಳಾಗಿರುವ ದೌವಾರಿಕೆಯಾದ ಸುನಂದನೆಯು–ಆ ಕೂಡಲೇ ಅಕೆಯ ಚಿತ್ತವೃತ್ತಿಯನ್ನರಿತು, ಪಾಂಡ್ಯದೇಶದೊಳಗೆ ಕನ್ಯಾಕುಬ್ಜದ ಬಳಿಯಲ್ಲಿರುವ ನಾಗಪುರಕ್ಕೆ ದೊರೆಯಾಗಿ, ಆಕಾರದಲ್ಲಿ ದೇವತಾ ಪುರುಷನಂತೆ ಮೆರೆಯುತ್ತಲಿರುವ ವೀರಪುರುಷನ ಹತ್ತಿರದಲ್ಲಿ ನಿಂತು – ಭೋಜಾನುಜೆಯನ್ನು ನೋಡಿ, ಎಲೌ ಚಕೋರನಯನೆ! ನಿನ್ನಯ ನೋಟವನ್ನು ಇತ್ತ ಕಳುಹು– ಎಂದುಸಿರಿ, ಬಳಿಕ ಹೇಳತೊಡಗಿದಳು

ಎಳೆಬಿಸಿಲಿನ ಸುಳಿವಿನಿಂದೊಡಗೂಡಿ, ಹರಡಿ ಹರಿಯುತ್ತಲಿರುವ ಕಿರು ಹೊಳೆಯಿಂದ ಮೆರೆಯುವ ಗಿರಿಯಂತೆ ಕುಳಿತಿರುವ ಈತನನ್ನು ಅವಲೋಕಿಸು. ಹೆಗಲಮೇಲೆ ತೋರಮುತ್ತಿನ ಹಾರಗಳನ್ನು ಇಳಿಯ ಹಾಕಿಕೊಂಡು, ಗಮಗಮಿಸುತಲಿರತಕ್ಕ ಹರಿಚಂದನದಿಂದ ಬೆಳಗುತ್ತಲಿರುವ ಈತನೇ ಪಾಂಡ್ಯ ಮಹಾರಾಜನು. ಈತನನ್ನು ಸಾಧಾರಣನೆಂದು ನೆನೆಯಬೇಡ; ಈತನು – ದೀಕ್ಷೆಯನ್ನು ಕೈಗೊಂಡು, ಅಶ್ವಮೇಧಯಾಗವನ್ನಾಚರಿಸಿ, ಮಂಗಳಸ್ನಾನವನ್ನು ನೆರವೇರಿಸಿ, ಆರ್ದ್ರಶಿರನಾಗಿರುವಲ್ಲಿ – ಹಿಂದೆ ರವಿಯ ಪಯಣಮಂ ತಡೆಯಲು ಬೆಳೆಯತೊಡಗಿದ ವಿಂಧ್ಯಾದ್ರಿಯ ಉಬ್ಬಟ್ಟೆಯನ್ನಡಗಿಸಿ, ತುಸವೂ ಉಳಿಯದಂತೆ ಕಡಲನ್ನೆಲ್ಲ ಕುಡಿದು, ಮರಳಿ ಉಗುಳಿದ ಮಹಾಮುನಿಯೆನಿಸಿರುವ ಆಗಸ್ತ್ಯನೇ ಐತಂದು "ಏನೈ ಧುರಧೀರನೆ! ಸುಖಾವಭೃತವನ್ನೆಸಗಿದೆಯಾ?" ಎಂದು ಪ್ರೀತಿಪೂರ್ವಕವಾಗಿ ಈತನನ್ನು ಕುರಿತು ಕುಶಲಪ್ರಶ್ನೆಯಂಗೈಯುವನು. ಪೂರ್ವದಲ್ಲಿ–ಲಂಕಾರಮಣನಾದ ರಾವಣನು–ಹೆರರು ಪಡೆಯಲು ಅಸದಳವೆನಿಸಿದ ಬ್ರಹ್ಮಶಿರವೆಂಬ ಅಸ್ತ್ರವನ್ನು ಹರನ ಅನುಗ್ರಹದಿಂದ ಪಡೆದಿದ್ದ ಈತನಿಂದ ಖರನೇ ಮುಂತಾದ ರಕ್ಕಸರಿಗೆ ಮನೆಯಾದ ಜನಸ್ಥಾನಕ್ಕೆ ಏನು ತೊಂದರೆ ಬರುವುದೋ ಎಂದು ಅಳುಕಿ,

ಈತನೊಡನೆ ಸಂಧಿಯನ್ನು ಮಾಡಿಕೊಂಡು, ಬಳಿಕ ಕೊಬ್ಬಿದವನಾಗಿ, ಇಂದ್ರನೇ ಮೊದಲಾದವರನ್ನು ಜಯಿಸಲೆಳಸಿ ಹೊರಟನು.

ಹೇರಳವಾದ ವೀಳಯದೆಲೆಯ ಬಳ್ಳಿಗಳು ಹಬ್ಬಿರುವ ಅಡಿಕೆಯ ಮರಗಳಿಂದಲೂ, ಏಲಕ್ಕಿಯ ಲತೆಗಳಿಂದ ಆವರಿಸಲ್ಪಟ್ಟಿರುವ ಚಂದನತರುಗಳಿಂದಲೂ, ರಮಣೀಯವಾಗಿರುವ ಮಲಯ ಪರ್ವತದ ಬುಡದಲ್ಲಿನ ಬೈಲುಗಳೊಳಗೆ, ಹಸನಾದ ಹೊಂಗೆಯ ಚಿಗುರುಗಳ ಹಾಸಿಗೆಯ ಮೇಲೆ ಹಾಯಾಗಿ ಕುಳಿತು, ಅಡಿಗಡಿಗೆ ಸುಖಿಸಬೇಕೆಂದು ನಿನಗೆ ಬಯಕೆಯಿದ್ದರೆ, ಹಸನ್ಮುಖಳಾಗಿ ಈತನ ಕೈ ಹಿಡಿಯಲು ಅನುಕೂಲಳಾಗು. ಹಾಗಾದರೆ – ಎಲೌ, ಭಾವಾಮಣಿ ಈತನೋ, ಕನ್ನೈದಿಲೆಯಂತೆಸೆವ ಮೈಬಣ್ಣದಿಂದ ಬೆಳಗುತ್ತಲಿದ್ದಾನೆ. ನೀನಾದರೆ ಗೋರೋಚನದಂತೆ ಗೌರವರ್ಣದಿಂದ ತಳತಳಿಸುತ್ತಲಿದ್ದೀಯೆ. ಈ ನಿಮ್ಮಿಬ್ಬರ ಕರಗ್ರಹಣಮಂಗಳವು–ಕಾರ್ಮುಗಿಲ ಮೋಡಮಿಂಚುಗಳ ಕೂಟದಂತೆ ಮೇಲೆಮೇಲೆ ಶುಭಕರವೆನಿಸುವುದಲ್ಲದೆ, ಪರಸ್ಪರ ಶೋಭಾಕರವಾಗಿಯೂ ಪರಿಣಮಿಸುವುದು ಎಂದು ಹೇಳಿ, ಆಕೆಯ ಭಾವೋದಯವನ್ನು ಇದಿರುನೋಡುತ್ತಲಿದ್ದಳು.

ಅಂತಾ ಸುನಂದೆಯ ಬಹುತರವಾದ ಹಿತೋಪದೇಶಕ್ಕೆ ಭೋಜ ಸಹೋದರಿಯಾದ ಇಂದುಮತಿಯ ಚಿತ್ತವು ಎಡೆಗುಡಲಿಲ್ಲ. ದಿನಕರನನ್ನು ನೋಡದೆ ಕಣ್ಮುಗಿದಿರುವ ತಾವರೆಯಲ್ಲಿ ತಣ್ಗದಿರನ ಕಿರಣಗಳಿಗೆ ಎಡೆಯುಂಟೆ? ಇಂತು ಅನುರೂಪನಾದ ಪತಿಯನ್ನು ವರಿಸಲೆಳಸಿ ಐತರುತ್ತಲಿರುವ ಇಂದುಮತಿಯು ಇರುಳಿನಲ್ಲಿ ಸಂಚರಿಸುವ ದೀವಿಗೆಯಂತೆ ಆವಾವ ಭೂವಲ್ಲಭನನ್ನು ಅತಿಕ್ರಮಿಸಿ ಮುಂದುವರಿದು ಬಂದಳೊ, ಆಯಾ ಧರಾನಾಥರೆಲ್ಲರೂ ರಾಜ ವೀಧಿಯ ಇಕ್ಕೆಲದ ಉಪ್ಪರಿಗೆಗಳಂತೆ ಕ್ರಮವಾಗಿ ಕಾಂತಿಶೂನ್ಯರಾಗುತ್ತ ಬಂದರು.

ಅಲ್ಲಿಂದ ಮುಂದೆ ಇಂದುಮತಿಯು ಮೆಲ್ಲಡಿಯನಿಡುತ ರಘುನಂದನನ ಸನಿಹಕೆ ಬರುತ್ತಿರಲು, ಅಜಕುಮಾರನು – ಈ ಕನ್ಯಾರತ್ನವು ತನ್ನನ್ನು ವರಿಸುವಳೋ, ಇಲ್ಲವೆ ಜರಿದು ಮುಂಜರಿವಳೊ ಎಂದು ಮನದೊಳಗೆ ಕಳವಳಿಸತೊಡಗಿದನು. ಆ ವೇಳೆಗೆ ಸರಿಯಾಗಿ ಅಂಗದಾಲಂಕೃತವಾದ ಆತನ ಬಲದೋಳು– ಅದಿರುತ, ಸಂಶಯಪಡಬೇಡವೆಂದು ಆತನ ಚಿತ್ತಚಾಂಚಲ್ಯವನ್ನು ಪರಿಹರಿಸುತ್ತಲಿದ್ದಿತು.

ಆ ಸುಕುಮಾರಿಯಾದ ಕುಮಾರಿಯು–ಸರ್ವಾವಯವಸುಂದರನಾದ ರಘುಕುಮಾರನ ಬಳಿಗೈತಂದಕೂಡಲೇ – ಬೇರೊಬ್ಬ ತರುಣನ ತಡಿಗೈದುವ ಆಶೆಯನ್ನು ತೊರೆದಳು. ದುಂಬಿಯಸಾಲು – ಚೆನ್ನಾಗಿ ಅರಳಿದ ಹೂಗಳಿಂದ ಸಿಂಗರವಾಗಿರುವ ಸಿಹಿ ಮಾವಿನ ಗಿಡವನ್ನು ಕಂಡಕೂಡಲೆ ಬೇರೊಂದು ಮರಕ್ಕೆ

ಸಾರಲೆಳಸುವುದುಂಟೆ? ಆಹಾ! ಸುನಂದೆಯು ಭಾವಬೋಧೆಯಲ್ಲಿ ಬಲು ಜಾಣೆ, ರಾಜಕುವರಿಯ ಚಿತ್ತವೃತ್ತಿಯ ಅಜಕುಮಾರನಲ್ಲಿ ನೆಲೆಗೊಂಡಿತು ಎಂಬುದನ್ನು ತಟ್ಟನೆ ತಿಳಿದುಕೊಂಡಳು. ಇಂದುಕಳೆಯಂತೆಸೆವ ಇಂದುಮತಿಯ ಮುಖಕಾಂತಿಯನ್ನು ಕಂಡಳು, ಹಿಂದಿನ ಕ್ರಮುವನ್ನನುಸರಿಸಿ, ವಿಷಯುವನ್ನು ವಿಸ್ತಾರವಾಗಿ ವಿವರಿಸತೊಡಗಿದಳು–

ಎಲೌ ಕುಲಕನ್ಯೆಯೆ ಕೇಳು– ಮನುಪುತ್ರನಾದ ಇಕ್ಷ್ವಾಕು ಮಹಾರಾಜನ ವಂಶದೊಳುದಿಸಿದ ಕಕುತ್‌ಸ್ಥನೆಂಬ ಮಹೀಪಾಲನು ಸಕಲಗುಣಸಂಪನ್ನನೆನಿಸಿ, ವಸುಮತೀಶರೊಳಗೆಲ್ಲ ಉತ್ತಮನೆಂದು ಹೆಸರುವಾಸಿಯನ್ನು ಪಡೆದಿದ್ದನು. ಮಹಾಶಯರಾದ ಉತ್ತರ ಕೋಸಲೇಶ್ವರರೆಲ್ಲರೂ ಆ ಮಹಾಪುರುಷನಿಂದಲೇ ಕಾಕುತ್‌ಸ್ಥರೆಂಬ ಶ್ಲಾಘ್ಯವಾದ ಪ್ರಖ್ಯಾತಿಯನ್ನು ಪಡೆದಿದ್ದಾರೆ, ಆ ಕಕುತ್‌ಸ್ಥ ಮಹೀಪಾಲನು ಒಂದು ವೇಳೆ – ದೊಡ್ಡ ಗೂಳಿಯ ರೂಪವನ್ನು ತಾಳ್ದ ಮಹೇಂದ್ರನನ್ನು ಏರಿ, ಪಿನಾಕಪಾಣಿಯ ಬೆಡಗನ್ನಾಂತು, ಕಾಳಗದಲ್ಲಿ ಕಣೆಗಳ ಮಹಿಮೆಯಿಂದ ರಕ್ಕಸಿಯರ ಕಪೋಲಗಳನ್ನು ಕುಂಕುಮಾದಿ ಮಂಗಳದ್ರವ್ಯದ ಸಂಬಂಧವಿಲ್ಲದಂತೆ ಮಾಡಿದನು. ಮತ್ತು ಸುರನಾಯಕನು ಸಿಂಹಾಸನದಲ್ಲಿ ಕುಳಿತಿರುವಾಗ – ಐರಾವತವನ್ನು ಏರಿ ಇಳಿಯುವ ಸಮಯದೊಳಗೆ ಅದರ ಕೊರಳನ್ನು ತಟ್ಟುವ ಸಡಗರದಿಂದ ಸಡಿಲವಾಗಿದ್ದ ತೋಳನ ಭುಜಕೀರ್ತಿಗೆ ತನ್ನ ಅಂಗದವು ಒತ್ತಾಗಿ ತಾಗುವಹಾಗೆ, ಆತನ ಅರ್ಧಾಸನದಲ್ಲಿಯೂ ಕೂಡುತ್ತಲಿದ್ದನು. ಆ ಕಕುತ್‌ಸ್ಥ ಕುಲಪ್ರದೀಪನೆನಿಸಿವವನೇ ಅಲ್ಲವೆ ಮಹಾ ಯಶಸ್ವಿಯಾದ ದಿಲೀಪ ನೃಪನು. ಈ ದಿಲೀಪನೇ ಶತಮುಖನ ಮೇಲಣ ಹೊಟ್ಟೆಕಿಚ್ಚನ್ನು ತೀರಿಸಿಕೊಳ್ಳಲಿಕ್ಕೆಂಬಂತೆ ತೊಂಬತ್ತೊಂಬತ್ತು ಯಾಗಗಳನ್ನು ಮಾಡಿ, ಆ ಇಂದ್ರನ ಪ್ರೀತಿಯನ್ನು ಕಳೆದುಕೊಳ್ಳಬಾರದೆಂದು ನೂರನೆಯ ಯಾಗವನ್ನು ನಿಲ್ಲಿಸಿದನು. ಆ ದಿಲೀಪ ಭೂಪನು ಭೂಮಿಯನ್ನಾಳುತ್ತಿರುವಲ್ಲಿ – ಮದವತಿಯರಾದ ಮತ್ತಕಾಶಿನಿಯರು – ಉದ್ಯಾನವೇ ಮೊದಲಾದ ಸ್ಥಳಗಳಿಗೆ ಪ್ರಯಾಣಮಾಡುತ್ತ, ಮಾರ್ಗದಲ್ಲುಳಿದು ನಿದ್ದೆಗೈವ ವೇಳೆಯೊಳಗೆ, ಅವರ ಉಡಿಗೆತೊಡಿಗೆಗಳನ್ನು ಅಲುಗಿಸಲಿಕ್ಕೆ ವಾಯುವೇ ಅಂಜುತ್ತಲಿದ್ದನು, ಹೀಗಿರಲು, ಇನ್ನುಳಿದವರು ಅಪಹರಿಸಲು ಕೈನೀಡುವುದಕ್ಕೆ ಸಾಮರ್ಥ್ಯವೆಲ್ಲಿಯದು?

ಆ ದಿಲೀಪಾವನಿಪಾಲನ ಸತ್ಪುತ್ರನಾದ ರಘುವೇ ಈಗ ಸಾಮ್ರಾಜ್ಯವನ್ನಾಳುತ್ತಲಿದ್ದಾನೆ, ಆ ಮಹೋದಾರನೇ ಸರ್ವಸ್ವವನ್ನೂ ದಾನವನ್ನಾಗಿ ಕೈಗೊಂಬ ವಿಶ್ವಜಿತ್ತೆಂಬ ಯಾಗವನ್ನೆಸಗಿ, ನಾಲ್ದೆಸೆಗಳಲ್ಲಿಯೂ ಸೂರೆಗೊಂಡು ತಂದು ಬೆಳೆಯಿಸಿದ ಸಂಪತ್ಸಮೃದ್ಧಿಯನ್ನು, ಮೃದ್ಭಾಂಡಗಳು ಮಾತ್ರವೇ ಉಳಿಯುವಂತೆ

ಮಾಡಿರುವನು. ಮಹಾನುಭಾವನ ಸತ್ಕೀರ್ತಿಯು– ಗಿರಿಯನ್ನೇರಿರುವುದು, ಕಡಲನ್ನು ಹೊಕ್ಕಿರುವುದು, ಪಾತಾಳಗಳನ್ನು ಇಳಿದಿರುವುದು, ಸ್ವರ್ಗಾದಿ ಲೋಕಗಳನ್ನು ಹತ್ತಿರುವುದು, ದಿಗಂತಗಳೊಳಗೆ ಹರಡಿರುವುದು. ಹೀಗೆ – ತಡೆಯಿಲ್ಲದೆ ಎಲ್ಲೆಲ್ಲಿಯೂ ವ್ಯಾಪಿಸಿರುವ ಯಶಸ್ಸನ್ನು, ದೇಶದಿಂದಲಾಗಲಿ, ಕಾಲದಿಂದಲಾಗಲೀ ಇಷ್ಟೆಂದು ಅಳೆಯಲಿಕ್ಕೆ ಅಳವಲ್ಲ. ನಾಕಲೋಕನಾಯಕನಾದ ಇಂದ್ರನನ್ನನುಸರಿಸಿ ಜಯಂತನುದಿಸಿರುವ ಹಾಗೆ, ಆ ರಘುಭೂದೇವೇಂದ್ರನನ್ನನುಸರಿಸಿಯೇ ಈ ಅಜಕುವರನು ಜನಿಸಿ ಇದ್ದಾನೆ. ಹರಯದ ಹೊಮ್ಮಿನಿಂದಿರುತ್ತ, ಪಳಗಬೇಕಾಗಿರುವ ಪಡ್ಡೆಗರುವು–ಗೂಳಿಗೆಣೆಯೆನಿಸಿ, ಹೊರೆಯನ್ನು ಹೊರಲು ತಾನೂ ಹೆಗಲುಕೊಡುವಂತೆ ಬಹುಕಾಲದಿಂದ ಬಂದಿರುವ ರಘು ಸಾಮ್ರಾಜ್ಯದ ಗುರುತರ ಭಾರವನ್ನು ಹೊರಲು, ಧುರಂಧರನಾದ ತಂದೆಗೆಣೆಯೆನಿಸಿ, ಜೊತೆಗೆ ಈತನೂ ಊಡಾಗಿರುವನು; ಅನುಕೂಲವಾದ ಕುಲ, ಎಣೆಯಾದ ಲಾವಣ್ಯ, ಓರಗೆಯಾಗಿ ಪೊಸತೆನಿಸಿದ ವಯಸ್ಸು, ಸಮಾನವೆನಿಸಿದ ಸುಶೀಲ, ಮತ್ತು ದಯಾದಾಕ್ಷಿಣ್ಯಾದಿ ಸುಗುಣಗಳು, ಇವಿಷ್ಟೂ ಇಂತು ಕಂಗೊಳಿಸುತ್ತಲಿರುವಲ್ಲಿ ನೀನು–ನಿನಗೆ ಅನುರೂಪನಾದ ಈ ಭೂಪತಿ ಪುತ್ರನನ್ನು ವರಿಸಿದರೆ, ರತ್ನವು ಕಾಂಚನದೊಡನೆ ಕಲೆಯುವುದು. ಎಂದುದಹರಿಸಿ, ಮದುಮಗಳ ವದನವನ್ನು ನಿರುಕಿಸುತ್ತ ನಿಂತಳು.

ಅಂತಾ ಸುನಂದನೆಯ ಮಾತು ಮುಗಿಯುತ್ತ ಬರುವಾಗಲೇ ನರೇಂದ್ರನಂದನೆಯಾದ ಇಂದುಮತಿಯು – ಲಜ್ಜೆಯನ್ನು ತಗ್ಗಿಸಿ, ಅಜಕುಮಾರನ ಕೊರಳನಲ್ಲಿ–ಮನದ ಪದುಳದಿಂ ಪಸರಿಸುತ, ವರಣದ ವಕುಳಮಾಲೆಯಂತಿರುವ ಪ್ರಸನ್ನ ದೃಷ್ಟಿಮಾಲೆಯಿಂದ ಆತನನ್ನು ಗ್ರಹಿಸಿದಳು. ಆ ಸುಕೇಶಿಯ ಮನದೊಳಗೆ ಧೀರತೆಗೆ ತಾವು ತಪ್ಪಿತು, ಆ ತರುಣನ ಮೇಲಣ ಅಭಿಲಾಷೆಯು ಹೃದಯದೊಳಗೆ ಉಕ್ಕುತ್ತಲಿದ್ದಿತು. ಅದನ್ನು ಹೇಳಿ ಹೊರಪಡಿಸಿ ತೋರಲಾರದೆ ಹೋದಳು. ಆದರೂ ಶರೀರವನ್ನು ಭೇದಿಸಿ ಮೊಳೆಯುತ್ತಲಿರುವ ಪುಳಕದ ನೆಪದಿಂದ ಮನೋನುರಾಗವು ಹೊರಗೆ ಬರುತ್ತಲಿದ್ದಿತು, ಮೈಮರೆತವಳಂತೆ ಆನಂದಪರವಶತೆಯಿಂದ ಅಲುಗದೆ ನಿಂತಳು. ಆಗಲಾ ನೇತ್ರವತಿಯಾದ ಸುನಂದೆಯು ಗೆಳತಿಯಾದ ಇಂದುಮತಿಯು ನಿಂತಿರುವ ಹೋರೆಯನ್ನು ನೋಡಿದಳು, ಇದು ಒಳ್ಳೆಯ ಸಮಯವೆಂದು ಭಾವಿಸಿ, ಎಲೌ ಆರ್ಯೆ! ಮುಂದೆ ಬೇರೊಂದೆಡೆಗೆ ತೆರಳಬಹುದಲ್ಲವೆ? ಎಂದು ಪರಿಹಾಸಪೂರ್ವಕವಾಗಿ ಹೇಳಿದಳು, ಆ ತಾವಿನಿಂದ ಅಡಿಯನ್ನಲುಗಿಸಲಾರದೆ ನಿಂತಿರುವ ಕುಮಾರಿಯು – ಹೊಟ್ಟೆಯ ಕಿಚ್ಚನ್ನು ಹುದುಗಿಸಿಕೊಂಡು, ಭಾವವನ್ನು ಸೂಚಿಸುತ್ತಲಿರುವ ಡೊಂಕಾದ ನೋಟದಿಂದ ಸುನಂದೆಯನ್ನು ದುರದುರನೆ ನೋಡಿದಳು. ಬಳಕ–ಶರೀರವನ್ನಾಂತಿರುವ ತನ್ನ ಮನೋನುರಾಗವನ್ನು ಅರ್ಪಿಸುವ

ಹಾಗೆ, ಮಂಗಳಕರವಾದ ಪರಿಮಳದ ಪುಡಿಯಿಂದ ಕೆಂಪಗಿರುವ ಹಾರವನ್ನು ಕುಮಾರನ ಕಂಠದಲ್ಲಿ ದಾದಿಯಾದ ಸುನಂದನೆಯ ಕೈಗಳಿಂದ ಅಂದವಾಗಿರುವ ಹಾಗೆ ಇಳಿಯಹಾಕಿಸಿದಳು.

ತರುವಾಯ – ಗುಣವರೇಣ್ಯನಾದ ಆ ವರಕುಮಾರನು ತನ್ನ ಕೊರಳಿನಲ್ಲಿ ಅರ್ಪಿಸಲ್ಪಟ್ಟುದಾಗಿ, ಅಗಲವಾದ ಎದೆಯಮೇಲೆ ಜೋಲಾಡುತ್ತಲಿರುವ ಆ ಮಂಗಳ ಕುಸುಮಮಾಲಿಕೆಯನ್ನು ವಿದರ್ಭರಾಜ ಸೋದರಿಯಿಂದ ಸಮರ್ಪಿಸಲ್ಪಟ್ಟ ಬಾಹುಪಾಶವನ್ನಾಗಿ ಸಂಭಾವಿಸಿದನು.

ಆಗ – ಆಹಾ! ಕೌಮುದಿಯು – ಮೋಡದಿಂದ ಹೊರಗೆಬಂದ ಕಳಾನಿಧಿಯಲ್ಲಿ ಕಲೆಯಿತು, ಜಾಹ್ನವಿಯು– ತನಗನುರೂಪವಾಗಿರುವ ಜಲನಿಧಿಯಲ್ಲಿ ಇಳಿಯಿತು ಎಂದೀಪ್ರಕಾರವಾಗಿ ಅಲ್ಲಿ ನೆರೆದಿರುವ ಪುರಜನರು – ಅನುಗುಣನಾದ ವರನಲ್ಲಿ ನೆಟ್ಟ ಇಂದುಮತಿಯ ಪ್ರೀತಿಯ ವಿಷಯದಲ್ಲಿ ಪರನರಪಾಲರ ಕಿವಿಗಳಿಗೆ ಕಠಿನವಾಗಿರುವಂತೆ ಪರಸ್ಪರ ತಂಡೋಪತಂಡವಾಗಿ ಮಾತನಾಡತೊಡಗಿದ್ದರು.

ಆ ವೇಳೆಯೊಳಗೆ–ಹರ್ಷಪರವಶರಾದ ಗಂಡಿನಕಡೆಯವರು ಒಂದು ಕಡೆಯಲ್ಲಿಯೂ, ಕನ್ಯೆಯು ಕರಗತವಾಗದೆ ಕೈಮೀರಿ ಹೋದುದರಿಂದ ಬೆಪ್ಪಾದ ಭೂಪಾಲರ ಗುಂಪು ಮತ್ತೊಂದು ಕಡೆಯಲ್ಲಿಯೂ ಇರುತ್ತಿದ್ದರೆ, ಆ ಕಲ್ಯಾಣ ಸಭಾಮಂಟಪವು – ಮುಂಜಾನೆಯಲ್ಲಿ – ಒಂದುಕಡೆ ಅರಳುತ್ತಲಿರುವ ತಾವರೆಯ ಸಾಲನ್ನೂ, ಮತ್ತೊಂದುಕಡೆ ಮುಗಿಯುತ್ತಲಿರುವ ಕುಮುದಗಳ ಗುಂಪನ್ನೂ ಒಳಗೊಂಡಿರುವ ಸರೋವರದಂತೆ ಕಂಗೊಳಿಸುತ್ತಲಿದ್ದಿತು.

****

ಏಳನೆಯ ಅಧ್ಯಾಯ

ಅಜಪಾಣಿಗ್ರಹಣ

ಸೂಚನೆ । **ಭೋಜ ನೃಪಾನುಜೆಯಾ ರಘು ।**
ರಾಜಾತ್ಮಜ ಕರವ ಸೇರಲುಳಿದರ್ ಮುಳಿದರ್ ॥
ಆಜಿಯೊಳವದಿರ ಜೈಸುತೆ ।
ಸೋಜಿಗದಿಂ ಪುರವ ಸಾರ್ದನಜನತಿಮುದದಿಂ ।

ಆ ಬಳಿಕ ದೇವಪುತ್ರಿಯಾದ ದೇವಸೇನೆಯು-ತನಗನುಗುಣನಾದ ಕುಮಾರಸ್ವಾಮಿಯನ್ನು ಕೈಹಿಡಿದಂತೆ, ಅನುರೂಪನಾದ ವರನನ್ನು ವರಿಸಿರುವ ತಂಗಿಯಾದ ಇಂದುಮತಿಯನ್ನು ಕರೆದುಕೊಂಡು, ವಿದರ್ಭನಾಥನಾದ ಭೋಜನು ಪುರಪ್ರವೇಶಕ್ಕೆ ಅಣಿಯಾದನು. ವಿವಾಹಮಂಗಳಶಾಲೆಯೊಳಗೆ ನೆರೆದಿದ್ದ ಅರಸುಮಕ್ಕಳೂ ಭೋಜಕುಮಾರಿಯು ತಮ್ಮ ಕೈಸೇರದೆ ಹೋದುದರಿಂದ, ಅಯ್ಯೋ! ಕೋರಿಕೆಯು ನೆರವೇರದೆ ಹೋಯಿತಲ್ಲಾ ಎಂದು, ಹೇರಳವಾದ ಪೇಚಾಟದಿಂದ ಮುಂಜಾನೆಯ ಮುಗಿಲಿನಲ್ಲಿ ಚಂದಿರನೇ ಮೊದಲಾದ ಗ್ರಹಗಳಂತೆ ಕಳೆಗುಂದಿದ ಮೋರೆಯುಳ್ಳವರಾದರು, ಕನ್ಯಾರತ್ನದ ಮನಕ್ಕೊಪ್ಪದಿದ್ದ ತಂತಮ್ಮ ಆಕಾರಗಳನ್ನೂ, ಅಲಂಕಾರಗಳನ್ನೂ ಹೊಟ್ಟೆಕಿಚ್ಚಿನಿಂದ ಬೈದುಕೊಳ್ಳುತ್ತಾ ಬಿಡಾರಗಳಿಗೆ ಹೊರಟರು. ಇಂದುಮತಿಯು ಅಜನನ್ನು ವರಿಸಿದುದು ಸೈರಿಸದಿದ್ದರೆ ಅರಸುಮಕ್ಕಳ ಕೂಟವು ರಘು ಕುವರನೊಡನೆ ಹೋರಾಡಲಿಕ್ಕೆ ಹೊರಡದೆ ಹಿಮ್ಮೆಟ್ಟಲು ಕಾರಣವೇನು? ಎನ್ನಬಹುದು; ಆದರೆ – ಶಚೀದೇವಿಯ ಸನ್ನಿಧಾನದ ಮಹಿಮೆಯಿಂದ ಸ್ವಯಂವರಮಂಡಪದಲ್ಲಿನ ಉತ್ಸವಕ್ಕೆ ಅಡ್ಡಿಯನ್ನು ಮಾಡುವವರಿಗೆ ವಿಡ್ದೂರಗಳು ಬಂದೊದಗುವುವು ಎಂಬುದನ್ನು ದೊರೆಮಕ್ಕಳೆಲ್ಲ ಬಲ್ಲವರಾಗಿದ್ದರು. ಕ್ಷತ್ರಪುತ್ರರು ಶಾಂತರಾಗಲಿಕ್ಕೆ ಇದೇ ಕಾರಣ. ಅದುವರೆಗೆ ಪರಿಜನರು ಪುರದ ಹೊರವಲಯದಿಂದಲೂ ದಾರಿಯಲ್ಲಿ ಮಕರತೋರಣಗಳನ್ನು ಕಟ್ಟುವುದು, ಹೂಗಳನ್ನೆರಚುವುದು, ಧೂಪಗಳನ್ನು ಹಾಕುವುದು, ಪನ್ನೀರನ್ನು ಚೆಲ್ಲುವುದು, ಮೊದಲಾದ ಬಗೆಬಗೆಯ ಉಪಚಾರಗಳನ್ನು ಕಲ್ಪಿಸುವುದರಲ್ಲಿ ನಿರತರಾಗುತ್ತಿದ್ದರು.

ಧ್ವಜಪಟಗಳನ್ನು ಸಾಲಾಗಿಯೂ, ಒತ್ತಾಗಿಯೂ ಹಿಡಿದರು. ಬಿಸಿಲಿನ ಸೇವೆಗೆಡೆಯಿಲ್ಲದ ರಾಜಮಾರ್ಗದಲ್ಲಿ ಅಜಕುಮಾರ ವರನು – ವಧುವಿನಿಂದೊಡಗೂಡಿ, ಬಲು ಸಡಗರದಿಂದ ಪುರಪ್ರವೇಶವನ್ನು ಮಾಡಿದನು.

ಬಳಿಕ – ವಧೂವರರು ಮೆರವಣಿಗೆಯಿಂದ ಪುರಪ್ರವೇಶ ಮಾಡುವ ಸುದ್ದಿಯು ಊರೊಳಗೆಲ್ಲ ಹರಡಿತು. ಕೇರಿಕೇರಿಗಳಲ್ಲಿ ಇಕ್ಕೆಲದ ಉಪ್ಪರಿಗೆಗಳ ಮೇಲೆ ಬಂಗಾರದ ಸಲಾಕೆಗಳನ್ನು ನೆಟ್ಟಿರುವ ಕಿಟಕಿ ಗಳೊಳಗೂ, ಬಾಗಿಲುಗಳೊಳಗೂ ಮುಖಗಳನ್ನಿಟ್ಟು, ಹೆಣ್ಣುಗಂಡುಗಳನ್ನು ನೋಡಬೇಕೆಂಬ ಸಂಭ್ರಮದಲ್ಲಿ – ಆ ಪುರಸುಂದರಿಯರ ಬೇರೆ ಕೆಲಸಗಳನ್ನು ತೊರೆದ ಓಡಾಟಗಳು ಬಗೆಬಗೆಯಾಗಿದ್ದುವು. –

ಒಬ್ಬ ಭಾಮಿನಿಯು – ಬೆಳಗಂಡಿಯ ಬಳಿಗೆ ಬಲುಬೇಗನೆ ಓಡಿಬರುವ ಬೆಡಗಿನಲ್ಲಿ ತಲೆಯ ತುರುಬಿನ ಗಂಟು ಸಡಿಲವಾಗಿ ಕಳಲಿತು. ಸುತ್ತಿದ್ದ ಹೂವಿನ ಸರವು ಜೋಲಾಡುತ್ತಲಿದ್ದಿತು. ಅದನ್ನು ಸರಿಮಾಡಿಕೊಳ್ಳಲು ಕೂದಲಿಗೆ ಕೈ ಹಾಕಿದ್ದವಳು ಹಾಗೆಯೇ ಮರೆತುಬಿಟ್ಟಳು.

ಮತ್ತೊಬ್ಬ ಅಂಗನಾಮಣಿಯ ಹೆಜ್ಜೆಯನ್ನು ದಾದಿಯು ಅರಗಿನ ರಸದಿಂದ ಸಿಂಗರಿಸುತ್ತಲಿದ್ದಳು, ಆಗಲಾ ಸುಂದರಿಯು ತನ್ನ ಮೆಲ್ನಡೆಯನ್ನು ತೊರೆದು, ಹೆಜ್ಜೆಯನ್ನು ಚಿಮ್ಮುತ್ತ, ದುಡುಕಿನಿಂದ ಮುಂದಡಿ ಗಳನ್ನಿಡುವಲ್ಲಿ ಗವಾಕ್ಷದವರೆಗೂ ದಾರಿಯ ನೆಲದಮೇಲೆ ಅರಗಿನ ಬಣ್ಣದ ಗುರುತುಗಳು ಕಂಗೊಳಿಸುತ್ತಲಿದ್ದುವು.

ಒಬ್ಬ ಗರತಿಯು ಸಣ್ಣ ಸಲಾಕೆಯಿಂದ ಬಲಗಣ್ಣಿಗೆ ಕಾಟಿಕೆಯನ್ನು ಹಚ್ಚಿಕೊಂಡು, ಎಡಗಣ್ಣನ್ನು ಸಿಂಗರಿಸುವ ಹೊತ್ತಿಗೆ, ನೋಟದ ಸಂಭ್ರಮವು ಒದಗಲು ಕಜ್ಜಲವನ್ನೊತ್ತಿದ್ದ ಕಡ್ಡಿಯನ್ನು ಹಿಡಿದಿದ್ದವಳು ಹಾಗೆಯೇ ವಾತಾಯನದ ಬಳಿಗೆ ದುಡದುಡನೆ ಓಡಿದಳು.

ಜಾಲರಂಧ್ರದ ಹತ್ತಿರಕ್ಕೆ ಬಂದು ನೋಡುವ ಒಯ್ಯಾರದಲ್ಲಿ ಸಡಿಲಿದ ನಿರಿಮುಡಿಯನ್ನು ಟೊಂಕದಲ್ಲಿ ಬೆಳಕನ್ನು ಬೀರುವ ಕಯ್ಯಲ್ಲಿ ಹಿಡಿದಿದ್ದ ಸೀಮಂತಿನಿಯೋರ್ವಳು ಹಾಗೆಯೇ ನಿಂತು ನೋಡತೊಡಗಿದಳು.

ಇನ್ನೊಬ್ಬ ಲಲನೆಯು ಉಡಿಗೆ ಸುತ್ತಿಕೊಂಬ ಬಂಗಾರದೆಳೆಗೆ ಮಣಿಗಳನ್ನು ಪೋಣಿಸುತ್ತಿದ್ದಳು ತೊರೆಯಿಂದೆದ್ದು ನಡೆವ ಬೆಡಗಿನಲ್ಲಿ ದಾರವು ಹರಿದು, ರತುನಗಳು– ಸರಿದು ಉದಿರುತ್ತಿದ್ದುವು. ತಂತುವಿನ ತುದಿಯು ಹಜ್ಜೆಯ ಹೆಬ್ಬೆರಳಿಗೆ ತೊಡರುತ್ತಲಿದ್ದಿತು, ಆದರೂ ಅದು ಆಕೆಯ ನೆನಪಿಗೆ ಬರಲೇ ಇಲ್ಲ.

ಹೀಗೆ ಬಹುಮಂದಿ ಮಾನಿನಿಯರು–ಮದುಮಕ್ಕಳ ಮೆರವಣಿಗೆಯನ್ನು ನೋಡಬೇಕೆಂಬ ಬಯಕೆಯ ಬಿರುವಿನಿಂದ ಬುಡಬುಡನೆ ಬಲುಬೇಗನೆ ಬಂದು, ಸುವಾಸನೆಯು ಉಸಿರನ್ನೂ, ತಳತಳಿಸುವ ದೃಷ್ಟಿಗಳನ್ನೂ ಒಳಗೊಂಡಿರುವ ಮುಖಗಳನ್ನು ಕಿಟಕಿಗಳಲ್ಲಿ ದಟ್ಟವಾಗಿ ಕಿಕ್ಕಿರಿವಂತೆ ಇಟ್ಟರು. ಆಗಲಾ ಗವಾಕ್ಷಗಳು – ಚಲಿಸುತ್ತಲಿರುವ ದುಂಬಿಗಳೊಡಗೂಡಿ ಅಂದವಾಗಿ ಅರಳಿ, ಗಮಗಮಿಸುವ ಕೆಂದಾವರೆಗಳಿಂದ ಸಿಂಗರಗೊಂಡಂತೆ ಕಂಗೊಳಿಸುತ್ತಲಿದ್ದುವು. ಅಂತು ನಿಂತ ನಾರಿಯರು – ಸುರಸುರನೆ ಸವಿಯನ್ನು ಚಪ್ಪರಿಸುತ, ಅಲುಗದಿರುವ ತಮ್ಮ ನಯನಗಳಿಂದ ರಘುಕುಮಾರನನ್ನು ತಣಿವಾರ ಕುಡಿಯುತ್ತಲಿದ್ದರು. ಆಗಲವರ ಇತರೇಂದ್ರಿಯಗಳೆಲ್ಲವೂ ಬೇರೆ ವಿಷಯಗಳನ್ನು ತೊರೆದು, ದೃಷ್ಟಿಗಳನ್ನೇ ಸರ್ವ ಪ್ರಕಾರದಿಂದಲೂ ಹೊಕ್ಕಿರುವಂತಿದ್ದುವು. " ಆಹಾ! ದೂರದಲ್ಲಿ ಮರೆಯೊಳಿದ್ದ ನರಪತಿಗಳು – ಈ ಇಂದುಮತಿಯನ್ನು ನನಗೆ ಕೊಡಬೇಕು, ತನಗೆ ಕೊಡಬೇಕು ಎಂದು ಭೋಜನನ್ನು ಕುರಿತು ಬೇಡುತ್ತಲಿದ್ದರೂ, ಈ ಸುಕುಮಾರಿಯು ಸ್ವಯಂವರವನ್ನೇ ಬಯಸಿದುದು ಸಾರ್ಥಕವಾಯಿತು. ಹಾಗಿಲ್ಲದಿದ್ದರೆ ವರಮಹಾಲಕ್ಷ್ಮಿಯು ನಾರಾಯಣನನ್ನು ವರಿಸಿದಂತೆ ಈ ಅರಗುವರನನ್ನು ವರಿಸುತ್ತಿದ್ದಳೆ? ಸರ್ವಾತ್ಮನಾ ಇಲ್ಲ" ಎಂದು ಆ ನಾರೀಮಣಿಯರೆಲ್ಲ ಮಾತನಾಡಿಕೊಳ್ಳುತ್ತಿದ್ದರು.

"ಆಹಹ!! ಎಲ್ಲರ ಹೊಗಳಿಕೆಗೂ ಈಡಾಗಿ, ಎಲ್ಲರೂ ಬಯಸತಕ್ಕುದೆನಿಸಿರುವ ಚಲುವಿಕೆಯನ್ನು ಪಡೆದಿರತಕ್ಕ ಈ ವಧೂವರರಿಗೇ, ದಾಂಪತ್ಯವನ್ನು ವಿಧಿಯು ಅನುಗೊಳಿಸದೆ ಇದ್ದುದೇ ಆದರೆ, ಆಗ – ಈ ಹೆಣ್ಣು ಗಂಡುಗಳಲ್ಲಿ ಇಂತಪ್ಪ ಅಪಾರವಾದ ಸೌಂದರ್ಯವನ್ನು ನಿರ್ಮಿಸಿದ ಆ ಪ್ರಜಾನಾಥನ ಪ್ರಯಾಸವು– ಪ್ರಯೋಜನವಿಲ್ಲದೆಯೆ ಹೋಗುತ್ತಲಿದ್ದಿತು." ಎಂದೂ ಆಡಿಕೊಳ್ಳುತ್ತಲಿದ್ದರು. ಮತ್ತು– "ಎಂದೂ ಒಡನಾಡಿಗಳಾಗಿದ್ದ ಆ ರತಿಮನ್ಮಥರೇ ಈ ಹೆಣ್ಣು ಗಂಡುಗಳ ರೂಪದಿಂದ ಹುಟ್ಟಿರಬೇಕು. ಹಾಗೆ ಇಲ್ಲದಿದ್ದರೆ, ಸಾವಿರಾರುಮಂದಿ ನರಪತಿ ಕುಮಾರರಿದ್ದರೂ, ಅವರನ್ನೆಲ್ಲ ತೊರೆದು, ಭೋಜಕುಮಾರಿಯು – ತನಗನುರೂಪನಾದ ರಘುಕುಮಾರನನ್ನು ವರಿಸಲು ಕಾರಣವೇನು? ಈಗ ಅರಿಯಲಾಗದಿದ್ದರೂ ಜನ್ಮಾಂತರಾನುಭವದ ವಾಸನಾವಶದಿಂದ ಪೂರ್ವಸಂಬಂಧದ ವಸ್ತುವಿನಲ್ಲಿ ಮನವು – ಸ್ನೇಹದಿಂದ ತಾನಾಗಿ ಪರಿವರ್ತಿಸುವುದು ದಿಟ", ಎಂತಲೂ ಎಂದುಕೊಂಡರು.

ಹೀಗೆಲ್ಲ – ಆ ಪುರಸುಂದರಿಯರ ಮುಖಗಳಿಂದ ಹೊರಡುತ್ತಲಿರುವ ಕಿವಿಗಿಂಪಾದ ಮಾತುಗಳನ್ನು ಆಲಿಸುತ್ತಾ, ಅಜಕುಮಾರನು – ಮಂಗಳಕರವಾದ ರಚನೆಗಳಿಂದ ಅಂದವಾಗಿ ಬೆಳಗುತ್ತಲಿರುವ ಮಾವನ ಮನೆಯನ್ನು ಹೊಕ್ಕನು.

ಕಾಮರೂಪದೇಶದರಸಿನ ಕಯ್ಯೂಡಮಾಡಿಕೊಂಡು ಕರೇಣುವಿನಿಂದ ಕೆಳಗೆ ಇಳಿದನು, ಬಳಿಕ ವೈದರ್ಭನು ತೋರಿದ ಒಳತೊಟ್ಟಿಯನ್ನು ಸಂಬಂಧಿಯ ಸದನದೊಳಗಣ ಸುದತಿಯರ ಸ್ವಾಂತವನ್ನು ಪ್ರವೇಶಿಸುವಹಾಗೆ ಪ್ರವೇಶಿಸಿದನು, ಅಮೂಲ್ಯವಾದ ಸಿಂಹಾಸನದಮೇಲೆ ಕುಳಿತನು. ಭೋಜನು ಮಮತೆಯಿಂದೊಪ್ಪಿಸಿದ ರತ್ನಗಳಿಂದಲೂ, ಮಧುಪರ್ಕದಿಂದಲೂ ಮಿಳಿತವಾದ ಸತ್ಕಾರಸಾಮಗ್ರಿಗಳನ್ನೂ, ದುಕೂಲಗಳೆರಡನ್ನೂ, ಕಾಂತಾಜನರ ಕಟಾಕ್ಷಗಳೊಂದಿಗೆ ಪರಿಗ್ರಹಿಸಿದನು. ಆಮೇಲೆ–ಚಂದಿರನ ಕಿರಣಗಳು–ಮಿರುಗುತ್ತಲಿರುವ ನೊರೆಗಳ ಸಾಲಿನಿಂದ ಬೆಳಗುವ ಕಡಲನ್ನು ದಡಕ್ಕೆ ತಂದುಬಿಡುವ ಹಾಗೆ, ವಿನಯಸಂಪನ್ನರಾದ ಅಂತಃಪುರಾಧಿಕಾರಿಗಳು– ದುಕೂಲಧರನಾದ ಅಜಕುಮಾರನನ್ನು ವಧುವಿನ ಸಮೀಪವನ್ನು ಕುರಿತು ಕರೆತಂದರು. ಹಸೆಯ ಜಗುಲಿಯ ಮೇಲೆ ಅಗ್ನಿಯಂತೆ ಬೆಳಗುತ್ತಲಿರುವ ಭೋಜ ಪುರೋಹಿತನು–ಅಗ್ನಿಯನ್ನು ಪ್ರತಿಷ್ಠಾಪಿಸಿ, ವಿಧಿಪ್ರಕಾರ ಆಜ್ಯಾದಿಗಳ ಹವನದಿಂದ ಅರ್ಚಿಸಿ, ಆ ವಹ್ನಿಯನ್ನೇ ಸಾಕ್ಷಿಸ್ಥಾನದಲ್ಲಿಟ್ಟು, ವಧೂವರರ ವಿವಾಹವಿಧಿಯನ್ನು ಸಾಂಗವಾಗಿ ನೆರವೇರಿಸತೊಡಗಿದನು.

ಆ ವೇಳೆಯೊಳಗೆ – ಹತ್ತಿರದಲ್ಲಿ ಹಬ್ಬಿದ ಅಶೋಕಲತೆಯ ತಳಿರಿನಿಂದೊಡಗೂಡಿರುವ ಚಿಗುರನ್ನೊಳಗೊಂಡ ಸಿಹಿ ಮಾವಿನಗಿಡದಂತೆ, ಅಜಕುಮಾರನು – ತನ್ನ ಕರತಲದಿಂದ ವಧುವಿನ ಕರರುಹವನ್ನು ಪಿಡಿದು ವಿಶೇಷವಾಗಿ ವಿರಾಜಿಸುತ್ತಲಿದ್ದನು. ಅಲ್ಲದೆ ರಘುರಾಜಪುತ್ರನು– ಮಣಿಕಟ್ಟಿನಲ್ಲಿ ಪುಳಕಿತನಾದನು, ಕುಮಾರಿಯು ಕೈಬೆರಳುಗಳಲ್ಲಿ ಬೆವರನ್ನುಳ್ಳವಳಾದಳು. ಆ ಸಂದರ್ಭದಲ್ಲಿ ಮನೋಭವನು ಅವರೀರ್ವರಲ್ಲಿಯೂ ರಾಗರಸವನ್ನು ಹಂಚುವಂತಿದ್ದಿತು. ಮತ್ತು ಒಬ್ಬರ ಭಾವವನ್ನೊಬ್ಬರು ನೋಡಬೇಕೆಂಬ ಕುತೂಹಲದಿಂದ ಇಬ್ಬರ ಕುಡಿನೋಟಗಳೂ ಹೊರಟವು. ನಡುವೆ ಕಲೆತುವು. ಒಡನೆ ನಾಚಿಕೆಯ ಸೆಳೆತದಿಂದ ಹಿಂದಿರುಗಿದುವು, ಅದು ಬಲು ಅಂದವಾಗಿದ್ದಿತು, ಜ್ವಲಿಸುತ್ತಲಿರುವ ಅಗ್ನಿಯನ್ನು ಪ್ರದಕ್ಷಿಣೆಮಾಡುವ ಕ್ರಮದಲ್ಲಿ – ಆ ಗಂಡುಹೆಣ್ಣುಗಳು– ಮೇರುವನ್ನು ಪ್ರದಕ್ಷಿಣೆಮಾಡುತ್ತ ಪರಸ್ಪರವಾಗಿ ಸಂಬಂಧಿಸಿರುವ ಹಗಲಿರುಳುಗಳಂತೆ ಶೋಭಿಸುತ್ತಲಿದ್ದರು. ಬ್ರಹ್ಮತೇಜಸ್ಸಿನಿಂದ ಬೆಳಗುತ್ತಲಿರುವ, ಪುರೋಹಿತನಿಂದ ನೇಮಿಸಲ್ಪಟ್ಟ ಆ ಬಡನಡುವಿನ ಹೆಣ್ಣು – ಮದವೇರಿದ ಚಕೋರದಂತೆ ಚಂಚಲಾಕ್ಷಿ ಯಾಗುತ್ತಾ ಅಗ್ನಿಯಲ್ಲಿ ನೇಮದ ಅರಳನ್ನು ಸುರಿದಳು. ತುಪ್ಪ, ಬನ್ನಿಯ ಚಿಗುರು: ಅರಳು ಇವುಗಳನ್ನು ವಿಧಿಯಪ್ರಕಾರ ವಹ್ನಿಯಲ್ಲಿ ಹವನಮಾಡಲು, ಕೂಡಲೆ ಬೆಂಕಿಯಿಂದ ಹೊರಟ ಉರಿಯನ್ನೊಳಗೊಂಡಿರುವ ಪಾವನವಾದ ಸುವಾಸನೆಯ ಹೊಗೆಯು–ಇಂದುಮತಿಯ ಕಪೋಲದವರೆಗೂ ಬಂದು, ಕ್ಷಣಕಾಲಮಾತ್ರ ಆಕೆಯ

ಕಿವಿಗಲಂಕಾರವಾಗಿರುವ ಕನ್ನೈದಿಲೆಯಂತೆ ಕಂಗೊಳಿಸುತ್ತಲಿದ್ದಿತು. ಆ ವಧೂವದನವು ಅಗ್ನಿಯಿಂದ ಹೊರಡುವ ಆಚಾರಧೂಮವನ್ನು ಪರಿಗ್ರಹಿಸಿ, ಕಾಟಕೆಯ ದ್ರವದಿಂದ ಚಂಚಲವಾದ ದೃಷ್ಟಿಯುಳ್ಳದೂ, ಬಾಡಿದ ಯವೆಯ ಮೊಳಕೆಯ ಕರ್ಣಾಭರಣವುಳ್ಳುದೂ, ಕೆಂಬಣ್ಣದ ಕಪೋಲದ ರೇಖೆಗಳುಳ್ಳುದೂ ಆಗಿದ್ದಿತು. ಆಮೇಲೆ – ಆ ಕನ್ಯಾಕುಮಾರರೀರ್ವರೂ ಚಿನ್ನದ ಮಣೆಯಮೇಲೆ ಕುಳಿತು, ವ್ರತಪರರಿಂದಲೂ, ನಂಟರಿಂದೊಡಗೂಡಿದ ಅರಸನಿಂದಲೂ, ಮಕ್ಕಳೊಂದಿಗರಾದ ಮುತ್ತೈದೆಯರಿಂದಲೂ ಆಚಾರಸಿದ್ಧವಾದ ಸೇಸೆಯ ಕ್ರಮವನ್ನು ಅನುಭವಿಸಿದರು.

ತರುವಾಯ ಭೋಜಕುಲಚಂದ್ರನೆನಿಸಿ, ಸೌಭಾಗ್ಯಶಾಲಿಯಾಗಿರುವ ಅರಸು – ಇಂತು ಆ ಕನ್ಯಾವರರಿಗೆ ಪಾಣಿಗ್ರಹಣ ಮಂಗಳ ಮಹೋತ್ಸವವನ್ನು ನೆರವೇರಿಸಿ, ಕಲ್ಯಾಣಮಂಟಪದಲ್ಲಿ ನೆರೆದಿರುವ ದೊರೆಮಕ್ಕಳು ಮುಂತಾದವರಿಗೆ, ಬೇರುಬೇರಾಗಿ ಆದರದಿಂದ ಉಚಿತವನ್ನರಿತು ಗಂಧಪುಷ್ಪಾದಿ ಸತ್ಕಾರವನ್ನು ಸಮರ್ಪಿಸುವಂತೆ ಅಧಿಕಾರಿಗಳಿಗಾಜ್ಞಾಪಿಸಿದನು. ಆ ಮಹಾಸಭೆಯೊಳಿದ್ದ ಮಹೀಪಾಲರು – ಮೊಸಳೆ ಮುಂತಾದ ಕ್ರೂರಜಂತುವನ್ನೊಳಗೆ ಅಡಗಿಸಿಕೊಂಡು, ಮೇಲೆ ತಿಳಿಯಾದ ನೀರಿನಿಂದ ಬೆಳಗುವ ಮಡುವಿನಂತೆ, ಎದೆಯೊಳಗೆ ಅವಿತಿರುವ ಹಗೆತನವನ್ನು ಹೊರಪಡಿಸದೆ, ಕಪಟದ ನಗೆಮೊದಲಾದ ಸಂತಸದ ಕುರುಹನ್ನು ತೋರುತ್ತಾ, ಭೋಜನೊಪ್ಪಿಸಿದ ಉಡುಗೊರೆಯೇ ಮುಂತಾದ ಉಪಚಾರಗಳನ್ನು, ಕಾಣಿಕೆಯೇ ಮೊದಲಾಗಿರುವ ಮುಯ್ಯ ನೆಪದಿಂದ ಆತನಿಗೇ ಸಲ್ಲಿಸಿ, ಅರಸನನ್ನು ಬೆಸಗೊಂಡು, ತಂತಮ್ಮ ಪುರಗಳನ್ನು ಕುರಿತು ಪಯಣವನ್ನು ಬೆಳಸಿದರು.

ಆದರೆ – ಭೋಜರಾಜಧಾನಿಗೆ ಬಂದಿದ್ದ ಅರಸುಮಕ್ಕಳಿಗೆ ಆ ಅರಗುವರಿಯು ದೊರೆಯಲಿಲ್ಲವಷ್ಟೆ? ಅವರೆಲ್ಲರೂ ಗುಟ್ಟಾಗಿ ಒಟ್ಟುಗೂಡಿ "ನಾವಿಲ್ಲಿ ಅಜನ ಮೇಲಣ ಹಗೆತನವನ್ನು ತೀರಿಸಿಕೊಳ್ಳಲು ಸಾಧ್ಯವಿಲ್ಲ, ನಮ್ಮ ಕೋರಿಕೆಯೇನೋ ಕೈಗೂಡಲಿಲ್ಲ. ವರನು ಈ ಪುರದಿಂದ ನಾಳೆ ಹೊರಡುವನು, ನಾವೆಲ್ಲ ಇಂದೇ ಪಯಣಮಾಡಿ ದಾರಿಯಲ್ಲಿ ಕಾದಿದ್ದರೆ, ಕಷ್ಟವಿಲ್ಲದೆ ಕನ್ಯೆಯು ಕರಗತಳಾಗುವಳು?" ಎಂದು ಮೊದಲೇ ಸಂಕೇತಮಾಡಿಕೊಂಡಿದ್ದ ಮೇರೆಗೆ ಮುಂಚೆ ತಾವಾಗಿಯೇ ಬಂದು, ಆಮಿಷಾಪಹಾರಕ್ಕಾಗಿ ಮಾರ್ಗವನ್ನು ಆವರಿಸಿ ಅಲ್ಲಲ್ಲಿ ಇದಿರುನೋಡುತ್ತಲಿದ್ದರು.

ಇತ್ತ – ಭೋಜಭೂಪಾಲನು – ಅನುಜೆಯ ವಿವಾಹಸಂಭ್ರಮವೆಲ್ಲ ಬೆಳದಬಳಿಕ, ಮನದ ಉತ್ಸಾಹಾನುಸಾರ ತನ್ನ ಸಂಪದವನ್ನು ಹೆಣ್ಣಿಗೆ ಬಲುವಳಿಯಾಗಿ ಕೊಟ್ಟು, ವಧೂವರರನ್ನು ಪ್ರಯಾಣಮಾಡಿಸಿದನಲ್ಲದೆ, ತಾನೂ ಹಿಂಬಾಲಿಸಿದನು. ಮೂಲೋಕದಲ್ಲಿಯೂ ಮೇಲಾದ ಹೆಸರುವಾಸಿಯನ್ನು ಪಡೆದಿರುವ ರಾಘವನೊಡನೆ

ಮೂರು ಟಂಕಿಗಳು ಇದ್ದು, ಬಳಿಕ ಶುಕ್ಲಪಕ್ಷದ ಪಾಡ್ಯಮಿಯಲ್ಲಿ ತಣ್ಗದಿರನು ಬೆಂಗದಿರನಿಂದ ತಿರುಗುವಹಾಗೆ, ರಘುಕುವರಾರನಿಂದ ಕುಂಡಿನ ಪುರಾಭಿಮುಖನಾದನು.

ಹಿಂದೆ – ರಘುವು – ದಿಗ್ವಿಜಯವನ್ನು ಮಾಡಿದಾಗ, ನಾಡೊಡೆಯರ ಬೊಕ್ಕಸಗಳನ್ನೇ ಬಳಿದು ತಂದಿದ್ದನೆಂದು ಆತನ ವಿಷಯದಲ್ಲಿ ದೊರೆಗಳೆದೆಯಲ್ಲಿ ವೈರವು ಕುದಿಯುತ್ತಲಿದ್ದಿತು. ಅವನ ಮಗನಾದ ಅಜನೀಗ ಭೋಜಕನ್ಯಾರತ್ನವನ್ನು ಅಪಹರಿಸಿದುದು ಆ ಅವನಿಪಾಲರಿಗೆ ಸೈರಿಸಲೇ ಇಲ್ಲ. ಆ ದ್ವೇಷವನ್ನೆಲ್ಲ ಕಾರಲಿಕ್ಕೆ ಇದು ಸರಿಯಾದ ಸಮಯವೆಂದು ಬಗೆದರು. ಪೂರ್ವದಲ್ಲಿ – ವಿರೋಚನನ ಮಗನಾದ ಬಲಿಯು ಕೊಟ್ಟ ಸಿರಿಯನ್ನು ಪಡೆದು, ಅಳೆಯಲು ಬೆಳೆಯತೊಡಗಿದ ತ್ರಿವಿಕ್ರಮನ ಅಡಿಯನ್ನು, ಇಂದ್ರನಿಗೆ ಹಗೆಯಾದ ಪ್ರಹ್ಲಾದನು ಹೇಗೋ ಹಾಗೆ ಕೊಬ್ಬಿರುವ ಅರಸುಮಕ್ಕಳ ಹಿಂಡು– ಭೋಜಕನ್ಯೆಯನ್ನು ಕರೆದೊಯ್ಯುತ್ತಲಿರುವ ಅಜಕುಮಾರನನ್ನು ಅಡ್ಡಗಟ್ಟಿತು. ಅಜರಾಜಕುಮಾರನೇನು ಸಾಧಾರಣನೆ? ಆ ಕೂಡಲೆ –ತನ್ನ ತಂದೆಗೆ ಆಪ್ತನಾದ ಮಂತ್ರಿಯನ್ನು ಬಹುಮಂದಿ ವೀರಭಟರೊಡನೆ ಕನ್ಯೆಯ ಕಾವಲಿಗೆ ನೇಮಿಸಿ ಉಕ್ಕಳಿಸುವ ಅಲೆಗಳನ್ನೊಳಗೊಂಡ ಶೋಣನದವು ಭಾಗೀರಥಿಯನ್ನು, ಹೇಗೋ ಹಾಗೆ, ಆ ವಸುಮತೀಶರ ವಾಹಿನಿಯನ್ನು ಇದಿರಿಸಿದನು.

ಕಾಲಾಳನ್ನು ಕಾಲಾಳೂ, ರಥಿಕನನ್ನು ರಥಿಕನೂ, ಕುದುರೆಯನೇರಿದವನನ್ನು ಕುದುರೆಯನೇರಿದವನೂ, ಅನೆಯ ಮಾವಟಿಗನನ್ನು ಆನೆಯ ಮಾವಟಿಗನೂ ಕ್ರಮವಾಗಿ ಇದಿರಿಸಿ, ಸಮಬಲದ ಭಟರ ಬವರವು ಬೆಳೆಯಿತು. ರಣವಾದ್ಯಗಳು ಮೊಳಗತೊಡಗಿದುವು, ಬಿಲ್ಲಾಳುಗಳೊಳಗೆ ಒಬ್ಬರ ನುಡಿಯು ಬೇರೊಬ್ಬರಿಗೆ ಕೇಳಬರುತ್ತಲಿರಲಿಲ್ಲ, ತಂತಮ್ಮ ಮನೆತನದ ಹೆಸರುವಾಸಿಯನ್ನು ಯಾರೂ ಹೇಳಿಕೊಳ್ಳಲೇ ಇಲ್ಲ, ಒಬ್ಬರಮೇಲೊಬ್ಬರ ಅಂಬುಗಳು ಬಂದು ಬಿದ್ದಕೂಡಲೆ, ಆ ಬಾಣಗಳ ಮೇಲಿರುವ ನಾಮಾಕ್ಷರಗಳಿಂದ ಇದಿರಾಳಿನ ಪ್ರಖ್ಯಾತಿಯನ್ನರಿತು, ಬಿಲ್ಲಾಳುಗಳಲೊಬ್ಬರನ್ನೊಬ್ಬರು – ಪೌರುಷದ ಪರಿಯನ್ನು ಕುರಿತು ಕೊಂಡಾಡಿಕೊಳ್ಳುತ್ತಲಿದ್ದರು. ಕಾಳಗದಲ್ಲಿ ಕುದುರೆಗಳ ತುಳಿತದಿಂದೆದ್ದ ಧೂಳಿಯು ತೇರುಗಳ ಚಕ್ರದ ಪಟ್ಟೆಗಳಿಂದ ಹಾರಿದ ರಜದಿಂದ ದಟ್ಟವಾಗಿ, ಆನೆಗಳ ಅಗಲವಾದ ಕಿವಿಗಳಿಂದ ಬೀಸಲ್ಪಟ್ಟು, ಹರಡಿ, ಬಟ್ಟೆಯಂತಾಗಿ, ರವಿಮಂಡಲಕ್ಕೆ ಹೊದಿಕೆಯಾಯಿತು. ದಳದಲ್ಲಿ ಎತ್ತಿ ಹಿಡಿದಿರುವ ದಾಳಗಳ ತುದಿಯಲ್ಲಿನ ಬಟ್ಟೆಗಳೊಳಗೆ ಚಿತ್ರಿಸಿರುವ ಮೀನುಗಳು ಗಾಳಿಯ. ಬಿರುವಿನಿಂದ ಬಾಯ್ಗಳನ್ನು ತೆರೆದು, ಮೇಲಕ್ಕೆ ಹಾರಿಬಂದ ಪಡೆಯ ಧೂಳಿಯನ್ನು ಕುಡಿದು, ಮುಂಗಾರುಮಳೆಯ ಹೊಸದಾದ ಒಂದುನೀರನ್ನೀಂಟಿ, ಮಲಿನವಾಗಿರುವ ನಿಜವಾದ ಮೀನುಗಳಂತೆ ಬೆಳಗುತ್ತಲಿದ್ದುವು.

ಆಗಸದ ಅಂಗಳವೆಲ್ಲ ಧೂಳಿಯಿಂದ ತುಂಬಿರಲು, ಬಂಡಿಯ ಗಾಲಿಯ ದನಿಯಿಂದ ಇದು ತೇರೆಂದು ತಿಳಿಯಬರುತ್ತಲಿದ್ದಿತು. ಕೊರಳಗಂಟೆಯ ಗಣಗಣನೆಂಬ ಸದ್ದಿನಿಂದ ಗಜವೆಂದು ಗೊತ್ತಾಗುತ್ತಲಿದ್ದಿತು. ತಂತಮ್ಮ ದೊರೆಯ ಹೆಸರನ್ನು ಹೇಳುವುದರಿಂದಲೇ ಧೂಳಿಯಲ್ಲಿ ಮುಳುಗಿರುವ ಆಳು ಇಂಥವರ ಕಡೆಯವನೆಂಬುದು ಅರಿವಿಗೆ ಬರುತಲಿತ್ತು. ಕಾಳಗದ ನೆಲದಲ್ಲಿ ಪಡೆಯ ಕಣ್ಣಿನ ನೋಟಕ್ಕೆ ತಡೆಯಾಗಿ ತುಂಬಿರುವ ಧೂಳಿಯು – ಎಲ್ಲೆಲ್ಲಿಯೂ ಆವರಿಸಿದ ಕತ್ತಲಾಯಿತು. ಬಿಲ್ಲಾಳುಗಳು ಬಿಡುವ ಅಂಬುಗಳ ಪೆಟ್ಟು ಬಿದ್ದು, ಆನೆ, ಕುದುರೆ, ಕಾಲಾಳುಗಳ ಮೈಗಾಯಗಳಿಂದ ಹೊರಡುವ ನೆತ್ತರಿನ ಹೊಳೆಯು–ಬಾಲಸೂರ್ಯನಾಗಿದ್ದಿತು.

ಎಲ್ಲ ಕಡೆಗಳಲ್ಲಿಯೂ ಅಡರಿರುವ ಧೂಳಿಯು ರಕ್ತಪ್ರವಾಹದಿಂದ ಬುಡವು ಕತ್ತರಿಸಿ ಹೋಗಲು, ಮೇಲ್ಭಾಗದಲ್ಲಿ ಗಾಳಿಯಿಂದ ಅಲುಗುತ್ತಲಿರುವುದಾಗಿ ಇದ್ದಲಾದ ಬೆಂಕಿಯಿಂದ ಮೊದಲು ಹೊರಟಿದ್ದ ಹೊಗೆಯಂತೆ ಕಾಣಬರುತ್ತಿದ್ದಿತು. ಬಡಿದಾಟದಲ್ಲಿ ರಥಿಕರಿಗೆ ಪೆಟ್ಟು ಬಿದ್ದು ಮೂರ್ಛೆಯುಂಟಾದರೆ, ಬೇರೊಂದು ಕಡೆಗೆ ಕರೆದೊಯ್ದು ಉಪಚರಿಸುವುದು ತಮ್ಮ ಧರ್ಮವೆಂದು ಸಾರಥಿಗಳು ಹಾಗೆ ಮಾಡಿದಲ್ಲಿ, ಮೂರ್ಛೆ ತಿಳಿದೆದ್ದ ಕೂಡಲೆ, ಆ ರಥಿಕರು – ಸಾರಥಿಯನ್ನು ಕುರಿತು ಅನುಚಿತವನ್ನು ಮಾಡಿದೆ ಎಂದು ಜರೆದು, ಮರಳಿ ರಣಭೂಮಿಗೈತಂದು ಮೊದಲು ತಮ್ಮನ್ನು ಅಂಬಿನಿಂದಿಟ್ಟ ರಥಿಕನನ್ನು, ಧ್ವಜದಿಂದ ಗುರುತು ಹಿಡಿದು ಹೋರಾಡತೊಡಗುತ್ತಿದ್ದರು. ಒಬ್ಬ ರಥಿಕನೆಸೆದ ಬಾಣವು – ಬೇರೊಬ್ಬ ರಥಿಕನ ಬಾಣದಿಂದ ಅರೆದಾರಿಯಲ್ಲಿ ಕತ್ತರಿಸಲ್ಪಟ್ಟರೂ, ಅದರಲ್ಲಿ ಉಳಿದ ಅಲಗಿನ ಅರ್ಧಭಾಗವೇ ಪ್ರಯೋಗಕಾರನ ಕರಲಾಘವ ವೇಗದ ಬಲ್ಮೆಯಿಂದ ಗುರಿಹಿಡಿದು, ಇದಿರಾಳಿಗೆ ಬಂದು ಬಡಿಯುತ್ತಲಿದ್ದಿತಲ್ಲದೆ ನಡುವೆ ಬೀಳುತ್ತಲಿರಲಿಲ್ಲ. ಆನೆಗಳ ಕಾಳಗದಲ್ಲಿ ಮೇಲೆ ಕುಳಿತಿರುವ ಮಾವಟಿಗರೊಳಗೆ ಒಬ್ಬರನ್ನೊಬ್ಬರು ಮೊನೆಯಾದ ಆಯುಧಗಳಿಂದ ಹೊಡೆಯುವಾಗ– ಕತ್ತರಿಸಲ್ಪಟ್ಟು ಮೇಲಕ್ಕೆ ಹಾರಿದ ಶಿರಗಳು – ಆಕಾಶದಲ್ಲಿ ಹಾರುತ್ತಲಿರುವ ಡೇಗೆ ಹಕ್ಕಿಗಳ ಕಾಲಿನುಗುರುಗಳಿಗೆ ಸಿಲುಕಿ, ಸ್ವಲ್ಪ ಹೊತ್ತಿನಮೇಲೆಯೇ ನೆಲಕ್ಕೆ ಉರುಳುತ್ತಲಿದ್ದುವು. ಒಬ್ಬ ಅಶ್ವಸಾದಿಯು ಬೇರೊಬ್ಬ ಅಶ್ವವಾಹನನ್ನು ಹೊಡೆದು, ಕುದುರೆಯ ಬೆನ್ನಿನಮೇಲೆ ಮೂರ್ಛೆಕೆಡಹಿದ ಬಳಿಕ, ಅವನು ಮತ್ತೊಂದು ಪೆಟ್ಟನ್ನು ತಾಳಲಾರೆನೆಂದರಿತರೆ, ಮೊದಲಿನವನು–ಮರಳಿ ಹೊಡೆಯದಿದ್ದುದು ಮಾತ್ರವಲ್ಲದೆ; ಹಗೆಯನ್ನುಪಚರಿಸಬಲ್ಲ ಆಳನ್ನು ಬಯಸುತ್ತಲಿರುವನು. ದೇಹಾಭಿಮಾನವಿಲ್ಲದೆ ಕವಚಧಾರಿಗಳಾದ ವೀರರು – ಕಾಳಗಕ್ಕೆಳಸಿ ಬಂದು, ಒರೆಗೆಳನ್ನು ಹಿರಿದು ಬೀಸಿದ ಖಡ್ಗಗಳು – ತೋರವಾದ ಕೊಂಬುಗಳ ಮೇಲೆ ಬಿದ್ದು, ಬೆಂಕಿಯ ಕಿಡಿಗಳನ್ನೆಬ್ಬಿಸಲು, ಹೆದರಿದ ಆನೆಗಳು ಸೊಂಡಿಲುಗಳ ಘೂತ್ಕಾರದಿಂದ ಹೊರಟ

ಹನಿಗಳಿಂದಲೂ, ಗಾಳಿಯಿಂದಲೂ ಆರಿಸುತ್ತಲಿದ್ದುವು. ಶರಗಳಿಂದ ಇರಿಯಲ್ಪಟ್ಟ ಶಿರಗಳೆಂಬ ಹಣ್ಣುಗಳಿಂದಲೂ, ತಲೆಕೆಳಗಾಗಿ ಉರುಳಿದ ತಲೆಪಾಗುಗಳೆಂಬ ಪಾನಪಾತ್ರೆಗಳಿಂದಲೂ, ಹರಿಯುತ್ತಲಿರುವ ರಕ್ತದ ಕಾಲುವೆಯೆಂಬ ಮದ್ಯರಸದಿಂದಲೂ, ರಣಭೂಮಿಯು ಮೃತ್ಯುವಿಗೆ ಪಾನಭೂಮಿಯಂತಿದ್ದಿತು. ರಣಾಂಗಣದಲ್ಲಿ ತುಂಡುತುಂಡಾಗಿ ಉರುಳಿರುವ ವೀರರ ತೋಳುಗಳನ್ನು, ಹಕ್ಕಿಗಳು ಕೊಕ್ಕಿನಿಂದ ಕುಕ್ಕುತ್ತಲಿರುವುದನ್ನು ಕಂಡು, ಅವುಗಳನ್ನು ಹೆದರಿಸಿ, ಹಾರಿಸಿ, ತಾವು ಸೆಳೆದು ತರುವಲ್ಲಿ, ಆ ಬಾಹುಖಂಡದ ಬುಡದಲ್ಲಿದ್ದ ಬಾಪುರಿಯ ತುದಿಯು ದವಡೆಗೆ ಬಡಿಯಲು, ಮಾಂಸವನ್ನು ತಿನ್ನಬೇಕೆಂಬ ಬಯಕೆಯು ಬಲವಾಗಿದ್ದರೂ, ಹೆಣ್ಣು ನರಿಗಳು ಅವುಗಳನ್ನು ತೊರೆದು ದೂರ ಸರಿಯುತ್ತಲಿದ್ದುವು.

ಆ ಯುದ್ಧಭೂಮಿಯಲ್ಲಿ ಒಬ್ಬ ವೀರನು – ಹಗೆಯ ಕರವಾಳದಿಂದ ತನ್ನ ಕತ್ತು ಕತ್ತರಿಸಲ್ಪಟ್ಟು ಧರೆಗುರುಳಲು, ಸಗ್ಗದಿಂದೈತಂದ ವಿಮಾನವನ್ನೇರಿ, ದೇವಶರೀರವನ್ನಾಂತು, ತನ್ನ ಎಡದ ತೊಡೆಯಮೇಲೆ ಕುಳಿತಿರುವ ದೇವಾಂಗನೆಯೊಡನೆ, ಕಾಳಗದಿಳೆಯೊಳಗೆ ಕುಣಿಯುತ್ತಲಿರುವ ತನ್ನ ಪೂರ್ವದೇಹದ ಮುಂಡವನ್ನು ನೋಡುತ್ತಾ ತೆರಳುತ್ತಲಿದ್ದನು. ಕೆಲವು ಮಂದಿ ರಥಿಕರಾದ ವೀರರು ಒಬ್ಬೊಬ್ಬರ ಸಾರಥಿಗಳೂ ಮಡಿದುಹೋಗಲು, ಅವರೇ ಸಾರಥಿಗಳಾಗಿಯೂ, ರಥಿಕರಾಗಿಯೂ ಆಗುತ್ತಿದ್ದರು. ಕುದುರೆಗಳು ಅಳಿಯಲು, ಗದಾಯುದ್ಧದಲ್ಲಿ ತೊಡಗುವರು. ಆಯುಧಗಳು ಮುರಿಯಲು, ಬಾಹುಯುದ್ಧಕ್ಕೆ ತೊಡರಿ ಅಸುಗಳನ್ನು ನೀಗಿಕೊಳ್ಳುತ್ತಲಿದ್ದರು. ಮತ್ತೊಂದೆಡೆ ಇಬ್ಬರು ವೀರರು ಸಮರಾಂಗಣದಲ್ಲಿ ಬಡಿದಾಡತೊಡಗಿದರು. ಇಬ್ಬರಿಗೂ ಗಾಯಗಳಾಗಿ ಈರ್ವರೂ ಮಡಿದು ಸಮಕಾಲದಲ್ಲಿಯೇ ಇಬ್ಬರ ಉಸಿರುಗಳೂ ಹಾರಿ ಹೋದುವು. ಇಬ್ಬರೂ ಏಕಕಾಲದಲ್ಲಿ ದೇವಶರೀರವನ್ನು ಪಡೆದರು ಒಬ್ಬ ದೇವಾಂಗನೆಯನ್ನೇ, ನಾನು ವರಿಸಬೇಕು, ತಾನು ವರಿಸಬೇಕು ಎಂದು ದೇವತ್ವದಲ್ಲಿಯೂ ಹಗೆತನದ ವಿವಾದವು ತಪ್ಪಲಿಲ್ಲ. ಇಬ್ಬರು ಒಂದೇ ಭೋಗ್ಯವಸ್ತುವಿನಲ್ಲಿ ಬಯಕೆಗೊಂಡರೆ ವೈರವು ತಪ್ಪದು. ರಚನೆಯಿಂದ ನಿಂತಿರುವ ಎರಡು ಸೇನೆಗಳ – ಒಂದರಹಿಂದೆ ಒಂದಾಗಿ ಹರಿದು ಬರುತ್ತಲಿರುವ ಗಾಳಿಗಳಿಂದ ಬೆಳೆದ ದೊಡ್ಡ ಕಡಲಿನ ಅಲೆಗಳಂತೆ ನೆಲೆಯಿಲ್ಲದ ಸೋಲುಗೆಲುವುಗಳನ್ನು ಪಡೆಯುತ್ತಲಿದ್ದುವು.

ಬಳಿಕ ಮಹಾಬಲಶಾಲಿಯಾದ ಅಜನು ಪರಬಲದಿಂದ ತನ್ನ ದಳವು ಸೋಲನ್ನು ಪಡೆಯುತ್ತಲಿದ್ದರೂ, ಹಿಂಜರಿಯದೆ, ಅರಿಸೇನೆಯನ್ನೆ ಇದಿರಿಸಿ ತೆರಳಿದನು. ಹುಲ್ಲಿನ ಬಣವೆಯಿಂದ ಹೊಗೆಯನ್ನು ಗಾಳಿಯ ಎತ್ತ ಸೆಳೆಯುವುದೋ, ಉರಿಯನ್ನೂ ಅತ್ತಲೇ ಸೆಳೆಯುವುದಲ್ಲವೆ? ಅಸಹಾಯಶೂರನೆನಿಸಿ ಕೊಬ್ಬಿರುವ

ಅಜಕುಮಾರವೀರನು ಕವಚವನ್ನಳವಟ್ಟು, ಬತ್ತಳಿಕೆಯನ್ನು ಧರಿಸಿ, ಬಿಲ್ಲನ್ನು ಹಿಡಿದು, ರಥಿಕನಾಗಿ ಕುಳಿತು, ಮಹಾ ವರಾಹರೂಪವನ್ನು ಧರಿಸಿದ ನಾರಾಯಣನು-ಪ್ರಳಯ ಸಮಯದೊಳಗೆ ಉಕ್ಕಳಿಸುತ್ತಲಿರುವ ಸಾಗರದ ಜಲವನ್ನು ಹೇಗೋ ಹಾಗೆ, ಹಗೆಗಳ ಪಡೆಯನ್ನು ಅಡಗಿಸುತ್ತ ಬಂದನು. ಆ ಆಜಿಯಲ್ಲಿ ಅಜನು ಬಲು ಅಂದವಾದ ಬಲಗೈಯಿಂದ ಬತ್ತಳಿಕೆಯ ಮೂಲಕ ಬಾಣಗಳನ್ನು ಹರಿಯುತ್ತಲಿದ್ದುದು ಮಾತ್ರವೇ ಗೋಚರಿಸುತ್ತಲಿದ್ದಿತು ಶರಸಂಧಾನ ಮುಂತಾದುದೊಂದೂ ಗೊತ್ತಾಗುತ್ತಲಿರಲಿಲ್ಲ. ಕಿವಿಯವರೆಗೆ ಒಂದು ಬಾರಿ ಸೆಳೆದ ಹೆದೆಯು - ಹಗೆಗಳನ್ನಿರಿಯುವ ಹಲವು ಬಾಣಗಳನ್ನು ಪಡೆಯುತ್ತಲಿದೆಯೋ ಎಂಬಂತಿದ್ದಿತು. ವೀರಾಗ್ರಗಣ್ಯನಾದ ಅಜನು - ಅರಿಗಳ ಕೊರಳುಗಳನ್ನರಿದು, ಶಿರಗಳನ್ನು ಹರಡಿ, ರಣಭೂಮಿಯನ್ನು ಹೊದಿಸಿದನು. ಆ ತಲೆಬುರುಡೆಗಳು ರೋಷದಿಂದ ಔಡುಗಳನ್ನು ಕಡಿದಿದ್ದವು. ಕೆಳದುಟಿಗಳಲ್ಲಿ ಕೆಂಪು ಅಡರಿದ್ದಿತು. ಹಣೆಗೆಳಲ್ಲಿ ಕಣ್ಣು ಹುಬ್ಬುಗಳು ಗಂಟಟ್ಟ ಗೆರೆಗಳು ಕಾಣಬರುತ್ತಲಿದ್ದುವು.

ತದನಂತರದಲ್ಲಿ-ಆನೆ, ಕುದುರೆ, ತೇರು, ಕಾಲಾಳುಗಳೆಂಬ ಸರ್ವಸಾಧನಗಳನ್ನೂ ಸಿದ್ಧಪಡಿಸಿಕೊಂಡು, ಅರಿಯ ಕವಚವನ್ನಿರಿಯುವ ಸರ್ವಾಯುಧಗಳನ್ನೂ ಹಿಡಿದು, ಸಮರಭೂಮಿಯಲ್ಲಿ ಸರ್ವಪ್ರಯತ್ನದಿಂದಲೂ ಸನ್ನದ್ಧರಾಗಿ, ರೋಷಪರವಶರಾದ ಸರ್ವೋರ್ವಿಪಾಲರೂ ಸೇರಿ ಅಜಕುಮಾರನನ್ನು ಹೊಡೆದರು. ಅರಿಗಳ ಶರಪರಂಪರೆಯಿಂದ ತೇರು ಮುಚ್ಚಲ್ಪಟ್ಟಿತು, ರಥಧ್ವಜದ ತುದಿಯಿಂದ ಮಾತ್ರವೇ ಅಜನು ಕಾಣಬರತಕ್ಕವನಾಗಿದ್ದುದರಿಂದ, ಮಂಜಿನಿಂದ ಮುಚ್ಚಲ್ಪಟ್ಟಿರುವ ಮುಂಜಾನೆಯು - ತುಸ ಬೆಳಕನ್ನೊಳಗೊಂಡಿರುವ ರವಿಯಿಂದ ಹೇಗೋ ಹಾಗೆ ಕಂಗೊಳಿಸುತ್ತಲಿದ್ದನು.

ಅಹಹ!! ಅಜಕುಮಾರನಿಗೆ ಬಹಳ ಒಳ್ಳೆಯ ಸಮಯವು ಸಮನಿಸಿತು. ಕುಸುಮಶರನಂತೆ ಸುಕುಮಾರನಾದ ಮಹಾರಾಜನಂದನನು ಎಚ್ಚರಗೊಂಡನು. ಪೂರ್ವದಲ್ಲಿ ಪ್ರಿಯಂವದನೆಂಬ ಗಂಧರ್ವನಿಂದ ಪಡೆದಿದ್ದ ಗಾಂಧರ್ವಾಸ್ತ್ರವನ್ನು ನೆನೆದನು. ನಿದ್ರೆಯಲ್ಲಿ ಮುಳುಗಿಸುವ ಆ ಅಸ್ತ್ರವನ್ನು ಪೊಡವಿಯೊಡೆಯರ ಮೇಲೆ ಪ್ರಯೋಗಿಸಿದನು. ಬಳಿಕಲಾ ನರಪಾಲ ಸೈನ್ಯವು - ಬಿಲ್ಲಿನ ಹೆದೆಯನ್ನು ಸೆಳವುದರಲ್ಲಿ ಮುಂದುವರಿಯದ ಕರಗಳಿಂದೊಡಗೂಡಿ, ಒಮ್ಮೊಗನಾಗಿ ಹೆಗಲಿನ ಕಡೆಗೆ ಜೋತ ತಲೆಪಾಗುಗಳನ್ನುಳ್ಳುದಾಗಿ, ರಥಧ್ವಜಸ್ತಂಭಗಳಿಗೆ ದೇಹಗಳನ್ನೊದಗಿಸಿ ನಿದ್ರಾಪರವಶವಾಯಿತು.

ಆ ಹಿಂದೆ ರಘುಕುಮಾರನು - ಇಂದುಮತಿಗೆ ಪ್ರೀತಿಪಾತ್ರವೆನಿಸಿದ ತನ್ನ ಕೆಳತುಟಿಯಮೇಲೆ ವಿಜಯಶಂಖವನ್ನಿಟ್ಟು ಮುಖಮಾರುತದಿಂದ ದನಿಗೈಸಿದನು. ಅಂತಪ್ಪ ಜಯಜಲಜ ನಿನದದಿಂದ ಅದ್ವಿತೀಯ ವೀರನೆನಿಸಿ, ತನ್ನ ತೋಳುಬಲದಿಂದ ಗಳಿಸಲ್ಪಟ್ಟುದಾಗಿ, ಶರೀರವನ್ನಾಂತಿರುವ ಯಶಸ್ಸನ್ನು ಪಾನಮಾಡುತ್ತಲಿರುವವನಂತೆ ವಿರಾಜಿಸುತ್ತಲಿದ್ದನು. ಅದುವರೆಗೆ ಪಲಾಯನರಾಗಿದ್ದ ಸೈನಿಕರು–ಅಜನ ವಿಜಯ ಶಂಖಧ್ವನಿಯನ್ನು ಕೇಳಿದರು. ಕೂಡಲೇ ಓಹೋ! ನಮ್ಮ ದೊರೆಗೆ ಜಯವುಂಟಾಯಿತೆಂದು ತಿಳಿದು, ಹಿಂತಿರುಗಿ ಓಡಿಬಂದರು. ಹಗೆಗಳ ಪಡೆಯೆಲ್ಲ ಮೈಮರೆತು ಮಲಗಿರುವುದನ್ನೂ, ಅದರ ನಡುವೆ – ಮುಗಿದ ತಾವರೆಗಳ ಮಧ್ಯದಲ್ಲಿ ಪ್ರತಿಬಿಂಬಿಸಿದ ಚಂದ್ರನಂತಿರುವ ಅಜಕುಮಾರನನ್ನೂ ಅವಲೋಕಿಸಿದರು.

ತರುವಾಯ ರಘುಪುತ್ರನು– ಬಾಣದಲಗಿನ ತುದಿಯನ್ನು ರಕ್ತದಲ್ಲಿ ಅದ್ದಿಸಿ, ಶತ್ರುರಾಜರ ಧ್ವಜಪಟಗಳಲ್ಲಿ "ಎಲೈ ದೊರೆಗಳಿರಾ! ಈಗ ರಘುವೀರ ಕುಮಾರನು– ಕರುಣೆಯಿಂದ ನಿಮ್ಮ ಯಶಸ್ಸನ್ನು ಮಾತ್ರವೇ ಅಪಹರಿಸಿದನಲ್ಲದೆ, ಪ್ರಾಣಗಳನ್ನಲ್ಲ" ಎಂದೀಪ್ರಕಾರವಾಗಿರುವ ವರ್ಣಾವಳಿಯನ್ನು ಸೇವಕರಿಂದ ಬರೆಯಿಸಿದನು. ಅಲ್ಲಿಂದ ಬಿಲ್ಲಿನ ತುದಿಯನ್ನು ಒಂದು ಕೈಯಿಂದ ಹಿಡಿದು ನೆಲದಮೇಲೆ ಊರುತ್ತಾ, ಮತ್ತೊಂದು ಕರದಿಂದ ತಲೆಪಾಗನ್ನು ತೆಗೆದು, ಕೆದರಿದ ತಲೆಗೂದಲುಳ್ಳವನೂ, ಹಣೆಯಲ್ಲಿ ತುಂಬಿದ ಬೆವರಿನ ಹನಿಗಳುಳ್ಳವನೂ ಆಗಿ ಬರುತ್ತಲಿರುವ ಅಜನು ಪ್ರಿಯಳಾದ ಇಂದುಮತಿಯ ತಡಿಗೆ ಬೇಗನೈತಂದು, ಹೆದರಿರುವಾಕೆಯನ್ನು ಕುರಿತು ಇಂತೆಂದನು–

"ಎಲೌ ವಿದರ್ಭರಾಜ ನಂದಿನಿಯೇ! ನಾನು ಒಪ್ಪಿರುವೆನು, ಇತ್ತ ನೋಡು, ಸಮರಭೂಮಿಯಲ್ಲಿ ಪವಳಿಸಿರುವ ಈ ಹಗೆತನದ ಪೊಡವಿಯಾಣ್ಮರ ಆಯುಧಗಳನ್ನೆಲ್ಲ ಎಳೆಯ ಹುಡುಗರು ಸೆಳೆದೊಯ್ಯುತ್ತಲಿರುವರು. ಈ ವಿಧವಾದ ರಣಚೇಷ್ಟೆಯಿಂದೊಡಗೂಡಿರುವ ದೊರೆಮಕ್ಕಳು–ನನ್ನ ಕರಗತಳಾಗಿರುವ ಈ ನಿನ್ನನ್ನು ಪಡೆಯಬೇಕೆಂದು ಬಯಸುತ್ತಲಿದಾರೆ." ಎಂದ ಅಜಕುಮಾರನ ಮೃದುಮಧುರವಾದ ನುಡಿಯು – ಕಿವಿಯನ್ನು ಹೊಕ್ಕ ಕೂಡಲೆ – ವೈರಿಗಳಿಂದುಂಟಾಗಿದ್ದ ವ್ಯಥೆಯಿಂದ ದೈನ್ಯವನ್ನು ಪಡೆದಿದ್ದ ಇಂದುಮತಿಯ ವದನಾರವಿಂದವು – ನಿಟ್ಟುಸಿರಿನ ಬಿಸಿಯು ತೊಲಗಲು, ಕನ್ನಡಿಯಂತೆ ತನ್ನ ಸ್ವಾಭಾವಿಕವಾದ ನೈರ್ಮಲ್ಯವನ್ನು ಪಡೆದು ಬೆಳಗಿತು. ಯದ್ಯಪಿ ಇಂದುಮತಿಯು – ಪ್ರಿಯವಲ್ಲಭನ ವಿಜಯದಿಂದ ಬಹಳವಾಗಿ ಹರ್ಷಿತಳಾದಳು. ಆದರೂ ನಾಚಿಕೆಗೆ ಒಳಗಾಗಿದ್ದುದರಿಂದ ಪತಿಯ ಪರಾಕ್ರಮವನ್ನು ಇದಿರಿಗೆ ಹೊಗಳಲಾರದೆ ಹೋದಳು. ಮುಂಗಾರು ಮಳೆಯ ಹನಿಗಳಿಂದ ನನೆದ ಬೈಲುನೆಲವು ಮಯೂರಗಳ ಕೇಕಾರವಗಳಿಂದ ಮೇಘಸಮುದಾಯವನ್ನು ಹೇಗೋ ಹಾಗೆ, ತನ್ನ ಗೆಳತಿಯರ ಮುಖದಿಂದ ಅಭಿನಂದಿಸಿದಳು.

ದೋಷರಹಿತನಾದ ಆ ಅಜಕುಮಾರನು – ಇಂತು ವೈರಿಗಳ ಶಿರಗಳ ಮೇಲೆ ತನ್ನೆಡಗಾಲನ್ನೂರಿ, ನಿರ್ದುಷ್ಟಳಾದ ಇಂದುಮತಿಯನ್ನು ಸ್ವಾಧೀನಪಡಿಸಿಕೊಂಡನು. ತೇರಿನ ಕುದುರೆಗಳ ಧೂಳಿಯಿಂದ ತುಂಬಿದ ಮುಂಗೂದಲುಳ್ಳ ಆ ಭೋಜಕನ್ಯೆಯೇ ರಘುರಾಜನಂದನನಿಗೆ ಸಾಕ್ಷಾತ್ತಾಗಿ ಬಂದ ಸಮರವಿಜಯಲಕ್ಷ್ಮಿಯಾದಳು. ಅಜನು ವಿವಾಹವಿಜಯಲಕ್ಷ್ಮಿಯಿಂದೊಡಗೂಡಿದನೆಂಬ ಸುದ್ದಿಯು ರಘುರಾಜನಿಗೆ ಮೊದಲೇ ಮುಟ್ಟಿದ್ದಿತು.

ಅದುವರೆಗೆ ಶ್ಲಾಘ್ಯಳಾದ ಜಾಯೆಯಿಂದೊಡಗೂಡಿ ಜಯಶಾಲಿಯಾದ ಅಜನೂ ಹಿಂದಿರುಗಿ ಬಂದನು. ರಘುವು – ಆ ಕುಲಕುಮಾರನನ್ನು ಕಂಡು ಅಭಿನಂದಿಸಿದನು. ಕುಟುಂಬದ ಭಾರವನ್ನು ಅವನಮೇಲೆ ಹೊರಿಸಿದನು. ತಾನು ಮೋಕ್ಷಮಾರ್ಗದಲ್ಲಿ ಅಡಿಯಿಡಲೆಳಸಿದನು. ಕುಲಧರ್ಮವನ್ನು ಹೊತ್ತು ನೆರವೇರಿಸತಕ್ಕ ಕುಮಾರನು ದೊರೆತಮೇಲೆ ಸೂರ್ಯವಂಶದರಸರಿಗೆ ಗೃಹಸ್ಥಾಶ್ರಮವನ್ನು ದಾಟುವುದರಲ್ಲಿಯೆ ಅಭಿರುಚಿ.

****

ಎಂಟನೆಯ ಅಧ್ಯಾಯ

ಅಜವಿಲಾಪ

ಸೂಚನೆ । ಅರಿಗಳನಿರಿದಜನೈತರೆ ।
ಸಿರಿಯನವಂಗಿತ್ತು ಪೊಕ್ಕನಾ ರಘು ಬನಮಂ ॥
ಅರಸಿಯ ವಿರಹದೊಳಜನುಂ ।
ಕರಗಿದನುರೆ ದುಗುಡದಿಂದೆ ದಶರಥನೆಸೆದಂ ॥

ತರುವಾಯ – ಅಜನ ಕರವಿನ್ನೂ ಮಂಗಳಕರವೆನಿಸಿದ ವಿವಾಹ ಕಂಕಣಬಂಧದಿಂದ ಕಂಗೊಳಿಸುತ್ತಲಿರುವಾಗಲೇ, ಎರಡನೆಯ ಇಂದುಮತಿಯಂತಿರುವ ರಾಜ್ಯಲಕ್ಷ್ಮಿಯನ್ನೂ, ರಘುಭೂಪಾಲನು–ಆತನ ಕೈಸೇರಿಸಿದನು. ಆದರೆ – ಲೋಕದಲ್ಲಿ ಅರಸುಮಕ್ಕಳು – ವಿಷಪ್ರಯೋಗವೇ ಮೊದಲಾದ ಮಹಾಪಾಪದ ಕೆಲಸಗಳನ್ನು ಮಾಡಿಯಾದರೂ, ಹೆರರ ಕಯ್ಯಿಂದ ರಾಜ್ಯವನ್ನು ಕಸುಗೊಂಡು ವಶಮಾಡಿಕೊಳ್ಳಲು ಪ್ರಯತ್ನಿಸುವುದು ದಿಟ. ಈ ಅಜರಾಜನು ಮಾತ್ರ ತಾನಾಗಿಬಂದ ಸಾಮ್ರಾಜ್ಯವನ್ನು ತಂದೆಯ ಆಣತಿಗೆ ಅಡಿಯಾಳಾಗಿ ಪರಿಗ್ರಹಿಸಿದನಲ್ಲದೆ ಸುಖದಾಶೆಯಿಂದಲ್ಲ. ಕುಲಗುರುವಾದ ವಶಿಷ್ಠಮುನಿಯು– ಸಂಪ್ರದಾಯವನ್ನನುಸರಿಸಿ ಅಭಿಷೇಕೋತ್ಸವದಲ್ಲಿ ಮಂಗಳಪೀಠದ ಮೇಲೆ ಕುಳಿತ ಅಜನನ್ನೂ, ಭೂಮಿಯನ್ನೂ ಪಾವನವಾದ ಮಂತ್ರೋದಕದಿಂದ ಪ್ರೋಕ್ಷಿಸಿದನು. ಆಗಲಾ ವಸುಮತಿಯು – ವ್ಯಕ್ತವಾಗಿ ಉಬ್ಬಿ, ಗುಣವಂತನಾದ ಪತಿಯು ದೊರೆತುದರಿಂದ ತನಗುಂಟಾದ ಆನಂದವನ್ನು ಕೃತಾರ್ಥತೆಯೊಂದಿಗೆ ಸೂಚಿಸುವಂತಿದ್ದಿತು. ಇದರಿಂದ ತಂದೆಗೊಂದು ಕೊರತೆಯಲ್ಲ, ಏಕೆಂದರೆ – ಪಿತನು – "ಹೆರರಿಂದ ತನಗೆ ಗೆಲುವನ್ನೂ, ಮಗನಿಂದ ಸೋಲನ್ನೂ ಬಯಸಬೇಕು" ಎಂದು ಹಿರಿಯರ ಒಪ್ಪಿತವೇ ಉಂಟಲ್ಲವೆ? ಅಥರ್ವವಿದನಾದ ಆ ಗುರು ವಶಿಷ್ಠಮುನಿಯಿಂದ ವಿಧಿಪ್ರಕಾರ ಪಟ್ಟಾಭಿಷೇಕೋತ್ಸವವನ್ನು ಪಡೆದ ಅಜನು – ಪರರಿಗಸದಳವೆನಿಸಿದ ತೇಜವನ್ನೊಳಗೊಂಡನು. ಕ್ಷತ್ರತೇಜದಿಂದೊಡಗೂಡಿದ ಬ್ರಹ್ಮತೇಜವು ಗಾಳಿಬೆಂಕಿಗಳ ಸೇರ್ವೆಯಂತೆ ಬಲವಾಗಿ ಬೆಳಗುವುದಲ್ಲವೆ? ಬಳಿಕ

ಪ್ರಜೆಗಳು – ಹೊಸಬನಾದ ಅಜಮಹಾರಾಜನನ್ನು, ಮುಪ್ಪಿನಿಂದ ಹಿಂದಿರುಗಿ ಹರಯವನ್ನು ಪಡೆದ ರಘುರಾಜನನ್ನಾಗಿಯೇ ಭಾವಿಸಿದರು. ಏಕೆಂದರೆ ಅಜನು – ರಘುವಿನಿಂದ ಧರೆಯ ಸಿರಿಯನ್ನು ಮಾತ್ರವೇ ಪಡೆಯಲಿಲ್ಲ, ಆತನ ಸಕಲಸುಗುಣಗಳನ್ನೂ ಸ್ವೀಕರಿಸಿಯೇ, ಇದ್ದನು. ಅಜನ ಆಳ್ವಿಕೆಯಲ್ಲಿ – ಶುಭಕರನೆನಿಸಿದ ಅಜನಿಂದೊಡಗೂಡಿ ಏಳಿಗೆಯೊಳಿರುವ ರಾಜ್ಯವೊಂದು, ಮಂಗಳಕರವೆನಿಸಿ, ಇಂದ್ರಿಯಜಯರೂಪವಾಗಿರುವ, ವಿನಯದಿಂದ ಸಂಪನ್ನವಾದ ಅಜನ ಹೊಸದಾದ ಯೌವನವೊಂದು ಈ ಎರಡೂ ಚೆನ್ನಾಗಿ ಹೊಂದಿಕೊಂಡು ಬಹಳವಾಗಿ ಶೋಭಿಸುತ್ತಲಿದ್ದುವು. ಅಜನು ಅಂತಹ ರಾಜ್ಯಲಕ್ಷ್ಮಿಯನ್ನು ಪಡೆದರೂ – ಹೆಮ್ಮೆಗೀಡಾಗಲಿಲ್ಲ.

ಮಹಾಭುಜಬಲಸಂಪನ್ನನಾದ ಅಜನು – ಹೊಸದಾಗಿ ಕೈಹಿಡಿದ ವಧುವಿನಂತೆ, ನೂತನವಾಗಿ ಕೈ ಸೇರಿರುವ ಮೇದಿನಿಯನ್ನು, ಕ್ರೂರನಾಗದೆ ಸದಯನಾಗಿ ಅನುಭವಿಸುತ್ತ ಬಂದನು. ಆ ಅಜನ ಆಳ್ವಿಕೆಯಲ್ಲಿ ಪ್ರಜೆಗಳೊಳಗೆ ಪ್ರತಿಯೊಬ್ಬನೂ – ನಾನೇ ಅರಸನಿಗೆ ಅತ್ಯಂತ ಮಾನ್ಯನೆನಿಸಿರುವೆನು ಎಂದು ತಿಳಿದುಕೊಂಡಿದ್ದನು. ಏಕೆಂದರೆ – ಸಾವಿರಾರು ಹೊಳೆಗಳು ಎತ್ತೆತ್ತಲಿಂದಲೋ ಬಂದು ಮೇಲೆಮೇಲೆ ಬೀಳುತ್ತಲಿದ್ದರೂ ತಿರಸ್ಕರಿಸದೆ, ಕಡಲು – ತನ್ನಲ್ಲಿ ಆಸ್ಪದವನ್ನು ಕೊಡುವ ಹಾಗೆ, ಅಜನು – ಯಾರೊಬ್ಬರನ್ನೂ ಅಸಡ್ಡೆ ಮಾಡದೆ, ತನ್ನ ಬಳಿ ಅವಕಾಶವನ್ನು ಕೊಡುತ್ತಲಿದ್ದುದೇ ಅದಕ್ಕೆ ಮೂಲ. ಅಜನೃಪನು ಅತಿ ಕಠಿನನೆನಿಸಿಕೊಳ್ಳಲಿಲ್ಲ. ಆದರೆ ಅತಿ ಮೃದುವೂ ಆಗಿರಲಿಲ್ಲ. ನಡುವಣ ಅಂತಸ್ತನ್ನು ಆಶ್ರಯಿಸಿ, ಹಾಗೆಯೇ ಇರುವ ವಾಯುವು – ಗಿಡಗಳನ್ನು ಹೇಗೋ ಹಾಗೆ, ನರಪತಿಗಳನ್ನು ಮೂಲೋತ್ಪಾಟನೆ ಮಾಡದೆಯೇ ಅವರನ್ನು ತಗ್ಗಿಸಿದನು.

ಬಳಿಕ ರಘುವು – ಸಂಪದದ ಏಳಿಗೆಯಲ್ಲಿಯೂ ವಿಕಾರವನ್ನು ಹೊಂದದೆ, ಸತ್ತ್ವಗುಣದಿಂದ ಸಂಪನ್ನನಾಗಿ, ಮಂತ್ರಿಗಳಲ್ಲಿ ನೆಲೆಗೊಂಡ ಆತ್ಮಜನನ್ನು ನೋಡಿ, ಸ್ವರ್ಗದಲ್ಲಿರುವ ಶಬ್ದಾದಿ ವಿಷಯಗಳಲ್ಲಿಯೂ ಆಶೆಯನ್ನು ತೊರೆದನು.

ಇದು ಇವನ ಕುಲಧರ್ಮ, ಹೇಗೆಂದರೆ – ದಿಲೀಪನ ವಂಶದಲ್ಲುದಿಸಿದ ಅವನಿಪಾಲರೆಲ್ಲರೂ – ಮುಪ್ಪು ಬಂದಾಗ ಐಶ್ವರ್ಯವನ್ನು ಔರಸರಿಗೊಪ್ಪಿಸಿ, ನಾರುಬಟ್ಟೆಗಳನ್ನುಡುವ ಮುನಿಗಳ ಹಾದಿಯನ್ನು ಹಿಡಿಯುವುದೇ ವಾಡಿಕೆ. ಅದರಂತೆ ಕಾಡಿಗೆ ಹೊರಡಲು ಅಣಿಯಾಗುತ್ತಲಿರುವ ತಂದೆಯನ್ನು ಕಂಡ ಅವನು ಆತನ ಅಡಿದಾವರೆಗಳಲ್ಲಿ ಪಾಗಿನಿಂದ ಬೆಳಗುವ ಶಿರದಿಂದ ಅಡ್ಡ ಬಿದ್ದು, ಈ ನನ್ನನ್ನು ಬೈಲುಮಾಡಿ ಹೋಗಕೂಡದೆಂದು ದೈನ್ಯದಿಂದ ಬೇಡುತ್ತ ತಡೆದನು. ಹಾಗೆ ಕಣ್ಣುಗಳಲ್ಲಿ

ನೀರುತುಂಬಿ ನಿಂತಿರುವ ಮಗನನ್ನು ನೋಡಿದ ರಘುವು – ಪುತ್ರವಾತ್ಸಲ್ಯದಿಂದ, ಇವನನ್ನು ಬಿಟ್ಟು ಹೋಗಬಾರದೆಂದು ನೆನೆದನು, ಆದರೆ – ಬಿಟ್ಟ ಪರೆಯನ್ನು ಹಾವು ಹೇಗೋ ಹಾಗೆಯೇ ತಾನು ತೊರೆದ ಸಿರಿಯನ್ನು ಮರಳಿ ಪಡೆಯಲಿಲ್ಲ. ಹೀಗಾದಮೇಲೆ ಆ ರಘುವು–ಜಿತೇಂದ್ರಿಯನಾಗಿ ನಾಲ್ಕನೆಯ ಆಶ್ರಮವನ್ನು ಆಶ್ರಯಿಸಿದನು, ಊರಹೊರಗೆ ದೂರದಲ್ಲಿ ಒಂದು ಗುಡಿಸಿಲಿನಲ್ಲಿ ವಾಸಕ್ಕೆ ನಿಂತನು. ಮಗನ ಅನುಭವಕ್ಕೆ ಒಳಗಾಗಿ – ತನಗೆ ಸೊಸೆಯಂತಿರುವ ಸಿರಿಯಿಂದ ಹೂವು, ಹಣ್ಣು, ನೀರು ಇವುಗಳನ್ನು ಒದಗಿಸಿಕೊಡುವಷ್ಟು ಮಾತ್ರ ಸೇವೆಯನ್ನು ಹೊಂದುತ್ತಲಿದ್ದನು, ಒಂದುಕಡೆ ಶಾಂತಿಯಲ್ಲಿ ನಿಂತ ರಘುವನ್ನುಳ್ಳುದೂ, ಮತ್ತೊಂದು ಕಡೆ ಏಳಿಗೆಯಲ್ಲಿ ಬರುತ್ತಲಿರುವ ಅಜನನ್ನುಳ್ಳುದೂ ಆಗಿರುವ ಅವರ ಕುಲವು – ಒಂದೆಡೆ ಅಸ್ತಾಭಿಮುಖನಾದ ಚಂದ್ರನನ್ನೊಳಗೊಂಡುದೂ, ಮತ್ತೊಂದೆಡೆ ಉದಿಸುತ್ತಲಿರುವ ರವಿಯನ್ನಳವಟ್ಟುದೂ ಆಗಿರುವ ಮುಗಿಲಿನೊಡನೆ ಸಾಮ್ಯವನ್ನು ಪಡೆಯಿತು. ಯತಿಭೂಪತಿಗಳ ಲಕ್ಷಣಗಳನ್ನು ತಾಳಿರುವ ಆ ರಘುರಾಘವರನ್ನು ನೋಡಿದ ನಾಡಿನ ಜನರೆಲ್ಲರೂ, ಭೂಮಿಯಲ್ಲಿ ಅವತರಿಸಿ ಇರತಕ್ಕ, ಅಪವರ್ಗೈಶ್ವರ್ಯಗಳಿಗೆ ಸಾಧಕಗಳಾದ ನಿವೃತ್ತಿ ಪ್ರವೃತ್ತಿ ಧರ್ಮಗಳ ಅಂಶಗಳನ್ನಾಗಿ ಭಾವಿಸಿದರು.

ಅಜನು – ವಿಜಯಪದವಿಯನ್ನು ಪಡೆಯಲು ಉಪಾಯ ಚಿಂತನೆಗಾಗಿ ನೀತಿವಿಶಾರದರಾದ ಮಂತ್ರಿಗಳೊಡನೆ ಕಲೆತನು. ರಘುವು ಅಪಾಯವಿಲ್ಲದ ಪರಮಪದವನ್ನು ಹೊಂದಲು ಪದ್ಧತಿಯ ಚಿಂತನೆಗಾಗಿ ಯಥಾರ್ಥವಾದಿಗಳಾದ ಯೋಗಿಗಳ ಸಂಗಡ ಸೇರಿದನು. ತರುಣನಾಗಿರುವ ಅಜರಾಜನು ಪ್ರಜಾವ್ಯವಹಾರಗಳ ಗುಣದೋಷಗಳನ್ನು ವಿಚಾರಮಾಡಲಿಕ್ಕೆ ಧರ್ಮಾಸನವನ್ನು ಏರುತ್ತ ಬಂದನು. ಮುಪ್ಪಿನ ಮುದುಕನಾದ ರಘುವಾದರೋ, ಯಮನಿಯಮಾದಿ ಗುಣಗಳಿಂದೊಡಗೂಡಿದ ಮನಸ್ಸನ್ನು ಆತ್ಮನಲ್ಲಿ ನೆಲೆಗೊಳಿಸುವ ಧಾರಣಾಯೋಗವನ್ನು ಅಭ್ಯಾಸಮಾಡಲು ದರ್ಭಾಸನವನ್ನು ಸೇವಿಸುತ್ತಲಿದ್ದನು, ಅಜನು ಕೋಶ, ದಂಡ, ಬಲ ಎಂಬ ಪ್ರಭುಶಕ್ತಿಯ ಸಂಪತ್ತಿನಿಂದ ತನ್ನ ನಾಡಿನ ಪಕ್ಕದ ನಾಡೊಡೆಯರನ್ನು ಅಡಗಿಸಿ ವಶಪಡಿಸಿಕೊಳ್ಳುತ್ತಲಿದ್ದನು. ರಘುವಾದರೆ – ಸಮಾಧಿಯ ಅಭ್ಯಾಸದಿಂದ ಶರೀರದೊಳಗಣ ಪ್ರಾಣಗಳನ್ನು ನಿಯಮಿಸತೊಡಗಿದನು. ಹೊಸ ಅರಸಾದ ಅಜನು ಹಗೆಗಳಾದ ಇಳೆಯಾಣ್ಮರೆಸಗುವ ಪ್ರಯತ್ನಗಳನ್ನು, ಅವುಗಳ ಫಲಗಳೊಂದಿಗೆ ಧ್ವಂಸ ಮಾಡುತ್ತಲಿದ್ದನು. ಹಳಬನಾದ ರಘುವು ಜನ್ಮಾಂತರಕ್ಕೆ ಬೀಜಗಳಾದ ಕರ್ಮಗಳನ್ನು ಜ್ಞಾನಾಗ್ನಿಯಿಂದ ಭಸ್ಮವನ್ನಾಗಿ ಮಾಡಲುಪಕ್ರಮಿಸಿದನು. ಆ ಇಬ್ಬರಲ್ಲೊಬ್ಬನಾದ ರಘುವು – ಫಲವನ್ನು ಚಿಂತಿಸಿ, ಸಂಧಿ ಮೊದಲಾದ

ಗುಣಗಳನ್ನು ಹರಡುತ್ತಲಿದ್ದನು. ಇತರನಾದ ರಘುವೂ, ಸತ್ತ್ವಾದಿ ಗುಣಗಳನ್ನು ಮರಳಿ ವಿಕಾರ ಪಡೆಯದಂತೆ ಮಣ್ಣು ಹೊನ್ನುಗಳನ್ನು ಸಮವಾಗಿ ಭಾವಿಸಿ ಜಯಿಸುತ್ತ ಬಂದನು. ನವಪ್ರಭುವಾದ ಅಜನು –ಫಲಸಿದ್ಧಿಯಾಗುವವರೆಗೂ ಸ್ಥಿರಪ್ರಯತ್ನದಲ್ಲಿ ನೆಲೆಗೊಂಡಿದ್ದನಲ್ಲದೆ ಹಿಂಜರಿದು ವಿರಮಿಸುತ್ತಲಿರಲಿಲ್ಲ. ನವೇತರನಾದ ರಘುವು ಪರಮಾತ್ಮದರ್ಶನವಾಗುವವರೆಗೂ ಸ್ಥಿರಚಿತ್ತನಾಗಿರುತ್ತಾ, ಐಕ್ಯಾನುಸಂಧಾನವೆಂಬ ಯೋಗವಿಧಿಯಿಂದ ಹಿಂದಿರುಗಲಿಲ್ಲ. ಇಂತು ಆ ಉಭಯರೂ–ಜಾಗರೂಕರಾಗಿದ್ದುಕೊಂಡು, ಹಗೆಗಳ, ಮತ್ತು ಇಂದ್ರಿಯಗಳ ಪ್ರಸರಣೆಯನ್ನು ಅಡಗಿಸಿ, ಪ್ರಿಯುಶ್ರೇಯುಗಳಲ್ಲಿ ಆಸಕ್ತರಾಗಿ, ಈರ್ವರೂ ಉದಯಾಪವರ್ಗಗಳೆಂಬ ಉಭಯ ಸಿದ್ಧಿಯನ್ನೂ ಕ್ರಮವಾಗಿ ಪಡೆದರು.

ಅನಂತರದಲ್ಲಿ ರಘುವು ಸರ್ವಭೂತಗಳಲ್ಲಿಯೂ ಸಮದೃಷ್ಟಿಯುಳ್ಳವನಾಗಿ, ಅಜನ ಅಭಿಲಾಷೆಯನ್ನು ಅನುಸರಿಸಿ – ಕೆಲವುವರ್ಷಗಳನ್ನು ಕಳೆದು, ಐಕ್ಯಾನುಸಂಧಾನವೆಂಬ ಯೋಗಸಮಾಧಿಯಿಂದ, ನಾಶವಿಲ್ಲದೆ – ಅವಿದ್ಯೆಗೆ ಪಾರವೆನಿಸಿರುವ ಪರಮಾತ್ಮಸಾಯುಜ್ಯವನ್ನು ಪಡೆದನು.

ಇತ್ತ ಆಹಿತಾಗ್ನಿಯಾಗಿದ್ದ ರಾಘವನಿಗೆ, ರಘುವು ಶರೀರವನ್ನು ತೊರೆದನೆಂಬ ಸುದ್ದಿಯು ತಿಳಿಯಿತು. ಬಹಳಹೊತ್ತು ವ್ಯಥೆಪಟ್ಟು ದುಃಖಿಸಿದನು, "ಸರ್ವಸಂಗ ನಿವೃತ್ತಿಯಿಂದ ಧ್ಯಾನಯೋಗಾಸಕ್ತನಾಗಿ ದೇಹತ್ಯಾಗವನ್ನು ಮಾಡಿದ ಯೋಗಿಗೆ ದಹನಕರ್ಮವೂ, ಪಿಂಡೋದಕ ಕ್ರಿಯೆಗಳೂ ಇಲ್ಲ, ಇಂತಹ ಭಿಕ್ಷುವಿನ ಕಳೇಬರವನ್ನು ಬಿಲದಲ್ಲಿ ನಟ್ಟು, ಪ್ರಣವದಿಂದ ಪ್ರೋಕ್ಷಣಾದಿಗಳನ್ನು ನೆರವೇರಿಸಬೇಕು" ಎಂಬ ವಿಧಿಯನ್ನು ಬಲ್ಲವನಾಗಿದ್ದುದರಿಂದ, ಹಾಗೆಯೇ ಇದ್ದ ಆತನಿಗೆ, ಅದೇ ವಿಧಿಯನ್ನು ಅನುಸರಿಸಿ, ಯತಿಗಳ ಸಹಾಯದಿಂದ ಅಗ್ನಿಸಂಸ್ಕಾರವಿಲ್ಲದೆ ಅಂತ್ಯೇಷ್ಟಿಯನ್ನು ಕ್ರಮವಾಗಿ ನೆರವೇರಿಸಿದನು.

ಯದ್ಯಪಿ – ಜನಕನಿಗೆ ಮಾಡಬೇಕಾದ ತಿಲೋದಕ, ಪಾರ್ವಣ, ದಾನ ಮೊದಲಾದ ಪಿತೃಕಾರ್ಯದ ಕಲ್ಪವನ್ನೆಲ್ಲ ತಿಳಿದಿರುವ ಆ ಅಜನು – ಆಗ ಪಿತೃಭಕ್ತಿಯಿಂದ ರಘುವಿಗೆ ಔರ್ಧ್ವದೈಹಿಕ ಕರ್ಮವನ್ನೆಲ್ಲ ಮಾಡಿದನು. ಆದರೆ – ಯೋಗಮಾರ್ಗದಿಂದ ಶರೀರವನ್ನು ತೊರೆದ ಆ ರಘುವಿನಂತಹ ಮಹಾತ್ಮರು – ಮಕ್ಕಳು ಕೊಡುವ ಪಿಂಡದಾನಾದಿಗಳನ್ನು ಅಪೇಕ್ಷಿಸುವುದಿಲ್ಲ.

ತಂದೆಯು ದಿವಂಗತನಾದನೆಂಬ ಕೊರತೆಯು ಅಜನನ್ನು ಬಹಳವಾಗಿ ಬಾಧಿಸುತ್ತಲಿದ್ದಿತು, ಪರಮಾರ್ಥ ತತ್ತ್ವವನ್ನು ತಿಳಿದ ಪ್ರಾಜ್ಞರು ಅವನನ್ನು ಕುರಿತು– "ಎಲೈ ಮತಿಯುತನಾದ ಮಹಾರಾಜನೆ! ನೀನು ಸಂಸಾರಭೂಮಿಯನ್ನು

ಅರಿಯದವನಲ್ಲ, ನಿಮ್ಮ ತಂದೆಯು ಧರ್ಮದಿಂದ ರಾಜ್ಯವನ್ನಾಳಿ, ಅನೇಕ ಸತ್ಕರ್ಮಗಳನ್ನಾಚರಿಸಿ, ಸತ್ಯವಂತನೆಂದು ಪ್ರಖ್ಯಾತನಾಗಿ, ಸುಪುತ್ರನಾದ ನಿನಗೆ ರಾಜ್ಯಭಾರವನ್ನೊಪ್ಪಿಸಿ, ಮುನಿವೃತ್ತಿಯಿಂದ ಮಹಾಯೋಗಿಗಳು ಪಡೆಯತಕ್ಕ ಶ್ರೇಷ್ಠತರವೆನಿಸಿದ ಮುಕ್ತಿಸಾಮ್ರಾಜ್ಯವನ್ನು ಪಡೆದು ಆನಂದಿಸುತ್ತಲಿರುವಲ್ಲಿ, ನೀನು ವ್ಯಥೆಪಡುವುದು ಧರ್ಮವಲ್ಲ. ಶಾಂತನಾಗಿ ಸಂತೋಷದಿಂದ ಮುಂದಿನ ಕರ್ತವ್ಯಗಳನ್ನು ನಿರ್ವಹಿಸು" ಎಂಬಿವೇ ಮೊದಲಾದ ಸಮಾಧಾನ ವಚನಗಳನ್ನು ಹೇಳಿ, ಸ್ವಸ್ಥನಾಗುವಂತೆ ಮಾಡಿದರು. ದುಃಖಕ್ಕೆ ಹುಟ್ಟಿದಾಗ ಇದ್ದ ಶಕ್ತಿಯೇ ಯಾವಾಗಲೂ ಏಕರೀತಿಯಿಂದಿದ್ದರೆ, ಲೋಕವ್ಯವಹಾರವು ನಡೆಯುವುದುಂಟೆ? ಎಂದಿಗೂ ಆಗಲಿಕ್ಕಿಲ್ಲ. ಬಳಿಕ ದಿನಕ್ರಮದಿಂದ ಅವನಿಗೆ ಮನೋವ್ಯಥೆಯು ಕಡಮೆಯಾಯಿತು. ಬಿಲ್ಲಿನಲ್ಲಿ ಹೆದೆಯನ್ನೇರಿಸಿ ಎಲ್ಲೆಲ್ಲಿಯೂ ತನ್ನ ಆಣತಿಗೆ ಅಡ್ಡಿಯಿಲ್ಲದಂತೆ ಭೂಮಂಡಲವನ್ನೆಲ್ಲ ವಶಪಡಿಸಿಕೊಂಡು ಸಮಾಧಾನಸ್ಥಿತಿಗೆ ತಂದನು.

ಬಳಿಕ ಭೂಮಿಭಾಮಿನಿ, ಇಂದುಮತೀಕಾಮಿನಿ, ಇವರೀರ್ವರೂ–ಆ ಅಜನನ್ನು, ಮಹಾ ಪೌರುಷಸಂಪನ್ನನೂ, ಭೋಗಶಕ್ತಿಸಂಪನ್ನನೂ ಆಗಿರುವ ಪತಿಯನ್ನಾಗಿ ಪಡೆದು, ಮೊದಲನೆಯವಳು – ಮಹಾ ರತ್ನಜನನಿಯಾಗಿ ಕಂಗೊಳಿಸಿದಳು. ಎರಡನೆಯವಳು–ವೀರಕುಮಾರಮಾತೆಯಾಗಿ ಬೆಳಗಿದಳು. ದಶಶತಕಿರಣನಿಗೆಣೆಯೆನಿಸಿದವನು, ದಶದಿಶೆಗಳೊಳಗೂ ಹೆಸರುವಾಸಿಯನ್ನು ಹೊಂದಿದವನು, ದಶಕಂಠಾರಿಯ ಗುರುವು, ದಶಪದದಿಂದೊಡಗೂಡಿದ ರಥಶಬ್ದವನ್ನು ಪಡೆದವನು, ಎಂದು ಯಾರನ್ನು; ಬುಧರು – ಯಾವಾಗಲೂ ಹೊಗಳುತ್ತಲಿರುವರೋ, ಆ ದಶರಥನನ್ನೇ ಅಜನು ಕುಮಾರನನ್ನಾಗಿ ಪಡೆದುದು. ಆಗ – ಅಧ್ಯಯನ, ಯಜ್ಞ, ಸಂತಾನ ಎಂಬಿವುಗಳ ಮೂಲಕ– ಋಷಿಗಳ, ದೇವತೆಗಳ, ಮತ್ತು ಪಿತೃಗಳ ಋಣಗಳಿಂದ ಅಜನು ಕ್ರಮವಾಗಿ ಬಿಡುಗಡೆಯನ್ನು ಹೊಂದಿದನು. ಸುತ್ತುಗಟ್ಟುವ ಪರಿವೇಷದಿಂದ ಹೊರಗೆಬಂದ ರವಿಯಂತೆ ರಾರಾಜಿಸಿದನು.

ಶ್ಲೋ॥ ವಿದ್ಯಾ ವಿವಾದಾಯ ಧನಂ ಮದಾಯ ಶಕ್ತಿಃ ಪರೇಷಾಂ ಪರಿಪೀಡನಾಯ॥
ಖಲಸ್ಯ; ಸಾಧೋರ್ವಿಪರೀತ ಮೇತತ್ ಜ್ಞಾನಾಯ ದಾನಾಯ ಚ ರಕ್ಷಣಾಯ॥

ನೀಚನ ವಿದ್ಯೆಯು ವಿವಾದಕ್ಕೂ, ಹಣವು ಹೆಮ್ಮೆಗೂ, ಬಲವು ಹೆರರನ್ನು ಹಿಂಸಿಸಲಿಕ್ಕೂ ವಿನಿಯೋಗವಾಗುವುದು. ಇದು– ಸಾಧುವಿನ ವಿಷಯದಲ್ಲಿ ತಲೆಕೆಳಗಾಗುವುದು; ಹೇಗೆಂದರೆ –ಸಜ್ಜನನ ವಿದ್ಯೆಯು ಜ್ಞಾನಕ್ಕೂ, ದ್ರವ್ಯವು –

ಕಾಲದೇಶವನ್ನರಿತು ಸತ್ಪಾತ್ರದಲ್ಲಿ ದಾನಕ್ಕೂ, ಶಕ್ತಿಯು–ಅಶಕ್ತರ ಸಂರಕ್ಷಣೆಗೂ ಸಾಧಕವಾಗುವುದು ಎಂಬುದಾಗಿ ಹೇಳುವ ಹಿರಿಯರ ಮಾತು ಸಟೆಯಲ್ಲ; ಏಕೆಂದರೆ –ಆ ಅಜಭೂಪಾಲನ ಧನವು ಮಾತ್ರವೇ ಪರರಿಗೆ ಉಪಕರಿಸಲು ಸಾಧಕನೆನೆಸಿದುದಾಗಿರಲಿಲ್ಲ. ಪೌರುಷವು –ಆಪನ್ನರಾದವರ ಭಯವನ್ನು ಪರಿಹರಿಸಲಿಕ್ಕೆ ವಿನಿಯೋಗವಾಗುತ್ತಲಿದ್ದಿತು, ಶಾಸ್ತ್ರಜ್ಞಾನವು – ವಿದ್ಯಾವಂತರನ್ನು ಸತ್ಕರಿಸಲಿಕ್ಕೇ ಉಪಯೋಗಿಸುತ್ತಲಿದ್ದಿತು, ಹೀಗೆ ಆತನ ಸುಗುಣಗಳೆಲ್ಲವೂ ಪರೋಪಕೃತಿಗಾಗಿಯೇ ವೆಚ್ಚವಾಗುತ್ತಲಿದ್ದುವು.

ಸತ್ಯವಂತನೆನಿಸಿದ ಆ ಅಜಮಹಾರಾಜನು – ತನ್ನ ನಾಡಿನ ಪ್ರಜೆಗಳನ್ನೆಲ್ಲ ಸಕಲ ವಿಷಯದಲ್ಲಿಯೂ ನೆಮ್ಮದಿಗೊಳಿಸಿ, ಸುಪುತ್ರನಾದ ದಶರಥನಲ್ಲಿ ರಾಜ್ಯಭಾರವನ್ನಿಟ್ಟು, ದೇವೇಂದ್ರನು – ಶಚೀದೇವಿಯೊಡನೆ ಅಮರಾವತಿಯ ಹತ್ತಿರದಲ್ಲಿರುವ ನಂದನವನದಲ್ಲಿ ಸಂಚರಿಸುವಹಾಗೆ, ಒಂದುವೇಳೆ–ತನ್ನ ಪಟ್ಟಮಹಿಷಿಯಾದ ಇಂದುಮತಿಯ ಸಂಗಡ, ನಗರ ಸಮೀಪದಲ್ಲಿರುವ ಉದ್ಯಾನದಲ್ಲಿ ವಿಹರಿಸತೊಡಗಿದ್ದನು.

ಅನಂತರದಲ್ಲಿ– ವೀಣಾವಿನೋದರಸಿಕನೆನಿಸಿರುವ ದೇವರ್ಷಿಯಾದ ನಾರದನು – ದಕ್ಷಿಣ ಸಮುದ್ರತೀರದಲ್ಲಿ, ಗೋಕರ್ಣಕ್ಷೇತ್ರದೊಳಗೆ ನೆಲೆಗೊಂಡಿರುವ ಪರಮೇಶ್ವರನನ್ನು ಸೇವಿಸಬೇಕೆಂದು ಕುತೂಹಲಪಟ್ಟು, ಸೂರ್ಯನುದಯಿಸುವ ಹಾದಿಯಿಂದ ಹೊರಟುಬರುತ್ತಲಿದ್ದನು. ಆ ದೇವ ಮುನಿಯ ವೀಣೆಯ ತುದಿಯು – ದೇವಲೋಕ ಕುಸುಮಗಳನ್ನು ಪೋಣಿಸಿ ರಚಿಸಿರುವ ದಿವ್ಯಹಾರದಿಂದ ಸುತ್ತಲ್ಪಟ್ಟಿದ್ದಿತು; ಆಗ – ಬಹು ವೇಗದಿಂದ ಹರಿದುಬರುತ್ತಲಿರುವ ವಾಯುವು – ಸುವಾಸನೆಯಿಂದ ತನ್ನನ್ನು ಸಿಂಗರಿಸಿಕೊಳ್ಳಲಿಕ್ಕೆಂಬಂತೆ, ಆ ದಿವ್ಯ ಪುಷ್ಪಮಾಲೆಯನ್ನು ಅಹಹ!! ಸೆಳೆದೊಯ್ದಿತು. ಮಾಲೆಯ ಕುಸುಮಗಳಮೇಲೆ ಹಾರಾಡುತ್ತ ದನಿಗೆಯ್ಯುತ್ತಲಿರುವ ದುಂಬಿಗಳಿಂದ ಆವರಿಸಲ್ಪಟ್ಟಿದ್ದ ಆ ಪರಿವಾದಿನಿಯು– ಪವನಾತಿಕ್ರಮವನ್ನು ತಾಳಲಾರದೆ, ಕಾಟಕೆಯಿಂದೊಡಗೂಡಿದ ಕಣ್ಣೀರಿನ ಹನಿಗಳನ್ನು ಬಟ್ಟಾಡಿಸುವಂತೆ ಕಾಣಬರುತ್ತಲಿದ್ದಿತು. ವಾಯುವೇಗ ವಶದಿಂದ ಹಾರಿಬಂದ ಆ ಅಮರಕುಸುಮಹಾರವು – ತನ್ನಲ್ಲಿರುವ ಮಕರಂದ ಸುವಾಸನೆಗಳ ವೈಭವದಿಂದ, ಆ ಉದ್ಯಾನದಲ್ಲಿನ ಲತೆಗಳಲ್ಲಿ ಋತುಧರ್ಮದ ಮೂಲಕ ಉಂಟಾಗಿರುವ ಪುಷ್ಪಸಮೃದ್ಧಿಯನ್ನು ತಿರಸ್ಕರಿಸುತ್ತಾ, ಅಜರಾಜನ ಪಟ್ಟದರಸಿಯ ಅಗಲವಾದ ಎದೆಯಲ್ಲಿ ಎಡೆಗೊಂಡಿತು. ಬಹು ಸುಂದರವೂ, ವಿಶಾಲವೂ ಆಗಿರುವ ಉರಸ್ಥಲಿಗೆ ನಿಮಿಷ ಕಾಲಮಾತ್ರ ಗೆಳತಿಯಂತಿರುವ ಆ ವಿಬುಧಕುಸುಮಮಾಲಿಕೆಯನ್ನು ಕಟಾಕ್ಷಿಸಿದ ಕ್ಷಣದಲ್ಲಿಯೇ ಇಂದುಮತಿಯು – ಚಂದಿರನನ್ನು ರಾಹುವ ನುಂಗಲು, ಕೌಮುದಿಯಂತೆ

ಮುಗಿದಳು. ಇಂದ್ರಿಯ ಸಮುದಾಯದಿಂದ ಬಿಡಲ್ಪಟ್ಟ ಇಂದುಮತಿಯು ಶರೀರದೊಡನೆ ನೆಲದಮೇಲೆ ಬೀಳುವಾಗ ಪತಿಯನ್ನು ಉರುಳಿಸಿದಳು. ಹೆಚ್ಚಿದ ಎಣ್ಣೆಯಿಂದುರಿಯುತ್ತಲಿರುವ ದೀಪದಿಂದ ಜ್ವಾಲೆಯು ಉದಿರುವಲ್ಲಿ, ತೈಲಬಿಂದುವೂ ನೆಲದಲ್ಲಿ ಬೀಳುವುದಲ್ಲವೆ?

ಆಗ – ಪಕ್ಕದಲ್ಲಿನ ಕಮಲಾಕರದೊಳಗಿದ್ದ ಹಕ್ಕಿಗಳು– ಆ ದಂಪತಿಗಳ ಇಕ್ಕೆಲದಲ್ಲಿದ್ದ ಪರಿಜನರ ಘೋರವಾದ ಗದ್ದಲದ ದೀನಸ್ವರದಿಂದ ಹೆದರಿ, ಅವರೊಡನೆ ತಾವೂ ಸಮಾನಶೋಕವುಳ್ಳವುಗಳಂತೆ ಗಟ್ಟಿಯಾಗಿ ಕೂಗಿಕೊಂಡುವು. ಬೀಸಣಿಗೆ, ತಣ್ಣೀರು ಮೊದಲಾದವುಗಳ ಉಪಚಾರದಿಂದ ಅರಸಿನ ಮೈಮರವೆಯು ಕಳೆಯಿತು. ಇಂದುಮತಿಯಾದರೆ ಮೆಯ್ಯನ್ನು ಮರತೇಬಿಟ್ಟಳು. ಆಯುಷ್ಯದ ಶೇಪವಿದ್ದರಲ್ಲವೆ ಪ್ರತಿಕ್ರಿಯೆಗಳು – ಫಲಸಿದ್ಧಿಗೆ ಸಾಧಕಗಳಾಗುವುವು? ಬಳಿಕ ಅಜನು ಚೈತನ್ಯವು ಹಾರಿಹೋದುದರಿಂದ, ಕುದುರೆಯೆಂಬ ಅಡಿಯ ಚಕ್ಕೆಯು ಸಿಡಿದು ಹೋಗಲು, ತಂತಿಗಳನ್ನು ಏರಿಸಿ ಕಟ್ಟಬೇಕಾಗಿರುವ ವೀಣೆಗೆ ಸಮಾನವಾದ ಸ್ಥಿತಿಯಲ್ಲಿರುವ ಪ್ರಿಯಪತ್ನಿಯನ್ನು, ಪ್ರೇಮಭರದಿಂದ ಪೂರ್ವದಲ್ಲಿ ಅಭ್ಯಾಸವಾಗಿದ್ದ ತನ್ನ ತೊಡೆಯಮೇಲೆ ಎರಡು ಕೈಗಳಿಂದಲೂ ಎತ್ತಿ ಮಲಗಿಸಿಕೊಂಡನು. ಆಗಲಾ ಅಜರಾಜನು ಇಂದ್ರಿಯಗಳು ತೊಲಗಿದುದರಿಂದ ಕಳೆಗುಂದಿ, ತೊಡೆಯಮೇಲೆ ಪವಳಿಸಿರುವ ಪತ್ನಿಯಿಂದ, ಬೆಳಗಿನ ಜಾವದಲ್ಲಿ ಮಲಿನವಾದ ಕಳಂಕರೇಖೆಯಿಂದೊಡ ಗೂಡಿರುವ ಚಂದ್ರಮನಂತೆ ಕಾಣಬರುತ್ತಿದ್ದನು.

ಅಯ್ಯೋ! ದೊರೆಗೆ ಸ್ವಾಭಾವಿಕವಾಗಿದ್ದ ಧೀರತೆಯ ಬಲು ದೂರವಾಗಿ ಹಾರಿಹೋಯಿತು, ಕಣ್ಣುಗಳಲ್ಲಿ ನೀರು ಉಕ್ಕಳಿಸಿತು, ಕೊರಳು ತೋರವಾಯಿತು, ನುಡಿಯು ತೊದಲಹತ್ತಿತು, ಹಂಬಲಿಸಿ ಅಳತೊಡಗಿದನು. ಬೆಂಕಿಯಿಂದ ಕಾಯ್ದ ಕಬ್ಬಿಣವೂ ಮೆತ್ತಗಾಗುವುದು, ದೇಹಧಾರಿಗಳು ಸಂತಪ್ತರಾದರೆ, ಅವರ ಕಥೆಯನ್ನು ಹೇಳಬೇಕಾದುದೇನು?

ಬಲು ಸುಕುಮಾರಗಳೆನಿಸಿದ ಕುಸುಮಗಳೂ ಪ್ರಾಣಿಗಳನ್ನು, ಸೂರೆಗೊಳ್ಳಲು ತಕ್ಕವುಗಳೆನಿಸಿದರೆ, ಹಾ! ಕೊಲ್ಲಲುದ್ಯುಕ್ತನಾದ ವಿಧಿಗೆ ಮತ್ತಾವ ಆಯುಧವು ಸಾಧಕವಾಗದೆ ಹೋಗುವುದು? ಹಾಗಿಲ್ಲದಿದ್ದರೆ ಮೃತ್ಯುವು – ಮೃದುವಾದ ಪದಾರ್ಥವನ್ನು ಕೋಮಲವಾದ ವಸ್ತುವಿನಿಂದಲೇ ಕೊಲ್ಲಬೇಕೆಂದು ಗೊತ್ತುಮಾಡಿರುವನೋ ಹೇಗೋ? ಅದರಿಂದಲೇ – ಹಿಮವು ಸುರಿಯುವುದರಿಂದ ತಾವರೆಯ ಬಳ್ಳಿಯು ಬಳಲುವುದು ಮೊದಲನೆಯ ಉದಾಹರಣೆಯಾಗಿಯೂ, ಕುಸುಮಸಂಪರ್ಕದಿಂದ ಇಂದುಮತಿಯ ಸಾವು ಎರಡನೆಯ ದೃಷ್ಟಾಂತವಾಗಿಯೂ

ನನಗೆ ಕಾಣಬರುತ್ತಲಿದೆ. ಅಹಹಾ! ಹೂವಿನ ಹಾರವೇ ಪ್ರಾಣಾಪಹಾರಿಯಾದರೆ, ಎದೆಯಮೇಲಿಟ್ಟರೂ ಅದೇ ನನ್ನ ಉಸಿರನ್ನೇಕೆ ಹಾರಿಸದೆ ಇದೆ? ದೇವರ ಸಂಕಲ್ಪದಿಂದ ಕೆಲವೆಡೆಗಳಲ್ಲಿ ಅಮೃತವು ವಿಷವಾಗಿಯೂ, ವಿಷವು ಅಮೃತವಾಗಿಯೂ ಪರಿಣಮಿಸಬಹುದಲ್ಲವೆ? ಅಥವಾ ವಿಧಿಯು – ನನ್ನ ದುರದೃಷ್ಟದಿಂದ ಸಿಡಿಲನ್ನು ಹೂವಿನ ಹಾರವನ್ನಾಗಿ ಕಲ್ಪಿಸಿರಬಹುದು. ಹಾಗಾದರೂ ಆ ಸಿಡಿಲಿನ ಬಡಿತವು – ಆಸರೆಯಾದ ಮರದಂತಿರುವ ನನ್ನನ್ನು ಕೆಡಹದೆ, ಹಬ್ಬಿದ ಬಳ್ಳಿಯಂತಿರುವ ಈ ಇಂದುಮತಿಯನ್ನೇ ಉರುಳಿಸಲು ಕಾರಣವೇನು?

ಓ ಪ್ರಿಯ ವಲ್ಲಭೆಯೇ! ನಾನು ಎಷ್ಟೋ ದೊಡ್ಡ ತಪ್ಪುಗಳನ್ನು ಮಾಡಿದಾಗಲೂ, ಒಂದು ವೇಳೆಯಲ್ಲಿಯೂ ನನ್ನನ್ನು ಅಸಡ್ಡೆಮಾಡಿ ಮಾತನಾಡಿಸದೆ ಸಿಟ್ಟುಗೊಂಡಿದ್ದವಳಲ್ಲವಲ್ಲಾ? ಅಂಥವಳೀಗ – ಯಾವುದೊಂದು ಅಪರಾಧವೂ ಇಲ್ಲದಿರುವ ಈ ನನ್ನನ್ನು ಮಾತನಾಡಿಸಲು ಅಯೋಗ್ಯನನ್ನಾಗಿ ತಿಳಿದಿರುವುದೇಕೆ?

ಎಲೆ ಬೆಳ್ನಗೆಯ ಹೆಣ್ಣೆ : ಕೇಳಿ ಒಡಂಬಡಿಸದೆಯೇ, ಈ ಲೋಕವನ್ನು ಬಿಟ್ಟು ಪರಲೋಕವನ್ನು ಕುರಿತು ಹಿಂದಿರುಗದಿರುವಂತೆ ತೆರಳಿದುದರಿಂದ ನೀನು ನನ್ನನ್ನು ಕಪಟಪ್ರಿಯನನ್ನಾಗಿಯೇ ತಿಳಿದಿದ್ದುದು ದಿಟ. ಸಂಶಯವೇ ಇಲ್ಲ. ಆಹಾ! ನಾನು ಕಳ್ಳನಾದೆನು ನೋಡಿದೆಯ? ಅಯ್ಯೋ ಈ ನನ್ನ ಹಾಳುಪ್ರಾಣವು ಪ್ರಿಯವಲ್ಲಭೆಯನ್ನು ಹಿಂಬಾಲಿಸಿಯೇ ಹೊರಟುಹೋಗಿದ್ದಿತಲ್ಲಾ? ಮರಳಿ ಅವಳನ್ನುಳಿದು ಹಿಂದಿರುಗಿ ಬರಲು ಕಾರಣವೇನು? ಯಾರು ಬರಹೇಳಿದರು? – "ಮಾಡಿದ್ದುಣ್ಣೋ ಮಾರಾಯ" ಎಂಬಂತೆ, ಈಗ ತಾನಾಗಿ ಮಾಡಿಕೊಂಡ ಪ್ರಬಲವಾದ ಯಾತನೆಯನ್ನು ತಾನೇ ಅನುಭವಿಸಲಿ, ಸ್ವಯಂಕೃತಾಪರಾಧಕ್ಕೆ ಸೈರಣೆಯೇ ಶರಣಲ್ಲವೆ? ವನವಿಹಾರದ ಬಳಲಿಕೆಯಿಂದುಂಟಾದ ಬೆವರಿನ ಹನಿಯು ನಿನ್ನ ಮುಖದಲ್ಲಿ ಆರದೆ ಕಂಗೊಳಿಸುತ್ತಲಿದೆ, ಮತ್ತು ನೀನೀಗಲೆ ಲೋಕಾಂತರವನ್ನು ಕುರಿತು ತೆರಳಿದ್ದೀಯೆ! ಛೇ! ಪ್ರಾಣಿಗಳ ಸಂಬಂಧವಾದ ಅಸಾರತೆಯನ್ನು ಬಲು ಹೀಯಾಳಿಸಬೇಕಾಗಿದೆ.

ಓ ಪ್ರಿಯವಲ್ಲಭೆ! ನಾನು – ಇದುವರೆಗೆ ಹಿಂದೆ ಎಂದೂ ಮನಸ್ಸಿನಲ್ಲಿ ಕೂಡ ನಿನ್ನ ವಿಷಯದಲ್ಲಿ ಯಾವುದೊಂದು ಸ್ವಲ್ಪ ಕೆಡುಕನ್ನೂ ನೆನೆದವನಲ್ಲವಲ್ಲಾ. ಇಂತಹ ನನ್ನನ್ನು ಏಕೆ ತೊರೆಯಲೆಳಸುತ್ತಿರುವೆ? ನಾನು ನಾಮಮಾತ್ರದಿಂದ ಭೂಮಿಗೆ ಪತಿ ಎನಿಸಿಕೊಂಡಿದ್ದೇನೆ? ಮನಃಪೂರ್ವಕವಾದ ಪ್ರೇಮವು ನಿನ್ನಲ್ಲಿಯೇ ನೆಲೆಗೊಂಡಿದ್ದಿತಲ್ಲ? ಅಯಿ ಸುಂದರಿ ಇಂದುಮತಿ! ಅಂದವಾಗಿ ಕಟ್ಟಿದ ಹೂವನ್ನು ಮುಡಿದಿರುವ ನಿನ್ನ ಶಿರದಿಂದ ಜೋಲಾಡುತ, ದುಂಬಿಯಂತೆ ಕಪ್ಪಾಗಿರತಕ್ಕ ಮುಂಗೂದಲನ್ನು ಅಲುಗಿಸುವ ಮೆಲ್ಲೆಲರು ಮರಳಿ ನೀನು ಹಿಂದಿರುಗಬಹುದೆಂದು

ನನ್ನ ಮನಸ್ಸನ್ನು ಶಂಕಿಸುವಂತೆ ಮಾಡುತ್ತಲಿದೆ. ಎಲೆ ಪ್ರಿಯಳೆ! ತಡಿಯಲ್ಲಿ ಬೆಳೆದಿರುವ ತೃಣಜ್ಯೋತ್ಸ್ನಿಯೆಂಬ ಜ್ಯೋತಿರ್ಲತೆಯು ಹಿಮಗಿರಿಯ ಗವಿಯೊಳಗಣ ಕತ್ತಲನ್ನು ಕತ್ತರಿಸಿ, ಇರುಳು ಹೊತ್ತಿನಲ್ಲಿ ತನ್ನ ಬೆಳಕಿನಿಂದ ಬೆಳಗಿಸುವ ಹಾಗೆ, ನೀನು ಎಚ್ಚರಿನಿಂದ ನನ್ನ ಮನೋವ್ಯಥೆಯನ್ನು ಬೇಗನೆ ತೊಲಗಿಸಬಾರದೆ? ಚಲಿಸುತ್ತಲಿರುವ ಮುಂಗೂದಲನ್ನೊಳಗೊಂಡು, ಏನೊಂದನ್ನೂ ನುಡಿಯದಿರುವ ನಿನ್ನ ಮುಖವು – ಇರುಳು ಹೊತ್ತಿನಲ್ಲಿ, ಮುಗಿದಿರುವುದರಿಂದ ದನಿಗೆಯ್ಯದೆ ಒಳಗಡಗಿದ ಆರಡಿಯುನ್ನುಳ್ಳ ಅಸಮಾನವಾದ ತಾವರೆಯಂತೆ ನನ್ನ ಮನವನ್ನು ಸಂತಾಪಗೊಳಿಸುತ್ತಲಿದೆ.

ತೆರಳಿದ ಯಾಮಿನಿಯು ಮರಳಿ ಬರುವುದೆಂದು ಚಂದ್ರಮನೂ, ಅಗಲಿದ ಚಕ್ರವಾಕಿಯೂ ಪುನಃ ಸೇರುವದೆಂದು ಒಡನಾಡಿಯಾದ ಜಕ್ಕವಕ್ಕಿಯೂ, ವಿರಹವೇದನೆಯನ್ನು ಸೈರಿಸಿರುವುದು ಲೋಕದಲ್ಲಿ ಸಂಗತವಾಗಿದೆ. ಎಂದೂ ಹಿಂದಿರುಗದಂತಹ ಪಯಣವನ್ನು ಬೆಳಸಿರುವ ನೀನು ನನ್ನನ್ನು ಸುಡದಿರುವುದುಂಟೆ? ಹೊಸತೆನಿಸಿದ ತಳಿರ ಹಾಸಿನಲ್ಲಿಯೂ ಬಳಲಿ, ನೋವನ್ನು ತಾಳಲಾರದಿದ್ದ ಈ ನಿನ್ನ ಮೃದುವಾದ ಮೆಯ್ಯು, ಅಯ್ಯೋ! ಬಲು ಡೊಂಕಾಗಿಯೂ, ಕಠಿನವಾಗಿಯೂ ಇರುವ ಕಟ್ಟಿಗೆಯ ಗುಡ್ಡೆಯಾದ ಚಿತೆಯಮೇಲೆ ಪವಳಿಸೋಣವನ್ನೆಂತು ಸೈರಿಸಬಲ್ಲುದೋ ಹೇಳು? ಬಲು ಗುಟ್ಟಾದ ಹೊತ್ತಿನಲ್ಲಿಯೂ ನಿನ್ನನ್ನು ಅಗಲದ ಮೊದಲನೆಯ ಗೆಳತಿಯಾಗಿದ್ದ ಈ ಮೇಖಲೆಯು – ಮರಳಿ ಎಚ್ಚರವಿಲ್ಲದಂತೆ ಮಲಗಿರುವ ನಿನ್ನನ್ನು ಅನುಸರಿಸಿ, ಮಂದಯಾನವಿಲ್ಲದುದರಿಂದ ಮಾತನಾಡದೆ ಶೋಕಭಾರವನ್ನು ತಾಳಲಾರದೆಯೂ, ಸಂಗಡಲೇ ಮಡಿದುಹೋಗಿರುವಂತೆ ಕಾಣಬರುತ್ತಲಿದೆ.

ಹಾ! ಎಲೆ ದಯಿತೇ! ದಿವಂಗತಳಾಗಬೇಕೆಂದು ಬಯಸಿದೆ ನೀನು – ಮುಂದೆ "ನನ್ನಗಲಿಕೆಯನ್ನು ತಾಳಿ ಇವನು ಬಾಳಲಾರನು?" ಎಂದು ಮೊದಲೇ ಚಿಂತಿಸಿ, ಕನಿಕರಗೊಂಡು, ನನ್ನ ಪ್ರಾಣಧಾರಣೆಗೆ ಸಲಕರಣೆಗಳಾಗಿರುವಂತೆ ಹೆಂಗೋಗಿಲೆಗಳಲ್ಲಿ ನಿನ್ನ ಮಧುರ ಭಾಷಣವನ್ನೂ, ಕಲಹಂಸಿಗಳಲ್ಲಿ ಮಂದಗಮನವನ್ನೂ, ಹೆಣ್ಣುಹುಲ್ಲೆಗಳಲ್ಲಿ ಅಂದವಾದ ನೋಟವನ್ನೂ, ಗಾಳಿಯಿಂದ ಅಲುಗುವ ಎಳೆಬಳ್ಳಿಗಳಲ್ಲಿ ಬೆಡಗುಗಳನ್ನೂ, ನೆಲೆಗೊಳಿಸಿದುದೇನೋ ನ್ಯಾಯವೇ ಸರಿ. ನಿನ್ನ ವಿರಹದಿಂದ ಹೇರಳವಾದ ನೋವನ್ನಾಂತಿರುವ ನನ್ನ ಮನವನ್ನು ಅವು ನೆಲೆಗೆ ನಿಲ್ಲಿಸಲಾರವು. ಮತ್ತು – ನಿನ್ನಾ ಮನೋಹರ ಗುಣಗಳಿಗೆಡೆಗೊಟ್ಟು, ನನ್ನ ಪ್ರಾಣಹರಣಕ್ಕೆ ಸಲಕರಣೆಗಳೆನಿಸುವುವು.

ಅಯ್ಯೋ, ಎಲೆ ಪ್ರಿಯೆ! ಈ ಹೂದೋಟದಲ್ಲಿ ಇದಕೊ–ಈ ಸಿಹಿಮಾವಿನ ಗಿಡವನ್ನೂ ಇದರ ಬಳಿ ಹಬ್ಬಿ ಬೆಳೆದಿರುವ ಪ್ರಿಯಂಗುಲತೆಯನ್ನೂ ದಂಪತಿಗಳೆಂದು, ಮಕ್ಕಳಿಗಿಮ್ಮಡಿಯಾದ ಮಮತೆಯಿಂದ ಬೆಳೆಯಿಸಿ, ಇವುಗಳಿಗೆ ವಿವಾಹ ಮಂಗಳವಿಧಿಯನ್ನು ನೆರವೇರಿಸದೆಯೇ ಲೋಕಾಂತಕ್ಕೆ ತೆರಳಿದುದು ಯುಕ್ತವೆ? ತಾಯಿ ಸತ್ತ ತಬ್ಬಲಿಮಕ್ಕಳಿಗೆ ಸುಖವೆಲ್ಲಿಯದು? ನೀನು ಪಾದೆಗಟ್ಟಿ, ಸೆಬ್ಬೆಯರಿತು, ಗೊಬ್ಬರವಿಟ್ಟು, ನೀರೆರೆದು, ಸಾಕಿದ ಈ ಅಶೋಕಲತೆಯು – ಕುಸುಮವನ್ನು ತೋರುತ್ತಲಿದೆ. ನಿನ್ನ ಅಂದವಾದ ಮುಂದಲೆಗೆ ಮುಡಿಸಬೇಕಾದ ಈ ಹೂವನ್ನು, ನಿನಗೆ ಕೊಡುವ ತರ್ಪಣೋದಕದ ಸಂಗಡ ಅರ್ಘ್ಯವನ್ನಾಗಿ ಹೇಗೆ ಒಪ್ಪಿಸಲಿ? ಕಿವಿಗಿಂಪಾಗಿ ದನಿಗೈವ ಕಡಗಗಳ ದನಿಯನ್ನೊಳಗೊಂಡ ನಿನ್ನಡಿಯ ಅಸದಳವೆನಿಸಿದ ಅನುಗ್ರಹವನ್ನು ಪಡೆಯುತ್ತಲಿದ್ದ ಈ ಅಶೋಕಲತೆಯ ಕುಸುಮಗಳನ್ನು ನೋಡಿದರೆ, ಎಲೌ ಮಂಗಳಾಂಗಿ! ನಿನ್ನ ಅಗಲಿಕೆಯನ್ನು ತಾಳಲಾರದೆ ಶೋಕದಿಂದ ಕಣ್ಣೀರಿನ ಹನಿಗಳನ್ನು ತೊಟ್ಟಿಡಿಸುವಂತೆ ಕಾಣಬರುತ್ತಲಿದೆ.

ಎಲೆ ಕಿನ್ನರಕಂಠಿ! ನಿನ್ನುಸಿರಿನ ಸುವಾಸನೆಯನ್ನಾಂತ ಪಗಡೆಯ ಹೂಗಳಿಂದ ಟೊಂಕಕ್ಕೆ ಸುತ್ತುವ ಮಂಗಳಮಾಲೆಯನ್ನು ನನ್ನೊಡನೆ ಪೋಣಿಸುತ್ತಲಿದ್ದ ನೀನು – ಈ ಸರವು ಮುಗಿಯದೆ ಅರೆಯಾಗಿರುವಾಗಲೇ ತೊರೆದು, ಪರಲೋಕವನ್ನೈದಲು ನಿದ್ದೆಗೈವುದು ತರವೆ?

ಎಲೆ ಸಹೃದಯೆ! ನಿನ್ನ ಸುಖದಿಂದ ಸುಖಕ್ಕೂ, ದುಃಖದಿಂದ ದುಃಖಕ್ಕೂ ಪಾಲುಗಾತಿಯರಾಗಿರುವ ಈ ಗೆಳತಿಯರು, ಶುಕ್ಲ ಪಕ್ಷದ ಎಳೆಯ ಚಂದಿರನಂತೆ ಅಂದವಾದ ಈ ಮುದ್ದು ಕಂದನು, ನಿನ್ನ ಅನುರಾಗದೊಡನೆ ಬೇರೆನಿಸದ ಈ ನಾನು, ನಿನಗಿಂತು ಜೀವನಸಾಮಗ್ರಿಯಿದ್ದರೂ, ಇದನೆಲ್ಲ ಗಮನಿಸದೆಯೇ ತೊರೆದು, ತೆರಳಲೆಳಸಿವ ನಿನ್ನ ಮನವು ದಿಟವಾಗಿಯೂ ಬಲು ಕಠಿನವಾದುದೆಂದು ತಿಳಿಯಬೇಕಾಗಿದೆ.

ಎಲೆ ಭಾಮಿನಿ! ಈಗ ನನ್ನ ಧೀರತೆಯು ಹಾರಿತು, ಪ್ರೀತಿಯು ಗತಿಸಿತು, ಆಟವು ಮೋಟಾಯಿತು, ಗೀತವು ಸೋತಿತು, ಹಬ್ಬವು ಮಬ್ಬಾಯಿತು, ಒಡವೆಯು ಕಡೆಗಂಡಿತು, ಶಯನವು ಬಯಲಾಯಿತು. ಓ ನನ್ನ ಸರ್ವಸ್ವವೇ! ನನ್ನ ಗೃಹಿಣಿಯು ನೀನು, ಬುದ್ಧಿಸಹಾಯವಾದ ಮಂತ್ರಿಯು ನೀನು, ರಹಸ್ಯದ ಸಖಿಯು ನೀನು, ಎಲೆ ಲಲಿತೆ! ಕಲಾಪ್ರಯೋಗದಲ್ಲಿ ಪ್ರಾಜ್ಞಳಾದ ಶಿಷ್ಯಳು ನೀನು, ಹೀಗೆ ಸರ್ವಭೋಗ ಸಾಧನವೂ, ಸರ್ವಾನಂದವೂ ಆಗಿದ್ದ ನಿನ್ನನ್ನು ಸೂರೆಗೊಂಡು, ಕರುಣಾ ಶೂನ್ಯನಾದ ಮೃತ್ಯುವು – ಮತ್ತಾವ ನನ್ನ ಒಡವೆಯನ್ನು ಅಪಹರಿಸಲಿಲ್ಲವೋ ಹೇಳು.

ಎಲೆ ಮದಿರಲೋಚನೆ! ನಾನು ಕುಡಿದುಳಿದ ಮಧುರವಾದ ಮಧುರಸವನ್ನು ಪಾನಮಾಡಿ, ಸವಿಗಂಡ ನೀನು – ಪರಲೋಕದಲ್ಲಿರುತ್ತಾ, ಕಣ್ಣೀರಿನಿಂದೊಡಗೂಡುವಂತೆ ನಾನು ಕೊಡುವ ತಿಲೋದಕವನ್ನು ಮುಂದೆ ಕುಡಿವುದು ಹೇಗೆ? ಎಲೆ ಸುಮಂಗಲಿ! ಸಕಲೈಶ್ವರ್ಯವಿದ್ದರೂ ನೀನಿಲ್ಲದಿರುವುದರಿಂದ ಅಜನಿಗೆ ಸುಖವೆಂಬುದು ಇಲ್ಲಿಯವರಿಗೇ ಮುಗಿಯಿತು ಎಂದು ಎಣಿಸು. ಮುನ್ನು ನಿನ್ನೊಡನೆ ಅನುಭವಿಸದಿರುವುದು ಮತ್ತಾವುದೂ ಮುಂದೆ ನನಗೆ ಇನ್ನೆಂದಿಗೂ ಒದಗಲರಿಯದು. ನಿನ್ನನ್ನು ಉಳಿದ ವಿಷಯಾಂತರಗಳು ಎಂತವುಗಳಾದರೂ ಅಜನಿಗೆ ರುಚಿಸವು. ಅಜನ ಭೋಗಸಾಧನಗಳೆಲ್ಲವೂ ಭೋಜನಂದನೆಯೇ ಅಲ್ಲದೆ ಬೇರಿಲ್ಲ.

ಕೋಸಲ ರಾಜನಾದ ಅಜನು – ಇಂತು ಬಹು ದೀನಸ್ವರದಿಂದ ಬಲು ಗಟ್ಟಿಯಾಗಿ ಮನಬಂದಂತೆ ಹಂಬಲಿಸಿ ಅಳುತ್ತಾ, ಉದಿರುತ್ತಲಿರುವ ಮಕರಂದದ ಹನಿಗಳಿಂದ ಮಲಿನವಾದ ಮರಗಳನ್ನೂ ದುಖಿಃಸುತ್ತಲಿರುವವುಗಳನ್ನಾಗಿ ಮಾಡಿದನು.

ಬಳಿಕ – ಬಂಧುವರ್ಗದವರು ಬಂದು, ಅಜನ ತೊಡೆಯಮೇಲೆ ಪವಳಿಸಿ, ಮರಣದಲ್ಲಿಯೂ ಬಹು ರಮಣೀಯರಾಗಿರುವ ಇಂದುಮತಿಯನ್ನು, ಬಿಡದೆ ಬಲವಾಗಿ ಹಿಡಿದಿರುವ ದೊರೆಯ ಕರದಿಂದ ಬಲಾತ್ಕಾರವಾಗಿ ಬಿಡಿಸಿ, ಅವಳ ಎದೆಯ ಮೇಲಿದ್ದ ಅಮರಕುಸುಮಮಾಲೆಯನ್ನೇ ಅವಳಿಗೆ ಅಂತ್ಯಾಲಂಕಾರವನ್ನಾಗಿ ಆಚರಿಸಿ, ಅಗರು ಚಂದನ ಮೊದಲಾದ ಕಾಷ್ಠಗಳ ಚಿತೆಯಲ್ಲಿನ ಅಗ್ನಿಗೆ ಆಹುತಿಯನ್ನಾಗಿ ಸಮರ್ಪಿಸಿದರು. "ಧೀರನಾಗಿದ್ದ ದೊರೆಯು ವಿವೇಕಿಯಾದರೂ ಶೋಕಕ್ಕೀಡಾಗಿ, ಮಡದಿಯೊಡನೆ ಮಡಿದು ಹೋದನು" ಎಂಬ ಅಪಖ್ಯಾತಿಗೆ ಅಂಜಿ, ಅಜನು ಅರಸಿಯೊಡನೆ ತನ್ನ ಶರೀರವನು ಅಗ್ನಿಗೀಡುಮಾಡಲಿಲ್ಲ, ಅಷ್ಟೆ ಹೊರತು ಜೀವಿತದ ಆಶೆಯಿಂದಲ್ಲ.

ಆಮೇಲೆ – ವೀರಕ್ಷತ್ರಿಯನೂ, ಶಾಸ್ತ್ರಜ್ಞನೂ, ಸ್ವಧರ್ಮನಿರತನೂ ಆಗಿರುವ ಅವನು ಗುಣಗಳಿಂದ ಮಾತ್ರವೇ ಉಳಿದಿರುವ ಇಂದುಮತಿಯನ್ನು ಉದ್ದೇಶಿಸಿ, ದಶಾಹದಮೇಲೆ ಮಾಡಬೇಕಾದ ವಿಧಿಗಳನ್ನು ಸಮೃದ್ಧಿಯಿಂದ ಕ್ರಮವಾಗಿ ಪುರೋದ್ಯಾನದಲ್ಲಿಯೇ ಆಚರಿಸಿ ಮುಗಿಸಿದನು. ಹೀಗೆ ಇಂದುಮತಿಯನ್ನು ಕಳೆದುಕೊಂಡು, ಕ್ಷಣದೆಯು ಕಳೆಯಲು ಉಳಿದ ಚಂದಿರನಂತೆ ಕಾಣಬರುವ ಆ ಅಜನು ತನ್ನ ಶೋಕದ ಕಡಲಿನ ಕಾಲುವೆಗಳನ್ನು ಪುರಸುಂದರಿಯರ ಕಣ್ಣುಗಳಲ್ಲಿ ನೋಡುತ್ತಾ ಪುರಪ್ರವೇಶವನ್ನು ಗೈದನು. ಅದುವರೆಗೆ ಈತನ ಕುಲಗುರುವಾದ ವಶಿಷ್ಠಮುನಿಯು – ತನ್ನ ತಪೋವನದಲ್ಲಿ ಯಜ್ಞ ದೀಕ್ಷೆಯನ್ನು ಕೈಗೊಂಡಿದ್ದನು. ಅವನ ನೆನಪು ಬಂದಿತು, ಧ್ಯಾನದೃಷ್ಟಿಯಿಂದ ನೋಡಿದನು, ಅಜನು ಅಕಾಲದಲ್ಲಿ

ಆಪತ್ತಿಗೀಡಾದನೆಂಬ ಸಂಗತಿಯ ತತ್ತ್ವವು ಅರಿವಿಗೆ ಬಂದಿತು, ತನ್ನ ಪ್ರಿಯಶಿಷ್ಯನ ಸಂಗಡ ಹೇಳಿ ಕಳುಹಿಸಿದನು. ವಶಿಷ್ಠ ಮಹರ್ಷಿಯ ಅಂತೇವಾಸಿಯು–ಅಜನ ನಗರಿಗೈತಂದನು. ಮಹಾರಾಜನನ್ನು ಕಂಡು, ಉಚಿತಸತ್ಕಾರವನ್ನು ಪಡೆದ ಆತನನ್ನು ಕುರಿತು ಇಂತೆಂದನು.

ಎಲೈ ಮಹಾರಾಜನೇ! ತಪೋನಿಧಿಯು ಯಜ್ಞಾನುಷ್ಠಾನತತ್ಪರನಾಗಿದ್ದನು. ನಿನ್ನ ತಾಪಕಾರಣವನ್ನು ತಿಳಿದಿದ್ದರೂ, ವಿಧಿಸಮಾಪ್ತಿಯ ನಡುವೆ ನಿನ್ನ ಬಳಿಗೆ ಬಂದು, ಸ್ವಭಾವದಲ್ಲಿ ಬದಲಾಯಿಸಿರುವ ನಿನ್ನನ್ನು ಪ್ರಕೃತಿಯಲ್ಲಿ ನೆಲೆಗೊಳಿಸಲು ಎಡೆಯಿಲ್ಲವಾಗಿದ್ದಿತು. ಎಲೈ ಸದಾಚಾರಸಂಪನ್ನನೆ! ಆತನು ಹೇಳಬೇಕಾದ ಮಾತುಗಳ ಸಂಗ್ರಹರೂಪವಾದ ಸರಸ್ವತಿಯು ನನ್ನಲ್ಲಿ ನೆಲೆಗೊಂಡಿದೆ. ಲೋಕವಿಖ್ಯಾತವಾದ ಧೀರತೆಯಿಂದೊಡಗೂಡಿರುವ ನೀನು – ಆ ವಚನಸಾರವನ್ನು ಗ್ರಹಿಸಲಿಕ್ಕೂ, ಹೃದಯದಲ್ಲಿ ಧರಿಸಲಿಕ್ಕೂ ತಕ್ಕವನಾಗಿದ್ದೀಯೆ. ತ್ರಿವಿಕ್ರಮ ಪ್ರಕ್ರಿಯೆಯನ್ನಾಂತ ಪುರಾಣಪುರುಷನಾದ ನಾರಾಯಣನ ಮೂರಡಿಗಳಿಗೆಡೆಕೊಟ್ಟ ಮೂಲೋಕದಲ್ಲಿಯೂ ನಡೆದ, ನಡೆಯುತ್ತಲಿರುವ, ನಡೆಯಹೋಗುವ ವಿಷಯಗಳನ್ನೆಲ್ಲ ಯೋಗನಿಧಿಯಾದ ಮುನಿಯು – ತಡೆಯಿಯಿಲ್ಲದ ಜ್ಞಾನದೃಷ್ಟಿಯಿಂದ ಕರತಲಾಮಲಕದಂತೆ ತಿಳಿಯಬಲ್ಲನಾದ ಕಾರಣ, ಆತನ ಮಾತುಗಳನ್ನು ವಿಶ್ವಸಿಸಬೇಕೆಂದು ಮರಳಿ ನಿನಗೆ ನಾನು ಹೇಳಬೇಕಾದುದಿಲ್ಲ.

ಪೂರ್ವದಲ್ಲಿ ತೃಣಬಿಂದುವೆಂಬ ಮುನಿಯು ತನ್ನ ಆಶ್ರಮದಲ್ಲಿ ತೀವ್ರವಾದ ತಪಸ್ಸನ್ನು ಆಚರಿಸುತ್ತಲಿದ್ದನು. ಆಗ ತನ್ನ ಪದವಿಗೆಲ್ಲಿ ಕೊರತೆಯುಂಟಾಗುವುದೋ ಎಂದು ಹೆದರಿದ ಹರಿಹಯನು–ಆ ತಪಸ್ವಿಯ ಸಮಾಧಿಯನ್ನು ಭೇದಿಸಿ, ತಪಸ್ಸಿಗೆ ಭಂಗವನ್ನುಂಟುಮಾಡುವಂತೆ ಕಟ್ಟು ಮಾಡಿ, ಹರಿಣಿಯೆಂಬ ಸುರಾಂಗನೆಯನ್ನು ಕಳುಹಿದನು. ಅದರಂತೆ ಹರಿಣಿಯು ತೃಣಬಿಂದುವಿನ ತಡಿಗೈದಿ ತನ್ನ ಕೈವಾಡವನ್ನು ತೋರತೊಡಗಿದಳು – ಶಾಂತಿಯೆಂಬ ಮರ್ಯಾದೆಯನ್ನೊಡೆದು ತಪಸ್ಸಿಗೆ ಅಡ್ಡಿಯನ್ನೆಸಗುವ ಬಗೆಬಗೆಯ ಬೆಡಗುಗಳನ್ನು ತೋರುತ್ತಾ ಇದಿರಿಗೆ ನಿಂತಿರುವ ಆ ಅಮರರಮಣಿಯಾದ ಹರಿಣಿಯಂ ಕಂಡು–ಸಿಟ್ಟುಗೊಂಡ ಕಿತ್ತಡಿಯು "ನೀನೀನೆಲದ ನಾರಿಯಾಗು" –ಎಂದು ಶಪಿಸಿದನು. ಕೂಡಲೆ ಹೆದರಿದ ಆ ಹರಿಣಿಯು – ಎಲೈ ಭಗವಂತನೇ! ಈ ನಾನು ಪರತಂತ್ರಳು, ಪರಾಧೀನತೆಯಿಂದಾದ ಪ್ರತಿಕೂಲಾಚರಣೆಯನ್ನು ಕ್ಷಮಿಸಬೇಕು ಎಂದು ನೆಲದಮೇಲೆ ಅಡ್ಡಬಿದ್ದು , ಶರಣಾಗತಳಾಗಿ, ಕೈಜೋಡಿಸಿ ದೈನ್ಯದಿಂದ ಬೇಡಿದಳು.

ಬಳಿಕ ಶಾಂತನಾದ ಮುನಿಯು – ದಿವ್ಯ ಪುಷ್ಪದರ್ಶನವೇ ಶಾಪಾವಧಿ, ಅದುವರೆಗೆ ಮಾನುಷಿಯಾಗಿರು ಎಂದು ಅನುಗ್ರಹಿಸಿದನು. ಅದರಿಂದಲೇ ಕ್ರಥಕೈಶಿಕರಾಜರ

ಮನೆತನದಲ್ಲಿ ಹುಟ್ಟಿ, ನಿನಗೆ ಪಟ್ಟದರಸಿಯಾಗಿರುತ್ತ, ಬಹುಕಾಲದಮೇಲೆ ಮಾರುತನ ಮೂಲಕ ಮುಗಿಲಿನಿಂದ ಜಾರಿಬಿದ್ದು ಶಾಪನಿವೃತ್ತಿ ಕಾರಣವಾಗಿದ್ದ ದೇವಕುಸುಮವನ್ನು ಕಂಡು, ಕೂಡಲೆ ಮೈಮರೆತು ಧರೆಯನ್ನು ತೊರೆದಳು. ಆದಕಾರಣ ಪ್ರಿಯಳಿಗೆ ಅಪಾಯವು ಸಂಭವಿಸಿತೆಂಬ ಕೊರತೆಯನ್ನು ತೊರೆ, ಮತ್ತು – "ಜಾತಸ್ಯ ಹಿ ಧ್ರುವೋ ಮೃತ್ಯುಃ" ಹುಟ್ಟಿದವನಿಗೆ ಸಾವು ಸಿದ್ಧವೆಂಬುದು ದಿಟ ಎಂಬುದನ್ನು ನೀನು ಬಲ್ಲೆ, ಆದರೂ, ಪತ್ನಿಯಿಲ್ಲದವನಿಗೆ ಪ್ರಾಣಗಳಿಂದೇನು ಫಲ? ಎನ್ನಬೇಡ, ಧರೆಯನ್ನು ಧರ್ಮದಿಂದ ಪಾಲಿಸು, ಧರಾನಾಥರು ಧರಿತ್ರಿಯಿಂದಲೇ ಕಳತ್ರವಂತರು, ಅದರಿಂದ ನೀನು ಚಿಂತಿಸಬೇಕಾದುದಿಲ್ಲ. ಐಶ್ವರ್ಯದ ಏಳಿಗೆಯಲ್ಲಿಯೂ ಹೆಮ್ಮೆಗೆಡೆಗುಡದೆ, ನೀನು – ನಿನ್ನ ಆತ್ಮಜ್ಞಾನವನ್ನು ಪ್ರಕಟಿಸಿ ಇದ್ದೀಯೆ. ಮನಸ್ಸಿಗೆ ಜ್ವರವು ಸಂಭವಿಸಿರುವ ಈ ಸಮಯದಲ್ಲಿ ಭ್ರಾಂತಿಗೆಡೆಗುಡದೆ ಆ ಪ್ರಜ್ಞೆಯನ್ನು ಧೀರತೆಯಿಂದ ಮರಳಿ ಪ್ರಕಾಶಗೊಳಿಸು. ವಿವೇಕಿಯು ಸರ್ವಾವಸ್ಥೆಗಳಲ್ಲಿಯೂ ಧೀರನಾಗಿರಬೇಕು. ಕಾರಣಾಂತರವನ್ನೂ ಕೇಳು–ಒಂದುವೇಳೆ ನೀನು ಬಲವಾಗಿ ಅಳತೊಡಗಿದರೆ ನಿನ್ನ ಪ್ರಿಯಳು ದೊರೆವಳೆ? ಅಥವಾ – ಆಕೆಯ ಸಂಗಡ ನೀನೂ ಮೃತನಾದರೆ ಪತ್ನಿಯನ್ನು ಪಡೆಯಬಲ್ಲೆಯ? ಲೋಕಾಂತರದಲ್ಲಿ ಏಕೆ ಪಡೆಯಬಾರದು ಎಂಬೆಯೋ? ಪರಲೋಕಗತರಾದ ಪ್ರಾಣಿಗಳಿಗೆ ತಂತಮ್ಮ ಕರ್ಮಾನುಸಾರವಾಗಿ ಒದಗುವ ಭಿನ್ನ ದೇಹಗಳಿಂದ ಗತಿಯೂ ಬೇರು ಬೇರು ಎಂಬುದೇ ದಿಟ, ಆದಕಾರಣ ಅಶೋಕನಾಗಿ ಕುಟುಂಬಿನಿಯನ್ನು ತರ್ಪಣಾದಿಗಳಿಂದ ತೃಪ್ತಿಗೊಳಿಸು. ಹಾಗಿಲ್ಲದಿದ್ದರೆ – "ಬಂಧುಜನರ ಸಂತತವಾದ ನಯನೋದಕವು ಮೃತರಾದವರನ್ನು ಸಂತಾಪಗೊಳಿಸುವುದು" ಎಂದು ಮನು ಮೊದಲಾದ ಮಹಾತ್ಮರೆಲ್ಲರೂ ಹೇಳುತ್ತಾರೆ.

ಮತ್ತು – ಎಲೈ ಪ್ರಾಜ್ಞನೆ! ಶರೀರಿಗಳಿಗೆ ಮರಣವೇ ಸ್ವಾಭಾವಿಕವಾದುದು, ಪ್ರಾಣಧಾರಣವೆಂಬುದು ಅಕಸ್ಮಾತ್ತಾಗಿ ಸಂಭವಿಸತಕ್ಕದು. ಎಂದರೆ ವಿಕೃತಿ ಎಂದು ವಿದ್ಯಾವಂತರು ಹೇಳುತ್ತಾರೆ. ಪ್ರಾಣಿಯು ಸ್ವಲ್ಪಕಾಲ ಜೀವಿಸಿ ಇದ್ದರೂ ಅದನ್ನೇ ಪರಮಲಾಭವೆಂದು ಸಂತೋಷಿಸಬೇಕು. ಸ್ವಭಾವವೆನಿಸಿದ ಮೃತಿಯಲ್ಲಿ ಸಂತಪಿಸಬಾರದು. ಅದರಿಂದ ದುಗುಡವನ್ನು ತೊರೆ. ಲೋಕದಲ್ಲಿ ಮೂಢನಾದ ಮನುಜನು ಇಷ್ಟವಾದ ವಸ್ತುವಿನ ವಿನಾಶವನ್ನು ಎದೆಯಲ್ಲಿ ನೆಟ್ಟ ಶಲ್ಯವನ್ನಾಗಿ ಭಾವಿಸುತ್ತಾನೆ. ಸ್ಥಿರಚಿತ್ತನು ಆ ಪ್ರಿಯವಸ್ತು ವಿಯೋಗವನ್ನು ಹೃದಯದಲ್ಲಿ ನೆಟ್ಟಿದ್ದ ಮೊಳೆಯು ಕಳೆದುಹೋಯಿತೆಂದು ತಿಳಿಯುತ್ತಾನೆ.. ಕುಶಲಕ್ಕೆ ಇದು ದ್ವಾರವೆಂತಲೂ ಭಾವಿಸುವನು. ವಿಷಯ ಲಾಭ–ನಾಶಗಳು ಕ್ರಮವಾಗಿ ಪಾಮರನಿಗೆ ಹಿತಾಹಿತ ಸಾಧನಗಳೆಂತಲೂ, ಪಂಡಿತನಿಗೆ ಅಹಿತಹಿತ ಸಾಧಕಗಳೆಂತಲೂ

ಭಾವನೆಯುಂಟಾಗುವುದು. ಶರೀರ ಶರೀರಿಗಳಿಗೆ ಎಂದರೆ ತನ್ನ ದೇಹಾತ್ಮಗಳಿಗೇ ಸಂಯೋಗವಿಯೋಗಗಳು ಸಿದ್ಧವಾಗಿದ್ದು, ಅವುಗಳ ವಿದ್ವಾಂಸನಿಗೆ ವಿಷಾದವನ್ನುಂಟುಮಾಡದಿರುವಲ್ಲಿ, ಹೊರಗಿನದಾದ ಪುತ್ರ ಮಿತ್ರ ಕಳತ್ರಾದಿಗಳ ವಿರಹವೆಂಬುದೂ ಸಿದ್ಧವೆಂತಲೂ, ಸಂತಾಪಕರಗಳಲ್ಲವೆಂತಲೂ ಹೇಳಬೇಕಾದುದೇನು? ಆದಕಾರಣ ಎಲೈ ಜಿತೇಂದ್ರಿಯಾಗ್ರಗಣ್ಯನೆ! ಪ್ರಾಜ್ಞನಾದ ನೀನು–ಶೋಕಕ್ಕೆ ವಶನಾಗಬೇಡ. ತರುಗಿರಿಗಳೆರಡರ ಮೇಲೆಯೂ ಗಾಳಿಯು ಸಮಾನವಾಗಿ ಬೀಸುತ್ತಲಿರುವಲ್ಲಿ – ಆ ಎರಡೂ ಸಮವಾಗಿ ಚಲನಸ್ವಭಾವದವುಗಳೇ ಆಗಿದ್ದರೆ ಒಂದಕ್ಕೆ ಚಲವೆಂತಲೂ, ಮತ್ತೊಂದಕ್ಕೆ ಅಚಲವೆಂತಲೂ ಶಬ್ದಾರ್ಥಗಳ ತಾರತಮ್ಯವುಂಟಾಗುತ್ತಲಿದ್ದಿತೆ? ತರುಗಳಂತೆ ಗಿರಿಗಳಗೂ ಚಲಸಂಜ್ಞೆಯು ಬರುತ್ತಲಿದ್ದಿತಲ್ಲವೆ? ಸ್ವತಃ ವಿವೇಕಶಾಲಿಯಾದ ನಿನಗೆ ಹೇಳ ಬೇಕಾದುದೇನಿರುವುದು?" ಎಂದು ಹೇಳಿ ವಿರಮಿಸಿದನು.

ಅದನೆಲ್ಲ ಕೇಳಿದ ಅಜನು – ಕುಲಗುರುವಾದ ಜ್ಞಾನಧನನ ಅನುಜ್ಞೆಯನ್ನು ವಿಧೇಯತೆಯಿಂದ ಪರಿಗ್ರಹಿಸಿ, ಉಚಿತ ಪೂಜಾದಿಗಳಿಂದ ಮುನಿ ಶಿಷ್ಯನನ್ನು ಸತ್ಕರಿಸಿ ಕಳುಹಿಸಿಕೊಟ್ಟನು. ಆದರೆ – ಆ ವಚನಜಾತವು – ಶೋಕದಿಂದ ನಿಬಿಡವಾದ ಅಜನ ಹೃದಯದಲ್ಲಿ ಹೊಗಲೆಡೆಯಿಲ್ಲದೆ ಹಿಂತಿರುಗಿತೆಂಬಂತಿದ್ದಿತು. ಇಷ್ಟವಸ್ತುವಿಯೋಗ ದುಃಖದ ಶಕ್ತಿಯು ಇಷ್ಟೆಂದು ಹೇಳತೀರದು. ಅದೇನು ಸೃಷ್ಟಿವೈಚಿತ್ರ್ಯವೋ, ಮಾಯಾಬಲವೋ, ಮೋಹಪಾಶವೋ, ಅಥವಾ ಸ್ವಭಾವವೇನೋ ಹೇಳಲಳವಲ್ಲ.

ತದನಂತರದಲ್ಲಿ – ದಶರಥನು ಚಿಕ್ಕವನಾಗಿ, ರಾಜ್ಯಭಾರವನ್ನು ವಹಿಸಲು ಅಸಮರ್ಥನಾಗಿದ್ದುದರಿಂದ ಸತ್ಯಸೂನೃತವಚನನಾದ ಅಜನು ಮತ್ತೆ ಎಂಟು ವರ್ಷಗಳ ಕಾಲವನ್ನು ಬಹು ಕಷ್ಟದಿಂದ ತಳ್ಳುತ್ತ ಬಂದನು. ಮತ್ತು – ಪ್ರಿಯವಲ್ಲಭೆಯಾದ ಇಂದುಮತಿಯ ವಿಯೋಗದಿಂದುಂಟಾದ ದುಃಖಭಾರವನ್ನು, ಆಕೆಯ ಹೋಲಿಕೆಯನ್ನು ಪಡೆದಿರುವ ವಸ್ತುಗಳ, ಭಾವಚಿತ್ರಗಳ, ಮತ್ತು ಸ್ವಪ್ನದಲ್ಲಿನ ಕ್ಷಣಿಕವಿಕಾರಗಳ ದರ್ಶನದಿಂದ ತಾಳುತ್ತಲಿದ್ದನು. ಆದರೆ – ಬಲವಾಗಿಯೇ ಕಟ್ಟಿರುವ ಮಹಡಿಗಳಮೇಲೆ ಸಂದುಗಳಲ್ಲಿ ಮೊಳೆಯತಕ್ಕ ಆಲ ಅರಳಿ ಮೊದಲಾದ ಗಿಡಗಳ ಮೊಳಕೆಯು – ಸೌಧತಲವನ್ನು ಬಲಾತ್ಕಾರವಾಗಿ ಭೇದಿಸುವ ಹಾಗೆ, ಶೋಕಶಂಕುವು–ಅಜನ ಹೃದಯವನ್ನು ಭೇದಿಸಿತು. ಅಜನು ವೈದ್ಯರಿಗೆ ಅಸಾಧ್ಯವೆನಿಸಿದ ಆ ಶೋಕಶಲ್ಯವನ್ನು ಪ್ರಾಣನಾಶಕ್ಕೆ ಕಾರಣವಾಗಿದ್ದರೂ, ಪ್ರಿಯಾನುಗಮನತ್ವರೆಯ ಕುತೂಹಲದಿಂದ ಲಾಭವನ್ನಾಗಿಯೇ ತಿಳಿದನು.

ಆ ಮೇಲೆ ಅಜನೃಪನು – ಸ್ವಭಾವ ಸಂಸ್ಕಾರಗಳಿಂದ ವಿನಯವಂತನಾಗಿ, ಕವಚಧಾರಣ ಸಮರ್ಥನೆನಿಸಿದ ದಶರಥ ಕುಮಾರನನ್ನು ರಾಜ್ಯರಕ್ಷಣಕಾರ್ಯದಲ್ಲಿ ವಿಧಿಯ ಪ್ರಕಾರ ನೇಮಿಸಿದನು, ರೋಗಗ್ರಸ್ತವಾದ ಶರೀರವು ಸರ್ವಥಾ ಉಳಿಯುವುದಿಲ್ಲವೆಂದು ತೋರಿತು, ಆ ದುಷ್ಟಸ್ಥಿತಿಯನ್ನು ಶಾಸ್ತ್ರಪ್ರಕಾರ ಅನಶನವ್ರತದಿಂದ ತೊರೆಯಬೇಕೆಂದು ಬಯಸಿದನು. ಆ ಹಿಂದೆ–ಗಂಗಾ ಸರಯೂ ಸಂಗಮಸ್ಥಾನದಲ್ಲಿ ಸ್ಕಾಂದವಚನವನ್ನನುಸರಿಸಿ ದೇಹವನ್ನು ತ್ಯಜಿಸಿದನು, ಕೂಡಲೇ ಅಮರತ್ವವನ್ನು ಪಡೆದನು, ಪೂರ್ವಕ್ಕಿಂತಲೂ ಅಧಿಕತರವೆನಿಸಿದ ಕಾಂತಿಯನ್ನು ತಳೆದಿರುವ ಕಾಂತೆಯೊಡನೆ ಕಲೆತನು, ಅಮರೇಂದ್ರನ ನಂದನೋದ್ಯಾನದಲ್ಲಿಯೂ, ಕ್ರೀಡಾಭವನಗಳಲ್ಲಿಯೂ ಸುಖವಾಗಿ ವಿಹರಿಸುತ್ತಲಿದ್ದನು..

****

ಒಂಬತ್ತನೆಯ ಅಧ್ಯಾಯ

ಮೃಗಯಾವರ್ಣನೆ

ಸೂಚನೆ ॥ ಈರೈದೇರಂ ಬನದೊಳ್ ।
ಸಾರುತೆ ಮುನಿವರ್ಯನಾತ್ಮಜಾತನನಿರಿದಂ ।
ಮಾರಿಸಿ ಶಪಿಸಲ್ ಭರದಿಂ ।
ಮಾರಾಯಂ ಮರುಗಿ ಸೇರ್ದನಮಮಾ ಪುರಮಂ ॥

ಅಜಮಹಾರಾಜನು ಕೀರ್ತಿಶೇಷನಾದನು. ಬಳಿಕ – ನಿಯಮಪರರೊಳಗೂ, ರಕ್ಷಕರೊಳಗೂ ಮೊದಲನೆಯವನೆನಿಸಿಕೊಂಡು, ಮಹಾರಥನೂ ಆದ ದಶರಥನು– ನೇಮದಿಂದ ಜಿತೇಂದ್ರಿಯನಾಗಿ, ತಂದೆಯಿಂದ ಬಂದ ಉತ್ತರ ಕೋಸಲದೇಶಗಳನ್ನು ಆಳಲಿಕ್ಕೆ ಆರಂಭಿಸಿದನು. ಹೀಗೆ ಕುಲಕ್ರಮಾಗತವಾಗಿ, ಪ್ರಜೆಗಳಿಂದೊಡಗೂಡಿದ ಜನಪದವನ್ನು ವಿಧಿಪ್ರಕಾರ ಪಡೆದು, ರಾಜನೀತಿಯನ್ನನುಸರಿಸಿ ಪಾಲಿಸುತ್ತ ಬರಲು, ಪುರ ಜನಪದ ಜನರೆಲ್ಲರೂ ಆತನನ್ನು ಬಹಳವಾಗಿ ಪ್ರೀತಿಸುತ್ತ ಬಂದರು. ಕುಮಾರಸ್ವಾಮಿಯಂತೆ ದಶರಥನು ಬಹು ತೇಜಸ್ವಿಯಾದನು. ಆಗ – ಸಮಯಾನುಸಾರವಾಗಿ ಮಳೆಗರೆವ ಮಹೇಂದ್ರನೊಬ್ಬ, ಮನುಮಹಾರಾಜನ ಮಾರ್ಗವನ್ನವಲಂಬಿಸಿರುವ ಅರ್ಥಪತಿಯಾದ ದಶರಥನೊಬ್ಬ, ಇಬ್ಬರನ್ನು ಮಾತ್ರವೇ, ವಿದ್ವಾಂಸರು ತಂತಮ್ಮ ಉದ್ಯೋಗದಲ್ಲಿರುವ ಜನರ ಬಳಲಿಕೆಯನ್ನು ಪರಿಹರಿಸತಕ್ಕವರನ್ನಾಗಿ ಹೇಳುತ್ತಲಿದ್ದರು. ಶ್ರಮಪರನಾಗಿ, ಅಮರತೇಜಸ್ಸನ್ನು ಪಡೆದಿದ್ದ ಅಜನಂದನನು ರಾಜನಾಗಿರುವಲ್ಲಿ – ಆ ನಾಡಿನೊಳಗೆಲ್ಲಿಯೂ ರೋಗದ ಸುಳಿವೇ ಇರಲಿಲ್ಲ, ಹಗೆಗಳ ಹಾವಳಿಯು ಹುಟ್ಟೇ ಅಡಗಿದ್ದಿತು. ಧರೆಯು ಉರ್ವರೆಯೆನಿಸಿಕೊಂಡಿದ್ದಿತು. ಹಿಂದೆ ದಶದಿಗಂತಗಳನ್ನೂ ಜಯಿಸಿದ್ದ ರಘುರಾಜನಿಂದ ಧರೆಯ ಸಿರಿಯು ಮೆರೆಯುತ್ತಲಿದ್ದಿತಷ್ಟೆ? ಬಳಿಕ ಆ ರಘುನಂದನನಿಂದ ಮತ್ತಷ್ಟು ಮೇಲ್ಮೆಯನ್ನೈದಿತು. ಈಗ ಆ ಮಹಿಯೇ ಅಹೀನಪರಾಕ್ರಮನಾದ ದಶರಥಮಹಾರಾಜನಿಂದ ಮರಳಿ ಹೇರಳವಾದ ಐಸಿರಿಯನ್ನು ಪಡೆಯದೆ ಇರಲಿಲ್ಲ. ವಸುಮತೀಶನಾದ ದಶರಥನು – ಪ್ರಜೆಗಳಲ್ಲಿ ಸಮವರ್ತಿಯಾಗಿ,

ವಸುವೃಷ್ಟಿಯನ್ನು ವಿನಿಯೋಗಿಸುತ್ತಲಿದ್ದುದರಿಂದಲೂ, ದುರುಳರನ್ನು ದಂಡಿಸುತ್ತ ಬಂದುದರಿಂದಲೂ, ವೈಶ್ರವಣ ವರುಣ ವೈವಸ್ವತರನ್ನು ಮೀರಿದ್ದನು. ಬೇಟೆಯಾಟವು – ಏಳಿಗೆಗಾಗಿ ಯತ್ನಿಸುತ್ತಲಿರುವ ಆ ಇಳೆಯಾಣ್ಮನನ್ನು ಸೆಳೆಯಲಿಲ್ಲ, ದುರೋದರವು ಅಪಹರಿಸಲಿಲ್ಲ, ಶಶಿಯಂತೆಸೆವ ಮಧುವು ಆಕರ್ಷಿಸಲಿಲ್ಲ, ನವಯೌವನರಾದ ಯುವತಿಯರೂ ವಶಪಡಿಸಿಕೊಳ್ಳಲಿಲ್ಲ. ಆ ವಿಭುವು – ವೈಭವದಿಂದಿರುವಾಗ, ದೇವೇಂದ್ರನಲ್ಲಿಯೂ ದೈನ್ಯವನ್ನು ತೋರಲಿಲ್ಲ, ಪರಿಹಾಸಕಥೆಯಲ್ಲಿಯೂ ಅನೃತವನ್ನಾಡಲಿಲ್ಲ. ದೋಷರಹಿತನಾದ ಆ ರಾಜರ್ಷಿಯು – ಪ್ರೇಮಿಗಳಲ್ಲಿಯೂ ಪರುಷವಚನವನ್ನು ನುಡಿಯಲಿಲ್ಲ. ಆ ರಘುಧುರಂಧರನು – ಅವಿಧೇಯರಾದ ದುರ್ಹೃದಯರಿಗೆ ಅಯೋಹೃದಯನಾಗಿಯೂ, ವಿಧೇಯರಾಗಿ ಇದಿರಿಸದಿರುವ ಸುಹೃದಯರಿಗೆ ಸಹೃದಯನಾಗಿಯೂ ಇರುತ್ತಿದ್ದನು, ಈ ಕಾರಣದಿಂದಲೇ ಆಗ– ವಸುಧಾಧಿಪರು ಉದಯಾಸ್ತಮಯಗಳೆರಡನ್ನೂ ಕ್ರಮವಾಗಿ ಪಡೆಯುತ್ತಲಿದ್ದರು, ಹೆದೆಯನೇರಿಸಿದ ಬಿಲ್ಲನ್ನು ಹಿಡಿದು ಆ ಅಜನಂದನನು – ತಾನು ದಶರಥನಾದರೂ ಏಕರಥದಿಂದಲೇ ಸಾಗರದಿಂದ ಸುತ್ತಲ್ಪಟ್ಟಿರುವ ಮೇದಿನಿಯನ್ನೆಲ್ಲ ಜಯಿಸಿದನು. ತೀವ್ರ ಜವದ ಗಜವಾಜಿ ಮೊದಲಾದವುಗಳ ರಾಜಿಯು –ಆತನ ಜಯವನ್ನು ಮಾತ್ರ ಉದ್ಘೋಷಿಸತಕ್ಕುದ್ದಾಗಿದ್ದಿತು. ಇದಿರಿಲ್ಲದ ರಥದಿಂದ ಪೃಥುವಿಯನ್ನೆಲ್ಲ ಜಯಿಸಿ, ಧನದನ ಸಂಪದವನ್ನು ಪಡೆದ ಧನುರ್ಧರನಾದ ಆ ಧರಾನಾಥನಿಗೆ ಮೇಘದಂತೆ ಗರ್ಜಿಸುವ ಉದಧಿಯೇ ಜಯದುಂದುಭಿಯ ಕೆಲಸವನ್ನು ಮಾಡತಕ್ಕುದ್ದಾಗಿದ್ದಿತು. ಶತಮಖನು – ಶತಕೋಟಿಯಾದ ಕುಲಿಶದಿಂದ ಶೈಲಪಕ್ಷವನ್ನೆಲ್ಲ ಶಾಂತಿಗೊಳಿಸಿದ ಹಾಗೆ, ಶತಪತ್ರಮುಖನಾದ ದಶರಥನು–ಶರವರ್ಷವನ್ನು ವರ್ಷಿಸುತ್ತ ಟಂಕಾರದಿಂದೊಡಗೂಡಿದ್ದ ಶರಾಸನದಿಂದ ಶತ್ರುಪಕ್ಷವನ್ನು ಶಮನಮಾಡಿದನು. ದಶರಥನ ಚರಣನಖಮಯೂಖಗಳಿಂದ ಹೆಚ್ಚಿದ ಮಕುಟರತ್ನಮರೀಚಿಗಳಿಂದ, ನರಪತಿಗಳು – ಸುರರು ಅಖಂಡಿತ ಪೌರುಷನಾದ ಶತಕ್ರತುವಿನ ಅಡಿದಾವರೆಗಳನ್ನು ಹೇಗೋಹಾಗೆ, ಚರಣನಳಿನಗಳನ್ನು ಸ್ಪರ್ಶಮಾಡುತ್ತಲಿದ್ದರು.

ಇಂತಪ್ಪ ದಶರಥನೊಂದುವೇಳೆ ದಿಗ್ವಿಜಯಕ್ಕೆ ಹೊರಟು, ಕಡಲತಡಿಯವರೆಗಿನ ನಾಡುಗಳೊಡೆಯರನ್ನೆಲ್ಲ ಸದೆಬಡಿದನು. ಆಯಾಯ ದೇಶಗಳ ಸಚಿವರು – ಎಳೆಯವರಾದ ಆಯಾ ರಾಜಕುಮಾರರಿಂದ ಅಂಜಲಿಗಳನ್ನು ಒಪ್ಪಿಸಿದರು. ಅರಸು – ಮುಂದಲೆಯ ಮಂಗಳಚೂರ್ಣವಿಲ್ಲದ, ಆ ಹಸುಳೆಗಳ ತಾಯಿಯರಲ್ಲಿ ಧರ್ಮದಿಂದ ದಯೆತೋರಿ, ಮರಳಿ ಹಿಂಸಿಸದೆ, ಸಮುದ್ರತೀರಗಳಿಂದ ಹಿಂದಿರುಗಿದನು. ಇದಿರಿಗೆ ಕೊಡೆಹಿಡಿಯುವ ಅರಸನಿಲ್ಲದಂತೆಸಗಿ, ದ್ವಾದಶರಾಜಮಂಡಲಾಧಿಪತ್ಯವನ್ನು ಪಡೆದರೂ, "ಸಿರಿಯು ಸಂದನ್ನು ಕಂಡು ಸರಿಯುವಳು" ಎಂದು ಅರಿತು,

ಹಿತಾಹಿತರಾದ ಸುಜನದುರ್ಜನರಲ್ಲಿ ಚಂದ್ರಸೂರ್ಯರಂತೆ ಬೆಳಗುತ್ತಾ, ಅನ್ಯಾಯಾಲಸ್ಯಾದಿಗಳಿಗಾಸ್ಪದವಿಲ್ಲದೆ ಎಚ್ಚರದಿಂದಿರುತ್ತಿದ್ದನು. ಪತಿವ್ರತೆಯಾಗಿದ್ದ ಕಮಲಹಸ್ತೆಯಾದ ಕಮಲೆಯು – ಪುರಾಣಪುರುಷನಾದ ವಿಷ್ಣುವನ್ನೂ, ಆತನ ಅಂಶದಿಂದ ಕಕುತ್ಸ್ಥ ಕುಲಕುಮಾರನಾಗಿ, ಯಾಚಕರಲ್ಲಿ ವಿಮುಖವಾಗದಿರುವ ದಶರಥನನ್ನೂ ಹೊರತು ಮತ್ತಾವ ಅರಸನನ್ನೂ ಸೇವಿಸಲಿಲ್ಲ

ಹೀಗಿರುವಲ್ಲಿ – ಪತಿಯನ್ನು ದೇವರನ್ನಾಗಿಯೇ ಭಾವಿಸುವವರೆನಿಸಿದ್ದ, ಕೋಸಲ, ಮಗಧ, ಕೇಕಯ ದೇಶಾಧೀಶರ ಕುವರಿಯರು ಶೈಲಸುತೆಯರಾದ ಸರಿತ್ತುಗಳು ಸಾಗರವನ್ನು ಹೇಗೋ ಹಾಗೆ ಶತ್ರುಗಳನ್ನಡಗಿಸುವ ಶರಾಸನವನ್ನಾಂತಿರುವ ದಶರಥನನ್ನು ದಯಿತನನ್ನಾಗಿ ಪಡೆದರು. ಪ್ರಿಯತಮೆಯರೆನಿಸಿದ ಮೂವರಾದ ಆ ಅರಸಿತಿಯರಿಂದ ಆ ಧರಾನಾಥನು ಅರಿಗಳನ್ನಿರಿಯುವ ಉಪಾಯಗಳಲ್ಲಿ ದಕ್ಷನಾದ ಸಹಸ್ರಾಕ್ಷನು – ಮೂರು ಶಕ್ತಿಗಳಿಂದೊಡಗೂಡಿ, ಪ್ರಜೆಗಳನ್ನು ವಿನಯ ಸಂಪನ್ನರಾಗಿ ಮಾಡಲು, ತಿರೆಗಿಳಿದಿರುವನೆಂಬಂತೆ ಬೆಳಗುತ್ತಲಿದ್ದನು. ಒಂದು ಸಮಯ – ಮಹಾರಥನಾದ ಮಹಾರಾಜನು ಸಮರಾಂಗಣದಲ್ಲಿ, ಮಘವಂತನಿಗೆ ಸಹಾಯಕನಾಗಿ ತೆರಳಿ, ಶರಗಳಿಂದ ಅಸುರರನ್ನು ಇರಿದನು, ಅಭಯವನ್ನು ಪಡೆದ ಅಮರಾಂಗನೆಯರು ದಶರಥನ ತೋಳುಬಲವನ್ನು ಗಂಭೀರವಾಗಿ ಗಾನಮಾಡಿದರು. ಭುಜಬಲದಿಂದ ದಿಗಂತಗಳಲ್ಲಿ ಆರ್ಜಿಸಿದ ಅಧಿಕಸಂಪದವನ್ನೊಳ ಗೊಂಡಿರುವ ಅಜನಂದನನು – ಅನೇಕವೇಳೆ ರಾಜಚಿಹ್ನೆಯನ್ನು ತೆಗೆದಿಟ್ಟು, ತಮೋಗುಣಕ್ಕೆಡೆಗುಡದೆ, ತಮಸಾ, ಸರಯೂ ತೀರಗಳಲ್ಲಿ, ಅಶ್ವಮೇಧಗಳನ್ನಾಚರಿಸಿ, ಕನಕಾಲಂಕಾರ ಸಂಶೋಭಿತಮಾದ ಯೂಪಸ್ತಂಭಗಳನ್ನು ನಟ್ಟನು. ಔದುಂಬರ ದಂಡವನ್ನೂ, ಮೃಗಶೃಂಗವನ್ನೂ ಹಿಡಿದು ಕುಶಮಯವಾದ ಮೌಂಜಿಯನ್ನು ಧರಿಸಿ, ದೀಕ್ಷೆಗೊಂಡು, ಮೌನದಿಂದ ಕೃಷ್ಣಾಜಿನದ ಮೇಲೆ ಯಜ್ಞವಾಟದೊಳಗೆ ಯಜಮಾನನಾಗಿ ಕುಳಿತಿರುವಾಗ ಪರಮೇಶ್ವರನು ಆತನಲ್ಲಿ ಸಾನ್ನಿಧ್ಯವನ್ನು ತೋರಿ, ಬಹುತೇಜಸ್ವಿಯನ್ನಾಗಿ ಮಾಡುತ್ತಲಿದ್ದನು. ಜಿತೇಂದ್ರಿಯನಾಗಿ, ಯಜ್ಞಗಳನ್ನಾಚರಿಸಿ, ಕಡೆಯಲ್ಲಿ ಅವಭೃಥವೆಂಬ ಮಂಗಳಸ್ನಾನವನ್ನು ಮಾಡುವ ಸಂದರ್ಭದೊಳಗೆ – ಶಕ್ರಸಮಾಜವನ್ನು ಆಕ್ರಮಿಸಲು ತಕ್ಕವನೆನಿಸಿದ್ದ ದಶರಥನು – ದೇವೇಂದ್ರನಿಗೆ ಮಾತ್ರವೇ ತಲೆಯನ್ನು ತಗ್ಗಿಸುತ್ತಿದ್ದನು. ಏಕರಥನಾಗಿದ್ದ ಮಹಾಬಲಶಾಲಿಯಾದ ಈ ದಶರಥನು – ಚಾಪಧರನಾಗಿ ಹರಿಹಯನಿಗೆ ಮುಂದಲಾಳೆನಿಸಿ, ಅನೇಕ ಸಾರಿ ಅಸುರಾಳಿಯೊಡನೆ ಹೋರಾಡುವಾಗ ರವಿಮಂಡಲವನ್ನು ಮುಚ್ಚುತ್ತಲಿರುವ ರಣಧೂಳಿಯನ್ನು, ಮೆಯ್ಯಿಂದಿಳಿದ ರಕ್ತಧಾರೆಗಳಿಂದ ಪರಿಹರಿಸುತ್ತಲಿದ್ದನು.

ಆ ಬಳಿಕ – ಸಮದೃಷ್ಟಿಯಲ್ಲಿ ಯಮನನ್ನೂ, ಧನದಾನದಲ್ಲಿ ಕುಬೇರನನ್ನೂ, ನೇಮದಲ್ಲಿ ಈಶ್ವರನನ್ನೂ, ಐಶ್ವರ್ಯದಲ್ಲಿ ಇಂದ್ರನನ್ನೂ ಹೋಲುತ್ತಲಿರುವ ಚಕ್ರವರ್ತಿಯೆನಿಸಿದ ದಶರಥ ಮಹಾರಾಜನನ್ನು ದರ್ಶನಮಾಡಬೇಕೆಂದೆಳಸಿರುವ ನೆಂಬಂತೆ ವಸಂತನು – ನವಕುಸುಮೋಪಹಾರದಿಂದ ಬೆಳಗುತ್ತ ಆ ನಾಡಿಗೈತಂದನು. ಅದುವರೆಗೆ ತೆಂಕಲದೆಸೆಯನ್ನಲಂಕರಿಸಿದ್ದ ರವಿಯು – ಕುಬೇರನಿಗೆಡೆಯಾದ ಬಡಗದಿಕ್ಕಿಗೆ ತೆರಳಬೇಕೆಂದೆಳಸಿ, ಸಾರಥಿಯಾದ ಅರುಣನಿಂದ ತೇರಿನ ಕುದುರೆಗಳನ್ನು ತಿರುಗಿಸಿ, ಹಿಮವನ್ನಡಗಿಸುವುದರಿಂದ ಮುಂಜಾನೆಗಳನ್ನು ಬೆಳಗಿಸುತ್ತಾ, ಮಲಯಪರ್ವತವನ್ನು ಬಿಟ್ಟನು. ಮೊದಲು ತಳಿರು, ಆಮೇಲೆ ಹೂವು, ತರುವಾಯ ಆರಡಿ ಮತ್ತು ಕೋಗಿಲೆಗಳ ಇಂಪಾದ ದನಿ, ಈ ಕ್ರಮವನ್ನು ಅನುಸರಿಸಿದ ಮರಗಿಡಬಳ್ಳಿಗಳ ಗುಂಪಿನಿಂದ ಬೆಳಗುತ್ತಲಿರುವ ವನಸ್ಥಲಿಯಲ್ಲಿ, ವಸಂತನು ಮೈದುಂಬಿ ಕಂಗೊಳಿಸುತ್ತಿದ್ದನು, ವಿನಯದಿಂದಲೂ, ಶೌರ್ಯಾದಿ ಗುಣಗಳಿಂದಲೂ ಏಳಿಗೆಗೆ ಬಂದು, ಪರೋಪಕಾರವನ್ನೇ ಫಲವನ್ನಾಗಿ ಪಡೆದಿರುವ ದಶರಥನ ಸಿರಿಯನ್ನು ಅರ್ಥಿಗಳು ಆಶ್ರಯಿಸುವಹಾಗೆ, ವಸಂತನು ಚೆನ್ನಾಗಿ ಘೋಷಿಸಿರುವ ಕಮಲಿನಿಯನ್ನು, ಅಳಿಗಳೂ, ಜಲಪಕ್ಷಿಗಳೂ ಅನುಸರಿಸತೊಡಗಿದುವು. ಅಶೋಕ ತರುಗಳೊಳಗೆ ತಳಿರುಗಳೂ, ಕುಸುಮಗಳೂ ನೋಟಕರ ಕಣ್ಮನಗಳನ್ನು ಸೆಳೆಯುತ್ತಲಿದ್ದುವು.

ವಸಂತನು – ವನಲಕ್ಷ್ಮಿಯ ಕಪೋಲಗಳಲ್ಲಿ ಹೊಸದಾಗಿ ಬರೆದ ಚಿತ್ರಗಳೆಂಬಂತಿರುವ ಗೋರಂಟಿ ಗಿಡಗಳ ಹೂಗಳೊಳಗೆ ಬಂಡನ್ನು ಕುಡಿದ ದುಂಬಿಗಳು – ತಣಿದು, ಸಂತಸದಿಂದ ಆ ವನದೇವತೆಯನ್ನು ಕೊಂಡಾಡುತ್ತಲಿವೆಯೋ ಎಂಬಂತೆ ಎಲ್ಲೆಲ್ಲಿಯೂ ಇಂಪಾಗಿ ದನಿಗೆಯ್ಯುತ್ತಲಿದ್ದುವು. ಕಾಮಿನಿಯಂತಿರುವ ಸಿಹಿಮಾವಿನ ಗಿಡದಕೊನೆಯು–ಮಲಯಪರ್ವತದಿಂದ ಹರಿದುಬರುವ ಮಂದಮಾರುತದಿಂದ ಅಲುಗುತ್ತಾ, ಕರತಲದಂತಿರುವ ತಳಿರುಗಳಿಂದ ಅಭಿನಯ ವಿದ್ಯೆಯನ್ನು ಕಲಿಯುತ್ತಲಿರುವಂತೆ ಕಾಣಬಂದು, ರಾಗದ್ವೇಷವಿಲ್ಲದವರ ಮನವನ್ನೂ ಸೆಳೆಯುತ್ತಲಿದ್ದಿತು. ವಸಂತಋತುವಿನ ಆದಿಭಾಗದಲ್ಲಿ ಸುವಾಸನೆಯನ್ನೊಳಗೊಂಡಿರುವ ಸಿಹಿಮಾವಿನ ಗಿಡಗಳ ಸಾಲುಗಳೊಳಗೆ, ತಳಿರುಗಳನ್ನು ತಿಂದು, ಕೊಬ್ಬಿ, ಕೂಗುತ್ತಲಿರುವ ಪರಭೃತಗಳ ಋತಗಳು – ಮುದ್ದು ಮಕ್ಕಳ ತೊದಲುನುಡಿಗಳಂತೆ ಇಂಪಾಗಿ ಕೇಳಬರುತ್ತಲಿದ್ದುವು. ಭ್ರಮರಗಳ ಶ್ರುತಿಮಧುರವಾದ ಧ್ವನಿಗಳೆಂಬ ಮಂಗಳಗೀತಗಳು – ಕೋಮಲಗಳಾದ ಕುಸುಮಗಳೆಂಬ ಹಲ್ಲುಗಳಿಂದೊಡಗೂಡಿರುವ ಹುಸಿನಗೆಯನ್ನೊಳಗೊಂಡು, ಉಪವನಲತೆಗಳೆಂಬ ನರ್ತಕಿಯರು – ಗಾಳಿಯಿಂದ ಅಲುಗುತ್ತ, ಒಂದರೊಡನೊಂದು

ತಗಲುವ ತಳಿರುಗಳಿಂದ, ಕರತಾಳ ಲಯಗಳನ್ನನುಸರಿಸಿದ ಹಾಡುಗಳನ್ನು ಹೇಳುತ್ತಲಿರುವಂತೆ ಕೇಳಬರುತ್ತಿದ್ದುವು. ಮನೆಗಳೊಳಗಣ ಕೊಳಗಳು ಅಂದವಾಗಿ ಅರಳಿರುವ ತಾವರೆಗಳನ್ನೊಳಗೊಂಡು, ನೀರಿನಮೇಲೆ ದನಿಗೈಯುತ್ತ ತೇಲಾಡುತ್ತಲಿರುವ ನೀರುಹಕ್ಕಿಗಳಿಂದ ರಮಣೀಯಗಳಾಗಿ ಕಾಣಬರುತಿದ್ದುವು. ಆಜ್ಯವೇ ಮೊದಲಾದವುಗಳ ಆಹುತಿಗಳಿಂದ ಪ್ರಜ್ವಲಿಸುವ ಅಗ್ನಿಯಂತೆ ಕಾಂತಿಯನ್ನೊಳಗೊಂಡ ಕರ್ಣಿಕಾರ ಕುಸುಮಗಳು – ವನಲಕ್ಷ್ಮಿಗೆ ಶೃಂಗರಿಸಿದ ಸುವರ್ಣಾಭರಣದಂತೆ ಸಂಶೋಭಿಸುತ್ತಲಿದ್ದುವು. ತಳಿರುಗಳಿಂದ ಸಹಿತವಾದ ಹೂಗಳನ್ನು ತಂತಮ್ಮ ಪ್ರಿಯರು ತಂದುಕೊಡಲು ಮಕರಂದದಾಸೆಯಿಂದ ಬಂದೆರಗುವ ದುಂಬಿಗಳಿಂದೊಡಗೂಡಿದ ಶ್ರೀಕುಸುಮಗಳು – ವನಲಕ್ಷ್ಮಿಯರ ಹಣೆಗಳೊಳಗಿಟ್ಟ ತಿಲಕಗಳ ಸೊಬಗನ್ನು ಉಂಟುಮಾಡುತ್ತಲಿದ್ದುವು. ಗಂದುಡಿಯಿಂದ ತುಂಬಿ, ದುಂಬಿಗಳನ್ನೊಳಗೊಂಡಿರುವ ತಿಲಕತರುವಿನ ಹೂಗೊಂಚಲು – ವನಲಕ್ಷ್ಮಿಯ ಬೈತಲೆಯ ಪಕ್ಕದ ಮುಂದಲೆಗೆ ಸಿಂಗರಿಸಿರುವ ಜಾಲರವೆಂಬ ಒಡವೆಯ ಬೆಡಗನ್ನಾಂತಿದ್ದಿತು.

ತೋಟದಲ್ಲಿ ಹಾರಾಡುವ ದುಂಬಿಗಳ ಹಿಂಡು – ಬಿಲ್ಲಾಳಾದ ಕಾಮನೆಂಬ ಅರಸಿಗೆ ಎತ್ತಿ ಹಿಡಿದ ದಾಳಿನ ಬೆಡಗನ್ನೂ, ವನಲಕುಮಿಯ ಹಣೆಗಿಡುವ ಕತ್ತುರಿಯ ಹುಡಿಯ ತಿಲಕದ ಪರಿಯನ್ನೂ, ಗಾಳಿಯಿಂದ ಅಲುಗುತ್ತಲಿರುವ ಗಿಡಗಳ ಹೂಗಳೊಳಗಣ ಪರಿಮಳದ ಪುಡಿಯ ಬಗೆಯನ್ನೂ ತಳೆಯುತ್ತಲಿದ್ದುವು. ಹೆಂಗಳು – ಉಪವನಗಳೊಳಗೆ ಅಲ್ಲಲ್ಲಿ ವಸಂತೋತ್ಸವಗಳನ್ನು ಅನುಭವಿಸಿ, ಉಯ್ಯಾಲೆಯ ಮಣೆಗಳಮೇಲೆ ಕುಳಿತು, ಸುಖವಾಗಿ ತೂಗಿಕೊಳ್ಳುತ್ತಲಿದ್ದರು. ಮಧು, ಮಧುಮಥನ, ಮನ್ಮಥರಿಗೆಣೆಯೆನಿಸಿದ ದಶರಥ ಭೂನಾಥನೂ – ತನ್ನ ಅರಸತಿಯರೊಡನೆ ಉದ್ಯಾನವನದಲ್ಲಿ, ವಸಂತಮಹೋತ್ಸವಗಳನ್ನು ಸುಖವಾಗಿ ಅನುಭವಿಸಿ, ಬಳಿಕ ಮೃಗಯಾವಿಹಾರವನ್ನು ಬಯಸಿದನು.

ಆದರೆ – ಬೇಟೆಯೆಂಬುದು ಏಳು ಬಗೆಯಾಗಿರುವ ವ್ಯಸನಗಳೊಳಗೆ ಒಂದೆನಿಸಿರುವುದರಿಂದ ಅದನ್ನು ದುಷ್ಟವೆಂದೇ ಹೇಳಬೇಕು. ಆದರೂ ಅದರಲ್ಲಿ ಗುಣವಿದೆ_ಈ ಮೃಗಯಾವಿನೋದವು – ಅಲುಗುತ್ತಲಿರುವ ಗುರಿಯನ್ನು ಸರಿನೋಡಿ ಹೊಡೆದು ಕೆಡಹುವ ಗಟ್ಟಿಗತನದ ಪರಿಚಯವನ್ನು ಮಾಡಿಕೊಡುತ್ತದೆ. ಮೃಗಗಳು ಭಯದಿಂದೊಡಗೂಡಿರುವಾಗಲೂ, ರೋಷದಿಂದಿರುವಾಗಲೂ ಅವುಗಳ ಇಂಗಿತವು ತಿಳಿದು ಬರುವುದು. ಶರೀರಕ್ಕೆ ಬಳಲಿಕೆಯನ್ನು ಸಹಿಸುವ ಅಭ್ಯಾಸದಿಂದ ಲವಲವಿಕೆಯನ್ನೂ ಉಂಟುಮಾಡುವುದು. ಈ ಕಾರಣದಿಂದಲೇ ಮಂತ್ರಿಗಳು – ಅದೆಲ್ಲವೂ ಕಾಳಗಕ್ಕೆ ಉಪಯೋಗವೆಂದು, ದೊರೆಯ ಕೋರಿಕೆಯನ್ನು ಒಪ್ಪಿದರು.

ಹಾಗೆ ಅವರ ಸಮ್ಮತಿಯನ್ನು ಪಡೆದು ದಶರಥನು ಹೊರಟನು. ಮಿಕಗಳ ಕಾಡನ್ನು ಕುರಿತು ಹೊರಡುವ ಸಡಗರದಲ್ಲಿ, ಆ ಖೇಟಕ್ಕೆ ತಕ್ಕ ವೇಷವನ್ನು ತಾಳ್ದು, ಕುದುರೆಯಮೇಲೆ ಕುಳಿತು, ಹೆಗಲಮೇಲೆ ಬಿಲ್ಲನ್ನಿಟ್ಟನು. ಅಶ್ವಖುರದಿಂದೆದ್ದ ಧೂಳಿಯೆಂಬ ತೆರೆಯಿಂದ ಆಗಸದಲ್ಲಿ ರವಿಯ ಬಿರುವನ್ನು ಮುಚ್ಚಿದನು. ಕಾಡು ಹೂಗಳ ಸರದಿಂದ ತಲೆಗೂದಲನ್ನು ಏರಗಟ್ಟಿದನು. ಗಿಡದೆಲೆಯಂತೆ ಹಸಿರುಬಣ್ಣದ ಕವಚವನ್ನು ತೊಟ್ಟನು. ಕುದುರೆಯ ನಡಗೆಯಿಂದ ಕಿವಿಯ ಕಡಕುಗಳು ಅಲುಗುತ್ತಲಿದ್ದುವು. ಹುಲ್ಲೆ ಮೊದಲಾದ ಜಂತುಗಳಿಂದ ತುಂಬಿದ ಕಾಡುದಾರಿಯಲ್ಲಿ ಧರಾನಾಥನು ಕಂಗೊಳಿಸುತ್ತಲಿದ್ದನು.

ಆಗ – ವನದೇವತೆಗಳು – ಕಾಡುಬಳ್ಳಿಗಳೊಳಗೆ ತಮ್ಮ ದೇಹಗಳನ್ನು ಅಡಗಿಸಿ, ದುಂಬಿಗಳೊಳಗೆ ನೋಟದ ಶಕ್ತಿಯನ್ನಿಟ್ಟು, ರಾಜನೀತಿಯಿಂದ ನಾಡಿನ ಜನರನ್ನು ಸಂತಸಗೊಳಿಸುತ್ತ, ಪ್ರಸನ್ನನೂ, ಪಾವನನೂ ಆಗಿರುವ ನರನಾಥನನ್ನು ನೋಡುತ್ತಲಿದ್ದರು.

ದೊರೆಯು – ತಾನು ಹೊರಡುವುದಕ್ಕಿಂತ ಮೊದಲೇ, ಕಾಡನ್ನು ಬೇಟೆನಾಯಿಗಳವರು, ಬಲೆಗಾರರು,ಕಾಡ್ಗಿಚ್ಚು, ಕಳ್ಳಕಾಕರೂ ಇಲ್ಲದಂತೆ ಅಣಿಮಾಡಿಸಿದ್ದನು. ಕುದುರೆಯ ಸಂಚಾರಕ್ಕೆ ಹಾದಿಯನ್ನು ಸರಿಪಡಿಸಿದ್ದನು. ಅಲ್ಲಲ್ಲಿ ಜಲವಸತಿಯನ್ನು ಕಲ್ಪಿಸಿದ್ದನು. ಬಳಿಕ ಹುಲ್ಲೆ ಮೊದಲಾದ ಮೃಗಗಳಿಂದಲೂ, ಪಕ್ಷಿಗಳಿಂದಲೂ ತುಂಬಿರುವ ಆ ವನವನ್ನು ಹೊಕ್ಕನು. ತರುವಾಯ – ಯಾವುದೊಂದು ಕೊರತೆಯೂ ಇಲ್ಲದೆ, ಟಂಕಾರದಿಂದ ಕೇಸರಿಗಳಿಗೆ ರೋಷವನ್ನುಂಟುಮಾಡುವ ನರವರನು – ಚಿನ್ನದಂತೆ ಥಳಥಳನೆ ಹೊಳೆವ ಮಿಂಚೆಂಬ ಹೆದೆಯಿಂದೊಡಗೂಡಿದ ಇಂದ್ರಚಾಪವನ್ನು ತಳೆವ ಭಾದ್ರಪದ ಮಾಸದಂತೆ, ಮೌರ್ವಿಯಿಂದ ಸಹಿತಮಾದ ಚಾಪವನ್ನು ಕಯ್ಯಲ್ಲಿ ಎತ್ತಿಹಿಡಿದನು. ಅಷ್ಟು ಹೊತ್ತಿಗೆ ಸರಿಯಾಗಿ, ಒಂದು ಹುಲ್ಲೆಗಳ ಹಿಂಡು ಇದಿರಿಗೆ ಸುಳಿಯಿತು. ಅದರೊಳಗೆ, ಕೆಲವು ಎಳೆಮರಿಗಳು– ತಂತಮ್ಮ ತಾಯ ಕೆಚ್ಚಲಲ್ಲಿ ಹಾಲು ಕುಡಿವ ಸಡಗರದಲ್ಲಿ, ಅಡಿಗಡಿಗೂ ಕಾಲುಗಳಿಗೆ ತೊಡರಿ, ನಡಿಗೆಗೆ ಎಡೆಗುಡದಿದ್ದುವು. ಮತ್ತೆ ಕೆಲವು ಬಾಯ್ಗಳಿಂದ ದರ್ಭೆಯ ಹುಲ್ಲನ್ನು ಕಡಿಯುತ್ತಲಿದ್ದವು. ಇನ್ನು ಕೆಲವು– ತಿಂದು ಕೊಬ್ಬಿ ನೆಲದಲ್ಲಿ ಗೊರಸನ್ನೂರುವುದೇ ಅರಿವಿಗೆ ಬಾರದಹಾಗೆ ಹಾರಾಡುತ್ತಲಿದ್ದುವು. ಆಗಲಾ ವಸುಮತೀಶನು ಬಯಸಿದಹೊತ್ತಿಗೆ ಸರಿಯಾಗಿ ಇದಿರಿಗೆ ಬಂದು ಜಿಂಕೆಯ ಹಿಂಡನ್ನು ಕಂಡಕೂಡಲೆ, ಬಹು ತ್ವರೆಯಿಂದೊಡಗೂಡಿ ವೇಗಶಾಲಿಯಾದ ವಾಜಿಯಮೇಲೆ ಕುಳಿತಿದ್ದವನಾಗಿಯೇ, ಬತ್ತಳಿಕೆಯಿಂದ ಬಾಣವನ್ನು ಹಿರಿದು ಹೆದೆಯಲ್ಲಿಡತೊಡಗಿದನು. ಅದನ್ನು ನೋಡಿದ ಹುಲ್ಲೆಗಳು–ಅಂಜಿ, ಚೆದರಿ,

ತಲೆಯನ್ನೆತ್ತಿ, ನೀರುತುಂಬಿ ಚಲಿಸುತ್ತಲಿರುವ ದೃಷ್ಟಿಗಳನ್ನು ಒಟ್ಟಿಗೆ ಆಗಸದ ಬೈಲಿನಲ್ಲಿ ಹರಡಿದುವು, ಆಗಲಾ ಕಾಡು- ಅರಳಿ, ಹರಡಿ, ಗಾಳಿಯಿಂದಲುಗುತ್ತಲಿರುವ ತಂಪಾದ ಕನ್ನೈದಿಲೆಗಳಿಂದೊಡಗೂಡಿದಂತೆ ಕಪ್ಪಾಗಿ ಕಂಗೊಳಿಸುತ್ತಲಿದ್ದಿತು, ಬಿಲ್ಲಾಳುಗಳೊಳಗೆ ಹರಿಯಂತೆ ಹೆಸರುವಾಸಿಯನ್ನು ಪಡೆದಿರುವ ತಿರೆಯಾಣ್ಮನೊಂದು ಹರಿಣವನ್ನು ಗುರಿಹಿಡಿದು ಹೊಡಯಲಿಕ್ಕಣಿಯಾದನು. ಹರಿಣಿಯೊಂದು ತನ್ನಿಯನಲ್ಲಿರುವ ಅನುರಾಗದಿಂದ ಅಂಬಿನ ಪೆಟ್ಟು ಅದಕ್ಕೆ ಬೀಳದ ಹಾಗೆ ತನ್ನ ಮೆಯ್ಯನ್ನು ಮರೆಮಾಡಿ ನಿಂತಿತು. ಬಾಣವನ್ನು ಬಿಡಲು ಕಿವಿಯವರೆಗೂ ಹೆದೆಯನ್ನು ಸೆಳೆದಿದ್ದ ದೊರೆಯು – ಅದನ್ನು ಕಂಡನು.

ಅಹಹಾ!! ಮೃಗಗಳಲ್ಲಿಯೂ ಇಂತಪಾರವಾದ ದಾಂಪತ್ಯಾನುರಾಗವು ನೆಲೆಗೊಂಡಿರುವುದಲ್ಲಾ ಎಂದು ನೆನೆದು, ಅರಸಿನ ಎದೆಯು ಕರುಣೆಯಿಂದ ಮೃದುವಾಗಿ ಕರಗಿತು, ಹೊಡಿಯಲಿಕ್ಕೆಳಸದೆ, ಕೂಡಲೆ ಶರವೆಲ್ಲಿ ಮುಂದುವರಿದು ಹರಿಣವನ್ನು ಇರಿವುದೋ ಎಂದು ಅಂಜಿ, ಕರಲಾಘವದಿಂದ ತೊಟ್ಟ ಬಾಣವನ್ನು ಬಲುಬೇಗನೆ ಇಳಿಸಿದನು. ಉಳಿದ ಮಿಕಗಳು ಹೆದರಿ, ಬಲು ಚಪಲಗಳಾದ ತಮ್ಮ ದೃಷ್ಟಿಗಳನ್ನು ಅರಸಿನಲ್ಲಿ ನಟ್ಟುವು. ದೊರೆಗೆ ಹೋಲಿಕೆಯಿಂದ ತನ್ನ ಪ್ರಿಯಸತಿಯರ ನಯನಗಳ ಬೆಡಗು ನೆನಪಿಗೆ ಬಂದಿತು. ಅವುಗಳಲ್ಲಿಡಬೇಕೆಂದು ಬಲವಾಗಿ ತೊಟ್ಟಿದ್ದ ಅಂಬನ್ನು ಪಟ್ಟಾಗಿ ಹಿಡಿದಿದ್ದ ಹಿಡಿಯು- ಮುಂದುವರಿಯಲಾರದೆ ಕನಿಕರದಿಂದ ತಾನಾಗಿ ಸಡಲಿ ಕೆಳಗೆ ಸರಿಯಿತು.

ಅಲ್ಲಿಂದ ಮತ್ತೊಂದು ಕಡೆಗೆ ತಿರುಗಿದನು, ಕೊಳಗಳ ನಡುವೆ ಇಳಿಯಬಿದ್ದಿದ್ದ ಕಾಡುಹಂದಿಗಳ ಹಿಂಡು ಪೊಡವಿಯೊಡೆಯನನ್ನು ಕಂಡಕೂಡಲೆ ಮೇಲೆಬಂದು ದುಡದುಡನೆ ಓಡಿದುವು. ಬಳಲಿಕೆಯಿಂದರಳಿದ ಬಾಯ್ಗಳಿಂದ ತುಂಗೆಗಡ್ಡೆಯ ಮೊಳಕೆಗಳು ದಾರಿಯುದ್ದಕ್ಕೂ ಉದುರಿದ್ದುವು, ಮತ್ತು – ಕೆಸರಿನಲ್ಲಿ ಹೂತಿದ್ದ ಹೆಜ್ಜೆಗಳ ಗುರುತುಗಳೂ ನೀಳವಾಗಿ ಹಾದಿಯಲ್ಲಿ ಕಾಣಬರುತ್ತಿದ್ದುವು, ಆ ಜಾಡನ್ನು ಹಿಡಿದೇ ಅರಸು ಅವುಗಳನ್ನು ಹಿಂಬಾಲಿಸಿದನು, ಕೂಡಲೆ ಕುದುರೆಯ ಬೆನ್ನಿನಮೇಲೆ ಕುಳಿತಿದ್ದವನು ಮೇಲ್ಮೆಯ್ಯನ್ನೊಂದು ಕಡೆಗೆ ತುಸಬಾಗಿಸಿ, ಅಂಬನ್ನು ಎಸೆಯುತ್ತಲಿದ್ದನು. ವರಾಹಗಳು – ತಮ್ಮ ಮೈಮೇಲಿನ ಮುಳ್ಳುಗಳನ್ನು ನೆಟ್ಟಗೆ ನಿಲ್ಲಿಸಿ, ಅರಸನನ್ನು ಇದಿರಿಸಿ, ನುಗ್ಗಿ, ಇರಿಯಲೆಳಸಿದುವು, ಆದರೆ – ಅಷ್ಟರಲ್ಲಿಯೇ ತಮ್ಮ ಹಿಂಗಡೆಗೆ ಆಸರೆಯಾಗಿದ್ದ ಮರದ ಬುಡದಕಡೆಯಿಂದ ಬಾಣಗಳ ಪೆಟ್ಟನ್ನು ತಿಂದ ತಮ್ಮನ್ನು ಅರಿಯಲೇ ಇಲ್ಲ.

ತರುವಾಯ ಬೇರೊಂದೆಡೆಯಲ್ಲಿ – ಭೂರಮಣನು – ಕಾಡುಕೋಣನ ಕಣ್ಣನ್ನು ಲಕ್ಷ್ಯವಿಟ್ಟು ಕೋಲನ್ನೆಸೆದನು. ಆ ಪತ್ರಿಯು–ಬಹು ವೇಗದಿಂದೊಳದೂರಿ,

ಮಹಿಷದ ಮೆಯ್ಯನ್ನು ಭೇದಿಸಿಕೊಂಡು, ಹೊರಗೆ ಬಂದು, ತನ್ನ ಗರಿಗೆ ರಕ್ತದ ಲೇಪವಿಲ್ಲದೆ, ಮೊದಲಾಸ್ಯೆರಿಭವನ್ನು ಕೆಳಗುರುಳಿಸಿ, ಆಮೇಲೆ ತಾನೂ ಬಿದ್ದಿತು.

ಇನ್ನೊಂದುಕಡೆ – ನೃಪತಿಯು – ತೀಕ್ಷವಾದ ಕ್ಷುರಪ್ರಗಳೆಂಬ ಬಾಣಗಳನ್ನು ಬಿಟ್ಟು, ಖಡ್ಗಮೃಗಗಳ ಕೋಡುಗಳನ್ನು ಕೆಳಗಿಳುಹಿ, ಅವುಗಳ ಶಿರಗಳನ್ನು ಹಗುರಗಳಾಗುವಂತೆಸಗಿದನು, ಆದರೆ–ವಿನಯದಲ್ಲಿ ನೆಲೆಗೊಂಡಿರುವ ಅರಸು – ಹೆಮ್ಮೆಯಿಂದ ಕೊಬ್ಬಿ, ಹೆಚ್ಚಿ ಮೆರೆಯುವವರನ್ನು ತಗ್ಗಿಸಬೇಕೆಂಬ ಬಯಕೆಯನ್ನುಳ್ಳವನಲ್ಲದೆ, ತಲೆಯನ್ನೇ ಒಡೆದು, ಉಳಿಸಲೇಬಾರದೆಂದೆಣಿಸುವವನೇ ಅಲ್ಲ.

ಅಲ್ಲಿಂದ ಮುಂದೆ ಹೊರಡುತ್ತಿರುವಲ್ಲಿ – ಗವಿಗಳೊಳಗೆ ಪವಳಿಸಿದ್ದ ಹುಲಿಗಳು – ರೋಷಗೊಂಡು, ಗಾಳಿಯಿಂದರಳಿ ಬಾಗಿದ ಸರ್ಜಕ ತರುಗಳ ಕೊನೆಗಳಂತೆಸೆವ ಶಿರಗಳನ್ನುಳ್ಳವಾಗಿ, ಮೇಲೆ ಬೀಳಲು ಬಹುವೇಗದಿಂದ ಇದಿರಿಗೆ ಹಾರಿಬಂದುವು. ದೊರೆಯು – ನಿರ್ಭಯನಾಗಿ, ಚೆನ್ನಾಗಿ ಪಳಗಿದ ಕೈಚಳಕವುಳ್ಳವನಾದುದರಿಂದ ನಿಮಿಷಮಾತ್ರದಲ್ಲಿ ಅವುಗಳ ಬಾಯ್ಗಳ ಬಿಲಗಳನ್ನು, ಅಂಬುಗಳಿಂದ ತುಂಬಿ, ಬತ್ತಳಿಕೆಗಳನ್ನಾಗಿ ಮಾಡಿದನು.

ಆ ಬಳಿಕ ಅವನಿಪಾಲನು – ಮರಗಿಡ ಬಳ್ಳಿಗಳ ಪೊದೆಗಳೊಳಗೆ ಹುದುಕಿ, ಅಡಗಿರುವ ಸಿಂಹಗಳನ್ನು ಕೊಲ್ಲಲೆಳಸಿ, ಅಕಾಲದಲ್ಲಿ ಆಕಾಶದೊಳಗೆ ಹುಟ್ಟುವ ಉತ್ಪಾತ ಶಬ್ದದಂತಿರುವ ಮೌರ್ವಿಘೋಷಗಳಿಂದ ಕ್ಷೋಭೆಪಡಿಸಿದನು. ಶೌರ್ಯದಿಂದ ಮೇಲೆನಿಸಿ, ಮೃಗಗಳ ಸಂಬಂಧದಿಂದ ಅವುಗಳಿಗುಂಟಾಗಿರುವ ರಾಜಾ ಎಂಬ ಶಬ್ದವನ್ನು ಹೊಟ್ಟೆಕಿಚ್ಚಿನಿಂದ ತಾಳಲಾರದಿದ್ದುದೇ ಅದಕ್ಕೆ ಮೂಲ. ಹುಟ್ಟಿದಂದಿನಿಂದಲೂ ಆನೆಗಳಲ್ಲಿ ತೀವ್ರವಾದ ವೈರವನ್ನು ಬೆಳಸುತ್ತಾ, ಉಗುರುಗಳ ಸಂದುಗಳೊಳಗೆ ಮುತ್ತುಗಳನ್ನೊಳಗೊಂಡಿರುವ ಆ ಕೇಸರಿಗಳನ್ನು ಕೊಂದು, ರಣಾಂಗಣಗಳಲ್ಲಿ ತನಗೆ ಸಹಾಯಮಾಡಿದ್ದ ಗಜಗಳ ಋಣದಿಂದ ಬಿಡುಗಡೆಯನ್ನು ಹೊಂದಿದವನನ್ನಾಗಿ ತನ್ನನ್ನು ತಿಳಿದುಕೊಂಡನು.

ಒಂದು ಸ್ಥಳದಲ್ಲಿ – ಚಮರೀಮೃಗಗಳನ್ನು ಕಂಡ ಪಾರ್ಥಿವನು ಅಶ್ವಾರೂಢನಾಗಿಯೇ ಅವುಗಳನ್ನು ಬಳಸಿ, ಬಹು ಕ್ರೂರವಾದ ಬಾಣಗಳನ್ನು ಪ್ರಯೋಗಿಸಿ, ಪರರಾಜರನ್ನು ಹೇಗೋ ಹಾಗೆ, ಅವುಗಳನ್ನೂ ಶುಭ್ರಚಾಮರ ಶೂನ್ಯವಾದವುಗಳನ್ನಾಗಿ ಮಾಡಿ, ತತ್ಕಾಲದಲ್ಲಿ ಶಾಂತನಾದನು. ಶೂರರು – ಪರರಾಯರ ಹೆಮ್ಮೆಯನ್ನು ಅಡಗಿಸುವರಲ್ಲದೆ ಪ್ರಾಣಹರಣ ಮಾಡಲೆಳಸುವುದಿಲ್ಲ.

ಆಮೇಲೆ – ನರನಾಥನು – ತನ್ನ ಹತ್ತಿರದಲ್ಲಿಯೇ ಹಾರಿಹೋಗುತ್ತಲಿದ್ದ ಚಿತ್ರಶಿಖೆಯುಳ್ಳ ನವಿಲನ್ನು ಕಂಡರೂ, ಅದನ್ನು ಗುರಿಕಟ್ಟಿ ಹೊಡೆಯಲಿಲ್ಲ. ಏಕೆಂದರೆ – ತನ್ನ ಪ್ರಿಯಪತ್ನಿಯರೊಡನೆ ವನವಿಹಾರದಲ್ಲಿರುವಾಗ, ಬಳಲಿದ ಆ ತರುಣಿಯರ ಶಿರಗಳಲ್ಲಿ ಚಿತ್ರಮಾಲಾಲಂಕೃತವಾಗಿದ್ದು ಸಡಿಲಿದ ತಲೆದುರುಬುಗಳು, ಹೋಲಿಕೆಯಿಂದ ಸ್ಮರಣೆಗೆ ಬಂದು, ಮನವಲ್ಲಿಗೆ ತೆರಳಿದುದೇ ಕಾರಣವಾಗಿದ್ದಿತು.

ಅದುವರೆಗೆ ಬಹುದೂರದ ದಾರಿಯನ್ನು ಸುತ್ತಿದ್ದಾಯಿತು. ಬಳಲಿಕೆಯು ಹೇರಳವಾಯಿತು. ಬೆವರಿನ ಹನಿಗಳು ಮುಖದಲ್ಲಿ ತುಂಬಿದ್ದುವು, ಹೊಳೆಗಳಮೇಲೆ ಹರಿದು, ತುಂತುರುಗಳನ್ನಾಂತು, ಮರಗಳ ಸಂದುಗಳೊಳಗೆ ನುಗ್ಗಿ, ತಳಿರುಗಳನ್ನಲುಗಿಸಿ, ಬರುತ್ತಲಿರುವ ವನಮಾರುತವು – ಆ ಅವನಿಪಾಲನ ಶ್ರಮವನ್ನೆಲ್ಲ ಪರಿಹರಿಸುತ್ತಲಿದ್ದಿತು. ಇಂತು ಬೇಟೆಯಾಟವನ್ನು ಎಡಬಿಡದೆ ಪೊಡವಿಯಾಣ್ಮನು ಅನುಸರಿಸುತ್ತಲೇ ಬಂದನು, ತನ್ನ ಕರ್ತವ್ಯವನ್ನೆಲ್ಲ ಮರೆತನು. ಆಳ್ವಿಕೆಯ ಹೊರೆಯನ್ನೆಲ್ಲ ಮಂತ್ರಿಗಳಿಗೊಪ್ಪಿಸಿ, ಅತ್ಯಾಸಕ್ತಿಯಿಂದ ತಣಿಯದಿರುವ ದೊರೆಯನ್ನು ಮೃಗಯೆಯು ಕಾಮಿನಿಯಂತೆ ಸೆಳೆಯಿತು.

ಕಂದ ॥ **ಕಾಮಮದನುಭವದಿಂದಂ ।**
ನೇಮದೆ ತಾಂ ಶಾಂತಿಯೈದದೆಂದುಂ ಬಗೆಯಲ್ ॥
ಹೋಮದೆ ವೈಶ್ವಾನರನುಂ ।
ಕಾಮಂ ಪೆರ್ಚದಯೆ ಶಾಂತಮಪ್ಪುದೆ ಜಗದೊಳ್ ॥

ಆಖೇಟದಾಶೆಯಿಂದ ಹಾಗೆಯೇ ನರದೇವನು ಮುಂದುವರಿದನು. ಸಂಜೆಯಾಯಿತು, ಪರಿಜನರೆಲ್ಲ ಹಿಂದುಳಿದರು. ಸುಕುಮಾರವಾದ ಕುಸುಮಕಿಸಲಯಗಳಿಂದ ಒಂದೆಡೆ ತಲ್ಪವನ್ನು ಕಲ್ಪಿಸಿದನು, ಆದರೆ ಮೇಲೆಯೇ ಪವಳಿಸಿದನು, ಜ್ಯೋತಿರ್ಲತೆಗಳೇ ಅಂದಿನ ಇರುಳು ದೀವಿಗೆಗಳಾದುವು. ತ್ರಿಯಾಮೆಯನ್ನೂ ಕಳೆದನು. ಬೆಳಗಾಗುತ್ತ ಬಂದಿತು, ತಬಟೆಯ ಶಬ್ದದಂತಿರುವ ಆನೆಯ ಹಿಂಡಿನ ಅಗಲವಾದ ಕಿವಿಗಳೆಂಬ ತಾಳಗಳ ಸದ್ದನ್ನು ಕೇಳಿ ಎಚ್ಚೆತ್ತನು. ಹಕ್ಕಿಗಳ ಕೂಗೆಂಬ ಕಿವಿಗಿಂಪಾದ ವಂದಿಮಂಗಳಗೀತವನ್ನೂ ಆಲಿಸುತ್ತಾ ಆನಂದಿಸಿದನು.

ಬಳಿಕ – ಮರಳಿ ಬೇಟೆಗಾಗಿ ಹೊರಟನು, ಅಲ್ಲಲ್ಲಿ ಸುತ್ತುತ್ತ, ಒಂದುವೇಳೆ– ರುರುಮೃಗವನ್ನು ಕಂಡು ಅದನ್ನು ಹಿಂಬಾಲಿಸಿ ನಡೆದನು. ಕಾಡಿನಲ್ಲಿ ಕುದುರೆಯ ವೇಗದಿಂದ ಹಿಂದುಳಿದ ಪರಿವಾರಕ್ಕೆ ಕಾಣದೆ ಹೋದನು. ಅಲೆದ ಶ್ರಮದಿಂದ ಅಶ್ವದ ಮೆಯ್ಯಲ್ಲ ಬೆವರಿತು. ಬಾಯೊಳಗೆ ನೊರೆಯು ಹೊರಟಿದ್ದಿತು. ಹಾಗೆಯೇ

ನಡೆದು, ತಪಸ್ವಿಗಳಿಂದ ತುಂಬಿರುವ ತಮಸಾನದಿಯ ತಡಿಗೈತಂದನು. ಹಳ್ಳದಲ್ಲಿ ಹರಿಯುತ್ತಲಿದ್ದ ಆ ಹೊಳೆಯೊಳಗೆ, ಕೊರಳು ಸಣ್ಣಗಿರುವ ಕುಂಭದಿಂದ ನೀರನ್ನು ತುಂಬುತ್ತಲಿರುವಾಗ ಉಂಟಾದ ಬುಡಬುಡವೆಂಬ ಗಂಭೀರವಾದ ಶಬ್ದವೊಂದು ದೊರೆಗೆ ಕೇಳಬಂದಿತು. ಅದನ್ನು ಆನೆಯ ಬೃಂಹಿತ ಶಬ್ದವೆಂದು ನೆನೆದನು. ಆ ಧ್ವನಿಯನ್ನು ಅನುಸರಿಸಿ ಹೋಗಿ, ಲಕ್ಷ್ಯವನ್ನು ಭೇದಿಸುವ ಬಾಣವನ್ನು ಹೊಡೆದನು. "ವಿನಾಶಕಾಲಕ್ಕೆ ವಿಪರೀತ ಬುದ್ಧಿ" ಎಂಬ ನಾಣ್ನುಡಿಯು ಸಟೆಯಲ್ಲ.

"ಏಳಿಗೆಯನ್ನು ಬಯಸುವ ಅರಸು ಕಾಳಗವನ್ನು ಬಿಟ್ಟು, ಉಳಿದ ಸಮಯದಲ್ಲಿ ಆನೆಯನ್ನು ಕೊಲ್ಲಬಾರದು" ಎಂಬ ಶಾಸ್ತ್ರವನ್ನು ಬಲ್ಲವನೇ ಹೌದು, ಆದರೇನು? ಆ ಸಮಯದಲ್ಲಿ ಮರವೆಯುಂಟಾಯಿತು. ಪಙ್ತಿರಥನು – ಸುಪಥವನ್ನು ದಾಟಿದನು, ಅಪಥದಲ್ಲಿ ಅಡಿಯನ್ನಿಟ್ಟನು, ಮಾಡಬಾರದುದನ್ನು ಮಾಡಿದನು, ಆಗಬಾರದುದೇ ಆಗಬೇಕೆಂಬುದು ಭವಿತವ್ಯತೆಯಾಗಿದ್ದಿತು. ಶಾಸ್ತ್ರಜ್ಞರಾದರೂ ರಜೋಗುಣಕ್ಕೊಳಗಾದರೆ ಕಣ್ಣು ಕಾಣದೆ ದುರ್ಮಾರ್ಗಗಾಮಿಗಳಾಗುತ್ತಾರಲ್ಲವೆ? ಆ ಕೂಡಲೇ, ಹಾ! ತಾತಾ!! ಎಂಬ ಗೋಳು ಕೇಳಬಂದಿತು. ಅರಸು ಅಡಗಿದನು, ಬಹು ಖಿನ್ನನಾದನು, ಜೊಂಡುಹುಲ್ಲಿನ ಪೊದೆಯಲ್ಲಿ, ಶಬ್ದವು ಹುಟ್ಟಿದ ಸ್ಥಳವನ್ನು ಹುಡುಕಿದನು. ಎದೆಯಲ್ಲಿ ಅಲಗುನಟ್ಟು, ಕೈಯ್ಯಲ್ಲಿ ಕುಂಭವನ್ನು ಹಿಡಿದು, ಬಿದ್ದಿರುವ ಮುನಿಕುಮಾರನನ್ನು ಕಂಡನು. ತತ್ಕ್ಷಣದಲ್ಲಿಯೇ ತನ್ನ ಹೃದಯದಲ್ಲಿ ನಟ್ಟ ಶಲ್ಯವುಳ್ಳವನಾಗಿ ಸಂತಪಿಸಿದನು. ತಟ್ಟನೆ ಕುದುರೆಯಿಂದಿಳಿದನು ಹತ್ತಿರಕ್ಕೆ ಓಡಿಬಂದನು, ತಾನು ಪಾಪಕ್ಕೆ ಹೆದರತಕ್ಕವನೆಂಬುದನ್ನು ತಿಳಿಸಲಿಕ್ಕೆ ಪ್ರಖ್ಯಾತವಾದ ತನ್ನ ಪ್ರವರವನ್ನು ತಿಳಿಸಿದನು. ತನಗೆಲ್ಲಿ ಬ್ರಹ್ಮಹತ್ಯಾದೋಷವು ಬಂದೊದಗುವುದೋ ಎಂದು ಮಹಾಭಯದಿಂದ ಗಡಗಡನೆ ನಡುಗುತ್ತಾ, ಕುಟುಕುಜೀವದಿಂದ ಕುಂಭದಮೇಲೆ ಬಿದ್ದಿರುವಾತನ ವಂಶಕ್ರಮವನ್ನು ಕೇಳಿದನು. ನಾನು ಬ್ರಾಹ್ಮಣೇತರ ತಾಪಸಕುಮಾರನು ಎಂಬುದಾಗಿ ತೊದಲಿ ತೊದಲಿ, ಒಂದೊಂದೇ ಅಕ್ಷರವನ್ನಾಗಿ ಹೇಳಿದ ಆ ತಪಸ್ವಿಪುತ್ರನ ನುಡಿಯನ್ನಾಲಿಸಿದನು.

ಆ ಮುನಿತನಯನು– "ನನ್ನ ತಾಯಿತಂದೆಗಳಿಬ್ಬರೂ ಹುಟ್ಟು ಕುರುಡರು, ಮುಪ್ಪಿನ ಮುದುಕರು, ಅವರಿಗೆ ನಾನು ಹೊರತು ಬೇರೆ ಗತಿಯಿಲ್ಲ. ಬಹು ದಾಹಗೊಂಡಿದ್ದಾರೆ, ಮೊದಲು ನನ್ನನ್ನು ಅವರ ಬಳಿಗೆ ಕರೆದೊಯ್ಯಿ" ಎಂದು ಹೇಳುತ್ತಲೇ ಸುಮ್ಮನಾದನು. ಆಗಲೇ ದಶರಥನ ಜೀವವು ಹಾರಿಹೋದಂತಾಯಿತು. ಆ ಬಾಲಕನ ಎದೆಯೊಳಗೆ ಸಿಲುಕಿರುವ ಶಲ್ಯವನ್ನು ಕಿತ್ತರೆ ರಕ್ತಪ್ರವಾಹವು ಹರಿದು, ಉಸಿರು ಹಾರಿಹೋಗುವುದು, ನೋಡೋಣ, ಮಾತಾಪಿತೃಗಳ ಸಮೀಪಕ್ಕೆ ಕೊಂಡೊಯ್ಯುವ, ಅದುವರೆಗೂ ಪ್ರಾಣವಾಯುವು ಇರುವುದೋ ಹೇಗೋ

ಎಂದುಕೊಂಡು, ನಡುಗುತ್ತಲಿರುವ ಕರತಲದಿಂದ ಆ ಹುಡುಗನನ್ನು ಎತ್ತಿಕೊಂಡು, ವೃದ್ಧದಂಪತಿಗಳ ಸನಿಹಕ್ಕೆ ಕುಂಭಜಲದೊಡನೆ ಬೇಗನೆ ಬಂದನು. ಅಲ್ಲಿ ಆ ಕುವರನನ್ನು ಮೆಲ್ಲಗೆ ಇಳುಹಿದನು, ಆಗಲಾ ಕುರುಡು ಮುದುಕರ ಶೋಕವನ್ನು ಹೇಳಬೇಕೆ? ಜನನೀಜನಕರಿಬ್ಬರೂ ಗೊಳೋ ಎಂದು ಅಳುತ್ತಾ, ಅಯ್ಯೋ! "ಎದೆಯೊಳಗೆ ಹೂತಿರುವ ಈ ಮೊಳೆಯನ್ನು ತೆಗೆಯಪ್ಪಾ!" ಎಂದು ಮಗನ ಮೆಯ್ಯನ್ನು ಕೈಗಳಿಂದ ತಡಹುತ್ತಾ ಹೇಳಿದರು. ಹೊಟ್ಟೆಯೊಳಗೆ ತುಂಬಿದ ದುಃಖ, ಭಯಗಳ ಭಾರದಿಂದ ಬೆಪ್ಪಾದ ದೊರೆಯು – ಕೀಲನ್ನು ಮೆತ್ತಗೆ ಎತ್ತುತ್ತಲಿರುವಾಗಲೇ ಆ ಕುಮಾರನು ಪರಾಸುವಾದನು. ಆ ಮುನಿವೃದ್ಧನು ಉಕ್ಕಳಿಸುವ ಶೋಕದಿಂದ ಬೊಗಸೆಯಲ್ಲಿ ತುಂಬಿದ ಕಣ್ಣೀರುಳ್ಳವನಾಗಿ "ಎಲೈ ದೊರೆಯೇ! ನೀನೂ ಮುಪ್ಪಿನಲ್ಲಿ ಮಗನ ಮುಖವನ್ನು ಕಾಣದೆಯೇ ನನ್ನಂತೆ ಮರಣವನ್ನು ಪಡೆಯುವೆ" ಎಂದು ಶಪಿಸಿದನು. ಮೊದಲು ಕಾಲಿನಿಂದ ತುಳಿಯಲು, ತರುವಾಯ ರೋಷಗೊಂಡು, ವಿಷವನ್ನು ಕಾರುವ ಸರ್ಪದಂತಿರುವ ಆ ವೃದ್ಧ ಮುನಿಯನ್ನು ಕುರಿತು ಮೊದಲು ತಪ್ಪನ್ನು ಮಾಡಿರುವ ಕೋಸಲಪತಿಯು –

"ಎಲೈ ಭಗವಂತನೇ! ಮಗನ ಮೊಗದಾವರೆಯನ್ನೇ ಕಾಣದಿರುವ ನನ್ನಲ್ಲಿ ನೀನು ಸಿಡಿಲಿನಂತೆ ಕೆಡಹಿದ 'ಪುತ್ರಶೋಕದಿಂದ ಸಾಯುವೆ' ಎಂಬ ಈ ಬಿರುನುಡಿಯೂ, ಅನುಗ್ರಹವಾಗಿ ಪರಿಣಮಿಸಿ ಇದೆ. ಕಟ್ಟಿಗೆಗಳಿಂದ ಉರಿಯುತ್ತಲಿರುವ ಬೆಂಕಿಯ – ಬೇಸಾಯಕ್ಕೆ ತಕ್ಕುದೆನಿಸಿರುವ ನೆಲವನ್ನು ಸುಡುತ್ತಾ, ಆ ಭೂಮಿಗೆ ಬೀಜವು ಸುಖವಾಗಿ ಮೊಳೆಯತಕ್ಕ ಶಕ್ತಿಯನ್ನು ಉಂಟುಮಾಡುತ್ತದೆಯಲ್ಲವೆ?" ಎಂದನು.

ಇಂತು ಅನರ್ಥವು ಬಂದೊದಗಲು, ಮುನಿಯ– ಜನಾಧಿಪನ ವಿಷಯದಲ್ಲಿ ಕರುಣೆಯಿಲ್ಲದವನಾದನು. ಪಾಪಕಾರ್ಯವನ್ನು ಮಾಡಿ, ವಧಾರ್ಹನೆನಿಸಿದ ಈ ದುರಾತ್ಮನು ಮುಂದೇನು ಮಾಡಬೇಕೆಂಬುದನ್ನು ಅಪ್ಪಣೆಕೊಡಿಸಬೇಕೆಂದು ವಸುಧಾಧಿಪನು ಆ ವೃದ್ದ ತಪಸ್ವಿಯನ್ನು ವಿನಯದಿಂದ ಪ್ರಾರ್ಥಿಸಿದನು. ಬಳಿಕಲಾ ಮುನಿಯು– ಸುತ ಶೋಕವನ್ನು ಸಹಿಸಲಾರದೆ, ಪತ್ನೀಸಹಿತನಾಗಿ, ಪರಾಸುವಾದ ಪುತ್ರನನ್ನು ಅನುಸರಿಸಬೇಕೆಂದು ನೆನೆದು, ಕಾಷ್ಠ ಸಮೃದ್ಧಿಯಿಂದ ಪ್ರಜ್ವಲಿಸುವ ಅಗ್ನಿಯನ್ನು ಮಾತ್ರ ಬೇಡಿದನು.

ಈಪ್ರಕಾರವಾಗಿ ಸಂಭಾಷಿಸುತ್ತಲಿರುವ ಸಮಯಕ್ಕೆ ಪರಿಜನರೆಲ್ಲರೂ ಬಂದು ಸೇರಿದರು, ಅರಸು–ಮುನಿಯ ಅಪ್ಪಣೆಯಂತೆ ಅನುಚರರಿಂದ ಚಿತೆಯನ್ನು ಅಣಿಮಾಡಿಸಿ, ಅಲ್ಲಿಂದ ಮುಂದೆ ನಡೆಸಬೇಕಾದ ಕೆಲಸವನ್ನೆಲ್ಲ ನೆರವೇರಿಸಿ,

ಮುನಿತನಯನನ್ನು ಕೊಂದುದರಿಂದ ಬಂದ ಪಾತಕವು ಧೈರ್ಯವನ್ನು ತೊಲಗಿಸಲು, ಬಡಬಾಗ್ನಿಯನ್ನೊಳಗೊಂಡಿರುವ ಕಡಲಿನಂತೆ, ಆತ್ಮನಾಶಕ್ಕೆ ಕಾರಣವಾಗಿ, ಅಂತರಂಗದಲ್ಲಿ ಕುದಿಯುತ್ತಲಿರುವ ಮುನಿಶಾಪವನ್ನು ಧರಿಸಿ, ಅಲ್ಲಿಂದ ಹೊರಟು, ಪರಿಜನದಿಂದೊಡಗೂಡಿ ಪುರವನ್ನು ಸೇರಿದನು.

****

ಹತ್ತನೆಯ ಅಧ್ಯಾಯ
ರಾಮಾವತಾರ

ಸೂಚನೆ ॥ ಸಂತತಿಗಾಗಿಯೆ ಚಿಂತಿಪ ।
ನಂತೇಶಂ ಪುತ್ರಕಾಮನಿಷ್ಟಿಯ ಗೈದಂ ॥
ಸಂತಸಗೊಳಿಸಲ್ ಸುರರಂ ।
ಕಂತುಪಿತಂ ಪಜ್ತೆರಥನಿನುದಿಸಿದನಿಳೆಯೊಳ್॥

ಅಮರೇಂದ್ರನ ತೇಜವನ್ನು ಪಡೆದು, ಎಣೆಯಿಲ್ಲದ ಏಳಿಗೆಯಿಂದಿರುತ್ತಾ, ಪೊಡವಿಯನ್ನು ಪಾಲಿಸುತ್ತಲಿದ್ದ ಅಜನಂದನನಿಗೆ, ಮುನಿಶಾಪವು ಬಂದಮೇಲೆ, ಸ್ವಲ್ಪ ಕಡಿಮೆ ಹತ್ತುಸಾವಿರ ವರ್ಷಗಳು ಕಳೆದುವು. ಆದರೂ – ಆ ದಶರಥನು – ತನ್ನ ಪಿತೃಗಳ ಋಣದಿಂದ ಬಿಡುಗಡೆಯನ್ನು ಹೊಂದಲಿಕ್ಕೆ ಕಾರಣವಾಗಿ, ತತ್ಕಾಲದಲ್ಲಿ ಶೋಕವೆಂಬ ಅಂಧಕಾರವನ್ನು ತೊಲಗಿಸಲು ತಕ್ಕದೆನಿಸಿರುವ, ಪುತ್ರನೆಂಬ ಹೆಸರು ಪಡೆದ ದೀವಿಗೆಯನ್ನು ಪಡೆಯಲೇ ಇಲ್ಲ. ಆಮೇಲೆಯೂ, ಕಾರಣವನ್ನು ನಿರೀಕ್ಷಿಸುತ್ತಲಿದ್ದ ಆ ಅರಸು – ಮಥನಕ್ಕಿಂತಲೂ ಮೊದಲು ಕಾಣಬರದಿರುವ ರತುನಗಳನ್ನೊಳಗೊಂಡಿದ್ದ ಕಡಲಿನಂತೆ ಬಹುಕಾಲವನ್ನು ಕಳೆದನು. ಜಿತೇಂದ್ರಿಯರೆನಿಸಿದ ಋಷ್ಯಶೃಂಗನೇ ಮೊದಲಾದ ಯಾಜ್ಞಿಕರು – ಪುತ್ರಾರ್ಥಿಯಾದ ಆ ದಶರಥನಿಗೆ ಪುತ್ರನಿಮಿತ್ತವಾಗಿರುವ ಯಾಗವನ್ನು ಪ್ರಾರಂಭಿಸಿದರು. ಆ ಸಮಯದಲ್ಲಿ ದೇವತೆಗಳು – ಪುಲಸ್ತ್ಯ ಕುಲದೊಳುದಿಸಿದ ರಾವಣನ ಹಾವಳಿಯನ್ನು ತಾಳಲಾರದೆ ತೊಂದರೆಪಟ್ಟು, ಬೇಸಗೆಯನ್ನು ಸಹಿಸಲಾರದೆ ನೊಂದ ದಾರಿಗರು ನೆಳಲಿನ ಮರವನ್ನು ಅರಸುವಹಾಗೆ, ಹರಿಯನ್ನು ಶರಣಾಗಿ ಬಯಸಿ, ಆತನ ಬಳಿಗೆ ತೆರಳಿದರು. ಆ ಅಮರರ್ಕಳೂ ಕಡಲತಡಿಗೈದುವಲ್ಲಿಗೆ ಸರಿಯಾಗಿ, ಪವಳಿಸಿದ್ದ ಪುರಾಣಪುರುಷನೂ ಎಚ್ಚತ್ತನು. ಯಾಚಕರು ಗುರಿಯಿಟ್ಟು ಹೋದ ಯಜಮಾನನು – ಬೇರೊಂದು ಕೆಲಸಕ್ಕೆ ತೊಡಗಿರದಿರುವುದು, ಕಾರ್ಯಸಿದ್ಧಿಯಾಗಲು ಪ್ರಥಮ ಶುಭಲಕ್ಷಣವಲ್ಲವೆ? ದಿವೌಕಸರು – ಶೇಷನ ಶರೀರವೆಂಬ ಸಿಂಹಾಸನದ ಮೇಲೆ

ಮಂಡಿಸಿರುವ ಸರಸಿಜಾಕ್ಷನನ್ನು ಕಂಡರು. ಆಗಲಾ ವಿಷ್ಣುವಿನ ದೇಹವು – ಆದಿಶೇಷನ ಹೆಡೆಯ ರತುನಗಳಿಂದ ಹೊರಹೊರಟು ಬೀರುತ್ತಲಿರುವ ಬೆಳಕಿನಿಂದ ಬೆಳಗುತ್ತಲಿದ್ದಿತು. ಸಿರಿಯು ಅರಳಿದ ತಾವರೆಯಲ್ಲಿ ಪದ್ಮಾಸನದಿಂದ ಕುಳಿತು, ತೊಡೆಯ ದುಕೂಲದ ಮೇಲೆ ಮೇಖಲೆಗೆ ಅಡಿಗಳು ತಾಗದಹಾಗೆ ತನ್ನೆರಡು ಕರತಲಗಳನ್ನೂ, ನೀಡಿದ್ದಳು. ಅಲ್ಲಿ ಹರಿಯು ತನ್ನ ಚರಣಗಳನ್ನು ಅರ್ಪಿಸಿದ್ದನು. ಮತ್ತು ಅರಳಿದ ಬೆಳ್ದಾವರೆಯಂತೆ ಬೆಳಗುವ ಕಣ್ಣುಗಳನ್ನೊಳಗೊಂಡು, ಎಳೆಬಿಸಿಲಿನಂತೆಸೆವ ಬಟ್ಟೆಯನ್ನುಟ್ಟು ಇದ್ದುದರಿಂದ, ಪ್ರಾರಂಭದಲ್ಲಿ ನೋಡಲಿಕ್ಕೆ ಹಿತವಾಗಿರುವ ಶರತ್ಕಾಲದ ದಿವಸದ ಬೆಳಗಿನಂತೆ ಕಂಗೊಳಿಸುತ್ತಲಿದ್ದನು. ಥಳಥಳನೆ ಹೊಳೆಯುತ್ತಲಿರುವ ಪ್ರಭೆಯಿಂದ ತುಂಬಿದ ಶ್ರೀವತ್ಸವೆಂಬ ಮಚ್ಚೆಯನ್ನುಳ್ಳವನಾಗಿ, ಲಕುಮಿಯು – ತನ್ನ ಬೆಡಗನ್ನು ನೋಡಿಕೊಳ್ಳಲು ಅಣಿಯಾದ ಕನ್ನಡಿಯಂತಿರುವ ಸಾಗರ ಜಲಸಾರವಾದ ಕೌಸ್ತುಭವೆಂಬ ದಿವ್ಯರತ್ನವನ್ನೂ, ಅಗಲವಾದ ಎದೆಯಲ್ಲಿ ಅಳವಟ್ಟಿದ್ದನು. ಶಾಖೆಗಳಂತಿರುವ ತೋಳುಗಳಿಂದ, ಬೆಲೆಯಿಲ್ಲದ ಬಗೆಬಗೆಯ ಉಡಿಗೆ ತೊಡಿಗೆಗಳ ಅಲಂಕಾರವನ್ನು ಪಡೆದು, ಜಲನಿಧಿಯ ನಡುವೆ ಮೊಳೆತ ಪಾರಿಜಾತ ವೃಕ್ಷದಂತೆ ಕಾಣಬರುತ್ತಿದ್ದನು. ಅಸುರಾಂಗನೆಯರ ಕಪೋಲಗಳಲ್ಲಿನ ಮದರೇಖೆಗಳನ್ನು ಅಳಿಸಬಲ್ಲ ಸುದರ್ಶನವೇ ಮೊದಲಾದ ಆಯುಧಗಳ ಅಭಿಮಾನಿ ದೇವತೆಗಳೂ – ಶರೀರವನ್ನಾಂತು ಸನ್ನಿಧಿಯಲ್ಲಿ ಜಯಘೋಷವನ್ನು ಉದಾಹರಿಸುತ್ತಿದ್ದ ಸೇವೆಯನ್ನು ಸ್ವೀಕರಿಸುತ್ತಲಿದ್ದನು. ಮತ್ತು–ಸನ್ನಿಧಾನ ವಿಶೇಷದಿಂದ ಶೇಷನೊಡನೆ ವಿರೋಧವನ್ನು ತೊರೆದು, ವಾಗಿರುವ ವಜ್ರಾಯುಧದ ಗಾಯಗಳನ್ನೊಳಗೊಂಡಿರುವ ದೇಹದಿಂದೊಡಗೂಡಿ * ವಿಶೇಷವಾಗಿ ತಗ್ಗಿ, ಸಮಾಜದಲ್ಲಿ ಅಂಜಲಿಬದ್ಧನಾಗಿ ನಿಂತಿರುವ ಗರುತ್ಮಂತನ ಸೇವೆಯನ್ನು ಕೈಗೊಳ್ಳುತ್ತಲಿದ್ದನು. ಹಾಗೆ ಎಚ್ಚರಗೊಂಡ ಭಗವಂತನನ್ನು ಕುರಿತು, ಏನೈ ಜಗನ್ನಾಥನೆ! ಸುಖಶಯನವು ಮುಗಿದುದೆ? ಎಂದು ಭೃಗು ಮೊದಲಾದ ಮಹರ್ಷಿಗಳು ಕುಶಲಪ್ರಶ್ನೆಯನ್ನು ಮಾಡುತ್ತಲಿದ್ದರು. ಆಗತಾನೆ ಯೋಗನಿದ್ರೆಯಿಂದೆಚ್ಚತ್ತಿದ್ದ ಪದ್ಮನಾಭನು – ನಿದ್ರಾವಸಾನದಿಂದ ನಿರ್ಮಲವಾಗಿರುವ ಪಾವನವಾದ ಕಟಾಕ್ಷಗಳನ್ನು ಅವರಮೇಲೆ ಹರಡುತ್ತ ಅನುಗ್ರಹಿಸುತ್ತಲಿದ್ದನು.

ಆಗ, ಅಸುರರನ್ನಡಗಿಸುವ ಹರಿಗೆ ಸುರರೆಲ್ಲರೂ ಉದ್ದವಾಗಿ ಬಾಗಿ ಭಕ್ತಿಯಿಂದ ಅಡ್ಡ ಬಿದ್ದರು. ಬಳಿಕ ವಾಕ್ಕಿಗೂ ಮನಸ್ಸಿಗೂ ಅಗೋಚರನಾಗಿ, ಸ್ತೋತ್ರಾರ್ಹನೆನಿಸಿರುವ ಸರ್ವೇಶ್ವರನನ್ನು ಸ್ತುತಿಸತೊಡಗಿದರು.

---

* ಪೂರ್ವಕಥೆಗೆ ಅನುಬಂಧ 2, ಅಧ್ಯಾಯ 10ನ್ನು ನೋಡಿ.

ಮೊಟ್ಟಮೊದಲು ಜಗತ್ತನ್ನು ಸೃಷ್ಟಿಸಿ, ಬಳಿಕ ಆ ಪ್ರಪಂಚವನ್ನು ಪೋಷಿಸುತ್ತಿದ್ದು, ತದನಂತರದಲ್ಲಿ ವಿಶ್ವಸಂಹಾರಿಯೂ ಆಗುತ್ತಾ, ಹೀಗೆ ಮೂರುಬಗೆಯಾದ ಸ್ವರೂಪವನ್ನೊಳಗೊಂಡಿರುವ ಭಗವಂತನಾದ ನಿನಗೆ ವಂದನೆಯನ್ನೊಪ್ಪಿಸುವೆವು. ಮುಗಿಲಿನಿಂದ ಸುರಿಯುವ ಮಳೆ ನೀರು- ಒಂದೇ ಬಗೆಯಾದ ಸವಿಯನ್ನೊಳಗೊಂಡಿದ್ದರೂ, ಬೇರೆಬೇರೆ ಸ್ಥಳಗಳಲ್ಲಿ ಬಿದ್ದು, ಭಿನ್ನಭಿನ್ನವಾದ ರುಚಿಯನ್ನು ಪಡೆಯುವಹಾಗೆ, ಎಲೈ ದೇವನೇ! ನೀನೂ ಬೇರುಬೇರಾದ ಗುಣಗಳನ್ನಾಶ್ರಯಿಸಿ, ಸೃಷ್ಟಿಯೇ ಮುಂತಾದ ಕೆಲಸಗಳನ್ನು ಮಾಡುವೆ. ಎಲೈ ಸರ್ವಶಕ್ತನೇ! ಯಾವನೊಬ್ಬನೂ – ನಿನ್ನ ಇಯತ್ತೆಯನ್ನು ಅರಿಯಲಾರ. ಎಲ್ಲ ಲೋಕಗಳನ್ನೂ ನೀನು ಅಳೆಯಬಲ್ಲೆ. ನೀನಾದರೆ ನಿಸ್ಪೃಹನು. ಎಲ್ಲರ ಪ್ರಾರ್ಥನೆಗಳನ್ನೂ ಸಲ್ಲಿಸತಕ್ಕವನು. ನಿನ್ನನ್ನು ಗೆಲ್ಲುವವರೇ ಇಲ್ಲ. ನಿನಗೆ ಸೋಲದವರೂ ಇಲ್ಲ. ನೀನೊಬ್ಬರಿಗೂ ಕಾಣಬರೆ.

ಕಂಡು ಕಾಣಬರದಿರುವುದೆಲ್ಲಕ್ಕೂ ನೀನೇ ಕಾರಣನು. ಎಲೈ ಸರ್ವವ್ಯಾಪಕನೇ! ಪ್ರಾಜ್ಞರು – ನಿನ್ನನ್ನು ಎಲ್ಲರ ಹೃದಯದಲ್ಲಿರುವವನನ್ನಾಗಿಯೂ, ಯಾರಿಗೂ ಗೋಚರಿಸದಿರುವುದರಿಂದ ದೂರದಲ್ಲಿರತಕ್ಕವನನ್ನಾಗಿಯೂ ಹೇಳುತ್ತಾರೆ. ಯಾವುದೊಂದರಲ್ಲಿಯೂ ಅಭಿಲಾಷೆಯಿಲ್ಲದಿದ್ದರೂ, ನೀನು ತಪವನ್ನಾಚರಿಸುತ್ತಲಿರುವೆಯಂತೆ? ಹೆರರಿಗುಂಟಾಗುವ ತೊಂದರೆಯನ್ನು ಪರಿಹರಿಸುವ ಕನಿಕರವು ನಿನ್ನ ಎದೆಯಲ್ಲಿ ನೆಲೆಗೊಂಡಿರುವುದೆಂತಲೂ, ನಿತ್ಯಾನಂದ ರೂಪನಾದುದರಿಂದ* ದುಃಖಶೂನ್ಯನೆಂತಲೂ, ಬಲು ಹಳಬನಾದರೂ ಮುಪ್ಪಿಲ್ಲದವನೆಂತಲೂ ಹೇಳುವರು. ಸ್ಫಟಕ ಶಿಲೆಯು ತನ್ನ ಹತ್ತಿರದಲ್ಲಿರುವ ಬೇರೆ ಬಣ್ಣದ ವಸ್ತುವಿನಿಂದ ತಾನೂ ಬೇರೆ ವರ್ಣವನ್ನು ಪಡೆಯುವ ಹಾಗೆ – ನೀನು ಒಬ್ಬನೇ ಆದರೂ, ಕಾರಣ ಭೇದದಿಂದ ಭಿನ್ನಸ್ಥಿತಿಯನ್ನು ಹೊಂದುತ್ತೀಯೆ ಎಂದೆನ್ನುವರು. ಸರ್ವವನ್ನೂ ನೀನು ಬಲ್ಲೆ, ಯಾರೂ ನಿನ್ನನ್ನು ಕಾಣರು. ಸರ್ವಕ್ಕೂ ನೀನೇ ಕಾರಣನು. ನೀನೇ ಸರ್ವರೂಪವನ್ನೂ ಪಡೆಯಬಲ್ಲೆ. ಎಲ್ಲಕ್ಕೂ ನೀನೇ ಒಡೆಯ, ನಿನಗೆ ಬೇರೆ ಒಡೆಯರಿಲ್ಲ. ನೀನು ಒಬ್ಬ, ನಿನ್ನ ರೂಪಗಳು ಅನಂತವಾಗಿವೆ. ರಥಂತರ ಮೊದಲಾದ ಏಳು ಬಗೆಯ ಸಾಮಗಳಿಂದ ನಿನ್ನನ್ನು ಹೊಗಳುವರು. ಸಪ್ತಾರ್ಣವ ಜಲದಲ್ಲಿ ಪವಳಿಸಿದ್ದೀಯೆ. ಆಹಾರಗಳನ್ನೆಲ್ಲ ಪರಿಗ್ರಹಿಸಲಿಕ್ಕೆ ನಿನಗೆ ಅಗ್ನಿಯೇ ಬಾಯಿ ಎಂತಲೂ, ಈರೇಳು ಲೋಕಗಳಿಗೂ ನೀನೇ ಆಸರೆ ಎಂತಲೂ ಹೇಳುವರು. ನಾಲ್ಕು ಪುರುಷಾರ್ಥಗಳ ಜ್ಞಾನ, ನಾಲ್ಕು ಯುಗಗಳ ಕಾಲದ ಪರಿಮಾಣ, ನಾಲ್ಕು ವರ್ಣಗಳಿಂದ ತುಂಬಿದ ಲೋಕ, ಎಂಬಿದೆಲ್ಲವೂ ನಾಲ್ಮೊಗನಾದ ನಿನ್ನಿಂದಲೇ ಉಂಟಾಯಿತಂತೆ. ಯೋಗಿಗಳು–ಅಭ್ಯಾಸದಿಂದ ವಶಪಡಿಸಿಕೊಂಡ ಮನಸ್ಸಿನಿಂದ,

ಹೃದಯದಲ್ಲಿ ಅಡಗಿರುವ ಜ್ಯೋತಿರ್ಮಯನಾದ ನಿನ್ನನ್ನು ಹುಡುಕಿ, ದುಃಖದ ಬಿಡುಗಡೆಗಾಗಿ ಸೇವಿಸುತ್ತಾರೆ. ಜನ್ಮವಿಲ್ಲದವನಾದರೂ ಹುಟ್ಟುತ್ತಲೂ, ಆಶೆಯಿಲ್ಲದವನಾದರೂ ಹಗೆಗಳನ್ನಿರಿಯುತ್ತಲೂ, ಎಚ್ಚರದಲ್ಲಿರುವವನಾದರೂ ಮಲಗುತ್ತಲೂ ಇರುವ ನಿನ್ನ ತತ್ತ್ವವನ್ನು ಬಲ್ಲವರಾರು?

ಕೃಷ್ಣಾದಿರೂಪದಿಂದ ಶಬ್ದಾದಿ ವಿಷಯುಗಳನ್ನು ಅನುಭವಿಸಲಿಕ್ಕೂ, ನರನಾರಾಯಣಾದಿ ರೂಪದಿಂದ ಅಸದಳವೆನಿಸಿದ ತಪವನ್ನಾಚರಿಸಲಿಕ್ಕೂ, ದೈತ್ಯರನ್ನಿರಿವುದರಿಂದ ಪ್ರಜೆಗಳನ್ನು ಪಾಲಿಸಲಿಕ್ಕೂ, ಒಂದಕ್ಕೂ ನಿಲುಕದೆ ತಟಸ್ಥನಾಗಿರಲಿಕ್ಕೂ, ನಿನ್ನನ್ನು ಬಿಟ್ಟರೆ ಮತ್ತಾರು ಸಮರ್ಥರು? ಪುರುಷಾರ್ಥಗಳನ್ನು ಪಡೆಯಲಿಕ್ಕೆ ಉಪಾಯುಗಳೆನಿಸಿದ ಶಾಸ್ತ್ರಗಳ ಹಾದಿಗಳು–ಲೋಕದಲ್ಲಿ ಬೇರುಬೇರಾಗಿವೆ. ಆದರೂ ಬೇರುಬೇರಾಗಿಯೇ ಹರಿಯುತ್ತಲಿರುವ ಗಂಗೆಯ ಕಾಲುವೆಗಳೆಲ್ಲವೂ ಕಡಲಿನಲ್ಲಿ ಬೀಳುವ ಹಾಗೆ, ಅವೆಲ್ಲವೂ ಯಾವುದೋ ಒಂದು ರೂಪದಿಂದ ನಿನ್ನಲ್ಲಿಯೇ ಬಂದು ಕಲೆಯುವುವು. ನಿನ್ನಲ್ಲಿಯೇ ಮನವನ್ನಿಟ್ಟು, ಮಾಡುವ ಎಲ್ಲ ಕರ್ಮಗಳನ್ನೂ ನಿನಗೇ ಸಮರ್ಪಿಸುತ್ತಲೂ ಇರುವ ವಿರಾಗಿಗಳು – ಮರಳಿ ಹಿಂದಿರುಗದಿರುವುದಕ್ಕೆ ನೀನೇ ಗತಿಯಲ್ಲದೆ ಬೇರಿಲ್ಲ. ನಿನ್ನಯ ಮಹಿಮೆ ಎನಿಸಿ, ಇದಿರಿಗೂ ಕಾಣಬರುವ ಭೂಮಿ ಮೊದಲಾದುದೇ ಅಳೆಯಲಸದಳವೆನಿಸಿರುವಲ್ಲಿ, ಆಪ್ತ ವಚನಗಳೆನಿಸಿದ ವೇದಗಳಿಂದಲೂ, ಅನುಮಾನವೆಂಬ ಪ್ರಮಾಣದಿಂದಲೂ ಸಾಧಿಸಬೇಕಾಗಿರುವ ನಿನ್ನನ್ನು ಅಳೆಯಲು ದಾರಿಯೆಲ್ಲಿ? ನೆನೆದ ಮಾತ್ರದಿಂದಲೇ ಸ್ಮರಿಸಿದವನನ್ನು ಪಾವನನನ್ನಾಗಿ ಮಾಡಬಲ್ಲ ನಿನ್ನ ದರ್ಶನ ಸ್ಪರ್ಶನ ಮುಂತಾದವುಗಳಿಂದ ಇನ್ನೆಂತಹ ಫಲಗಳುಂಟಾಗುವುವೋ ಅವುಗಳನ್ನು ವಿವರಿಸಿ ಹೇಳಲು ನಮಗೆ ಅಳವೆ? ಕಡಲಿನಲ್ಲಿನ ರತ್ನಗಳ ಹಾಗೂ, ರವಿಯ ಕಿರಣಗಳ ಹಾಗೂ, ಎಣಿಸಿ ನುತಿಸಲಿಕ್ಕಳವಲ್ಲದೆ ನಿನ್ನಯ ದಿವ್ಯಚರಿತ್ರೆಗಳು ಬೆಳಗುತ್ತಲಿವೆ. ಇದುವರೆಗೆ ಪಡೆಯದೆ, ಹೊಸದಾಗಿ ನೀನು ಪಡೆಯಬೇಕಾದುದೊಂದೂ ಇಲ್ಲ. ನಿನ್ನಯ ಅವತಾರಗಳಿಗೂ, ಆಯಾ ಅವತಾರಗಳಲ್ಲಿನ ನಿನ್ನ ಕಾರ್ಯಗಳಿಗೂ, ಲೋಕವನ್ನು ಅನುಗ್ರಹಿಸುವುದೊಂದೇ ಫಲವಾಗಿರುವುದು. ನಿನ್ನ ಮಹಿಮೆಯನ್ನು ಹೊಗಳುವ ಹಳೆಯ ಮಾತುಗಳು ಸುಮ್ಮನಾಗುವುದು – ಬಳಲಿಯೋ, ಅಥವಾ ನಿನ್ನ ಗುಣಗಳನ್ನೆಲ್ಲ ಎಣಿಸಿ–ಇಷ್ಟು ಇಂಥವು, ಎಂದು ಬಣ್ಣಿಸಲಳವಲ್ಲದೆಯೋ ಹೇಳಲಿಕ್ಕಾಗದು.

ಇಂತಾ ಅಮರರು–ಅಧೋಕ್ಷಜನನ್ನು ನುತಿಗೈದು ಪ್ರಸನ್ನನನ್ನಾಗಿ ಮಾಡಿಕೊಂಡರು. ಆದರೆ – ಸುರರಾಚರಿಸಿದ ಹರಿಸ್ತುತಿಯು – ಮೊದಲಿದ್ದ ಗುಣಗಳನ್ನೆ ಹೇಳತಕ್ಕುದಾಗಿದ್ದಿತಲ್ಲದೆ, ಇಲ್ಲದುದನ್ನು ಬಣ್ಣಿಸುವುದಾಗಿಯಾಗಲಿ,

ಸೂಕ್ಷ್ಮವಾಗಿರುವುದನ್ನು ಹೆಚ್ಚಿಸಿ ಹೇಳತಕ್ಕುದಾಗಿಯಾಗಲೀ ಇರಲಿಲ್ಲ. ಕುಶಲಪ್ರಶ್ನೆಯಿಂದ ಪ್ರೀತಿಯನ್ನು ವ್ಯಕ್ತಗೊಳಿಸಿದ ಹರಿಯ ಮುಖರಾಗದಿಂದ ಆ ಮಧುವೈರಿಯ ಪ್ರಸನ್ನತೆಯನ್ನು ಸುರರು ಅರಿತರು. ಪ್ರಳಯಸಮಯವೊದಗದೆಯೇ, ಆ ರಕ್ಕಸನೆಂಬ ಕಡಲು-ದಡವನ್ನು ದಾಟ, ಉಕ್ಕಳಿಸಿ ಬರುವುದರಿಂದ ಉಂಟಾಗುತ್ತಲಿರುವ ಭಯವನ್ನು ಆತನಿಗೆ ಬಿನ್ನವಿಸಿದರು –

ತರುವಾಯ ಪಾರಾವಾರದ ತೀರದಲ್ಲಿನ ಗಿರಿಗಳ ಗವಿಗಳಲ್ಲಿಯೂ ಪ್ರತಿಧ್ವನಿಯುಂಟಾಗ.ವಂತೆ, ಸಾಗರದ ಶಬ್ದವನ್ನು ಮೀರಿರುವ ಗಂಭೀರವಾದ ಧ್ವನಿಯಿಂದ ನಾರಾಯಣನನ್ನು ಕುರಿತು ಇಂತೆಂದನು– ಪುರಾಣಪುರುಷನಾದ ಆ ಇಂದಿರಾರಮಣನ ಎದೆ, ಕೊರಳು, ಮೊದಲಾದವುಗಳಿಂದ ಸರಿದುಬರುವ ಸರಸ್ವತಿಯು – ಸ್ವರವ್ಯಂಜನಗಳ ಸಾಧುತೆಯಿಂದಲೂ, ಸ್ಪಷ್ಟತೆಯಿಂದಲೂ ಒಡಗೂಡಿ, ಅಸಂಭವವೆನಿಸದೆಯೂ ಸಂಶಯಾಸ್ಪದವಲ್ಲದೆಯೂ ಹೃದಯಂಗಮವಾಗಿದ್ದಿತು. ಅಂದವಾದ ಹಲ್ಲುಗಳ ಬೆಳಕಿನಿಂದೊಡಗೂಡಿ, ವಿಷ್ಣುವಿನ ವದನಾರವಿಂದದಿಂದ ಹೊರಗೆ ಬರುತ್ತಲಿರುವ ಭಾರತಿಯು – ಮೊದಲು ಚರಣತಲದಿಂದ ಸರಿದು ಉಳಿದಿದ್ದು, ಊರ್ಧ್ವವಾಹಿನಿಯಾಗಿ ಹರಿಯತೊಡಗಿದ ಭಾಗೀರಥಿಯಂತೆ ಬೆಳಗುತ್ತಲಿದ್ದಿತು.

ಎಲೈ ದೇವತೆಗಳಿರಾ! ತಮೋಗುಣದಿಂದ ಆಕ್ರಮಿಸಲ್ಪಟ್ಟ ಶರೀರಿಗಳ ಸತ್ತ್ವ ರಜೋಗುಣಗಳ ಹಾಗೆ, ನಿಮ್ಮಗಳ ಮಹಿಮ ಪೌರುಷಗಳೆರಡೂ ರಾವಣನೆಂಬ ರಕ್ಕಸನಿಂದ ಆಕ್ರಮಿಸಲ್ಪಟ್ಟಿರುವುವೆಂಬುದನ್ನು ಪ್ರಮಾದವಶದಿಂದ ಘಟಿಸಿದ ಪಾಪದಿಂದ ಸತ್ಪುರುಷನ ಹೃದಯವು ಸಂತಪಿಸುವಂತೆ, ಆ ರಾವಣನಿಂದ ಮೂಲೋಕವೂ ತಪಿಸುತ್ತಲಿರುವುದನ್ನೂ ನಾನು ಅರಿತಿದ್ದೇನೆ. ರಾವಣಹನನನೆಂಬ ಪ್ರಕೃತ ಕಾರ್ಯವು – ನಿಮಗೂ, ನನಗೂ ಸಮಾನವಾಗಿರುವುದರಿಂದ, ಇಂದ್ರನು – "ಈ ಕೆಲಸವನ್ನು ನೀನು ಮಾಡಬೇಕು, ಎಂದು ನನ್ನನ್ನು ಪ್ರಾರ್ಥಿಸಬೇಕಾದುದಿಲ್ಲ. ವಾಯುವು – ಅಗ್ನಿಗೆ ಸಾರಥ್ಯವನ್ನೆಸಗಲು ತಾನಾಗಿಯೇ ಪ್ರವರ್ತಿಸುವುದಲ್ಲದೆ ಅಗ್ನಿಯ ಪ್ರಾರ್ಥನೆಯಿಂದಲ್ಲ. ಪೂರ್ವದಲ್ಲಿ ಆ ಸುರಾರಿಯು – ತನ್ನ ಶಿರಗಳನ್ನು ಖಡ್ಗ ಧಾರೆಯಿಂದರಿದು, ತ್ರಿಪುರಾರಿಯನ್ನು ಆರಾಧಿಸುತ್ತಲಿರುವ ಸಮಯದಲ್ಲಿ – ನನ್ನ ಚಕ್ರಕ್ಕೆ ಕೊಡಬೇಕಾದ ಭಾಗವೆಂಬಂತೆ ಹತ್ತನೆಯ ತಲೆಯನ್ನು ಉಳಿಸಿರುವನು. ಹಾಗಾದರೆ, ಇದುವರೆಗೆ ಅಸಡ್ಡೆಮಾಡಿರಲು ಕಾರಣವೇನು ಎಂಬುವಿರೋ? ಸೃಷ್ಟಿಕರ್ತನಾದ ಚತುರ್ಮುಖನ ವರದಾನದಿಂದ ಮೆರೆಯುವ ಆ ರಕ್ಕಸನ ಹೊಮ್ಮಿದ ಹೆಮ್ಮೆಯನ್ನು, ಸರ್ಪದ ಕೊಬ್ಬನ್ನು ಚಂದನತರುವು ಹೇಗೋ ಹಾಗೆ ಸಹಿಸುತ್ತಲಿದ್ದೇನೆ. ಆ ರಾಕ್ಷಸನು ಹಿಂದೆ ತೀವ್ರವಾದ ತಪದಿಂದ ಚತುರಾನನನನ್ನು ತೃಪ್ತಿಗೊಳಿಸಿ,

ಮನುಜರನ್ನು ಲೆಕ್ಕವಿಡದೆ, ಎಂಟು ಬಗೆಯಾಗಿರುವ ದೈವಸೃಷ್ಟಿಯಿಂದಲೂ ತನಗೆ ಸಾವು ಉಂಟಾಗದಂತೆ ವರವನ್ನು ಬೇಡಿಕೊಂಡಿರುವನು. ಮುಂದೇನು ಗತಿ ಎನ್ನುವಿರೋ? ಈ ನಾನೇ ರಾಮನಾಮದಿಂದ ದಶರಥನಂದನನಾಗಿ ಅವತರಿಸಿ, ನನ್ನ ಶರಗಳಿಂದಿರಿದ ಆ ದುರುಳನ ಶಿರಗಳೆಂಬ ಸಾರಸಗಳಿಂದ ರಣಲಕ್ಷ್ಮಿಯನ್ನು ಆರಾಧಿಸುವೆನು. ಎಲೈ ಸುಮನಸರುಗಳಿರಾ! ಯಾಜ್ಞಿಕರು – ವಿಧಿಪ್ರಕಾರ ನಿಮಗಾಗಿ ಕಲ್ಪಿಸುವ ಹವಿರ್ಭಾಗಗಳನ್ನು, ಮಾಯಾವಿಗಳಾದ ರಕ್ಕಸರ ಸ್ಪರ್ಶವಿಲ್ಲದಂತೆ ಸ್ವಲ್ಪ ಕಾಲದಲ್ಲಿಯೇ ನೀವು ಮರಳಿ ಸ್ವೀಕರಿಸತಕ್ಕವರಾಗುವಿರಿ. ಆಕಾಶಮಾರ್ಗದಲ್ಲಿ ವಿಮಾನದಿಂದ ಸಂಚರಿಸುವ ಸುಕೃತಶಾಲಿಗಳು – ಮಾರ್ಗವಶದಿಂದ ಅಕಸ್ಮಾತ್ತಾಗಿ ರಾವಣನ ಪುಷ್ಪಕವಿಮಾನವನ್ನು ಕಂಡರೆ ಆ ಕೂಡಲೆ ಮೋಡಗಳ ಮರೆಯಲ್ಲಿ ಅವಿತುಕೊಂಡು, ಅಂಜವುದನ್ನು ಇನ್ನು ಮೇಲೆ ತೊರೆಯಲಿ. ನಲಕೂಬರನಿಂದ ಶಪ್ತನಾಗಿ, ಬಲಾತ್ಕರಿಸಲು ಯತ್ನವಿಲ್ಲದೆ, ಅಪಹರಿಸಿ ಕೊಂಡೊಯ್ದು, ಸೆರೆಮನೆಯಲ್ಲಿ ಸಿಲುಕಿರುವುದರಿಂದ, ಸಂಸ್ಕರಿಸಿಕೊಳ್ಳದಿರುವ ಸುರಾಂಗನೆಯರ ತಲೆಗೂದಲಿನ ತಿರಿಗಳನ್ನು ಬೇಗನೆ ಬಿಡಿಸುವಿರಿ. ಎಂದೀಪ್ರಕಾರ ಆ ಕೃಷ್ಣ ಮೇಘವು – ವೈಶ್ರವಣನೆಂಬ ಅನಾವೃಷ್ಟಿಯಿಂದ ಬಳಲಿರುವ ಸುರರೆಂಬ ಸಸ್ಯಕ್ಕೆ ವಾಗಮೃತವನ್ನು ವರ್ಷಿಸಿ, ಅದೃಶ್ಯವಾಯಿತು.

ಬಳಿಕ – ಅಮರೇಂದ್ರನೇ ಮೊದಲಾದ ನಿರ್ಜರರು ಪುಷ್ಪಗಳು – ತಮ್ಮ ಭಾಗಗಳಿಂದ ವಾಯುವನ್ನು ಹೇಗೋ ಹಾಗೆ, ದೇವಕಾರ್ಯಾರ್ಥವಾಗಿ ಉದ್ಯುಕ್ತನಾಗಿರುವ ವಿಷ್ಣುವನ್ನು ಅನುಸರಿಸಿ, ತಂತಮ್ಮ ಅಂಶಗಳಿಂದ ವಾನರರಲ್ಲಿ ಸುಗ್ರೀವಾದಿ ರೂಪದಿಂದ ಜನಿಸಿದರು.

ಇತ್ತ – ಪ್ರಜಾಪಾಲನಾದ ದಶರಥನು ಆಚರಿಸುತ್ತಲಿದ್ದ ಪುತ್ರಕಾಮೇಷ್ಟಿಯೆಂಬ ಕಾಮ್ಯಕರ್ಮದ ಕಡೆಯಲ್ಲಿ ಅಗ್ನಿಮಧ್ಯದಿಂದ ಒಬ್ಬ ದಿವ್ಯಪುರುಷನು – ಋತ್ವಿಕ್ಕುಗಳ ವಿಸ್ಮಯದೊಡನೆ ಆವಿರ್ಭವಿಸಿದನು. ಆತನ ಕರತಲದಲ್ಲಿ ದಿವ್ಯಪಾಯಸಪೂರ್ಣವಾದ ಸುವರ್ಣಪಾತ್ರೆಯೊಂದು ಕಂಗೊಳಿಸುತ್ತಲಿದ್ದಿತು. ಈರೇಳು ಲೋಕಗಳನ್ನೂ ಉದರದಲ್ಲಿ ತಳೆದಿರುವ ಆದಿಪುರುಷನ ಅಂಶವು ಆ ಪರಮಾನ್ನದಲ್ಲಿ ಒಳಹೊಕ್ಕಿದ್ದುದರಿಂದ ಆ ದೇವಪುರುಷನು ಕೈಲಿ ಹಿಡಿದಿರಲು ಅಶಕ್ತನಾಗುತ್ತಿದ್ದನು. ಆ ಬ್ರಹ್ಮಪುರುಷನು – ಆ ಪಯಶ್ಚರು ಪಾತ್ರವನ್ನು ಪರಮಾದರದಿಂದ ಪೃಥ್ವೀಪಾಲನಿಗಿತ್ತನು. ಕ್ಷೀರಸಾಗರ ಸಾರವಾದ ಅಮೃತವನ್ನು ವಾಸವನು ಹೇಗೋ ಹಾಗೆ, ಅರಸು ಅದನ್ನು ಪರಿಗ್ರಹಿಸಿದನು. ತ್ರಿಭುವನ ಕಾರಣನಾದ ನಾರಾಯಣನೇ ಈತನಲ್ಲಿ ಅವತರಿಸಲೆಳಸಿದುದರಿಂದ ಮಹಾರಾಜನ ಗುಣಗಳು ಎಣೆಯಿಲ್ಲದವುಗಳೆಂಬುದೂ ಇತರಾಸಾಧಾರಣಗಳೆಂಬುದೂ ವ್ಯಕ್ತವಾಯಿತು.

ಬಳಿಕ ವಿಶ್ವಂಭರಾಧಿಪತಿಯು – ಚರುಸಂಜ್ಞೆಯ ಆ ವೈಷ್ಣವ ತೇಜಸ್ಸನ್ನು ತನ್ನ ಪತ್ನಿಯರಾದ, ಕೌಸಲ್ಯಾ ಕೇಕೇಯಿಯರಿಗೆ ಹಂಚಿದುದು – ದಿವಾಕರನು ತನ್ನ ಎಳೆಬಿಸಿಲನ್ನು, ದ್ಯಾವಾಭೂಮಿಗಳಿಗೆ ಹಂಚಿದಂತಿದ್ದಿತು. ಮೂರುಮಂದಿ ಹೆಂಡತಿಯರಿರುವಲ್ಲಿ ಇಬ್ಬರಿಗೆ ಮಾತ್ರವೇ ಪಾಲುಮಾಡಿ ಕೊಡಲು ಕಾರಣವೇನೆಂದರೆ ಕೋಸಲ ರಾಜಪುತ್ರಿಯು ಹಿರಿಯ ಹೆಂಡಿರಾಗಿ ಮಾನ್ಯಳೆನಿಸಿದ್ದಳು. ಕೇಕಯ ರಾಜನಂದನೆಯು ಕಿರಿಯ ಹೆಂಡತಿಯಾದುದರಿಂದ ಬಹು ಪ್ರೀತಿಪಾತ್ರಳಾಗಿದ್ದಳು. ಆದಕಾರಣ ಅವರೀರ್ವರಿಂದಲೂ ಸುಮಿತ್ರೆಯನ್ನು ಸಂಭಾವಿತಳನ್ನಾಗಿ ಮಾಡಬೇಕೆಂದು ಭೂಪತಿಯು ಬಯಸಿದ್ದನು.

ಆ ಹಿಂದೆ – ಉಚಿತಜ್ಞನಾದ ವಸುಮತೀಶನ ಚಿತ್ತವೃತ್ತಿಯನ್ನರಿವುದರಲ್ಲಿ ಚತುರರಾದ ಅವರೀರ್ವರೂ – ತಮ್ಮ ಭಾಗಗಳ ಅರ್ಧಾರ್ಧಭಾಗಗಳಿಂದ, ಸುಮಿತ್ರೆಯನ್ನು ಸಂಭಾವಿಸಿದರು. ಆದರೆ ದ್ವಿರದದ ಕಪೋಲಗಳ ಮದೋದಕ ರೇಖೆಗಳಲ್ಲಿ, ಭ್ರಮರಿಯು ಹೇಗೋಹಾಗೆ, ಸುಮಿತ್ರೆಯೂ ತನ್ನ ಸವತಿಯರಲ್ಲಿ ಸಮಾನ ಪ್ರೀತಿಯುಳ್ಳವಳಾದಳಲ್ಲದೆ ಅಸೂಯಾಪರಳಾಗಲಿಲ್ಲ.

ಆಮೇಲೆ – ಮಳೆಗರೆವ ನಾಡಿಗಳೆನಿಸಿದ ರವಿಯ ಅಮೃತಗಳೆಂಬ ದೀಧಿತಿಗಳು – ಜಲಮಯವಾದ ಗರ್ಭವನ್ನು ಹೇಗೋ ಹಾಗೆ, ಆ ಮೂವರೂ – ದೇವಾಂಶ ಕಾರಣವಾದ ಗರ್ಭವನ್ನು ಧರಿಸಿದರು. ಸಮಕಾಲದಲ್ಲಿ ಗರ್ಭಧಾರಣೆಮಾಡಿ, ತುಸ ಬಿಳಿಯಬಣ್ಣವನ್ನಾಂತ ಆ ರಾಜವಲ್ಲಭೆಯರು– ಬೆಡಗನ್ನಾಂತು ರಾರಾಜಿಸುತ್ತಲಿದ್ದರು.

ಆ ಮೂವರೂ ಇರುಳು ಹೊತ್ತಿನಲ್ಲಿ ಮಲಗಿ ನಿದ್ರಿಸುವಾಗ ಬೆಳಗಿನ ಜಾವದೊಳಗೆ – ಶಂಖ, ಚಕ್ರ, ಗದೆ, ಖಡ್ಗ, ಚಾಪ ಇವುಗಳನ್ನು ಹಿಡಿದು ವಾಮನಮೂರ್ತಿಗಳಾಗಿರುವ ದಿವ್ಯಪುರುಷರು ತಮ್ಮನ್ನು ಕಾಪಿಡುತ್ತಲಿರುವಂತೆ ಕನಸನ್ನು ಕಾಣುತ್ತಲಿದ್ದರು. ಚಿನ್ನದರೆಕ್ಕೆಯ ಬೆಳಕನ್ನು ಆಗಸದ ಬೈಲಿನಲ್ಲಿ ಬೀರುತ್ತಾ, ಗಮನದ ವೇಗದಿಂದ ಮೋಡಗಳನ್ನು ಸೆಳೆದೊಯ್ಯುತ್ತಲೂ ಇರುವ ಗರುತ್ಮಂತನು –ತಮಗೆ ವಾಹನವಾಗಿ ತೆರಳುತ್ತಲಿರುವಂತೆಯೂ ಕಂಡರು. ಪತಿಯು ಅಲಂಕರಿಸಿದ ಕೌಸ್ತುಭವೆಂಬ ರತ್ನವನ್ನು ಎದೆಯಲ್ಲಳವಟ್ಟು, ಅರಳಿದ ತಾವರೆಯೆಂಬ ಬೀಸಣಿಗೆಯನ್ನು ಕಯ್ಯಲ್ಲಿ ಹಿಡಿದು, ಲಕ್ಷ್ಮಿಯು ತಮ್ಮನ್ನು ಸೇವಿಸುತ್ತಲಿರುವಂತೆಯೂ ನೋಡಿದರು. ಮತ್ತು – ಕಶ್ಯಪಾದಿ ಸಪ್ತರ್ಷಿಗಳು – ಆಕಾಶ ಗಂಗೆಯಲ್ಲಿ ಮಿಂದು, ವೇದರಹಸ್ಯವೆನಿಸಿದ ಪರಬ್ರಹ್ಮನನ್ನು ಸ್ತುತಿಸುತ್ತಲಿರುವ ಹಾಗೂ ಸ್ವಪ್ನದಲ್ಲಿ ಅವಲೋಕಿಸಿದರು. ಬಳಿಕ ಬಲು ಸಡಗರದಿಂದ ಪೃಥ್ವೀಶ್ವರನಿಗಾ ಸ್ವಪ್ನದ ಪರಿಯನೆಲ್ಲ ಬಿತ್ತರಿಸಿದರು.

ಅದನ್ನು ಕೇಳಿದ ಅರಸು ಜಗದ್ಗುರುವಿಗೂ ಗುರುವೆನಿಸಿದ ತನ್ನನ್ನು ಬಹು ಶ್ರೇಷ್ಠನನ್ನಾಗಿ ಭಾವಿಸಿದನು. ಪ್ರತಿಬಿಂಬ ಚಂದ್ರನು – ನಿರ್ಮಲಗಳಾದ ಜಲಾಶಯಗಳಲ್ಲಿ ಹೇಗೋಹಾಗೆ, ಸರ್ವಾತ್ಮನೆನಿಸಿದ ಮಹಾವಿಷ್ಣುವೊಬ್ಬನಾದರೂ, ರಾಜಪತ್ನಿಯರ ಉದರಗಳಲ್ಲಿ ವಿಭಕ್ತಾತ್ಮನಾಗಿ ವಾಸಮಾಡುತ್ತಲಿದ್ದನು.

ಆ ಬಳಿಕ, ದಶರಥನಿಗೆ ಅಗ್ರ ಮಹಿಷಿಯೆನಿಸಿರುವ, ಸತೀಶಿರೋಮಣಿಯಾದ ಕೌಸಲ್ಯೆಯು – ಇರುಳು ಹೊತ್ತಿನಲ್ಲಿ ಜ್ಯೋತಿರ್ಲತೆಯು – ಕತ್ತಲನ್ನು ಕತ್ತರಿಸಲು ತಕ್ಕುದೆನಿಸಿದ ಬೆಳಕನ್ನು ಹೇಗೋ ಹಾಗೆ, ಪ್ರಸವಕಾಲವು ಸಮನಿಸಲು, ತಮೋನಾಶಕನಾದ ತನಯನನ್ನು ಹಡೆದಳು. ಅಭಿರಾಮವೆನಿಸಿದ ಮಗುವಿನ ರೂಪವು ತಂದೆಯನ್ನು ಪ್ರೇರಿಸಿತು. ಅದರಿಂದಲೇ ಅರಸು – ಪುತ್ರನಿಗೆ ಜಗತ್ಪ್ರಥಮ ಮಂಗಳವೆನಿಸಿದ ರಾಮ ಎಂಬ ಹೆಸರನ್ನು ಇಟ್ಟನು. ರಘುವಂಶಕ್ಕೆ ಪ್ರಕಾಶಕನೆನಿಸಿದ ಆ ರಾಮನ ಎಣೆಯಿಲ್ಲದ ದೇಹಪ್ರಭೆಯಿಂದ ಸೂತಿಕಾಗೃಹದ ದೀವಿಗೆಗಳು ಮಿಂಚಿನದೀಪದ ಬಳಿಯಲ್ಲಿಟ್ಟ ಎಣ್ಣೆಯ ಸಂಣ ದೀಪಗಳಂತಿದ್ದುವು. ಶರದೃತುವಿನಲ್ಲಿ ಸಣ್ಣದಾಗಿ ಹರಿಯುತ್ತಲಿರುವ ಜಾಹ್ನವಿಯ ಹೊಳೆಯು–ಪಕ್ಕದಲ್ಲಿನ ನಿರ್ಮಲವಾದ ಮಳಲಿನಮೇಲೆ ಪೂಜಾರ್ಥವಾಗಿ ಒಪ್ಪಿಸಿರುವ ಅರಳಿದ ತಾವರೆಯಿಂದ ಹೇಗೋ ಹಾಗೆ, ಕೃಶೋದರಿಯಾದ ಕೌಸಲ್ಯೆಯು – ಪಾರ್ಶ್ವದಲ್ಲಿ ಹೊಳೆಯುವ ಹಾಸಿನಮೇಲೆ ಪವಳಿಸಿರುವ ರಾಮನಿಂದ ಬೆಳಗುತ್ತಲಿದ್ದಳು. ಬಳಿಕ ಕೇಕಯ ರಾಜನಂದನೆಯಾದ ಕೈಕೇಯಿಯು –ಸುಶೀಲನಾದ ಭರತನೆಂಬ ಕುವರನನ್ನು ಹೆತ್ತಳು. ಆ ವರಕುಮಾರನು – ವಿನಯವು ಸಿರಿಯನ್ನು ಹೇಗೋ ಹಾಗೆ, ತನ್ನ ತಾಯನ್ನು ಅಲಂಕರಿಸುತ್ತಿದ್ದನು. ಚೆನ್ನಾಗಿ ಅಭ್ಯಾಸ ಮಾಡಿದರೆ ವಿದ್ಯೆಯು – ತತ್ತ್ವ ಜ್ಞಾನೇಂದ್ರಿಯ ಜಯಗಳನ್ನು ಹೇಗೋ ಹಾಗೆ, ಯಮಳರಾದ ಲಕ್ಷ್ಮಣ ಶತ್ರುಘ್ನರೆಂಬ ಸುತರನ್ನು ಸುಮಿತ್ರೆಯು ಪಡೆದಳು.

ಆಗ – ಲೋಕವೆಲ್ಲವೂ – ದುರ್ಭಿಕ್ಷ ಮೊದಲಾದ ಯಾವುದೊಂದು ದೋಷವೂ ಇಲ್ಲದೆ, ಆರೋಗ್ಯವೇ ಮುಂತಾದ ಸುಗುಣಗಳಿಂದ ತುಂಬಿದುದಾಯಿತು. ಇದರಿಂದ ಭೂಲೋಕದಲ್ಲಿ ಅವತರಿಸಿದ ಪುರುಷೋತ್ತಮನನ್ನು, ನಿರ್ದೋಷವೂ, ಗುಣವುಳ್ಳುದೂ ಆಗಿರುವ ಸ್ವರ್ಗವೂ ಹಿಂಬಾಲಿಸಿ ಬಂದಂತಿದ್ದಿತು. ಸಿರಿಹರಿಯು – ರಾಮನೇ ಮೊದಲಾದ ನಾಲ್ಕು ಬಗೆಯ ರೂಪದಿಂದ ಭೂಮಿಯಲ್ಲಿ ಅವತರಿಸಿದನು. ಪೌಲಸ್ತ್ಯನಿಂದ ವ್ಯಥೆಪಡುತ್ತಲಿದ್ದ ನಮ್ಮ ನಾಥರಿಗೆ ಗತಿಯು ದೊರೆಯಿತು ಎಂಬ ಹರ್ಷದಿಂದ ಪೂರ್ವವೇ ಮುಂತಾದ ನಾಲ್ಕು ಮಂದಿ ದಿಗ್ವನಿತೆಯರೂ ನಿರ್ಮಲವಾದ ಮತ್ತು ಶಾಂತವಾದ ಉಸಿರನ್ನು ಬಿಡುತ್ತಲಿರುವರೆಂಬಂತೆ ಎಲ್ಲೆಲ್ಲಿಯೂ ಧೂಳಿಯಿಲ್ಲದ ಮಂದಮಾರುತವು ಬೀಸುತ್ತಲಿದ್ದಿತು. ಹೊಗೆಯಿಲ್ಲದೆ ಅಗ್ನಿಯು

ಪ್ರಜ್ವಲಿಸುತ್ತಲಿದ್ದುದರಿಂದಲೂ, ಮಾಲಿನ್ಯವಿಲ್ಲದೆ ರವಿಯು ಬೆಳಗುತ್ತಲಿದ್ದುದರಿಂದಲೂ, ರಾವಣನಿಂದ ನೊಂದ ಅಗ್ನಿ, ಸೂರ್ಯ ರೀರ್ವರೂ – ರಾಮಾವತಾರದಲ್ಲಿ ದುಃಖವನ್ನು ತೊರೆದು ಹರ್ಷಗೊಂಡಿರುವಂತೆ ಕಂಗೊಳಿಸುತ್ತಲಿದ್ದರು. ಆ ರಾಮಜನ್ಮ ಕ್ಷಣದಲ್ಲಿ – ರಾವಣ ರಾಜ್ಯಲಕ್ಷ್ಮಿಯ ನೇತ್ರಗಳಿಂದ ಕಣ್ಣೀರಿನ ಹನಿಗಳು – ದಶಕಂಧರನ ಕಿರೀಟಗಳಿಂದ ಮಣಿಗಳು ನೆಪದಿಂದ ನೆಲಕ್ಕೆ ಉರುಳುತ್ತಲಿದ್ದುವು. ಪುತ್ರವಂತನಾದ ದಶರಥನ ರಾಜಧಾನಿಯಲ್ಲಿ ರಾಜಪುತ್ರೋತ್ಸವ ನಿಮಿತ್ತದಿಂದ ನುಡಿಸಬೇಕಾದ ವಾದ್ಯಗಳ ಧ್ವನಿಗಳಿಗಿಂತ ಮೊದಲು, ಸ್ವರ್ಗಲೋಕದಲ್ಲಿ ದೇವದುಂದುಭಿಗಳು ದನಿಗೆಯ್ಯಲಾರಂಭಿಸಿದವು. ಮತ್ತು – ರಾಜಭವನದಲ್ಲಿ ಮುಗಿಲಿನಿಂದ ಕಲ್ಪತರುಕುಸುಮಗಳ ಮಳೆಯು ಕರೆಯಿತು. ಈ ಪುಷ್ಪವೃಷ್ಟಿಯೇ – ಪುತ್ರಜನ್ಮೋತ್ಸವದಲ್ಲಿ ದಶರಥನು ಅವಶ್ಯಕವಾಗಿ ಮಾಡಬೇಕಾದ ಮಂಗಳೋಪಚಾರಗಳಲ್ಲಿ ಮೊದಲನೆಯ ರಚನೆಯೆನಿಸಿದ್ದುದು.

ಬಳಿಕ ರಾಮಾದಿ ಕುಮಾರರು – ಜಾತಕರ್ಮವೇ ಮೊದಲಾದ ಸಂಸ್ಕಾರಗಳನ್ನು ಪಡೆದು, ದಾದಿಯರ ಸ್ತನ್ಯವನ್ನು ಪಾನಮಾಡುತ್ತಾ, ತಮಗಿಂತ ಮೊದಲು ಜನಿಸಿ, ಹಿರಿಯವನಂತಿರುವ ತಂದೆಯ ಆನಂದದೊಡನೆ ಸಮವಾಗಿ ಬೆಳವಳಿಗೆಯನ್ನು ಹೊಂದುತ್ತ ಬಂದರು. ಆ ಮಕ್ಕಳ ಸಹಜವಾದ ವಿನಯವು – ಯೋಗ್ಯವಾದ ಶಿಕ್ಷೆಯಿಂದ, ಅಗ್ನಿಯು ಸ್ವಾಭಾವಿಕವಾದ ತೇಜಸ್ಸು – ಆಜ್ಯವೇ ಮೊದಲಾದ ಹವಿಸ್ಸಿನಿಂದ ಹೇಗೋ ಹಾಗೆ, ದಿನದಿನಕ್ಕೂ ಹೆಚ್ಚಾಗುತ್ತಾ ಬಂದಿತು. ಅನ್ಯೋನ್ಯ ವಿರೋಧವಿಲ್ಲದೆ ಸೌಭ್ರಾತ್ರದಿಂದೊಡಗೂಡಿರುವ ಆ ಕುಮಾರರು – ವಸಂತವೇ ಮೊದಲಾದ ಋತುಗಳು – ಅಮರರ ನಂದನೋದ್ಯಾನವನ್ನು ಹೇಗೋ ಹಾಗೆ, ರಘುಕುಲವನ್ನು ವಿಶೇಷವಾಗಿ ಪ್ರಕಾಶಗೊಳಿಸಿದರು. ಸೌಭ್ರಾತ್ರದಿಂದೊಡಗೂಡಿರುವ ಕುಮಾರರೇ ಕುಲಭೂಷಣರೆನಿಸುವರು. ಆ ಸೋದರರ ಒಳ್ಳೆಯ ಗೆಳೆತನವು ಸಮಾನವಾಗಿದ್ದರೂ, ರಾಮಲಕ್ಷ್ಮಣರು ಹೇಗೋ ಹಾಗೆ, ಭರತಶತ್ರುಘ್ನರೂ ಎಡೆಬಿಡದೆ ಒಡನಾಡಿಗಳಾಗಿರುತ್ತಿದ್ದರು. ಆ ನಾಲ್ವರೊಳಗೆ – ರಾಮಲಕ್ಷ್ಮಣರಿಗೂ, ಹಾಗೆಯೇ ಭರತ ಶತ್ರುಘ್ನರಿಗೂ ವಾಯುವಹ್ನಿಗಳ ಹಾಗೂ, ಚಂದ್ರಸಮುದ್ರಗಳ ಹಾಗೂ ಊಡಾಗುವುದು, ಹಿಗ್ಗುವುದು, ತಗ್ಗುವುದು, ಈ ಮೊದಲಾದವುಗಳಲ್ಲಿ ಒಗ್ಗಟ್ಟು ಎಂದೂ ಬಿಡಿಯಾಗುತ್ತಲಿರಲಿಲ್ಲ. ತರುವಾಯ ಆ ದೊರೆಮಕ್ಕಳು – ರಾಜತೇಜಸ್ಸಿನಿಂದಲೂ ವಿನಯದಿಂದಲೂ, ಬೇಸಗೆಯ ಕಡೆಯಲ್ಲಿ – ಮೋಡಗಳನ್ನೊಳಗೊಂಡು, ಅತಿ ಶೀತೋಷ್ಣಗಳೆನಿಸದ ದಿವಸಗಳಂತೆ ಪ್ರಜೆಗಳ ಮನಗಳನ್ನು ಸೆಳೆಯುತ್ತ ಬಂದರು. ನಾಲ್ಕುಬಗೆಯಾಗಿ ನೆಲೆಗೊಂಡಿರುವ ದಶರಥನ ಸಂತಾನವು – ನಾಲ್ಕು ಅಂಗಗಳನ್ನೊಳಗೊಂಡಿರುವ ಧರ್ಮಾರ್ಥಕಾಮಮೋಕ್ಷಗಳಂತೆ

ರಾರಾಜಿಸುತ್ತಲಿದ್ದಿತು. ನಾಲ್ಕು ದಿಗಂತಗಳಿಗೂ ಪ್ರಭುವಾಗಿರುವ ದಶರಥ ಚಕ್ರವರ್ತಿಯನ್ನು ರತ್ನಗಳಿಂದ ರತ್ನಾಕರಗಳು ಹೇಗೋ ಹಾಗೆ, ಪಿತೃಭಕ್ತರಾದ ಆ ನಾಲ್ವರು ಕುಮಾರರರೂ – ವಿನಯಾದಿ ಸುಗುಣಗಳಿಂದ, ತಂದೆಯನ್ನು ಆನಂದಗೊಳಿಸುತ್ತಲಿದ್ದರು. ಇಂತು – ದೈತ್ಯರ ಅಸಿಧಾರೆಗಳನ್ನು ಭಂಗಗೊಳಿಸುವ ದಂತಗಳಿಂದೊಡಗೂಡಿದ ಐರಾವತವೆಂಬ ದಿಗ್ಗಜದ ಹಾಗೂ, ಫಲಸಿದ್ಧಿಯಿಂದ ವ್ಯಕ್ತವಾಗುವ ಪ್ರಯೋಗಗಳನ್ನೊಳಗೊಂಡಿರುವ ಸಾಮಾದ್ಯುಪಾಯಗಳಿಂದ ಸಹಿತವಾದ ರಾಜನೀತಿಯ ಹಾಗೂ, ನೊಗದಂತೆ ನೀಳವಾದ ತೋಳುಗಳಿಂದ ಯುಕ್ತನಾದ ಹರಿಯು ಹಾಗೂ, ನರನಾಥ ನಾಥನಾದ ದಶರಥ ಭೂನಾಥನು – ಹರಿಯಂಶಗಳಿಂದ ಅವತರಿಸಿರುವ ನಾಲ್ಕು ಮಂದಿ ಪುತ್ರರಿಂದ ವಿರಾಜಿಸುತ್ತಲಿದ್ದನು.

****

ಹನ್ನೊಂದನೆಯ ಅಧ್ಯಾಯ

ಸೀತಾವಿವಾಹ ವರ್ಣನೆ

ಸೂಚನೆ । **ದಶರಥಸುತನಿಂ ಸವಮಂ ।**
ಕುಶಿಕಸುತಂ ಸುಖದಿನೆಸಗಿ ಮಿಥಿಲೆಗೆ ತೆರಳಲ್ ।
ಶಶಿಧರ ಧನುವಂ ಖಂಡಿಸಿ ।
ದಶರಥಸುತನಾಂತನವನಿಜಾತೆಯ ಕರಮಂ ॥

ರಾಮನು ಇನ್ನೂ ಜುಳುಪೆಯ ಕೂದಲಿನ ಚಿಕ್ಕ ಹುಡುಗನಾಗಿಯೇ ಇದ್ದನು. ಅಷ್ಟರಲ್ಲಿ ಒಂದುವೇಳೆ – ಕುಶಿಕ ರಾಜಕುಲದಲ್ಲಿ ಉದಿಸಿದ ವಿಶ್ವಾಮಿತ್ರನೆಂಬ ಮುನಿಯು–ಕ್ಷಿತೀಶ್ವರನ ಬಳಿಗೆ ಅಭ್ಯಾಗತನಾಗಿ ಬಂದು, ತಾನೊಂದು ಯಾಗವನ್ನು ಮಾಡುತ್ತಿರುವೆನೆಂದೂ, ಅದಕ್ಕೆ ದೈತ್ಯರು ಅಡ್ಡಿಯಾಗಿರುವರೆಂದೂ, ಅವರನ್ನು ಸಂಹರಿಸಿ ವಿಘ್ನವಿಲ್ಲದಂತೆ ಸಹಾಯ ಮಾಡಲು ರಾಮನನ್ನು ಕಳುಹಿಸಬೇಕೆಂದೂ ಭೂಪಾಲನನ್ನು ಬೇಡಿದನು. ಇದು ನ್ಯಾಯವೇ ಸರಿ. ಏಕೆಂದರೆ ಸಿಂಹವು ಶಿಶುವಾಗಿದ್ದರೂ ಮದವೇರಿದಾನೆಯ ಶಿರವನ್ನು ಬಗೆಯಲು ಅಡರುವುದು. ತೇಜಸ್ಸಿನ ಜೊತೆಗೆ ವಯಸ್ಸೂ ಹೆಚ್ಚಿ ಇರಲೇಬೇಕೆಂಬ ನಿಯಮವೇನೂ ಇಲ್ಲ. ಅದರಿಂದಲೇ ತತ್ತ್ವಜ್ಞನಾದ ಮುನಿಯು – ರಾಮನನ್ನು ಕಾಕಪಕ್ಷಧರನಾದ ಬಾಲನೆಂದು ಬಗೆಯಲಿಲ್ಲ. ವಿದ್ವಜ್ಜನರನ್ನು ಸೇವಿಸುವುದರಲ್ಲಿ ವಿಚಕ್ಷಣನಾದ ದೊರೆಯು – ಬಹುಕಾಲಕ್ಕೆ ಕಷ್ಟದಿಂದ ಪಡೆದಿದ್ದರೂ, ಲಕ್ಷ್ಯವಿಡದೆ ಗುರುಸಮ್ಮತಿಯಿಂದ ಲಕ್ಷ್ಮಣನೊಂದಿಗೆ ರಾಮನನ್ನೂ ವಿಶ್ವಾಮಿತ್ರನಿಗೆ ಒಪ್ಪಿಸಿದನು. ಪ್ರಾಣಗಳನ್ನೇ ನೀಡಬೇಕೆಂದು ಬೇಡಿದವರ ಪ್ರಾರ್ಥನೆಯ ರಘುಕುಲದರಸರಲ್ಲಿ ವ್ಯರ್ಥವಾಗಲಿಲ್ಲ. ಹೀಗಿರಲು ದಶರಥನು ಪುತ್ರನನ್ನೊಪ್ಪಿಸಿದುದೇನೂ ವಿಸ್ಮಯಕಾರಿಯಲ್ಲ. ದಶರಥನು – ರಾಮಲಕ್ಷಣರು ಹೊರಡುವಾಗ ಪುರದ ಮಾರ್ಗದಲ್ಲಿ ಅಲಂಕರಿಸಬೇಕೆಂದು ಪರಿಜನರಿಗೆ

ಆಜ್ಞಾಪಿಸಬೇಕೆಂದಿದ್ದನು. ಅಷ್ಟರಲ್ಲಿಯೇ ವಾಯುಸಹಾಯವನ್ನು ಪಡೆದಿರುವ ಮೇಘಗಳಿಂದ ಧೂಳಿಯನ್ನಡಗಿಸುವುದು, ಕುಸುಮಗಳಿಂದ ಸಹಿತವಾದ ಮಳೆಯನ್ನು ಕರೆವುದು, ಮೊದಲಾದ ಮಾರ್ಗಸಂಸ್ಕಾರಗಳನ್ನು ದೇವತೆಗಳು ಮುಂಚಿತವಾಗಿಯೆ ಬೇಗನೆ ಅಣಿಮಾಡಿದರು. ಸ್ವಾರ್ಥಪರರು ಬಲು ಲವಲವಿಕೆಯುಳ್ಳವರಲ್ಲವೆ? ಪಿತ್ರಾಜ್ಞೆಯನ್ನು ಪಾಲಿಸಲು ಉದ್ಯುಕ್ತರಾಗಿ, ಚಾಪಧಾರಿಗಳಾದ ಆ ಸೋದರರು – ತಂದೆಯ ಚರಣಗಳಲ್ಲಿ ಮಣಿದರು. ದೇಶಾಂತರಕ್ಕೆ ತೆರಳಬೇಕೆಂದು ಬಯಸಿ, ಬಾಗಿದ ಕುವರರ ಶಿರಗಳಮೇಲೆ ಭೂಪತಿಯ ಬಾಷ್ಪಬಿಂದುಗಳು ಉದಿರಿದವು. ಆ ಅಣ್ಣ ತಮ್ಮಂದಿರ ಶಿಖಂಡಕಗಳು ತಂದೆಯ ಕಣ್ಣೀರಿನಿಂದ ತುಸ ನೆನೆದುವು. ಧನುರ್ಧರರಾಗಿ ಮುನಿಯನ್ನು ಹಿಂಬಾಲಿಸಿ ನಡೆಯುತ್ತಿದ್ದರು, ದಾರಿಯದ್ದಕ್ಕೂ ಇಕ್ಕೆಲದಲ್ಲಿ ನಿಂತ ಪುರಜನರ ದೃಷ್ಟಿಗಳು ತೋರಣಗಳಂತೆ ಬೆಳಗುತ್ತಲಿದ್ದುವು. ಲಕ್ಷ್ಮಣನಿಂದ ಮಾತ್ರವೇ ಒಡಗೂಡಿರುವ ರಾಮನನ್ನು ಸಂಗಡ ಕರೆದೊಯ್ಯಲು ಮುನಿಯ ಬಯಸಿದುದರಿಂದ ನೃಪತಿಯು ತನ್ನ ಮಕ್ಕಳ ಜತೆಯಲ್ಲಿ ಆಶೀರ್ವಾದವನ್ನು ಮಾತ್ರ ಕಳುಹಿದನಲ್ಲದೆ ಸೇನೆಯನ್ನು ಕಳುಹಲಿಲ್ಲ. ಆತನ ಮಂಗಳಾಶಾಸನವೇ ಅವರನ್ನು ಚೆನ್ನಾಗಿ ರಕ್ಷಿಸುವುದರಲ್ಲಿ ಸರಿಯಾದ ಬೆಂಬಲವಾಗಿದ್ದಿತು. ಮಾತೃವರ್ಗದವರ ಚರಣಗಳಿಗಭಿವಂದಿಸಿ, ಮಹಾತೇಜಸ್ವಿಯಾದ ಮುನಿಯ ಮಾರ್ಗವನ್ನು ಅನುಸರಿಸುತ್ತಲಿರುವ ರಾಮಲಕ್ಷಣರು – ಮಹಾತೇಜಸ್ಸುಳ್ಳ ರವಿಯ ಗಮನವಶದಿಂದ ಮೇಷಾದಿ ಸಂಕ್ರಮಣಗಳನ್ನನುಸರಿಸಿ ಬರುವ ಚೈತ್ರ ವೈಶಾಖ ಮಾಸಗಳಂತೆ ಬೆಳಗುತ್ತಲಿದ್ದರು. ಬಾಲಭಾವದಿಂದ ಅಡಿಗಳನ್ನಿಡುವ ಸಡಗರದಲ್ಲಿ, ಇಕ್ಕೆಲದ ತೋಳುಗಳನ್ನು ಅಲೆಗಳಂತೆ ಅಲುಗಿಸುತ್ತ ಮುಂದುವರಿವ ಅವರ ನಡಿಗೆಯ ಬೆಡಗು ಬಹು ಚಪಲವಾಗಿದ್ದರೂ, ಮುಂಗಾರು ಮಳೆಯಲ್ಲಿ ನೀರನ್ನು ತಳ್ಳುವ, ದಡವನ್ನೊಡೆವ ಉದ್ಧ್ಯಭಿದ್ಯಗಳೆಂಬ ನದಗಳ ಹೆಸರುಗಳ ಹಾಗೆ, ಬಲು ಅಂದವಾಗಿದ್ದಿತು. ಅರಮನೆಯಲ್ಲಿ ಮಣಿಮಯವಾದ ನೆಲದಮೇಲೆ ಸುಖವಾಗಿ ಸಂಚರಿಸುತ್ತಲಿದ್ದ ಆ ಬಾಲಕರಿಗೆ ಕೌಶಿಕನು ಬಲಾತಿಬಲಗಳೆಂಬ ಎರಡು ಮಂತ್ರಗಳನ್ನು ಉಪದೇಶಿಸಿದನು. ಕಲ್ಲುಮುಳ್ಳುಗಳ ದಾರಿಯಲ್ಲಿ ನಡೆಯುತ್ತಲಿದ್ದರೂ, ಬಿಸಿಲಿನ ಬೇಗೆಗೆ ನಿಲುಕಿದ್ದರೂ, ಹೊತ್ತಿಗೆ ಸರಿಯಾಗಿ ಉಚಿತವಾದ ಆಹಾರವಿಲ್ಲದಿದ್ದರೂ ಆ ಮಂತ್ರಗಳ ಮಹಿಮೆಯಿಂದ ತಾಯಿಯ ಹತ್ತಿರದಲ್ಲಿರುವ ಹಸುಳೆಗಳಂತೆ, ಆ ತರಳರು ಬಳಲಲೇ ಇಲ್ಲ. ಇದಲ್ಲದೆ–ಬಹು ಹಳಬನೂ, ಪೂರ್ವಚರಿತ್ರೆಯನ್ನೆಲ್ಲ ಬಲ್ಲವನೂ, ತನ್ನ ತಂದೆಯ ಮಿತ್ರನೂ ಆಗಿರುವ ಆ ಮುನಿಯು ಹೇಳುವ ಹಳೆಯ ಕಥೆಗಳನ್ನು ಕೇಳುತ್ತ ಬಂದುದರಿಂದ, ಸೌಮಿತ್ರಿಸಹಿತನಾದ ರಾಘವನು – ಆನೆ ಕುದುರೆಗಳಮೇಲೆ ಕುಳಿತು ಪ್ರಯಾಣ ಮಾಡಿದವನಂತೆ ಕಾಲ್ನಡೆಯಿಂದ

ಬಂದ ದಾರಿಯನ್ನು ಅರಿಯಲೇ ಇಲ್ಲ. ಮಧುರಜಲಗಳಿಂದ ಕೊಳಗಳೂ, ಕೇಳಲಿಂಪಾದ ದನಿಗಳಿಂದ ಹಕ್ಕಿಗಳೂ, ಗಮಗಮಿಸುವ ಹೂವಿನರಜಗಳಿಂದ ಗಾಳಿಗಳೂ, ಬಿಸಿಲಿನ ಜಳವಿಲ್ಲದಂತೆ ಜಲದಗಳೂ ಸಾನುಜನಾದ ದಾಶರಥಿಯನ್ನು ದಾರಿಯಲ್ಲಿ ಸೇವಿಸುತ್ತಲಿದ್ದುವು. ಮಾರ್ಗದೊಳಗೆ ಪುಣ್ಯಾಶ್ರಮಗಳಲ್ಲಿ ವಾಸಮಾಡುತ್ತಲಿದ್ದ ತಪಸ್ವಿಗಳು – ಅರಳಿದ ತಾವರೆಗಳಿಂದ ಕಂಗೊಳಿಸುವ ಸರೋವರಗಳನ್ನು ನೋಡುವುದಕ್ಕಿಂತಲೂ, ಬಳಲಿಕೆಯನ್ನು ಪರಿಹರಿಸುವ ಹಣ್ಣಿನ ಮರಗಳನ್ನು ಅವಲೋಕಿಸುವುದಕಿಂತಲೂ ಮಿಗಿಲೆನಿಸಿದ, ಆ ಬಾಲಕರ ಬಹು ಹಿತವಾದ ದರ್ಶನದಿಂದ ಆನಂದಿಸುತ್ತಲಿದ್ದರು. ಅಲ್ಲಿಂದ ಮುಂದೆ –ಉರಿಗಣ್ಣಿನಿಂದ ಬೆಂದುಹೋದ ಕಂದರ್ಪನ ತಪೋವನಕ್ಕೈತಂದು, ಬಿಲ್ಲನ್ನು ಹಿಡಿದಿರುವ ರಾಮನು– ಮೆಯ್ಯಸೊಬಗಿನಿಂದ ಮಾತ್ರವೇ ಎರಡನೆಯ ಮದನನಂತೆ ಬೆಳಗುತ್ತಲಿದ್ದನು. ಆಗಲಲ್ಲಿ – ಹಿಂದೆ ಅಗಸ್ತ್ಯ ಮುನಿಯು – ಸುಕೇತುವೆಂಬ ಯಕ್ಷನ ಮಗಳಾದ ತಾಟಕೆಯ ಕೆಟ್ಟ ನಡತೆಯನ್ನು ಕಂಡು "ನಿನಗೆ ಈ ಅಂದವಾದ ರೂಪವು ತೊಲಗಲಿ, ಘೋರವಾದ ವಿಕಾರ ರೂಪವನ್ನು ತಾಳಿ, ಮಾನುಷ ಮಾಂಸಾಹಾರಿಯಾಗಿ ಸಂಚರಿಸು" ಎಂದು ಅವಳನ್ನು ಶಪಿಸಿದನು. ಅವಳೀವನವನ್ನೆಲ್ಲ ಹಾಳುಮಾಡುತ್ತಲಿದಾಳೆ ಎಂದು ಮುನಿಯಿಂದ ಸುಕೇತು ಪುತ್ರಿಯ ಪೂರ್ವವೃತ್ತಾಂತವನ್ನು ಕೇಳಿದ ಬಳಿಕ, ಆ ತರುಣರೀರ್ವರೂ – ಬಿಲ್ಲಿನ ತುದಿಗಳನ್ನು ನೆಲದಮೇಲಿಟ್ಟು ಮೋಡಿಯಿಂದ ಹೆದೆಯನ್ನೇರಿಸಿ ಟಂಕಾರಗೈದರು. ಮೌರ್ವಿಯ ಶಬ್ದವು ಕೇಳಬಂದಿತು. ಕೂಡಲೆ ಕೃಷ್ಣಪಕ್ಷದ ರಾತ್ರಿಯಂತೆ ಕಾಣಬರುವ ತಾಟಕೆಯು ಚಲಿಸುತ್ತಲಿರುವ ಕಪೋಲಕುಂಡಲಗಳುಳ್ಳವಳಾಗಿ, ಆ ರಾಮಲಕ್ಷ್ಮಣರ ಇದಿರಿಗೆ ಬಂದು ನಿಂತಳು.

ಒತ್ತಾದ ಕೊಕ್ಕರೆಗಳ ಸಾಲುಗಳನ್ನೊಳಗೊಂಡಿರುವ ಮೋಡಗಳ ಸಾಲಿನಂತೆ ಕಾಣಬರುತ್ತಿದ್ದಳು. ಅವಳು ಬರುವ ತೀವ್ರವಾದ ವೇಗದಲ್ಲಿ ಮರಗಳು ಬುಡದಿಂದ ತುದಿಯವರೆಗೂ ಚಲಿಸುತ್ತಲಿದ್ದುವು. ಹೆಣಗಳ ಮೇಲಣ ಬಟ್ಟೆಗಳನ್ನು ಅಳವಟ್ಟಿದ್ದಳು. ಸಿಂಹ ಗರ್ಜನೆಯಿಂದ ಬಹುಕ್ರೂರಳಾಗಿದ್ದಳು, ಸುಡುಗಾಡಿನಲ್ಲಿ ಬೀಸುವ ಬಿಸಿಗಾಳಿಯಿಂದ ಹೇಗೋ ಹಾಗೆ, ರಾಮನಾರಕ್ಕಸಿಯಿಂದ ತುಸ ಹಿಮ್ಮೆಟ್ಟಿದನು. ಬಾಹುದಂಡವನ್ನೆತ್ತಿ ಅಬ್ಬರದಿಂದ ತಾಟಕೆಯು ಹತ್ತಿರಕ್ಕೆ ಬಂದಳು, ಅವಳ ಟೊಂಕದಲ್ಲಿ ಸುತ್ತಿರುವ ಮನುಷ್ಯರ ಕರುಳುಗಳು ಜೋಲಾಡುತ್ತಲಿದ್ದುವು. ರಾಮನವಳನ್ನು ಕಂಡನು. "ಕೊಲ್ಲಲಿಕ್ಕೆ ಬಂದವರನ್ನು ಕೊಲ್ಲಲೇಬೇಕು, ಅಂತಹ ಆತತಾಯಿಯನ್ನು ಕೊಲ್ಲುವವನಿಗೆ ದೋಷವಿಲ್ಲ" ಎಂಬ ಮನುವಚನವನ್ನು ಬಲ್ಲನು, ಅದರಿಂದಲೇ ಹೆಂಗಸರನ್ನು ಕೊಲ್ಲಬೇಕೆಂಬ ಜುಗುಪ್ಸೆಯನ್ನೂ, ಕರುಣೆಯನ್ನೂ ಶರದೊಂದಿಗೆ ಬಿಟ್ಟನು.

ರಾಮಸಾಯಕವು – ಕಲ್ಲಿನಂತೆ ಘನವಾಗಿದ್ದ ರಕ್ಕಸಿಯ ಎದೆಯಲ್ಲಿ ಬಿಲವನ್ನು ಮಾಡಿಕೊಂಡು ಹೊರಟೇಹೋಯಿತು. ಅದುವರೆಗೂ ರಕ್ಕಸರ ಪಡೆಯ ದೇಶದೊಳಕ್ಕೆ ಹೋಗದಿದ್ದ ಮೃತ್ಯುವಿಗೆ ಆ ಬಿಲವೇ ದ್ವಾರವಾಯಿತು. ಬಾಣದ ಪೆಟ್ಟಿನಿಂದ ಎದೆಯೊಡೆದು ಕೆಳಗೆ ಬಿದ್ದ ರಕ್ಕಸಿಯು – ನೆಲವನ್ನು ಮಾತ್ರವೇ ನಡುಗಿಸಲಿಲ್ಲ, ಮೂಲೋಕವನ್ನೂ ಗೆದ್ದು, ಚಲಿಸದೆ ನೆಲೆಗೊಂಡಿದ್ದ ರಾವಣ ರಾಜ್ಯಲಕ್ಷ್ಮಿಯನ್ನೂ ಕಂಪಿಸುವಂತೆಸಗಿದಳು. ರಾಮನೆಂಬ ಮನ್ಮಥನ ಅಂಬಿನ ಪೆಟ್ಟು ನಿಶಾಚರಿಯ ಎದೆಗೆ ಬಡಿಯಿತು. ತಾಳಲಾರದೆ ಹೋದಳು. ವಾಸನೆಯುಳ್ಳ ರಕ್ತಚಂದನದ ಲೇಪನವನ್ನು ಪಡೆದಳು. ಜೀವಿತೇಶನ ವಸತಿಯನ್ನು ಕುರಿತು ತೆರಳಿದಳು. ಬಳಿಕ ತನ್ನ ಪರಾಕ್ರಮದಿಂದ ಸಂತುಷ್ಟನಾದ ಮುನಿಯಿಂದ ತಾಟಕಾರಿಯು–ಭಾಸ್ಕರನಿಂದ ಕಾಷ್ಠವನ್ನು ಸುಡುವ ತೇಜವನ್ನು ಸೂರ್ಯಕಾಂತ ಶಿಲೆಯ ಹಾಗೆ, ದೈತ್ಯರನ್ನು ಧ್ವಂಸಮಾಡುವ ಅಸ್ತ್ರವಿದ್ಯೆಯನ್ನು ಮಂತ್ರಸಹಿತವಾಗಿ ಕಲಿತನು. ಅಲ್ಲಿಂದ ಮುಂದೆ–ತಪಸ್ವಿಯಿಂದ ಅಲ್ಲಲ್ಲಿನ ಕಥೆಗಳನ್ನು ಕೇಳುತ್ತಾ, ಪಾವನವೆನಿಸಿದ ವಾಮನಾಶ್ರಮ ಪದವನ್ನು ಹೊಕ್ಕನು. ಆಗ ರಾಘವನು – ತನ್ನ ಪೂರ್ವಾವತಾರದ ನಡತೆಗಳನ್ನೆಲ್ಲ ನೆನೆಯಲಾರದೆ ಹೋದರೂ, ಮನದೊಳೊಂದುಬಗೆಯ ತವಕವನ್ನು ಹೊಂದಿದನು.

ತರುವಾಯ ಮುನಿಯ ತಪೋವನವು ಕಾಣಬಂದಿತು. ಶಿಷ್ಯವರ್ಗದವರು ಅತಿಥಿಗಳ ಸತ್ಕಾರಕ್ಕೆ ತಕ್ಕ ಸಾಮಗ್ರಿಗಳನ್ನು ಅಣಿಮಾಡುತಿದ್ದರು. ತರುಗಳೆಲ್ಲ ತಳಿರುಗಳೆಂಬ ಅಂಜಲಿಗಳನ್ನುಳ್ಳವಾಗಿದ್ದುವು. ಮೃಗಗಳೆಲ್ಲ ನಿರ್ಭಯಗಳಾಗಿ ತಲೆಯನ್ನೆತ್ತಿ ಮುನಿಯ ಆಗಮನವನ್ನು ನಿರುಕಿಸುತ್ತಲಿದ್ದುವು. ಇಂತಹ ಪುಣ್ಯಾಶ್ರಮವನ್ನು ಎಲ್ಲರೂ ಹೊಕ್ಕರು. ತಪೋನಿಧಿಯು ಯಜ್ಞದೀಕ್ಷೆಯನ್ನು ಕೈಗೊಂಡನು. ದಶರಥಾತ್ಮಜರು – ಯಾಗವನ್ನು ಯಾವುದೊಂದು ಅಡ್ಡಿವಿಡ್ಡೂರಕ್ಕೂ ಎಡೆಯಾಗದಂತೆ ಶರಗಳಿಂದ ರಕ್ಷಿಸತೊಡಗಿದರು. ಕಗ್ಗತ್ತಲಿನ ಕೋಟಲೆಗೀಡಾಗದಂತೆ ಕಿರಣಗಳಿಂದ ರಕ್ಷಿಸಲು ಕ್ರಮವಾಗಿ ಉದಿಸುವ ಸೂರ್ಯಚಂದ್ರರಂತೆ ಕಂಗೊಳಿಸುತ್ತಲಿದ್ದರು. ಬಂಧೂಕ ಕುಸುಮಗಳಂತೆ ತೋರವಾದ ಕೆನ್ನೀರಿನ ಹನಿಗಳಿಂದ ಯಜ್ಞವೇದಿಯು ನೆನೆಯುತ್ತ ಬಂದಿತು. ಋತ್ವಿಕ್ಕುಗಳು ಕಂಡರು, ಅಂಜಿದರು, ನಡೆಸುತ್ತಲಿದ್ದ ಕರ್ಮಗಳನ್ನು ಕೈಬಿಟ್ಟರು, ಕೈಗಳಲ್ಲಿದ್ದ ಸ್ರುಕ್ಸ್ರುವಗಳೆಂಬ ಪಾತ್ರಗಳು ಸಡಲಿ ಕೆಳಗೆಬಿದ್ದುವು. ಇನ್ನೇನು ಯಜ್ಞವಿಧಿಯು ಕೊನೆಗಾಣುವ ಸಮಯವು ಬಂದಿತು, ಲಕ್ಷ್ಮಣಾಗ್ರಜನು – ತತ್‌ಕ್ಷಣದಲ್ಲಿ ಬತ್ತಳಿಕೆಯ ಮುಖದಿಂದ ಬಾಣವನ್ನು ಹಿರಿಯುತ್ತ ಮೇಲ್ಮುಖನಾಗಿ ನೋಡಿದನು. ರಕ್ಕಸರ ಪಡೆಯನ್ನು ಆಗಸದಲ್ಲಿ ಕಂಡನು. ಹದ್ದುಗಳ ಹಿಂಡು ಧ್ವಜಪಟಗಳ ಮೇಲೆ ದಟ್ಟವಾಗಿ ಹಾರಾಡುತ್ತಲಿದ್ದಿತು.

ರಾಮನಾಗಲೆ ಬಾಣವನ್ನು ತೊಟ್ಟನು, ಯಾಗವನ್ನು ದ್ವೇಷಿಸುವ ಆ ರಾಕ್ಷಸರೊಳಗೆ ಮುಂದಾಳುಗಳಾಗಿರುವ ಮಾರೀಚ ಸುಬಾಹುಗಳೆಂಬಿಬ್ಬರನ್ನು ಮಾತ್ರವೇ ಗುರಿಯಿಟ್ಟನು. ಮಹಾಸರ್ಪವನ್ನು ಹಿಡಿದಪ್ಪಳಿಸಿ, ವಿಕ್ರಮವನ್ನು ತೋರುವ ಗರುಡನು– ನೀರು ಹಾವುಗಳಲ್ಲಿ ಪ್ರವರ್ತಿಸುವುದುಂಟೆ? ಅಸ್ತ್ರವಿದ್ಯಾಪಾರಂಗತನಾದ ರಾಮನು – ಅಂಬಿನಲ್ಲಿ ತೀವ್ರವಾದ ವಾಯುದೇವತೆಯನ್ನು ಅಭಿಮಂತ್ರಿಸಿ ಇಟ್ಟನು. ದೊಡ್ಡಬೆಟ್ಟದಂತೆ ಬಲುತೋರವಾಗಿಯೂ ಭಾರವಾಗಿಯೂ ಇರುವ ಆ ರಕ್ಕಸರನ್ನು ಬಿರುಗಾಳಿಯು ಹಣ್ಣೆಲೆಯನ್ನು ಹೇಗೋಹಾಗೆ, ನಿಮಿಷಮಾತ್ರದಲ್ಲಿ ಹಾರಿಸಿದನು. ಆ ಮಾರೀಚನ ಸಂಗಡ ಮಾಯೆಯಿಂದ ಅಲ್ಲಲ್ಲಿ ಓಡಾಡುತ್ತಲಿದ್ದ ಸುಬಾಹುವೆಂಬ ಅಸುರನನ್ನು ಕಂಡನು. ಕುಶಲನಾದ ಕಾಕುತ್ಸ್ಥನು ಕಣೆಗಳಿಂದ ಆ ರಕ್ಕಸನನ್ನು ತುಂಡುತುಂಡಾಗಿ ಕತ್ತರಿಸಿ, ಆಶ್ರಮದ ಹೊರಗಿರುವ ಹಕ್ಕಿಗಳಿಗೆ ಹಂಚಿಕೊಟ್ಟನು.

ಬಳಿಕ ಯಾಜ್ಞಿಕರು – ಸಂಯುಗದಲ್ಲಿನ ರಾಘವರ ವಿಕ್ರಮವನ್ನು ಕೊಂಡಾಡಿದರು. ಯಜ್ಞವಿಘ್ನವು ತೊಲಗಲು ಹರ್ಷಿತರಾದರು. ಮೌನದಿಂದಿರುವ ಕುಲಪತಿಯಾದ ಮುನಿಯ ಅಧ್ವರಕ್ರಿಯೆಗಳನ್ನು ಕ್ರಮವಾಗಿ ನೆರವೇರಿಸಿದರು. ದೀಕ್ಷೆಯು ನಿರಂತರಾಯವಾಗಿ ಈಡೇರಿ, ಅವಭೃಥಸ್ನಾನವನ್ನು ಮಾಡಿದ ಕೂಡಲೆ, ಚಲಿಸುತ್ತಲಿರುವ ಕಾಕಪಕ್ಷಗಳನ್ನೊಳಗೊಂಡಿರುವ ಶಿರಗಳಿಂದ ಬಾಗಿದ ರಾಮಲಕ್ಷ್ಮಣರನ್ನು ಮುನಿಯು ಹರ್ಷದಿಂದ ಹರಸುತ್ತ, ದರ್ಭೆಯನ್ನು ಹಿಡಿದು ಗಾಯವಾಗಿದ್ದ ಕರತಲದಿಂದ ತಡವಿದನು.

ಅದುವರೆಗೆ ಮಿಥಿಲಾನಗರದಲ್ಲಿ ಜನಕಮಹಾರಾಜನು – ಕ್ರತುವನ್ನಾಚರಿಸಬೇಕೆಂದು ಸಂಭಾರವನ್ನೆಲ್ಲ ಸಿದ್ಧಪಡಿಸಿಕೊಂಡಿದ್ದನು, ವಿಶ್ವಾಮಿತ್ರನಿಗೆ ಕರೆಯನ್ನು ಕಳುಹಿದನು. ರಾಮಲಕ್ಷ್ಮಣರು ಮಿಥಿಲಾಧಿಪನ ಬಳಿಯಲ್ಲಿ ಬಲವಾದ ಬಿಲ್ಲೊಂದಿರುವುದೆಂದು ಕರ್ಣಾಕರ್ಣಿಕೆಯಿಂದ ಕೇಳಿದ್ದರು. ಅವರ ಮನದ ಬಯಕೆಯನ್ನು ತೀರಿಸಲು ತಪಸ್ವಿಯು ಸಂಗಡಲೇ ಅವರನ್ನೂ ಕರೆದುಕೊಂಡು ಹೊರಟನು.

ಪಯಣದಮೇಲೆ ಪಯಣವನ್ನು ಬೆಳಸುತ್ತ ದಾರಿಯನ್ನು ನಡೆದು, ಒಂದು ರಾತ್ರಿ ಒಂದಾನೊಂದು ರಮ್ಯವಾದ ತರುಮೂಲದಲ್ಲಿ ಟಂಕಿಯನ್ನು ಮಾಡಿದರು. ದೀರ್ಘತಪನಾದ ಗೌತಮಮುನಿಯ ಕಳತ್ರವು ಇಂದ್ರನಿಗೆ ಕ್ಷಣಕಾಲಮಾತ್ರ ಕಳತ್ರವೆನಿಸಿ, ಪತಿಯ ಸಿಟ್ಟಿನ ಬಿರುನುಡಿಯಿಂದ ಶಿಲೆಯಾಗಿ, ಅದೃಶ್ಯವೆನಿಸಿ ಬಿದ್ದಿದ್ದುದು ಅಲ್ಲಿಯೆ. ಬಹುಕಾಲಕ್ಕೆ ಶಿಲಾಮಯವಾಗಿದ್ದ ತನ್ನ ರೂಪವನ್ನು ತೊರೆದು, ಅಂದವಾದ ಪೂರ್ವರೂಪವನ್ನು ಮುನಿವಧುವು ಪಡೆದುದು, ಪಾಪಪರಿಹಾರಕವಾದ ರಾಮಪದರಜದ ಅನುಗ್ರಹವೇ ಆಗಿತ್ತು.

ಅರ್ಥಕಾಮಗಳೊಡನೆ ದೇಹವನ್ನಾಂತ ಧರ್ಮವೆಂಬಂತೆ, ರಾಘವರಿಂದ ಸಹಿತನಾಗಿ ಮುನಿಯು ಬಂದಿರುವ ಸುದ್ದಿಯನ್ನು ಕೇಳಿ, ಜನಕ ಜನೇಶ್ವರನು – ಉಚಿತಸತ್ಕಾರದಿಂದ ಇದಿರ್ಗೊಂಡನು. ಬಾಂದಳದಿಂದ ಇಳೆಗೈತಂದ ಪುನರ್ವಸು ನಕ್ಷತ್ರಗಳಂತೆ ಕಂಗೊಳಿಸುವ ಗುಣಾಭಿರಾಮರಾದ ರಾಮಲಕ್ಷ್ಮಣರನ್ನು ಅತ್ಯಾದರಗೊಂಡು, ದೃಷ್ಟಿಗಳಿಂದ ಪಾನಮಾಡುತ್ತಲಿರುವ ಮಿಥಿಲಾನಗರ ನಿವಾಸಿಗಳ ಮನವು – ರೆಪ್ಪೆಗಳನ್ನು, ನೋಟಕ್ಕೆ ಅಡ್ಡಿಮಾಡುವ ವಂಚಕಗಳನ್ನಾಗಿ ತಿಳಿಯುತ್ತಲಿದ್ದಿತು,

ಕ್ರತುಕ್ರಿಯಾವಿಧಿಯು ಕ್ರಮವಾಗಿ ಪೂರಯಿಸಿತು, ಕುಶಿಕ ವಂಶಪ್ರದೀಪನಾದ ಮುನಿಯು ಕಾಲವಿದನಾದುದರಿಂದ, ಬಾಣಾಸನವನ್ನು ನೋಡಬೇಕೆಂದು ರಾಮನು ಕುತೂಹಲಪಡುತ್ತಲಿರುವುದನ್ನು ಮೈಥಿಲನಿಗರುಹಿದನು. ವೈದೇಹನಾದರೆ ಲೋಕಪ್ರಸಿದ್ಧವಾದ ರವಿವಂಶದಲ್ಲಿ ರಾಘವನ ಉತ್ಪತ್ತಿಯೆಂಬುದನ್ನು ಕೇಳಿದನು, ಬಲುಕೋಮಲವಾದ ರಾಮನಾಕಾರವನ್ನು ಕಣ್ಣಾರೆ ನೋಡಿದನು. ಹಸುಳೆಗಳಿಂದ ಹಿಡಿದೆತ್ತಿ ಬಾಗಿಸಲಳವಲ್ಲದ ತನ್ನ ಬಿಲ್ಲನ್ನು ನೆನೆದನು, ವರನು ಮಗಳಿಗೆ ಕೊಡಬೇಕಾಗಿರುವ ಧನುರ್ಭಂಗ ರೂಪವಾದ ಆ ಮೂಲ್ಯವನ್ನು ದುರ್ಘಟವಾದುದನ್ನಾಗಿ ಭಾವಿಸಿದನು. ಪ್ರತಿಜ್ಞೆಯು ಪ್ರಬಲವಾದುದೆಂದು ಚಿಂತಿಸಿದನು, ಸಲುವಳಿಯಾದ ಸಂಬಂಧವು ಸಮನಿಸದೆ ಹೋಗುವುದೆಂಬ ಸಂಕಟದಿಂದ ಕಳವಳಿಸಿದನು. ವಿಶ್ವಾಮಿತ್ರನನ್ನು ಕುರಿತು ಇಂತೆಂದನು –

ಎಲೈ ಮುನಿವರನೇ! ಪ್ರಬಲವಾದ ಮದದಾನೆಗಳಿಂದಲೂ ಮಾಡಿ ಮುಗಿಸಲಳವಲ್ಲದ ಮಹಾಕಾರ್ಯವನ್ನು ಮಾಡಲೆಳಸುವ ಎಳೆಯ ಆನೆಯ ಮರಿಯ ಉದ್ಯೋಗವನ್ನು ನಾನು ಸಹಿಸಲಾರೆನು. ಏಕೆ ಎಂಬೆಯೋ? ನಾನು ಏನ ಹೇಳಲಿ! ಬಿಲ್ಲಾಳುಗಳೊಳಗೆ ಬಲು ಗಟ್ಟಿಗರೆನಿಸಿದ ಬಹುಮಂದಿ ವೀರಭೂಪಾಲರು – ಈ ಬಿಲ್ಲನ್ನೆತ್ತಿ ಬಾಗಿಸಲಾರದೆ ನಾಚಿಕೆಗೊಂಡರು. ಮತ್ತು – ಅನೇಕವೇಳೆ ಶರಾಸನಗಳಲ್ಲಿ ಹೆದೆಯನ್ನೇರಿಸಿದ ಅಭ್ಯಾಸದಿಂದ ಜಡ್ಡುಗಟ್ಟಿರುವ ಹೇರಳವಾದ ತಮ್ಮ ತೋಳುಬಲವನ್ನು ಛೇ ಎಂದು ಬಲವಾಗಿ ಹೀಯಾಳಿಸಿಕೊಂಡು ಹೊರಟುಹೋಗಿದ್ದಾರೆ– ಎಂದನು.

ಮುನಿಯು ಮಹಾರಾಜನಿಗಿಂತು ಮಾರುತ್ತರವನ್ನಿತ್ತನು– ಎಲೈ ಅರಸೇ! ರಾಮನ ಬಾಹುಬಲದ ಪರಿಯನ್ನು ಲಾಲಿಸು, ಅಥವಾ ಬರಿಯ ಮಾತನಾಡಿ ಫಲವೇನು? ಗಿರಿಯಲ್ಲೆರಗಿದ ಸಿಡಿಲಿನಂತೆ, ಬಿಲ್ಲನ್ನು ಮುರಿದ ಬಳಿಕ ರಾಮನ ಶಕ್ತಿಯು ನಿನಗೆ ವ್ಯಕ್ತವಾಗುವುದು ಎಂದೆನಲು, ಜ್ಞಾನನಿಧಿಯಾದ ಮುನಿಯ ಇಂದ್ರಗೋಪವೆಂಬ ಸಣ್ಣ ಹುಳದಷ್ಟಿರುವ ಬೆಂಕಿಯ ಕಿಡಿಯಲ್ಲಿಯೂ ಮಹಾದಾಹಶಕ್ತಿಯಿರುವಂತೆ,

ಕಾಕಪಕ್ಷಧರನಾದ ರಾಮನಲ್ಲಿಯೂ ಅಂತಹ ಅಪಾರವಾದ ಶಕ್ತಿಯಿಗಬಹುದೆಂದು ನಂಬಿದನು. ಮತ್ತು ಸಾಸಿರಗಣ್ಣನು – ತನ್ನ ತೇಜೋಮಯವಾದ ಚಾಪವನ್ನು ತೋರ್ಪಡಿಸಲು ತೋಯದಗಳಿಗಾಜ್ಞಾಪಿಸುವಂತೆ, ಕಾರ್ಮುಕವನ್ನು ತರಲು, ತನ್ನ ಪಕ್ಕದಲ್ಲಿದ್ದ ಸಾವಿರಾರು ಮಂದಿ ಪರಿಜನರಿಗಾಣತಿಯನ್ನಿತ್ತನು. ಸೇವಕರಾಗಲೆ ಬಾಣಾಸನವನ್ನು ಬಹು ಪ್ರಯಾಸದಿಂದ ತಂದಿಳುಹಿದರು. ದಾಶರಥಿಯು – ಮಲಗಿರುವ ಆದಿಶೇಷನಂತೆ ಬಹು ಭೀಷಣವೆನಿಸಿರುವ ಆ ಶರಾಸನವನ್ನವಲೋಕಿಸಿದನು, ಹಾಗೆಯೇ ಕೈಯಿಂದ ಹಿಡಿದೆತ್ತಿದನು. ಪೂರ್ವದಲ್ಲಿ ಪರಮೇಶ್ವರನು – ಮೃಗರೂಪವನ್ನಾಂತು ಓಡುತ್ತಲಿದ್ದ ಕ್ರತುವಿನಮೇಲೆ ಈ ಬಿಲ್ಲಿನಿಂದಲೇ ಬಾಣವನ್ನೆಸೆದುದು.

ಸಭಾಜನರೆಲ್ಲ ಸ್ತಬ್ಧರಾಗಿ ರೆಪ್ಪೆಬಡಿಯದೆ ವಿಸ್ಮಯದಿಂದ ನೋಡುತ್ತಲಿದ್ದರು, ಕೋಮಲವಾದ ಕುಸುಮಚಾಪವನ್ನು ಕಾಮನಂತೆ, ರಾಮನೂ ವಿಶೇಷ ಪ್ರಯತ್ನವಿಲ್ಲದೆಯೇ ಶೈಲಸಾರದ ಆ ಬಿಲ್ಲಿನಲ್ಲಿ ನಿಮಿಷಮಾತ್ರದಲ್ಲಿ ಹೆದೆಯನೇರಿಸತೊಡಗಿದನು. ರಾಮನ ಹೇರಳವಾದ ಸೆಳೆತದಿಂದ ಮುರಿದ ಕಾರ್ಮುಕದಿಂದ ಬರಸಿಡಿಲಿನಂತೆ ಹೊರಟ ಬಹು ಘೋರವಾದ ಆರವವು ಪಡುವಣ ಕಡಲತಡಿಯೊಳಿದ್ದ ಬಲು ಸಿಟ್ಟುಗಾರನಾದ ಭಾರ್ಗವನಿಗೆ, ಮಲಿನವಾಗಿದ್ದ ಕ್ಷತ್ರಕುಲವು ಮರಳಿ ತಲೆಯನ್ನೆತ್ತಿದುದು ಎಂದು ಅರುಹುವಂತಿದ್ದಿತು.

ಅಹಹ! ಆ ಬಳಿಕ ಮೈಥಿಲನು – ರುದ್ರಕಾರಕದಲ್ಲಿ ರಾಘವನ ವೀರ್ಯವನ್ನು ಸಾರವತ್ತಾದುದನ್ನಾಗಿ ಅವಲೋಕಿಸಿದನು, ಬಹುವಾಗಿ ಅಭಿನಂದಿಸಿದನು; ರೂಪವತಿಯಾಗಿ ಬಂದ ಲಕ್ಷ್ಮಿಯಂತಿರುವ ಅಯೋನಿಜೆಯಾದ ತನ್ನ ಆತ್ಮಜೆಯನ್ನು ಇದೇ ನಿನ್ನ ವೀರ್ಯಶುಲ್ಕವೆಂದು ದಾಶರಥಿಗೆ ವಚನದಿಂದ ಒಪ್ಪಿಸಿದನು. ಮತ್ತು – ಸತ್ಯಸಂಗರನಾದುದರಿಂದಲೇ, ತೇಜಸ್ವಿಯೂ, ತಪೋನಿಧಿಯೂ ಆಗಿರುವ ಮುನಿಯ ಸನ್ನಿಧಾನದಲ್ಲಿ, ಆ ಕೂಡಲೇ ಅಗ್ನಿಸಾಕ್ಷಿಕನಂತೆ ಅವನಿಜೆಯನ್ನು ಆ ರಾಘವನಿಗೆ ದಾನವಾಗಿ ಕೊಟ್ಟನು.

ತರುವಾಯ ಮಹಾತೇಜಸ್ವಿಯಾದ ಜನಕನು– "ಎಲೈ ಮಹಾರಾಜನೆ! ನನ್ನ ಮಗಳಾದ ಈ ಸೀತೆಯನ್ನು ನಿನ್ನ ಸೊಸೆಯನ್ನಾಗಿ ಸ್ವೀಕರಿಸು, ಆಳುತನದಲ್ಲಿರುವ ಈ ನಿಮಿಕುಲವನ್ನು ಗೌರವಿಸು" ಎಂದು ಅರಿಕೆ ಮಾಡುವಂತೆ, ದಶರಥನ ಬಳಿಗೆ ಪೂಜ್ಯನಾದ ಪುರೋಹಿತನನ್ನು ತಡಮಾಡದೆ ಕಳುಹಿಸಿಕೊಟ್ಟನು. ದಶರಥನೂ – ರಾಮನಿಗೆ ಮದುವೆ ಮಾಡಬೇಕೆಂದು ಸರಿಯಾದ ಸಂಬಂಧವನ್ನು ಬೆಳೆಸಲು ಯಾವ ಮನೆತನದಲ್ಲಿ ಒಳ್ಳೆಯ ಹೆಣ್ಣಿದೆ? ಎಂದು ಚಿಂತಿಸುತ್ತಲೇ ಇದ್ದನು. ಅದುವರೆಗೆ

ಸರಿಯಾಗಿ ಅನುಕೂಲವಾದ ಮಾತನ್ನು ಹೇಳತಕ್ಕ ಜನಕ ಪುರೋಹಿತನೂ ಬಂದು ಸುದ್ದಿಯನ್ನು ತಿಳಿಸಿದನು. ಕಲ್ಪವೃಕ್ಷ ಫಲದಂತೆ , ಪುಣ್ಯವಂತರ ಕೋರಿಕೆಯು ತತ್‌ಕ್ಷಣದಲ್ಲಿಯೇ ಫಲಿಸುವುದು ಎಂಬುದು ಸಹಜವಾಗಿದೆ. ದೇವೇಂದ್ರ ಮಿತ್ರನೆನಿಸಿ, ಜಿತೇಂದ್ರಿಯನಾಗಿರುವ ಕೋಸಲನಾಥನು ಮಿಥಿಲೆಯಿಂದ ಬಂದ ಬ್ರಾಹ್ಮಣನನ್ನು ಉಚಿತವಾದ ಸತ್ಕಾರಗಳಿಂದ ಗೌರವಿಸಿ, ಆತನಿಂದ ಶುಭಸಮಾಚಾರವನ್ನೆಲ್ಲ ಕ್ರಮವಾಗಿ ಕೇಳಿ ತಿಳಿದನು. ಹರ್ಷಿತನಾದನು. ಕೂಡಲೆ ಸಕಲ ಸಲಕರಣೆಗಳಿಂದೊಡಗೂಡಿ ಸೇನೆಯೊಂದಿಗೆ ಹೊರಟನು, ಪಡೆಯಿಂದೆದ್ದ ಧೂಳಿಯು ರವಿಮಂಡಲವನ್ನು ಮುಚ್ಚುತ್ತಲಿದ್ದಿತು. ತ್ವರೆಯಾದ ಪ್ರಯಾಣಕಗಳಿಂದ ಮಿಥಿಲಾನಗರದ ಬಳಿಗೆ ಬಂದು ಸೇರಿದನು. ಊರ ಹತ್ತಿರದಲ್ಲಿರುವ ಮರಗಿಡಬಳ್ಳಿಗಳಿಂದ ತುಂಬಿದ ಉದ್ಯಾನವನವನ್ನೆಲ್ಲ ತುಳಿಯುತ್ತಲಿದ್ದ ಪಡೆಯ ಹಾವಳಿಯನ್ನು ಪ್ರೀತಿವಿಶೇಷದಿಂದ ಆ ನಗರಿಯು ಸಹಿಸಿತು, ಗರತಿಯಾದ ಸುದತಿಯು ಪ್ರೇಮವಲ್ಲಭನ ಅತಿಕ್ರಮಣವನ್ನು ತಾಳುವಂತೆ ಕಂಗೊಳಿಸಿತು.

ವರುಣವಾಸವರಿಗೆಣೆಯೆನಿಸಿರುವ ವಸುಮತೀಶರೀರ್ವರೂ ಕಲೆತರು. ಇಬ್ಬರೂ ಸದಾಚಾರಸಂಪನ್ನರು. ಕನ್ಯಾಕುಮಾರರ ಕರಗ್ರಹಣ ಮಂಗಳೋತ್ಸವವನ್ನು ತಂತಮ್ಮ ವಿಭವ ಪ್ರಭಾವಗಳಿಗನುಸಾರವಾಗಿ ಹರಡಿ ಈಡೇರಿಸಿದರು. ರಘುನಾಥನು ಮೈಥಿಲಿಯನ್ನೂ, ಬಳಿಕ ಸೌಮಿತ್ರಿಯು – ಸೀತಾನುಜೆಯಾಗಿ ವೈದೇಹನ ಔರಸಕನ್ಯೆಯಾಗಿದ್ದ ಊರ್ಮಿಳೆಯನ್ನೂ, ರಾಮಲಕ್ಷ್ಮಣರ ಅನುಜರಾದ ಭರತ ಶತ್ರುಘ್ನರು –ಜನಕನ ಸೋದರನಾದ ಕುಶಧ್ವಜನ ತನುಜೆಯರಾಗಿರುವ ಮಾಂಡವೀ ಶ್ರುತಕೀರ್ತಿಯರನ್ನೂ, ಕ್ರಮವಾಗಿ ಮದುವೆಯಾದರು. ನವವಧುಗಳನ್ನು ಪರಿಗ್ರಹಿಸಿದ ರಾಮಾದಿ ನಾಲ್ಕು ಮಂದಿ ಕುಮಾರರೂ, ದಶರಥಭೂಪಾಲನ ಫಲಸಿದ್ಧಿಗಳಿಂದೊಡಗೂಡಿದ ಸಾಮ,ದಾನ ಭೇದ,ದಂಡೋಪಾಯಗಳಂತೆ ಕಂಗೊಳಿಸುತ್ತಲಿದ್ದರು ಮತ್ತು ಆ ರಾಜಕನ್ಯಾವರರು – ಕುಲ, ಶೀಲ, ವಯ, ರೂಪ, ಗುಣ, ಲಾವಣ್ಯ ಈ ಮೊದಲಾದವುಗಳ ಆನುರೂಪ್ಯದಿಂದ ಪರಸ್ಪರವಾಗಿ ಸಫಲತೆಯನ್ನು ಪಡೆದರು. ಆಗ–ಆ ವಧೂವರರ ಸಮಾಗಮವು – ಪ್ರಕೃತಿ ಪ್ರತ್ಯಯಗಳ ಸಂಬಂಧದಂತೆ ಸಂಶೋಭಿಸುತ್ತಲಿದ್ದಿತು,

ಈ ಪ್ರಕಾರವಾಗಿ ಕೋಸಲನಾಥನು – ತನ್ನ ನಾಲ್ಕು ಮಂದಿ ಮಕ್ಕಳಿಗೂ ಮಿಥಿಲಾನಗರದಲ್ಲಿ ವಿವಾಹಮಂಗಳ ಮಹೋತ್ಸವವನ್ನು ಬಹುಪ್ರೀತಿಯಿಂದ ನೆರವೇರಿಸಿದನು. ಬಳಿಕ ಸುಖಪ್ರಯಾಣವನ್ನು ಬೆಳಸಿದನು. ಪ್ರೀತ್ಯುತ್ಸಾಹಗಳಿಂದ ಹಿಂಬಾಲಿಸಿ ಬಂದ ಜನಕರಾಯನನ್ನು ತನ್ನ ರಾಜಧಾನಿಗೆ ಮೂರು ವಸತಿಗಳು ಮಾತ್ರವಿರುವಲ್ಲಿ ಹಿಂದಕ್ಕೆ ಕಳುಹಿಸಿ ತಾನು ಮುಂದುವರಿದನು.

ಹೀಗೆ ಸಕಲ ಪರಿವಾರದಿಂದ ಪರಿವೃತನಾಗಿ ಬರುತ್ತಿರುವಲ್ಲಿ ಒಂದು ವೇಳೆ – ಪಡೆಯೊಳಗಣ ಧ್ವಜಗಳ ತುದಿಗಳೆಲ್ಲ ಮುರಿದು ಬೀಳುವಂತೆ ಬಿರುಗಾಳಿಯು ಬೀಸಿತು; ದಡವನ್ನು ಮೀರಿ ಉಕ್ಕಿ ಹರಿಯುವ ಹೊಳೆಯ ವೇಗವು – ಬೈಲು ನೆಲವನ್ನು ಹೇಗೋ ಹಾಗೆ, ಸೇನೆಯನ್ನೆಲ್ಲ ಕ್ಲೇಶಗೊಳಿಸಿತು. ಆಮೇಲೆ–ಆಕಾಶದಲ್ಲಿ ಗೂಡುಕಟ್ಟಿರುವ ಸೂರ್ಯನು ಬಡಿದು ಅಪ್ಪಳಿಸಿದ ಹಾವನ್ನು ಗರುಡನು ಹಿಡಿದು ಮೇಲಕ್ಕೊಯ್ಯುತ್ತಲಿರುವಲ್ಲಿ, ಅದರ ತಲೆಯಿಂದ ಜಾರಿ ಉದಿರುವ ಮಣಿಯಂತೆ ಕಳಾಹೀನನಾಗಿ ಕಾಣಬಂದನು. ಡೇಗೆಹಕ್ಕಿಗಳು ಗರಿಗಳನ್ನು ಕೆದರಿ ಹರಡಿ ಎಲ್ಲೆಲ್ಲಿಯೂ ಹಾರಾಡುತ್ತಲಿದ್ದುವು, ಮಣ್ಣಿನ ರಜವು ಆವರಿಸಿಕೊಂಡಿದ್ದಿತು. ಕೆಂಪಾದ ಮೋಡಗಳು ಬಾಂದಳದಲ್ಲಿ ತುಂಬಿದ್ದುವು. ಇದರಿಂದ ಮಲಿನಗಳಾದ ದಿಕ್ಕುಗಳು ಭಯಂಕರಗಳೆನಿಸಿ, ನೋಡಲಿಕ್ಕೆ ಅಸಹ್ಯಗಳಾಗಿದ್ದುವು. ಮತ್ತು – ಕ್ಷತ್ರಿಯರನ್ನೆಲ್ಲ ಇರಿದು, ರಕ್ತದ ಹೊಳೆಯಲ್ಲಿ ಮಿಂದು, ಪಿತೃತರ್ಪಣವನ್ನು ನೆರವೇರಿಸಿದ ಭಾರ್ಗವರಾಮನನ್ನು ಮರಳಿ ಪ್ರೇರಿಸುವವೆಂಬಂತೆ, ಹೆಣ್ಣು ನರಿಗಳು – ಸೂರ್ಯನಿಗಿದಿರಾಗಿ ನಿಂತು, ತಲೆಗಳನ್ನೆತ್ತಿ, ಭಯಂಕರವಾಗಿ ಕೂಗುತ್ತಲಿದ್ದುವು.

ಆ ಇದಿರುಗಾಳಿಯೇ ಮುಂತಾದ ವಿಕಾರಗಳನ್ನೆಲ್ಲ ಅವಲೋಕಿಸಿ, ಕಾರ್ಯಜ್ಞನಾದ ಕ್ಷಿತಿಪತಿಯು ಕುಲಗುರುವಾದ ವಶಿಷ್ಠಮುನಿಯನ್ನು ಕುರಿತು, ಸಮಯೋಚಿತವಾದ ಶಾಂತಿಕರ್ಮವನ್ನು ಆಚರಿಸುವಂತೆ ಅರಿಕೆ ಮಾಡಿದನು, ತಪೋನಿಧಿಯ – ವಿಧಿಯನ್ನನುಸರಿಸಿ ಶಾಂತಿಯನ್ನೆಸಗಿ, ಶುಭಪರಿಣಾಮವಾಗುವುದೆಂದು ಅವನಿಪಾಲನನ್ನು ಸಂತೈಸಿದನು.

ಅಹಹ! ಅಷ್ಟುಹೊತ್ತಿಗೆ ಸರಿಯಾಗಿ ಪಡೆಯಮುಂದೆ ಒಂದಾನೊಂದು ತೇಜೋರಾಶಿಯು ಅಕಸ್ಮಾತ್ತಾಗಿ ಕಾಣಿಸಿಕೊಂಡಿತು. ಸೈನಿಕರು ಮಿಂಚು ಹೊಳೆದಾಗ ಮಂಕಾದವುಗಳಂತಿರುವ ಕಣ್ಣುಗಳನ್ನು ಉಜ್ಜಿಕೊಂಡು ಮರಳಿನೋಡಲು, ಅದು ಅವಯವಗಳಿಂದೊಡಗೂಡಿ, ಸುಲಕ್ಷಣದ ಒಂದು ಮನುಷ್ಯ ವ್ಯಕ್ತಿಯಾಗಿದ್ದಿತು. ಆ ಪುರುಷಸಿಂಹನ ಹೆಗಲಿಗೆ ಲಕ್ಷಣವಾಗಿದ್ದ ಉಪವೀತವು ತಂದೆಯ ಅಂಶವಾಗಿದ್ದಿತು. ಕೈಲಿದ್ದ ಪ್ರಬಲವಾದ ಬಿಲ್ಲು ತಾಯಿಯ ಭಾಗವಾಗಿತ್ತು, ಇದರಿಂದ ಆ ಮಹಾಪುರುಷನು – ಚಂದ್ರನಿಂದೊಡಗೂಡಿರುವ ಸೂರ್ಯನ ಹಾಗೂ ಮಹಾಸರ್ಪದಿಂದ ಸಹಿತವಾದ ಚಂದನ ತರುವಿನ ಹಾಗೂ ಕಂಗೊಳಿಸುತ್ತಲಿದ್ದನು. ಯಾವ ಧೀರನು – ರೋಷದಿಂದ ಪರುಷವಾದ ಬುದ್ಧಿಯುಳ್ಳವನಾಗಿ, ಲೋಕಮರ್ಯಾದೆಯನ್ನೂ ಮೀರಿ ಇದ್ದ ತಂದೆಯ ಶಾಸನವನ್ನು ಎಳ್ಳಷ್ಟಾದರೂ ಅತಿಕ್ರಮಿಸಲಿಲ್ಲವೋ, ನಡುಗುತ್ತ ನಿಂತಿದ್ದ ಹೆತ್ತತಾಯಿಯ ತಲೆಯನ್ನೂ ಕತ್ತರಿಸಿ, ಮೊದಲು ಕರುಣೆಯನ್ನೂ, ಬಳಿಕ ಕ್ಷತ್ರಿಯರ ಶಿರಗಳನ್ನರಿದು ಧರಣಿಯನ್ನೂ ಜಯಿಸಿದನೋ, ಮತ್ತಾವನ ಬಲಗಿವಿಯ ಮೇಲೆ ಬೆಳಗುತ್ತಲಿರುವ

ಜಪಮಣಿಮಾಲೆಯು – ಇಷ್ಟು ಸಾರಿ ಕ್ಷತ್ರಿಯ ಸಂತತಿಯನ್ನು ಸಂಹಾರಮಾಡಿದುದು, ಎಂಬ ಲೆಕ್ಕವನ್ನು ಮಣಿಗಳ ನೆಪದಿಂದ ತಿಳಿಸುತ್ತಲಿರುವಂತೆ ಕಾಣಬರುತ್ತಲಿದ್ದಿತೋ, ಆ ಧೀರಪುರುಷನೇ ಭಾರ್ಗವರಾಮನು. ತನ್ನ ತಂದೆಯ ಕೊಲೆಯಿಂದುಂಟಾದ ಮಹಾರೋಷದಿಂದ ಗಂಡುಗೊಡಲಿಯನ್ನು ಹಿಡಿದು ರಾಜವಂಶವನ್ನು ನಿರ್ನಾಮಮಾಡಲಿಕ್ಕೆ ದೀಕ್ಷೆಯನ್ನು ಕೈಗೊಂಡವನು.

ಆ ಪರಶುರಾಮನನ್ನು ಕಂಡೇ ಈಗ–ಎಳೆಯ ಮಕ್ಕಳನ್ನೊಳಗೊಂಡಿರುವ ಮುದಿದೊರೆಯಾದ ದಶರಥನು–ಹೊಟ್ಟೆಯೊಳಗಣ ಕರುಳದಿರುವಂತೆ ಕಳವಳಿಸಿದುದು. ಗುಣಾಭಿರಾಮನಾಗಿ, ಕುಮಾರನಾಗಿರುವ ರಾಮನಲ್ಲಿಯೂ, ಹಗೆಯಾಗಿ, ಮಹಾಶೂರನೆನಿಸಿರುವ ಪರಶುರಾಮನಲ್ಲಿಯೂ ಸಮಾನವಾಗಿರುವ ರಾಮನಾಮವು ಹಾರದಲ್ಲಿಯೂ ಸರ್ಪದಲ್ಲಿಯೂ ಸಮವಾಗಿರುವ ರತ್ನಜಾತಿಯಂತೆ, ದಶರಥನಿಗೆ ಹೃದಯಂಗಮವಾಗಿಯೂ, ಭಯದಾಯಕವಾಗಿಯೂ ಇದ್ದಿತು.

ಇಂತಹ ಪರಶುರಾಮನನ್ನು ಕಂಡಕೂಡಲೆ, "ಎಲೈ ಮುನಿವರ್ಯನೇ? ಅರ್ಘ್ಯವನ್ನು ಪರಿಗ್ರಹಿಸಬೇಕು; ಅರ್ಘ್ಯವನ್ನು ಪರಿಗ್ರಹಿಸಬೇಕು" ಎಂದು ವಿನಯಪೂರ್ವಕವಾಗಿ ವಿಜ್ಞಾಪಿಸುತ್ತಲಿರುವ ದಶರಥನನ್ನು ಭಾರ್ಗವನು ಸಡ್ಡೆ ಮಾಡಲೇ ಇಲ್ಲ. ರಾಮನೆಲ್ಲಿದ್ದನೋ ಅತ್ತಕಡೆಗೆ ಗಿರ್ರನೆ ತಿರುಗಿದನು, ಕ್ಷತ್ರಿಯ ಜಾತಿಯ ವಿಷಯದಲ್ಲಿ ತನಗಿರುವ ರೋಷಾಗ್ನಿಯ ಕಿಡಿಗಳಂತೆ ತೀಕ್ಷ್ಣವಾಗಿರುವ ಕಣ್ಣಗುಡ್ಡೆಗಳನ್ನು ತಿರುಗಿಸತೊಡಗಿದನು. ಮತ್ತು – ಒಂದು ಹಿಡಿಯಿಂದ ಬಿಲ್ಲಿನ ನಡುವೆ ಹಿಡಿದು, ಬೇರೊಂದು ಕೈ ಬೆರಳುಗಳ ನಡುವೆ ಅಂಬನ್ನು ಸಿಲುಕಿಸಿ, ಹೊಡಿಯಲಿಕ್ಕೆ ಸರಿಪಡಿಸುತ್ತಾ, ಹತ್ತಿರದಲ್ಲಿ ನಿರ್ಭಯನಾಗಿ ನಿಂತಿರುವ 'ರಾಮನಿದಿರಿಗೆ ಬಂದು ನಿಂತು ಇಂತೆಂದನು :–

ಎಲ ಹುಡುಗ! ತಂದೆಯನ್ನು ಕೊಂದುದರಿಂದ ಕ್ಷತ್ರಜಾತಿಯೇ ನನ್ನ ವೈರಕ್ಕೆ ಗುರಿಯಾಯಿತು, ಅದರಿಂದಲೇ ಬಾಹುಜರ ಪಡೆಯನ್ನೇ ಅನೇಕ ಸಾರಿ ಸದೆಬಡಿದು, ತಲೆಯನ್ನೆತ್ತದಂತೆ ಸುಳಿವನ್ನೇ ಅಡಗಿಸಿ, ಶಾಂತನಾಗಿದ್ದೆನು, ಮರಳಿ ಈಗ – ತೆಪ್ಪಗೆ ಮಲಗಿರುವ ಹಾವನ್ನು ಕೋಲಿನಿಂದ ತಿವಿದರೆ ಹೇಗೋ ಹಾಗೆ, ನಿನ್ನ ವಿಕ್ರಮವನ್ನು ಕೇಳಿ ರೋಷಗೊಳಿಸಲ್ಪಟ್ಟಿದ್ದೇನೆ. ಇದುವರೆಗೆ ಯಾವನೊಬ್ಬ ದೊರೆಯ ಹಿಡಿದೆತ್ತಿ ಹೆದೆಯನೇರಿಸಲಳವಲ್ಲದಿದ್ದ ಮೈಥಿಲನ ಮನೆಯೊಳಗಣ ಬಿಲ್ಲನ್ನು ನೀನು ಮುರಿದೆಯಂತೆ. ಆ ಸುದ್ದಿಯನ್ನು ಕೇಳಿದಮೇಲೆ ನಿನ್ನ ಧನುರ್ಭಂಗದಿಂದ ನನ್ನ ವೀರ್ಯವೆಂಬ ಶಿಖರವು ಮುರಿದು ಹೋದಂತಾಗಿದೆ. ಇದಲ್ಲದೆ, ಹಿಂದೆ – ರಾಮ ಎಂದರೆ, ಆ ಶಬ್ದಕ್ಕೆ ಅರ್ಹನಾಗಿ ಲೋಕದಲ್ಲಿ ನಾನೊಬ್ಬನೇ ಗುರಿಯಾಗುತ್ತಿದ್ದೆನು.

ನೀನು ತಲೆಯೆತ್ತುತ್ತ ಬಂದಮೇಲೆ, ಆ ಶಬ್ದವು ನನ್ನನ್ನು ಬಿಟ್ಟು, ತಲೆಕೆಳಗಾಗಿ, ನಿನ್ನನ್ನು ಗೋಚರಿಸಿಕೊಳ್ಳುತ್ತಾ, ನನಗೆ ಬಲು ನಾಚಿಕೆಯನ್ನುಂಟುಮಾಡುತ್ತಲಿದೆ ಮತ್ತು – ಈ ಪ್ರಪಂಚದೊಳಗೆ ಕ್ರೌಂಚಪರ್ವತದಲ್ಲಿಯೂ ಅಡ್ಡಿಯಿಲ್ಲದೆ ತೂರತಕ್ಕ ಅಸ್ತ್ರವನ್ನು ಧರಿಸಿರುವ ಈ ನನಗೆ, ನನ್ನ ತಂದೆಯ ಹೋಮಧೇನುವಿನ ಕರುವನ್ನು ಅಪಹರಿಸಿದ ಹೈಹಯ ದೇಶಾಧಿಪತಿಯಾದ ಕಾರ್ತವೀರ್ಯಾರ್ಜುನನೊಬ್ಬ, ನನ್ನ ಕೀರ್ತಿಯನ್ನು ಅಪಹರಿಸಲಿಕ್ಕೆ ಪ್ರಯತ್ನಿಸಿದ ನೀನೊಬ್ಬ, ಈ ಇಬ್ಬರೂ ಸಮವಾದ ತಪ್ಪುವಾಡಿ, ನನಗೆ ಹಗೆಗಳಾಗಿದ್ದೀರಿ. ಆದಕಾರಣ ಕ್ಷತ್ರಿಯರನ್ನು ಕೊನೆಗಾಣಿಸಿದುದಾದರೂ ನನ್ನ ವಿಕ್ರಮವು – ನಿನ್ನನ್ನು ಮುಗಿಸಿಕೊಳ್ಳದಿದ್ದರೆ, ನನ್ನನ್ನು ತೃಪ್ತಿಗೊಳಿಸುವುದಿಲ್ಲ. ಅಗ್ನಿಯ ಮಹಿಮೆಯು ಹುಲ್ಲಿನಬಣವೆಯನ್ನು ಸುಡುವಂತೆ, ಕಡಲಿನಲ್ಲಿಯೂ ಸುಡುತ್ತಲಿರುವುದರಿಂದಲೇ ಅಲ್ಲವೆ ಗಣನೆಗೆ ಬಂದಿದೆ? ಇದಲ್ಲದೆ, ನೀನು ಯಾವ ಬಿಲ್ಲನ್ನು ಮುರಿದೆಯೋ ಆ ಶಿವನ ಬಿಲ್ಲಿನ ಸಾರವನ್ನು ಹಿಂದೆ ವಿಷ್ಣುವಿನ ತೇಜವು ಅಪಹರಿಸಿದೆ ಎಂದು ತಿಳಿ. ಹೊಳೆಯ ಹೊಯಿಲಿನ ವೇಗದಿಂದ ಬೇರುಗಳೆಲ್ಲ ಸಡಲಿ ಶಿಥಿಲವಾದಾಗ, ಮೆಲ್ಲಗೆ ಬೀಸುತ್ತಲಿರುವ ಗಾಳಿಯೂ ಆ ಮರವನ್ನು ಉರುಳಿಸಬಲ್ಲುದಲ್ಲವೆ? ಆದಕಾರಣ ಜೀರ್ಣಧನುರ್ಭಂಗದಿಂದ ಹೆಮ್ಮೆ ಪಡಬೇಡ. ಆದರೆ ಈಗ ಈ ನನ್ನ ಚಾಪದಲ್ಲಿ ಮೌರ್ವಿಯನ್ನು ಯೋಜನೆಮಾಡಿ, ಶರವನ್ನು ಸಂಧಿಸಿ ಸೆಳೆ. ರಣವೆಂಬುದು ಹಾಗಿರಲಿ, ನನ್ನ ಬಿಲ್ಲನ್ನು ಸೆಳೆಯುವುದರಿಂದಲೇ ನನ್ನೊಡನೆ ನೀನು ಸಮಾನ ಬಲವುಳ್ಳವನಾಗುವೆಯಾದಕಾರಣ ನಿನಗೆ ನಾನು ಸೋತೆನೆಂದೇ ಭಾವಿಸುವೆನು. ಹಾಗಿಲ್ಲದೆ – ಜ್ವಲಿಸುತ್ತಲಿರುವ ಈ ನನ್ನ ಗಂಡುಗೊಡಲಿಯ ಮೊನೆಯನ್ನು ಕಂಡು ಅಂಜಿದುದಾದರೆ, ಇದುವರಿಗೆ ವ್ಯರ್ಥವಾಗಿ ಶಿಂಜಿನಿಯನ್ನು ಸೆಳೆದು ಕಠಿನವಾದ ಬೆರಳುಗಳನ್ನೊಳಗೊಂಡಿರುವ ಕರತಲಗಳೆರಡನ್ನೂ ಜೋಡಿಸಿ ಅಭಯವನ್ನು ಬೇಡಿಕೊಳ್ಳು. ನಿನ್ನ ಅಭಯಾಂಜಲಿಯಿಂದ ಶಾಂತನಾಗುವೆನು ಎಂದನು.

ಬಹು ಭಯಂಕರವಾದ ನೋಟವುಳ್ಳ ಭಾರ್ಗವನು ಹಾಗೆ ಹೇಳುತ್ತಿರಲಾಗಿ, ದಾಶರಥಿರಾಮನು – ಹುಸಿನಗೆಯಿಂದ ಕೆಳದುಟಿಯನು ಅಲುಗಿಸುತ್ತ, ಆತನ ಬಿಲ್ಲನ್ನು ಕೈಯಲ್ಲಿ ಹಿಡಿಯೋಣವನ್ನೇ ಸಮರ್ಥವಾದ ಪ್ರತ್ಯುತ್ತರವನ್ನಾಗಿ ಅಂಗೀಕರಿಸಿದನು. ಆಮೇಲೆ ತನ್ನ ಪೂರ್ವದ ನಾರಾಯಣಾವತಾರದಲ್ಲಿನ ಬಿಲ್ಲನ್ನು ಕೈಯ್ಯಲ್ಲಿ ಹಿಡಿದಕೂಡಲೇ ಮತ್ತಷ್ಟು ಪ್ರಿಯದರ್ಶನನಾದನು. ಕೇವಲ ಜಲದಿಂದ ತುಂಬಿರುವ ಮುಂಗಾರು ಮೋಡವೇ ನೋಡಲಿಕ್ಕೆ ಬಲು ಅಂದವಾಗಿರುವುದು, ಹೀಗಿರುವಲ್ಲಿ ಇಂದ್ರಚಾಪದಿಂದಲೂ ಒಡಗೂಡಿದರೆ ಅದರ ಚೆಲುವಿಕೆಯನ್ನು ಹೇಳಬೇಕಾದುದೇನು?

ಆ ಬಳಿಕ ರಾಮನು – ಆ ಕಾರ್ಮುಕದ ಒಂದು ತುದಿಯನ್ನು ನೆಲದಮೇಲಿಟ್ಟು ಹಿಡಿದು ನಿಲ್ಲಿಸಿ, ಅದರಲ್ಲಿ ಮೌರ್ವಿಯನ್ನು ಆರೋಪಿಸಿ ನಿಂತನು. ರಾಜನ್ಯಪವರ್ಗಕ್ಕೆ ರಿಪುವಾದ ಭಾರ್ಗವನು – ಹೊಗೆಯು ಮಾತ್ರವೇ ಉಳಿದಿರುವ ಅಗ್ನಿಯಂತೆ ಕಳೆಗುಂದಿ ನಿಂತನು. ಆಮೇಲೆ ಆ ಈರ್ವರೂ ಕ್ರಮವಾಗಿ ಏರುತ್ತಲಿರುವ ಮತ್ತು ಇಳಿಯುತ್ತಲಿರುವ ತೇಜಸ್ಸುಳ್ಳವರಾದರು. ಹುಣ್ಣಿಮೆಯ ದಿನದ ಸಂಜೆಯಲ್ಲಿನ ಚಂದ್ರಸೂರ್ಯರಂತೆ ಒಬ್ಬರಿಗೊಬ್ಬರು ಇದಿರಾಗಿ ನಿಂತಿರುವ ಆ ರಾಘವ ಭಾರ್ಗವರನ್ನು ಜನರು ಬಲು ಸಡಗರದಿಂದ ನೋಡುತ್ತಲಿದ್ದರು.

ಆ ಹಿಂದೆ ಕುಮಾರಸ್ವಾಮಿಗೆಣೆಯಾದ ದಾಶರಥಿಯು – ಕರುಣೆಯಿಂದ ಮೃದುವಾಗಿ, ತನ್ನ ವಿಷಯದಲ್ಲಿ ನೀವು ಅಡಗಿ ಇದಿರಿಗೆ ನಿಂತಿರುವ ಭಾರ್ಗವನನ್ನೂ, ತಾನು ಸಂಧಾನಮಾಡಿರುವ ಬಾಣವನ್ನೂ ಅವಲೋಕಿಸಿ ಇಂತೆಂದನು–

ಎಲೈ ಭೃಗುನಂದನನೇ! ಯದ್ಯಪಿ, ನೀನು–ಇದುವರೆಗೆ ನನ್ನನ್ನು ಬಹಳವಾಗಿ ಹೀಯಾಳಿಸಿದೆ. ಆದರೆ, ಬ್ರಾಹ್ಮಣನೆಂದು ಭಾವಿಸಿ, ಸದಯನಾದುದರಿಂದಲೇ ಹೊಡೆಯಲು ಸಮರ್ಥನಾಗದೆ ಇದ್ದೇನೆ. ಆದರೆ ನನ್ನ ಬಾಣವು ವ್ಯರ್ಥವಾಗತಕ್ಕುದಲ್ಲ, ಅದರಿಂದ ಈಗ ನೀನು ಇಲ್ಲಿಂದ ತೆರಳದಂತೆ ನಿನ್ನ ಗಮನವನ್ನು ಹೊಡೆಯಲೆ? ಅಥವಾ ನೀನು ಆರ್ಜಿಸಿರುವ ಸ್ವರ್ಗಮಾರ್ಗವನ್ನು ಹೊಡೆಯಲೆ? ಬೇಗ ಹೇಳು ಎಂದನು.

ಆಗಲಾ ಭಾರ್ಗವಮುನಿಯು ರಾಮನನ್ನು ನೋಡಿ ಹೀಗೆಂದನು. ಎಲೈ ದಾಶರಥಿಯೆ! ನಾನು ತತ್ತ್ವದೃಷ್ಟಿಯಿಂದ ನಿನ್ನನ್ನು ಪುರಾಣಪುರುಷನನ್ನಾಗಿ ತಿಳಿಯದೆ ಇಲ್ಲ. ಆದರೆ, ಈ ಕರ್ಮ ಭೂಮಿಯಲ್ಲಿ ಅವತರಿಸಿರುವ ನಿನ್ನ ವೈಷ್ಣವ ತೇಜಸ್ಸನ್ನು ನೋಡಬೇಕೆಂಬ ಬಯಕೆಯಿಂದಲೇ ನಿನಗೆ ಕೋಪವನ್ನುಂಟುಮಾಡಿದೆನು; ಆದಕಾರಣ, ನನ್ನ ತಂದೆಯು ಹಗೆಗಳನ್ನೆಲ್ಲ ಭಸ್ಮ ಮಾಡಿದವನೂ, ಸಾಗರಪರ್ಯಂತವಾದ ವಸುಧೆಯನ್ನೆಲ್ಲ ಸತ್ಪಾತ್ರದಲ್ಲಿ ವಿನಿಯೋಗಿಸಿದವನೂ ಆಗಿರುವ ನನಗೆ ನಿನ್ನಿಂದಾದ ಸೋಲೂ ಮೇಲೆನಿಸಿ, ಬಯಸತಕ್ಕುದೇ ಆಗಿದೆ. ಅದರಿಂದ ಮತಿವಂತರೊಳಗೆ ಉತ್ತಮನೆನಿಸಿದ ಎಲೈ ರಾಘವನೇ! ಪುಣ್ಯಕ್ಷೇತ್ರ ತೀರ್ಥಯಾತ್ರೆಗಾಗಿ ಇಷ್ಟವಾಗಿರುವ ನನ್ನ ಗಮನವನ್ನು ಹೊಡೆದು ತಡೆಯಬೇಡ. ನಾನು ಸಂಪಾದಿಸಿರುವ ಸ್ವರ್ಗಮಾರ್ಗವು ನಿನ್ನಿಂದ ಹಿಂಸಿಸಲ್ಪಟ್ಟರೂ, ಭೋಗದಲ್ಲಿ ನಿಸ್ಪೃಹನಾಗಿರುವ ನನ್ನನ್ನು ಪೀಡಿಸಲಾರದು. ಅದರಿಂದ ಅದನ್ನೇ ಹೊಡೆ ಎಂದನು

ಆ ಬಳಿಕ ರಾಮನು – ಹಾಗೆಯೇ ಆಗಲೆಂದು ಒಪ್ಪಿಕೊಂಡನು. ಮತ್ತು ಪೂರ್ವಾಭಿಮುಖನಾಗಿ ನಿಂತು ಅಮೋಘವಾದ ಪತ್ರಿಯನ್ನೂ ಪ್ರಯೋಗಿಸಿದನು.

ಆ ರಾಮಸಾಯಕವು ಭಾರ್ಗವನಿಂದ ಭದ್ರವಾಗಿ ರಚಿಸಲ್ಪಟ್ಟುದಾಗಿದ್ದ ಸ್ವರ್ಗಮಾರ್ಗಕ್ಕೆ ಅತಿಕ್ರಮಿಸಲಸಾಧ್ಯವೆನಿಸಿದ ತಡೆಯಾಯಿತು. ಆ ಮೇಲೆ ರಾಘವನು – ಕ್ಷಮಿಸಬೇಕು ಎಂದು ಹೇಳುತ್ತಾ, ತಪೋನಿಧಿಯಾದ ಭಾರ್ಗವನ ಚರಣಗಳಿಗೆ ಅಭಿವಂದಿಸಿದನು. ಮಹಾಬಲಶಾಲಿಗಳಾದ ಧೀರರು ಶೌರ್ಯದಿಂದ ಹಗೆಗಳನ್ನು ಸೋಲಿಸಿದಮೇಲೆ, ಆ ಶತ್ರುಗಳ ವಿಷಯದಲ್ಲಿ ತಗ್ಗೋಣವೆಂಬುದು – ಜಯಶಾಲಿಗಳಿಗೆ ಹೇರಳವಾದ ಕೀರ್ತಿಯನ್ನೇ ಉಂಟುಮಾಡುವುದಲ್ಲವೆ? ಮತ್ತೆ ಪರಶುರಾಮನು – ದಾಶರಥಿ ರಾಮನನ್ನು ನೋಡಿ ಎಲೈ ದಯಾಳುವೆ! ತಾಯಿಯಿಂದ ಬಂದ ನನ್ನ ರಜೋಗುಣ ಸಂಬಂಧವನ್ನು ತೊಲಗಿಸಿ, ತಂದೆಯಿಂದ ಆಗತವಾಗಿರುವ ಸತ್ತ್ವಗುಣಪ್ರಧಾನವಾದ ಶಾಂತಿಯನ್ನು ನನಗೆ ಕಲ್ಪಿಸಿ ಇದ್ದೀಯೆ. ಅದರಿಂದ ಅನಿಂದಿತಫಲವಾದ ಮೋಕ್ಷದಲ್ಲಿ ಅಭಿಲಾಷೆಯುಳ್ಳ ಈ ನನಗೆ ನೀನು – ನಿಂದಿತಫಲದ ಸ್ವರ್ಗಮಾರ್ಗವನ್ನು ಭಂಗಪಡಿಸಿದ ನಿಗ್ರಹವೂ ಅನುಗ್ರಹವಾಗಿಯೇ ಪರಿಣಮಿಸಿ ಇದೆ. ಆದಕಾರಣ ನಾನು ಇನ್ನು ಹೊರಡುವೆನು; ದೇವಕಾರ್ಯಸಿದ್ಧಿಯನ್ನು ಸಂಪಾದಿಸಬೇಕೆಂಬ ನಿನ್ನ ಬಯಕೆಯು ನಿರ್ವಿಘ್ನವಾಗಿ ನೆರವೇರಲಿ ಎಂದು ಸೌಮಿತ್ರಿ ಸಹಿತನಾದ ಲಕ್ಷ್ಮಣಾಗ್ರಜನನ್ನು ಕುರಿತು ಹೇಳಿ, ಭಾರ್ಗವಮುನಿಯು ಅದೃಶ್ಯನಾದನು.

ಪರಶುರಾಮನು ತೆರಳಿದನು, ಜಯಶಾಲಿಯಾದ ರಾಮನನ್ನು ದಶರಥನು ಎರಡು ಕೈಗಳಿಂದಲೂ ಬಾಚಿ ತಬ್ಬಿದನು. ಅಪಾರವಾದ ವಾತ್ಸಲ್ಯವು ಹೆಚ್ಚಿ ಮೈದಡವಿ, ಮುಂದಲೆಯಲ್ಲಿ ಮುತ್ತಿಟ್ಟನು. ಮಗನನ್ನು ಮರಳಿ ಹುಟ್ಟಿದವನನ್ನಾಗಿ ನೆನೆದನು. ಅರಸಿಗೆ ಕ್ಷಣಕಾಲಮಾತ್ರ ದುಃಖವುಂಟಾಗಿ, ಒಡನೆ ಸಂತೋಷಲಾಭವಾದುದು – ಕಾಡ್ಗಿಚ್ಚಿನಿಂದ ಆಕ್ರಮಿಸಲ್ಪಟ್ಟು ಬೇಯತೊಡಗಿದ ತರುವಿಗೆ, ಕೂಡಲೆ ಹೇರಳವಾದ ಮಳೆಗರೆದಂತಿದ್ದಿತು.

ಬಳಿಕ ಶರ್ವನಿಗೆ ಸ್ವಲ್ಪ ಕಡಿಮೆಯೆನಿಸಿದ ಆ ದಶರಥ ಭೂಪಾಲನು ದಾರಿಯಲ್ಲಿ ಅಣಿಯಾಗಿದ್ದ ಗೂಡಾರಗಳಲ್ಲಿ ಮೂರಿರುಳನ್ನು ಕಳೆದು, ತನಗೆ ಸೊಸೆಯಾಗಿ ಬರುತ್ತಲಿರುವ ಮೈಥಿಲಿಯನ್ನು ನೋಡಬೇಕೆಂದು ತವಕಿಸುತ್ತ, ಮುಖಗಳನ್ನು ಒಟ್ಟಿಗೆ ಒತ್ತಾಗಿ ನಿಲ್ಲಿಸಿದುದರಿಂದ ಕನ್ನೈದಿಲೆಗಳಿಂದಲಂಕರಿಸಲ್ಪಟ್ಟವುಗಳಂತಿರುವ ಗವಾಕ್ಷಗಳಿಂದ ಬಲು ಅಂದವಾಗಿರುವ ಅಯೋಧ್ಯಾ ನಗರವನ್ನು ಪ್ರವೇಶಿಸಿದನು.

****

ಹನ್ನೆರಡನೆಯ ಅಧ್ಯಾಯ

ರಾವಣವಧೆ

ಸೂಚನೆ ॥ ರಾಮನನಟವಿಗೆ ಕಳುಪಿದ ।
ಭೂಮಿಪನಳಿದಂ ಗಡತ್ತಲಬಲಾಹರನಂ ॥
ರಾಮಂ ಕೊಂದೈತಂದಂ ।
ಕೋಮಲೆಯಿಂ ಹರಿ ಸುರಾರಿ ಸೌಮಿತ್ರಿಯರಿಂ ॥

ದಶರಥನು–ರೂಪ, ರಸ, ಗಂಧ, ಸ್ಪರ್ಶ, ಶಬ್ದಗಳೆಂಬ ವಿಷಯಗಳ ಸವಿಯನ್ನೆಲ್ಲ ಅನುಭವಿಸಿದುದಾಯಿತು, ಕಡೆಯ ಅವಸ್ಥೆಗೆ ಬಂದನು, ಕೊನೆಗಾಣುವುದು ಹತ್ತಿರವಾಯಿತು, ಆಗ ಹಣತೆಯ ಎಣ್ಣೆಯನ್ನೆಲ್ಲ ಹೀರಿ, ಬತ್ತಿಯ ತುದಿಗೆ ಬಂದು, ತಣ್ಣಗಾಗಲಿಕ್ಕೆ ಸಿದ್ಧವಾದ ಬೆಳಗಿನ ದೀವಿಗೆಯ ಬೆಳಕಿನಂತಿದ್ದನು. ಮುಪ್ಪು ಕೈಕೇಯಿಗೆ ಹೆದರಿರುವುದೆಂಬಂತೆ, ನರೆಯ ನೆಪದಿಂದ ದೊರೆಯ ಕಿವಿಯ ಹತ್ತಿರಕ್ಕೆ ಬಂದು, ರಾಜ್ಯಲಕ್ಷ್ಮಿಯನ್ನು ಬೇಗನೆ ರಾಮನಿಗೊಪ್ಪಿಸು ಎಂದು ಸೂಚಿಸುತ್ತಲಿದ್ದಿತು. ಆಮೇಲೆ ರಾಮನ ಪಟ್ಟಾಭಿಷೇಕದ ಸುದ್ದಿಯು ತೋಟದಲ್ಲಿನ ನೀರಿನ ಕಾಲುವೆಯು–ಒಂದು ಮರದಬುಡದ ಪಾದೆಯಿಂದ ಮತ್ತೊಂದು ತರುತಲದ ಆಲವಾಲಕ್ಕೆ ಹರಿಯುವಂತೆ, ಕರ್ಣಾಕರ್ಣಿಕವಾಗಿ ಪುರಜನರಲ್ಲೆಲ್ಲ ಹರಡಿ ಪ್ರತಿಯೊಬ್ಬರನ್ನೂ ಹರ್ಷಗೊಳಿಸುತ್ತಲಿದ್ದಿತು. ರಾಮನ ರಾಜ್ಯಾಭಿಷೇಕಕ್ಕೆ ದೊರೆಯು ಅಣಿಮಾಡಿಸುತ್ತಲಿರುವ ಸಂಭಾರಗಳನ್ನೂ, ಕ್ರೂರವಾದ ಮನೋಗತವುಳ್ಳ ಕೈಕೇಯಿಯು– ಶೋಕದಿಂದ ಬಿಸಿಯಾದ ದಶರಥನ ಕಣ್ಣೀರುಗಳಿಂದ ಮಲಿನಗಳಾಗುವಂತೆ ಮಾಡಿದಳು. ಮುಂಗಾರು ಮಳೆಗರೆದು ಒಳಗೆ ಸೆಕೆ ಹುಟ್ಟಲು ನೆಲವು – ತನ್ನಲ್ಲಿ ಅಡಗಿದ್ದ ಹಾವುಗಳನ್ನು ಬಿಲದ ಬಾಯಿಂದ ಹೊರಗೆ ಹೊರಡಿಸುವ ಹಾಗೆ, ಚಂಡಿಯಾದ ಕೈಕೇಯಿಯು – ಹಿಂದೆ ತನ್ನ ಗಂಡನು ಕೊಟ್ಟಿದ್ದು ಮನದೊಳಗವಿತುಕೊಂಡಿದ್ದ ಎರಡು ವರಗಳನ್ನೂ ಕಾರಿದಳು. ಅವುಗಳಲ್ಲೊಂದಕ್ಕೆ ಹದಿನಾಲ್ಕುವರ್ಷಗಳ ಕಾಲ ರಾಮನನ್ನು ಕಾಡಿಗೆ ಕಳುಹಿಸುವಂತೆ ಕೇಳಿದಳು, ಮತ್ತೊಂದಕ್ಕೆ ತನಗೆ ವೈಧವ್ಯಪ್ರಾಪ್ತಿ ಮಾತ್ರವೆ ಫಲವಾಗಿರುವ ರಾಜ್ಯಲಕ್ಷ್ಮಿಯನ್ನು ತನ್ನ ಮಗನಿಗಾಗಬೇಕೆಂದು ಬಯಸಿದಳು.

ರಾಮನಾದರೆ ತನ್ನ ತಂದೆಯು– "ನೀನು ರಾಜ್ಯವನ್ನು ಪರಿಗ್ರಹಿಸಬೇಕು" ಎಂದು ಮೊದಲು ತನಗೆ ವಾಗ್ದಾನದಿಂದ ಒಪ್ಪಿಸಿದ ರಾಜ್ಯವನ್ನು ಅಳುತ್ತಾ ಒಪ್ಪಿಕೊಂಡಿದ್ದನು. ಆ ಮೇಲೆ "ವನಕ್ಕೆ ಹೊರಡಬೇಕು" ಎಂದು ಹೇಳಿದ ಆತನ ಅನುಜ್ಞೆಯನ್ನು ಬಹು ಸಂತೋಷದಿಂದ ಅಂಗೀಕರಿಸಿದನು.

ಮೊದಲು ವಿವಾಹಮಂಗಳ ದೀಕ್ಷಾದುಕೂಲಗಳನ್ನು ಉಟ್ಟಿದ್ದು, ಈಗ ಅವುಗಳನ್ನು ಕಳೆದು ನಾರುಬಟ್ಟೆಗಳನ್ನುಡುತ್ತಿರುವಾಗಲೂ, ರಾಮನ ಮುಖರಾಗವು ಏಕರೂಪವಾಗಿದ್ದುದನ್ನು ನೋಡಿ ಪುರಜನರೆಲ್ಲ ಬಹಳವಾಗಿ ವಿಸ್ಮಯಪಡುತ್ತಲಿದ್ದರು. ದಾಶರಥಿಯು – ಸೀತಾಲಕ್ಷ್ಮಣರಿಂದ ಸಹಿತನಾಗಿ, ತಂದೆಯನ್ನು ಸತ್ಯಭ್ರಷ್ಟನನ್ನಾಗಿ ಮಾಡಬಾರದೆಂದು, ದಂಡಕಾರಣ್ಯವನ್ನು ಪ್ರವೇಶಿಸಿದನು. ಸಚ್ಚರಿತ್ರೆಯಿಂದ ಸಜ್ಜನರ ಮನಸ್ಸುಗಳನ್ನು ಹೊಕ್ಕನು.

ಅನಂತರದಲ್ಲಿ ದಶರಥನ – ಮೋಹದ ಮಗನ ಅಗಲಿಕೆಯನ್ನು ತಾಳಲಾರದೆ ಪೂರ್ವದಲ್ಲಿ ಅರಣ್ಯದೊಳಗೆ ತಾನು ಮಾಡಿದ ಕರ್ಮದಿಂದುಟಾದ ಮುನಿಶಾಪವನ್ನು ನೆನೆಸಿಕೊಂಡು, ತನ್ನ ಮರಣವನ್ನೇ ಅದಕ್ಕೆ ಪ್ರಾಯಶ್ಚಿತ್ತವನ್ನಾಗಿ ಭಾವಿಸಿದನು.

ಅದುವರೆಗೆ ಭರತಶತ್ರುಘ್ನರು ಸೋದರಮಾವನ ಮನೆಯಲ್ಲಿರುತ್ತಿದ್ದರು. ರಾಮಲಕ್ಷ್ಮಣರಾದರೆ ಕಾಡುಸೇರಿದರು, ದಶರಥನು ದಿವಂಗತನಾದನು. ಹೊಂಚುಹಾಕುತ್ತಲಿದ್ದ ಬಲಗಾರರಾದ ಹಗೆಗಳಿಗೆ ಸಂಚು ಸಿಕ್ಕಿದ್ದರಿಂದ ರಾಜ್ಯವು ಭೋಗ್ಯವಸ್ತುವಾಗುವ ಸಮಯ ಬಂದಿತು. ಆಗ ಅನಾಥರಾದ ಅಮಾತ್ಯರು – ಮಾತುಲನ ಮನೆಯೊಳಿದ್ದ ಭರತನನ್ನು ತಂದೆ ಸತ್ತ ಸುದ್ದಿಯು ತಿಳಿಯದಹಾಗೆ ಆಪ್ತಮಂತ್ರಿಗಳ ಮೂಲಕ ಕರೆತರಿಸಿದರು. ಭರತನು–ತನ್ನ ತಂದೆಗೆ ಆ ವಿಧವಾಗಿ ಒದಗಿದ ಆಪತ್ತನ್ನು ಕೇಳಿದನು. ಆಮೇಲೆ – ತನ್ನ ತಾಯಿಗೆ ಪರಾಙ್ಮುಖನಾದುದಲ್ಲದೆ, ರಾಜ್ಯಲಕ್ಷ್ಮಿಗೂ ವಿಮುಖನಾದನು. ಪರಿವಾರದೊಡನೆ ರಾಮದರ್ಶನಾರ್ಥವಾಗಿ ವನಕ್ಕೆ ಹೊರಟನು, ಕಾಡುಜನರಿಂದ ಸೀತಾಲಕ್ಷ್ಮಣಸಹಿತನಾದ ಅಣ್ಣನು ಇಳಿದುಕೊಂಡಿದ್ದ ಸ್ಥಳಗಳನ್ನು ಕೇಳಿ ತಿಳಿದು ನೋಡಿದನು. ಕಣ್ಣುಗಳಲ್ಲಿ ಧಾರಾಳವಾಗಿ ನೀರು ಸುರಿಸುತ್ತಾ ಮುಂದೆ ಹೊರಟನು. ಚಿತ್ರಕೂಟದ ಬಳಿಗೆ ಬಂದನು. ಅಣ್ಣನನ್ನು ಕಂಡನು. ತಂದೆಯ ಸ್ವರ್ಗಪ್ರಯಾಣವನ್ನು ಅರಿಕೆಮಾಡಿದನು. ಎಂಜಲಾಗದ ಐಶ್ವರ್ಯದಿಂದೊಡಗೂಡಿರುವ ರಾಜ್ಯಲಕ್ಷ್ಮಿಯನ್ನು ಪರಿಗ್ರಹಿಸಲು ದಯೆಮಾಡಬೇಕೆಂದು ಸೆರಗೊಡ್ಡಿ ಬೇಡಿದನು. ಭರತನು – ಸದಾಚಾರಸಂಪನ್ನನು. ಧರ್ಮಶಾಸ್ತ್ರವನ್ನು ಚೆನ್ನಾಗಿ ಬಲ್ಲವನು. ಅದರಿಂದಲೇ ರಾಜ್ಯಲಕ್ಷ್ಮಿಯನ್ನು ಅಣ್ಣನು ಪರಿಗ್ರಹಿಸುವುದಕ್ಕಿಂತ ಮೊದಲು ತಾನು ಸ್ವೀಕರಿಸಿದರೆ ಪರಿವೇತ್ತನಾಗುವೆನು ಎಂದು

ಹೆದರಿದ್ದನು. ಆದರೆ – ಸ್ವರ್ಗಗತನಾದ ತಂದೆಯ ಆಜ್ಞಾರೂಪವಾದ ಧರ್ಮಪಾಶದಿಂದ ಬದ್ಧನಾಗಿರುವ ಅಣ್ಣನ ಕಟ್ಟನ್ನು ಸಡಲಿಸಿ, ಅವನನ್ನು ಹೊರಗೆ ತೆಗಿಯಲಿಕ್ಕೆ ಭರತನ ಕೈಲಾಗಲಿಲ್ಲ. ಆಮೇಲೆ ರಾಜ್ಯಕ್ಕೆ ಅಧಿದೇವತೆಯಾಗಿರುವಂತೆ ಮಾಡಲು ಪಾದುಕೆಗಳನ್ನು ದಯಪಾಲಿಸಬೇಕೆಂದು ಅಣ್ಣನನ್ನು ಕೇಳಿಕೊಂಡನು.

ಹಾಗೆಯೇ ಆಗಲೆಂದು ಒಪ್ಪಿಕೊಂಡ ಅಣ್ಣನಿಂದ ಪಾದುಕೆಗಳನ್ನು ಪಡೆದು ಬಂದ ಭರತನು ಅಯೋಧ್ಯಾ ನಗರವನ್ನು ಪ್ರವೇಶಿಸಲೇ ಇಲ್ಲ. ನಂದಿಗ್ರಾಮದಲ್ಲಿಯೇ ವಾಸಮಾಡಿಕೊಂಡು, ಎರವಲಾಗಿ (ನ್ಯಾಸ) ಪಡೆದಿರುವಂತೆ ರಾಜ್ಯಲಕ್ಷ್ಮಿಯನ್ನು ಆಳುತ್ತಲಿದ್ದನಲ್ಲದೆ ಅನುಭವಿಸಲಿಲ್ಲ. ಅಣ್ಣನಲ್ಲಿ ದೃಢಭಕ್ತಿಯುಳ್ಳವನಾಗಿ, ಅಯೋಧ್ಯಾನಗರವನ್ನು ಹೊಗದೆ, ರಾಜ್ಯಲಕ್ಷ್ಮಿಯಲ್ಲಿ ಆಸೆಯನ್ನು ತೊರೆದು, ನಂದಿಗ್ರಾಮದಲ್ಲಿ ವನ್ಯವೃತ್ತಿಯಿಂದ ವಾಸಮಾಡುತ್ತಲಿದ್ದ ಭರತನು – ತನ್ನ ತಾಯಿ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಆಚರಿಸುವಂತಿದ್ದನು.

ಇತ್ತ ಬಹುಶಾಂತನಾಗಿರುವ ರಾಮನು – ಸೀತಾಲಕ್ಷ್ಮಣರಿಂದ ಸಹಿತನಾಗಿ, ಕಾಡಿನಲ್ಲಿ ಬೆಳೆದ ಗೆಡ್ಡೆಗೆಣಸುಗಳಿಂದ ಹೊಟ್ಟೆಯನ್ನು ಹೊರೆಯುತ್ತಾ, ತನ್ನ ಪೂರ್ವಿಕರಾದ ಇಕ್ಷ್ವಾಕುಕುಲದರಸರು ಮುಪ್ಪಿನಲ್ಲಿ ಆಚರಿಸುವ ವನವಾಸವ್ರತವನ್ನು ತಾನು ತಾರುಣ್ಯದಲ್ಲಿದ್ದುಕೊಂಡೇ ಆಚರಿಸುತ್ತಲಿದ್ದನು.

ಒಂದಾನೊಂದು ಸಮಯದಲ್ಲಿ ರಾಮನು – ಕಾಡಿನಲ್ಲಿ ಅಲೆದು ಬಳಲಿದ್ದುದರಿಂದ ಒತ್ತಾದ ನೆಳಲುಳ್ಳ ಒಂದು ಮರದ ಬುಡದಲ್ಲಿ ಸೀತೆಯ ತೊಡೆಯಮೇಲೆ ತಲೆಯನ್ನಿಟ್ಟು ಪವಳಿಸಿದ್ದನು.

ಇಂದ್ರಪುತ್ರನೆನಿಸಿದ ಕಾಕಾಸುರನೆಂಬುವವನು– ಕಾಗೆಯ ರೂಪದಿಂದ ಅಲ್ಲಿಗೆ ಬಂದು, ಜಾನಕಿಯ ಹೃದಯದೊಳಗೆ–ಸುಶೀಲ, ಪತಿಭಕ್ತಿ ಮುಂತಾದ ಸುಗುಣಗಳ ಜತೆಯಲ್ಲಿ ದೋಷವನ್ನು ಹುಡುಕುತ್ತಲಿರುವನೆಂಬಂತೆ, ಆಕೆಯ ಎದೆಯನ್ನು ಕೊಕ್ಕಿನಿಂದ ಕುಕ್ಕಿದನು. ವೀರ ಪತಿವ್ರತೆಯಾದ ಸೀತೆಯು – ಗಾಢನಿದ್ರೆಯಲ್ಲಿರುವ ತನ್ನ ಪತಿಗೆ ಎಚ್ಚರವಾಗುವುದೆಂದು ಅಂಜಿ, ಆ ಹಿಂಸೆಯನ್ನು ತಾಳಿದಳು, ಆ ಮಾಂಸಾಹಾರಿಯಾದ ವಾಯಸವು ಮಾಡಿದ ಗಾಯದಿಂದ ಉದಿರಿದ ಬಿಸಿಯಾದ ರಕ್ತ ಬಿಂದುಗಳು ರಾಮನ ಮುಖದಮೇಲೆ ಬಿದ್ದುವು. ಕೂಡಲೆ ಎಚ್ಚತ್ತನು. ಮಹಾಸರ್ಪದಂತೆ ಸಿಟ್ಟುಗೊಂಡನು, ಒಂದು ದರ್ಭೆಯ ಹುಲ್ಲಿನಲ್ಲಿ ಬ್ರಹ್ಮಾಸ್ತ್ರನನ್ನು ಅಭಿಮಂತ್ರಿಸಿ ಆ ಬಲಿಭೋಜನದಮೇಲೆ ಪ್ರಯೋಗಿಸಿದನು. ಆ ಚಿರಜೀವಿಯು – ಮೂಲೋಕದಲ್ಲಿಯೂ ಅಲೆದು, ಎಲ್ಲಿಯೂ ರಕ್ಷಕನನ್ನು ಕಾಣದೆ, ಮರಳಿ ರಾಮನನ್ನೇ ಮರೆಹೊಕ್ಕು, ತನ್ನ ಒಂದು ಕಣ್ಣನ್ನು ಮಾತ್ರ ವ್ಯರ್ಥವಾದುದನ್ನಾಗಿ ಮಾಡುವ ರಾಮಬಾಣಕ್ಕೆ ಬಲಿ ಕೊಟ್ಟು, ತನ್ನ ಆತ್ಮವನ್ನು ಉಳಿಸಿಕೊಂಡಿತು.

ತರುವಾಯ ರಾಘವನು – ತಾನು ವಾಸಮಾಡುತ್ತಲಿರುವ ಚಿತ್ರಕೂಟ ಪರ್ವತವು ಅಯೋಧ್ಯೆಗೆ ಹತ್ತಿರವಾಗಿರುವುದೆಂದೂ, ಆಗಾಗ ಭರತನೇ ಮುಂತಾದವರು ಬಂದು ತೊಂದರೆಗೊಳಿಸಬಹುದೆಂದೂ ಊಹಿಸಿ, ಆ ಸ್ಥಳವನ್ನು ಬಿಟ್ಟು ಹೊರಟನು. ಅಲ್ಲಿದ್ದ ಸಾರಂಗಗಳು ತಮ್ಮನ್ನು ಬಹುಮಮತೆಯಿಂದ ಸಾಕುತ್ತಲಿದ್ದ ರಾಮಾದಿಗಳ ಪ್ರಯಾಣದಿಂದ ಬಹಳವಾಗಿ ಕಳವಳಗೊಂಡುವು.

ಅಲ್ಲಿಂದ ಮುಂದೆ ರಾಮನು – ಅತಿಥಿಸತ್ಕಾರಗಳಿಗೆ ಅಣಿಯಾಗಿದ್ದ ತಪಸ್ವಿಗಳ ಆಯಾಯ ಪುಣ್ಯಾಶ್ರಮಗಳಲ್ಲಿ ಟಂಕಿಗಳನ್ನು ಮಾಡಿಕೊಂಡು ಸೂರ್ಯನು ಮೇಷಾದಿ ರಾಶಿಗಳನ್ನು ದಾಟಿ ಹೋಗುವಹಾಗೆ, ದಕ್ಷಿಣದೆಸೆಯನ್ನು ಕುರಿತು ಬಂದನು, ಆ ರಘುನಂದನನನ್ನು ಹಿಂಬಾಲಿಸುತ್ತಲಿರುವ ವೈದೇಹಿಯು – ಕೈಕೇಯಿಯು ಬಲಾತ್ಕಾರದಿಂದ ತಡೆದರೂ, ಅವಳನ್ನು ತಿರಸ್ಕರಿಸಿ, ಗುಣಾನುರಕ್ತಳಾಗಿ, ರಾಮನ ಬೆನ್ನಟ್ಟಿ ಬರುತ್ತಲಿರುವ ರೂಪವತಿಯಾದ ರಾಜ್ಯಲಕ್ಷ್ಮಿಯಂತೆ ಕಂಗೊಳಿಸುತ್ತಲಿದ್ದಳು. ಮತ್ತು – ಅತ್ರಿಮುನಿಯ ಧರ್ಮಪತ್ನಿಯಾದ ಅನಸೂಯೆಯು ಪ್ರೀತಿಯಿಂದ ಕೊಟ್ಟ ಪುಣ್ಯಗಂಧದ ಅಂಗರಾಗವನ್ನು ಪಡೆದು, ಅದರ ಸುವಾಸನೆಯಿಂದ ಆ ವನವನ್ನು, ಪರಿಮಳಭರದಿಂದ ಪುಷ್ಪಗಳನ್ನು ಬಿಟ್ಟು ಹಾರಿಬರುತ್ತಲಿರುವ ದುಂಬಿಗಳನ್ನುಳ್ಳುದ್ದನ್ನಾಗಿ ಮಾಡಿದಳು.

ಹಾಗೆಯೇ ಪ್ರಯಾಣ ಮಾಡುತ್ತಲಿರುವಲ್ಲಿ, ಸಂಜೆಯಹೊತ್ತಿನ ಮೋಡದಂತೆ ಮೈಬಣ್ಣವುಳ್ಳ ವಿರಾಧನೆಂಬ ಘೋರನಾದ ರಾಕ್ಷಸನು ಚಂದ್ರನನ್ನು ರಾಹುಗ್ರಹದಂತೆ, ರಾಮನ ಮಾರ್ಗವನ್ನು ತಡೆದುನಿಂತನು. ಕೂಡಲೆ, ಲೋಕಕಂಟಕನಾದ ಆ ರಕ್ಕಸನು– ರಾಮಲಕ್ಷ್ಮಣರ ನಡುವ ಇದ್ದ .ಅವನಿಜೆಯನ್ನು, ಶ್ರಾವಣ–ಭಾದ್ರಪದ ಮಾಸಗಳ ಮಧ್ಯದಲ್ಲಿ ವೃಷ್ಟಿಯನ್ನು, ವರ್ಷಪ್ರತಿಬಂಧದಂತೆ ಕೊಂಡೊಯ್ದನು. ಅದನ್ನು ಕಂಡ ಕಾಕುತ್‌ಸ್ಥರೀರ್ವರೂ ಆ ನಿಶಿಚರನನ್ನು ಸದೆಬಡಿದು, ಅಲ್ಲಿಯೇ ಕೆಡಹಿದರೆ ದುರ್ವಾಸನೆಯಿಂದ ಆಶ್ರಮಭೂಮಿಯನ್ನು ಕೆಡಿಸುವನೆಂದು ನೆಲದಲ್ಲಿ ಹೂಳಿಬಿಟ್ಟರು. ಮುಂದೆ ಪಯಣವನ್ನು ಬೆಳೆಸಿದರು. ಅಗಸ್ತ್ಯಮುನಿಯ ಸಂದರ್ಶನವನ್ನು ಮಾಡಿದರು, ಆತನ ಆಪ್ಪಣೆಯ ಪ್ರಕಾರ ಪಂಚವಟಿಯ ಪ್ರದೇಶಕ್ಕೆ ಬಂದರು. ಹಿಂದೆ ವಿಂಧ್ಯಪರ್ವತವು ತನ್ನ ಪೂರ್ವಸ್ಥಿತಿಯಲ್ಲಿಯೇ ನಿಂತಹಾಗೆ ಅಲ್ಲಿಯೇ ನೆಲಸಿದರು.

ಹೀಗೆ ಕೆಲವು ಕಾಲ ಕಳೆಯುತ್ತಿರಲು, ಒಂದುವೇಳೆ – ರಾವಣನ ತಂಗಿಯಾದ ಶೂರ್ಪಣಖೆಯೆಂಬೊಬ್ಬ ರಕ್ಕಸಿಯು – ಬಿಸಿಲಿನ ಬೇಗೆಯಿಂದ ಬೆಂದ ಹೆಣ್ಣು ಹಾವು ಚಂದನ ತರುವನ್ನು ಅರಸುವ ಹಾಗೆ, ಕಾಮಪರವಶಳಾಗಿ, ರಾಮನನ್ನು ಬಯಸುತ್ತ ಬಂದಳು. ರಾಘವನ ಸನ್ನಿಧಿಗೈತಂದಳು, ತನ್ನ ವಂಶಾವಳಿಯನ್ನರುಹಿದಳು,

ಸೀತೆಯ ಇದಿರಿಗೇ ತನ್ನನ್ನು ವರಿಸಬೇಕೆಂದು ಬೆಸಗೊಂಡಳು. ಕಾಮನು ಯಾರಿಗೂ ಹಿತನಲ್ಲ, ಮೇರೆಮೀರಿದರೆ ಕಾಮಿನಿಯರಿಗೆ ಕಾಲದೇಶಗಳನ್ನು ಮರೆಯಿಸುವನು.

ಗೂಳಿಯ ಹಿಳಿಲಿನಂತೆ ಹೆಗಲುಳ್ಳ ರಾಮನು, ವೃಷಸ್ಯಂತಿಯಾದ ಆ ಶೂರ್ಪಣಖಿಯನ್ನು ಕುರಿತು, ಎಲೆ ಬಾಲೆ! ನಾನು ಸಪತ್ನೀಕನಾಗಿದ್ದೇನೆ, ನೀನು ನನ್ನ ಅನುಜನನ್ನು ಭಜಿಸುವುದು ಮೇಲು, ತೆರಳು ಎಂದಾಜ್ಞಾಪಿಸಿದನು. ಆ ರಾಕ್ಷಸಿಯು– ಮೊದಲು ರಾಮನ ಬಳಿಗೆ ಬಂದು, ಅಲ್ಲಿಂದ ಲಕ್ಷ್ಮಣನನ್ನು ಸೇರಿ, ಆತನಿಂದಲೂ ತಿರಸ್ಕಾರವನ್ನು ಹೊಂದಿ, ಮರಳಿ ರಾಘವನಾಸರೆಗೈತಂದಳು. ಇದರಿಂದ, ಒಂದುಸಾರಿ ಒಂದು ದಡಕ್ಕೆ ಬಂದು, ಅಲ್ಲಿ ತಡೆಯನ್ನಾಂತು, ಪುನಃ ಬೇರೊಂದು ತೀರಕ್ಕೈದಿ, ಅಲ್ಲಿಯೂ ಅಡ್ಡಿಯಾಗಲು, ಮರಳ ಹಿಂದಿನ ಗಡ್ಡೆಗೆ ಬಂದು ಸೇರುವ ಹೊಳೆಯಂತಿದ್ದಳು. ಚಂದ್ರೋದಯವು – ಗಾಳಿಯಲುಗದಿರುವ ವೇಳೆಯಲ್ಲಿ ಕ್ಷಣಕಾಲ ಶಾಂತವಾಗಿದ್ದ ಕಡಲಿನ ಜಲವನ್ನು ಹೇಗೋ ಹಾಗೆ ಮೈಥಿಲಿಯ ನಗೆಯು – ಸ್ವಲ್ಪ ಹೊತ್ತು ಸೌಮ್ಯವಾದ ಆಕಾರದಿಂದಿದ್ದ ಆ ಯಾಮಿನೀಚರಿಯನ್ನು ಬಹು ವಿಕಾರಗೊಳಿಸಿತು. ಕೂಡಲೆ ಶೂರ್ಪಣಖೆಯು – ಜಾನಕಿಯನ್ನು ಕುರಿತು ಎಲೆ ನಾರಿ! ನನ್ನನ್ನು ನೋಡಿ ನೀನು ಮಾಡುವ ಪರಿಹಾಸವು, ಹುಲ್ಲೆಯು ಹುಲಿಯನ್ನು ಹೀಯಾಳಿಸುವಂತಿದೆ, ಒಳ್ಳೆಯದು, ಇದಕ್ಕೆ ತಕ್ಕ ಫಲವನ್ನು ಬೇಗನೆ ಅನುಭವಿಸಿ ಹೋಗುವೆ? ಎಂದು ಹೇಳಿ, ಭಯದಿಂದ ಬಿರುಬಿರನೆ ಓಡಿಬಂದು. ಭರ್ತನ ತೊಡೆಯಮೇಲೆ ಕುಳಿತಿರುವ ಸೀತೆಯನ್ನು, ತನ್ನ ಹೆಸರಿಗನುಗುಣವಾದ ಭಯಂಕರ ರೂಪವನ್ನಾಂತು ಸೆಳೆಯತೊಡಗಿದಳು.

ಪರ್ಣಶಾಲೆಯ ಹೊರಗಿದ್ದ ಲಕ್ಷ್ಮಣನು – ಮೊದಲು ಬಲು ಸೌಮ್ಯವಾದ ಆಕಾರದಿಂದ ಬಂದ ಆ ರಕ್ಕಸಿಯ ಕೋಕಿಲೆಯಂತೆ ಮೃದುಮಧುರವಾದ ಮಾತನ್ನೂ ಕೇಳಿದ್ದನು. ಈಗ ಹೆಣ್ಣು ನರಿಯಂತೆ ಕ್ರೂರವಾಗಿ ಅಬ್ಬರಿಸುತ್ತಲಿರುವುದನ್ನೂ ಕೇಳಿದನು. ಓಹೋ! ಇವಳು ವಿಕಾರದಿಂದ ನಿಜರೂಪವನ್ನು ಪಡೆದಳು ಎಂಬುದನ್ನೂ ಅರಿತನು. ತತ್‌ಕ್ಷಣವೇ ಕತ್ತಿಯನ್ನು ಹಿರಿದನು. ಎಲೆಮನೆಯನ್ನು ಹೊಕ್ಕನು. ಅವಳ ಕಿವಿಮೂಗುಗಳನ್ನು ಕಳೆದನು. ಮೊದಲಿಗಿಂತ ಮತ್ತಷ್ಟು ವಿಕಾರವಾಗಿ ಭೀಷಣಳೆನಿಸುವಂತೆ ಮಾಡಿದನು. ಒಡನೆ ವಕ್ರನಾಸಿಕೆಯ ರಕ್ಕಸಿಯು ಆಗಸಕ್ಕೆ ಹಾರಿದಳು. ಬಿದಿರಿನಂತೆ ಗೆಣ್ಣುಗಳುಳ್ಳ ತರ್ಜನಿಯನ್ನು ಬಾಗಿಸಿರುವ ಕರವನ್ನು ತೋರಿದಳು, ರಾಮಲಕ್ಷ್ಮಣರನ್ನು ಬೆದರಿಸಿದಳು. ಅಲ್ಲಿ ನಿಲ್ಲದೆ ನಿಮಿಷಮಾತ್ರದಲ್ಲಿ ಜನಸ್ಥಾನವೆಂಬ ಅರಣ್ಯಕ್ಕೆ ಬಂದಳು.

ಖರನೇ ಮುಂತಾದ ತನ್ನ ಸೋದರರಾಗಿರುವ ಅಸುರರಿಗೆ ಕಾಣಿಸಿಕೊಂಡಳು. ಪುರುಷಾಶನರಿಗೆ ಪ್ರಾರಂಭದಲ್ಲಿ ರಾಮನಿಂದುಂಟಾಗಿರುವ ಪರಿಭವವನ್ನು ಮುಖದಿಂದ ಅರಿಕೆ ಮಾಡಿದಳು. ಆ ಮಹಾರಾಕ್ಷಸರು – ರೋಷಪರವಶರಾಗಿ, ರಾಮನನ್ನಿದಿರಿಸಲಾಶೆಯಿಂದ ಬಿರುಬಿರನೆ ಹೊರಟರು. ಇದಿರಿಗೆ ಆ ಮೂಳಿಯನ್ನು ಕಂಡುದೇ ಅವರಿಗೆ ಅಮಂಗಳ ಶಕುನವಾಗಿದ್ದಿತು.

ಉದಾಯುಧರಾಗಿ ಆಯೋಧನಕ್ಕೈತರುವ ಆ ಅಧಮರಾದ ಯಾತುಧಾನರನ್ನು ವೀರ್ಯಧನನಾದ ರಾಘವನು ಕಂಡನು. ವಿಜಯದಾಶೆಯನ್ನು ಜ್ಯಾಸಹಿತವಾದ ಧನುಸ್ಸಿನಲ್ಲಿಟ್ಟನು. ಸೀತಾರಕ್ಷಣೆಯಲ್ಲಿ ಲಕ್ಷ್ಮಣನನ್ನು ನೇಮಿಸಿ ಹೊರಟನು. ರಾಮನೊಬ್ಬನೇ ಇದ್ದುದು ದಿಟ. ರಕ್ಕಸರು ಸಾವಿರಾರು ಮಂದಿಯೂ ಇದ್ದರು. ಆದರೆ– ರಣದಲ್ಲಿ ರಾಕ್ಷಸರೆಷ್ಟು ಮಂದಿಯಿದ್ದರೋ, ಅವರೊಳಗೆ ಪ್ರತಿಯೊಬ್ಬನಿಗೂ ಒಬ್ಬೊಬ್ಬ ರಾಮನಾಗಿ ಇದಿರಿಸಿ ನಿಂತಿರುವಂತೆ ಶರವರ್ಷದುರುಬೆಯಿಂದ ಕಾಣಿಸಿಕೊಂಡನು. ಮತ್ತು–ಸದೃಢನೂ, ರಣಧೀರನೂ ಆಗಿರುವ ರಾಮನು– ದುರ್ಜನನಾದ ದೂಷಣಾಸುರನ ದೂಷಣೆಯನ್ನು ಸಹಿಸಲಿಲ್ಲ. ಆ ದೂಷಣನನ್ನೂ, ಹಾಗೆಯೇ ಖರತ್ರಿಶಿರರನ್ನೂ, ಶರಗಳಿಂದ ಸದೆಬಡಿಯತೊಡಗಿದನು, ಕ್ರೂರವಾದ ರಾಮಶರಸರ್ಪಗಳು –ರಾಕ್ಷಸರ ರಕ್ತಲೇಪವಿಲ್ಲದಂತೆ ಮೊದಲೇ ಪ್ರಾಣವಾಯುಗಳನ್ನು ಪಾನಮಾಡಿದುವು, ಬಳಿಕ ಆ ರಕ್ಕಸರ ಮೈರಕುತವನ್ನಾದರೊ, ರಣಪಕ್ಷಿಗಳು ಕುಡಿದು ತಣಿದುವು. ರೌದ್ರಾವೇಶದಿಂದ ರಣರಂಗದಲ್ಲಿ ನಿಂತಿರುವ ರಾಮನ ಬಾಣಗಳ ಹೊಡೆತದಲ್ಲಿ, ಕುಣಿಯುತ್ತಲಿರುವ ತಲೆಯಿಲ್ಲದ ಮುಂಡಗಳು ಹೊರತು, ಮತ್ತಾವ ಪ್ರಾಣಿಯೂ ಇದಿರಿಗೆ ಕಾಣಬರಲಿಲ್ಲ. ಇಂತು ಆ ರಾಕ್ಷಸರ ಪಡೆಯು – ರಾಮಶರವೃಷ್ಟಿಯಲ್ಲಿ ಮುಳುಗಿ, ಆಗಸದೊಳಗೆ ನೆರೆದಿರುವ ರಣಹದ್ದುಗಳ ವಿಶಾಲವಾದ ನೆಳಲಿನಲ್ಲಿ ಮರಳಿ ಎಚ್ಚರವಿಲ್ಲದಂತೆ ಮೈಮರೆತು ಮಲಗಿತು. ತರುವಾಯ – ಮೊರದಂತೆ ಉಗುರುಗಳನ್ನುಳ್ಳವಳೆಂದು ಹೆಸರುವಾಸಿಯನ್ನು ಪಡೆದು ನಿಂತಿರುವ ಮೂಗುಹರಿಕಿಯಾದ ಶೂರ್ಪಣಖೆಯೊಬ್ಬಳೇ ಆ ಯುದ್ಧಭೂಮಿಯಲ್ಲಿ ಮಡಿದು ಬಿದ್ದಿರುವ ರಕ್ಕಸರ ಮರಣವಾರ್ತೆಯನ್ನು ರಾವಣನ ಬಳಿಗೆ ಕೊಂಡೊಯ್ಯಲು ದೂತಿಯಾಗಿದ್ದಳು.

ಬಳಿಕ ವೈಶ್ರವಣನ ತಮ್ಮನಾದ ರಾವಣನು – ತಂಗಿಗಾಗಿರುವ ಭಂಗದಿಂದಲೂ, ಆಪ್ತಬಂಧುಗಳಾದ ಖರಾದಿಗಳ ಮರಣದಿಂದಲೂ, ರಾಮನು ತನ್ನ ಹತ್ತು ನೆತ್ತಿಗಳಮೇಲೆಯೂ ಹೆಜ್ಜೆಯನ್ನೂರಿದನೆಂದು ಭಾವಿಸಿದನು. ಕೂಡಲೆ ರೋಷದಿಂದ ಉರಿದೆದ್ದನು; ಕಾಡಿಗೆ ಬಂದನು; ಮಾರೀಚನನ್ನು ಕಂಡನು; ಹೇಮಮಯವಾದ ಮೃಗರೂಪವನ್ನು ತಾಳಿಸಿದನು; ರಾಮನನ್ನು ವಂಚಿಸಿದನು; ಸೀತೆಯನ್ನು

ಅಪಹರಿಸಿದನು; ಜಟಾಯುವೆಂಬ ಗೃಧ್ರರಾಜನ ಕೋಟಲೆಯಿಂದ ಕ್ಷಣಕಾಲ ಅಡ್ಡಿಯನ್ನು ಪಡೆದಿದ್ದನು. ಆ ಪಕ್ಷಿಗೂ ಪಕ್ಷಪಾತವನ್ನೆಸಗಿದನು. ತನ್ನ ಪುರವನ್ನು ಕುರಿತು ತೆರಳಿದನು.

ಇತ್ತ ರಾಮಲಕ್ಷ್ಮಣರು – ಸೀತೆಯನ್ನು ಹುಡುಕುತ್ತಾ ಅಲ್ಲಲ್ಲಿ ಅಲೆದು ಬರುತ್ತಲಿದ್ದರು, ದಾರಿಯಲ್ಲಿ ರೆಕ್ಕೆಗಳು ಹರಿದು ಕುಟುಕುಜೀವದಿಂದಿದ್ದ ಹಕ್ಕಿಯನ್ನು ಕಂಡರು. ಆ ಪಕ್ಷಿರಾಜನು – ದಶರಥನಲ್ಲಿದ್ದ ಪ್ರೀತಿಯಿಂದ ಕಂಠಗತವಾದ ಪ್ರಾಣಗಳಿರುವಾಗಲೇ, ಸೀತೆಯನ್ನು ರಾವಣನು ಅಪಹರಿಸಿದನೆಂದೂ, ತಾನು ಮಾಡಿದ ಸಾಹಸವನ್ನು ತನ್ನ ಮೆಯ್ಯ ಗಾಯದಿಂದ ತಿಳಿಯತಕ್ಕುದೆಂದೂ, ತೊದಲುನುಡಿಗಳಿಂದ ತಿಳಿಸಿ, ಮಿತ್ರಋಣದಿಂದಲೂ, ಪ್ರಾಣಗಳಿಂದಲೂ ಬಿಡಲ್ಪಟ್ಟನು. ರಾಮಲಕ್ಷ್ಮಣರು ಧರ್ಮದಿಂದ ತಂದೆಯಂತಿರುವ ಜಟಾಯುವಿನ ಮರಣದಿಂದ ನೂತನವಾದ ಪಿತೃಶೋಕದಂತೆ ಆ ದುಃಖವನ್ನೂ ಅನುಭವಿಸಿ, ತಂದೆಗೆ ಹೇಗೋ ಹಾಗೆ, ಆ ಗೃಧ್ರರಾಜನಿಗೂ ಅಗ್ನಿಸಂಸ್ಕಾರವೇ ಮೊದಲಾದ ಉತ್ತರಕ್ರಿಯೆಗಳನ್ನೆಲ್ಲ ಕ್ರಮವಾಗಿ ಆಚರಿಸಿದರು. ಅಲ್ಲಿಂದ ಮುಂದೆ ಬರುತ್ತಾ, ಇದಿರಿಸಿದ ಕಬಂಧನನ್ನು ವಧಿಸಿದರು, ಶಾಪದಿಂದ ಬಿಡುಗಡೆಯನ್ನು ಹೊಂದಿ ಗಂಧರ್ವದೇಹವನ್ನು ಪಡೆದ ಆ ವಿರಾಧನ ಸದುಪದೇಶದಿಂದ ಸಮಾನವ್ಯಸನಿಯಾಗಿರುವ ಕಪಿವರನಾದ ಸುಗ್ರೀವನೊಡನೆ ಮಾರುತಿಯಿಂದ ರಾಮನಿಗೆ ಸಖ್ಯವು ಬೆಳೆಯಿತು.

ಬಳಿಕ ಮಹಾವೀರನಾದ ರಾಮನು – ಸುಗ್ರೀವನ ಅಣ್ಣನಾದ ವಾಲಿಯನ್ನು ಕೊಂದನು. ಬಹುಕಾಲದಿಂದ ಬಯಸುತ್ತಲಿದ್ದ ಅವನ ಸ್ಥಾನದಲ್ಲಿ, ಸುಗ್ರೀವನನ್ನು, ಒಂದು ಧಾತುವಿನೆಡೆಯಲ್ಲಿ ಬೇರೊಂದು ಧಾತುವನ್ನು ಆದೇಶಿಸುವ ಹಾಗೆ, ವಾಲಿಕಾರ್ಯವನ್ನು ನೆರವೇರಿಸುವ ರೀತಿಯಲ್ಲಿ ನೆಲೆಗೊಳಿಸಿದನು. ಕೂಡಲೆ ಕಪಿರಾಜನಾದ ಸುಗ್ರೀವನು ಸೀತೆಯನ್ನು ಹುಡುಕಿ, ಸುದ್ದಿಯನ್ನು ತರುವಂತೆ, ನಾಲ್ಕು ದಿಕ್ಕಿಗೂ ದೂತರನ್ನು ಅಟ್ಟಿದನು, ಜಾನಕಿಯ ಅಗಲಿಕೆಯಿಂದ ಆರ್ತನಾಗಿರುವ ರಾಮನ ಹಂಬಲಿಕೆಗಳಂತೆ, ಹರಿಗಳೆಲ್ಲ ಎಲ್ಲೆಲ್ಲಿಯೂ ಅಲೆಯತೊಡಗಿದರು. ಅವರೊಳಗೆ ಅಂಗದ, ಹನುಮ, ನೀಲ, ನಳ, ಜಾಂಬವಂತನೇ ಮೊದಲಾದವರು – ತೆಂಕಣ ಕಡಲತಡಿಗೈತಂದರು, ಜಟಾಯುವಿನ ಅಣ್ಣನಾದ ಸಂಪಾತಿಯಿಂದ ಸೀತೆಯು ರಾವಣನ ಮನೆಯಲ್ಲಿರುವಳೆಂಬ ಸುದ್ದಿಯು ತಿಳಿಯಿತು. ಜಾಂಬವನ ಪ್ರೋತ್ಸಾಹದಿಂದ ಮಾರುತಿಯು–ಮಮತೆಯನ್ನು ತೊರೆದ ಯೋಗಿಯು ಸಂಸಾರವನ್ನು ದಾಟುವಂತೆ, ಸಾಗರವನ್ನು ದಾಟಿದನು. ಲಂಕೆಯನ್ನು ಹೊಕ್ಕನು. ರಾವಣಾಲಯದ ಅಶೋಕವನಕ್ಕೆ ಬಂದನು. ವಿಷದ ಮೂಲಿಕೆಗಳಿಂದ ಆವರಿಸಲ್ಪಟ್ಟಿರುವ ಸಂಜೀವಿನೀಲತೆಯಂತೆ, ರಕ್ಕಸರಿಂದ ಬಳಸಲ್ಪಟ್ಟಿರುವ ಸೀತೆಯನ್ನು

ಕಂಡನು. ತಾನು ರಾಮದೂತನೆನ್ನಲಿಕ್ಕೂ, ರಾಮನು ಕುಶಲದಿಂದಿರುವನೆನ್ನಲಿಕ್ಕೂ ಜ್ಞಾಪಕವಾಗಿ, ಜಾನಕಿಯ ಆನಂದಬಾಷ್ಪಬಿಂದುಗಳಿಂದ ಇದಿರುಗೊಳ್ಳಲ್ಪಡುವಂತಿರುವ ರಾಮನಾಮಾಂಕಿತದ ಮುದ್ರಿಕೆಯನ್ನು ಆಕೆಗೆ ಕೊಟ್ಟನು. ಪ್ರಿಯವಲ್ಲಭನ ಕುಶಲವೃತ್ತಾಂತಗಳಿಂದ ಆಕೆಯನ್ನು ಸುಖಗೊಳಿಸಿದನು.

ಅಕ್ಷಕುಮಾರನನ್ನು ಕೊಂದು ಕೊಬ್ಬಿದನು, ಹಗೆಯಾದ ಇಂದ್ರಾರಿಯ ನಿಗ್ರಹವನ್ನು ಕ್ಷಣಕಾಲಮಾತ್ರ ಸಹಿಸಿದ್ದು, ಲಂಕಾ ನಗರಿಯನ್ನು ಉರಿಸಿದನು. ಅದರಿಂದ ಕೃತಕೃತ್ಯನಾದ ಮಾರುತಿಯು ಹಿಂದಿರುಗಿದನು, ಸೀತೆಯು ಕೊಟ್ಟಿದ್ದ ಚೂಡಾರತ್ನವನ್ನು ಶ್ರೀರಾಮನಿಗೆ ಒಪ್ಪಿಸಿದನು, ಜಾನಕಿಯ ಹೃದಯವೇ ಮೂರ್ತಿವತ್ತಾಗಿ ರಾಮದರ್ಶನ ಕುತೂಹಲದಿಂದ ಇದಿರಿಗೆ ಬಂದಂತಿದ್ದಿತು. ರಾಮನಾ ಚೂಡಾರತ್ನವನ್ನು ತನ್ನ ಎದೆಯ ಮೇಲಿಟ್ಟುಕೊಂಡನು, ಕೂಡಲೇ ಅರೆಮುಗಿದ ಕಣ್ಣುಗಳುಳ್ಳವ ನಾದನು. ಪ್ರಿಯಪತ್ನಿಯನ್ನೇ ಪ್ರತ್ಯಕ್ಷದಲ್ಲಿ ಕಂಡವನಂತೆ ಆನಂದವನ್ನು ಹೊಂದಿದನು. ಮತ್ತು – ಪ್ರಿಯಳ ಸುದ್ದಿಯನ್ನೆಲ್ಲ ಕಪಿವರನ ಮೂಲಕವೇ ಕೇಳಿದನು. ಜಾನಕಿಯನ್ನು ಪಡೆಯಬೇಕೆಂಬ ಪ್ರಬಲವಾದ ಕುತೂಹಲದಿಂದ ಲಂಕೆಯನ್ನು ಬಳಸಿರುವ ಮಹೋದಧಿಯನ್ನು ಕಂದಕದಂತೆ ಅತ್ಯಲ್ಪವಾದುದನ್ನಾಗಿ ಭಾವಿಸಿದನು. ಅರಿಯನ್ನು ಇರಿಯಲು ಪ್ರಯಾಣವನ್ನು ಬೆಳಸಿದನು, ರಾಮನನ್ನು ಹಿಂಬಾಲಿಸಿದ ಕಪಿಗಳ ಪಡೆಯು – ನೆಲದಲ್ಲಿ ಮಾತ್ರವಲ್ಲದೆ ಆಗಸದಲ್ಲಿಯ ಎಡೆಸಾಲದೆ ಬಲು ತೊಂದರೆಯಿಂದ ನಡೆಯುತ್ತಲಿದ್ದಿತು. ಕಡಲತಡಿಗೈತಂದು ಬೀಡುಬಿಟ್ಟಿತು. ರಾವಣನ ರಾಜ್ಯಲಕ್ಷ್ಮಿಯು ವಿಭೀಷಣನ ಬುದ್ಧಿಯನ್ನು ಹೊಕ್ಕಳು, ಪ್ರೀತಿಯಿಂದ ಪ್ರೇರಿಸಿದಳು. 'ಕೇಡುಗಾಲಕ್ಕೆ ದುರ್ಬುದ್ಧಿ' ಎಂಬಂತೆ ರಾವಣನ ದುರ್ಮತಿಯು ವಿಭೀಷಣನ ಹಿತೋಕ್ತಿಗೆ ಎಡೆಗುಡಲಿಲ್ಲ. ಕಾಮಬಾಣದಿಂದ ಸರಂಧ್ರವಾಗಿದ್ದ ದಶಗಳನ ಚಿತ್ತದಲ್ಲಿ ವಿಭೀಷಣನ ಹಿತೋಪದೇಶಾಮೃತವು ನಿಲ್ಲದೆ ಹೋಯಿತು, ಅಣ್ಣನಿಂದ ತಿರಸ್ಕಾರವನ್ನು ಹೊಂದಿದನು. ಅಲ್ಲಿಂದೆದ್ದನು. ಪಾರಾವಾರದ ತೀರದಲ್ಲಿ ನೆಲಸಿರುವ ಸರ್ವಲೋಕಶರಣ್ಯನಾದ ರಘುನಂದನ ನನ್ನು ಅಭಯಾರ್ಥಿಯಾಗಿ ಮರೆಹೊಕ್ಕನು.

ಶರಣಾಗತವತ್ಸಲನಾದ ರಾಘವನು – ರಾಕ್ಷಸಸಾಮ್ರಾಜ್ಯವನ್ನು ಆಗಲೇ ಅಲ್ಲಿಯೇ ವಿಭೀಷಣನಿಗೊಪ್ಪಿಸಿದನು. ಸಕಾಲದಲ್ಲಿ ವಿನಿಯೋಗಿಸಿದ ಸುನೀತಿಯೆ ಸರಸವಾಗಿ ಸಫಲವಾಗುವುದು. ಬಳಿಕ ರಾಮಚಂದ್ರನು – ಲವಣೋದಧಿಯಲ್ಲಿ ಕಪಿಗಳಿಂದ ಸೇತುವೆಯನ್ನು ಕಟ್ಟಿಸಿದನು, ನಾರಾಯಣನು ಪವಳಿಸಲೆಂದು ರಸಾತಲದಿಂದ ಆದಿಶೇಷನು ಮೇಲಕ್ಕೆ ತೇಲಿ ಬಂದಿರುವನೆಂಬಂತೆ ಕಂಗೊಳಿಸುತ್ತಲಿದ್ದಿತು.

ತರುವಾಯ– ಆ ಸೇತುವೆಯ ಹಾದಿಯಿಂದಲೆ ಕಪಿಗಳ ಪಡೆಯೊಡನೆ ಜಲನಿಧಿಯನ್ನು ದಾಟಿದನು, ಹರಿಸೇನೆಯು ರಾಮಾಜ್ಞೆಯಿಂದ ತತ್ಕ್ಷಣದಲ್ಲಿಯೇ

ಲಂಕೆಯನ್ನು ಮುತ್ತಿತು. ರಾವಣನ ರಾಜಧಾನಿಗೆ ಬೇರೊಂದು ಚಿನ್ನದ ಕೋಟೆಯನ್ನು ಕಟ್ಟಿರುವಂತೆ ಕಾಣಿಸಿತು. ಕಪಿ–ರಾಕ್ಷಸರಿಗೆ ಘೋರವಾದ ರಣವು ಆರಂಭವಾಯಿತು, ಸೇನಾಕಲಕಲವು ಒಂದುಕಡೆ ರಾಘವನಿಗೆ ಜಯವಾಗಲೆಂದೂ, ಮತ್ತೊಂದುಕಡೆ ರಾವಣನಿಗೆ ಜಯವಾಗಲೆಂದೂ ನಾಲ್ಕು ದಿಕ್ಕಿನಲ್ಲಿಯೂ ಘೋಷಿಸುತ್ತಲಿದ್ದಿತು. ಆ ಮಹಾಯುದ್ಧದಲ್ಲಿ– ಮರಗಳ ಪೆಟ್ಟಿನಿಂದ ಪರಿಘಾಯುಧಗಳು ತುಂಡುತುಂಡಾಗುತ್ತಲಿದ್ದುವು. ಬಂಡೆಗಳ ಪೆಟ್ಟಿನಿಂದ ಮುದ್ಗರಗಳು ಪುಡಿಪುಡಿಯಾಗಿ ಬೀಳುತ್ತಲಿದ್ದುವು. ಕಪಿಗಳುಗುರಿನ ಗಾಯಗಳು ಶಸ್ತ್ರಪಾತಗಳನ್ನು ಮೀರಿದ್ದುವು. ಬೆಟ್ಟಗಳ ಹೊಡೆತದಿಂದ ಆನೆಗಳು ಉರುಳುತ್ತಲಿದ್ದುವು.

ಇಂತಹ ಮಹಾಘೋರ ಸಮರವು ನಡೆಯುತ್ತಲಿರುವಾಗ ವಿದ್ಯುಜ್ಜಿಹ್ವನೆಂಬ ಕ್ರೂರರಾಕ್ಷಸನು – ಕತ್ತರಿಸಿ ತುಂಡಾಗಿರುವ ರಾಮನ ಶಿರವನ್ನು ಕೊಂಡುಹೋಗಿ ಸೀತೆಯ ಮುಂದಿಟ್ಟು ಹೊರಟುಹೋದನು. ಜಾನಕಿಯ ಜೀವಿತವು ತತ್‌ಕ್ಷಣವೇ ಹಾರಿಹೋದಂತಾಯಿತು. ಕಣ್ಣುಗಳು ಮುಚ್ಚಿಹೋದುವು. ಹಾ! ರಾಮಾ ಎಂದು ಎರಡು ಕೈಗಳನ್ನೂ ಆ ತಲೆಯಮೇಲೆ ಹಾಕಿ, ನೆಲಮೊಗನಾಗಿ ಮೈಮರೆತು ಮಲಗಿದಳು, ಕಣ್ಣೀರಿನ ಕಾಲುವೆಯಲ್ಲಿ ಆ ರುಂಡವು ಮುಳುಗಿತು. ರಾಮನ ಯುದ್ಧಫಲವು ಕೊನೆಗಾಣುವ ಸಮಯವು ಬಂದಿತು. ಸೀತೆಯಲ್ಲಿ ಪಕ್ಷಪಾತಿನಿಯಾಗಿದ್ದ ವಿಭೀಷಣನ ಮಗಳಾದ ತ್ರಿಜಟೆಯೆಂಬುವವಳು–ಎಲೆ ತಾಯೆ ಇದು ವಿದ್ಯುಜ್ಜಿಹ್ವನ ಮಾಯಾಕೌಶಲವಲ್ಲದೆ ಬೇರಲ್ಲ ಎಂದು ಹೇಳಿ, ಸೀತೆಯನ್ನು ಬದುಕಿಸಿದಳು. ವೈದೇಹಿಯು – ತನ್ನ ಪತಿಯು ಸುಖವಾಗಿ ಜೀವಿಸಿರುವನೆಂದರಿತು, ಪ್ರಾಣದೊಂದಿಗೆ ಎಚ್ಚತ್ತರೂ, ರಾಮನು ಸತ್ತನೆಂಬುದನ್ನು ತಿಳಿದೂ ಮೊದಲು ಬದುಕಿದ್ದೆನಲ್ಲಾ ಎಂದು ಬಲು ನಾಚಿಕೆಗೊಂಡಳು.

ಇತ್ತ ರಣಭೂಮಿಯಲ್ಲಿ – ಗರುಡನು ಬರುವವರೆಗೂ ರಾಮಲಕ್ಷ್ಮಣರಿಗೆ ಮೇಘನಾದನ ಸರ್ಪಾಸ್ತ್ರದಿಂದ ಉಂಟಾಗಿದ್ದ ಕ್ಷಣಕಾಲದ ಮೂರ್ಛೆಯು ಸ್ವಪ್ನದಲ್ಲಿ ನಡೆದಂತೆ ಇದ್ದಿತು. ರಾವಣನೂ ರಣಕೈತಂದನು, ಶಕ್ತ್ಯಾಯುಧದಿಂದ ಸೌಮಿತ್ರಿಯ ಎದೆಗಿಟ್ಟನು. ಅದರಿಂದ ರಾಮನು – ಪೆಟ್ಟು ಬೀಳದಿದ್ದರೂ ತನ್ನ ಎದೆಯ ಒಡೆದುಹೋದಂತೆ ಶೋಕಸಾಗರದಲ್ಲಿ ಮುಳುಗಿದನು. ಮಾರುತಿಯು – ನಿಮಿಷಮಾತ್ರದಲ್ಲಿ ಸಂಜೀವಿನಿಯನ್ನು ತಂದನು, ಲಕ್ಷ್ಮಣನು ವ್ಯಥೆಯನ್ನು ತೊರೆದೆದ್ದನು. ಕೂಡಲೆ ಮರಳಿ ಲಂಕಾ ರಾಕ್ಷಸನಾರಿಯರ ಪ್ರಲಾಪೋದಯಕ್ಕೆ ಶರಗಳಿಂದ ಆಚಾರ್ಯನ ಕರ್ಮವನ್ನು ಮಾಡಿದನು. ಮತ್ತು – ಶರತ್ಕಾಲವು ಮೇಘದ ನಾದವನ್ನೂ, ಇಂದ್ರಚಾಪವನ್ನೂ ಹೇಗೋಹಾಗೆ, ಮೇಘನಾದನ ನಾದವನ್ನು ಅವನ ಚಾಪದೊಂದಿಗೆ ಸ್ವಲ್ಪವೂ ಉಳಿಯದಂತೆ ಕೊನೆಗಾಣಿಸಿದನು.

ಕಪಿಸಾರ್ವಭೌಮನಾದ ಸುಗ್ರೀವನು – ರಣಕ್ಕೈತಂದ ಕುಂಭಕರ್ಣನಿಗೆ ಅವನ ತಂಗಿಗೆ ಸಮಾನವಾದ ಸಂಪದವನ್ನಿತ್ತನು. ಆಗಲಾತನು – ಒಂದು ಭಾಗದಲ್ಲಿ ಉಳಿಯ ಪೆಟ್ಟನ್ನು ತಿಂದಿರುವ ಮಣಿಶಿಲೆಯನ್ನೊಳಗೊಂಡ ದೊಡ್ಡಬೆಟ್ಟದಂತೆ ಬೆಳಗುತ್ತಾ ರಾಮನನ್ನು ಇದಿರಿಸಿದನು. "ಛೇ! ಸುಖವಾಗಿ ಪವಳಿಸಿದ್ದ ನಿನ್ನನ್ನು ನಿಮ್ಮಣ್ಣನು ಅಕಾಲದಲ್ಲಿ ಎಬ್ಬಿಸಿದುದು ಬಹಳ ಅನ್ಯಾಯ, ಮತ್ತು ವ್ಯರ್ಥ?" ಎಂದು ಕನಿಕರದಿಂದಲೋ ಎಂಬಂತೆ ರಾಮಬಾಣಗಳು–ಅವನನ್ನು ಮರಳಿ ಯಾರಿಂದಲೂ ಎಚ್ಚರಗೊಳಿಸಲಾಗದ ದೀರ್ಘನಿದ್ರೆಯಲ್ಲಿ ಮಲಗಿಸಿದುವು. ಆಗ ವಾನರಕೋಟಿಯಲ್ಲಿ ಬಂದು ಬೀಳುತ್ತಲಿರುವ ರಕ್ಕಸರದಳಕ್ಕೆ, ರಾಕ್ಷಸರಕ್ತಪ್ರವಾಹದಲ್ಲಿ ಬಂದು ಬೀಳುತ್ತಲಿರುವ ಸೇನಾಧೂಳಿಯ ಪಾಡುಂಟಾಯಿತು.

ಬಲವೆಲ್ಲ ಬರಿದಾಯಿತು, ಬವರಕ್ಕೆ ತಕ್ಕವರಿಲ್ಲವಾದರು. ಪೌಲಸ್ತ್ಯನೇ ಮರಳಿ ಮನೆಯಿಂದ ಕಾಳಗಕ್ಕೈತಂದನು. ಈಗಲೀ ಜಗತ್ತು ಅರಾವಣವಾಗಬೇಕು, ಅಥವಾ ಅರಾಮವಾಗಬೇಕು ಎಂಬುದೇ ಅವನ ದೃಢಸಂಕಲ್ಪವಾಗಿದ್ದಿತು. ಸಮರಾಂಗಣದಲ್ಲಿ ರಾಮನು ಪದಾತಿಯಾಗಿಯೂ, ರಾವಣನು ರಥಿಕನಾಗಿಯೂ ನಿಂತರು. ಹರಿಹಯನಿಗೆ ಸೈರಿಸಲಿಲ್ಲ. ಕೂಡಲೆ ಹರಿದಶ್ವಯುಗ್ಮದಿಂದೊಡಗೂಡಿದ ತನ್ನ ರಥವನ್ನು ರಾಘವನಿಗೆ ಕಳುಹಿಸಿಕೊಟ್ಟನು. ವ್ಯೋಮಗಂಗೆಯ ಮೇಲಣ ಗಾಳಿಯಿಂದ ಧ್ವಜಪಟವು ಅಲುಗುತ್ತಲಿದ್ದಿತು, ರಥವು ರಣಭೂಮಿಗಿಳಿಯಿತು, ರಾಘವನು – ಇಂದ್ರಸಾರಥಿಯ ತೋಳನ್ನವಲಂಬಿಸಿ, ಜಯವನ್ನು ಸೂಚಿಸುತ್ತಲಿರುವ ಆ ಸ್ಯಂದನವನ್ನೇರಿದನು. ಅಸುರಾಸ್ತ್ರಪಾಶವು – ಎಲ್ಲಿ ಕನ್ನೈದಿಲೆಯ ಹೂವಿನ ರೇಕಿನಂತೆ ಭಂಗವನ್ನು ಪಡೆಯುತ್ತದೆಯೋ, ಅಂತಹ ಮಹೇಂದ್ರನ ವಜ್ರಕವಚವನ್ನು ಮಾತಲಿಯು ರಾಮನಿಗೆ ತೊಡಿಸಿದನು.

ಬಹುಕಾಲಕ್ಕೆ ಒಬ್ಬರನ್ನೊಬ್ಬರು ಇದಿರ್ಗೊಂಡು, ತಂತಮ್ಮ ಪರಾಕ್ರಮವನ್ನು ತೋರುವ ಅವಸರವು ಒದಗಿತು. ಇದರಿಂದ ರಾಮರಾವಣ ಯುದ್ಧವು ಸಫಲತೆಯನ್ನು ಪಡೆಯುವಂತಿದ್ದಿತು. ದಶಗಳನಿಗೆ ಅದುವರೆಗೆ ಮಂದಿಯೆಲ್ಲ ಸಂದುಹೋಗಿದ್ದಿತು. ಏಕಾಂಗಿಯಾಗಿಯೇ ನಿಂತಿದ್ದನು, ಆದರೂ–ತಲೆಗಳೂ, ತೋಳುಗಳೊ, ಕಾಲುಗಳೂ ಹೇರಳವಾಗಿದ್ದುದರಿಂದ ತನ್ನ ತಾಯಿಯ ಮನೆಯಲ್ಲಿ ಬಂಧುಬಳಗಗಳಿಂದ ಕೂಡಿರುವವನಂತಿದ್ದನು. ರಾವಣನು ಸಾಧಾರಣನಲ್ಲ, ಲೋಕಪಾಲರನ್ನೆಲ್ಲ ಗೆದ್ದವನು. ತನ್ನ ಶಿರಗಳಿಂದ ಶಂಕರನನ್ನು ಆರಾಧಿಸಿದವನು. ಕೈಲಾಸವನ್ನೂ ಕೈಗಳಿಂದಲ್ಲಾಡಿಸಿ, ಶೌರ್ಯದಿಂದ ಮೆರೆದವನು. ಇಂಥವನನ್ನು ನೋಡಿ, ರಾಮನು – ಗುಣಪಕ್ಷಪಾತಿಯಾದುದರಿಂದ, ಹಗೆಯಾಗಿದ್ದರೂ ತನ್ನ ಮನದೊಳಗೆ ಬಹಳವಾಗಿ ಕೊಂಡಾಡಿದನು. ತನ್ನವರನ್ನೆಲ್ಲ ಇರಿದುರುಳಿಸಿ, ಹಗೆತನವನ್ನು ಕಾರುತ್ತಲಿರುವ

ರಾಮನನ್ನು ಕಂಡಕೂಡಲೆ ರಾವಣನಿಗೆ ಹೇರಳವಾದ ಸಿಟ್ಟುಹತ್ತಿತು. ಸೀತಾಲಾಭವನ್ನು ಸೂಚಿಸುತ್ತ ಅದಿರುತ್ತಲಿರುವ ರಾಮನ ಬಲದೋಳಿನಲ್ಲಿ ಕೂರಂಬುಗಳನ್ನು ನೆಟ್ಟನು. ದಾಶರಥಿಯ – ದಶಗಳನ ಕೃತ್ಯದಿಂದ ಮೃತ್ಯುವಿನಂತೆ ರೌದ್ರಾವೇಶಪರನಾಗಿ ಆಶುಗವನ್ನೆಸೆದನು. ಆ ಅಸ್ತ್ರವು – ಆಶುಗಮನದಿಂದ ದಶವದನನ ಹೃದಯವನ್ನು ಭೇದಿಸಿ, ಪಾತಾಳವಾಸಿಗಳಿಗೂ ಪ್ರಿಯವನ್ನು ತಿಳಿಸಲೆಳಸಿರುವುದೆಂಬಂತೆ ಭೂಮಿಯನ್ನು ಹೊಕ್ಕಿತು. ಮಾತಿನಿಂದ ಮಾತನ್ನೂ, ಶರದಿಂದ ಶರವನ್ನೂ ಕತ್ತರಿಸುತ್ತ, ಮುಯ್ಯಿಗೆ ಮುಯ್ಯನ್ನು ಮಾಡಿ ತೋರುತ್ತಲಿರುವ ಆ ರಾಮರಾವಣರಿಗೆ, ಸಭಾಮುಖದಲ್ಲಿ ಕುಳಿತು, ಕೋಟಿಪ್ರತಿಕೋಟಿಗಳನ್ನು ಉದಹರಿಸುತ್ತಲಿರುವ ಆ ವಾದಿಪ್ರತಿವಾದಿಗಳಿಗೆ ಹೇಗೋ ಹಾಗೆ, ಪರಸ್ಪರ ಜಯಸಂಭ್ರಮವು ಹೆಚ್ಚುತ್ತಲಿದ್ದಿತು. ದಾಶರಥಿ ದಶಗಳರ ನಡುವೆ ನಿಂತಿರುವ ಜಯಲಕ್ಷ್ಮಿಯು – ರಾಮನು ಶವವನ್ನು ತೋಡುವಾಗ ರಾಮನಕಡೆಗೂ, ರಾವಣನು ಅಂಬನೆಸೆಯುವಾಗ ಅವನ ಕಡೆಗೂ ಬಾಗುತ್ತ, ಮದವೇರಿದಾನೆಗಳ ಹೋರಾಟದಲ್ಲಿ ಹೇಗೋಹಾಗೆ ಮಧ್ಯಸ್ಥಳಾಗಿರುತ್ತಿದ್ದಳು.

ರಾಮಶರಪ್ರಯೋಗದಲ್ಲಿ ಅಮರರೂ, ರಾವಣಬಾಣಘಾತದಲ್ಲಿ ಅಸುರರೂ ಪುಷ್ಪವೃಷ್ಟಿಯನ್ನು ವರ್ಷಿಸುತ್ತಲಿದ್ದರು. ರಾಮರಾವಣ ಶರವೃಷ್ಟಿಗಳೇ ಸಹಿಸದೆ ಆ ಪುಷ್ಪವೃಷ್ಟಿಗಳನ್ನು ಪಾರಿಸುತ್ತಲಿದ್ದವು.

ಬಳಿಕ ರಾವಣನು – ತನ್ನ ದಿಗ್ವಿಜಯದಲ್ಲಿ ಯಮನಿಂದ ಪಡೆದ ಕೂಟಶಾಲ್ಮಲಿಯೆಂಬಾಯುಧದಂತಿರುತ ಮೊನೆಯಾದ ಉಕ್ಕಿನ ಮೊಳೆಗಳಿಂದ ತುಂಬಿರುವ, ಶತಘ್ನಿಯೆಂಬ ಮಹಾಕ್ರೂರವಾದ ಆಯುಧವನ್ನು ಹಗೆಯಾದ ರಾಮನ ಮೇಲೆ ಎಸೆದನು. ರಕ್ಕಸರೆಲ್ಲ ಕೇಕೆಹಾಕತೊಡಗಿದರು. ರಾಮನು – ಅರ್ಧಚಂದ್ರಾಕಾರವಾದ ಮುಖವನ್ನೊಳಗೊಂಡಿರುವ ಬಾಣಗಳಿಂದ ಹೊಡೆದು, ಮಧ್ಯಮಾರ್ಗದಲ್ಲಿಯೇ ಆ ಶತಘ್ನಿಯನ್ನು, ಅಸುರರ ಆಶೆಯೊಂದಿಗೆ, ಬಾಳೆಯ ಕಂಬವನ್ನು ಕತ್ತರಿಸುವಂತೆ ಸುಲಭವಾಗಿ ತುಂಡುಮಾಡಿ ಕೆಡಹಿದನು. ಧನುರ್ಧರರೊಳಗೆ ಅದ್ವಿತೀಯನೆನಿಸಿದ್ದ ರಾಮನು –ಕೂಡಲೆ ತನ್ನ ಹೃದಯದಲ್ಲಿ ನೆಟ್ಟಿರುವ ಸೀತಾಶೋಕವೆಂಬ ಶಲ್ಯವನ್ನು ಕಿತ್ತೆಸೆಯತಕ್ಕ ಮಹೌಷಧವೆನಿಸಿದ ಬ್ರಹ್ಮಾಸ್ತ್ರವನ್ನು ಹಗೆಯಮೇಲೆ ಪ್ರಯೋಗಿಸಲು ಬಿಲ್ಲಿನಲ್ಲಿ ಅಭಿಮಂತ್ರಿಸಿದನು. ಆಕಾಶದಲ್ಲಿ ಬಹುವೇಗದಿಂದ ಹೊರಟು, ಉರಿಯುತ್ತಲಿರುವ ಮುಖಗಳುಳ್ಳದ್ದಾಗಿರುವ ಆ ಬ್ರಹ್ಮಾಸ್ತ್ರವು – ವಿಷಜ್ವಾಲೆಗಳನ್ನು ಕಾರುವಂತೆ ನೂರುಪ್ರಕಾರವಾಗಿ ಹೆಡೆಗಳನ್ನು ಹರಡಿರುವ ಮಹಾಶೇಷನ ಹಾಗೆ ಬೆಳಗುತ್ತಲಿದ್ದಿತು. ಅಗಸ್ತ್ಯಮಂತ್ರ ಪ್ರಭಾವದಿಂದ ಅಪರಿಮಿತ ಸಾರವನ್ನೊಳಗೊಂಡಿದ್ದ ಆ ಅಸ್ತ್ರವು –

ಎಂದೂ ಗಾಯದ ನೋವನ್ನು ಅನುಭವಿಸದಿದ್ದ ಆ ರಾವಣನ ಶಿರಗಳ ಸಾಲನ್ನು, ಈಗಲೂ ವ್ರಣದ ವೇಧೆಯನ್ನು ಅರಿಯದಿರುವಂತೆಯೇ ನಿಮಿಷಮಾತ್ರದಲ್ಲಿ ಇಳುಹಿ, ರಣಲಕ್ಷ್ಮಿಗೆ ಅರ್ಪಿಸಿತು. ರಾಕ್ಷಸೇಂದ್ರನ ಶರೀರದಿಂದ ರಣಭೂಮಿಗುರುಳುತ್ತಲಿರುವ ಶಿರಗಳ ಪರಂಪರೆಯು – ಕೊಳದ ಜಲದಲ್ಲಿ ಅಲೆಗಳಿಂದ ಸಾಲಾಗಿ ಕಾಣಬರುವ ಬಾಲಸೂರ್ಯನ ಪ್ರತಿಬಿಂಬಗಳಂತೆ ಕಂಗೊಳಿಸುತ್ತಲಿದ್ದಿತು. ರಾವಣನ ತಲೆಯ ಬುರುಡೆಗಳು ರಣಾಂಗಣದಲ್ಲಿ ಬಿದ್ದುರುಳಿದ್ದರೂ, ಬ್ರಹ್ಮನ ವರದಾನದ ಶಂಕೆಯಿಂದ ಮೂರ್ಧಗಳು ಮರಳಿ ಎಲ್ಲಿ ಮೊಳೆಯುವುವೋ ಎಂದು, ಬಹಳ ಹೊತ್ತಿನವರೆಗೂ ಅವನ ಮರಣದಲ್ಲಿ ಅಮರರ ಮನವು ಸಂಪೂರ್ಣವಾದ ನಂಬುಗೆಯನ್ನು ಪಡೆಯಲಿಲ್ಲ,

ತರುವಾಯ – ಲೋಕಕಂಟಕನಾಗಿದ್ದ ರಾವಣನ ಸಂಹಾರದಿಂದ ಸಂತುಷ್ಟರಾದ ಸುರರು – ಸಮೀಪಿಸಿರುವ ರಾಜ್ಯಾಭಿಷೇಕದ ಕಂಕಣಬಂಧವನ್ನೊಳಗೊಂಬ ಮಣಿಕಟ್ಟಿನಿಂದ ಮನೋಹರವಾದ ರಾಘವನ ಶಿರದಮೇಲೆ ಕಲ್ಪತರು ಕುಸುಮವೃಷ್ಟಿಯನ್ನು ವರ್ಷಿಸಿದರು. ಕಪೋಲಗಳಲ್ಲಿ ಸಂಚರಿಸುವುದರಿಂದ ಮದೋದಕ ಭಾರವನ್ನಾಂತ ರೆಕ್ಕೆಗಳಿಂದ ಬೆಳಗುತ್ತಲಿರುವ ದುಂಬಿಗಳು – ದಿಕ್ಪಾಲರ ದಿಗ್ಗಜಗಳ ಗಂಡಸ್ಥಲಗಳನ್ನು ಬಿಟ್ಟು ಸುವಾಸನೆಯಿಂದ ಸೆಳೆಯಲ್ಪಟ್ಟು, ಮಂಗಳನಾದದಿಂದೊಡಗೂಡಿ, ಹೂವಿನಮಳೆಯನ್ನನುಸರಿಸಿದ್ದುವು.

ದಶರಥನಂದನನು ಶರಾಸನದ ಮೌರ್ವಿಯನ್ನು ಇಳಿಸಿದ್ದು ದೇವತೆಗಳ ಕಾರ್ಯಭಾರವನ್ನು ನಿರ್ವಹಿಸಿದುದಾಯಿತು, ಸುರೇಂದ್ರಸೂತನು – ರಾವಣ ನಾಮಾಂಕಿತದ ಶರಗಳಿಂದೊಡಗೂಡಿರುವ ಧ್ವಜಪಟದಿಂದಲೂ, ಉತ್ತಮಾಂಶ ಗಳಿಂದಲೂ ಬೆಳಗುತ್ತಲಿರುವ ರಥದಿಂದ ಸಹಿತನಾಗಿ, ರಾಮನ ಅನುಮತಿಯನ್ನು ಪಡೆದು, ಸುರಲೋಕವನ್ನು ಕುರಿತು ಹೊರಟನು.

ಇತ್ತ ರಾಘವನು– ಶತ್ರುಶೇಷವಿಲ್ಲದಂತೆಸಗಿ, ಲಂಕೆಯನ್ನು ನಿಶ್ಶಂಕವಾದುದನ್ನಾಗಿ ಮಾಡಿದನು. ವಿಭೀಷಣನು ಭಕ್ತಿ ಭಾವದಿಂದ ಪತಿವ್ರತಾಶಿರೋಮಣಿಯಾದ ಸೀತೆಯನ್ನು ಕರೆತಂದನು. ರಾಮನನುಮತಿಯಂತೆ, ಜಾನಕಿಯು ಅಗ್ನಿಪ್ರವೇಶದಿಂದ ಪರಿಶುದ್ಧಳೆನಿಸಿ, ಸರ್ವಮಾನ್ಯಳಾದಳು. ಬಳಿಕ ದಾಶರಥಿಯು – ಲಂಕಾಸಾಮ್ರಾಜ್ಯದಲ್ಲಿ ಅಭಿಷಿಕ್ತನಾದ ವಿಭೀಷಣನಿಂದಲೂ, ಸೂರ್ಯಸುತ, ಸೌಮಿತ್ರಿಯರಿಂದಲೂ ಸಹಿತನಾಗಿ, ಭುಜಬಲದಿಂದ ಗೆದ್ದ ಪುಷ್ಪಕವಿಮಾನವನ್ನು ಧರ್ಮಪತ್ನಿಯೊಡನೆ ಏರಿ, ಸುಖಸಂಪದಗಳನ್ನು ಪಡೆದ ಕಪಿಸೇನೆಯೊಂದಿಗೆ ಅಯೋಧ್ಯಾನಗರವನ್ನು ಕುರಿತು ಸುಖಪ್ರಯಾಣವನ್ನು ಬೆಳೆಯಿಸಿದನು.

****

ಹದಿಮೂರನೆಯ ಅಧ್ಯಾಯ

ದಂಡಕಾ ಪ್ರತ್ಯಾಗಮನ

ಸೂಚನೆ ॥ ಅಡವಿಯ ಸೊಬಗಂ ರಾಮಂ ।
ಸಡಗರದಿಂದಭ್ರಯಾನದರಸಿಗೆ ಪೇಳ್ದಂ ।
ಕಡುಸಂತಸದಿಂದಗ್ರಜ ।
ನಡಿಗಾಪಾದುಕೆಯನಿತ್ತು ಭರತಂ ಮಣಿದಂ ॥

ಬಳಿಕ ರಾಮನಾಮದಿಂದ ಬೆಳಗುತ್ತಲಿರುವ, ಸಕಲಗುಣಾಭಿಜ್ಞನಾದ ಆ ಹರಿಯು ಶಬ್ದಗುಣವೆನಿಸಿ, ತನಗೆ ಪದವಾಗಿರುವ ವಿಷ್ಣುಪಥದಲ್ಲಿ ಪುಷ್ಪಕವಿಮಾನದೊಳಗೆ ಕುಳಿತು ಪ್ರಯಾಣಮಾಡುತ್ತಾ, ಕೆಳಗೆ ಕಾಣಬರುತ್ತಲಿರುವ ರತ್ನಾಕರವನ್ನು ತೋರಿಸಿ, ತನ್ನ ಪ್ರಿಯವಲ್ಲಭೆಯಾದ ಸೀತೆಯನ್ನು ಕುರಿತು ಗುಟ್ಟಾಗಿ ಇಂತೆಂದನು. – ಎಲೆ ವೈದೇಹಿ! ನಾನು ಕಟ್ಟಿಸಿರುವ ಈ ಸೇತುವೆಯಿಂದ ಮಲಯಪರ್ವತದವರೆಗೂ ಎರಡು ಸಾಲಾಗಿ, ಅಲ್ಲಲ್ಲಿ ನೊರೆಯನ್ನೊಳಗೊಂಡಿರುವ ಈ ಕಡಲನ್ನು ನೋಡಿದೆಯ? ಶರದೃತುವಿನಿಂದ ನಿರ್ಮಲವೆನಿಸಿ, ಛಾಯಾಪಥದಿಂದ ಎರಡು ಭಾಗವಾಗಿ, ಅಲ್ಲಲ್ಲಿ ಅಂದವಾದ ತಾರೆಗಳನ್ನೊಳಗೊಂಡಿರುವ ಆಕಾಶಮಂಡಲದಂತೆ ಕಾಣಬರುತ್ತಲಿದೆ. ನಮ್ಮ ಪೂರ್ವ ಪಿತೃಗಳಲ್ಲೋರ್ವನಾದ ಸಗರಚಕ್ರವರ್ತಿಯು– ಪರಿಶುದ್ಧವಾದ ಅಶ್ವಮೇಧಯಾಗವನ್ನು ಮಾಡಲಾರಂಭಿಸಿ ತುರಂಗವನ್ನು ಬಿಟ್ಟನು. ಅದನ್ನು ಕಪಿಲಮುನಿಯು ರಸಾತಲವನ್ನು ಸೇರಿಸಿದ್ದನು. ಆ ಹಯವನ್ನು ಕಂಡುಹಿಡಿಯಲು ನಮ್ಮ ಹಿರಿಯರಾದ ಸಗರಪುತ್ರರು–ಇಲ್ಲಿಯೇ ನೆಲವನ್ನು ಅಗೆದು, ಇದನ್ನು ಹೆಚ್ಚಿಸಿದರಂತೆ. ಅದರಿಂದ ಈ ಸಾಗರವು ನಮಗೆ ಪೂಜ್ಯವಲ್ಲವೆ? ಅರ್ಕಮರೀಚಿಗಳು – ಈ ಅಂಬುರಾಶಿಯಿಂದಲೇ ಜಲಮಯವಾದ ಗರ್ಭವನ್ನು ಧರಿಸತಕ್ಕುದು, ಇದರಿಂದಲೇ ಈ ಪಾರಾವಾರವು ಲೋಕೋಪಕಾರಿ ಎನಿಸಿದೆ. ರತ್ನಗಳೆಲ್ಲ ಇದರಲ್ಲಿಯೇ ಬೆಳೆವಳಿಗೆಯನ್ನು ಹೊಂದುವುದು. ತೇಜೋಮಯನಾಗಿ, ಲೋಕಾನಂದಕರನೆನಿಸಿರುವ ಚಂದ್ರನೇ ಮೊದಲಾದ ಶ್ರೇಷ್ಠವಸ್ತುಗಳಿಗೆ ಜನ್ಮಭೂಮಿ.

ಆದುದರಿಂದಲೇ ರತ್ನಾಕರ ಎಂಬ ಹೆಸರುವಾಸಿಯೂ ಬಂದಿದೆ, ಉದಕವೇ ಕಾಷ್ಠವಾಗಿರುವ ಅಗ್ನಿಯೂ ಇದರಲ್ಲಿ ಅಡಗಿದೆ. ಅಪಕರಿಸಿದರೂ ಆಶ್ರಿತರನ್ನು ತೊರೆಯದಿರುವುದು ಈ ಶರಧಿಯ ಶ್ಲಾಘ್ಯಗುಣವಲ್ಲವೆ? ನಾನಾ ಆಕಾರಗಳನ್ನು ಪಡೆದಿರುವುದರಿಂದಲೂ, ಎಲ್ಲದಿಕ್ಕುಗಳಲ್ಲಿಯೂ ಹರಡಿರುವುದರಿಂದಲೂ, ಮಹಾವಿಷ್ಣುವಿನ ಹಾಗೆ, ಈ ಮಹೋದಧಿಯು ರೂಪವನ್ನು ಈ ಪ್ರಕಾರವಿರುವುದೆಂದಾಗಲೀ, ಇಷ್ಟು ಪರಿಮಾಣವುಳ್ಳುದೆಂದಾಗಲೀ ಗೊತ್ತುಮಾಡಲಿಕ್ಕೆ ಸಾಧ್ಯವೇ ಅಲ್ಲ, ಕಲ್ಪಾವಸಾನದಲ್ಲಿ–ಪುರಾಣಪುರುಷನಾದ ನಾರಾಯಣನು–ಸಕಲ ಲೋಕಗಳನ್ನೂ ತನ್ನಲ್ಲಿ ಅಡಗಿಸಿಕೊಂಡು, ತನ್ನ ಕೇವಲಸ್ವರೂಪವನ್ನು ಅವಲಂಬಿಸುವಿಕೆಯೆಂಬ ಯೋಗನಿದ್ರೆಯನ್ನಾಶ್ರಯಿಸಿ, ತನ್ನಯ ನಾಭಿಕಮಲದಿಂದುದಿಸಿ, ದಕ್ಷನೆ ಮೊದಲಾದವರಿಗೆ ತಂದೆಯೆನಿಸಿದ ಪಿತಾಮಹನಿಂದ ಹೊಗಳಿಸಿಕೊಳ್ಳುತ್ತ, ಇಲ್ಲಿಯೇ ಪವಳಿಸುವುದು. ರೆಕ್ಕೆಗಳನ್ನೊಕ್ಕಲಿಕ್ಕಿದ ಗೋತ್ರಾರಿಯಿಂದ ತಿರಸ್ಕಾರವನ್ನು ಪಡೆದು, ಹೆಮ್ಮೆಯಡಗಿ, ದಿಕ್ಕಿಲ್ಲದೆ, ಓಡಿಬಂದ ನೂರಾರು ಭೂಧರಗಳು–ಪರರಾಯರಿಂದ ಪರಾಜಿತರಾದ ಅರಸರು– ವಲಸೆಹೋಗಿ, ಮಧ್ಯಮ ಭೂಪಾಲನನ್ನು ಆಶ್ರಯಿಸುವ ಹಾಗೆ, ಶರಣ್ಯವಾಗಿರುವ ಈ ಸಮುದ್ರವನ್ನು ಮರೆಹೊಕ್ಕಿವೆ. ಇದರಿಂದಿದು ಧರ್ಮಾಕರವಲ್ಲವೆ? ಶತಬಾಹುವೆನಿಸಿದ ಆದಿವರಾಹರೂಪಿಯಾದ ಆದಿ ಪುರುಷನು ರಸಾತಲದಿಂದ ಈ ಸರಿತ್ಪತಿಯ ಮೂಲಕ ಭೂಮಿಯನ್ನು ಉದ್ಧಾರಮಾಡುವಾಗ, ನಿರ್ಮಲವಾದ ಇದರ ಜಲವು ಆತನಿಗೆ ಕ್ಷಣಕಾಲ ಮಾತ್ರ ಮುಖಾವರಣ ವಸ್ತ್ರದಂತೆ ಕಂಗೊಳಿಸುತ್ತಿದ್ದಿತು. ಇತ್ತ ನೋಡು–ಸ್ವಭಾವದಿಂದ ಈ ಪ್ರೌಢರಾದ ಅಂಗನೆಯರಂತೆ ನದೀಸುದತಿಯರು ತಮ್ಮ ಮುಖಗಳನ್ನು ಈ ಸಾಗರಮುಖದಲ್ಲಿಡುವರು, ಚತುರನಾದ ಈ ಸಮುದ್ರನೂ ತನ್ನ ಅಲೆಯೆಂಬ ಅಧರವನ್ನು ಮುಂದಕ್ಕೆ ನೀಡುವನು, ಇದರಿಂದಲೇ ಅನ್ಯೋನ್ಯಾನುರಾಗದಿಂದ ಸಮಕಾಲದಲ್ಲಿ ಒಬ್ಬರಿಗೊಬ್ಬರು ಹೆರರಿಗಳಸದಳವೆನಿಸಿದ ಮುತ್ತನ್ನಿಟ್ಟುಕೊಳ್ಳುತ್ತಲಿರುವಂತೆ ಕಾಣಬರುತ್ತಲಿದೆ. ಕೆಲವೆಡೆಗಳಲ್ಲಿ ತಿಮಿಗಳೆಂಬ ಮಹಾಮತ್ಸ್ಯಗಳು–ಜಲಚರಗಳಿಂದ ಸಹಿತವಾದ ನದೀಮುಖ ಜಲಗಳನ್ನು, ತೆರೆದುಕೊಂಡಿರುವ ತಮ್ಮ ಬಾಯ್ಗಳಿಂದ ಕುಡಿಯುವುವು. ನೀರು ಒಳಹೊಕ್ಕ ಕೂಡಲೆ ಬಾಯ್ಗಳನ್ನು ಮುಚ್ಚಿಕೊಂಡು, ತನ್ನ ತಲೆಗಳ ಮೇಲಿರುವ ರಂಧ್ರಗಳಿಂದ ಜಲಗಳನ್ನು ಜೀರ್ಕೊಳವಿಗಳಂತೆ ಎರಚುತ್ತಲಿರುವುವು. ಒಳಗೆ ಅಡಗಿರತಕ್ಕ ಆನೆಗಳಂತಿರುವ ಮೊಸಳೆಗಳು –ಅಲ್ಲಲ್ಲಿ ನೀರಿನ ಮೇಲಿರುವ ನೊರೆಗಳನ್ನು ಭೇದಿಸಿಕೊಂಡು, ಮೇಲಕ್ಕೆ ಬಹುವೇಗದಿಂದ ಬರುತ್ತಲಿವೆ. ಆ ಸಮಯದಲ್ಲಿ ಎರಡುಭಾಗವಾದ ನೊರೆಗಳ ಖಂಡಗಳು–ಆ ಮೊಸಳೆಗಳ ಕಪೋಲಭಾಗದಲ್ಲಿ ಕ್ಷಣಕಾಲ ಮಾತ್ರ ಚಾಮರಗಳಂತೆ ಅಲಂಕಾರವಾಗಿವೆ.

ಈ ಕಡಲತಡಿಯಲ್ಲಿನ ಮರಳುದಿಣ್ಣೆಗಳಲ್ಲಿ ಗಾಳಿಯನ್ನು ಕುಡಿಯಲಿಕ್ಕೆಂದು ಬಂದ, ನೀಳವಾಗಿ ಪವಳಿಸಿರುವ ಸರ್ಪಗಳಿಗೂ ಜಲಭಾಗದಿಂದ ಉಕ್ಕುಳಿಸಿ ಹಾಯ್ದು ಬರುತ್ತಲಿರುವ ತೋರವಾದ ತೆರೆಗಳಿಗೂ ಭೇದವೇ ತಿಳಿಯುವುದಿಲ್ಲ, ಆದರೆ ಸೂರ್ಯಕಿರಣಗಳ ಸಂಪರ್ಕದಿಂದ ಹೆಡೆಗಳಲ್ಲಿನ ರತ್ನಗಳ ಕಾಂತಿಗಳು ಹೇರಳವಾಗಿ ಥಳಥಳನೆ ಬೆಳಗುವದರಿಂದ ಇವು ಸರ್ಪಗಳೆಂದು ಆಗ ವ್ಯಕ್ತವಾಗುವುದು. ನಿನ್ನ ತುಟಿಯೊಡನೆ ಸಾಮ್ಯವನ್ನು ಹೊಂದಿರುವ ಹವಳದ ಬಳ್ಳಿಗಳು ಈ ಸಮುದ್ರತೀರದಲ್ಲಿ ಬಹಳವಾಗಿವೆ. ತರಂಗಗಳ ವೇಗದಿಂದ ಹಾರಿ ಬೀಳುವ ಶಂಖಗಳು– ಆ ಲತೆಗಳ ಮೇಲ್ಮುಖಗಳಾದ ಕುಡಿಗಳಿಗೆ ತೊಡರಿಕೊಂಡು, ವಿಳಂಬದಿಂದ ಮೆಲ್ಲಗೆ ಕಳಚಿ ಬೀಳುತ್ತಲಿವೆ. ಜಲಾಶಯದಲ್ಲಿ ನೀರಿನವರೆಗೂ ಮೇಘಮಂಡಲವು ಇಳಿದು, ಬಲು ಆಳವಾದ ಎಡೆಯಲ್ಲಿ ವಿಚಿತ್ರವಾಗಿ ಸುತ್ತುತ್ತಲಿರುವ ಸುಳಿಗಳ ವೇಗದಿಂದ ತಾನೂ ಗಿರಗಿರನೆ ತಿರುಗುತ್ತಲಿದೆ. ಇದನ್ನು ನೋಡಿದರೆ, ಮಂದರಗಿರಿಯಿಂದ ಮರಳ ಕಡಲು ಕಡೆಯಲ್ಪಡುತ್ತಲಿರುವುದೆಂಬಂತೆ ಕಾಣಬರುವುದು. ಬಾಂದಳದಲ್ಲಿ ನಾವು ತೆರಳುತ್ತಲಿರುವ ಈ ಸ್ಥಳಕ್ಕೆ ಕೆಳಗಡೆಯಲ್ಲಿ ಕಬ್ಬಿಣದಿಂದ ಮಾಡಿರುವ ಚಕ್ರದಂತೆ ಕಾಣಬರುವ ಲವಣೋದಧಿಯು ಕಪ್ಪಗಿರುವ ತೀರಭೂಮಿಯು ಹೊಂಗೆಯಗಿಡಗಳ ಮತ್ತು ತಾಳೆಯಮರಗಳ ಸೂಕ್ಷ್ಮವಾದ ವನಪಂತಿಯಿಂದ, ಆ ಚಕ್ರದ ಸುತ್ತಣ ಅರುಗಿನಲ್ಲಿರುವ ಮಲಿನರೇಖೆಯಂತೆ ಕಂಗೊಳಿಸುತ್ತಲಿರುವುದು. ಮತ್ತು–ವಿಶಾಲ ನಯನೆಯಾದ ಓ ಸೀತೆ! ತಟದಲ್ಲಿರುವ ಕೇದಗೆಯ ಗಿಡಗಳಲ್ಲಿನ ಹೂಗಳ ಪರಿಮಳದ ಪುಡಿಯನ್ನು ತರುತ್ತಲಿರುವ ಈ ಮಂದಮಾರುತವು ನಿನ್ನ ಮುಖವನ್ನು ಸಂಭಾವಿಸುತ್ತಾ, ಇದುವರೆಗೂ ನಿನ್ನಯ ಮುಖಾಲಂಕಾರವಿಲ್ಲದಿರುವುದನ್ನು ನಾನು ಸಹಿಸದಿರುವೆನು ಎಂಬುದನ್ನು ತಾನು ತಿಳಿದಿರುವಂತೆ ತೋರುತ್ತಲಿದೆ.

ಇಗೋ:–ಇದೇ ಬಲು ಅಗಲವಾದ ಮಳಲಿನ ಬೈಲುನೆಲ. ಚಿಪ್ಪುಗಳು ಒಡೆದು, ಸಿಡಿದು ಹರಡಿರುವ ಮುತ್ತುಗಳು ಕಂಗೊಳಿಸುತ್ತಲಿವೆ. ಕಾಯ್ಗಳಿಂದ ತುಂಬಿದ ಹೊಂಬಾಳೆಗಳ ಹೊರೆಯಿಂದ ತುಸ ಬಾಗುತ್ತಲಿರುವ ಅಡಕೆಯ ಮರಗಳ ಸಾಲಿನಿಂದ ರಮಣೀಯವಾಗಿರುವ ಪಯೋಧಿಯ ತೀರಕ್ಕೆ ವಿಮಾನವೇಗದಿಂದ ಮುಹೂರ್ತಮಾತ್ರದಲ್ಲಿ ಬಂದು ಸೇರಿದೆವು. ಎಲೆ ಮೃಗಾಕ್ಷಿ! ಇತ್ತ ಹಿಂದಕ್ಕೆ ತಿರುಗಿನೋಡು. ನಾವು ದಾಟಿ ಬಂದ ದಾರಿಯ ಕಡೆಗೆ ನಿನ್ನ ನೋಟವನ್ನು ಕಳುಹು. ಆಗಲೆ ಬಲು ದೂರವಾಗಿ ತಟಾಯ್ದ ನಮ್ಮನ್ನು ಈ ವನಭೂಮಿಯು ದೂರವಾಗಿನಿಂದ ಸಮುದ್ರದಿಂದೀಚೆಗೆ ಹಿಂಬಾಲಿಸಿ ಬರುವಂತಿದೆ. ಎಲೆ ದೇವಿ! ಈ ಅಚ್ಚರಿಯನ್ನು ನೋಡಿದೆಯ? ಈ ವಿಮಾನರತ್ನವು –ನನ್ನ ಮನೋಭಿಲಾಷೆಯನ್ನು

ಸ್ವಲ್ಪವಾದರೂ ಮೀರದೆ ಅನುಸರಿಸುತ್ತಲಿದೆ. ಒಂದುಬಾರಿ ದೇವಮಾರ್ಗದಲ್ಲಿ ತೆರಳುವುದು, ಮತ್ತೊಂದು ಸಾರಿ ಮೇಘಮಂಡಲದ ಹಾದಿಗಿಳಿವುದು, ಇನ್ನೊಂದು ವೇಳೆ ಪಕ್ಷಿಪಥದಲ್ಲಿ ಚಲಿಸುವುದು. ಇಂದ್ರನ ಐರಾವತದ ಮದೋದಕದ ಸುವಾಸನೆಯನ್ನೊಳಗೊಂಡಿರುವ ತ್ರಿಪಥಗೆಯ ಅಲೆಗಳ ಮೇಲೆ ಹರಿದುಬರುವ ಈ ತಂಗಾಳಿಯು–ಮಧ್ಯಾಹ್ನದ ಬಿಸಿಲಿನ ಜಳದಿಂದ ಬೆಮರ್ದ ನಿನ್ನ ಮುಖದ ಹನಿಗಳನ್ನು ಹೀರುತ್ತಲಿದೆ. ಸೀತೇ! ಮನೋವೇಗದಂತೆ ತೆರಳುತ್ತಲಿರುವ ಈ ದಿವ್ಯ ವಿಮಾನದ ಕಿಟಕಿಯಿಂದ ಹೊರಗೆ, ನೀನು ಲೀಲೆಯಿಂದ ಕುತೂಹಲಪಟ್ಟು ಜೋತುಬಿಟ್ಟಿರುವ ಹಾಗೆ ಪಕ್ಕದಲ್ಲಿ ಸರಿಯುತ್ತಲಿರುವ ಮೇಘವು ತನ್ನಿಂದ ಹೊಳೆದ ಮಿಂಚಿನಿಂದ ಬೇರೊಂದು ಥಳಥಳಿಸುವ ಕಡಗವನ್ನು ತೊಡಿಸುವಂತಿದೆ.

ದುರುಳರಾಗಿದ್ದ ಖರನೇ ಮುಂತಾದ ರಕ್ಕಸರ ಹಾವಳಿಯನ್ನು ತಾಳಲಾರದೆ ಈ ಪ್ರಾಂತದ ತಪಸ್ವಿಗಳೆಲ್ಲ ಬಹುಕಾಲದ ಹಿಂದೆಯೇ ಇಲ್ಲಿಂದ ಓಡಿಹೋಗಿದ್ದರು, ಆ ಕೀಳರೆಲ್ಲ ಹಾಳಾಗಿ, ತಪಸ್ಸಿಗೆ ತಡೆಯು ತೊಲಗಿ, ನಿಶ್ಚಿಂತೆಯಾಯಿತೆಂದು ತಿಳಿದು ಈಗೀಗ ಆ ಚೀರಾಂಬರರೆಲ್ಲರೂ ಮರಳಿ ಬಂದು, ಪುಣ್ಯಾಶ್ರಮಗಳಲ್ಲಿ ಹೊಸದಾಗಿ ಎಲೆಮನೆಗಳನ್ನು ಕಟ್ಟಿಕೊಂಡು, ಪೂರ್ವದಂತೆ ಅಂಜಿಕೆಯಿಲ್ಲದೆ, ಸುಖವಾಗಿ ತಪೋನಿರತರಾಗುತ್ತಲಿದ್ದಾರೆ.

ಈ ಭೂಭಾಗದಲ್ಲಿಯೇ ನಾನು ಹಿಂದೆ ನಿನ್ನನ್ನು ಹುಡುಕುತ್ತ ಬಂದುದು. ನಿನ್ನ ಕಾಲಿನಿಂದ ಕೆಳಗೆ ಜಾರಿಬಿದ್ದು, ನಿನ್ನಡಿಯ ಅಗಲಿಕೆಯ ವ್ಯಥೆಯನ್ನು ತಾಳಲಾರದೆ, ಮೌನದಿಂದಿದ್ದ ಒಂದು ಕಾಲು ಕಡಗವು– ಇಲ್ಲಿಯೇ ನನಗೆ ದೊರೆತುದು. ಆ ವನಸ್ಥಲಿಯೇ ಇದು.

ಓ ಭಯಶೀಲೆ! ಇತ್ತ ನೋಡು:–ನೀಚನಾದ ರಾಕ್ಷಸನು–ಇಲ್ಲಿಯೇ ನಿನ್ನನ್ನು ಕೊಂಡೊಯ್ದುದು. ಈ ಮಾರ್ಗದಲ್ಲಿ ನಾನು ನಿನ್ನನ್ನು ಅರಸುತ್ತ ಬರುತ್ತಿರುವಲ್ಲಿ, ದಾರಿಯುದ್ದಕ್ಕೂ ಬೆಳೆದಿರುವ ಬಳ್ಳಿಗಳು ಹೇಳಿ ತಿಳಿಸಲಿಕ್ಕೆ ಶಕ್ತಿಯಿಲ್ಲದೆ, ನೀಳವಾದ ತಮ್ಮ ಕೊನೆಗಳೆಂಬ ಕರಗಳಲ್ಲಿನ ಎಲೆಗಳೆಂಬ ಬಾಗಿದ ಬೆರಳುಗಳಿಂದ ಕನಿಕರಿಸಿ ನಿನ್ನ ದಾರಿಯನ್ನು ನನಗೆ ತೋರುತ್ತಲಿದ್ದವು. ಎಳೆಯಹುಲ್ಲನ್ನು ಮೇಯುತ್ತಲಿದ್ದ ಹೆಣ್ಣು ಹುಲ್ಲೆಗಳು–ಮೇವನ್ನು ತೊರೆದು, ತಲೆಗಳನ್ನೆತ್ತಿ, ತೆಂಕದೆಸೆಯನ್ನೇ ಅರಳಿದ ಕಣ್ಣುಗಳಿಂದ ನೋಡುತ್ತಾ, ನಿನ್ನ ದಾರಿಯನ್ನರಿಯದೆ ಕಳವಳಿಸುತ್ತಲಿದ್ದ ನನಗೆ ದಿಕ್ಕನ್ನು ಸೂಚಿಸುತ್ತ ಬೆಪ್ಪಾಗಿ ನಿಂತಿದ್ದುವು. ಇಗೋ–ಈಗೀಗ ಸ್ವಲ್ಪ ಸ್ವಲ್ಪವಾಗಿ ಇದಿರಿಗೆ ಮುಗಿಲನ್ನು ಮುಟ್ಟುತ್ತಲಿರುವ ಶಿಖರವು ದೂರದಲ್ಲಿ ಕಾಣಬರುತ್ತಲಿದೆ. ನೋಡು–ನಾನೀ ಮಾಲ್ಯವತ್ಪರ್ವತದ ಬಳಿಗೆ ಬಂದು, ನಿನ್ನಗಲಿಕೆಯ ಶೋಕವನ್ನು

ತಾಳಲಾರದೆ, ಮೋಡಗಳಿಂದುದಿರುವ ಮಳೆಯ ಹನಿಗಳೊಂದಿಗೆ ಕಣ್ಣೀರನ್ನು ಕರೆದೆನು. ಈ ಪರ್ವತಾಗ್ರದಲ್ಲಿಯೇ ಆಗ ಮುಂಗಾರು ಮಳೆಗರೆಯಲು, ಬತ್ತಿದ್ದ ಕೊಳಗಳ ನೆಲದ ಮೇಲೆ ಹನಿಗಳು ಬಿದ್ದು, ಅಲ್ಲಿಂದೆದ್ದು ಘಮಘಮಿಸುತ ಬಂದ ಸುವಾಸನೆಯನ್ನೂ, ಅರಳುತ್ತ ಬಂದಿದ್ದ ನೀಪಕುಸುಮವನ್ನೂ, ಕುಣಿಯುತ್ತಲಿದ್ದ ನವಿಲುಗಳ ಗಂಭೀರವಾದ ಕೇಕಾರವಗಳನ್ನೂ, ಕಂಡು, ನಿನ್ನ ಅಗಲಿಕೆಯ ದುಃಖವನ್ನು ತಾಳಲಾರದೆ ಹೋದೆನು.

ಹಿಂದೆ ನಿನ್ನೊಡನೆ ನಾನು ಈ ಬೆಟ್ಟದ ಮೇಲೆ ಸಂಚರಿಸುತ್ತಿದ್ದ ವೇಳೆಯಲ್ಲಿ ಮೋಡಗಳು ಗುಡುಗಿ, ಗವಿಗಳಿಂದ ಸೆಲೆಯ ಹೊರಡಲು, ಕೂಡಲೆ ಹೆದರಿದ ನೀನು ನಡುಗುತ್ತ ತಟ್ಟನೆ ನನ್ನ ಬಳಿಗೆ ಓಡಿಬಂದು, ನನ್ನನ್ನು ಅಪ್ಪಿಕೊಳ್ಳಲಿಲ್ಲವೆ?, ಆ ನಿನ್ನನ್ನು ಕಳೆದುಕೊಂಡು, ಮರಳಿ ನಾನು ಇಲ್ಲಿಗೆ ಬಂದಾಗ ಅದೆಲ್ಲವೂ ನೆನಪಿಗೆ ಬಂದಿತು. ಆ ಸಮಯದಲ್ಲಿ ನನ್ನ ಮನಸ್ಸಿಗೆ ಉಂಟಾದ ಕ್ಲೇಶವನ್ನು ಓ ಪ್ರಿಯಳೇ ಇಷ್ಟೆಂದು ಹೇಳಲಾರೆನು. ನಿನ್ನ ವಿರಹದಿಂದ ನಾನು ಇಲ್ಲಿಗೆ ಬಂದಿರುವಾಗಲೇ ವರ್ಷ ಧಾರೆಯು ಬಿದ್ದುದರಿಂದ ಕೆಂಬಣ್ಣದ ಕಂದಳೀ ಕುಸುಮವು ಅರಳಿದುದು. ನೆಲದಿಂದೆದ್ದ ಹೊಗೆಯ ಬಣ್ಣದ ಆವಿಯೂ ಅದಕ್ಕೆ ತಾಗಿತು. ವಿವಾಹವೇದಿಕೆಯಲ್ಲಿ ನಾವಿಬ್ಬರೂ ಕುಳಿತಿರುವ ವೇಳೆ, ಹೋಮಧೂಮದಿಂದ ಜಲಯುಕ್ತವಾದ ನಿನ್ನ ಕಣ್ಣಿನ ಸೊಬಗು ನೆನಪಿಗೆ ಬಂದಿತು. ಆಗ ನನ್ನ ಮನನೊಂದ ಬಗೆಯನ್ನು ವಿವರಿಸಲಾರೆನು. ದಡದಲ್ಲಿ ಒತ್ತಾಗಿ ಬೆಳೆದಿರುವ ಮಂಜುಳವೃಕ್ಷಗಳಿಂದ ಆವರಿಸಲ್ಪಟ್ಟು, ಸ್ವಲ್ಪಸ್ವಲ್ಪವಾಗಿ ಕಾಣಬರುತ್ತ, ಹಾರುತ್ತಲಿರುವ ಸಾರಸಪಕ್ಷಿಗಳನ್ನೊಳಗೊಂಡಿರತಕ್ಕ ಇಗೋ ಆ ಪಂಪಾಸರೋವರದ ಬಳಿಗೆ ಗಮಿಸಿದ ಈ ನನ್ನ ದೃಷ್ಟಿಯು – ಬಹುದೂರ ತೆರಳಿದುದರಿಂದ ಬಳಲಿ, ಆ ಜಲಗಳನ್ನು ಆದರದಿಂದ ಕುಡಿಯುವಂತಿದೆ. ನಿನ್ನ ವಿರಹದಲ್ಲಿದ್ದ ನಾನು ಆಗ ಇಲ್ಲಿಗೆ ಬಂದೆನು, ಒಡನಾಡಿಗಳಾದ ಚಕ್ರವಾಕ ಪಕ್ಷಿಗಳು–ಸತಿಯು ಪತಿಗೂ ಪತಿಯು ಸತಿಗೂ ಪ್ರೇಮಭರದಿಂದ ನೈದಿಲೆಹೂಗಳನ್ನು ಕೊಕ್ಕಿನಿಂದೆತ್ತಿ ಕೊಡುತ್ತಲಿದ್ದುದನ್ನು ಕಂಡೆನು.

ಪ್ರಿಯವಲ್ಲಭೆಯೇ! ಆಗ ನಿನಗೆ ಬಹುದೂರದಲ್ಲಿದ್ದ ಆ ನಾನು–ಕೂಡಲೆ ತಹತಹಪಡುವ ಮನದಿಂದ ನಿನ್ನನ್ನು ನೆನೆದೆನು. ಅಲ್ಲಿಂದ ಮುಂದೆ ಸ್ವಲ್ಪದೂರ ಬಂದೆನು. ಬಲು ಅಂದವಾದ ಹೂಗಳ ಗೊಂಚಲುಗಳಿಂದ ಬಾಗಿರುವ ಸರೋವರದ ತೀರದಲ್ಲಿನ ಈ ಅಶೋಕಲತೆಯನ್ನು ನೋಡಿದೆನು, ನನ್ನ ಪ್ರಜ್ಞೆಯು ಎಲ್ಲಿ ಹಾರಿಹೋಯಿತೋ ಅರಿಯೆನು. ನೀನು ದೊರೆತೆ ಎಂದೇ ಭಾವಿಸಿದೆನು. ದುಡುದುಡನೆ ಓಡಿಹೋಗಿ, ಹಾ! ಸೀತೆ! ಸಿಕ್ಕಿದೆಯಾ! ಎಂದು ಅಪ್ಪಿಕೊಳ್ಳಲಿಕ್ಕೆ

ಹೋದೆನಂತೆ! ಆಗ–ಅಯ್ಯೋ! ಅಣ್ಣಾ!! ಸೀತೆಯಲ್ಲ, ಲತೆ ಎಂದು ಕಣ್ಣೀರನ್ನು ಸುರಿಸುತ್ತಾ ಸೌಮಿತ್ರಿಯು–ನನ್ನನ್ನು ತಡೆದನಂತೆ.

ನಮ್ಮ ಈ ಪುಷ್ಪಕವಿಮಾನದ ಅಂತಸ್ತಿನ ಮೇಲುಗಡೆ ಗಾಳಿಯಿಂದ ಅಲುಗಿ, ಸದ್ದು ಮಾಡುತ್ತಲಿರುವ ಬಂಗಾರದ ಕಿರುಗೆಜ್ಜೆಗಳ ದನಿಯನ್ನು ಕೇಳಿದ ಈ ಗೋದಾವರಿ ನದಿಯಲ್ಲಿನ ಸಾರಸ ಪಕ್ಷಿಗಳು–ತಮ್ಮಂತೆ ದನಿಗೆಯ್ವ ಬೇರೊಂದು ಹಿಂಡು ಬರುತ್ತಲಿದೆಯೆಂದು ಭಾವಿಸಿ, ಆಗಸಕ್ಕೆ ಹಾರಿ, ನಿನ್ನನ್ನು ಇದಿರ್ಗೊಳ್ಳುವಂತಿವೆ.

ಪ್ರಿಯಳೇ! ನೀನು ಬಡನಡುವಿನವಳಾದರೂ ಗಡಿಗೆಯಿಂದ ನೀರೆರೆದು ಸಾಕಿದ ಎಳಮಾವಿನ ಗಿಡಗಳುಳ್ಳುದೂ, ತಲೆಗಳೆನ್ನೆತ್ತಿ ರೆಪ್ಪೆಬಡಿಯದೆ ನೋಡುತ್ತಲಿರುವ ಹುಲ್ಲೆಗಳುಳ್ಳುದೂ ಆಗಿರುವ ಈ ಪಂಚವಟಿಯು–ಬಹುಕಾಲದಮೇಲೆ ನೋಡುವ ನನ್ನ ಮನಸ್ಸನ್ನು ಬಹಳವಾಗಿ ಆನಂದಗೊಳಿಸುತ್ತಲಿದೆ. ನಾವಿಲ್ಲಿ ವಾಸಮಾಸಮಾಡುತ್ತಿದ್ದ ವೇಳೆಯೊಳಗೆ, ನಾನು ಆಗಾಗ ಬೇಟೆಗೆ ಹೋಗಿದ್ದು ಬಳಲಿ ಬಂದು ಈ ಗೋದಾನದೀ ತೀರದಲ್ಲಿರುವ ಆ ನೀರತರುಗಳ ತೋಪಿನೊಳಗೆ ನಿನ್ನ ತೊಡೆಯಮೇಲೆ ತಲೆಯನ್ನಿಟ್ಟು ಹಾಯಾಗಿ ಮಲಗುತಿದ್ದುದು ನೆನಪಿಗೆ ಬರುತ್ತಲಿದೆ. ಮಳೆಗಾಲದಲ್ಲಿ ಒಂದಾಗಿದ್ದ ಜಲಗಳನ್ನು ನಿರ್ಮಲಗೊಳಿಸುವವನೂ, ಹುಬ್ಬನ್ನು ಡೊಂಕುಮಾಡಿದ ಮಾತ್ರದಿಂದ ನಹುಷನನ್ನು ಸ್ವರ್ಗದಿಂದ ನೆಲಕ್ಕುರುಳಿಸಿದವನೂ ಆಗಿರುವ ಮಹಾನುಭಾವನಾದ ಅಗಸ್ತ್ಯ ಮಹಾಮುನಿಯೂ ಇದರ ಬಳಿಯಣ ಪುಣ್ಯಾಶ್ರಮದಲ್ಲಿಯೇ ವಾಸಮಾಡುತ್ತಲಿರುವುದು. ನಿರ್ಮಲವಾದ ಕೀರ್ತಿಯನ್ನು ಪಡೆದಿರುವ ಆ ಕುಂಭಸಂಭವಮುನಿಯ ತ್ರೇತಾಗ್ನಿಯಿಂದ ಹೊರಟು ಬರುತ್ತಲಿರುವ ಹೋಮಧೂಮದ ದಿವ್ಯಗಂಧವನ್ನು ಆಘ್ರಾಣಿಸಿ, ನನ್ನ ಅಂತರಾತ್ಮವು ರಜೋಗುಣದ ಹೊರೆಯನ್ನು ತೊರೆದು, ಹಗುರವಾಗುತ್ತಲಿದೆ. ಮಾನವಂತೆಯಾಗಿ ಓ ಸೀತೆ! ಇಲ್ಲಿ ನೋಡು– ಆ ಅಗಸ್ತ್ಯ ಮಹರ್ಷಿಯ ತಪೋವನದ ತಡಿಯಲ್ಲಿ ವಿಹಾರಜಲದಿಂದೊಡಗೂಡಿದ ಪಂಚಾಪ್ಸರವೆಂಬ ದಿವ್ಯಸರೋವರವನ್ನೊಳಗೊಂಡಿರುವ ಶಾತಕರ್ಣ ಮುನಿಯ ಪುಣ್ಯಾಶ್ರಮವು ಬಹುದೂರದಿಂದ ನೋಡುತ್ತಲಿರುವ ನಮಗೆ ಮೋಡಗಳ ಸಂದಿನಲ್ಲಿ ಕಾಣಬರುವ ಚಂದ್ರಬಿಂಬದ ಹಾಗೆ, ಸುತ್ತುಬಳಸಿರುವ ವನದಿಂದ ಬಹುರಮಣೀಯವಾಗಿ ಕಾಣಬರುತ್ತಲಿದೆ. "ಪೂರ್ವಕಾಲದಲ್ಲಿ ಆ ಶಾತಕರ್ಣಮುನಿಯು ಹುಲ್ಲನ್ನು ಮಾತ್ರವೇ ತಿಂದುಕೊಂಡು, ತಪವನ್ನಾಚರಿಸುತ್ತಾ ಇಲ್ಲಿ ಮೃಗಗಳೊಂದಿಗೆ ವಾಸಮಾಡುತ್ತಲಿದ್ದನು. ಆತನ ಸಮಾಧಿಯಿಂದ ಭಯಪಟ್ಟ ಇಂದ್ರನು–ಐದುಮಂದಿ ಅಪ್ಸರೆಯರನ್ನು ಕಳುಹಿದನು, ಆಗ ಮುನಿಯು ಅ ದಿವ್ಯಾಂಗನೆಯರ ಪಾಯವೆಂಬ ಕಪಟದ ಬೋನಿಗೆ ಸಿಲುಕಿದನು" ಎಂದು ಹೇಳುವರು. ಈ ಸರೋವರದೊಳಗಡಗಿರುವ

ಸೌಧದಲ್ಲಿ ಆರಂಭವಾದ ಸಂಗೀತ ಮೃದಂಗಘೋಷವು–ಮುಗಿಲಿಗೆ ವ್ಯಾಪಿಸಿ, ನಮ್ಮ ಪುಷ್ಪಕದ ಚಂದ್ರಶಾಲೆಯನ್ನು ಪ್ರತಿಧ್ವನಿಯಿಂದ ಕ್ಷಣಕಾಲ ಸಶಬ್ದವಾದುದನ್ನಾಗಿ ಮಾಡುತ್ತಲಿದೆ.

ಇದರ ಹತ್ತಿರದಲ್ಲಿಯೇ ಸಚ್ಚರಿತ್ರೆಯಿಂದ ಬಹುಶಾಂತನೆನಿಸಿರುವ ಸುತೀಕ್ಷ್ಣನೆಂಬ ಮಹಾ ತಪಸ್ವಿಯು ಜ್ವಲಿಸುತ್ತಲಿರುವ ನಾಲ್ಕು ಅಗ್ನಿಗಳ ನಡುವೆ ನಿಂತು, ತೀವ್ರವಾದ ತಪಸ್ಸನ್ನು ಆಚರಿಸುತ್ತಲಿರುವನು. ಹಣೆಯನ್ನು ಸುಡುತ್ತಲಿರುವ ಸೂರ್ಯನೇ ಈತನಿಗೆ ಐದನೆಯ ಅಗ್ನಿಯೆನಿಸಿದ್ದಾನೆ. ಈತನ ತಪಸ್ಸನ್ನು ಭಂಗಪಡಿಸಬೇಕೆಂದು ಹಿಂದೆ ಮಹೇಂದ್ರನು ಸುರಸುಂದರಿಯರನ್ನು ಕಳುಹಿದನು, ಅವರಿಲ್ಲಿಗೈತಂದು, ಮುಗುಳುನಗೆಯಿಂದೊಡಗೂಡಿದ ಕುಡಿಗಣ್ಣನೋಟವೇ ಮುಂತಾದ ಬಗೆಬಗೆಯ ಬೆಡಗುಗಳನ್ನೆಲ್ಲ ತೋರಿದರು. ಆ ಚೇಷ್ಟೆಗಳೆಂದೂ ಈ ಮಹರ್ಷಿಯ ಮನವನ್ನು ಭೇದಿಸಲು ಸಮರ್ಥವೆನಿಸಲಿಲ್ಲ. ಓ ಜಾನಕಿ । ಈ ಮಹಾಮುನಿಯು–ಜಪಮಣಿಮಾಲೆಯ ಕಂಕಣವುಳ್ಳುದೂ, ಹುಲ್ಲೆಗಳನ್ನು ಮೈದಡವಿ ತುರಿಸತಕ್ಕುದೂ, ದರ್ಭೆಯ ಹುಲ್ಲನ್ನು ಕುಯ್ಯುತಕ್ಕುದೂ ಆಗಿ, ಇಂದ್ರಿಯ ಜಯವನ್ನೂ, ಸತ್ಕರ್ಮಾಚರಣೆಯನ್ನೂ ಸೂಚಿಸುವ, ತನ್ನ ಬಲದೋಳನ್ನು ಎತ್ತಿ ಇಗೋ ನನ್ನನ್ನು ಪೂಜಿಸುತ್ತಲಿರುವನು. ಮತ್ತು–ಮೌನವ್ರತವನ್ನವಲಂಬಿಸಿರುವುದರಿಂದ ನಾನೊಪ್ಪಿಸಿದ ವಂದನೆಯನ್ನು ಸ್ವಲ್ಪವಾಗಿ ಅಲುಗಿದ ಶಿರದಿಂದ ಪರಿಗ್ರಹಿಸಿ, ಕ್ಷಣಕಾಲ ಮಾತ್ರ ಮರೆಯಾಗಿದ್ದು, ಕೂಡಲೆ ನಮ್ಮ ವಿಮಾನವು ಮುಂದುವರಿಯಲು, ತೆರಪಾದ ತನ್ನ ದೃಷ್ಟಿಯನ್ನು ಮರಳಿ ಸಹಸ್ರರಶ್ಮಿಯಲ್ಲಿ ನೆಲೆಗೊಳಿಸಿದ್ದಾನೆ.

ಇದೇ ಬಹುಮಂದಿ ಅತಿಥಿಗಳನ್ನು ಸತ್ಕರಿಸುತ್ತಲಿದ್ದ ಮಹಾನುಭಾವನಾದ ಶರಭಂಗ ಮಹರ್ಷಿಯ ಪಾವನವಾದ ಪುಣ್ಯಾಶ್ರಮವು. ಆಹಿತಾಗ್ನಿಯಾಗಿದ್ದ ಆ ತಪಸ್ವಿಯೇ ಹಿಂದೆ ನಾವಿಲ್ಲಿಗೆ ಬಂದ ವೇಳೆಯೊಳಗೆ ಸಮಿತ್ತುಗಳಿಂದ ಅಗ್ನಿಯನ್ನು ಪ್ರಜ್ವಲಗೊಳಿಸಿ, ಮಂತ್ರಪೂತವಾಗಿದ್ದ ತನ್ನ ತನುವನ್ನೂ ತನೂನಪಾತಿನಲ್ಲಿ ಹೋಮಮಾಡಿದನು. ಆ ಮಹಾಮುನಿಯ ತಪೋವನದಲ್ಲಿನ ಫಲವೃಕ್ಷಗಳೇ ಈಗ ದಾರಿ ನಡೆದು ಬಳಲಿ, ಅತಿಥಿಗಳಾಗಿ ಬಂದವರಿಗೆ ನೆಳಲನ್ನಿತ್ತು ಹಣ್ಣು ಹಂಪಲುಗಳಿಂದ ಉಪಚರಿಸಿ, ಅಭ್ಯಾಗತ ಸತ್ಕಾರವನ್ನು ಸುಖವಾಗಿ ನಡೆಸುತ್ತಲಿವೆ. ಅದರಿಂದ ಒಳ್ಳೆಯ ಮನೆತನದ ಸುಪುತ್ರರಲ್ಲಿ ಹೇಗೋ ಹಾಗೆ ಈ ವನತರುಗಳಲ್ಲಿಯೂ ಸತ್ಕಾರ ಸಂಪ್ರದಾಯವು ನೆಲೆಗೊಂಡಿದೆ. ಓ ಸುಂದರಾಂಗಿ! ಎಡಬಿಡದೆ ಹರಿಯುವ ಜಲಧಾರೆಯ ಧ್ವನಿಯಿಂದೊಡಗೂಡಿದ ಗವಿಯೆಂಬ ಮುಖವುಳ್ಳುದೂ, ತುದಿಗೆ ಸಿಲುಕಿರುವ ಮೋಡವೆಂಬ ಗೂಟಿಯಾಟದ ಕೆಸರು ಮಣ್ಣಿನಿಂದೊಡಗೂಡಿದ ಕೋಡುಳ್ಳದ್ದೂ ಆಗಿರುವ ಈ ಚಿತ್ರಕೂಟವು–ಕೊಬ್ಬಿ ಗುಟರಿಕೆಯನ್ನು ಹಾಕುತ್ತಲಿರುವ ಗೂಳಿಯಂತೆ

ನನ್ನ ದೃಷ್ಟಿಯನ್ನು ಸೆಳೆಯುತ್ತಲಿದೆ. ಬಹು ನಿರ್ಮಲವೂ, ಗಂಭೀರವೂ ಆಗಿರುವ ಪ್ರವಾಹವನ್ನೊಳಗೊಂಡು, ಪಾತ್ರವು ವಿಸ್ತಾರವಾಗಿದ್ದರೂ ಇಲ್ಲಿಗೆ ಬಹುದೂರವಾಗಿರುವುದರಿಂದ ಬಹುಸೂಕ್ಷ್ಮವಾಗಿಯೂ ನೀಳವಾಗಿಯೂ ಕಾಣಬರುತ್ತ, ಚಿತ್ರಕೂಟದ ಬಳಿಯಲ್ಲಿ ಹರಿಯುತ್ತಲಿರತಕ್ಕ ಈ ಮಂದಾಕಿನಿಯೆಂಬ ನದಿಯು-ಭೂದೇವಿಯ ಕೊರಳಿಗೆ ಇಳಿಯ ಹಾಕಿರುವ ಮುತ್ತಿನಹಾರದಂತೆ ಕಂಗೊಳಿಸುತ್ತಲಿರುವುದು. ಈ ಗಿರಿಯ ಹತ್ತಿರದಲ್ಲಿಯೇ ಒಂದು ಕರಿಯ ಹೊಂಗೆಯ ಗಿಡವು ಕಾಣಬರುತ್ತಲಿದೆ ನೋಡು. ಥಳಥಳಿಸುವ ಇದರ ಚಿಗುರಿನ ಗೊಂಚಲನ್ನು ಒಂದು ಸಾರಿ ನಾನು - ಯವಾಂಕುರದಂತೆ ಬೆಳಗುವ ನಿನ್ನ ಕಪೋಲಕ್ಕೆ ಅಲಂಕಾರವಾಗಿರುವಂತೆ ಕರ್ಣಾಭರಣವನ್ನಾಗಿ ಸಿಂಗರಿಸಲಿಲ್ಲವೆ?

ಇತ್ತ ಮತ್ತೊಂದು ಅಮೋಘವಾದ ವನವು ಕಂಗೊಳಿಸುತ್ತಲಿದೆ. ಇದನ್ನವಲೋಕಿಸು- ಇಲ್ಲಿ - ದಂಡಿಸುವರೆಂಬ ಭಯವಿಲ್ಲದೆಯೇ ಮೃಗಗಳು ಬಹು ಶಾಂತಸ್ವಭಾವದಿಂದಿರುವುವು. ಹೂಬಿಡದೆಯೇ ಯಾವಾಗಲೂ ವೃಕ್ಷಗಳು ಫಲಭರಿತಗಳಾಗಿವೆ. ಈ ಪುಣ್ಯಾಶ್ರಮವೇ ಅತ್ರಿ ಮಹಾಮುನಿಯ ತಪಸ್ಸಿಗೆ ಸಾಧನವೆನಿಸಿರುವುದು. ತನ್ನ ಸ್ಥಿತಿಯಿಂದಲೇ ತಪೋನಿಧಿಯ ಅಪಾರವಾದ ತಪಃ ಪ್ರಭಾವವನ್ನು ಸೂಚಿಸುತ್ತಲಿದೆ.

ಸರ್ವಲೋಕಪ್ರಸಿದ್ಧವಾದ ಮಹಿಮೆಯನ್ನೊಳಗೊಂಡಿರುವ ಆ ಅತ್ರಿ ಮಹಾಮುನಿಯ ಧರ್ಮಕಳತ್ರವಾದ ಅನಸೂಯೆಯು-ಕಶ್ಯಪಾದಿ ಸಪ್ತರ್ಷಿಗಳು ಪೂಜಾರ್ಥವಾಗಿ ಎತ್ತಿಕೊಳ್ಳತಕ್ಕ ಕನಕಕಮಲಗಳನ್ನೊಳಗೊಂಡು, ಮುಕ್ಕಣ್ಣನ ಮೌಳಿಮಾಲೆಯಂತಿರುವ ತ್ರಿಪಥಗೆಯನ್ನು ತಪೋಧನರ ತ್ರಿಕಾಲಸ್ನಾನಕ್ಕೆ ಸಾಧನವಾಗಿರುವಂತೆ ಇಲ್ಲಿಯೆ ಹರಿಯುವ ಹಾಗೆ ಮಾಡಿದಳಂತೆ. ಇಂದ್ರಿಯ ಜಯಾರ್ಥವಾಗಿ ವೀರಾಸನದಲ್ಲಿ ಕುಳಿತು, ಯೋಗಾರೂಢರಾಗಿರುವ ಮಹರ್ಷಿಗಳಿಗೆ ಆಸರೆಯಾದ ಈ ತಪೋವನ ತರುಗಳು - ತಮ್ಮ ಬುಡದಲ್ಲಿರುವ ಜಗುಲಿಗಳಿಂದೊಡಗೂಡಿ, ಗಾಳಿಯು ಬೀಸದೆ ನಿಶ್ಚಲಗಳಾಗಿರುವುದರಿಂದ, ತಾವೂ ವೀರಾಸನವನ್ನಲಂಬಿಸಿ ಧ್ಯಾನಪರಗಳಾಗಿರುವಂತೆ ಕಾಣಬರುತ್ತಲಿವೆ. ಎಲೆ ವೈದೇಹಿ! ನಾವು ಹಿಂದೆ ದಂಡಕಾರಣ್ಯವನ್ನು ಹೊಗುವಾಗ ನೀನು- "ಎಲೈ ನ್ಯಗ್ರೋಧ ಮಹಾವೃಕ್ಷವೇ! ನಿನಗೆ ನಮಸ್ಕರಿಸುವೆನು, ನನ್ನ ಪತಿಯು ತಪ್ಪದೆ ವ್ರತವನ್ನು ಪಾಲಿಸಲಿ" ಎಂದಾವ ಮಹೀರುಹವನ್ನು ಪ್ರಾರ್ಥಿಸಿದೆಯೋ? ಆ ಜ್ಞಾನವೆಂಬ ವಟತರುವಿಲ್ಲಿ ಕಾಣಬರುತ್ತಲಿದೆ ನೋಡು. ಇದೀಗ ಪೂರ್ಣಫಲಭರಿತಮಾಗಿ, ಪದ್ಮರಾಗ ಮಣಿಗಳ ರಾಶಿಯಂತೆ ಕಂಗೊಳಿಸುತ್ತಲಿರುವುದು.

ಅಹಹ! ಕೋಮಲಾಂಗಿಯಾದ ಓ ಮೈಥಿಲಿ! ಯಮುನೆಯ ಅಲೆಗಳಿಂದ ಕಲೆಯುತ್ತಲಿರುವ ಪ್ರವಾಹವನ್ನೊಳಗೊಂಡಿರುವ ಈ ಜಾಹ್ನವಿಯ ಹೊಳವನ್ನು ನೋಡಿದೆಯಾ? ಒಂದು ಕಡೆಯಲ್ಲಿ ಸುತ್ತಲೂ ಹರಡುತ್ತಲಿರುವ ಕಾಂತಿಗಳನ್ನೊಳಗೊಂಡ ಇಂದ್ರ ನೀಲಮಣಿಗಳೊಂದಿಗೆ ಪೋಣಿಸಿರುವ ಮುತ್ತುಗಳ ಹಾರದಂತೆ ಬೆಳಗುತ್ತಲಿದೆ. ಮತ್ತೊಂದು ಕಡೆಯಲ್ಲಿ – ಕನ್ನೈದಿಲೆಗಳ ಸಂಗಡ ಸೇರಿಸಿ ರಚಿಸಿರುವ ಬೆಳ್ದಾವರೆಗಳ ಸರದಂತೆ ಕಂಗೊಳಿಸುತ್ತಲಿದೆ. ಒಂದೆಡೆಯಲ್ಲಿ – ನೀಲ ಹಂಸಗಳಿಂದೊಡಗೂಡಿರುವ ರಾಜಹಂಸಗಳ ಪಙ್ತಿಯಂತೆ ಪ್ರಕಾಶಿಸುತ್ತಲಿದೆ. ಬೇರೊಂದೆಡೆಯಲ್ಲಿ – ಭೂದೇವಿಗೆ ಕಲ್ಪಿಸಿರುವ ಕಾಲಾಗುರು ಮಕರಿಕಾಪತ್ರದಿಂದ ಸಹಿತವಾದ ಚಂದನದ ಲೇಪದಂತೆ ಭಾಸಿಸುತ್ತಲಿದೆ. ಒಂದು ಸ್ಥಳದಲ್ಲಿ – ಮರಗಳ ನೆಳಲುಗಳೊಳಗೆ ಅಡಗಿರುವ ಕತ್ತಲುಗಳ ಸಂದುಗಳಲ್ಲಿ ಮಿಳಿತವಾದ ಬೆಳ್ದಿಂಗಳ ಬೆಳಕಿನಂತೆ ಕಳಕಳಿಸುತ್ತಲಿದೆ. ಇನ್ನೊಂದು ತಾವಿನಲ್ಲಿ – ನಡುನಡುವೆ ಕಾಣಬರತಕ್ಕ ಬಾಂದಳವನ್ನೊಳಗೊಂಡಿರುವ ಶರನ್ಮೇಘಗಳ ಸಾಲಿನಂತೆ ಶೋಭಿಸುತ್ತಲಿದೆ. ಒಂದು ಪ್ರದೇಶದಲ್ಲಿ –ಕೃಷ್ಣಸರ್ಪಾಲಂಕೃತವಾಗಿ, ಭಸ್ಮಾಂಗರಾಗವನ್ನೊಳಗೊಂಡ ಶಂಕರನ ಶರೀರದಂತೆ ದೇದೀಪ್ಯಮಾನವಾಗಿರುವುದು. ಇದೇ ಮಹಾಭೂಭಾಗವೆನಿಸಿದ ಪ್ರಯಾಗವು. ಸಮುದ್ರಪತ್ನಿಯರೆನಿಸಿದ ಗಂಗಾ ಯಮುನೆಯರ ಈ ಸಂಗಮಸ್ಥಲದಲ್ಲಿ ಸ್ನಾನಮಾಡಿ, ತನುವನ್ನು ತ್ಯಜಿಸಿ, ಪುಣ್ಯಾತ್ಮರೆನಿಸಿದ ಪುರುಷರಿಗೆ, ತತ್ತ್ವಜ್ಞಾನ ವಿಲ್ಲದಿದ್ದರೂ ಪ್ರಾರಬ್ಧಕರ್ಮದಿಂದ ಒದಗಿರುವ ಶರೀರದ ತ್ಯಾಗಾನಂತರದಲ್ಲಿ ಮರಳಿ ಶರೀರಸಂಬಂಧವಿಲ್ಲದ ಮುಕ್ತಿಯು ಸಮನಿಸುವುದೆಂದು ಪ್ರಾಜ್ಞರು ಹೇಳುವರು.

ಅಯಿ ಜನಕರಾಜನಂದಿನೀ! ಅದೇ ಬೇಡರೊಡೆಯನಾದ ಗುಹನ ಶೃಂಗಿಬೇರ ಪುರವು. ಹಿಂದೆ ನಾನು ಮೌಳಿಮಣಿಯನ್ನು ತೆಗೆದಿಟ್ಟು, ಆಲದ ಹಾಲಿನಿಂದ ಜಡೆಗಳನ್ನು ಕಲ್ಪಿಸಿಕೊಳ್ಳುತ್ತಲಿರುವುದನ್ನು ನೋಡಿ, ನಮ್ಮ ಮಂತ್ರಿಯಾದ ಸುಮಂತ್ರನು– ಅಯ್ಯೋ! ರಾಮಾ ನಿನಗೀಸ್ಥಿತಿಯು ಬಂದಿತೇ? ಓ ಕೈಕೇಯೀ! ನಿನ್ನ ಶಾಪವು ಕೈಗೂಡಿತೇ? ಎಂದು ಮೋರೆಗೆ ಸೆರಗನ್ನಿಟ್ಟು, ಕಣ್ಣಿನಿಂದ ನೀರನ್ನು ಸುರಿಸುತ್ತಾ, ಗಟ್ಟಿಯಾಗಿ ಗೋಳೋ ಎಂದು ಅತ್ತುದ್ದು ಇಲ್ಲಿಯೇ.

ಯಕ್ಷಾಂಗನೆಯರ ಜಲಕ್ರೀಡೆಗೆಡೆಯೆನಿಸಿ, ಹೇಮಾಂಬುಜಗಳಿಗಾಕರವಾದ ಬ್ರಹ್ಮಸರೋವರವಿಲ್ಲಿ ಕಾಣಬರುತ್ತಲಿದೆ ನೋಡು. ಬುದ್ಧಿಗೆ ಅವ್ಯಕ್ತವೆಂಬ ಪ್ರಧಾನವು ಕಾರಣವಾಗಿರುವ ಹಾಗೆ, ಸರಯೂನದಿಗೆ ಈ ಮಾನಸಸರವು ಮೂಲಕಾರಣವೆಂದು ಆಪ್ತವಚನಗಳೆನಿಸಿದ ವೇದಗಳೂ, ವೇದವಿದರೆನಿಸಿದ ಮುನಿಗಳೂ ಹೇಳುತ್ತಾರೆ.

ಇತ್ತ ತಿರುಗಿ ನೋಡು, ಇದೇ ಅಯೋಧ್ಯಾ ರಾಜಧಾನಿಯ ಬಳಿಯಲ್ಲಿ ಹರಿಯುತ್ತಲಿರುವ ಸರಯೂನದಿ. ಪಶುಬಂಧಕ್ಕೆ ಉಪಯೋಗಿಸಿದ ಯೂಪಸ್ತಂಭಗಳು

ಇದರ ತೀರದಲ್ಲಿ ಸಾಲಾಗಿ ಕಾಣಬರುತ್ತಲಿವೆ. ಇಕ್ಷ್ವಾಕು ಮಹಾರಾಯನ ವಂಶದಲ್ಲಿ ಜನಿಸಿದ ಬಹುಮಂದಿ ನಮ್ಮ ಹಿರಿಯರು ಅನೇಕವೇಳೆ ಅಶ್ವಮೇಧಗಳನ್ನಾಚರಿಸಿ ಅವಭೃಥಸ್ನಾನಗಳನ್ನು ಮಾಡಿದುದರಿಂದ ಈ ಮಹಾನದೀ ಜಲಗಳನ್ನು ಮತ್ತಷ್ಟು ಪಾವನತರಗಳನ್ನಾಗಿ ಮಾಡಿರುವರು. ಈ ತರಂಗಿಣಿಯು ತೀರದ ಮಳಲುನೆಲದಲ್ಲಿಯೇ ನಮ್ಮವರೆಲ್ಲರೂ ಬೆಳೆದುದು. ಭೂರಿಪಯೋದಾನದಿಂದ ಆ ಉತ್ತರ ಕೋಸಲೇಶ್ವರರೆಲ್ಲರನ್ನೂ ಸುಖವಾಗಿ ಪೋಷಿಸಿ ಸರ್ವರಿಗೂ ಸಮಾನವಾದ ತಾಯಿ ಎನಿಸಿಕೊಂಡಿರುವುದು. ಅದರಿಂದಲೇ ನನ್ನ ಮನವೂ ಈ ವಾಹಿನಿಯನ್ನು ಜನನಿಯಂತೆ ಭಾವಿಸಿ ಗೌರವಿಸುತ್ತಲಿದೆ. ಈ ಮಹಾಪಗೆಯು ಈಗ ನಮ್ಮ ತಾಯಿಯಾದ ಕೌಸಲ್ಯೆಯ ಹಾಗೆ, ಪೂಜ್ಯನಾದ ನಮ್ಮ ತಂದೆಯಾದ ದಶರಥನನ್ನು ಅಗಲಿರುತ್ತ, ಬಹುದಿವಸಗಳಿಂದ ಅರಣ್ಯವಾಸಿಯಾಗಿದ್ದು ಹಿಂದಿರುಗಿ ಬರುತ್ತಲಿರುವ ಈ ನನ್ನನ್ನು ಈಗ ದೂರದಿಂದಲೇ ಕನಿಕರಪಟ್ಟು ತಹತಹಪಡುತ್ತ, ತಂಗಾಳಿಯನ್ನೊಳಗೊಂಡಿರುವ ತನ್ನ ತೆರೆಗಳೆಂಬ ಕರಗಳಿಂದ ಬಾಚಿ ಅಪ್ಪಿಕೊಳ್ಳಲೆಳಸುವಂತಿದೆ.

ಪ್ರಿಯೆ! ಅಲ್ಲಿನೋಡು– ನೆಲದಿಂದೆದ್ದು, ಸಂಜೆಯಂತೆ ಬಲು ಕೆಂಪಾಗಿ, ಮುಗಿಲನ್ನು ಮುಟ್ಟುತ್ತಲಿರುವ ಧೂಳಿಯು– ದೂರದಲ್ಲಿ ಕಾಣಬರುತ್ತಲಿದೆ. ಓಹೋ! ಸರಿ, ಹನುಮಂತನಾಗಲೆ ಮುಂದೆ ಹೋಗಿ ನಮ್ಮ ಬರುವಿಕೆಯ ಸುದ್ದಿಯನ್ನು ಸೂಚಿಸಿ ಇದ್ದಾನೆ. ಅದರಿಂದಲೇ ಭರತನು ಸೇನಾಸಮೇತನಾಗಿ ನಮ್ಮನ್ನು ಇದಿರುಗೊಳ್ಳಲಿಕ್ಕೆ ಬರುತ್ತಲಿದ್ದಾನೆಂದು ಊಹಿಸುತ್ತೇನೆ. ಹಿಂದೆ ಕಾಡಿನಲ್ಲಿ ಖರಾದಿಗಳನ್ನಿರಿದು ಬಂದ ನನಗೆ ಲಕ್ಷ್ಮಣನು ನಿನ್ನನ್ನು ಒಪ್ಪಿಸಿದ ಹಾಗೆ ಈಗ ದಶಗಳನೇ ಮೊದಲಾದ ಹಗೆಗಳನ್ನು ಕೊಂದು ಬರುವ ಈ ನನಗೆ, ಭರತನು ಇದುವರೆಗೂ ಅನುಭವಿಸದೆಯೇ ಪಾಲಿಸುತ್ತಲಿದ್ದ ರಾಜ್ಯಲಕ್ಷ್ಮಿಯನ್ನು ಸಮರ್ಪಿಸಲಿಕ್ಕೆ ಸಿದ್ಧನಾಗಿ ಬರುತ್ತಲಿರುವುದೇ ದಿಟ. ಕುಲಗುರುವಾದ ವಸಿಷ್ಠಮುನಿಯು ಮುಂದೆ ಬರುತ್ತಲಿದ್ದಾನೆ. ಆತನ ಹಿಂದೆ ಪೂಜಾಪತ್ರೆಯನ್ನು ಪಾಣಿಯಲ್ಲಿ ಧರಿಸಿ, ಚೀರಾಂಬರನಾಗಿ ಮುನಿವೃತ್ತಿಯಿಂದಿರುವ ಭರತನು ಪಾದಚಾರಿಯಾಗಿ ಬರುತ್ತಲಿರುವನು. ಮುದುಕರಾದ ಮಂತ್ರಿಗಳು ಇಕ್ಕೆಲದಲ್ಲಿ ಬರುತ್ತಲಿದ್ದಾರೆ. ಪಡೆಯು ಹಿಂಬಾಲಿಸಿ ಬರುತ್ತಲಿದೆ. ತಂದೆಯೂ ಕೊಟ್ಟು, ಕೈಗೂ ದೊರೆತು, ತಾನು ತರುಣನೂ ಆಗಿದ್ದರೂ, ಅನುಭವಿಸದೆ, ಭರತನು ಅಂತಹ ರಾಜ್ಯಲಕ್ಷ್ಮಿಯನ್ನು ಮನಃಪೂರ್ವಕವಾಗಿ ತೊರೆದಿರುವುದನ್ನು ನೋಡಿದರೆ, ನನಗೋಸ್ಕರವಾಗಿ ಆಕೆಯೊಡನೆ ಹದಿನಾಲ್ಕು ವರ್ಷಗಳಿಂದಲೂ ತೀವ್ರವಾದ ಅಸಿಧಾರಾವ್ರತವನ್ನು ಅಭ್ಯಾಸ ಮಾಡುತ್ತಲಿರುವಂತೆ ತೋರುತ್ತಲಿದೆ.

ಇಂತು ದಾಶರಥಿಯು – ವೈದೇಹಿಯೊಡನೆ ಮಾತನಾಡುತ್ತಲಿರುವಲ್ಲಿ – ವಿಮಾನಾಧಿದೇವತೆಗೆ ರಾಮನ ಮನೋಗತವು ಗೊತ್ತಾಯಿತು ಆ ದೇವತೆಯಿಂದ ಪ್ರೇರಿತವಾದ ಪುಷ್ಪಕವು ಜ್ಯೋತಿರ್ಮಾರ್ಗದಿಂದ ಕೆಳಗೆ ಇಳಿಯುತ್ತಲಿದ್ದಿತು, ಭರತಾನುಚರರಾದ ಪ್ರಜೆಗಳೆಲ್ಲರೂ ತಲೆಗಳನ್ನೆತ್ತಿ ಆಶ್ಚರ್ಯದೊಡನೆ ನೋಡುತ್ತಲಿದ್ದರು. ದಿವ್ಯರಥವು ನೆಲದ ಹತ್ತಿರಕ್ಕೆ ಇಳಿಯಿತು. ಸೇವೆಯಲ್ಲಿ ಜಾಣನೆನಿಸಿದ ಹರೀಶ್ವರನಾದ ಸುಗ್ರೀವನು ಹಸ್ತಲಾಘವವನ್ನು ಕೊಟ್ಟನು. ವಿಭೀಷಣನು ಮುಂದಾಳಾಗಿ ದಾರಿಯನ್ನು ತೋರುತ್ತಲಿದ್ದನು. ಸ್ಫಟಿಕಮಣಿಮಯವಾದ ಸೋಪಾನದ ಹಾದಿಯಿಂದ ರಾಮನು ಕೆಳಗೆ ಇಳಿದನು. ಇಕ್ಷ್ವಾಕು ಕುಲಗುರುವಾದ ವಶಿಷ್ಠಮುನಿಗೆ ವಿಧೇಯತೆಯಿಂದ ಮಣಿದನು, ಅರ್ಘ್ಯವನ್ನು ಸ್ವೀಕರಿಸಿದ ಕೂಡಲೆ ಕರತಲದಿಂದ ತಮ್ಮನಾದ ಭರತನನ್ನು ಬಾಚಿ ಗಟ್ಟಿಯಾಗಿ ಅಪ್ಪಿಕೊಂಡನು ಮತ್ತು – ಪಿತೃರಾಜ್ಯ ಮಹಾಭಿಷೇಕವನ್ನು ತನ್ನಲ್ಲಿರುವ ಭಕ್ತಿಯಿಂದ ತೊರೆದಿರುವ ಅವನ ಮುಂದಲೆಯುನ್ನು ಆನಂದಬಾಷ್ಪಬಿಂದುಗಳನ್ನುದುರಿಸುತ್ತ ಮೂಗಿನಿಂದ ಆಘ್ರಾಣಿಸಿದನು. ಬಳಿಕ ರೋಮಗಳ ಬೆಳವಳಿಗೆಯಿಂದ ಮುಖವಿಕಾರವನ್ನು ಪಡೆದು, ಬಿಳಲುಗಳಿಂದೊಡಗೂಡಿದ ಆಲದಮರಗಳಂತಿರುವ ವೃದ್ಧಮಂತ್ರಿಗಳು ನಮಸ್ಕರಿಸಿದರು. ಕರುಣಾರಸಪೂರ್ಣವಾದ ದೃಷ್ಟಿಯನ್ನು ಅವರಲ್ಲಿ ಹರಡುತ್ತಾ, ಮೃದುಮಧುರವಾದ ಮಾತುಗಳಿಂದ ಕ್ರಮವಾಗಿ ಕುಶಲಪ್ರಶ್ನೆ ಮಾಡುತ್ತ ಅನುಗ್ರಹಿಸಿದನು.

ಆಮೇಲೆ “ಋಕ್ಷ ಹರೀಶ್ವರನಾದ ಈ ಸುಗ್ರೀವನು ಆಪದ್ಬಂಧುವಾಗಿದ್ದನು. ಸಮರಭೂಮಿಯಲ್ಲಿ ಈ ವಿಭೀಷಣನೇ ಮುಂದಾಳಾಗಿ ಹಗೆಗಳನ್ನು ಹೊಡೆದವನು” ಎಂದು ರಘುನಂದನನು–ಆದರದಿಂದ ತೋರಲು, ಭರತನು–ಲಕ್ಷ್ಮಣನನ್ನು ಅನುಜನಾಗಿದ್ದರೂ ಅತಿಕ್ರಮಿಸಿ, ಸುಗ್ರೀವ ವಿಭೀಷಣರನ್ನು ಅಲಿಂಗನಾದಿಗಳಿಂದ ಅಭಿನಂದಿಸುತ್ತ ಅಭಿವಂದಿಸಿದನು.

ತರುವಾಯ ಲಕ್ಷ್ಮಣನು–ಬಾಗಿದ ಶಿರವುಳ್ಳವನಾಗಲು, ಭರತನು ಅವನನ್ನು ಎರಡು ಕೈಗಳಿಂದಲೂ ಬಾಚಿ ಮೇಲಕ್ಕೆತ್ತಿ, ಇಂದ್ರಾರಿಯ ಶರಪ್ರಹಾರಗಳಿಂದ ಗಾಯವಾಗಿ, ಮಾಗಿ, ಜಡ್ಡುಗಟ್ಟಿರುವ ಅವನ ಎದೆಯ ಚರ್ಮದಗಂಟುಗಳಿಂದ ತನ್ನ ವಕ್ಷಸ್ಥಲಕ್ಕೆ ಕ್ಲೇಶವುಂಟಾಗುವವರೆಗೂ ಗಟ್ಟಿಯಾಗಿ ತಬ್ಬಿಕೊಂಡನು. ಆದರೂ ಅವನ ಪ್ರೀತಿಯು ತಣಿಯಲೇ ಇಲ್ಲ.

ಆಮೇಲೆ–ರಾಮಾಜ್ಞೆಯಿಂದ ಕಪಿಪತಿಗಳೆಲ್ಲ ಮನುಷ್ಯಾಕಾರರಾಗಿ ಆನೆಗಳನ್ನೇರಿದರು. ಮದೋದಕಧಾರೆಗಳನ್ನು ವರ್ಷಿಸುತ್ತಲಿರುವ ಗಜೇಂದ್ರಗಳಿಂದ ವಾನರಯೂಥ

ಪತಿಗಳು ಪರ್ವತಾರೋಹಣದ ಸುಖವನ್ನು ಅನುಭವಿಸುತ್ತ ಬಂದರು. ನಿಶಾಚರೇಶ್ವರನಾದ ವಿಭೀಷಣನೂ ತನ್ನನುಚರರಿಂದ ಸಹಿತನಾಗಿ, ದಶರಥನಂದನನ ಆಜ್ಞಾನುಸಾರವಾಗಿ ಆತನು ತೋರಿದ ತೇರನ್ನೇರಿದನು. ಆದರೆ ವಿಭೀಷಣನ ರಥಗಳು ಮಾಯಾಕಲ್ಪಿತವಾದ ವಿವಿಧ ವಿಚಿತ್ರ ರಚನೆಗಳುಳ್ಳವಾದರೂ, ದಶರಥರಥಗಳ ಶೋಭೆಗೆಣೆಯೆನಿಸಲಾರದಿದ್ದುವು.

ತದನಂತರ– ಬುಧ ಬೃಹಸ್ಪತಿಗಳಿಂದ ಸುಂದರನೆನಿಸಿದ ಚಂದ್ರನು ಇರುಳುಹೊತ್ತಿನಲ್ಲಿ ಮಿಂಚಿನಿಂದೆಸೆವ ಮೇಘಮಂಡಲವನ್ನು ಹೇಗೋ ಹಾಗೆ, ಶ್ರೀರಾಮನೂ ಲಕ್ಷ್ಮಣ ಶತ್ರುಘ್ನರಿಂದ ಸಹಿತನಾಗಿ, ಶೋಭಿಸುತ್ತಲಿರುವ ಪತಾಕೆಯಿಂದ ಕಾಮಗಾಮಿಯಾಗಿರುವ ಅಂದವಾದ ವಿಮಾನವನ್ನೇರಿದನು. ಆ ದಿವ್ಯವಿಮಾನದಲ್ಲಿ– ಜಗನ್ನಾಥನಾದ ಆದಿವರಾಹನ ಮೂರ್ತಿಯಿಂದ ಪ್ರಲಯವನ್ನು ತಪ್ಪಿಸಿ ಉದ್ಧಾರವನ್ನು ಪಡೆದ ಭೂದೇವಿಯ ಹಾಗೂ, ಶರದಾರಂಭದಿಂದ ಮೇಘಮಂಡಲವನ್ನು ಬಿಟ್ಟು ಹೊರಗೆಬಂದ ಚಂದ್ರಿಕೆಯ ಹಾಗೂ, ರಾಮನಿಂದ ರಾವಣನೆಂಬ ಸಂಕಟದಿಂದ ಬಿಡಿಸಲ್ಪಟ್ಟು, ಸಂತೋಷವುಳ್ಳವಳಾಗಿರುವ ಮೈಥಿಲಿಯನ್ನು ಭರತನು ವಂದಿಸಿದನು. ಆಗ–ರಾವಣನು ತನ್ನ ತಲೆಗಳನ್ನೊತ್ತಿ ಬೇಡಿದರೂ ತಿರಸ್ಕರಿಸಿ, ವೀರಪಾತಿವ್ರತ್ಯ ವನ್ನೊಳಗೊಂಡು, ಪೂಜ್ಯಳೆನಿಸಿದ ಜಾನಕಿಯ ಚರಣಯುಗ್ಮವು, ಅಣ್ಣನನುಸರಣೆ ಯಿಂದ ಜಡೆಯನ್ನು ಧರಿಸಿದ್ದ ಸಜ್ಜನನಾದ ಭರತನ ಶಿರವು, ಈ ಎರಡೂ ಕಲೆತು, ಒಂದನ್ನೊಂದು ಪಾವನಗೊಳಿಸುವಂತಿದ್ದುವು. ಇಂತು ಪೂಜ್ಯನಾದ ರಾಮನು ಸಕಲಪ್ರಜೆಗಳಿಂದ ಸಹಿತನಾಗಿ ಪುಷ್ಪಕವಿಮಾನದಿಂದ ಇಲ್ಲಿಗೆ ಅರೆಗಾವುದದ ದಾರಿಯನ್ನು ತೆರಳಿ ಉದಾರವೆನಿಸಿದ ಅಯೋಧ್ಯಾನಗರದ ಸಮೀಪೋದ್ಯಾನದಲ್ಲಿ, ಶತ್ರುಘ್ನನು ಅಣಿಮಾಡಿಸಿದ್ದ ಗೂಡಾರಗಳಲ್ಲಿ ಇಳಿದನು.

****

ಹದಿನಾಲ್ಕನೆಯ ಅಧ್ಯಾಯ

ಸೀತಾ ಪರಿತ್ಯಾಗ

ಸೂಚನೆ – ಇಳೆಯಾಣ್ಮನೆನಿಸಿ ರಾಮಂ ।
ಕಳಕಳಿಸಿದುದು ಗಡ ರಾಜ್ಯದೈಸಿರಿಯಾಗಳ್ ।
ಪಳಿವಂ ಕೇಳ್ದಾ ಸತಿಯಂ
ಕಳುಪಿದನಾ ರಾಮನಂದು ಕಾಡಿಗೆ ಧೀರಂ॥

ಇತ್ತ ಅಯೋಧ್ಯಾನಗರದಲ್ಲಿ – ಆಸರೆಯಾಗಿದ್ದ ಮರವು ಮುರಿದು ಬೀಳಲು, ಅದರ ಮೇಲೆ ಹಬ್ಬಿದ್ದ ಬಳ್ಳಿಗಳಂತೆ, ಪತಿಯು ಗತಿಸಿದ ಮೇಲೆ ಮಹಾರಾಣಿಯರಿಬ್ಬರೂ ಬಹು ಶೋಚನೀಯವಾದ ಅವಸ್ಥೆಯನ್ನು ಹೊಂದಿ ಇರುತ್ತಿದ್ದರಷ್ಟೆ? ಈಗ ತಮ್ಮ ಮಕ್ಕಳೆಲ್ಲರೂ ಒಟ್ಟಿಗೆ ಬಂದು ಪುರೋದ್ಯಾನದಲ್ಲಿ ಇಳಿದಿರುವರೆಂಬ ಸುದ್ದಿಯು ತಿಳಿಯಿತು, ಕೂಡಲೆ ಆ ಕೌಸಲ್ಯಾಸುಮಿತ್ರೆಯರಿಬ್ಬರೂ ಜೊತೆಯಾಗಿ ಬಂದು, ರಾಮಲಕ್ಷ್ಮಣರನ್ನು ಒಟ್ಟಿಗೆ ಕಂಡರು. ಹಗೆಗಳನ್ನಿರಿದು, ವಿಕ್ರಮದಿಂದ ಶೋಭಿಸುತ್ತಲಿರುವ ಆ ಇಬ್ಬರು ಮಕ್ಕಳೂ ಈರ್ವರು ತಾಯಿಯರಿಗೆ ಕ್ರಮವಾಗಿ ಮಣಿದರು. ಮಾತೆಯರಾದರೆ ನೀರುತುಂಬಿದ ಕಣ್ಣುಗಳಿಂದ ಮನವಾರ ಅವರನ್ನು ನೋಡಿ ಸ್ಪಷ್ಟವಾಗಿ ತಿಳಿಯಲಿಕ್ಕಾಗದೆಯೇ ಹೋಯಿತು. ಕರತಲಗಳಿಂದ ಚೆನ್ನಾಗಿ ಮೈತಡವಿ ಆ ಸುಖಾನುಭವದಿಂದ ಅರಿತರು. ಬೇಸಗೆಯ ಬಿಸಿಲಿನಬೇಗೆಯಿಂದ ಸುಡುತ್ತಲಿರುವ ಗಂಗಾಸರಯೂಜಲವನ್ನು, ಹಿಮಗಿರಿಯಿಂದ ಕರಗಿ ಹರಿದುಬರುವ ತೋಯವು ಹೇಗೋ ಹಾಗೆ, ಆ ಜನನಿಯರ ಕಣ್ಣುಗಳಿಂದ ಹೊರಟ ಆನಂದಬಾಷ್ಪವು– ಶೋಕದಿಂದ ಉಂಟಾಗಿದ್ದ ಬಿಸಿನೀರನ್ನು ತಣ್ಣಗೆಮಾಡಿತು. ರಕ್ಕಸರ ಕಣೆಗಳ ಪೆಟ್ಟುಗಳಿಂದುಂಟಾಗಿ ಮಾಯ್ದಿರುವ ಮಕ್ಕಳ ಮೈಗಳೊಳಗಣ ಗಾಯಗಳನ್ನು ತಡವಿ ಬಲು ಕನಿಕರದಿಂದ ಮುಟ್ಟಿಮುಟ್ಟಿ ನೋಡಿದರು. ಆದರೆ ಅವು ಆ ತಾಯಿಯರಿಗೆ ಹಸಿಯ ಗಾಯಗಳಾಗಿಯೇ ತೋರಿದುವು. ಆಗಲವರು– ಅಯ್ಯೋ! ಕ್ಷತ್ರಕುಲಾಂಗನೆಯರಿಗೆ ಮಕ್ಕಳಾಗಬೇಕೆಂಬ ಬಯಕೆಯಿದ್ದರೂ, ವೀರಮಾತೆಯರೆಂಬ ಹೆಸರು ಅವರಿಗೆ ಬರಬಾರದು ಎಂದುಕೊಂಡರು.

ತರುವಾಯ ಗಂಡನಿಗೆ ಕರಕರೆಯನ್ನುಂಟುಮಾಡಿದ ಅವಲಕ್ಷಣಾದ ಹೆಂಗಸು ಇವಳೇ ಸೀತೆ, ಎಂದು ತನ್ನ ಹೆಸರನ್ನು ಹೇಳುತ್ತಾ, ಜಾನಕಿಯು-ಸ್ವರ್ಗಗತನಾಗಿರುವ ಮಾವನಿಗೆ ಪತ್ನಿಯರಾದ ಅತ್ತೆಯರಿಬ್ಬರಿಗೂ ಭಕ್ತಿಭೇದವಿಲ್ಲದೆ ಅಡ್ಡಬಿದ್ದಳು, ಮಗೂ! ಮೇಲಕ್ಕೆ ಏಳಮ್ಮಾ! ಪತಿಯಾದ ರಾಮನು-ತಮ್ಮನಾದ ಲಕ್ಷ್ಮಣನೊಂದಿಗೆ ಮಹತ್ತರವಾದ ಕಷ್ಟವನ್ನು ದಾಟಿದುದು ನಿನ್ನ ಪಾವನಚರಿತ್ರೆಯಿಂದಲೇ ಅಲ್ಲವೆ? ಎಂದು ಪ್ರಿಯವಾಗಿದ್ದರೂ ಸತ್ಯವಾಗಿಯೇ ಇರುವ ಮಾತನ್ನು ಹೇಳುತ್ತಾ, ಪ್ರೀತಿಪಾತ್ರಳಾದ ಸೊಸೆಯನ್ನು ಪರಮಾದರದಿಂದ ಬಾಚಿ ಅಪ್ಪಿಕೊಂಡರು.

ಆ ಹಿಂದೆ ತಾಯಿಯರಾದ ಕೌಸಲ್ಯಾಸುಮಿತ್ರೆಯರೇ-ರಘುಕುಲತಿಲಕನಾದ ರಾಮನ ಶಿರದ ಮೇಲೆ ಆನಂದಬಾಷ್ಪ ಧಾರೆಯನ್ನು ಕರೆದು, ಬಳಿಕ ವೃದ್ಧಮಂತ್ರಿಗಳು-ಗಂಗೆಯೇ ಮೊದಲಾದ ಮಹಾನದೀಜಲಗಳನ್ನು ಸುವರ್ಣಕುಂಭಗಳಿಂದ ತರಿಸಿ, ಆ ಅಭಿಷೇಕೋತ್ಸವವನ್ನು ಕ್ರಮಪ್ರಕಾರ ಹೀಗೆ ನೆರವೇರಿಸಿದರು:

ವಿಭೀಷಣನ ಕಡೆಯವರಾದ ರಾಕ್ಷಸ, ಸುಗ್ರೀವನ ಕಡೆಯವರಾದ ವಾನರರೂ, ಪೂರ್ವಾದಿ ಸಮುದ್ರಗಳಿಂದಲೂ, ಗಂಗಾದಿ ಸರಿತ್ತುಗಳಿಂದಲೂ ದಿವ್ಯತೀರ್ಥಗಳನ್ನು ತಂದರು. ಮಂತ್ರಪೂತಗಳಾದ ಆ ಜಲಬಿಂದುಗಳು-ಜಯಶೀಲನಾದ ರಘುನಂದನನ ಮಂಗಳಮೂರ್ಧದ ಮೇಲೆ ವಿಂಧ್ಯಪರ್ವತದ ಮೇಲೆ ಮೇಘಪ್ರಭವಬಿಂದುಗಳಂತೆ ಪ್ರೋಕ್ಷಿಸಲ್ಪಟ್ಟವು. ರಾಮಚಂದ್ರನು ತಾಪಸವೇಷವನ್ನಳವಟ್ಟಿರುವಾಗಲೂ ನೋಡಲಿಕ್ಕೆ ಅತ್ಯಂತ ಸುಂದರನಾಗಿಯೇ ಇರುತಿದ್ದನು. ರಾಜೇಂದ್ರಾಲಂಕಾರವನ್ನು ಧರಿಸಿದ ಆತನ ಶೋಭೆಯು ಅಪರಿಮಿತವಾಗಿದ್ದಿತೆಂದರೆ ಪುನರುಕ್ತಿಯಾಗುವುದು. ಒಬಿಸೆಯಾಗಿ ಸೇನೆಯೂ ಹೊರಟಿತು, ರಾಕ್ಷಸರ ದಳದಿಂದಲೂ, ಹರಿಗಳ ಪಡೆಯಿಂದಲೂ ಮಂತ್ರಿ ವೃದ್ಧರು ಹಿಂಬಾಲಿಸಿದರು. ಬಗೆಬಗೆಯ ತೋರಣಾಲಂಕಾರವು ದಾರಿಯುದ್ದಕ್ಕೂ ಕಂಗೊಳಿಸುತ್ತಲಿದ್ದಿತು, ಇಕ್ಕೆಲದ ಸೌಧಗಳ ಜಾಲಮಾರ್ಗಗಳಿಂದ ಲಾಜವೃಷ್ಟಿಯು ಸುರಿಯುತ್ತಲಿದ್ದಿತು. ರಘುರಾಜೇಂದ್ರನು-ಮೆರವಣಿಗೆಯಿಂದ ಹೊರಟು, ವಂಶಾನುಕ್ರಮವಾಗಿ ಬಂದಿರುವ ರಾಜಧಾನಿಯನ್ನು ಪ್ರವೇಶಿಸುತ್ತಲಿದ್ದನು.

ರಥದೊಳಗೆ ಉಭಯಪಾರ್ಶ್ವಗಳಲ್ಲಿಯೂ ನಿಂತು ಲಕ್ಷ್ಮಣಶತ್ರುಘ್ನರು-ದಿವ್ಯಚಾಮರಗಳನ್ನು ಹಿಡಿದು ಸೇವಿಸುತ್ತಲಿದ್ದರು. ಭರತನು-ಹಿಂದುಗಡೆಯಲ್ಲಿ ನಿಂತು ಬೆಳ್ಗೊಡೆಯನ್ನು ಹಿಡಿದಿದ್ದನು, ಹೀಗೆ ನಾಲ್ಕು ಅವಯವಗಳ ರೂಪವಾಗಿರುವ ರಾಮನು-ಸಶರೀರವಾದ ಸಾಮಾದ್ಯುಪಾಯಗಳ ರಾಶಿಯಂತೆ ಪುರಪ್ರವೇಶಮವನ್ನು ಗೈದನು. ಪುರದೊಳಗಣ ಪ್ರಾಸಾದದ ಮೇಲೆ ವಾಯುವಶದಿಂದ ಹೊರಡುತ್ತಲಿದ್ದ ಅಗುರುಧೂಮರೇಖೆಯು-ಇಷ್ಟುದಿವಸವೂ ಸಂಸ್ಕಾರವಿಲ್ಲದೆ ತಿರಿಯಾಗಿದ್ದು,

ವನದಿಂದ ಹಿಂದಿರುಗಿ ಬಂದ ರಾಮನಿಂದ ಬಿಡಿಸಲ್ಪಟ್ಟಿರುವ ಅಯೋಧ್ಯಾನಗರೀನಾರಿಯ ಜಡೆಯಂತೆ ಕಂಗೊಳಿಸುತ್ತಲಿದ್ದಿತು. ಅತ್ತೆಯರಿಂದ ಬಲು ಅಂದವಾಗಿ ಸಿಂಗರಿಸಲ್ಪಟ್ಟು, ಹೆಂಗಸರಿಗೆ ಯೋಗ್ಯವಾಗಿರುವ ಚಿಕ್ಕರಥದಲ್ಲಿ ಕುಳಿತು ಬರುತ್ತಲಿರುವ ರಘುವೀರಪತ್ನಿಯಾದ ಜಾನಕಿಗೆ ಇಕ್ಕೆಲದ ಉಪ್ಪರಿಗೆಗಳ ಮೇಲೆ ಗವಾಕ್ಷಗಳೊಳಗೆ ನಿಂತು ಅಕ್ಕರೆಯಿಂದ ನೋಡುತ್ತಲಿರುವ ಸಾಕೇತಪುರವನಿತೆಯರು–ಸ್ಪಷ್ಟವಾಗಿ ತಿಳಿಯುವಂತೆ ಕರಗಳನ್ನು ಜೋಡಿಸಿದ ಅಂಜಲಿಗಳಿಂದ ಪ್ರಣಾಮವನ್ನೊಪ್ಪಿಸುತ್ತಲಿದ್ದರು. ಪತಿವ್ರತಾ ಶಿರೋಮಣಿಯೆನಿಸಿರುವ ವೃದ್ಧ ಪುರಂಧ್ರಿಯಾದ ಅನಸೂಯಾದೇವಿಯು ಕೊಟ್ಟಿದ್ದ ಶ್ರೇಷ್ಠತರವೆನಿಸಿದ ಅಂಗರಾಗವನ್ನು ವೈದೇಹಿಯು ತನ್ನ ಮೈಗೆ ಲೇಪಿಸಿಕೊಂಡಿದ್ದಳು. ಆಕೆಯ ಸುತ್ತಲೂ ಅದರ ಹೊಳವು ಥಳಥಳನೆ ಅಖಂಡವಾಗಿ ಹೊಳೆಯುತ್ತಲಿದ್ದಿತು. ಇದರಿಂದ ರಾಮನು ತನ್ನ ಧರ್ಮಪತ್ನಿಯನ್ನು ಮರಳಿ ಅಗ್ನಿಪ್ರವೇಶವನ್ನು ಮಾಡಿಸಿ ಪರಿಶುದ್ಧಳಾಗಿರುವಳೆಂಬುದನ್ನು ಅಯೋಧ್ಯಾನಗರಿಗೆ ತೋರಿಸುತ್ತಲಿರುವನೆಂಬಂತೆ ಕಾಣಬರುತ್ತಲಿದ್ದಿತು.

ತರುವಾಯ ಸಹೃದಯನಾದ ರಾಮನು– ಸುಹೃದರಾದ ಸುಗ್ರೀವನೇ ಮೊದಲಾದವರಿಗೆ ಸಕಲೋಪಕರಣಗಳಿಂದ ಸಿದ್ಧಪಡಿಸಿರುವ ಬಿಡಾರಗಳನ್ನು ತೋರಿಸಿ, ಆಮೇಲೆ ತಾನು– ಪೂಜಾರ್ಹಸಾಮಗ್ರೀಸನಾಥವಾಗಿ, ಚಿತ್ರಪಟದಲ್ಲಿ ಮಾತ್ರವೇ ಉಳಿದಿರತಕ್ಕ ತನ್ನ ತಂದೆಯ ಮನೆಯನ್ನು ಕಣ್ಣುಗಳಿಂದ ನೀರನ್ನು ತೊಟ್ಟಿಡಿಸುತ್ತ ಹೊಕ್ಕನು.

ಅಲ್ಲಿ–ಬದ್ಧಾಂಜಲಿಯಾಗಿ ನಿಂತು, 'ಎಲೌ ತಾಯೇ! ನಮ್ಮ ತಂದೆಯು ಸ್ವರ್ಗಫಲವನ್ನು ಕೊಡುವ ಸತ್ಯದಿಂದ ಜಾರಿ ಬೀಳದಿರಲಿಕ್ಕೆ ಮೂಲಕಾರಣವನ್ನು ನಿಜವಾಗಿ ಯೋಚಿಸಿದರೆ ನಿನ್ನ ಸುಕೃತವಲ್ಲದೆ ಬೇರಲ್ಲ' ಎಂದು ವಂದಿಸಿ ಹೇಳುತ್ತಾ, ಭರತನ ತಾಯಿಯು ನಾಚಿಕೆಯನ್ನು ಪರಿಹರಿಸಿದನು. ಬಳಿಕ ಸಂಕಲ್ಪಮಾತ್ರದಿಂದ ಬೇಕಾದ ಭೋಗ್ಯಪದಾರ್ಥಗಳ ಸಿದ್ಧಿಯನ್ನು ಪಡೆಯುವ ಸುಗ್ರೀವ ವಿಭೀಷಣ ಮೊದಲಾದವರು ವಿಸ್ಮಯಗೊಳ್ಳುವಂತೆ ಉಪಚಾರಗಳ ವೈಖರಿಗಳನ್ನು ನೆರವೇರಿಸಿದನು.

ಅನಂತರದಲ್ಲಿ ಸಭೆಯನ್ನಲಂಕರಿಸಿ, ಶತ್ರುಸಂಹಾರವನ್ನು ಮಾಡಿ ಬಂದಿರುವ ತನ್ನನ್ನು ಬಹುಮಾನಿಸಲಿಕ್ಕೆಂದು ಬಂದ ಅಗಸ್ತ್ಯನೇ ಮುಂತಾದ ದಿವ್ಯಮುನಿಗಳಿಂದ ತನ್ನ ವಿಕ್ರಮಕ್ಕೆ ಗೌರವವನ್ನುಂಟುಮಾಡತಕ್ಕದಾಗಿರುವ ಹಗೆಗಳಾದ ರಾವಣಾದಿಗಳ ಜನ್ಮ ದಿಗ್ವಿಜಯಗಳೇ ಮೊದಲಾದ ಚಿತ್ರಚರಿತ್ರೆಗಳನ್ನು ಕೇಳಿದನು. ಬಹಳವಾಗಿ

ಅಭಿನಂದಿಸಿದ ತಪೋಧನರೆಲ್ಲ ಉಚಿತ ಸತ್ಕಾರಗಳನ್ನು ಪಡೆದು ತೆರಳಿದರು. ಸುಖಾತಿಶಯದಿಂದ ಅರಿವಿಗೆ ಬಾರದೆಯೇ ಮತ್ತೆ ಹದಿನೈದು ದಿವಸಗಳ ಕಾಲವನ್ನು ಕಳೆದ ಸುಗ್ರೀವ, ವಿಭೀಷಣ ಪ್ರಭೃತಿಗಳಿಗೆ, ರಾಮನು-ಸೀತೆಯ ಕರತಲದಿಂದಲೇ ಉತ್ತಮ ಸನ್ಮಾನಗಳನ್ನು ನೆರವೇರಿಸಿ, ಆ ರಕ್ಷಃಕಪೀಂದ್ರರನ್ನೆಲ್ಲ ತಂತಮ್ಮ ಸ್ಥಾನಗಳಿಗೆ ಕಳುಹಿಸಿಕೊಟ್ಟನು. ನೆನೆದ ಮಾತ್ರದಲ್ಲಿ ಇಷ್ಟಪಟ್ಟ ಸ್ಥಳಕ್ಕೆ ತೆರಳತಕ್ಕುದೂ, ರಾವಣನ ಜೀವಿತದೊಡನೆ ಅಪಹರಿಸಲ್ಪಟ್ಟುದೂ, ಆಕಾಶಕ್ಕೆ ಪುಷ್ಪದಂತೆ ಆಭರಣವೆನಿಸಿದುದೂ ಆಗಿರುವ ಪುಷ್ಪಕವಿಮಾನವನ್ನು ಮರಳಿ ಕೈಲಾಸನಾಥನಾದ ಕುಬೇರನಿಗೆ ವಾಹನವಾಗಿರುವಂತೆ ಅನುಜ್ಞೆಯನ್ನಿತ್ತನು. ಇಂತು ತಂದೆಯ ಶಾಸನವನ್ನು ಶಿರದೊಳಾಂತು, ಕ್ಲುಪ್ತವಾಗಿದ್ದ ವನವಾಸಪ್ರತಿಜ್ಞೆಯನ್ನು ಈಡೇರಿಸಿ, ಪುನಃ ರಾಜ್ಯವನ್ನು ಪಡೆದು, ಧರ್ಮಾರ್ಥಕಾಮಗಳಲ್ಲಿ ಹೇಗೋ, ಹಾಗೆಯೇ ತಮ್ಮಂದಿರಲ್ಲಿಯೂ ವೈಷಮ್ಯವಿಲ್ಲದೆ ಸಮವಾದ ವೃತ್ತಿಯುಳ್ಳವನಾಗಿದ್ದನು. ಮತ್ತು- ಸ್ವಾಭಾವಿಕವಾದ ಪ್ರೀತಿಯಿಂದ ಎಲ್ಲ ತಾಯಿಯರಿಗೂ ಸಮಾನವಾದ ಸತ್ಕಾರಗಳನೊಪ್ಪಿಸುತ್ತಾ, ಷಣ್ಮುಖನು-ಆರುಮುಖಗಳಿಂದಲೂ ಸಮವಾಗಿ ಸ್ತನ್ಯಪಾನಮಾಡಿದ ಪಟ್ಕೃತ್ತಿಕೆಯರಲ್ಲಿ ಹೇಗೋ ಹಾಗೆಯೇ ನಡೆದುಕೊಳ್ಳುತ್ತಲಿದ್ದನು.

ಆ ರಾಮರಾಜ್ಯದಲ್ಲಿ- ಪ್ರಜೆಗಳಲ್ಲಿ ಲೋಭವಿಲ್ಲದ ದಾತನೆನಿಸಿದ ಆ ರಾಮನಿಂದ ಧನಿಕರೆನಿಸಿದ್ದರು, ಸಕಲ ವಿಘ್ನಭಯವನ್ನು ಪರಿಹರಿಸುತ್ತಲಿದ್ದ ಆ ರಾಮನಿಂದಲೇ ಸತ್ಕರ್ಮಾನುಷ್ಠಾನಪರರಾಗಿದ್ದರು. ಧರ್ಮಶಾಸನವನ್ನು ಮಾಡಿ ನಿಯಮಿಸುತ್ತಲಿದ್ದ ಆ ರಾಮನಿಂದಲೇ ಪಿತೃಮಂತರೆನಿಸಿದ್ದರು, ಶೋಕವನ್ನು ಪರಿಹರಿಸಿ ಆನಂದಗೊಳಿಸುತ್ತಲಿದ್ದ ಆತನಿಂದಲೇ ಪುತ್ರವಂತರೂ ಆಗಿದ್ದರು. ಆ ದಾಶರಥಿಯು- ಕಾಲವನ್ನತಿಕ್ರಮಿಸದೆ ಧರ್ಮಾಸನವನ್ನೇರಿ ಪ್ರಜೆಗಳ ಯೋಗಕ್ಷೇಮಗಳನ್ನು ಚೆನ್ನಾಗಿ ವಿಚಾರಿಸುತ್ತಾ, ತನ್ನೊಡನೆ ಸುಖಾನುಭವದ ಬಯಕೆಯಿಂದ ಸುಂದರವಾದ ಆಕಾರವನ್ನು ಧರಿಸಿ ಬಂದಿರುವ ಲಕ್ಷ್ಮಿಯಂತಿರುವ ವಿದೇಹ ರಾಜನಂದನೆಯಾದ ಸೀತೆಯೊಡನೆ ವಿಹರಿಸುತ್ತಲಿದ್ದನು. ರೂಪ, ರಸ, ಗಂಧ ಮೊದಲಾದ ವಿಷಯಗಳನ್ನು ಯಥೇಷ್ಟವಾಗಿ ಪಡೆದು ಹಾಯಾಗಿ ಅನುಭವಿಸುತ್ತಾ, ಶಿಲ್ಪಿಗಳಿಂದ ಅರಮನೆಯ ಗೋಡೆಗಳ ಮೇಲೆ ಚಿತ್ರಿಸಲ್ಪಟಿರುವ ಆಲೇಖ್ಯಗಳನ್ನು ನೋಡಿ ನೆನೆದ ದಂಡಕಾರಣ್ಯದಲ್ಲಿನ ಅಗಲಿಕೆ, ಕಳವಳ, ಹುಡುಕುವಿಕೆ, ಆಲಾಪ ಮೊದಲಾದ ದುಃಖಗಳೂ ಆ ಸೀತಾರಾಮರಿಗೆ ಸುಖಗಳಾಗಿ ಪರಿಣಮಿಸುತ್ತಲಿದ್ದುವು.

ಹೀಗೆ ಕೆಲವುಕಾಲ ಕಳೆದಬಳಿಕ-ಸೀತೆಯ ಕಣ್ಣುಗಳೊಳಗೆ ವಿಶೇಷವಾದ ಥಾಳಥಳ್ಯದ ಹೊಳವು ಕಾಣಬಂದಿತು. ಕಾಚಿಯ ಹೂವಿನಂತೆ ಮುಖವು ಬಿಳುಪೇರಿತು, ಬಾಯಿಬಿಟ್ಟು ಹೇಳದೆಯೇ ತೋರುತ್ತಲಿರುವ ಬಯಕೆಯ ಸೊಕ್ಕಿನಿಂದ

ಗರ್ಭಚಿಹ್ನೆಯು ಕಾಣಬಂದಿತು. ಆಗ ಸೀತೆಯು–ಸತಿಗೆ ಪರಮಾನಂದವನ್ನುಂಟು ಮಾಡತಕ್ಕವಳಾದಳು. ರಮಣನಾದ ರಾಮನು ಕುರುಹಿನಿಂದ ಪತ್ನಿಯು ಗರ್ಭಿಣಿಯೆಂಬುದನ್ನು ಅರಿತನು. ರಹಸ್ಯದಲ್ಲಿ ಲಜ್ಜಿಸುತ್ತಲಿರುವ ಆ ಕೃಶಾಂಗಿಯನ್ನು ಕುರಿತು, ಗರ್ಭವತಿಯ ಬಯಕೆಯನ್ನು ಸಲ್ಲಿಸಬೇಕೆಂಬ ಶಾಸ್ತ್ರವನ್ನನುಸರಿಸಿ "ಎಲೆ ರಮಣಿ! ನಿನ್ನ ಮನದ ಅಭಿಲಾಷೆಯೇನು? ನಾಚದೆ ಹೇಳು" ಎಂದು ಪ್ರೇಮಭರದಿಂದ ಬೆಸಗೊಂಡನು. ಆಗಲಾ ಸೀತೆಯು– "ತೊಂಡುದನಗಳು ಮೇದು ಹೋಗುವ ಮತ್ತು ತಿರುಕರಿಗೆ ಕೊಡತಕ್ಕುದೆನಿಸಿದ ಧಾನ್ಯದಿಂದೊಡಗೂಡಿದುದೂ, ವೈಖಾನಸ ಮುನಿ ಕನ್ಯೆಯರಿಗೆ ಸ್ಥಾನವೆನಿಸಿದುದೂ, ಎಳೆಯ ದರ್ಭೆಯ ಹುಲ್ಲಿಗೆಡೆಯಾದುದೂ ಆಗಿರುವ ಭಾಗೀರಥೀ ತೀರ, ತಪೋವನಗಳಲ್ಲಿ ಮರಳಿಯೊಂದುಬಾರಿ ಸಂಚರಿಸಿ ಬರಬೇಕೆಂದು ನನ್ನ ಮನವು ಅಭಿಲಷಿಸುತ್ತಲಿದೆ" ಎಂದು ತನ್ನ ಮನೋರಥವನ್ನು ಪತಿಗೆ ಅರಿಕೆಮಾಡಿದಳು. ಪ್ರಿಯಳ ನುಡಿಯನ್ನಾಲಿಸಿ ಮಮತೆಯಿಂದ "ವಲ್ಲಭೆಯೇ! ನಿನ್ನ ಮನೋರಥವನ್ನು ನೆರವೇರಿಸುವೆನು" ಎಂದು ರಘುವೀರನು ಮಾತುಕೊಟ್ಟನು, ಆ ಹಿಂದೆ– ತಾನೊಂದು ವೇಳೆ ಸಂತೋಷದಿಂದ ಉಕ್ಕುತ್ತಲಿರುವ ಅಯೋಧ್ಯೆಯ ಸೊಬಗನ್ನು ನೋಡಬೇಕೆಂದು ಬಗೆದು, ಮಿತಪರಿಜನರೊಡನೆ ಅರಮನೆಯ ಚಂದ್ರಶಾಲೆಯನ್ನೇರಿದನು. ಬಹುಸಮೃದ್ಧಿಯಿಂದಿರುವ ಅಂಗಡಿ ಬೀದಿಗಳನ್ನುಳ್ಳುದೂ, ಚಿತ್ರವಾದ ರಾಜಮಾರ್ಗಗಳುಳ್ಳುದೂ, ತೇಲಿಹೋಗಿಬರುತ್ತಲಿರುವ ನಾವೆಗಳಿಂದ ರಮಣೀಯವೆನಿಸಿದ ಸರಯೂನದಿಯನ್ನುಳ್ಳುದ್ದೂ, ಪೌರವಿಲಾಸಿಜನಭರಿತವಾದ ಪುರೋದ್ಯಾನವುಳ್ಳುದೂ ಆಗಿರುವ ಆ ಅಯೋಧ್ಯೆಯ ಸೌಭಾಗ್ಯವನ್ನು ಕಣ್ಣಾರೆ ನೋಡಿ, ಆ ರಘುರಾಜೇಂದ್ರನು–ಹರ್ಷಪರವಶನಾದನು. ಆದರೆ–ರಾಮನು–ಮಾತನ್ನು ಬಲ್ಲವರೊಳಗೂ, ಆಡುವವರೊಳಗೂ ಬಲುಜಾಣನು. ನಗರವನ್ನವಲೋಕಿಸಿದ ಮಾತ್ರದಿಂದ ತೃಪ್ತನಾಗಲಿಲ್ಲ. ಬಹುಜನಸಮ್ಮತಿಯಿಂದ ತನ್ನ ನಡತೆಯ ಏರುಕೋರೆಗಳನ್ನು ತಿಳಿಯಬೇಕೆಂದು ನೆನೆದನು. ಆದಿಶೇಷನಂತೆಸೆವ ಬಾಹುದಂಡವುಳ್ಳವನೂ, ಹಗೆಗಳ ಹೆಮ್ಮೆಯನ್ನಡಗಿಸಿದವನೂ ಆಗಿರುವ ಆ ರಾಮಭದ್ರನು–ತಾನು ಪಾವನಚರಿತ್ರನಾದರೂ, ಪುರಜನರಲ್ಲಿ ತನ್ನ ಚರಿತ್ರೆಯ ವಿಷಯವಾದ ಕಿಂವದಂತಿಯು ಹೇಗಿರುವುದೆಂದು ಸಮೀಪದಲ್ಲಿದ್ದ ಗೂಢಚಾರನಾದ ಭದ್ರನೆಂಬುವನನ್ನು ಕುರಿತು ಪ್ರಶ್ನೆ ಮಾಡಿದನು.

ರಾಮನು ತನ್ನನ್ನು ಬಹಳವಾಗಿ ನಿರ್ಬಂಧಿಸಿ ಕೇಳಲು, ಭದ್ರನು ಎಲ್ಲವನ್ನೂ ವಿವರಿಸಿ ಹೇಳತೊಡಗಿದನು:–ಎಲೈ ಮಾನವದೇವನೆ! ರಾಕ್ಷಸನ ಮನೆಯಲ್ಲಿ ವಾಸಮಾಡುತ್ತಲಿದ್ದ ಸೀತಾದೇವಿಯನ್ನು ಮರಳಿ ಕೂಡಿದ ಒಂದು ಅಂಶವನ್ನು ಬಿಟ್ಟು, ಉಳಿದ ನಿನ್ನ ಸಮಸ್ತ ಚರಿತ್ರೆಯನ್ನೂ, ಲೋಕವೆಲ್ಲ ಒಂದೇ ಮಾತಿನಿಂದ

ಕೊಂಡಾಡುತ್ತಲಿದೆ ಎಂದು ಹೇಳಿಬಿಟ್ಟನು. ಅಹಹ!! ಅಂತಹ ಕಳತ್ರನಿಂದೆಯಿಂದ ಗುರುತರವೆನಿಸಿ, ಹೊರಲಸದಳವಾದ ಅಪಕೀರ್ತಿಯಿಂದ ಹಾಗೆ ಪೆಟ್ಟುಬಿದ್ದ ವೈದೇಹೀವಲ್ಲಭನ ಎದೆಯು ಚಮ್ಮಟಿಕೆಯಿಂದ ಬಡಿಯಲ್ಪಟ್ಟ ಕಾಯ್ದಕಬ್ಬಿಣದಂತೆ ಒಡೆಯಿತು. ಆಗ–ತನ್ನ ವಿಷಯವಾಗಿ ನೆಗಳಿರುವ ಲೋಕಾಪವಾದದ ಕಥೆಯನ್ನು ಅಸಡ್ಡೆಮಾಡಿ ಬಿಟ್ಟುಬಿಡಲೆ? ಅಥವಾ–ದೋಷಲೇಶವಿಲ್ಲದ ಸಾಧ್ವಿಯೆನಿಸಿದ ಸೀತೆಯನ್ನು ತೊರೆದುಬಿಡಲೆ? ಈ ಎರಡು ಪಕ್ಷಗಳೊಳಗೆ ಯಾವುದನ್ನು ಅಂಗೀಕರಿಸಲಿ? ಮತ್ತಾವುದನ್ನು ತ್ಯಜಿಸಲಿ' ಎಂದು ಗೊತ್ತುಮಾಡಲಾರದೆ ರಾಮನು– ಉಯ್ಯಾಲೆಯಂತೆ ಬಹುಚಂಚಲವಾದ ಚಿತ್ತವೃತ್ತಿಯುಳ್ಳವನಾದನು. ರಾಮನೆಂದರೇನು ಸಾಮಾನ್ಯನೇ? ಸರ್ವಲೋಕಮಾನ್ಯನಲ್ಲವೆ? ಅದರಿಂದಲೇ ಅನ್ಯನಿವರ್ತ್ಯವಲ್ಲದ ಆ ಅಪವಾದವನ್ನು ಪತ್ನಿ ಪರಿತ್ಯಾಗವೆಂಬೊಂದರಿಂದಲೇ ಅಳಿಸಿ, ತೊಡೆದು ಬಿಡಬೇಕೆಂದು ನಿಶ್ಚೈಸಿದನು. ಆಹಾ! ಇದು ನ್ಯಾಯವೇ ಸರಿ ; ಹೇಗೆಂದರೆ – ಯಶೋಧನರಾದ ಪುರುಷರಿಗೆ ತಮ್ಮ ದೇಹಕ್ಕಿಂತಲೂ ಯಶಸ್ಸೇ ದೊಡ್ಡದೆನಿಸಿರುವುದು. ಹೀಗಿರುವಲ್ಲಿ ಸ್ರಕ್ಚಂದನ ವನಿತಾದಿಗಳೆಂಬ ಇಂದ್ರಿಯಾರ್ಥಗಳು ದೊಡ್ಡವು ಎನಿಸಬಲ್ಲವೆ? ಎಂದಿಗೂ ಹಾಗಾಗಲಾರವು.

ರಾಮನ ಮುಖವು ಕಳೆಗುಂದಿತು, ಸಂತಸವೆಲ್ಲ ಚಿಂತೆಯರಾಶಿಯಾಯಿತು. ಮುಖವಿಕಾರವನ್ನು ಕಂಡು ಅನುಜರೆಲ್ಲ ಖಿನ್ನರಾದರು. ತಮ್ಮಂದಿರನ್ನು ಸೇರಿಸಿದನು. ತನ್ನ ವಿಷಯವಾಗಿ ಹರಡಿರುವ ಕೌಲೀನವನ್ನು ಅವರಿಗೆ ಅರುಹಿದನು. ಮರಳಿ ಅವರನ್ನು ಕುರಿತು ಇಂತೆಂದನು. "ಎಲೈ ಪ್ರಿಯ ಸೋದರರುಗಳಾ! ಜಗಚ್ಚಕ್ಷುವೆನಿಸಿದ ಸೂರ್ಯನಿಂದ ನಡೆದುಬಂದ ಈ ರಾಜರ್ಷಿಗಳ ವಂಶವು ಸದಾಚಾರದಿಂದ ಪಾವನನೆನಿಸಿದುದು. ಇಂತಹ ಪರಿಶುದ್ಧ ಸಂತತಿಗೆ, ಹಿಮದ ಮೇಲಣ ಗಾಳಿ ಬೀಸುವುದರಿಂದ ದರ್ಪಣಕ್ಕೆ ಹೇಗೋ ಹಾಗೆ ಈ ನನ್ನಿಂದ ಎಂತಹ ಈ ಕಳಂಕವು ಸಂಭವಿಸಿತು ನೋಡಿರಿ. ಅದರಿಂದ ಲೋಕದಲ್ಲಿ ಬಹುಳವಾಗಿ ಪಸರಿಸುತ್ತಲಿರವ ಈ ಅವಮಾನವು – ಜಲತರಂಗಗಳಲ್ಲಿ ಹರಡುವ ತೈಲಬಿಂದುವಿನಂತಿದೆ ಬಂಧನಸ್ತಂಭವನ್ನು ಗಜೇಂದ್ರನಂತೆ ನಾನೀ ಪಾಪಮೂಲವಾಗಿರುವ ಈ ವಾಚ್ಯವನ್ನು ಸಹಿಸಲು ಶಕ್ತನಲ್ಲ, ಆದಕಾರಣ ಪೂರ್ವದಲ್ಲಿ ಪಿತ್ರಾಜ್ಞೆಯಿಂದಲೇ ಸಮುದ್ರಗಳಿಂದ ಬಳಸಲ್ಪಟ್ಟಿರುವ ಭೂಮಂಡಲವನ್ನು ತೊರೆದಂತೆ, ಪ್ರಸವಸಮಯವು ಸಮೀಪಿಸಿ ಇದ್ದರೂ, ವೈದೇಹಿಯನ್ನು ಈಗ ತ್ಯಜಿಸುವುದೇ ಸರಿ. ಪರಿಶುದ್ಧಳೂ ಸಾಧ್ವಿಯೂ ಆಗಿರುವ ಸೀತೆಯನ್ನು ಸರ್ವಥಾ ಪರಿತ್ಯಾಗ ಮಾಡಕೂಡದು ಎಂಬುವಿರೋ? ಅಹುದು, ಈ ಅವನಿಜೆಯ ಅಗ್ನಿಪ್ರವೇಶದಿಂದಲೂ ಪವಿತ್ರತರಳೆಂದು ನಾನು ಬಲ್ಲೆನು. ಬಹುದೂರದ ದ್ವೀಪಾಂತರದಲ್ಲಿ ನಡೆದ ಸಂಗತಿಯು ಯಾರಿಗೆ ಗೊತ್ತಿದೆ? ಆದರೆ

ಲೋಕಾಪವಾದವೇ ದೊಡ್ಡದೆಂದು ನಾನು ಭಾವಿಸುತ್ತೇನೆ. ಸ್ವಭಾವದಿಂದಲೇ ನಿರ್ಮಲನಾಗಿರುವ ಚಂದ್ರನಲ್ಲಿ ಬಿದ್ದಿರುವ ಭೂಮಿಯ ನೆಳಲನ್ನು ಜನರು–ಕಳಂಕವನ್ನಾಗಿ ಆರೋಪಿಸುತ್ತಾರೆ. ಇದಕ್ಕೆ ಯಾರೇನು ಮಾಡತಕ್ಕುದು? ರಕ್ಕಸರನ್ನು ಕೊಲ್ಲುವವರೆಗೆ ನಾನು ಪಟ್ಟ ಪ್ರಯಾಸವು ವ್ಯರ್ಥವಾಗಲಿಲ್ಲ. ಏಕೆಂದರೆ– ಆ ಶ್ರಮವು ವೈರಶುದ್ಧಿಗೆ ಉಪಯೋಗಿಸಿತು. ಕಾಲಿನಿಂದ ತುಳಿದರೆ, ರೋಷಗೊಂಡ ಹಾವು ರಕ್ತವನ್ನು ಕುಡಿಯಬೇಕೆಂಬ ಆಶೆಯಿಂದ ಮೆಟ್ಟಿದವನನ್ನು ಕಚ್ಚುವುದೆ? ಹಗೆತನವನ್ನು ತೀರಿಸಿಕೊಳ್ಳಲು ಮಾತ್ರವೇ ಅಲ್ಲವೆ?

ಅದರಿಂದ ಎದೆಯಲ್ಲಿ ನೆಟ್ಟಿರುವ ಈ ಲೋಕಾಪವಾದವೆಂಬ ಶಲ್ಯವನ್ನು ಕಿತ್ತೆಸೆದು, ನಾನು ಇನ್ನೂ ಕೆಲವುಕಾಲ ಜೀವಿಸಿ ಇರಬೇಕೆಂಬುದು ನಿಮಗೆ ಇಷ್ಟವಾಗಿರುವ ಪಕ್ಷದಲ್ಲಿ, ದಯಾರ್ದ್ರಹೃದಯರಾದ ನೀವು – ನನ್ನ ಈ ಮನೋನಿಶ್ಚಯವನ್ನು ಅಡ್ಡಿ ಮಾಡಬೇಡಿರಿ."

ಇಂತೆಂದ ರಘುನಂದನನ ವಚನವನ್ನಾಲಿಸಿದ ಆ ಅಣ್ಣತಮ್ಮಂದಿರೊಳಗೆ ಒಬ್ಬನಾದರೂ–ಸೀತೆಯ ವಿಷಯದಲ್ಲಿ ಮಹತ್ತರವಾಗಿ ಆಗ್ರಹಗೊಂಡಿರುವ ತಮ್ಮ ಸ್ವಾಮಿಯ ದೃಢಸಂಕಲ್ಪವನ್ನು ಒಪ್ಪಲಿಕ್ಕಾಗಲಿ, ತಿರಸ್ಕರಿಸಲಿಕ್ಕಾಗಲೀ ಸಮರ್ಥನಾಗಲಿಲ್ಲ. ಆಮೇಲೆ – ಮೂಲೋಕದ ಹೊಗಳಿಕೆಗೀಡಾದ ಹೆಸರುವಾಸಿಯನ್ನು ಪಡೆದು ಸತ್ಯಭಾಷಿಯಾಗಿರುವ ಲಕ್ಷ್ಮಣಾಗ್ರಜನು– ಭರತ ಶತ್ರುಘ್ನರಿಲ್ಲದ ಸಮಯದಲ್ಲಿ ತನ್ನ ಆಜ್ಞಾನುವರ್ತಿಯಾದ ಲಕ್ಷ್ಮಣನನ್ನು ಕರೆದು, ಎಲೈ ಸೌಮ್ಯನೆ! ಎಂದು ಸಂಬೋಧಿಸಿ ಇಂತು ಆಜ್ಞಾಪಿಸಿದನು: ಗರ್ಭದಲ್ಲಿ ಪ್ರಜೆಯುನ್ನುಳ್ಳವಳಾಗಿ, ನಿನಗೆ ಪ್ರಜಾವತಿಯೆನಿಸಿರುವ ಸೀತೆಯು – ಮರಳಿ ತಪೋವನದಲ್ಲಿ ತಿರುಗಾಡಿ ಬರಬೇಕೆಂಬ ತನ್ನ ಗರ್ಭದ ಬಯಕೆಯನ್ನು ನನ್ನೊಂದಿಗೆ ತಿಳಿಸಿ ಇದ್ದಾಳೆ. ಅದರಿಂದ ನೀನು ಅದನ್ನೇ ನೆಪಮಾಡಿಕೊಂಡು, ಆಕೆಯನ್ನು ರಥದಿಂದ ಕರೆದೊಯ್ದು, ವಾಲ್ಮೀಕಿ ತಪೋವನದಲ್ಲಿ ಬಿಟ್ಟು ಬಿಡು ಎನಲು, ಲಕ್ಷ್ಮಣನು – ತಂದೆಯಾದ ಜಮದಗ್ನಿಯ ಶಾಸನದಿಂದ ಭಾರ್ಗವನು – ಹಗೆಯ ಶಿರವನ್ನಿರಿದಂತೆ ಹೆತ್ತ ತಾಯ ಕತ್ತನ್ನುತ್ತರಿಸಿದನು ಎಂಬುದನ್ನು ಕೇಳಿ ಇದ್ದನು, ಅದರಿಂದಲೇ ಅಣ್ಣನಪ್ಪಣೆಯನ್ನೊಪ್ಪಿಕೊಂಡನು. ಗುರ್ವಾಜ್ಞೆಯು ಅವಿಚಾರಣೀಯವಲ್ಲವೆ? ಮತ್ತು ಅನುಲ್ಲಂಘನೀಯವಲ್ಲವೆ?

ತರುವಾಯ ಸೀತೆಯು – ತನ್ನ ಇಷ್ಟವನ್ನು ಪತಿಯು ನೆರವೇರಿಸುವನೆಂದು ಕೇಳಿ ಸಂತುಷ್ಟಳಾಗಿದ್ದಳು. ಸುಮಂತನು ಬೆದರದ ಕುದುರೆಗಳನ್ನು ಹೂಡಿ, ಕಡಿವಾಣಗಳನ್ನು ಹಿಡಿದು, ರಥದ ಮೂಕಿನಲ್ಲಿ ಕುಳಿತನು. ಸೌಮಿತ್ರಿಯು ಸೀತೆಯನ್ನಾರಥದಲ್ಲಿ ಕುಳ್ಳಿರಿಸಿ ಹೊರಟನು. ಬಳಿಕ ವೈದೇಹಿಯು ತೆರಳುತ್ತ –

ಅಲ್ಲಲ್ಲಿ ಮನೋಹರ ಪ್ರದೇಶಗಳನ್ನು ಅವಲೋಕಿಸುತ್ತಾ, ಪ್ರಿಯನು ತನಗೆ ಪ್ರಿಯಂಕರನಾಗಿರುವನೆಂದು ಆನಂದಿಸುತ್ತಲಿದ್ದಳು, ಆದರೆ – ಆ ಪ್ರಿಯವು ತನ್ನ ವಿಷಯದಲ್ಲಿ ಕಲ್ಪದ್ರುಮವಾಗದೆ, ಹತ್ತಿರಕ್ಕೆ ಬಂದವರನ್ನು ಕತ್ತರಿಸುವ ಅಸಿಪತ್ರವೃಕ್ಷವಾಗಿ ಪರಿಣಮಿಸಿರುವುದನ್ನು ಅರಿಯಲಿಲ್ಲ. ಲಕ್ಷ್ಮಣನೂ ದಾರಿಯಲ್ಲಿ ಅತ್ತಿಗೆಗೆ ಮುಂದೆ ಒದಗುವ ದುಃಖದ ಸುದ್ದಿಯನ್ನು ಮುಂದಾಗಿ ತಿಳಿಸಲಿಲ್ಲ. ಆದರೆ ಮುಂದೆ ಪ್ರಿಯನ ಸಂದರ್ಶನವು ಸಂಪೂರ್ಣವಾಗಿ ಲೋಪಿಸುವ ಗುರುತರವೆನಿಸಿದ ಭವಿಷ್ಯದ್ದುಃಖವನ್ನು, ಅದಿರುತ್ತಲಿರುವ ಬಲಗಣ್ಣು ಹೇಳಿಬಿಟ್ಟಿತು. ಆ ಅಪಶಕುನದಿಂದ ಜಾನಕಿಗೆ ಬಹಳ ವಿಷಾದವುಂಟಾಯಿತು, ಕೂಡಲೆ ಮುಖಕಮಲವು ಬಾಡಿತು. ಅನುಜರಿಂದೊಡಗೂಡಿದ ರಾಮನಿಗೆ ಶುಭವಾಗಲೆಂದು ಅಂತಃಕರಣ, ಧ್ಯಾನಗಳಿಂದ ಪುನಃಪುನಃ ಪ್ರಾರ್ಥಿಸುತ್ತಿದ್ದಳು. ಗರತಿಯೆನಿಸಿ, ಗರ್ಭಿಣಿಯೂ ಆಗಿರುವ ಅಬಲೆಯಾದ ಸೀತೆಯನ್ನು ಅಣ್ಣನಪ್ಪಣೆಯಿಂದ ಅರಣ್ಯದಲ್ಲಿ ಬಿಟ್ಟುಬಿಡಬೇಕೆಂದಿರುವ ಲಕ್ಷ್ಮಣನನ್ನು, ಇದಿರಿಗೆ ಹರಿದು ಬರುತ್ತಲಿರುವ ಜಾಹ್ನವಿಯು – ತನ್ನ ತೆರೆಗಳೆಂಬ ಕರಗಳಿಂದ ಆಗಬಾರದೆಂದು ಅಡ್ಡಿ ಮಾಡುವಂತಿದ್ದಿತು. ಬಳಿಕ ಸತ್ಯಸಂಧನಾದ ಸೌಮಿತ್ರಿಯು – ಸುಮಂತ್ರನಿಂದ ರಥವನ್ನು ನಿಲ್ಲಿಸಿ, ಭ್ರಾತೃಜಾಯೆಯನ್ನು ಭಾಗೀರಥಿಯ ಮರಳುನೆಲದಲ್ಲಿ ಇಳಿಸಿ, ಬೇಡರವನು ತಂದು ನಿಲ್ಲಿಸಿದ ಗಟ್ಟಿಯಾಗಿರುವ ಹರಿಗೋಲಿನ ಮೇಲೆ ಕುಳ್ಳಿರಿಸಿ, ಪ್ರತಿಜ್ಞೆಯನ್ನು ಹೇಗೋ ಹಾಗೆ ದೇವಗಂಗೆಯನ್ನು ದಾಟಿದನು. ಆಮೇಲೆ – ಮೃದುಹೃದಯನಾದ ಸೌಮಿತ್ರಿಯು – ಅಣ್ಣನ ಅಪ್ಪಣೆಯ ಬಿರುನುಡಿಯನ್ನು ಹೇಳಲಾರದೆ, ಉದರದಲ್ಲಿ ಬಲು ತೊಂದರೆಗೊಂಡು ಅಡಗಿಸುತ್ತ ಬಂದನು. ಒಳಗಿನ ಸಂಕಟವು ಉಕ್ಕಳಿಸುತ್ತ ಮೇಲಕ್ಕೆ ಹೊರಟಿತು. ಕೊರಳು ತೋರವಾಯಿತು, ನರಗಳು ಉಬ್ಬಿದುವು, ಮುಖವು ವಿಕಾರವಾಯಿತು., ಕಣ್ಣಿನಲ್ಲಿ ನೀರು ತುಂಬಿತು. ಮೈ ಅದಿರಿತ್ತು, ತುಟಿಯು ನಡುಗಹತ್ತಿತು, ತಾಳಲಳವಿಲ್ಲವಾಯಿತು, ಯತ್ನವಿಲ್ಲದೆ ಹೋಯಿತು. ಉತ್ಪಾತ ಸಮಯದ ಮೇಘವು ಕಲ್ಲುಮಳೆಯನ್ನು ಸುರಿವಂತೆ, ರಾಜಶಾಸನವನ್ನು ಕಾರಿಬಿಟ್ಟನು. ಬಳಿಕ ತಿರಸ್ಕಾರವೆಂಬ ಬಿರುಗಾಳಿಯ ಪೆಟ್ಟು ಬಿರುಸಾಗಿ ಬಡಿಯಿತು, ಒಡವೆಗಳೆಂಬ ಹೂಗಳು ಉದಿರಿದುವು. ತನಗೆ ಶರೀರವನ್ನು ಕೊಟ್ಟಿರುವ ನೆಲದಮೇಲೆ ಸೀತೆಯೆಂಬ ಲತೆಯು ರಪ್ಪನೆ ಬಿದ್ದಿತು. ಅಬಲೆಯರಿಗೆ ಆಪತ್ತಿನಲ್ಲಿ ಹೆತ್ತವಳೇ ದಿಕ್ಕಲ್ಲವೆ? ಆದರೆ– ಇಕ್ಷ್ವಾಕು ಮಹಾರಾಜನ ವಂಶದಲ್ಲಿ ಹುಟ್ಟಿ, ಸಾಧುವೃತ್ತನಾಗಿ, ಕಾರಣವಿಲ್ಲದೆಯೇ ಭರ್ತನು ನಿನ್ನನ್ನು ಹೇಗೆ ತೊರೆದಾನು ಎಂದು ಸಂಶಯಪಡುತ್ತಲಿರುವಳೆಂಬಂತೆ ಜನನಿಯಾದ ಅವನಿಯು– ಅವನಿಜೆಗೆ ತನ್ನೊಳಹೊಗಲು ದಾರಿಯನ್ನು ಕೊಡಲಿಲ್ಲ. ಮೂರ್ಛೆ ತಿಳಿಯುವವರೆಗೆ – ಸೀತೆಯು ದುಃಖವನ್ನು ತಿಳಿಯಲೇ ಇಲ್ಲ. ಎಚ್ಚರವಾಗಲು, ಹೊಟ್ಟೆಯೊಳಗೆ

ಸಂಕಟದಿಂದ ಕುದಿದಳು, ಸೌಮಿತ್ರಿಯ ಉಪಚಾರದಿಂದ ಉಂಟಾದ ಎಚ್ಚರವು – ಸೀತೆಗೆ ಮೂರ್ಛೆಗಿಂತಲೂ ಹೆಚ್ಚಿದ ದುಃಖವನ್ನು ಕೊಡತಕ್ಕದಾಯಿತು. ಸಾಧ್ವಿಯಾದ ಸೀತೆಯು ದುರಿತವಿಲ್ಲದೆಯೇ ತನ್ನನ್ನು ತಿರಸ್ಕರಿಸಿ ಪತಿಯು ತೊರೆದರೂ, ಆತನನ್ನು ಹೀಯಾಳಿಸಲಿಲ್ಲ. ಮತ್ತು ಎಂದೂ ದುಃಖವನ್ನೇ ಅನುಭವಿಸುವ ನಿರ್ಭಾಗ್ಯಳಾದೆನಲ್ಲಾ ಎಂದು ತನ್ನನ್ನೇ ಮರಮರಳಿ ನಿಂದಿಸಿಕೊಳ್ಳುತ್ತಲಿದ್ದಳು.

ಆ ಹಿಂದೆ ರಾಮಾನುಜನು – ಸತಿಶಿರೋಮಣಿಯಾದ ಸೀತೆಯನ್ನು ಬಹಳ ಹೊತ್ತಿನವರೆಗೂ ಸಮಾಧಾನಗೊಳಿಸಿ, ಎಲೌ ತಾಯೇ ಇಗೋ, ಈ ದಾರಿಯನ್ನು ಹಿಡಿದು ಹೋದರೆ ವಾಲ್ಮೀಕಿ ಮಹಾಮುನಿಯ ಪುಣ್ಯಾಶ್ರಮವು ದೊರೆಯುವುದು, ನಾನಾದರೆ ಪರಾಧೀನ. ಅಣ್ಣನ ಅಪ್ಪಣೆಯಿಂದ ಕ್ರೂರಕೃತ್ಯವನ್ನು ಮಾಡಿ ಇದ್ದೇನೆ. ಎಲೆ ಮಹಾದೇವಿಯೇ, ಕ್ಷಮಿಸಬೇಕು ಎಂದು ಹೇಳುತ್ತಾ ಆಕೆಯ ಅಡಿದಾವರೆಗಳನ್ನು ಹಿಡಿದನು.

ಸೀತೆಯು – ಸೌಮಿತ್ರಿಯನ್ನು ಹಿಡಿದೆತ್ತಿ, ಎಲೈ ಸೌಮ್ಯನೆ! ನಾನು ನಿನ್ನ ವಿಷಯದಲ್ಲಿ ಬಹು ಪ್ರೀತಳಾಗಿದ್ದೇನೆ. ನೀನು ಚಿರಂಜೀವಿಯಾಗಿರು, ಮತ್ತು – ಇಂದ್ರನಿಂದ ಉಪೇಂದ್ರನಂತೆ ಎಂದೂ ನಿಮ್ಮಣ್ಣನಿಂದ ನೀನೂ ಪರತಂತ್ರನೇ ಆಗಿ ಇರು . ನೀನು ಇಲ್ಲಿಂದ ತೆರಳಿ , ಕೌಸಲ್ಯೆ ಮೊದಲಾದ ಅತ್ತೆಯರಿಗೆ ಕ್ರಮವಾಗಿ ನನ್ನ ವಂದನೆಯನ್ನು ಒಪ್ಪಿಸಿ, ನನ್ನ ಉದರದೊಳಿರುವ ನಿಮ್ಮ ಮಗನ ಸಂತಾನಕ್ಕೆ ಶುಭವುಂಟಾಗುವಂತೆ ಹರಸುತ್ತಲಿರಿ' ಎಂದು ಬಿನ್ನವಿಸಿದಳೆಂಬದಾಗಿ ಅರಿಕೆಮಾಡು, ಮತ್ತು – ಎಲೈ ಸತ್ಯವಂತನಾದ ಮೈದುನನೆ, ಮಹಾರಾಜನಾದ ನಿಮ್ಮ ಅಣ್ಣನಿಗೆ ನನ್ನ ಮಾತಿನಿಂದ ಹೀಗೆ ವಿಜ್ಞಾಪಿಸು:–

"ಎಲೈ ಪ್ರಾಜ್ಞನೆ! ಕಣ್ಣೆದಿರಿಗೆ ಅಗ್ನಿಪ್ರವೇಶದಿಂದ ಪರಿಶುದ್ಧಳೆನಿಸಿದ ಈ ನನ್ನನ್ನು ಮಿಥ್ಯಾಪವಾದ ಶ್ರವಣದಿಂದ ತಿರಸ್ಕರಿಸಿದುದು ನಿನ್ನ ಶಾಸ್ತ್ರಜ್ಞಾನಕ್ಕೂ, ಪ್ರಖ್ಯಾತಿಯನ್ನು ಪಡೆದಿರುವ ನಿನ್ನ ಮನೆತನಕ್ಕೂ ತಕ್ಕುದೆ? ಅಥವಾ ಕಲ್ಯಾಣಬುದ್ಧಿಯುಳ್ಳ ನೀನು – ಮನಃಪೂರ್ವಕವಾಗಿ ನನ್ನನ್ನು ಪರಿತ್ಯಜಿಸಿದೆ ಎಂದು ನಾನು ಭಾವಿಸುವುದಿಲ್ಲ. ನಾನೇ ಜನ್ಮಾಂತರಗಳಲ್ಲಿ ಆರ್ಜಿಸಿದ ಪಾಪರಾಶಿಯ ಫಲವು ಇದೊಂದು ಬರಸಿಡಿಲಾಗಿ ನನಗೆ ಬಡಿಯಿತೆಂದೇ ಭಾವಿಸುತ್ತೇನೆ. ಹಿಂದೆ ತಾನಾಗಿ ಕರಗತಳಾಗಿದ್ದ ರಾಜ್ಯಲಕ್ಷ್ಮಿಯನ್ನು ತೊರೆದು, ನನ್ನೊಡಗೊಂಡು ಕಾಡಿಗೆ ತೆರಳಿದೆ. ಈಗ ಆಕೆಗೆ ನಿನ್ನೊಡನೆ ಕಲೆತು ಪ್ರತಿಷ್ಠೆಯುಂಟಾಯಿತು. ನನ್ನ ವಿಷಯದಲ್ಲಿ ರೋಷವೂ ಇದ್ದಿತು. ಅದರಿಂದಲೇ ತನ್ನ ಮನೆಯಲ್ಲಿ ನಾನಿರುವುದನ್ನು ಸಹಿಸದೆ ಹೋದಳು, ನಿಶಾಚರರಿಂದ ತಂತಮ್ಮ ಪತಿಯರಿಗೆ ತೊಂದರೆಯುಂಟಾದಾಗ, ತಪಸ್ವಿನಿಯರು ಬಂದು, "ಅಮ್ಮಾ

ವೈದೇಹೀ! ನಿನ್ನ ಪತಿಗೆ ಅರಿಕೆ ಮಾಡಿ ನಮ್ಮ ಸಂಕಟವನ್ನು ಪರಿಹರಿಸು", ಎಂದು ನನ್ನನ್ನು ಮರೆಹೊಗುತ್ತಲಿದ್ದರು, ನಿನ್ನ ಅನುಗ್ರಹದಿಂದ ಹಾಗೆ ಇದ್ದ ಈ ನಾನು–ನೀನು ಮಹೋನ್ನತನಾಗಿರುವಲ್ಲಿ, ಈಗ ಬೇರೊಬ್ಬ ತಪಸ್ವಿಯ ಬಳಿಗೆ ಹೋಗಿ ಹೇಗೆ ಮರೆಹೊಗುವೆನು? ಅಥವಾ–ನಿನ್ನ ಸಂದರ್ಶನವು ನನಗೆ ದೊರೆಯುವುದಿಲ್ಲವೆಂಬುದು ಸಿದ್ಧವಾಗಿರುವಲ್ಲಿ ಈ ನನ್ನ ಹಾಳು ಜೀವಿತದಲ್ಲಿ ಆಶೆಯನ್ನು ತೊರೆಯ ಬಲ್ಲೆನು. ಆದರೆ–ನನ್ನ ಉದರದಲ್ಲಿ ಅವಶ್ಯಕವಾಗಿ ರಕ್ಷಿಸಬೇಕಾಗಿರುವ ನಿನ್ನ ಸಂತಾನವು ಬಲವಾದ ಅಡ್ಡಿಯಾಗಿದೆ. ಅದರಿಂದ ಯತ್ನವಿಲ್ಲದಿರುವುದು. ಆದಕಾರಣ ಪ್ರಸವಾನಂತರದಲ್ಲಿ ಮುಂದಿನ ಜನ್ಮದೊಳಗೆ ನೀನೇ ನನಗೆ ಪ್ರಾಣಪ್ರಿಯನಾಗಬೇಕು, ಮತ್ತು ಅಗಲಿಕೆಯುಂಟಾಗಬಾರದು. ಅಂತಹ ಫಲವನ್ನು ಕೊಡುವ ಹಾಗೆ, ಸೂರ್ಯನಲ್ಲಿ ದೃಷ್ಟಿಯನ್ನಿಟ್ಟು ಈ ನಾನು ತೀವ್ರವಾದ ಪಂಚಾಗ್ನಿಮಧ್ಯದ ತಪಸ್ಸನ್ನು ಆಚರಿಸಲು ಯತ್ನಿಸುವೆನು. ವರ್ಣಾಶ್ರಮಗಳಿಗೆ ಸಾಂಕರ್ಯವಿಲ್ಲದಂತೆ ಪಾಲಿಸೋಣವೇ ರಾಜ ಧರ್ಮವೆಂದು ಮಹಾನುಭಾವನಾದ ಮನುವು ಉದಹರಿಸಿರುವನು. ಆದಕಾರಣದಿಂದಲೇ ನೀನು ನನ್ನನ್ನು ತಿರಸ್ಕರಿಸಿ ಹೊರಡಿಸಿದೆಯಲ್ಲವೆ? ಹಾಗಾದರೂ ನನ್ನಲ್ಲಿ ಕಳತ್ರದೃಷ್ಟಿಯನ್ನಿಡದೆ, ನಿನ್ನ ಆಳ್ವಿಕೆಗೆ ಒಳಪಟ್ಟ ಅರಣ್ಯದಲ್ಲಿ ವಾಸಮಾಡುತ್ತಲಿರುವ ತಪಸ್ವಿಗಳಲ್ಲಿ ಹೇಗೋ ಹಾಗೆಯೇ ನನ್ನಲ್ಲಿಯೂ ಪಾಲ್ಯದೃಷ್ಟಿಯನ್ನಿಟ್ಟಿರಬೇಕು. ಎಂಬದಾಗಿ ಬಿನ್ನವಿಸಿದಳೆಂದು ಅರಿಕೆ ಮಾಡು" ಎಂದಳು.

ಬಳಿಕ ಲಕ್ಷ್ಮಣನು–ಹಾಗೆಯೇ ಆಗಲೆಂದು ಹೇಳಿ, ಸೀತೆಗೆ ಅಭಿವಂದಿಸಿ ಹೊರಟನು, ದೃಷ್ಟಿಮಾರ್ಗವನ್ನು ಅತಿಕ್ರಮಿಸಿದನು. ವೈದೇಹಿಯು ವ್ಯಸನವನ್ನು ಸಹಿಸಲಾರದೆ ಹೋದಳು, ಸಿಂಹವ್ಯಾಘ್ರಾದಿ ಕ್ರೂರಮೃಗಗಳಿಂದೊಡಗೂಡಿದ ಘೋರವಾದ ಮಹಾರಣ್ಯ. ನೀನೇ ಎಂಬ ಬೇರೆ ದಿಕ್ಕಿಲ್ಲ. ಅಬಲೆ, ಗರ್ಭಿಣಿ, ಬಹಳವಾಗಿ ಹೆದರಿದಳು, ದುಗುಡವು ಮಿತಿಮೀರಿತು, ಲಜ್ಜೆಯನ್ನು ತೊರೆದು, ಉಚ್ಚಸ್ವರದಿಂದ ಹೆಣ್ಣೆರಳೆಯಂತೆ ಗೋಳೋ ಎಂದು ಅಳತೊಡಗಿದಳು. ಆಗ–ಕುಣಿಯುತಿದ್ದ ನವಿಲುಗಳು ಸುಮ್ಮನಾದುವು. ತರುಗಳು ಕುಸುಮಗಳನ್ನುದಿರಿಸಿದುವು. ಹುಲ್ಲೆಗಳು–ಮೇಯುವಾಗ ಬಾಯಿಂದ ಹಿಡಿದಿದ್ದ ಹುಲ್ಕಡ್ಡಿಯನ್ನು ಹಾಗೆಯೇ ಬಿಟ್ಟು, ಅಲುಗದೆ ನಿಂತುವು. ಹೀಗೆ ಆ ವನವೆಲ್ಲವೂ ಆಕೆಯೊಡನೆ ಸಮಾನವಾದ ದುಃಖವನ್ನುಳ್ಳದಾಗಿದ್ದಿತು.

ಹಿಂದೆ ತಮಸಾನದಿಯ ತೀರದಲ್ಲಿ ಒಬ್ಬ ಬೇಡನು–ಒಡನಾಡಿಗಳು ಇದ್ದ ಬಕಪಕ್ಷಿಗಳೊಳಗೆ ಪುರುಷಪಕ್ಷಿಯೊಂದನ್ನು ಕೊಂದನು. ಅದನ್ನು ನೋಡಿ ತಾಳಲಾರದೆ ಹೋದ ಯಾವ ಕರುಣಾಳುವಿನ ಶೋಕವೂ ಶ್ಲೋಕರೂಪವನ್ನು ಪಡೆಯಿತೋ

ಆ ಮಹಾನುಭಾವನೇ ವಾಲ್ಮೀಕಿ ಮುನಿ*, ಆತನೀಗ–ದರ್ಭೆ, ಸಮಿತ್ತು ಮೊದಲಾದವುಗಳನ್ನು ತರಲಿಕ್ಕೆಂದು ಅರಣ್ಯಕ್ಕೆ ತೆರಳಿದ್ದನು, ದೂರದಲ್ಲಿ ರೋದನಧ್ವನಿಯು ಕೇಳಬಂದಿತು. ಆ ಸದ್ದನ್ನೇ ಅನುಸರಿಸಿ ಬಂದು ಆಕೆಯನ್ನು ಇದಿರ್ಗೊಂಡನು. ಜಾನಕಿಯು–ಆ ಮುನಿವರನನ್ನು ಕಂಡಳು, ಗೋಳನ್ನು ನಿಲ್ಲಿಸಿದಳು. ಕಣ್ಣುಗಳಲ್ಲಿ ತುಂಬಿದ್ದ ನೀರನ್ನು ಸೀತೆಯು ಸೆರಗಿನಿಂದ ಒತ್ತಿದಳು, ಆ ತಪೋನಿಧಿಗೆ ವಂದಿಸಿದಳು. ಮಹರ್ಷಿಯು–ಮಹೀಸುತೆಯ ಗರ್ಭಚಿಹ್ನೆಯನ್ನು ಕಂಡನು, ಮಗಳೆ! ಸುಪುತ್ರವತಿಯಾಗು, ಎಂಬ ಮಂಗಳಾಶಾಸನವನ್ನು ಹೀಗೆ ಹೇಳತೊಡಗಿದನು, ಎಲೌ ವತ್ಸೆ! ಮಿಥ್ಯಾಪವಾದದಿಂದ ಕಳವಳಗೊಂಡ ಪತಿಯು ನಿನ್ನನ್ನು ತಿರಸ್ಕರಿಸಿರುವನೆಂಬುದನ್ನು ಧ್ಯಾನದೃಷ್ಟಿಯಿಂದ ತಿಳಿದು ಇದ್ದೇನೆ, ಮಗು ವೈದೇಹಿ! ಬೇರೆ ಸ್ಥಳದಲ್ಲಿರುವ ನಿಮ್ಮ ತಂದೆಯ ಮನೆಗೇ ನೀನೀಗ ಬಂದು ಇದ್ದೀಯೆ, ಆದಕಾರಣ ವ್ಯಥೆಪಡಬೇಡ ಎಂದನು.

ಪತಿಯು ತೊರೆದ ಸತಿಯರಿಗೆ ಪಿತೃಗೃಹವೇ ಶರಣಲ್ಲವೆ? ಮೂಲೋಕದ ಮುಳ್ಳನ್ನು ಕಿತ್ತೆಸೆದವನೂ, ಸತ್ಯಪ್ರತಿಜ್ಞನೂ, ತನ್ನನ್ನು ತಾನು ಹೊಗಳಿಕೊಳ್ಳದವನೂ ಆಗಿ, ನನಗೆ ಪ್ರೀತಿಪಾತ್ರನೆನಿಸಿದ್ದರೂ, ನಿನ್ನವಿಷಯದಲ್ಲಿ ಅನೃತಲೋಕವಾದದಿಂದ ಮಲಿನ ಮನಸ್ಸಿನವನಾಗಿ ನಿಂದಿತವಾದ ಕೆಲಸವನ್ನು ಮಾಡಿದುದರಿಂದ ಭರತಾಗ್ರಜನಲ್ಲಿ ನನಗೆ ಖಂಡಿತವಾಗಿ ಆಗ್ರಹವುಂಟು.

ಅಮ್ಮಾ! ಸೀತೆ! ಉದಾರ ಕೀರ್ತಿಸಂಪನ್ನನಾದ ನಿಮ್ಮ ಮಾವನು ನನ್ನ ಸಖನು. ನಿಮ್ಮ ತಂದೆಯಾದ ಜನಕನಾದರೆ ವಿದ್ವಾವಂತರಿಗೂ ಜ್ಞಾನೋಪದೇಶವನ್ನು ಮಾಡಿ, ಸಂಸಾರ ದುಃಖವನ್ನು ಪರಿಹರಿಸತಕ್ಕವನು. ನೀನೋ ಪತಿವ್ರತೆಯರೊಳಗೆ ಅಗ್ರಗಣ್ಯಳು. ಆದಕಾರಣ ಸರ್ವಪ್ರಕಾರದಿಂದಲೂ ನೀನು ನನ್ನ ದಯೆಗೆ ಪಾತ್ರಳೆನಿಸಿ ಇದ್ದೀಯೆ. ತಪಸ್ವಿಗಳ ಸಹವಾಸದಿಂದ ಸಹಜವಾದ ವೈರವನ್ನು ತೊರೆದಿರುವ ಶಾಂತಮೃಗಗಳಿಂದೊಡಗೂಡಿದ ಈ ತಪೋವನದಲ್ಲಿ ಯಾವುದೊಂದು ಭಯವೂ ಇಲ್ಲದೆ ಸುಖವಾಗಿ ವಾಸಮಾಡುತ್ತಲಿರು. ಇಲ್ಲಿಯೇ ನಿನ್ನ ಸುಖಪ್ರಸವವು ಆಗಲಿ, ನಿನ್ನ ಮಂಗಳಸಂತಾನಕ್ಕೆ ಜಾತಕರ್ಮವೇ ಮೊದಲಾದ ಸಂಸ್ಕಾರವು ವಿಧಿಪ್ರಕಾರ ನಡೆಯುವುವು. ನೀನು ಯೋಚಿಸಬೇಕಾದುದಿಲ್ಲ. ಮುನಿಗಳ ಎಲೆಮನೆಗಳೆಲ್ಲ ಈ ತಮಸಾನದಿಯ ತೀರದಲ್ಲಿಯೇ ಸಾಲಾಗಿ ನೆಲೆಗೊಂಡಿವೆ. ಈ ಪರ್ಣಶಾಲೆಯಲ್ಲಿರುತ್ತಾ, ಪಾಪಪರಿಹಾರಕನಾದ ತಮಸಾ ನದಿಯಲ್ಲಿ ಮಿಂದು, ಹತ್ತಿರದಲ್ಲಿರುವ ರಮ್ಯವಾದ ಮರಳು ನೆಲದಲ್ಲಿ ಕುಳಿತು, ನಿನ್ನ ಇಷ್ಟದೇವತೆಯನ್ನು ಭಕ್ತಿಯಿಂದ ಪೂಜಿಸುತ್ತಲಿದ್ದರೆ ನಿನ್ನ ಮನಸ್ಸಿಗೆ ವಿಶೇಷವಾದ ಪ್ರಸನ್ನತೆಯುಂಟಾಗುವುದು. ನಿನ್ನ ಪೂಜೆಪುರಸ್ಕಾರಗಳಿಗೆ ಬೇಕಾಗುವ ಕಾಲದಲ್ಲಿ ಸಿದ್ಧವಾದ ಹೂವು ಹಣ್ಣುಗಳನ್ನೂ, ಉತ್ತುಬಿತ್ತದೆಯೇ

ಬೆಳೆದ ಕಾಳುಕಡ್ಡಿಗಳನ್ನೂ ಒದಗಿಸಿಕೊಡುತ್ತಾ, ಮುನಿಕುಮಾರಿಯರು–ನಿನ್ನೊಡನೆ ಮೃದುಮಧುರವಾದ ಮಾತುಗಳನ್ನಾಡಿಕೊಂಡು, ನಿನಗೆ ನೂತನವಾಗಿ ಉಂಟಾಗಿರುವ ಮನೋವ್ಯಥೆಯನ್ನು ಪರಿಹರಿಸುತ್ತಿರುವರು. ನಿನ್ನ ಕೈಯಿಂದ ಎತ್ತಲಿಕ್ಕೆ ಆಗುವಂತಹ ಪಾತ್ರೆಗಳಿಂದ ನೀರು ತಂದು, ಆಶ್ರಮದಲ್ಲಿನ ಹೂವಿನ ಗಿಡಗಳಿಗೆರೆದು, ಬೆಳೆಯಿಸುತ್ತಾ ಅವುಗಳಲ್ಲಿ ಎಳೆಯ ಹಸುಳೆಗಳೊಳಗೆ ಹೇಗೋ ಹಾಗೆ ಮಮತೆಯನ್ನಿಟ್ಟುಕೊಂಡು, ಸುಪ್ರಸವದವರೆಗೆ ವಿನೋದದಿಂದ ಕಾಲವನ್ನು ಕಳೆಯುತ್ತಲಿರು. ತರುವಾಯ ನಿನ್ನ ಮನೋವಿನೋದವು ಸುಲಭವಾಗಿರುವುದು.– ಎಂದು ಹೇಳಿ, ದಯಾಳುವಾದ ವಾಲ್ಮೀಕಿಮುನಿಯು ತನ್ನ ಅನುಗ್ರಹದಿಂದ ಸಂತುಷ್ಟಳಾದ ಸೀತೆಯನ್ನು ಕರೆದುಕೊಂಡು ಸಂಜೆಯಹೊತ್ತಿನಲ್ಲಿ ತನ್ನ ಆಶ್ರಮಕ್ಕೆ ಬಂದನು. ವೈರವನ್ನು ತೊರೆದಿರುವ ಮೃಗಗಳೆಲ್ಲ ಅಲ್ಲಲ್ಲಿ ಅಡಗಿದ್ದುವು. ಅಗ್ನಿಶಾಲೆಯ ವೇದಿಯ ಸುತ್ತಲೂ ಹುಲ್ಲೆಗಳು ಮಲಗಿ ಮೆಲಕು ಹಾಕುತ್ತಲಿದ್ದುವು.

ಪಾಡ್ಯ ಮೊದಲ್ಗೊಂಡು ಅಗ್ನಿಯೇ ಮೊದಲಾದ ದೇವತೆಗಳಿಂದ ಪಾನಮಾಡಲ್ಪಟ್ಟು ಉಳಿಯುವ ಕಡೆಯದಾದ ಚಂದ್ರನ ಅಮೃತಮಯವಾಗಿರುವ ಕಳೆಯನ್ನು ಅಮಾವಾಸ್ಯಾರೂಪವಾದ ಕಾಲವು – ಓಷಧಿಗಳಲ್ಲಿಡುವ ಹಾಗೆ, ಮುನಿಯು – ಜಾನಕಿಯನ್ನು ತಪಸ್ವಿನಿಯರಿಗೊಪ್ಪಿಸಿದನು. ತಾಪಸಿಯರು – ಶೋಕದೀನಳಾಗಿರುವ ಆ ಪ್ರೀತಿಯ ವೈದೇಹಿಯ ಆಗಮನದಿಂದ ಆನಂದಿಸುತ್ತಾ, ಆಕೆಯನ್ನು ಬಹಳವಾಗಿ ಆದರಿಸಿದರು. ಉಚಿತ ಸತ್ಕಾರಾನಂತರದಲ್ಲಿ ರಾತ್ರಿಯಾಗಲು, ಪರ್ಣಶಾಲೆಯೊಳಗೆ ಇಂಗಳದ ಎಣ್ಣೆಯಿಂದ ದೀಪವನ್ನು ಅಣಿಮಾಡಿದರು. ಮೃದುವಾದ ಕೃಷ್ಣಾಜಿನವನ್ನು ಮಲಗಲಿಕ್ಕೆ ಹಾಸಿಕೊಟ್ಟರು. ಅಂದಿನ ಇರುಳನ್ನು ಸೀತೆಯು ಚಿಂತೆಯಿಂದಲೇ ಕಳೆದಳು.

ಮಾರನೆಯ ದಿವಸದಿಂದ ನಾರು ಸೀರೆಯನ್ನುಟ್ಟು, ತಮಸೆಯಲ್ಲಿ ಮಿಂದು ಪರಿಶುದ್ಧಳಾಗಿ, ವಿಧಿಪ್ರಕಾರ ಅತಿಥಿಗಳನ್ನು ಸತ್ಕರಿಸುತ್ತಾ, ವನದಲ್ಲಿನ ಕಂದಮೂಲಾದಿಗಳಿಂದ ಆಹಾರವನ್ನು ತೀರಿಸಿಕೊಂಡು, ಪತಿಸಂತತಿಯ ಸುಖವಾದ ಬೆಳವಳಿಗೆಗಾಗಿ ಶರೀರವನ್ನು ಪೋಷಿಸಿಕೊಳ್ಳುತ್ತಲಿದ್ದಳು.

ಇತ್ತ ಇಂದ್ರಜಿದ್ವೈರಿಯು ಪುರಪ್ರವೇಶಾನಂತರದಲ್ಲಿ "ಈಗಲಾದರೂ ಪ್ರಭುವಾದ ರಾಮಚಂದ್ರನು ಪಶ್ಚಾತ್ತಾಪದಿಂದೊಡಗೂಡುವನೋ ಹೇಗೋ ನೋಡೋಣ" ಎಂದು ನೆನದು, ಅಯೋಧ್ಯೆಯನ್ನು ಬಿಟ್ಟಿದ್ದು ಮೊದಲ್ಗೊಂಡು ಗಮನವನ್ನು ಹೊಕ್ಕು, ಸೀತೆಯ ಘೋರಪ್ರಲಾಪದವರೆಗೂ ತಾನು ನಡೆಯಿಸಿದ ಸಮಾಚಾರವನ್ನೆಲ್ಲ ವಿವರವಾಗಿ ಅಣ್ಣನಿಗೆ ಬಿನ್ನವಿಸಿದನು. ಕೋಮಲಹೃದಯನಾದ ರಾಮನು –

ಲಕ್ಷ್ಮಣನ ನುಡಿಗಳನ್ನು ಕೇಳುತ್ತಲಿರುವ ಕ್ಷಣದಲ್ಲಿಯೇ ಕಣ್ಣುಗಳಿಂದ ಜಲಧಾರೆಗಳನ್ನು ಸುರಿಸುತ್ತಾ, ಮಂಜಿನಮಳೆಯನ್ನು ಕರೆವ ಪುಷ್ಯಮಾಸದ ಚಂದಿರನಂತಾದನು. ಕೌಲೀನದಿಂದ ಅಂಜಿದ ರಾಮನಿಂದ ಜಾನಕಿಯು ಪುರದಿಂದ ಹೊರಡಿಸಲ್ಪಟ್ಟಿದ್ದಳಲ್ಲದೆ ಮನಸ್ಸಿನಿಂದ ಹೊರಡಿಸಲ್ಪಟ್ಟಿರಲಿಲ್ಲ.

ರಾಮನು ಮಹಾಧೀಮಂತನೇ ಅಲ್ಲವೇ? ತನ್ನ ವಿವೇಕಶಕ್ತಿಯಿಂದಲೆ ಶೋಕವನ್ನು ಅಡಗಿಸಿಕೊಂಡು, ಎಚ್ಚರದಪ್ಪದೆ, ಪ್ರಜೆಗಳ ಯೋಗಕ್ಷೇಮವನ್ನೇ ಚೆನ್ನಾಗಿ ವಿಚಾರಿಸುತ್ತಾ, ಸೋದರರೊಡನೆ ಶರೀರಸ್ಥಿತಿಗೆ ತಕ್ಕಷ್ಟು ಸುಖವನ್ನು ಅನುಭವಿಸಿಕೊಂಡು, ಮತ್ತನಾಗದೆ ಸಮೃದ್ಧವಾದ ರಾಜ್ಯವನ್ನಾಳುತ್ತಲಿದ್ದನು. ರಾಮನು–ಒಬ್ಬಳೇ ಹೆಂಡತಿಯಾಗಿದ್ದರೂ, ಸತೀಶಿರೋಮಣಿಯೆನಿಸಿದ್ದರೂ ಲೋಕವಾರ್ತೆಯಿಂದ ಹೆದರಿ, ಆಕೆಯನ್ನು ಕಾಡಿಗಟ್ಟಿದನಷ್ಟೆ? ಆತನ ವಕ್ಷಸ್ಥಲವಾಸಿನಿಯಾದ ರಾಜ್ಯಲಕ್ಷ್ಮಿಯು – ಸವತಿಯ ಕಾಟವನ್ನು ತಪ್ಪಿಸಿಕೊಂಡವಳಂತೆ ವಿರಾಜಿಸುತ್ತಲಿದ್ದಳು.

ರಾವಣಾರಿಯು – ಇಂತು ಸೀತೆಯನ್ನು ತೊರೆದರೂ, ಬೇರೊಂದು ಹೆಣ್ಣನ್ನು ಮದುವೆ ಮಾಡಿಕೊಳ್ಳಲೇ ಇಲ್ಲ. ಸುವರ್ಣಮಯವಾಗಿರುವ ಸೀತೆಯ ಪ್ರತಿಮೆಯನ್ನು ಮಾಡಿಟ್ಟುಕೊಂಡೇ ಯಾಗಗಳನ್ನೂ ಆಚರಿಸುತ್ತಿದ್ದನು. ವಾಲ್ಮೀಕಿಮುನಿವನವಾಸಿನಿಯಾದ ಸೀತೆಯು – ಆ ವಿಧವಾದ ರಾಮನ ವೃತ್ತಾಂತವನ್ನು ಕರ್ಣಾಕರ್ಣಿಕೆಯಿಂದ ಕೇಳುತ್ತಾ, ತಾಳಲಾರದಿದ್ದ ತನ್ನ ಪರಿತ್ಯಾಗದಿಂದುಂಟಾದ ಶೋಕವನ್ನು ಬಹುಕಷ್ಟದಿಂದ ಸಹಿಸುತ್ತಿದ್ದಳು.

****

ಹದಿನೈದನೆಯ ಅಧ್ಯಾಯ

ಶ್ರೀರಾಮಸ್ವರ್ಗಾರೋಹಣ

ಸೂಚನೆ । ಲವಣನಮಾಶಂಬೂಕನ ।
ಮವರಜನಿಂ ರಾಮನಿರಿದುಬಳಿಕಂ ಸವದೊಳ್ ॥
ಅವನಿಜೆಯಡಗಲ್ ಭೂಮಿಯೊ ।
ಳವರಜರಿಂ ಪ್ರಜೆಗಳಿಂದೆ ಸೇರ್ದಂ ದಿವಮಂ ॥

ರಘುಕುಲಲಲಾಮನಾದ ರಾಮನು – ಸತಿಯಾದ ಸೀತೆಯನ್ನು ಕಾಡಿಗೆ ಕಳುಹಿದನಷ್ಟೆ? ಆಮೇಲೆ–ಮಹಿಜೆಯಿಲ್ಲದೆ ರತ್ನಾಕರಮೇಖಲೆಯಾದ ಮಹಿಯನ್ನು ಮಾತ್ರವೆ ಅನುಭವಿಸುತ್ತಲಿದ್ದನು. ದಿಕ್ಕಿಲ್ಲದವರಿಗೆ ಯಾರು ದಿಕ್ಕು? ರಾಮನೇ ಅಲ್ಲವೇ? ಅದರಿಂದಲೇ ಯಮುನಾತೀರವಾಸಿಗಳಾದ ಮುನಿಗಳು – ಯಾಗಗಳನ್ನು ಮಾಡತೊಡಗಿ, ತಾಮಸನಾಗಿದ್ದ ಲವಣನೆಂಬ ಅಸುರನು ತೊಂದರೆಗೊಳಿಸಲು, ಬೇರೆ ರಕ್ಷಕರನ್ನರಿಯದೆ, ರಾಮನನ್ನೇ ಬಂದು ಮರೆಹೊಕ್ಕರು. ಆದರೆ ಆ ತಪಸ್ವಿಗಳು – ತಮಗೆ ರಾಮನು ರಕ್ಷಕನಾಗಿರುವನೆಂದು ತಿಳಿದೇ ತಮ್ಮ ತೇಜಸ್ಸಿನಿಂದ ಆ ನಿಶಾಚರರನ್ನು ಸುಡಲಿಲ್ಲ. ತಾಪಸರು – ತಮಗೆ ಅಭಯದಾನವನ್ನು ಮಾಡತಕ್ಕವರಾರೂ ಇಲ್ಲದಿದ್ದಾಗ ಮಾತ್ರವೇ ಅಪರಾಧಿಗಳಲ್ಲಿ ಶಾಪಾಸ್ತ್ರವನ್ನು ಪ್ರಯೋಗಿಸಿ ತಮ್ಮ ತಪೋಧನವನ್ನು ವೆಚ್ಚ ಮಾಡಿಕೊಂಬರು.

ರಾಮನು – ಆ ಮುನಿಗಳಿಗೆ ಲವಣಾಸುರನನ್ನು ವಧಿಸುವೆನೆಂದು ಮಾತುಕೊಟ್ಟನು. ಅವನು ಹಾಗೆ ಪ್ರತಿಜ್ಞೆ ಮಾಡಿದುದು ನ್ಯಾಯವಾಗಿದೆ. ಏಕೆಂದರೆ ಚಕ್ರಪಾಣಿಯು ಭೂಮಿಯಲ್ಲಿ ರಾಮರೂಪದಿಂದವತರಿಸಿದುದು ಧರ್ಮಸಂರಕ್ಷಣೆಗೋಸ್ಕರವೇ ಅಲ್ಲವೇ? ಆಗ ವನೌಕಸರು – ರಾಮನನ್ನು ಕುರಿತು ಎಲೈ ದಾಶರಥಿಯೇ! ಲವಣನು ಹರನ ವರದಿಂದ ಒಂದು ಶೂಲಾಯುಧವನ್ನು ಪಡೆದಿರುವನು. ಆದಕಾರಣ – ಅದು ಅವನ ಕಯ್ಯಲ್ಲಿಲ್ಲದ ವೇಳೆಯಲ್ಲಿಯೇ ಇದಿರಿಸಿ ಇರಿಯಬೇಕು ಎಂದರು.

ಬಳಿಕ ರಾಘವನು – ಅರಿಯುನ್ನಿರಿವುದರಿಂದ ಅನುಜನ ಹೆಸರನ್ನು ಸಾರ್ಥಕಗೊಳಿಸಬೇಕೆಂದು ನೆನೆದನೊ ಎಂಬಂತೆ "ಮುನಿಗಳಿಗೆ ಕ್ಷೇಮವನ್ನು ಕಲ್ಪಿಸು"

ಎಂದು ಶತ್ರುಘ್ನನಿಗೆ ಆಜ್ಞಾಪಿಸಿದನು. ಲೋಕದಲ್ಲಿ ವಿಶೇಷವಿಧಿಯು ಸಾಮಾನ್ಯ ವಿಧಿಯನ್ನು ಬಾಧಿಸುವ ಹಾಗೆ, ರಘುಕುಲದರಸರಲ್ಲಿ ಯಾವನಾದರೊಬ್ಬನು ಹಗೆಯನ್ನಡಗಿಸಿದರೆ ಸರಿ, ಅದರಿಂದಲೇ ಸಪತ್ನ ಸಂಹಾರಕ್ಕೆ ರಾಮನೇ ಹೋಗಬೇಕೆಂಬ ನಿಯಮವೇನೂ ಇಲ್ಲ ಆದಕಾರಣ ಶತ್ರುಘ್ನನನ್ನು ಕಳುಹಿಸಲೆಳಸಿದನು. ಅನುಜನಾಗಲೆ ಅಗ್ರಜನ ಆಶೀರ್ವಾದವನ್ನಾಂತು, ನಿರ್ಭಯನಾಗಿ ರಥವನ್ನೇರಿ, ಪುಷ್ಪಗಳು ಘಮಿಸುತ್ತಲಿರುವ ವನಸ್ಥಲಿಗಳನ್ನು ನೋಡಿ ಸಂತೋಷಿಸುತ್ತಾ ಹೊರಟುಬಂದನು.

ಬಳಿಕ – ಅಧ್ಯಯನಾರ್ಥದ ಇ ಎಂಬ ಧಾತುವನ್ನು ಅರ್ಥಸಿದ್ಧಿಗೋಸ್ಕರ ಅಧಿ ಎಂಬ ಪೂರ್ವಪ್ರತ್ಯಯವು (ಉಪಸರ್ಗ) ಎಡೆಬಿಡದೆ ಹಿಂಬಾಲಿಸುವ ಹಾಗೆ, ರಾಮಾದೇಶದಿಂದ ಸೇನೆಯೂ – ಭರತನನ್ನು ಅನುಸರಿಸಿ ಹೊರಟಿತು. ರಥದ ಮುಂದೆ ಮುನಿಗಳು ಪರಂತಪನಾದ ಶತ್ರುಘ್ನನಿಗೆ ದಾರಿತೋರುತ್ತ ತೆರಳಿದರು. ಆಗ ಶತ್ರುಘ್ನನು – ಮುಂದುವರಿವ ವಾಲಖಿಲ್ಯಾದಿ ಮುನಿಗಳಿಂದೊಡಗೂಡಿದ ಅಂಶುಮಂತನಂತೆ ವಿರಾಜಿಸುತ್ತಲಿದ್ದನು. ಹಾಗೆಯೇ ಪಯಣವನ್ನು ಬೆಳೆಸುತ್ತ ಬಂದನು. ತೇರಿನ ಗಾಲಿಯ ಸದ್ದನ್ನು ಕೇಳಿ ಕುತೂಹಲದಿಂದ ತಲೆಯನ್ನೆತ್ತಿ ನೋಡುತ್ತ ಅಲುಗದೆ ನಿಂತಿರುವ ಹುಲ್ಲೆಗಳಿಂದ ಅಂದವಾದ ವಾಲ್ಮೀಕಿ ಮುನಿಯ ತಪೋವನದಲ್ಲಿ ಮಾರ್ಗವಶದಿಂದ ಒಂದಿರುಳು, ತಂಗಿ ಇರಬೇಕಾಯಿತು.

ಬಳಲಿದ ಕುದುರೆಗಳನ್ನೊಳಗೊಂಡಿದ್ದ ತೇರಿನಿಂದಿಳಿದ ಕುಮಾರ ಶತ್ರುಘ್ನನನ್ನು, ವಾಲ್ಮೀಕಿ ಮುನಿಯು – ತನ್ನ ತಪೋಮಹಿಮೆಯಿಂದ ಸಿದ್ಧವಾದ ಉತ್ತಮ ಸಂಭಾವನೆಗಳಿಂದ ಆದರಿಸಿ ಸತ್ಕರಿಸಿದನು. ಶತ್ರುಘ್ನನಿಗೆ ಅತ್ತಿಗೆಯೆನಿಸಿ ಗರ್ಭಿಣಿಯಾಗಿ ಅಲ್ಲಿಯೇ ಇರುತ್ತಿದ್ದ ಜಾನಕಿಯು – ಕ್ಷಿತಿಯು ಸಮಗ್ರವಾದ ಕೋಶದಂಡಗಳನ್ನು ಹೇಗೋ ಹಾಗೆ, ಅಂದಿನ ಇರುಳೇ ಅವಳಿ ಮಕ್ಕಳನ್ನು ಹಡೆದಳು. ಅಣ್ಣನಿಗೆ ಸಂತಾನಲಾಭವಾಯಿತೆಂಬ ಸುದ್ದಿಯನ್ನು ಕೇಳಿ, ಶತ್ರುಘ್ನನು – ಸೌಮನಸ್ಯವನ್ನಾಂತನು. ಬೆಳಕು ಹರಿಯುತ್ತ ಬರಲು ಅಂಜಲಿಯನ್ನೊಪ್ಪಿಸಿ, ಮುನಿಯ ಅಪ್ಪಣೆಯನ್ನು ಪಡೆದು, ರಥವನ್ನೇರಿ ಹೊರಟನು. ಮಧೂಪಘ್ನವೆಂಬ ಲವಣಾಸುರನ ಪುರದ ಬಳಿಗೆ ಬಂದನು. ರಾವಣನ ತಂಗಿಯೆನಿಸಿದ ಕುಂಭೀನಸಿಯ ಮಗನಾದ ಲವಣನೂ – ಕಪ್ಪವನ್ನು ಪಡೆಯುವಂತೆ ಕಾಡಿನಿಂದ ಪಡೆಯನ್ನು ತೆಗೆದುಕೊಂಡು ಇದಿರ್ವಂದನು. ಆ ಲವಣನು ಹೊಗೆಯ ಬಣ್ಣದವನಾಗಿದ್ದನು. ಕೊಬ್ಬಿನವಾಸನೆಯು ಹರಡಿದ್ದಿತು. ಬೆಂಕಿಯ ತಲೆಗೂದಲು ಹೊಂಬಣ್ಣವಾಗಿದ್ದಿತು. ಮಾಂಸಾಶನರಾದ ರಕ್ಕಸರಿಂದ ಆವರಿಸಲ್ಪಟ್ಟಿದ್ದನು. ಇದರಿಂದ ನಡೆದು ಬರುತ್ತಲಿರುವ ಚಿತಾಗ್ನಿಯಂತೆ ಕಾಣಬರುತ್ತಲಿದ್ದನು. ಲವಣನಿಗೆ ಅದು ಕೇಡುಗಾಲವಾಗಿದ್ದಿತು, ಅದರಿಂದಲೆ ಆಗ

ಅವನು ಶೂಲಾಯುಧವನ್ನು ಹಿಡಿದಿರಲಿಲ್ಲ. ಆ ಸಮಯವನ್ನು ನೋಡಿಯೇ ಲಕ್ಷ್ಮಣಾನುಜನು ಅವನನ್ನು ಇದಿರಿಸಿದನು.

ಸಮಯವನ್ನರಿತು ಹಗೆಯನ್ನಿರಿಯಲೆಳಸುವವರಿಗೆ ಜಯವು ಇದಿರಾಗಿಯೇ ಇರುವುದಲ್ಲವೆ? ಆಗ ಲವಣನು– ಆಹಾ! ಹೊಟ್ಟೆಗೆ ಮೃಗವೇ ಮೊದಲಾದ ಆಹಾರವು ತಕ್ಕಷ್ಟು ದೊರೆಯಲಿಲ್ಲ, ಅದರಿಂದಲೇ ಹೆದರಿದ ಬ್ರಹ್ಮನು– ಆಹಾರಪೂರ್ಣತೆಗಾಗಿ ನನಗೋಸ್ಕರ ನಿನ್ನನ್ನು ಅಣಿಮಾಡಿದ್ದಾನೆ, ಎಂದು ಹೆದರಿಸುತ್ತಾ, ಶತ್ರುಘ್ನನನ್ನು ಕೊಲ್ಲಲೆಳಸಿ, ಪಕ್ಕದಲ್ಲಿದ್ದ ಎತ್ತರವಾದ ಮರವನ್ನು ನೋಡಿ ತುಂಗೆಯದಂಟನ್ನು ಕೀಳುವ ಹಾಗೆ ಆ ತರುವನ್ನು ಬುಡಸಹಿತ ಕಿತ್ತು ಎಸೆದನು. ಶತ್ರುಘ್ನನ ಕೂರಾದ ಅಂಬುಗಳು–ಆ ಮರವನ್ನು ಮಧ್ಯದಲ್ಲಿಯೇ ತುಂಡಾಗಿ ಕತ್ತರಿಸಿ ಉರುಳಿಸಿದುದರಿಂದ ಆ ವೃಕ್ಷದ ಕುಸುಮರಜವು ಮಾತ್ರವೇ ಶತ್ರುಘ್ನನ ಮೈಗೆ ತಾಗಿತು. ಆ ಮರವನ್ನು ತರಿದೊಟ್ಟಿದುದನ್ನು ಕಂಡು ಮರಳಿ ಲವಣನು – ಬೇರಾಗಿ ನಿಂತಿರುವ ಮೃತ್ಯುವಿನ ಮುಷ್ಟಿಯಂತಿರುವ ತೋರವಾದ ಕೋಡುಗಲ್ಲೊಂದನ್ನೆತ್ತಿ ಇಟ್ಟನು. ಶತ್ರುಘ್ನನು–ಐಂದ್ರಾಸ್ತ್ರವನ್ನು ಪ್ರಯೋಗಿಸಿ, ಆ ಬಂಡೆಯನ್ನು ಪರಮಾಣುವಿಗಿಂತಲೂ ಸೂಕ್ಷ್ಮಾಣುಗಳಾಗುವಂತೆ ಪುಡಿಪುಡಿ ಮಾಡಿದನು.

ಎತ್ತರವಾದ ಒಂದು ತಾಳೆಯ ಮರವನ್ನೊಳಗೊಂಡಿರುವ ದೊಡ್ಡ ಬೆಟ್ಟವು– ಉತ್ಪಾತವಾತದಿಂದ ಹಾರಿಸಲ್ಪಟ್ಟು ಬರುತ್ತಿರುವ ಹಾಗೆ, ಲವಣನು ತನ್ನ ಬಲತೋಳನ್ನೆತ್ತಿ ಶತ್ರುಘ್ನನನ್ನು ಹೊಡೆದು ಕೊಲ್ಲಬೇಕೆಂದು ಅಟ್ಟಿಬಂದನು. ಕೂಡಲೆ ಶತ್ರುಘ್ನನು. ವೈಷ್ಣವಾಸ್ತ್ರದಿಂದ ಲವಣನ ಎದೆಯನ್ನು ಇರಿದನು. ತತ್‌ಕ್ಷಣದಲ್ಲಿಯೇ ನೆಲದಮೇಲೆ ಬಿದ್ದ ಅಸುರನು ತನ್ನ ಮೆಯ್ಯ ಹೊರೆಯಿಂದ ಭೂಮಿಯನ್ನು ಅಲುಗಿಸಿದನು; ಆ ತಪೋವನವಾಸಿಗಳಾದ ಮುನಿಗಳ ಭಯಕಂಪವನ್ನು ಪರಿಹರಿಸಿದನು. 'ಸತ್ತು ಬಿದ್ದ ನಿಶಾಚರನ ಶಿರದಮೇಲೆ ಕಾಗೆಗಳ ಹಿಂಡು ಬಂದು ಕುಳ್ಳಿರುವಾಗಲೇ, ಅವನಿಗೆ ಪ್ರತಿಭಟನಾಗಿದ್ದ ಶತ್ರುಘ್ನನ ತಲೆಯಮೇಲೆ ದೇವತೆಗಳ ಕರಗಳಿಂದುದಿರಿದ ಪುಷ್ಪವೃಷ್ಟಿಯೂ ನೆಲಸಿತು. ಇಂತು ಲವಣಾಸುರನನ್ನು ಕೊಂದ ವೀರ ಶತ್ರುಘ್ನನು ತನ್ನನ್ನು ಆಗ, ಇಂದ್ರಜಿತುವನ್ನು ಇರಿದ ತೇಜಸ್ಸಿನಿಂದ ಶೋಭಿಸುವ ಸೌಮಿತ್ರಿಗೆ ಸೋದರನನ್ನಾಗಿ ಭಾವಿಸಿದನು.

ಲೋಕಕಂಟಕನಾಗಿದ್ದ ಲವಣನು ಅಳಿದುದರಿಂದ ಕೃತಕೃತ್ಯರಾದ ತಪಸ್ವಿಗಳು– ಶತ್ರುಘ್ನನನ್ನು ಬಹಳವಾಗಿ ಕೊಂಡಾಡಿದರು, ಹೊಗಳಿಕೆಯು ಬೇಕಿಲ್ಲದೆ ನಾಚಿಕೆಯಿಂದ ತಗ್ಗಿಸಿದ ಶತ್ರುಘ್ನನ ವಿಕ್ರಮಭೂಷಣವಾದ ಶಿರವು ಶೋಭಿಸುತ್ತಲಿದ್ದಿತು.

ಮಹಾವೀರರಿಗೆ ಇಂತಹ ನಾಚಿಕೆಯೇ ಶೋಭಾವಹವಲ್ಲವೆ? ಬಳಿಕ– ವಿಷಯಗಳಲ್ಲಿ ನಿಸ್ಪೃಹನಾಗಿ, ಸೌಮ್ಯವಾದ ಆಕಾರದಿಂದೆಸೆವ ವಿಕ್ರಮಭೂಷಣನಾದ ಶತ್ರುಘ್ನನು–ಯಮುನಾನದಿಯ ದಡದಲ್ಲಿ ಮಧುರೆಯೆಂಬೊಂದು ನಗರವನ್ನು ಕಟ್ಟಿದನು. ಆ ಮಧುರಾನಗರಿಯು – ಮೇಲಿನಿಂದ ದೊರೆಯಿಂದ ಬೆಳಗುತ್ತ ಪುರಜನರ ಸಂಪದಗಳಿಂದ, ಸ್ವರ್ಗದಲ್ಲಿ ಹಿಡಿಯದೆ ಹೆಚ್ಚಿದ ಜನರಿಂದ ಬೇರೊಂದಾಗಿ ನೆಲೆಗೊಂಡ ನಗರದಂತೆ ಶೋಭಿಸುತ್ತಲಿದ್ದಿತು. ಆ ನಗರದಲ್ಲಿ ಒಂದುವೇಳೆ ಶತ್ರುಘ್ನನು – ಅರಮನೆಯ ಚಂದ್ರಶಾಲೆಯಲ್ಲಿ ನಿಂತು, ಜಕ್ಕವಕ್ಕಿಗಳಿಂದ ಬಲು ಆಂದವಾಗಿರುವ ಕಾಳಿಂದಿಯ ಹೊಳೆಯನ್ನು ನೋಡಿದನು, ಜಡೆ ಬಂಗಾರದಿಂದೊಡಗೂಡಿದ ಭೂದೇವಿಯ ಹರಳಿನಂತಿರುವುದೆಂದು ಆನಂದಿಸಿದನು.

ಇತ್ತ – ದಶರಥನಿಗೂ, ಜನಕಭೂಪತಿಗೂ ಸಖನೆನಿಸಿ, ಮಂತ್ರದ್ರಷ್ಟನೆನಿಸಿರುವ ವಾಲ್ಮೀಕಿಯು – ವೈದೇಹಿಯ ಯಮಳರಾದ ತರಳರಿಗೆ ಜನಕ ದಶರಥರಲ್ಲಿ ತನಗಿರುವ ಪ್ರೀತಿಗನುಗುಣವಾಗಿ ಜಾತಕರ್ಮವೇ ಮೊದಲಾದ ಸಂಸ್ಕಾರಗಳನ್ನು ವಿಧಿ ಪ್ರಕಾರವಾಗಿ ನೆರವೇರಿಸಿದನು. ಆದಿಕವಿಯಾದ ವಾಲ್ಮೀಕಿಯು – ಅಭಿಮಂತ್ರಿಸಿದ ಕುಶಗಳಿಂದಲೂ, ಲವಗಳಿಂದಲೂ (ಗೋವಾಲ) ಆ ಶಿಶುಗಳಿಗೆ ಗರ್ಭೋಪದ್ರವವನ್ನು ಪರಿಹರಿಸಿದ್ದನಾದುದರಿಂದ ಕುಶಲವರೆಂದೇ ಕ್ರಮವಾಗಿ ನಾಮಕರಣವನ್ನು ಮಾಡಿದ್ದನು. ಆಮೇಲೆ ಅವರಿಗೆ ಸಾಂಗವಾಗಿ ವೇದಾಧ್ಯಯನವನ್ನು ಮಾಡಿಸಿದನು, ಅದುವರೆಗೆ ಆ ಬಾಲಕರು ಬಾಲ್ಯವನ್ನು ದಾಟಿದರು. ಬಳಿಕ ಕವಿಯು – ಕವಿಗಳಿಗೆ ಮೊದಲನೆಯ ಮಾರ್ಗವೆನಿಸಿ ತನ್ನ ಕೃತಿಯಾಗಿರುವ ರಾಮಾಯಣ ಕಾವ್ಯವನ್ನು ಪಾರಾಯಣ ಮಾಡಿಸಿದನು.

ತರುವಾಯ ಆ ಕುಮಾರರು ತಮ್ಮ ತಾಯಿಯ ಬಳಿಯಲ್ಲಿ ಕಾವ್ಯರೂಪದಿಂದಿರುವ ರಾಮನ ಮಧುರವಾದ ವೃತ್ತಾಂತವನ್ನು ಇಂಪಾಗಿ ಹಾಡುತ್ತಾ, ಆಕೆಗೆ ಆತನ ಆಗಲಿಕೆಯಿಂದುಂಟಾಗಿದ್ದ ಮನೋವ್ಯಥೆಯನ್ನು ಸ್ವಲ್ಪಮಟ್ಟಿಗೆ ಕಡಮೆ ಮಾಡುತ್ತಲಿದ್ದರು.

ಅತ್ತ ಅಯೋಧ್ಯಾನಗರದಲ್ಲಿ – ತ್ರೇತಾಗ್ನಿಗಳಂತೆ ತೇಜಸ್ಸುಳ್ಳ ಭರತನೇ ಮೊದಲಾದ ಮೂವರೂ ತಂತಮ್ಮ ಧರ್ಮಪತ್ನಿಯರಲ್ಲಿ ಕ್ರಮವಾಗಿ ಇಬ್ಬಿಬ್ಬರು ಮಕ್ಕಳನ್ನು ಪಡೆದರು. ಆ ಹಿಂದೆ ಅಗ್ರಜಭಕ್ತನಾದ ಶತ್ರುಘ್ನನು– ಅರಿಗಳನ್ನಿರಿಯುವವನೆಂದು ಹೆಸರುವಾಸಿಯನ್ನು ಪಡೆದಿರುವ ತನ್ನ ಹಿರಿಯಮಗನಾದ ಸುಬಾಹುವಿಗೆ ಮಧುರಾನಗರದ ರಾಜ್ಯಭಾರವನ್ನೂ, ಕಿರಿಯವನಾದ ಬಹುಶ್ರುತನಿಗೆ ವಿದಿಶಾನಗರಿಯ ದೊರೆತನವನ್ನೂ ಒಪ್ಪಿಸಿದನು. ಮತ್ತು – ಮರಳಿ ವಾಲ್ಮೀಕಿ ಮುನಿಗೆ ತಪಃಫಲದ ವೆಚ್ಚವಾಗಬಾರದೆಂದು ನೆನೆದು, ಮೈಥಿಲೀತನಯರಾದ ಲವಕುಶರ

ರಾಮಾಯಣಗಾನದಿಂದ ನಿಶ್ಶಬ್ದ ಗಳಾಗಿರುವ ಮೃಗಗಳನ್ನೊಳಗೊಂಡಿರತಕ್ಕ ಆತನ ತಪೋವನವನ್ನು ಹೊಗದೆಯೇ ಮುಂದುವರಿದನು. ಲವಣಾಸುರ ವಧೆಯ ಸುದ್ದಿಯು ಮೊದಲೇ ಪುರಜನರಿಗೆ ವಿದಿತವಾಗಿದ್ದಿತು. ನಗರವನ್ನು ತೋರಣಾದಿಗಳಿಂದ ಬಲು ಅಂದವಾಗಿ ಅಲಂಕರಿಸಿದ್ದರು. ಬಹುಮಾನಪೂರ್ವಕವಾಗಿ ಜಿತೇಂದ್ರಿಯನಾದ ಶತ್ರುಘ್ನನನ್ನು ಇದಿರ್ಗೊಂಡರು. ಶತ್ರುಘ್ನನೂ ಬಗೆಬಗೆಯ ಶೃಂಗಾರಗಳಿಂದ ಸಂಶೋಭಿಸುತ್ತಲಿರುವ ಅಯೋಧ್ಯೆಯನ್ನು ಹೊಕ್ಕನು. ಸಭಾಮಧ್ಯದಲ್ಲಿ ಸಭಾಸದರಿಂದ ಸೇವಿಸಲ್ಪಡುತ್ತ, ಸೀತೆಯನ್ನು ಪರಿತ್ಯಾಗ ಮಾಡಿರುವುದರಿಂದ ಭೂಮಿಗೆ ಅಸಾಧಾರಣಪತಿಯಾಗಿರುವ ಅಣ್ಣನಾದ ದಾಶರಥಿಯನ್ನು ಕಂಡನು. ಕೂಡಲೆ ಅಭಿವಂದಿಸಿದನು. ರಾಮನು ಲವಣಾಂತಕನೆನಿಸಿ ಪ್ರಣತನಾದ ಶತ್ರುಘ್ನನನ್ನು, ಕಾಲನೇಮಿಯೆಂಬ ಅಸುರನನ್ನು ಕೊಂದುಬಂದ ಉಪೇಂದ್ರನನ್ನು ಇಂದ್ರನು ಹೇಗೋ ಹಾಗೆ ಅಭಿನಂದಿಸಿದನು, ಮತ್ತು ಅಂದಿನವರೆಗಿನ ಕುಶಲವೃತ್ತಾಂತವನ್ನು ತಿಳಿಸುವಂತೆ ಪ್ರಶ್ನೆಮಾಡಿದನು. ಆದರೆ-ಶತ್ರುಘ್ನನು ಕಾಲವಿಶ್ಲೇಷದಲ್ಲಿ ಪ್ರತ್ಯರ್ಪಣ ಮಾಡುವೆನು, ಎಂದು ಮುನಿಯ ಶಾಸನವಾಗಿದ್ದುದರಿಂದ ಮೈಥಿಲೀ ಸಂತತಿ ವೃತ್ತಾಂತವೊಂದನ್ನುಳಿದು ಮಿಕ್ಕ ಸಮಾಚಾರವನ್ನೆಲ್ಲ ಅಣ್ಣನಿಗೆ ಅರಿಕೆಮಾಡಿದನು.

ಆ ಮೇಲೆ ಒಂದು ಸಮಯದಲ್ಲಿ – ಆ ನಾಡಿನವನಾದ ಒಬ್ಬ ವಿಪ್ರನು – ಕೇವಲ ಬಾಲ್ಯದಲ್ಲಿಯೇ ಮೃತನಾದ ತನ್ನ ಬಾಲಕನನ್ನು ಎತ್ತಿತಂದು, ಭೂಪತಿಯಾದ ರಾಮನ ಅರಮನೆಯ ಮುಂದೆ ಆ ಶವವನ್ನು ತನ್ನ ತೊಡೆಯಮೇಲೆ ಮಲಗಿಸಿಕೊಂಡು ಗಟ್ಟಿಯಾಗಿ ಅಳತೊಡಗಿದನು. “ಎಲೈ ವಸುಂಧರೆಯೇ! ಮಹಾರಾಜರಾಗಿದ್ದ ದಶರಥನ ಕೈತಪ್ಪಿ, ರಾಮನ ಕೈ ಸೇರಿ, ನೀನು ಬಹುಕಷ್ಟತರವಾದ ಅವಸ್ಥೆಯನ್ನು ಪಡೆದುದರಿಂದಲೇ ಬಹುಶೋಕಕ್ಕೆ ಈಡಾಗಿ ಕಾಣಬರುತ್ತಿದ್ದೀಯೆ” ಎಂದು ಹಂಬಲಿಸುತ್ತಲಿದ್ದನು. ಧರ್ಮಭೂಪಾಲನಾದ ರಾಮನಿಗೆ ಆ ರೋದನಧ್ವನಿಯು ಕೇಳಿಸಿತು. ಆ ದ್ವಿಜನ ಶೋಕಕಾರಣವನ್ನು ಕೇಳಿ ತಿಳಿದನು. ಬಲು ನಾಚಿಕೆಗೊಂಡನು, ಅಯ್ಯೋ! ಇಂದಿನವರೆಗೆ ಇಕ್ಷ್ವಾಕು ಕುಲದರಸರ ನಾಡಿನಲ್ಲಿ ಅಕಾಲಮೃತ್ಯುವು ಅಡಿಯಿಟ್ಟುದನ್ನು ಕೇಳಿದುದಿಲ್ಲವಲ್ಲಾ ಎಂದು ಕೊರಗಿದನು. ಆಸ್ಥಾನದಿಂದ ಎದ್ದುಬಂದನು. ಹೇರಳವಾಗಿ ದುಃಖಿಸುತ್ತಲಿರುವ ಬ್ರಾಹ್ಮಣನನ್ನು ಸಂತೈಸಿದನು. ಸ್ವಲ್ಪಕಾಲ ಮಾತ್ರ ಕ್ಷಮಿಸಿ ಇರುವಂತೆ ಕೇಳಿಕೊಂಡನು. ಮೃತ್ಯುವನ್ನೂ ಗೆಲ್ಲಬೇಕೆಂದು ಬಗೆದು ಕುಬೇರನ ಪುಷ್ಪಕವನ್ನು ನೆನೆದನು. ಕೂಡಲೆ ಸಿದ್ಧವಾದ ವಿಮಾನವನ್ನು ಶಸ್ತ್ರಪಾಣಿಯಾಗಿ ಏರಿ ರಘುಕುಲಾಂಬುಧಿಚಂದ್ರನು ಹೊರಟನು. ಆಗ– “ಎಲೈ ದೊರೆಯೇ! ನಿನ್ನ ಪ್ರಜೆಗಳಲ್ಲಿ ಒಂದು ಬಗೆಯ ವರ್ಣಧರ್ಮ ವ್ಯತ್ಯಾಸವು ನಡೆಯುತ್ತಲಿದೆ, ಹುಡುಕಿ ಆ ಅಪಚಾರವನ್ನು ಪರಿಹರಿಸಿದರೆ ಆ ಮೇಲೆ ನೀನು ಕೃತಕೃತ್ಯನಾಗುವೆ”

ಎಂಬೀ ರೂಪವಾದ ಒಂದು ಆಕಾಶವಾಣಿಯು ಇದಿರಿನಲ್ಲಿ ಕೇಳಬಂದಿತು, ರಾಮನು ಆ ಆಪ್ತವಚನವನ್ನಾಲಿಸಿದನು. ವರ್ಣಧರ್ಮ ವ್ಯತ್ಯಾಸವನ್ನು ಪರಿಹರಿಸಬೇಕೆಂದು ನೆನೆದನು. ವಿಕಾರದ ಮೂಲವನ್ನು ಹುಡುಕಲು ದಿಕ್ಕುಗಳನ್ನು ಕುರಿತು ತೆರಳಿದನು. ರಥದ ವೇಗದಿಂದ ಧ್ವಜಪಟವೂ ಅಲುಗದಿದ್ದಿತು.

ಮಹಾವನದಲ್ಲಿ ನುಗ್ಗಿ ಹೋಗುತ್ತಿರುವಾಗ, ಇಕ್ಷ್ವಾಕು ಕುಲತಿಲಕನಾದ ರಾಮನು ಒಬ್ಬ ತಪಸ್ವಿಯನ್ನು ಕಂಡನು, ಆ ತಪೋಧನನು ತನ್ನ ಎರಡು ಕೈಗಳಿಂದ ಒಂದು ಮರದ ಕೊನೆಯನ್ನು ಹಿಡಿದು ತಲೆಕೆಳಗಾಗಿ ತೀವ್ರ ತಪವನ್ನಾಚರಿಸುತ್ತಲಿದ್ದನು. ಮರದ ತಡಿಯಲ್ಲಿ ಒಟ್ಟಿರುವ ಬೆಂಕಿಯಿಂದ ಹೊರಡುತ್ತಿರುವ ಹೊಗೆಯನ್ನು ಕೆಳಮೊಗನಾದ ಮುಖದಿಂದ ಕುಡಿಯುತ್ತಲಿದ್ದನು. ಧೂಮವು ಅಡರುತ್ತಲಿದ್ದುದರಿಂದ ಆತನ ಕಣ್ಣುಗಳು ಕೆಂಪೇರಿದ್ದುವು. ಅರಸು ಅವನನ್ನು ನೋಡಿದ ಕೂಡಲೆ, ಕುಲಗೋತ್ರಗಳನ್ನು ವಿಚಾರಿಸಿದನು, ಆ ಧೂಮಪನು – ತಾನು ಶೂದ್ರನೆಂದೂ, ತನ್ನ ಹೆಸರು ಶಂಬುಕನೆಂದೂ, ಸ್ವರ್ಗಸುಖವನ್ನು ಬಯಸುತ್ತಲಿರುವೆನೆಂದೂ ಅರಿಕೆಮಾಡಿದನು. ತಪಸ್ಸನ್ನು ಆಚರಿಸುವುದರಲ್ಲಿ ಅಧಿಕಾರಿಯಲ್ಲದ, ಇವನ ಕತ್ತನ್ನು ಕತ್ತರಿಸಬೇಕೆಂದು ನಿಶ್ಚೈಸಿ, ಧರ್ಮನಿಯಾಮಕನಾದ ರಾಮನು ಶಸ್ತ್ರಪಾಣಿಯಾದನು. ಮತ್ತು – ಮಂಜು ಸುರಿವುದರಿಂದ ಬಾಡಿದ ರೇಕುಗಳುಳ್ಳ ತಾವರೆಯನ್ನು ಕಾವಿನಿಂದ ಕೆಳಗಿಳಿಸುವ ಹಾಗೆ, ಬೆಂಕಿಯ ಕಿಡಿಗಳಿಂದ ಸುಟ್ಟ ರೋಮಗಳನ್ನೊಳಗೊಂಡಿರುವ ಆ ಶಂಬುಕನ ಮುಖವನ್ನು ಕಂಠನಾಳದಿಂದ ಉರುಳಿಸಿದನು. ಅನಧಿಕಾರಿಯೆನಿಸಿರುವ ಶೂದ್ರನಾದ ಶಂಬುಕನು – ತಪ್ಪುದಾರಿಯೆನಿಸಿರುವ ಕಷ್ಟಸಾಧ್ಯವಾದ ತಪಸ್ಸಿನಿಂದಲೂ ಸ್ವರ್ಗಪದವಿಯನ್ನು ಪಡೆಯುತ್ತಲಿರಲಿಲ್ಲ, ಆದರೆ – ರಾಜದಂಡವನ್ನು ಪಡೆದು, ಸತ್ಪುರುಷರಿಗೆ ಲಭಿಸುವ ಸದ್ಗತಿಯನ್ನು ಹೊಂದಿದನು. “ಮಾನವರು ಪಾಪಗಳನ್ನು ಮಾಡಿ, ರಾಜರಿಂದ ಶಿಕ್ಷೆಯನ್ನು ಅನುಭವಿಸಿದರೆ ನಿರ್ಮಲರೆನಿಸಿ ಸುಕೃತಶಾಲಿಗಳ ಹಾಗೆ, ಸತ್ಪುರುಷರ ಹಾಗೆ ಸದ್ಗತಿಯನ್ನು ಪಡೆವರು” ಎಂದು ಮಹಾನುಭಾವನಾದ ಮನುವೂ ಉದಾಹರಿಸಿರುವನಲ್ಲವೆ? ಬಳಿಕ ರಘುನಾಥನು – ಶರತ್ಕಾಲದೊಡನೆ ಚಂದ್ರನು ಸೇರುವ ಹಾಗೆ, ದಾರಿಯಲ್ಲಿ ಕಾಣಿಸಿಕೊಂಡ ಮಹಾತೇಜಸ್ವಿಯೆನಿಸಿದ ಅಗಸ್ತ್ಯನೊಡನೆ ಕಲೆತನು. ಕುಂಭಸಂಭವನು – ದೇವತೆಗಳಿಗೆ ತಕ್ಕುದೆನಿಸಿರುವ ಅಲಂಕಾರವನ್ನು ಆದರದಿಂದ ರಾಮನಿಗೆ ಕೊಟ್ಟನು, ಹಿಂದೆ ಕಡಲನ್ನು ಕುಡಿದು, ಮರಳಿಬಿಟ್ಟಾಗ ಸಮುದ್ರನು – ತನ್ನ ಬಿಡುಗಡೆಗಾಗಿ ಕೊಟ್ಟ ಮೂಲ್ಯದಂತೆ ಆ ಅಂಗರಾಗವನ್ನು ಈ ಅಗಸ್ತ್ಯನಿಗೆ ಒಪ್ಪಿಸಿದ್ದನು. ದಾಶರಥಿಯು – ಈಚೆಗೆ ಮೈಥಿಲಿಯ ಸ್ಪರ್ಶವಿಲ್ಲದ ಕರದಿಂದ ಆ ದಿವ್ಯಪರಿಮಳವನ್ನು ಧರಿಸಿ ಆ ತಪೋವನದಿಂದ ಹಿಂದಿರುಗಿದನು. ಅದುವರೆಗೆ ಜೀವಿಸಿದ ದ್ವಿಜನ ತನುಜನು ಅಯೋಧ್ಯಾನಗರದಿಂದ

ಹಿಂದಿರುಗಿದ್ದನು. ಪರಾಸುವಾಗಿದ್ದು ಮರಳಿ ಜೀವಿಸಿದ ಪುತ್ರನೊಡನೆ ಸೇರಿದ ಬ್ರಾಹ್ಮಣನು–ಅಂತಕನನ್ನೂ ಜಯಿಸಿ ರಕ್ಷಕನೆನಿಸಿದ ರಾಮನನ್ನು ಸ್ತುತಿಸಿ, ಅದರಿಂದ ಹಿಂದೆ ತಾನಾಚರಿಸಿದ್ದ ನಿಂದೆಯನ್ನು ಪರಿಹರಿಸಿಕೊಂಡನು.

ತರುವಾಯ ರಾಮಚಂದ್ರನು – ಅಶ್ವಮೇಧಯಾಗವನ್ನು ಮಾಡಬೇಕೆಂದು ನೆನೆದು, ಯಜ್ಞಾಶ್ವವನ್ನು ಬಿಟ್ಟನು. ಸುಗ್ರೀವ ವಿಭೀಷಣ ಮೊದಲಾದ ಅರಸರು – ಮೇಘಗಳು ಜಲಗಳಿಂದ ಸಸ್ಯಗಳನ್ನು ಹೇಗೋ ಹಾಗೆ ಉಪಾಯನಗಳಿಂದ ರಾಮನನ್ನು ಸಂತೋಷಗೊಳಿಸಿದರು. ಅಧ್ವರಕ್ಕಾಗಿ ಕರೆಯಲ್ಪಟ್ಟ ಮಹರ್ಷಿಗಳು– ಭೂಮಿಯಲ್ಲಿರುವ ತಂತಮ್ಮ ಸ್ಥಾನಗಳನ್ನು ಮಾತ್ರವಲ್ಲದೆ ನಕ್ಷತ್ರರೂಪವಾದ ಸ್ಥಾನಗಳನ್ನೂ ಬಿಟ್ಟು ನಾನಾದಿಕ್ಕುಗಳಿಂದಲೂ ರಾಮನನ್ನು ಕುರಿತು ಬಂದರು. ನಾಲ್ದೆಸೆಯ ನಾಲ್ಕು ಮುಖಗಳನ್ನೊಳಗೊಂಡಿರುವ ಅಯೋಧ್ಯೆಯ ಸುತ್ತಲೂ ಹತ್ತಿರದಲ್ಲಿ ಬಂದಿಳಿದಿರುವ ಮುನಿಗಳಿಂದ, ಆಗ ತಾನೆ ಜನರನ್ನು ಸೃಷ್ಟಿಸುತ್ತಿರುವ ಚತುರ್ಮುಖನ ತನುವಿನಂತೆ ಕಂಗೊಳಿಸುತ್ತಲಿದ್ದಿತು.

ಆಗ ರಾಮನು – ವೈದೇಹಿಯನ್ನು ತ್ಯಜಿಸಿದುದೂ ಶ್ಲಾಘ್ಯವೆನಿಸಿದುದಾಗಿಯೇ ಇದ್ದಿತು. ಏಕೆಂದರೆ ಪ್ರಾಚೀನಸ್ಥೂಣವೆಂದು ಹೇಳಿಸಿಕೊಳ್ಳುವ ಯಜ್ಞಶಾಲೆಯ ಒಂದು ಭಾಗವಾದ ಪ್ರಾಗ್ವಂಶದಲ್ಲಿ ಕುಳಿತಿದ್ದ ರಾಮನಿಗೆ ಸುವರ್ಣಪ್ರತಿಮೆಯ ರೂಪವಾದ ಸೀತೆಯೇ ನಿಜವಾದ ಜಾಯೆಯಾಗಿದ್ದಳು. ಆಮೇಲೆ ಶಾಸ್ತ್ರದಲ್ಲಿ ಹೇಳಿರುವ ವಿಧಿಗಿಂತಲೂ ಹೆಚ್ಚಿದ ಸಂಭಾರವನ್ನೊಳಗೊಂಡಿರುವ ಯಜ್ಞವು ಆರಂಭವಾಯಿತು. ಯಜ್ಞಾಚರಣೆಗೆ ವಿಘ್ನವನ್ನಾಚರಿಸುವ ರಾಕ್ಷಸರೇ ರಕ್ಷಕರಾಗಿ ನಿಂತಿದ್ದರು.

ಮೈಥಿಲಿಯ ಕುಮಾರರಾಗಿರುವ ಕುಶಲವರು – ಪ್ರಾಚೇತಸನಿಂದ ಪ್ರೇರಿತರಾಗಿ ಆ ವಾಲ್ಮೀಕಿಯು ಮೊದಲು ಅರಿತು ರಚಿಸಿರುವ ರಾಮಾಯಣ ಕಾವ್ಯವನ್ನು ಅಲ್ಲಲ್ಲಿ ಹಾಡತೊಡಗಿದರು. ಆಹಾ! ಕಿನ್ನರಕಂಠರಾಗಿ ಗಾನನಿಪುಣರೆನಿಸಿರುವ ಆ ಕುಮಾರರು–ವಾಲ್ಮೀಕಿ ಮಹಾಮುನಿರಚಿತವಾದ ರಾಮನ ದಿವ್ಯಚರಿತೆಯನ್ನು ಸರಸವಾಗಿ ಹಾಡುತ್ತಲಿರಲು ಕೇಳುವವರ ಮನವು ಪರವಶವಾಗುತ್ತಲಿದ್ದಿತು. ಆ ಮಕ್ಕಳ ರೂಪ, ಗೀತಗಳನ್ನು ನೋಡಿ, ಕೇಳಿ, ಹರ್ಷಿತರಾದ ಯೋಗ್ಯರು ಅರಿಕೆಮಾಡಲು, ಕುತೂಹಲದಿಂದ ರಾಮನು ಅವರನ್ನು ಕರೆಯಿಸಿ, ತನ್ನ ಸಹೋದರರಿಂದೊಡಗೂಡಿ, ಕೇಳಿ ಆನಂದಭರಿತನಾದನು. ಆಗಲಾ ಸಭೆಯು – ಅವರ ಹಾಡುಗಾರಿಕೆಯಲ್ಲಿಯೇ ಮನಸ್ಸನ್ನಿಟ್ಟು ಕೇಳಿ, ಕಣ್ಣೀರನ್ನು ತಂದುಕೊಳ್ಳುತ್ತಲಿದ್ದಿತು, ಅದರಿಂದಲೇ ಮುಂಜಾನೆಯೊಳಗೆ ಮಂಜು ಸುರಿಯುತ್ತಲಿರುವಲ್ಲಿ ಗಾಳಿಯಿಲ್ಲದ ವನಭೂಮಿಯು ಹೇಗೋ ಹಾಗೆ ಕಾಣಬಂದಿತ್ತು,

ಮತ್ತು – ಆ ತರಣಿಕುಲಲಾಮನಿಗೂ, ಆ ತರಳರಿಗೂ ವಯೋವೇಷಗಳಲ್ಲಿ ಮಾತ್ರವೇ ಭೇದವನ್ನೊಳಗೊಂಡಿರುವ ಹೋಲಿಕೆಯನ್ನು ಕಂಡು ಸಭಾಜನರೆಲ್ಲರೂ ರೆಪ್ಪೆ ಬಡಿಯದೆಯೂ, ಅಲುಗದೆಯೂ ಕುಳಿತಿದ್ದರು. ಆ ಯಜ್ಞಶಾಲೆಯಲ್ಲಿ ನೆರದಿದ್ದ ಜನರು–ಆ ಹುಡುಗರ ಜಾಣತನಕ್ಕಿಂತಲೂ ಪ್ರೀತಿಪೂರ್ವಕವಾಗಿ ಕೊಡುತ್ತಲಿರುವ ದಾನಗಳಲ್ಲಿ ರಾಮನ ನಿಸ್ಪೃಹತ್ವದಿಂದ ಹೇರಳವಾಗಿ ಅಚ್ಚರಿಗೊಂಡರು. ರಾಮನು ಆ ಬಾಲಕರನ್ನು ನೋಡಿ, " ಎಲೈ ಮಕ್ಕಳಿರಾ! ನಿಮಗೆ ಈ ಗೀತವಿದ್ಯೆಯನ್ನು ಹೇಳಿ ಕಲಿಸಿಕೊಟ್ಟವರಾರು? ಮತ್ತು ಈ ಕಾವ್ಯವನ್ನು ರಚಿಸಿದ ಕವಿಯು ಯಾರು?' ಎಂದು ಕೇಳಲು, ಕುಶಲವರು ತಮಗೆ ಶಿಕ್ಷಕನೂ, ಕಾವ್ಯಕರ್ತನೂ, ವಾಲ್ಮೀಕಿಮುನಿಯೆ ಎಂದು ಅರಿಕೆಮಾಡಿದರು.

ರಾಮಚಂದ್ರನು – ತಮ್ಮಂದಿರಿಂದೊಡಗೂಡಿ, ವಾಲ್ಮೀಕಿಮುನಿಯ ಸನ್ನಿಧಿಗೆ ತೆರಳಿ, ತನ್ನ ದೇಹವನ್ನು ಮಾತ್ರ ಉಳಿಸಿಕೊಂಡು, ರಾಜ್ಯವನ್ನೆಲ್ಲ ಆತನಿಗೆ ಸಮರ್ಪಿಸಿದನು. ಆಗಲಾ ದಯಾಳುವಾದ ಪ್ರಾಚೇತಸನು – ಈ ತರಳರು ನಿನ್ನ ಆತ್ಮಜರೆಂದೂ, ಸೀತೆಯನ್ನು ಸ್ವೀಕರಿಸಬೇಕೆಂದೂ ರಾಮನನ್ನು ಯಾಚಿಸಿದನು. ಅದಕ್ಕೆ ರಾಘವನು – ಹರ್ಷ ವಿಷಾದಗಳಿಂದೊಡಗೂಡಿ, ಎಲೈ ತಂದೆಯೇ! ನಮ್ಮ ಕಣ್ಣಿದಿರಿಗೆ ನಡೆದ ಅಗ್ನಿಪ್ರವೇಶದಿಂದ ನಿನ್ನ ಸೊಸೆಯಾದ ಈ ಸೀತೆಯು ಪರಿಶುದ್ಧಳೆಂದು ನಮಗೆ ನಂಬುಗೆಯುಂಟು. ಆದರೆ – ರಕ್ಕಸನು ನಡೆಸಿದ ದುರುಳತನದಿಂದ ಇಲ್ಲಿನ ಪ್ರಜೆಗಳು ಅದನ್ನು ನಂಬಲಿಲ್ಲ ಎಂದನು. ಮತ್ತು ಈ ಜಾನಕಿಯು ಈಗಲೂ ತನ್ನ ಒಳ್ಳೆಯ ನಡತೆಯ ವಿಷಯವಾಗಿ ಈ ಪ್ರಜೆಗಳಿಗೆ ನಂಬುಗೆಯನ್ನುಂಟುಮಾಡಲಿ, ಬಳಿಕ ನಾನು– ಪುತ್ರವತಿಯಾದ ಈ ಸೀತೆಯನ್ನು ನಿನ್ನ ಆಜ್ಞೆಯಿಂದ ಪರಿಗ್ರಹಿಸುವೆನು ಎಂದು ಬಿನ್ನವಿಸಿದನು. ರಾಮನಿಂತು ಪ್ರತಿಜ್ಞೆಯನ್ನು ಮಾಡಲು, ವಾಲ್ಮೀಕಿಯು – ತನ್ನ ನಿಯಮಗಳಿಂದ ತಪಸ್ಸಿದ್ಧಿಯನ್ನು ಬರಮಾಡುವಹಾಗೆ, ಶಿಷ್ಯರ ಮೂಲಕ ಸೀತೆಯನ್ನು ತಪೋವನದಿಂದ ಕರೆಯಿಸಿದನು.

ಮಾರನೆಯ ದಿವಸ ರಘುಪುಂಗವನು – ಪ್ರಕೃತಕಾರ್ಯನಿರ್ವಾಹಕ್ಕಾಗಿ ತನ್ನ ಪುರಜನರನ್ನೆಲ್ಲ ಕರೆಯಿಸಿ, ಒಂದೆಡೆಯಲ್ಲಿ ಸೇರಿಸಿ, ಅಲ್ಲಿಗೆ ವಾಲ್ಮೀಕಿ ಮುನಿಯನ್ನು ಬರುವಂತೆ ಹೇಳಿಕಳುಹಿಸಿದನು. ತರುವಾಯ – ಉದಾತ್ತಾದಿ ಸ್ವರದಿಂದಲೂ, ಶಬ್ದಶುದ್ಧಿರೂಪವಾದ ಸಂಸ್ಕಾರದಿಂದಲೂ, ಒಡಗೂಡಿರುವ ಸಾವಿತ್ರೀ ಋಕ್ಕಿನಿಂದ ತೇಜೋರಾಶಿಯಾದ ಸೂರ್ಯನನ್ನು ಹೇಗೋ ಹಾಗೆ, ಮುನಿಯು ಪುತ್ರರಿಂದ ಸಹಿತಳಾದ ಸೀತೆಯಿಂದೊಡಗೂಡಿ ತೇಜಸ್ವಿಯಾದ ರಾಮನನ್ನು ಸೇವಿಸಿದನು. ಉಟ್ಟಿರುವ ಕಾಷಾಯವಸ್ತ್ರದಿಂದಲೂ, ಹೆಜ್ಜೆಯಲ್ಲಿ ನೆಟ್ಟಿರುವ ದೃಷ್ಟಿಯಿಂದಲೂ

ಒಡಗೂಡಿರುವ ಸೀತೆಯು – ಶಾಂತವೂ ಪ್ರಸನ್ನವೂ ಆಗಿರುವ ಶರೀರದಿಂದಲೇ ಸಾಧ್ವೀ ಶಿರೋಮಣಿಯೆಂದು ಎಲ್ಲರೂ ಊಹಿಸುತ್ತಲಿದ್ದರು ಮತ್ತು – ಆಕೆಯ ದೃಷ್ಟಿಪಥದಿಂದ ತಮ್ಮ ನೋಟಗಳನ್ನು ಹಿಂದಿರುಗಿಸಿ, ಮಾಗಿದ ಗೊನೆಗಳನ್ನೊಳಗೊಂಡಿರುವ ಬತ್ತದ ಪೈರುಗಳಂತೆ ಸರ್ವರೂ ಬಾಗಿದ ಮೊಗವುಳ್ಳವರಾಗಿದ್ದರು.

ಮುನಿಯು–ಒಂದು ದರ್ಭಾಸನದಮೇಲೆ ಬಂದು ಕುಳಿತನು, ಕೂಡಲೆ ಜಾನಕಿಯನ್ನು ನೋಡಿ, ಮಗೂ! ಸೀತೆ! ಪತಿಯ ಇದಿರಿಗೆ ನಿನ್ನ ಸತ್ಯದ ವಿಷಯದಲ್ಲಿ ಈ ಪ್ರಜೆಗಳಿಗಿರುವ ಸಂಶಯವನ್ನು ತೊಲಗಿಸಿ ಅವರನ್ನು ಮೆಚ್ಚಿಸು. ಎಂದು ಶಾಸನಮಾಡಿದನು.

ಆ ಹಿಂದೆ ಭೂಮಿಜೆಯು – ವಾಲ್ಮೀಕಿ ಮುನಿಶಿಷ್ಯನು ಕೊಟ್ಟ ಪುಣ್ಯತೀರ್ಥದಿಂದ ಆಚಮನಮಾಡಿ, “ವಿಶ್ವಂಭರೆಯೆನಿಸಿದ ಎಲೆ ಭೂದೇವಿಯೇ, ಈ ನಾನು – ಪತಿಯ ವಿಷಯದಲ್ಲಿ ಮಾತಿನಿಂದಲಾಗಲೀ. ಮನಸ್ಸಿನಿಂದಲಾಗಲಿ, ನಡತೆಯಿಂದಲಾಗಲೀ, ತಪ್ಪಿ ನಡೆಯದಿದ್ದುದೇ ಸತ್ಯವಾಗಿದ್ದರೆ ನನ್ನನ್ನು ನಿನ್ನ ಗರ್ಭದಲ್ಲಿ ಧರಿಸು” ಎಂದು ಸತ್ಯವಾಣಿಯನ್ನು ಉದಹರಿಸಿದಳು.

ಸತೀಶಿರೋಮಣಿಯಾದ ಆ ಮಹಾದೇವಿಯು ಹಾಗೆಂದ ಕೂಡಲೆ, ಮಿಂಚಿನ ಹೊಳವಿನಂತೆ ಬೆಳಕಿನ ರಾಶಿಯೊಂದು ಭೂಮಿಯ ರಂಧ್ರದಿಂದ ಮೇಲಕ್ಕೆದ್ದಿತು. ಆ ತೇಜೋಮಂಡಲದಲ್ಲಿ–ನಾಗರಾಜನ ಹೆಡೆಯ ಮೇಲಣ ಸಿಂಹಾಸನದಲ್ಲಿ ಕುಳಿತಿರುವ ಸಮುದ್ರರಶನೆಯೆನಿಸಿದ ವಸುಂಧರೆಯು ಕಾಣಿಸಿಕೊಂಡಳು. ಮತ್ತು ಪತಿಯನ್ನೇ ದುರದುರನೆ ದಿಟ್ಟಿಸಿ ನೋಡುತ್ತಲಿರುವ ಸೀತೆಯನ್ನು ಆಕೆಯ ವಲ್ಲಭನು– ಬೇಡ ಬೇಡವೆಂದು ಹೇಳುತ್ತಿರುವಾಗಲೇ ತನ್ನ ತೊಡೆಯಮೇಲೆ ಕೂಡಿಸಿಕೊಂಡು ಪಾತಾಳವನ್ನು ಹೊಕ್ಕಳು, ಮರಳಿ ಮಹೀದೇವಿಯು– ಮಹಿಳೆಯನ್ನು ಒಪ್ಪಿಸುವಳೆಂದು ಬಯಸುತ್ತಲಿದ್ದ ಬಿಲ್ಲಾಳಾದ ರಾಮನಿಗೆ ಧರೆಯ ವಿಷಯದಲ್ಲಿ ಉಂಟಾದ ರೋಷದ ಸಡಗರವನ್ನು, “ಆಗತಕ್ಕುದನ್ನು (ವಿಧಿಯನ್ನು) ಮೀರಲು ಯಾರಿಗೂ ಅಳವಲ್ಲ,” ಎಂದು ಹೇಳಿ ಬ್ರಹ್ಮನು ಶಮನಮಾಡಿದನು.

ಯಜ್ಞಭಾಗವೆಲ್ಲ ನೆರವೇರಿತು, ತನ್ನಿಂದ ಗೌರವಿಸಲ್ಪಟ್ಟ ಮುನಿಗಳನ್ನೂ, ಮಿತ್ರರನ್ನೂ, ಪ್ರಜಾಪಾಲಕನಾದ ರಾಮನು– ತಂತಮ್ಮ ಸ್ಥಾನಗಳಿಗೆ ಕಳುಹಿಸಿಕೊಟ್ಟನು, ಸೀತೆಯಲ್ಲಿದ್ದ ಪ್ರೀತಿಯನ್ನು ಆಕೆಯ ಮಕ್ಕಳಾದ ಕುಶಲವರಲ್ಲಿಟ್ಟನು. ತರುವಾಯ ಭರತನ ಸೋದರಮಾವನಾದ ಯುಧಾಜಿತ್ತಿನ ಅನುಮತಿಯಂತೆ ಬಹಳವಾದ ಐಶ್ವರ್ಯದೊಡನೆ ಸಿಂಧುದೇಶವನ್ನು ಭರತನಿಗೆ ಒಪ್ಪಿಸಿದನು. ಭರತನು ಆ ಸಿಂಧುದೇಶಕ್ಕೆ ತೆರಳಿ, ಅಲ್ಲಿದ್ದ ಗಂಧರ್ವರನ್ನೆಲ್ಲ ಕಾಳಗದಲ್ಲಿ ಗೆದ್ದು, ಕೈಲಿದ್ದ ಆಯುಧಗಳನೆಲ್ಲ ಬಿಸುಡಿಸಿ,

ವೀಣೆಯೊಂದನ್ನು ಮಾತ್ರವೆ ಅವರು ಹಿಡಿದಿರುವಂತೆ ಮಾಡಿದನು, ಮತ್ತು ಅಭಿಷೇಕಕ್ಕೆ ಅರ್ಹರಾಗಿದ್ದ ತನ್ನ ಮಕ್ಕಳಲ್ಲಿ ತಕ್ಷನೆಂಬುವವನಿಗೆ ತಕ್ಷಶಿಲೆಯೆಂಬ ರಾಜಧಾನಿಯಲ್ಲಿಯಲ್ಲಿಯೂ ಪುಷ್ಕಲನೆಂಬುವವನಿಗೆ ಪುಷ್ಕಲಾವತಿಯೆಂಬ ನಗರಿಯಲ್ಲಿಯೂ ಪಟ್ಟಗಟ್ಟಿ ಮರಳಿ ರಾಮನ ಸನ್ನಿಧಿಗೆ ಬಂದನು. ಸೌಮಿತ್ರಿಯು ರಘುನಾಥನ ಶಾಸನದಿಂದ, ತನ್ನ ಪುತ್ರರಾದ ಅಂಗದ ಚಂದ್ರಕೇತುಗಳೆಂಬಿಬ್ಬರನ್ನೂ ತಾರಾಪಥ ದೇಶಗಳಿಗರಸರನ್ನಾಗಿ ಮಾಡಿದನು.

ಇಂತು ರಾಮಾದಿಗಳು – ತಂತಮ್ಮ ಮಕ್ಕಳಿಗೆ ರಾಜ್ಯಾಭಿಷೇಕವನ್ನು ಮಾಡಿ ಸುಖದಿಂದಿರುವಲ್ಲಿ, ಕಾಲವಶದಿಂದ ದಿವಂಗತರಾದ ಕೌಸಲ್ಯೆ ಮೊದಲಾದ ಜನನಿಯರಿಗೆ ಕ್ರಮವಾಗಿ ಉತ್ತರಕ್ರಿಯೆಗಳನ್ನು ನೆರವೇರಿಸಿದರು. ತರುವಾಯ ಒಂದು ಸಮಯದಲ್ಲಿ – ಅಂತಕನು ಮುನಿವೇಷಧಾರಿಯಾಗಿ ಬಂದು, ರಾಘವನನ್ನು ಕಂಡು, ಎಲೈ ದಾಶರಥಿಯೇ! ಗುಟ್ಟಾಗಿ ಮಾತನಾಡುತ್ತಲಿರುವ ನಮ್ಮ ರಹಸ್ಯವನ್ನು ಯಾವನು ಭಂಗಪಡಿಸುವನೋ ಅಂಥವನನ್ನು ನೀನು ತೊರೆಯಬೇಕು ಎಂದು ಹೇಳಿದನು. ರಾಮನು ಹಾಗೆಯೇ ಆಗಲೆಂದು ಸಮ್ಮತಿಸಿದನು.

ಕೂಡಲೆ ಕಾಲನು – ಮುನಿವೇಷವನ್ನು ಬಿಟ್ಟು, ನಿಜರೂಪದಿಂದ ಕಾಣಿಸಿಕೊಂಡು, ಎಲೈ ರಾಮಚಂದ್ರನೇ ನಿನ್ನ ಅವತಾರದಕೆಲಸವು ನೆರವೇರಿದೆ. ಬ್ರಹ್ಮನ ಶಾಸನದಿಂದ ನೀನಿನ್ನು ಸ್ವರ್ಗವನ್ನು ಕುರಿತು ಹೊರಡಬೇಕು ಎಂದನು. ಯಾರನ್ನೂ ಒಳಗೆ ಬಿಡದಂತೆ ಶಪಥದಿಂದ ಬಾಗಿಲನ್ನು ಕಾಯುತ್ತಲಿದ್ದ ಲಕ್ಷ್ಮಣನು ಜಾಣನಾಗಿದ್ದರೂ, ಅದೇ ಸಮಯದಲ್ಲಿ ರಾಮನ ದರ್ಶನವನ್ನು ಬಯಸಿಬಂದ ದುರ್ವಾಸಮುನಿಯನ್ನು ಕಂಡು, ಒಳಗೆ ಬಿಡದೆಹೋದರೆ ಶಾಪಕೊಡುವನೆಂದು ಹೆದರಿ, ಕಾಲ ರಾಮರ ಸಮಯವನ್ನು ಭೇದಿಸಿದನು. ಆಗ ರಾಮನು ಲಕ್ಷ್ಮಣನನ್ನು ಕರೆದು, ಎಲೈ ಸೌಮಿತ್ರಿಯೇ ನೀನಿನ್ನು ಬೇಗನೆ ಹೊರಡು, ಧರ್ಮಕ್ಕೆ ಲೋಪವುಂಟಾಗಬಾರದು. ಸಾಧುಗಳಿಗೆ ವಧೆ, ತ್ಯಾಗ, ಎಂಬಿವೆರಡೂ ಸಮವೆನಿಸಿರುವುದು ಎಂದನು. ಯೋಗಮಾರ್ಗವನ್ನು ಬಲ್ಲವನಾಗಿದ್ದ ಲಕ್ಷ್ಮಣನು – ಸರಯೂನದಿ ತೀರಕ್ಕೆ ಬಂದು ತನ್ನ ದೇಹತ್ಯಾಗದಿಂದ ಅಣ್ಣನ ಪ್ರತಿಜ್ಞೆಯನ್ನು ಸಾರ್ಥಕವಾದುದನ್ನಾಗಿ ಮಾಡಿದನು.

ಬಳಿಕ ರಾಘವನು – ತನ್ನ ನಾಲ್ಕನೆಯ ಒಂದುಪಾಲು ತನಗಿಂತ ಮೊದಲು ನಾಕಲೋಕವನ್ನೈದಲು, ಮುಕ್ಕಾಲಿನಿಂದ ನೆಲದಲ್ಲಿ ನಿಂದಿರುವ ಧರ್ಮದಂತೆ, ತಾನೂ ಅತಂತ್ರವಾಗಿ ನಿಂತನು. ಅಲ್ಲದೆ, ಸ್ವಲ್ಪಕಾಲದಲ್ಲಿಯೇ ಹಗೆಗಳೆಂಬ ನಾಗಗಳಿಗೆ ಅಂಕುಶದಂತಿರುವ ಕುಶಕುಮಾರನನ್ನು ಕುಶಾವತಿಯೆಂಬ ನಗರಿಯಲ್ಲಿ ನಿಲ್ಲಿಸಿದನು. ಹಾಗೆಯೇ ಮೃದುಮಧುರ ಭಾಷಣಗಳಿಂದ ಸಾಧುಗಳನ್ನಾನಂದಗೊಳಿಸುವ

ಲವನೆಂಬ ಪುತ್ರನನ್ನು – ಶರಾವತಿಯೆಂಬ ನಗರದಲ್ಲಿ ನೆಲೆಗೊಳಿಸಿ, ಅನುಜರಾದ ಭರತಾದಿಗಳಿಂದ ಸಹಿತನಾಗಿ, ಪತಿಯಲ್ಲಿನ ಪ್ರೇಮದಿಂದ ಮನೆಗಳನ್ನುಳಿದು ಬಂದ ಅಯೋಧ್ಯೆಯೊಡನೆ ಉತ್ತರಾಭಿಮುಖನಾಗಿ ಹೊರಟನು. ಆ ರಾಮನ ಚಿತ್ತವನ್ನು ಬಲ್ಲ ಹರಿ, ರಾಕ್ಷಸರೂ – ಕದಂಬಕುಸುಮದಂತೆ ಉದಿರುತ್ತಿರುವ ಪ್ರಜೆಗಳ ತೋರವಾದ ಕಣ್ಣೀರಿನ ಹನಿಗಳಿಂದ ನೆನದಿರುವ ಆತನ ಹಾದಿಯನ್ನು ಅನುಸರಿಸಿ ಹೊರಟರು. ಭಕ್ತವತ್ಸಲನಾದ ರಾಮನು – ಸ್ವರ್ಗಕ್ಕೆ ಕರೆದೊಯ್ಯಲು ಇಳಿದುಬಂದಿರುವ ವಿಮಾನವನ್ನು ಏರಲಿಕ್ಕೆ, ತನ್ನನ್ನು ಹಿಂಬಾಲಿಸಿರುವ ಪ್ರಜೆಗಳಿಗೆ ಸರಯೂವೇಣಿಯನ್ನು ಏಣಿಯನ್ನಾಗಿ ಮಾಡಿದನು. ಆಗಲಾ ಸರಯೂ ನದಿಯಲ್ಲಿ ಮುಳುಗುತ್ತಲಿರುವವರ ಗದ್ದಲವು – ಗೋವುಗಳ ಪ್ರತರಣದಂತೆ ಎಂದರೆ ಹಾರಾಟದಂತೆ ಇದ್ದುದರಿಂದಲೇ, ಆ ಪ್ರದೇಶವು ಇಂದಿಗೂ ಈ ಭೂಮಿಯಲ್ಲಿ ಗೋಪ್ರತರವೆಂಬ ಪಾವನವಾದ ತೀರ್ಥವೆಂದು ಹೆಸರುವಾಸಿಗೆ ಬಂದಿತು. ಬಳಿಕ ಪ್ರಭುವಾದ ಶ್ರೀರಾಮನು – ದೇವತೆಗಳ ಅಂಶಗಳಿಂದ ಅವತರಿಸಿದ್ದ ಸುಗ್ರೀವ ಮುಂತಾದವರು ತಂತಮ್ಮ ಮೂಲಸ್ಥಾನಗಳನ್ನು ಸೇರಿದರು, ಹಾಗೆಯೇ ದೇವಭೂಮಿಯನ್ನು ಸೇರಿದ ಪ್ರಜೆಗಳು ಹೊಸಬರಾದ ದೇವತೆಗಳಾಗಲು, ಅವರಿಗೆಲ್ಲ ಬೇರೊಂದು ಸ್ವರ್ಗವನ್ನು ಕಲ್ಪಿಸಿಕೊಟ್ಟನು.

ಇಂತು ಶ್ರೀಮಹಾವಿಷ್ಣುವು – ಭೂಲೋಕದಲ್ಲಿ ಮನುಜರೂಪದಿಂದ ರಾಮನಾಗಿ ಅವತರಿಸಿ, ದೇವತೆಗಳಿಗೆ ಕರ್ತವ್ಯವಾಗಿದ್ದ ರಾವಣ ಶಿರಚ್ಛೇದವೆಂಬ ಕಾರ್ಯವನ್ನು ನೆರವೇರಿಸಿ, ಲಂಕಾನಾಥನಾದ ವಿಭೀಷಣ ಪವನತನಯನಾದ ಹನುಮಂತ ಎಂಬೀ ಇಬ್ಬರನ್ನು, ಉತ್ತರದಿಕ್ಕಿನ ಹಿಮಾಲಯದಲ್ಲಿಯೂ, ದಕ್ಷಿಣದೆಶೆಯೊಳಿರುವ ಚಿತ್ರಕೂಟದಲ್ಲಿಯೂ, ಕ್ರಮವಾಗಿ ಎರಡು ಜಯಸ್ತಂಭಗಳಂತೆ ನೆಲೆಗೊಳಿಸಿ, ಸರ್ವಲೋಕಕ್ಕೂ ಆಶ್ರಯವಾಗಿರುವ ತನ್ನ ದಿವ್ಯದೇಹವನ್ನು ಪ್ರವೇಶಿಸಿದನು.

****

ಹದಿನಾರನೆಯ ಅಧ್ಯಾಯ

ಕುಮುದ್ವತೀ ಪರಿಣಯ

ಸೂಚನೆ ॥ ಇರುಳೊಳ್ ಮಹಿಳೆಯ ವಚನದೆ ।
ತೆರಳಿದನಾಕುಶನಯೋಧ್ಯೆಯಾಳ್ವಿಕೆಗಾಗಳ್
ಸರಯೂಕೇಳಿಯೊಳೈತಂ ।
ದುರಗೇಂದ್ರನಿನಾಕುಮುದ್ವತೀಶನುಮಾದಂ ॥

ಶ್ರೀರಾಮನು ಕೈವಲ್ಯವನ್ನು ಪಡೆದನಷ್ಟೆ? ಆಮೇಲೆ – ಹುಟ್ಟಿನಲ್ಲಿಯೂ, ಗುಣಗಳಲ್ಲಿಯೂ ಹಿರಿಯವನಾಗಿರುವ ಕುಶನನ್ನು, ಮಿಕ್ಕ ಏಳುಮಂದಿ ವೀರರಾದ ತಮ್ಮಂದಿರೂ – ಪ್ರತಿಯೊಂದು ಉತ್ತಮವಸ್ತುವಿಗೂ ಗಣಿಯನ್ನಾಗಿ ಮಾಡುತ್ತಿದ್ದರು. ಅಣ್ಣತಮ್ಮಂದಿರ ಹೊಂದಿಕೆಯೆಂಬುದು ಇವರ ತಲೆಯಾಂತರದಿಂದಲೂ ಎಡೆಬಿಡದೆ ಅನುಸರಿಸಿಕೊಂಡೇ ಬಂದಿದೆಯಲ್ಲವೆ? "ವ್ಯವಸಾಯ, ವ್ಯಾಪಾರ, ಕೋಟೆಕಟ್ಟುವುದು, ಕೆರೆತೊರೆಗಳಿಗೆ ಸೇತುವೆ, ಕಾಲುವೆ ಮೊದಲಾದವುಗಳಿಂದ ಜಲಸಮೃದ್ಧಿಯನ್ನು, ಹೆಚ್ಚಿಸಿ, ಬೆಳೆ ಗಣಿಮಾಡುವುದು, ಕಾಡುಗಳಲ್ಲಿ ಆನೆಗಳನ್ನು ಹಿಡಿಸುವುದು ಗಣಿಗಳಿಂದ ಚಿನ್ನವನ್ನೆತ್ತಿಸುವುದು, ಊರು ಕೇರಿಗಳನ್ನು ಹೆಚ್ಚಿಸುವುದು, ಹುಟ್ಟುವಳಿಯನ್ನು ಹೆಚ್ಚಿಸುವುದು ಈ ಮೊದಲಾದವುಗಳಿಂದ ಅರಸು ಅಭಿವೃದ್ಧಿಯಲ್ಲಿದ್ದರೂ, ಮರಳಿ ಮತ್ತಷ್ಟು ಏಳಿಗೆಗೆ ತರುತ್ತಲೇ ಇರಬೇಕು, ಎಂಬ ನೀತಿಯನ್ನನುಸರಿಸಿ ಆ ಕುಶನೇ ಮೊದಲಾದ ಅರಸರು– ಸೇತು, ವಾರ್ತಾ, ಗಜಬಂಧ ಮುಂತಾದವುಗಳಿಂದ ಸಾರ್ಥಕವಾದ ಉಚ್ಛ್ರಾಯವನ್ನು ಹೊಂದುತ್ತಲಿದ್ದರೂ, ಸಮುದ್ರಗಳು ತಂತಮ್ಮ ಮೇರೆಗಳನ್ನು ಮೀರದಿರುವ ಹಾಗೆ, ತಂತಮ್ಮ ದೇಶಗಳ ಎಲ್ಲೆಗಳನ್ನು ಅತಿಕ್ರಮಿಸಿ ಹೋಗದೆ ಇರುತ್ತಿದ್ದರು. ಚತುರ್ಭುಜನೆನಿಸಿದ ವಿಷ್ಣುವಿನ ಅವತಾರವಾಗಿದ್ದ ರಾಮನೇ ಮೊದಲಾದ ನಾಲ್ವರನ್ನು ಮೂಲಕಾರಣವನ್ನಾಗಿ ಪಡೆದು ಅನವರತವೂ ದಾನಪರರಾಗಿದ್ದ ಕುಶ ಮುಂತಾದ ಎಂಟುಮಂದಿಯು ವಂಶವು ಚತುರ್ಮುಖನು ಹಾಡಿದ ಎಂಟುಬಗೆಯಾದ ಸಾಮಗಳಿಂದ ಹುಟ್ಟಿ, (ದಾನ) ಮದ ಧಾರೆಗಳಿಂದ ತುಂಬಿರುವ ಅಷ್ಟದಿಗ್ಗಜಗಳ ಸಂತತಿಯ ಹಾಗೆ, ಎಂಟು ಕವಲಾಗಿ ಒಡೆದು, ಭೂಮಂಡಲದಲ್ಲಿ ಹರಡಿತು.

ಬಳಿಕ ಒಂದುದಿವಸ ನಟ್ಟಿರುಳಿನಲ್ಲಿ ಕುಶನು – ಮಲಗುವಮನೆಯೊಳಗೆ ಹಾಸಿಗೆಯಮೇಲೆ ಎಚ್ಚರದಿಂದಲೇ ಪವಳಿಸಿದ್ದನು. ಜನರೆಲ್ಲ ನಿದ್ರಿಸುತ್ತಲಿದ್ದರು. ದೀವಿಗೆಗಳು ಅಲುಗದಿದ್ದುವು. ಅಂತಹ ಸಮಯದಲ್ಲಿ ಹಿಂದೆಲ್ಲಿಯೂ ಕಾಣಬರದಿರುವ ಒಬ್ಬ ವನಿತೆಯನ್ನು ಕಂಡನು. ಪತಿಯನ್ನಗಲಿರುವ ವೇಷವನ್ನು ತಾಳ್ದ ಆ ವನಿತೆಯು – ಸಜ್ಜನರಿಗೆ ತಕ್ಕುದೆನಿಸಿರುವ ರಾಜ್ಯಸಮೃದ್ಧಿಯನ್ನು ಪಡೆದವನೂ, ದೇವೇಂದ್ರನಂತೆ ಬೆಳಗುವವನೂ ಹಗೆಗಳನ್ನಡಗಿಸಿದವನೂ, ಬಂಧು ಸಂಪತ್ತಿಯುಳ್ಳವನೂ ಆಗಿರುವ ಆ ಕುಶಕುಮಾರನ ಇದಿರಿಗೆ ಜಯಜಯವೆಂದು ಹರಸುತ್ತಾ ನಿಂತು, ಕರಗಳನ್ನು ಜೋಡಿಸಿ, ಅಂಜಲಿಯನ್ನೊಪ್ಪಿಸಿದಳು.

ಕುಶನು ಬಲು ಅಚ್ಚರಿಗೊಂಡನು. ಮಲಗಿದ್ದವನು ಶರೀರದ ಪೂರ್ವಭಾಗದಿಂದ ಸ್ವಲ್ಪ ಮಾತ್ರ ಮೇಲಕ್ಕೆದ್ದು ಒಂದು ಅಂಗಯ್ಯನ್ನು ತಲೆಯ ಪಕ್ಕಕ್ಕೆ ಊಡುಮಾಡಿನೋಡಿದನು, ಎಲ್ಲಿಯ ಪ್ರವೇಶಕ್ಕೆ ಅವಕಾಶವಿಲ್ಲದಂತೆ ಬಾಗಿಲುಗಳನ್ನು ಮುಚ್ಚಿ ಭದ್ರಪಡಿಸಿದೆ. ಆದರೂ ಕನ್ನಡಿಯ ಒಳಹೋಗುವ ಪ್ರತಿಬಿಂಬ ರೂಪದಂತೆ ಮನೆಯೊಳಗೆ ಬಂದಿರುವ ಆ ವನಿತೆಯನ್ನು ಕುರಿತು ಇಂತೆಂದನು: –

ಎಲೆ ಸಾಧ್ವಿ! ಹೊಗಲಳವಲ್ಲದ ಆವರಣದಿಂದೊಡಗೂಡಿರುವ ಈ ಮನೆಯೊಳಗೆ ಹೇಗೆಬಂದೆ? ನಿನಗೆ ಅಂತಹ ಯೋಗಮಹಿಮೆಯೂ ಇರುವಂತೆ ಕಾಣುವುದಿಲ್ಲ? ತಾವರೆಯ ಬಳ್ಳಿಯು – ಹಿಮದಿಂದುಂಟಾದ ಉಪದ್ರವವನ್ನು ಹೇಗೋ ಹಾಗೆ, ದುಃಖಿಸುವವರ ಆಕಾರವನ್ನೂ ಪಡೆದಿದ್ದೀಯೆ; ಎಲೆ ಸುಮಂಗಲಿ! ನೀನು ಯಾರು? ಮತ್ತು ಯಾರ ಪತ್ನಿ? ಇಂತಹ ನೀನು ನಾನಿರುವ ಇಲ್ಲಿಗೆ ಬರಲು ಕಾರಣವೇನು? ಜಿತೇಂದ್ರಿಯರಾಗಿರುವ ರಘುಕುಲದವರ ಮನಸ್ಸು – ಪರಸ್ತ್ರೀಯರಲ್ಲಿ ಪ್ರವರ್ತಿಸತಕ್ಕುದಲ್ಲ ಎಂಬುದನ್ನು ಚೆನ್ನಾಗಿ ತಿಳಿದು, ಪ್ರತ್ಯುತ್ತರವನ್ನು ಹೇಳು– ಎಂದನು.

ಆ ಮಾತಿಗೆ ಆ ವನಿತೆಯು :– ಎಲೈ ದೊರೆಯೆ! ನಿಮ್ಮ ತಂದೆಯಾದ ರಾಮನು ತನ್ನ ದಿವ್ಯದೇಹವನ್ನು ಪ್ರವೇಶಿಸಲಿಕ್ಕೆ ತೆರಳುವಾಗ ಪುರಜನರನ್ನೆಲ್ಲ ಕರದೊಯ್ದನಷ್ಟೆ? ಅದರಿಂದಲೇ ಅನಾಥಳೆನಿಸಿ, ದೋಷಲೇಶವಿಲ್ಲದ ಆ ಅಯೋಧ್ಯಾಭಿಮಾನಿದೇವತೆಯೇ ನಾನಾಗಿರುವೆನು. ಈ ನಾನು – ಕುಬೇರನ ಅಲಕಾನಗರವನ್ನೂ, ಇಂದ್ರನ ಅಮರಾವತಿಯನ್ನೂ ತೊರೆದು, ಒಳ್ಳೆಯ ರಾಜನುಳ್ಳ ದೇಶವೆಂಬ ಹೆಸರುವಾಸಿಯಿಂದ ಉತ್ಸವಗಳ ವೈಭವವನ್ನು ಪಡೆದು ಸೂರ್ಯವಂಶದವನೂ, ಶಕ್ತಿಪರಿಪೂರ್ಣನೂ ಆಗಿರುವ ನೀನು ಇದ್ದಾಗ್ಯೂ ಈ ವಿಧವಾದ ಅವಸ್ಥೆಯನ್ನು ಪಡೆದು ಇದ್ದೇನೆ. ನನ್ನ ಮನೆಯಾದ ಪಟ್ಟಣವು ಆಳುವ ದೊರೆಯಿಲ್ಲದುದರಿಂದ – ಬಿರಿದು, ಕಳಲಿ, ಉರುಳಲಿಕ್ಕೆ ಬಂದ ನೂರಾರು

ಉಪ್ಪರಿಗೆಗಳನ್ನೊಳಗೊಂಡಿರುವುದೂ, ಸಡಿಲವಾಗಿ, ಬಗ್ಗಿ, ಓಲಿರುವ ಕೋಟೆಗೋಡೆಗಳುಳ್ಳುದೂ ಆಗಿ, ಮುಳುಗಲಿಕ್ಕೆ ಬಂದ ಬಿರುಗಾಳಿಯಿಂದ ಒಡೆದು ಚದುರುತ್ತಿರುವ ಮೋಡಗಳುಳ್ಳುದೂ ಆಗಿರುವ ಸಂಜೆಯ ಹೊತ್ತನ್ನು ಹೋಲುತ್ತಲಿದೆ.

ನಟ್ಟಿರುಳುಗಳಲ್ಲಿ ಯಾಮಿಕರೆಂಬ ಕಾವಲುಗಾರರುಗಳ ಸಂಚಾರಕ್ಕೆ ಯೋಗ್ಯಗಳಾಗಿದ್ದ ರಾಜಮಾರ್ಗಗಳು ಕೊಳ್ಳಿಗಳಂತೆ ಹೊಳೆಯುತ್ತಲಿರುವ ನಾಲಿಗೆಗಳನ್ನು ನೀಡಿ, ಕೂಗುತ್ತ, ತಿಂಡಿಗಾಗಿ ಮಾಂಸವನ್ನು ಹುಡುಕಿಕೊಂಡು ಓಡಿಬರುವ ಹೆಣ್ಣು ನರಿಗಳ ತಿರುಗಾಟಕ್ಕೆ ಅಣಿಯಾಗಿವೆ. ಯಾವ ಪಟ್ಟಣದಲ್ಲಿನ ಕೊಳಗಳ ನೀರು– ನೀರಾಟಗಳ ಸಮಯದಲ್ಲಿ ಪುರಸುಂದರಿಯರ ಕರಗಳಿಂದ ಕಲಕಲ್ಪಟ್ಟದಾಗಿ, ಮನೋಹರವಾದ ಮೃದಂಗನಾದವನ್ನು ಅನುಸರಿಸುತ್ತಲಿದ್ದಿತೋ, ಅಂತಹ ಜಲವು – ಈಗ ಕಾಡುಕೋಣಗಳಿಂದ ಕಲಕಲ್ಪಡುತ್ತಾ ಗಟ್ಟಿಯಾಗಿ ಗೋಳಿಡುವಂತಿದೆ. ಆಸರೆಂಯಾಗಿದ್ದ ಮರಗಿಡಗಳ ಕೊನೆಗಳೆಲ್ಲ ಹಾಳಾದುದರಿಂದಲೂ, ಮದ್ದಳೆಗಳ ಸದ್ದಿಲ್ಲದೆ ಕುಣಿತವು ತಪ್ಪಿದುದರಿಂದಲೂ, ಹೂದೋಟಗಳ ಆಟದ, ಊರನವಿಲುಗಳು – ಹಾರಿಬರುವಾಗ ಕಾಡ್ಗಿಚ್ಚಿಗೆ ಸಿಲುಕಿ ರೆಕ್ಕೆಪುಕ್ಕಗಳೆಲ್ಲ ಸೀದುಹೋಗಲು, ಕಾಡುನವಿಲುಗಳಾಗುತ್ತಿವೆ. ಮತ್ತು – ಯಾವ ನನ್ನ ಹೊಳಲ ಬಾಗಿಲಿನಲ್ಲಿನ ಸೋಪಾನಗಳಲ್ಲಿ ನಗರನಾರಿಯರು – ಅರಗಿನ ರಸದಿಂದ ಅಂದವಾಗಿ ಅಲಂಕರಿಸಿಕೊಂಡಿದ್ದ ಹೆಜ್ಜೆಗಳನ್ನೂರಿ ನಡೆಯುತ್ತಲಿದ್ದರೋ, ಅಂತಹ ಸೋಪಾನಗಳಲ್ಲಿ – ಈಗ, ಹುಲಿಗಳು ಹುಲ್ಲೆ ಮರಿಗಳನ್ನಿರಿವಂದು ಅವುಗಳ ಮೈಗಳಿಂದ ಸೋರಿದ ರಕ್ತದಿಂದ ನೆನೆದ ತಮ್ಮ ಅಡಿಗಳನ್ನಿಟ್ಟು ಸಂಚರಿಸುತ್ತಲಿವೆ.

ಇದಲ್ಲದೆ – ಯಾವ ನನ್ನ ಪುರದ ಅರಮನೆಯ ಗೋಡೆಗಳ ಮೇಲೆ ಆನೆಗಳು ತಾವರೆಯ ಕೊಳಗಳಿಗಿಳಿಯುತ್ತಿರುವ ಹಾಗೂ, ಆಲೇಖ್ಯಗಳಲ್ಲಿನ ಹೆಣ್ಣಾನೆಗಳು ಕಿತ್ತು ಮುರಿದುಕೊಡುವ ತಾವರೆಯ ದಂಟುಗಳನ್ನು ಸೊಂಡಿಲಿನಿಂದ ಪಡೆಯುತ್ತಿರುವ ಹಾಗೂ, ಚಿತ್ರಿಸಲ್ಪಟ್ಟಿದ್ದುವೋ, ಅವುಗಳೀಗ, ಪ್ರತ್ಯಕ್ಷವಾಗಿ ಬಂದು ರೋಷಗೊಂಡ ಸಿಂಹಗಳ ನಖಗಳೆಂಬ ಅಂಕುಶಗಳ ಪೆಟ್ಟಿನಿಂದ ಕುಂಭಸ್ಥಲಗಳನ್ನೊಡೆದುಕೊಳ್ಳುತ್ತಲಿವೆ. ಆ ರಾಜಭವನದ ಸ್ತಂಭಗಳಲ್ಲಿ ಕೆತ್ತಿರುವ ಹೆಣ್ಣು ಗೊಂಬೆಗಳು –ಮೇಲೆ ಹಚ್ಚಿದ್ದ ಬಣ್ಣಗಳೆಲ್ಲಾ ಹಾರಿಹೋಗಿ ಮಲಿನಗಳಾಗಿ, ಈಗ ತಮ್ಮ ಮೇಲೆ ಹರಿದಾಡುತ್ತಲಿರುವ ಹಾವುಗಳು ಬಿಟ್ಟ ಪರೆಗಳೆಂಬ ಪಟ್ಟುಬಟ್ಟೆಗಳನ್ನು ಮೇಲುಹೊದಿಕೆಗಳನ್ನಾಗಿ ಮಾಡಿಕೊಂಡಿವೆ. ಉಪ್ಪರಿಗೆಗಳ ಮೇಲೆ ಬಳಿದಿದ್ದ ಸುಣ್ಣದ ಹೊಳಪೆಲ್ಲ ಕಾಲವಶದಿಂದ ತೊಡೆದುಹೋಗಿ, ಅಲ್ಲಲ್ಲಿ ಗರಿಕೆಯಹುಲ್ಲು ಬೆಳೆದು, ಮುತ್ತುಗಳ ದಾರದಂತಿರುವ ಚಂದ್ರಕಿರಣಗಳು ಪೂರ್ವದಂತೆಯೇ ಈಗಲೂ ಬೀಳುತ್ತಿದ್ದರೂ ಪ್ರತಿಫಲಿಸುತ್ತಲಿಲ್ಲ.

ಮತ್ತು – ಯಾವ ನನ್ನ ಪುರೋದ್ಯಾನಗಳಲ್ಲಿ ಪುರಸುಂದರಿಯರು – ಎಳೆಬಳ್ಳಿಗಳನ್ನು ಸದಯರಾಗಿ ಮೆಲ್ಲಗೆ ಬಗ್ಗಿಸಿ, ಹೂಗಳನ್ನು ಬಿಡಿಸುತ್ತಲಿದ್ದರೋ, ಅಂತಹ ಕೋಮಲ ಲತೆಗಳನ್ನೀಗ ಕಪಿಗಳೂ, ಕಾಡುಬೇಡರೂ ಮುರಿದು ಹಾಳುಮಾಡುತ್ತಲಿದ್ದಾರೆ. ಇರುಳಿನಲ್ಲಿ ದೀವಿಗೆಯು ಬೆಳಕಿಲ್ಲದಿರುವುದರಿಂದಲೂ, ಹಗಲು ಭಾಮಿನಿಯರ ಮುಖಕಾಂತಿಯು ಪಸರಿಸದಿರುವುದರಿಂದಲೂ, ಹೊಗೆಯು ಹೊರಡದಿರುವುದ ರಿಂದಲೂ, ಗವಾಕ್ಷಗಳು ಜೇಡರಹುಳಗಳ ಗೂಡುಗಳ ದಾರದಿಂದ ಮುಚ್ಚಲ್ಪಟ್ಟಿವೆ. ಅರುಗಿನಲ್ಲಿನ ಮಳಲು ಬೈಲಿನಲ್ಲಿ ಪೂಜಾಸಾಮಗ್ರಿಗಳಿಲ್ಲದೆಯೂ, ಸೀಗೆಕಾಯಿ ಪುಡಿಯೇ ಮೊದಲಾದ ಚೂರ್ಣಗಳ ಸಂಬಂಧ ಇಲ್ಲದೆಯ, ದಡದಲ್ಲಿ ಬರಿದಾಗಿರುವ ಲತಾಗೃಹಗಳುಳ್ಳವಾಗಿಯೂ, ಸ್ನಾನಮಾಡತಕ್ಕವರಿಲ್ಲದೆಯೂ ಇರುವ ಸರಯೂ ನದೀಜಲಗಳನ್ನು ನೋಡಿ ನಾನು ಬಹಳ ಸಂಕಟಪಡುತ್ತಲಿದ್ದೇನೆ.

ಆದಕಾರಣ – ಎಲೈ ಕುವಲಯಪ್ರಿಯನೆ, ನಿಮ್ಮ ತಂದೆಯಾದ ರಾಮನು ನಿಮಿತ್ತವಶದಿಂದ ಮಾನುಷದೇಹವನ್ನು ಬಿಟ್ಟು, ಪರಮಾತ್ಮದೇಹವನ್ನು ಹೊಂದಿದ ಹಾಗೆ, ಈ ಕುಶಾವತಿಯನ್ನು ಬಿಟ್ಟು, ಕುಲ ರಾಜಧಾನಿಯೆನಿಸಿರುವ ಅಯೋಧ್ಯೆಯಾದ ನನ್ನನ್ನು ಹೊಂದಲು ತಕ್ಕವನಾಗಿದ್ದೀಯೆ ಎಂದಳು. ರಘುಕುಲಾಗ್ರಗಣ್ಯನಾದ ಕುಶನು – ಅಕೆಯ ಯಾಚನೆಯನ್ನು ಸಂತೋಷದಿಂದ ಹಾಗೆಯೇ ಆಗಲೆಂದು ಒಪ್ಪಿಕೊಂಡನು. ಮೂರ್ತಿಮತಿಯಾಗಿದ್ದ ಅಯೋಧ್ಯೆಯೂ ಪ್ರಸನ್ನಮುಖಿಳಾಗಿ ಮಾನುಷದೇಹವನ್ನು ಬಿಟ್ಟು, ದೈವರೂಪದಿಂದ ಅದೃಶ್ಯಳಾದಳು.

ಬೆಳಗಾಯಿತು, ಕುಶನರಪಾಲನು ಎಂದಿನಂತೆ ಸಭೆಗೈತಂದು ಧರ್ಮಾಸನದಲ್ಲಿ ಕುಳಿತನು, ಸಭಾಸದರೆಲ್ಲ ನೆರೆದಿದ್ದರು. ಆಗ ಅಲ್ಲಿದ್ದ ದ್ವಿಜವರರಿಗೆಲ್ಲ ರಾತ್ರಿ ನಡೆದ ಅದ್ಭುತವೃತ್ತಾಂತವನ್ನು ಅರುಹಿದನು. ಅವರು ಕುಲರಾಜಧಾನಿಯು ಇದಿರಿಗೆ ಬಂದು ಪತಿಯಾಗುವಂತೆ ವರಿಸಿದುದನ್ನು ಕೇಳಿ ಬಹಳವಾಗಿ ಅಭಿನಂದಿಸಿದರು.

ಬಳಿಕ ಕುಶನೃಪತಿಯು – ಕುಶಾವತಿಯನ್ನು ಶ್ರೋತ್ರೀಯರಾದ ಬ್ರಾಹ್ಮಣರಿಗಿತ್ತು, ಪ್ರಯಾಣಕ್ಕೆ ಅನುಕೂಲವಾದ ದಿವಸದಲ್ಲಿ ಅಂತಃಪುರಸ್ತ್ರೀಜನರಿಂದ ಸಹಿತನಾಗಿ, ಮೇಘಸಮುದಾಯಗಳಿಂದ ವಾಯುವು ಹೇಗೋ ಹಾಗೆ, ಸೈನ್ಯಗಳಿಂದೊಡಗೂಡಿ, ಅಯೋಧ್ಯಾಭಿಮುಖನಾಗಿ ಹೊರಟನು. ಆಗ – ಧ್ವಜಪಜ್ತಿಯೆಂಬ ಉಪವನಗಳುಳ್ಳುದೂ, ಮಹಾ ಗಜಗಳೆಂಬ ಆಟದ ಬೆಟ್ಟಗಳುಳ್ಳದೂ, ರಥಗಳೆಂಬ ಉತ್ತಮಗೃಹಗಳುಳ್ಳದ್ದೂ ಆಗಿರುವ, ಸೇನೆಯು ಆ ರಾಜನನ್ನು ಹಿಂಬಾಲಿಸಿ ನಡೆದು ಬರುತ್ತಲಿರುವ ರಾಜಧಾನಿಯಂತೆ ಕಂಗೊಳಿಸುತ್ತಲಿದ್ದಿತು. ಮತ್ತು – ಬೆಳ್ಗೊಡೆಯನ್ನುಳ್ಳ ಆ ಪೊಡವಿಯೊಡೆಯನಾಣತಿಯಿಂದ ಪೊರಮಡುತ್ತಲಿರುವ ಪಡೆಯು –

ಉಡುರಾಜನಿಂದ ತಡಿಗೈದಿಸಲ್ಪಡುವ ಕಡಲಿನಂತೆ ಕಾಣಬರುತ್ತಲಿದ್ದಿತು. ಇಂತು ಪಯಣವನ್ನು ಬೆಳಸುತ್ತಲಿರುವ ಸೇನೆಯ ತುಳಿತದ ತೊಂದರೆಯನ್ನು ತಾಳಲಾರದೆ ವಸುಂಧರೆಯು ಎರಡನೆಯ ವಿಷ್ಣುಪದವನ್ನು ಕುರಿತು ಏರುವಂತಿದ್ದಿತು. ಮತ್ತು ಆ ದಳವು – ಕುಶಾವತಿಯನ್ನು ಬಿಟ್ಟು ಹೊರಡುತ್ತಲಿರುವಲ್ಲಿಯೂ, ನಡುವೆ ನಡೆದುಬರುವಲ್ಲಿಯೂ ಮುಂದೆ ಇಳಿಯುತ್ತಲಿರುವವಲ್ಲಿಯೂ, ಎಲ್ಲೆಲ್ಲಿ ನೋಡಿದರೂ ನೋಟಕರಿಗೆ ಪರಿಪೂರ್ಣವಾಗಿರುವಂತೆ ತೋರುತ್ತಲಿದ್ದಿತು.

ನಾಯಕನಾದ ಕುಶನ ಆ ವಾಹಿನಿಯಲ್ಲಿ ಮುಂದೆ ಬರುತ್ತಲಿರುವ ಮದಗಜಗಳ ಮೈಯಿಂದ ಹರಿವ ಮದಜಲಧಾರೆಯಿಂದ ನೆನೆದ ನೆಲವೆಲ್ಲ ಕೆಸರಾಗುತ್ತಲಿದ್ದಿತು. ಹಾಗೆಯೇ ಹಿಂದೆ ಬರುವ ಕುದುರೆಗಳ ಖುರಪುಟಗಳ ತುಳಿತದಿಂದ ನಿಮಿಷಮಾತ್ರದಲ್ಲಿ ಧೂಳಿಯಾಗುತ್ತಲೂ ಇದ್ದಿತು. ಇಂತು ಹರಿದು ಬರುತ್ತಲಿರುವ ಆ ಸೇನೆಯು – ವಿಂಧ್ಯಪರ್ವತದ ತಪ್ಪಲಿನಲ್ಲಿ ಮುಂದಾರಿಯನ್ನು ಹುಡುಕುತ್ತ ಕವಲುಕವಲಾಗಿ ಒಡೆದ, ರೇವಾ ನದಿಯಂತೆ ಕೋಲಾಹಲ ಧ್ವನಿಯುಳ್ಳದಾಗಿ, ಗವಿಗಳಿಂದ ಪ್ರತಿಧ್ವನಿಯನ್ನು ಹೊರಡಿಸುತ್ತಲಿದ್ದಿತು. ಕಾವಿ ಮೊದಲಾದ ಕಲ್ಲುಗಳ ಮೇಲೆ ಹರಿವುದರಿಂದ ಕೆಂಪಾದ ತೇರಿನಗಾಲಿಯ ಪಟ್ಟೆಗಳುಳ್ಳದ್ದೂ, ಪಯಣದ ಕಲಕಲದಿಂದ ಮಿಶ್ರವಾದ ವಾದ್ಯಧ್ವನಿಯುಳ್ಳದ್ದೂ ಆಗಿರುವ ದಂಡಿನಿಂದೊಡಗೂಡಿದ ಕುಶನು –ಅಲ್ಲಲ್ಲಿ ಬೇಡರೊಪ್ಪಿಸುವ ಹಣ್ಣು ಹಂಪಲು ಮೊದಲಾದ ಉಪಹಾರಗಳನ್ನು ನೋಡಿ ಸಂತೋಷಿಸುತ್ತಾ ತೆರಳಿದನು. ಆ ವಿಂಧ್ಯಪರ್ವತದ ಹತ್ತಿರದಲ್ಲಿನ ಹೊಳೆಯಲ್ಲಿ ಆನೆಗಳು ಸೇತುವೆಯಾಗಿ ನಿಲ್ಲಲು, ಪಶ್ಚಿಮವಾಹಿನಿಯಾದ ಗಂಗೆಯನ್ನು ದಾಟುತ್ತಲಿದ್ದ ಕುಶನಿಗೆ, ಆಗಸಕ್ಕೆ ಹಾರುತ್ತ ಹರಡಿ ಅಲುಗುತ್ತಲಿರುವ ರೆಕ್ಕೆಗಳನ್ನೊಳಗೊಂಡಿರುವ ಅಂಚೆಗಳು ಪ್ರಯತ್ನವಿಲ್ಲದೆಯೇ ಅಣಿಯಾದ ಚಾಮರಗಳಾದವು. ಆಗ ಕುಶನು – ಹಿಂದೆ ಕಪಿಲಮುನಿಯ ಕೋಪಾಗ್ನಿಯಿಂದ ಬೂದಿಯಾಗಿ ಉಳಿದ ದೇಹಗಳುಳ್ಳವರೂ ತನ್ನ ಪೂರ್ವಪುರುಷರೂ ಆದ ಸಗರಪುತ್ರರ ಸ್ವರ್ಗಪ್ರಾಪ್ತಿಗೆ ಮೂಲಕಾರಣವಾದುದೂ, ನಾವೆಗಳ ಸಂಚಾರದಿಂದ ಚಂಚಲವಾದುದೂ ಆಗಿರುವ ಭಾಗೀರಥೀಜಲಕ್ಕೆ ಅಭಿನಂದಿಸಿದನು. ಇಂತು ಕುಶಮಹಾರಾಜನು – ಕೆಲವುದಿವಸಗಳವರೆಗೂ ಹಾದಿಯನ್ನು ಕಳೆದು, ಸರಯೂತೀರವನ್ನು ಸೇರಿ, ಅಲ್ಲಿ ತನ್ನ ಹಿರಿಯರಿಂದ ವಿಸ್ತರಿಸಲ್ಪಟ್ಟು ವೇದಿಗಳಲ್ಲಿ ನೆಲೆಗೊಂಡಿರುವ ನೂರಾರು ಯೂಪಸ್ತಂಭಗಳನ್ನು ಕಂಡನು. ಹೂತಿರುವ ಮರಗಳಮೇಲೆ ಹಾಯ್ದು, ತಂಪಾದ ಸರಯೂತರಂಗಗಳ ಮೇಲೆ ನುಗ್ಗಿ, ಹೊರಟುಬಂದ ಕುಲರಾಜಧಾನಿಯ ಉದ್ಯಾನವಾಯುವು – ಕುಶಮಹಾರಾಜನನ್ನು ಇದಿರ್ಗೊಂಡಿತು.

ಆ ಬಳಿಕ–ಹಗೆಗಳೆದೆಯಲ್ಲಿ ಅಲಗನ್ನು ನೆಡತಕ್ಕವನೂ, ರಘುಕುಲಲಲಾಮನೂ, ಪ್ರಜಾಪ್ರಿಯನೂ ಆಗಿರುವ ಕುಶನರಪಾಲನು–ಚಲಿಸುತ್ತಲಿರುವ ಧ್ವಜಪಟಗಳನ್ನೊಳಗೊಂಡ ಸೈನ್ಯವನ್ನು, ಪುರದ ಹೊರವಳಯದಲ್ಲಿ ಇಳಿಸಿದನು. ಆ ಹಿಂದೆ ಕುಶರಾಜನಾಣತಿಯನಾಂತು, ಬಹುಮಂದಿ ಕೈವಾಡಗಾರರು – ಅಣಿಯಾಗಿದ್ದ ಸಕಲಸಲಕರಣೆಗಳಿಂದ, ಅದುವರೆಗೆ ಹಾಳಾಗಿದ್ದ ಅಯೋಧ್ಯಾನಗರವನ್ನು ಮೋಡಗಳು ಮಳೆಗರೆವುದರ ಮೂಲಕ ಬೇಸಗೆಯ ಬೇಗೆಯಿಂದ ಬಂದಿದ್ದ ಭೂಮಿಯನ್ನು ಹೇಗೋ ಹಾಗೆ ಹೊಸದಾಗುವಂತೆ ಅಲಂಕರಿಸಿದರು. ತರುವಾಯ ಆ ರಘುವೀರನು ಪ್ರಶಸ್ತಗಳಾದ ದೇವಾಲಯಗಳೊಳಗೆ ಉಪವಾಸವೇ ಮುಂತಾದ ನೇಮಗಳಿಂದೊಡಗೂಡಿರುವ ವಾಸ್ತುವಿದರ ಮೂಲಕ ಬಗೆಬಗೆಯಾದ ಪೂಜಾಸಾಮಗ್ರಿಗಳಿಂದ ಅರ್ಚನೆಯ ಕ್ರಮವನ್ನು ನೆರವೇರಿಸಿದನು. ಆಮೇಲೆ ಕಾಮುಕನು ಕಾಮಿನಿಯ ಮನವನ್ನು ಹೊಗುವಂತೆ ರಾಜಸದನವನ್ನು ಪ್ರವೇಶಿಸಿ ತದನಂತರದಲ್ಲಿ ಮಂತ್ರಿಗಳೇ ಮುಂತಾದ ಪರಿಜನರಿಗೆಲ್ಲ ಅವರವರ ಯೋಗ್ಯತಾನುಸಾರವಾದ ಭವನಗಳನ್ನು ಸಜ್ಜುಗೊಳಿಸಿ ಸಂಭಾವಿಸಿದನು. ಆಗಲಾ ದಿವ್ಯರಾಜಧಾನಿಯು ಅಂದವಾಗಿ ಅಣಿಯಾದ ದವಸಧಾನ್ಯಗಳಿಂದೊಡಗೂಡಿದ ಅಂಗಡಿಬೀದಿಗಳಿಂದಲೂ, ಅಶ್ವಶಾಲೆಗಳನ್ನಾಶ್ರಯಿಸಿರುವ ತುರಂಗಮಗಳಿಂದಲೂ, ಗಜಶಾಲೆಗಳ ಕಂಬಗಳಿಗೆ ಕಟ್ಟಿರುವ ಕರಿಗಳಿಂದಲೂ, ಸರ್ವಾಂಗಗಳಲ್ಲಿಯೂ ಅಲಂಕರಿಸಿಕೊಂಡಿರುವ ಸುಮಂಗಲಿಯಂತೆ ಸಂಶೋಭಿಸುತ್ತಲಿದ್ದಿತು. ಇಂತು ಸರ್ವಸಂಪತ್ಸಮೃದ್ಧಿಯಿಂದ ರಘುಕುಲದರಸರ ನಗರಿಯು ಪೂರ್ವದಂತೆ ರಾರಾಜಿಸುತ್ತಲಿರಲು, ಮೈಥಿಲೀಕುಮಾರನು – ಅಮರಾಧಿಪತಿಯನ್ನೂ, ಅಲಕೇಶ್ವರನನ್ನೂ ಗಣನೆಮಾಡದಿದ್ದನು.

ಹೀಗಿರುವಲ್ಲಿ – ಮುಕ್ತಾಮಣಿಮಯವಾದ ಉತ್ತರೀಯವನ್ನು ಹೊದೆದು, ವಿಶೇಷವಾಗಿ ಬೆಳ್ಳಗಿರುತ್ತ, ಎದೆಯಲ್ಲಿ ಜೋಲಾಡುತ್ತಲಿರುವ ಹಾರಗಳನ್ನೊಳಗೊಂಡು, ನಿಟ್ಟುಸಿರಿನ ಮಾತ್ರದಿಂದ ಅಲುಗುವಷ್ಟು ನವುರಾದ ಬಟ್ಟೆಯನ್ನುಟ್ಟಿರುವ ಕುಶನಿಗೆ ನಾಯಕಿಯ ವೇಷವನ್ನು ಉಪದೇಶಿಸಲೆಳಸಿರುವುದೋ ಎಂಬಂತೆ ಬೇಸಗೆಯು ಬಂದಿತು. ಅಗಸ್ತ್ಯಮುನಿಗಾಸರೆಯಾದ ದಕ್ಷಿಣವನ್ನು ಬಿಟ್ಟು, ರವಿಯು ತನ್ನಕಡೆಗೆ ಬರತೊಡಗಲು ಉತ್ತರದಿಶೆಯು – ಹಿಮವತ್ಸಂಬಂಧದಿಂದುಂಟಾದ ಹಿಮವೃಷ್ಟಿಯೆಂಬ ಆನಂದಬಾಷ್ಪವನ್ನು ಕರೆಯುತ್ತಲಿದ್ದಿತು, ಆಗ – ಹೇರಳವಾದ ತಾಪವನ್ನೊಳಗೊಂಡಿರುವ ದಿವಸ, ವಿಶೇಷವಾಗಿ ಕೃಶಿಸಿರುವ ರಾತ್ರಿ ಎಂಬೀ ಎರಡೂ ಪ್ರಣಯಕಲಹವೇ ಮೊದಲಾದ ವಿರೋಧಾಚರಣೆಯಿಂದ ಅಗಲಿ, ಅನುತಾಪಪಡುತ್ತಲಿರುವ ಗಂಡಹೆಂಡಿರಂತೆ ಇರುತ್ತಿದ್ದುವು. ಪುಣ್ಯವಂತರ ಮನೆಗಳ

ಅಂಗಳಗಳಲ್ಲಿನ ಕೊಳಗಳೊಳಗೆ ನೀರು – ಒಣಗಿದ ಪಾವಸೆಗಳನ್ನು ಮಾತ್ರವೇ ಸೋಪಾನಗಳ ಮೇಲೆ ಉಳಿಸುತ್ತಾ, ದಿನದಿನಕ್ಕೂ ಕೆಳಕ್ಕೆ ಇಳಿದು, ನೀರಾಟಕ್ಕೆ ತಕ್ಕುದೆನಿಸುವ ಹಾಗೆ ನಾರಿಯರ ಟೊಂಕದುದ್ದದಷ್ಟಾಗಿ ನಿಲ್ಲುತ್ತ ಬಂದಿತು. ತೋಟಗಳೊಳಗೆ ಸಂಜೆಯ ಹೊತ್ತಿನಲ್ಲಿ ಅರಳುತ್ತ ಸುವಾಸನೆಯನ್ನು ಹರಡುತ್ತಲಿರುವ ಮಲ್ಲಿಗೆಯ ಮೊಗ್ಗುಗಳ ಮೇಲೆ, ಕಾಲನ್ನೂರಿಯೂ ಊರದ ಹಾಗೆ ಹಾರಾಡುತ್ತಲಿರುವ ದುಂಬಿಗಳು – ಬಾಯಿಂದ ಲೆಕ್ಕವನ್ನು ಹೇಳಿ, ಕಾಲಿನಿಂದ ಎಣಿಸುತ್ತಲಿರುವುವೋ ಎಂಬಂತೆ ಕಾಣಬರುತ್ತಿದ್ದುವು. ನಾರಿಯರು ಕಿವಿಗಳ ಸಂದಿನಲ್ಲಿ ಸಿಂಗರಿಸಿಕೊಂಡಿರುವ ಬೆಟ್ಟಮಲ್ಲಿಗೆಯ ಹೂಗಳು – ಉದಿರುವಹಾಗೆ ಬಾಗಿದ್ದರೂ ಕಪೋಲಗಳಲ್ಲಿನ ಬೆವರು ಹನಿಗಳಲ್ಲಿ ರೇಕುಗಳು ಮೆತ್ತಿಕೊಳ್ಳುತ್ತಲಿದ್ದುದರಿಂದ ತಟ್ಟನೆ ಕೆಳಕ್ಕೆ ಬೀಳುತ್ತಲಿರಲಿಲ್ಲ. ಭಾಗ್ಯವಂತರು – ತಮ್ಮ ದಿವ್ಯಭವನಗಳೊಳಗೆ ಇಡಿಸಿರುವ ಜಲಧಾರಾಯಂತ್ರಗಳ ಮೂಲಕ ಶೀತಲಚಂದನ ರಸಗಳನ್ನು ಚೆಲ್ಲಿಸಿ, ಮಣಿಮಯವಾದ ಹಲಗೆಕಲ್ಲುಗಳನ್ನು ತೊಳೆಯಿಸಿ, ಅವುಗಳ ಮೇಲೆ ಪವಳಿಸುತ್ತಾ, ಬಿಸಿಲಿನ ಝಳವನ್ನು ಪರಿಹರಿಸಿಕೊಂಡು ತಂಪುಮಾಡಿಕೊಳ್ಳುತ್ತಲಿದ್ದರು. ಪುರಸುಂದರಿಯರು ಸಂಜೆಯ ಹೊತ್ತಿನಲ್ಲಿ ಸುಖಮಜ್ಜನವನ್ನು ಗೈದು ತಮ್ಮ ಅಂದವಾದ ಕೂದಲಿಗೆ ಪರಿಮಳ ಧೂಪವನ್ನು ಕೊಟ್ಟು ಗಮಗಮಿಸುವ ಮಲ್ಲಿಗೆಯ ಮೊಗ್ಗುಗಳಿಂದ ಅಲಂಕರಿಸಿಕೊಳ್ಳುವರು. ರಜದಿಂದ ತುಂಬಿ, ಹೊಂಬಣ್ಣವಾಗಿಯೂ, ನೀಳವಾಗಿಯೂ ಇರುವ ಅರ್ಜುನತರುಕುಸುಮಮಂಜರಿಯು – ದೇಹವನ್ನೇ ಸುಟ್ಟುಬಿಟ್ಟರೂ ಶಾಂತನಾಗದೆ ಮೃತ್ಯುಂಜಯನು ಕತ್ತರಿಸಿದ ಕಾಮನಬಿಲ್ಲಿನ ಹೆಡೆಯಂತೆ ಕಂಗೊಳಿಸುತ್ತಲಿದ್ದಿತು. ಮನೋಹರವಾಗಿರುವ ಮಾವಿನ ಗಿಡಗಳ ಚಿಗುರು, ಕಬ್ಬಿನ ಹಾಲಿನಿಂದ ಮಾಡಿದ ಮದ್ಯರಸ, ಗಮಗಮಿಸುವ ಅಂದವಾದ ಪಾದರಿಯ ಹೂವು, ಈ ಮೊದಲಾದವುಗಳಿಂದ ಆ ಗ್ರೀಷ್ಮಕಾಲವು – ರಸಿಕಜನರ ತಾಪವೇ ಮೊದಲಾದ ಎಲ್ಲ ದೋಷಗಳನ್ನೂ ಅಡಗಿಸಿಬಿಟ್ಟಿತು. ಅಭ್ಯುದಯದಲ್ಲಿರುವ ತಾರಾಪತಿ, ನರಪತಿಎಂಬೀ ಇಬ್ಬರು ಮಾತ್ರವೇ ಆ ಕಠಿನತರವಾದ ಗ್ರೀಷ್ಮರ್ತುವಿನಲ್ಲಿ ಜನರಿಗೆ ಪಾದಸೇವೆಯಿಂದ ವಿಶೇಷವಾಗಿ ತಾಪಪರಿಹಾರಕರಾಗಿರುತ್ತಿದ್ದರು.

ಆ ಬಳಿಕ – ಅಲುಗುತ್ತಲಿರುವ ಅಲೆಗಳಮೇಲೆ ತೇಲಾಡುವ ಅಂಚೆಗಳುಳ್ಳದೂ, ತೀರದಲ್ಲಿನ ತರುಲತೆಗಳ ಹೂಗಳನ್ನಾಂತುದಾಗಿರುವ ಸರಯೂನದಿಯ ಜಲದಲ್ಲಿ, ಹೆಂಗಳೊಡನೆ ಬೇಸಗೆಯಲ್ಲಿ ಸುಖಕರವೆನಿಸಿದ ನೀರಾಟವನ್ನಾಡಬೇಕೆಂದು ಆ ಕುಶಭೂಪತಿಗೆ ಬಯಕೆಯುಂಟಾಯಿತು, ಅದರಿಂದಲೆ ವಿಷ್ಣುವಿನಂತೆಸೆವ ಕುಶನು – ತೀರಭೂಮಿಯಲ್ಲಿ ಗೂಡಾರಗಳನ್ನು ಅಣಿಮಾಡಿಸಿ, ಜಾಲಿಕರಿಂದ ಮೊಸಳೆಗಳಿಲ್ಲದಂತೆ ಅನುಗೊಳಿಸಿ, ಸಂಪತ್ಸಮೃದ್ಧಿಗನುಗುಣವಾಗಿ

ಜಲಕ್ರೀಡಾನಿರತನಾಗಿದ್ದನು. ಆಗಲಾ ಸರಯೂ ನದಿಯು – ತೀರಭೂಮಿಯಿಂದ ಸೋಪಾನ ಮಾರ್ಗವಾಗಿ ಇಳಿಯುತ್ತಲಿರುವ ಅಂಗನೆಯರ ಒಯ್ಯಾರದ ಒತ್ತು ನಡಗೆಯಲ್ಲಿ ಒಬ್ಬೊಬ್ಬರ ಬಾಪುರಿಗಳು ತಗಲುವ ಸದ್ದಿನಿಂದಲೂ, ಬೆಡಗಿನಿಂದಿಡುವ ಅಡಿಯ ಕಡಗದ ಶಬ್ದದಿಂದಲೂ, ಅಂಜಿದಂಚೆಗಳುಳ್ಳದ್ದಾಯಿತು. ಕುಶನು ತೆಪ್ಪದಮೇಲೆ ಕುಳಿತು, ಸರಯೂಜಲದಲ್ಲಿ ನಿಂತು ಒಬ್ಬರ ಮೇಲೊಬ್ಬರು ನೀರನ್ನು ಚೆಲ್ಲುತ್ತಲಿರುವ ರಮಣಿಯರನ್ನು ವಿಶೇಷಾಭಿಲಾಷೆಯಿಂದ ನೋಡುತ್ತಾ, ತನ್ನ ಪಕ್ಕದಲ್ಲಿ ಚಾಮರವನ್ನು ಹಿಡಿದು ನಿಂತಿರುವ ಕಿರಾತಿಯನ್ನು ಕುರಿತು ಇಂತೆಂದನು –

ಎಲೆ ಕಿರಾತಿ! ನೋಡು : – ನೂರಾರುಮಂದಿ ನಮ್ಮ ಅಂತಃಪುರಾಂಗನೆಯರು ಒಳಹೊಕ್ಕು, ಕಲಕುತ್ತಲಿರುವುದರಿಂದ ಅವರ ಅಂಗರಾಗವೆಲ್ಲ ಕದಡಿಹೋಗಿ, ಹೊಳೆಯು – ಬಗೆಬಗೆಯ ಬಣ್ಣವನ್ನಾಂತು ಮೇಘಗಳಿಂದೊಡಗೂಡಿರುವ ಸಂಧ್ಯೋದಯವನ್ನು ಹೋಲುತ್ತಲಿದೆ. ನಮ್ಮ ಈ ನಾವೆಯ ಅಲ್ಲಾಟದಿಂದ ಚಲಿಸಿ ಮುಂದಕ್ಕೆ ಹಾಯುತ್ತಲಿರುವ ನೀರು ಈ ಅಂಗನೆಯರ ಕಣ್ಣುಗಳಿಗೆ ತಗುಲಿ, ಅಲ್ಲಿನ ಕಾಟಿಕೆಯನ್ನೆಲ್ಲ ಅಪಹರಿಸಿ, ಅದಕ್ಕೆ ಬದಲಾಗಿ ಆವರ ನೇತ್ರಗಳಿಗೆ ಮದರಾಗ ಶೋಭೆಯನ್ನುಂಟುಮಾಡುತ್ತಲಿದೆ. ಈ ಸುಮಂಗಲಿಯರ ನೀರಾಟದಲ್ಲಿ – ಇವರ ಕಿವಿಗಳಿಗಲಂಕಾರ ವಾಗಿದ್ದು, ಅಲ್ಲಿಂದುದುರಿದ ಮಲ್ಲಿಗೆಯ ಹೂಗಳು – ಅಲ್ಲಲ್ಲಿ ಚಲಿಸುತ್ತಾ, ಸುತ್ತಲೂ ಇರುವ ಪಾವಸೆಗಳಲ್ಲಿ ಆಶೆಯಿಂದ ಓಡಾಡುತ್ತಲಿರುವ ಮೀನುಗಳನ್ನು ಭ್ರಾಂತಿಗೊಳಿಸುತ್ತಲಿವೆ. ನೀರನ್ನು ಅಪ್ಪಳಿಸುವ ವೇಗದಲ್ಲಿ ಹಾರುತ್ತಲಿರುವ ತುಂತುರುಗಳಿಗೂ, ಈ ಮಹಿಳೆಯರು ಕೊರಳಿಗೆ ಹಾಕಿಕೊಂಡಿದ್ದು, ಕಿತ್ತು ಚದುರಿಹೋಗುತ್ತಲಿರುವ ಹಾರಗಳ ಮುತ್ತುಗಳಿಗೂ ಭೇದವೇ ಕಾಣಬರುವುದಿಲ್ಲ.

ಈ ಹೊಳೆಯ ದಡದಲ್ಲಿ ಗರಿಗಳನ್ನು ಅರಳಿಸಿರುವ ನವಿಲುಗಳ ಸವಿಯಾದ ಕೇಕಾರವಗಳಿಂದ ಒಪ್ಪುತ್ತಾ, ಕೇಳಲಿಂಪಾಗಿರುವ ಈ ಮಂಗಳಾಂಗಿಯರ ಗಾನವನ್ನು ಅನುಸರಿಸಿರುವ ಜಲವೆಂಬ ಮದ್ದಳೆಯ ಸದ್ದು ಕಿವಿಯನ್ನು ಹೊಗುತ್ತಲಿದೆ. ಇದಲ್ಲದೆ ಈ ರಮಣಿಯರಲ್ಲಿ ಒಂದು ಪಕ್ಕದವರು – ತಮ್ಮದಿರಿಗೆ ನಿಂತಿರುವವರ ಮೋರೆಗಳ ಮೇಲೆ ನೀರನ್ನು ಕರತಳಗಳಿಂದ ಎರಚುತ್ತಲಿರುವರು. ಬಳಿಕ ತಾವೂ ಅವರಿಂದ ಮುಖದಮೇಲೆ ಎರಚಲ್ಪಟ್ಟವರಾಗಿ, ವದನಗಳ ಕುಂಕಮ ಚೂರ್ಣಗಳಿಂದ ಕೆಂಪಾದ ರಜಕಣಗಳನ್ನು, ನೆನೆದು ನೀಳವಾದ ಮುಂಗೂದಲುಗಳ ತುದಿಗಳಿಂದ ಬಟ್ಟಿಡಿಸುತ್ತಲಿದ್ದಾರೆ. ಕೆದರಿದ ಕೂದಲುಳ್ಳುದೂ, ಇದ್ದ ತಾವಿನಿಂದ ಜಾರಿರುವ ಮುತ್ತುಗಳಿಂದ ಮಾಡಿರತಕ್ಕ ಓಲೆಗಳುಳ್ಳುದೂ, ಕದಡಿಹೋದ ಕಸ್ತೂರಿಯ ಬಳ್ಳಿಯ ಒರಸೆಯುಳ್ಳುದೂ ಆಗಿರುವ ಈ ಪ್ರಮದೆಯರ ಮುಖವೇಷವು ಜಲಕ್ರೀಡೆಯಿಂದ ವಿಕಾರವಾಗಿದ್ದರೂ ಒಂದು ಬಗೆಯಾದ ಮನೋಹರತೆಯನ್ನುಂಟುಮಾಡುತ್ತಲಿದೆ

ಎಂದು ಹೇಳಿ, ಕುಶನು – ವಿಮಾನದಂತಿರುವ ನಾವೆಯಿಂದ ಇಳಿದು, ಅಲುಗುತ್ತಲಿರುವ ಕೊರಳಹಾರವುಳ್ಳವನಾಗಿ, ಸೊಂಡಿಲಿನಿಂದ ಕಿತ್ತು, ಕೊರಳಿನಲ್ಲಿ ಸಿಲುಕಿಸಿಕೊಂಡಿರುವ ತಾವರೆಯ ಬಳ್ಳಿಯನ್ನು ವನದಾನೆಯು ಹೆಣ್ಣಾನೆಗಳೊಡನೆ ಹೇಗೋ ಹಾಗೆ, ಆ ಹೆಂಗಳೊಡನೆ ನೀರಾಟದಲ್ಲಿ ತಾನೂ ಆಸಕ್ತನಾದನು.

ಆ ಬಳಿಕ ಅಬಲೆಯರು ಹೊಳೆಯುತ್ತಲಿರುವ ಆ ಕುಶಮಹಾರಾಜನೊಡನೆ ಸೇರಿ ಬಹಳವಾಗಿ ಪ್ರಕಾಶಿಸುತ್ತಲಿದ್ದರು, ಮುತ್ತುಗಳು ಮೊದಲೇ ಸ್ವಭಾವವಾಗಿ ವಿರಾಜಿಸತಕ್ಕವುಗಳು, ಇದರ ಮೇಲೆ ಥಳಥಳನೆ ಕಿರಣಗಳನ್ನು ಬೀರುತ್ತಲಿರುವ ಇಂದ್ರ ನೀಲಮಣಿಯೊಡನೆ ಕಲೆತರೆ ಮತ್ತಷ್ಟು ಅಂದವೆಂದು ಹೇಳಬೇಕಾದುದೇನು? ಆಗಲಾ ವಿಶಾಲನಯನೆಯರಾದ ವರವರ್ಣಿನಿಯರು–ಬಂಗಾರದ ಕೊಂಬಿನಕೊಳವಿಯಲ್ಲಿ ತುಂಬಿದ ಬಣ್ಣದನೀರನ್ನು ಪ್ರೇಮಾತಿಶಯದಿಂದ ಕುಶನಮೇಲೆ ಚೆಲ್ಲಿದರು, ಅದರಿಂದಾತನು–ಗೈರಿಕಧಾತುಗಳಿಂದ ತುಂಬಿರುವ ಬೆಟ್ಟದಂತೆ ವಿಶೇಷವಾಗಿ ಬೆಳಗುತ್ತಲಿದ್ದನು. ಮತ್ತು ಅಂತಃಪುರಸುಂದರಿಯರೊಡನೆ ಉತ್ತಮವೆನಿಸಿದ ಸರಯೂನದಿಯ ನಡುವೆ ಇರುವ ಕುಶನು–ಅಪ್ಸರಸ್ತ್ರೀಯರೊಡನೆ ದೇವ ಗಂಗೆಯಲ್ಲಿ ಕ್ರೀಡಾಸಕ್ತನಾದ ಅಮರೇಂದ್ರನನ್ನು ಹೋಲುತ್ತಲಿದ್ದನು.

ಹೀಗಿರುವಲ್ಲಿ – ಹಿಂದೆ ರಾಮನು ಅಗಸ್ತ್ಯ ಮಹಾಮುನಿಯಿಂದ ಒಂದು ಅಮೂಲ್ಯವಾದ ಒಡವೆಯನ್ನು ಪಡೆದಿದ್ದು, ಕುಶನ ಪಟ್ಟಾಭಿಷೇಕದ ಸಮಯದೊಳಗೆ ರಾಜ್ಯದೊಂದಿಗೆ ಆ ಆಭರಣವನ್ನೂ ಈತನಿಗೆ ಕೊಟ್ಟಿದ್ದನು. ಅದು ಯಾವಾಗಲೂ ಕುಶನ ಕರದಲ್ಲಿಯೇ ಇದ್ದಿತು. ಕ್ರೀಡಾಸಕ್ತನಾಗಿದ್ದ ಕುಶನಿಗೆ ಅರಿವಿಲ್ಲದೆಯೇ ಮಹಾಜಯಸೂಚಕವಾದ ಆ ಆಭರಣವು ನೀರಿನಲ್ಲಿ ಬಿದ್ದು ಮುಳುಗಿತು.

ಕುಶನೃಪತಿಯು ತನ್ನ ಪ್ರಿಯಸತಿಯರೊಡನೆ ಸ್ನಾನಮಾಡಿ, ತೀರಕೈತಂದು ಗುಡಾರವನ್ನು ಹೊಕ್ಕಕೂಡಲೇ ಶೃಂಗರಿಸಿಕೊಳ್ಳುವುದಕ್ಕಿಂತ ಮುಂಚೆಯೇ ದಿವ್ಯಕಟಕದಿಂದ ಶೂನ್ಯವಾಗಿರುವ ತನ್ನ ತೋಳನ್ನು ನೋಡಿಕೊಂಡನು, ಆ ಒಡವೆಯ ಜಯಲಕ್ಷ್ಮಿಯನ್ನು ಸಂಪಾದಿಸಿಕೊಡತಕ್ಕದು. ಮತ್ತು–ತಂದೆಯೇ ತನ್ನ ಕೈಗೆ ತೊಡಿಸಿದ್ದುದು; ಈ ಕಾರಣದಿಂದ ಮಾತ್ರವೇ ಅ ಭೂಷಣವು ಕಳೆದು ಹೋದುದನ್ನು ಕುರಿತು ಕುಶನು ಕಳವಳಿಸಿದನು. ಬೇರಾವ ನಿಮಿತ್ತದಿಂದಲೂ ಅಲ್ಲ. ಆ ಧೀರನು ಸ್ವಾಭಾವಿಕವಾಗಿ ಆಭರಣಗಳನ್ನು ನಿರ್ಮಾಲ್ಯಪುಷ್ಪಗಳಂತೆ ಭಾವಿಸತಕ್ಕವನಾಗಿದ್ದನು.

ಬಳಿಕ ಹೊಳೆಯೊಳಗೆ ಮುಳುಗುವುದರಲ್ಲಿ ಪಳಗಿರುವ ಜಾಲಿಕರನ್ನು ಕರೆಯಿಸಿದನು, ಆ ಆಭರಣವನ್ನು ಬೇಗನೆ ಹುಡುಕಿತರುವಂತೆ ಆಜ್ಞಾಪಿಸಿದನು, ಆ ಬಲೆಗಾರರು ಸರಯೂನದಿಯಲ್ಲಿ ಮುಳುಮುಳಗಿ, ನೀರಿನೊಳಗೆ ಜಾಲಾಡಿ, ತಮ್ಮ

ಪ್ರಯತ್ನವೆಲ್ಲ ವ್ಯರ್ಥವಾದರೂ ಕಳೆಗುಂದದ ಮೊಗದ ಸೊಬಗುಳ್ಳವರಾಗಿ, ಅರಸಿನ ಬಳಿಗೈತಂದು ಎಲೈ ದೇವನೇ! ಪ್ರಯತ್ನವನ್ನೇನೋ ಮಾಡಿದೆವು, ನೀರಿನಲ್ಲಿ ಮುಳುಗಿದ ಆ ನಿನ್ನ ಉತ್ತಮಾಭರಣವು ನಮಗೆ ದೊರೆಯಲಿಲ್ಲ, ಆದರೆ ಈ ಆಪಗೆಯೊಳಗಡಗಿರುವ ಕುಮುದನೆಂಬ ನಾಗನು ಅದನ್ನು ಲೋಭದಿಂದ ಅಪಹರಿಸಿರಬಹುದೆಂದು ತೋರುತ್ತದೆ ಎಂದರು.

ಆ ಬಳಿಕ – ಬಿಲ್ಲಾಳೂ, ಬಲಶಾಲಿಯೂ ಆಗಿರುವ ಕುಶನು – ಹೊಳೆಯ ದಡದಲ್ಲಿ ನಿಂತು, ಸಿಟ್ಟಿನಿಂದ ಕೆಂಪಡರಿದ ಕಣ್ಣುಳ್ಳವನಾಗಿ, ಆ ಭುಜಂಗಮವನ್ನು ನಾಶಪಡಿಸಬೇಕೆಂದು ನೆನೆದು, ಬೇಗನೆ ಬಿಲ್ಲಿಗೆ ಹೆದೆಯನ್ನೇರಿಸಿ ಗಾರುಡಾಸ್ತ್ರವನ್ನು ಸಂಧಾನಮಾಡಿದನು. ಆ ಬಾಣಸಂಧಾನದ ವೇಗದಿಂದ ಕೂಡಲೆ ಆ ಮಡುವು – ಕಲಕಲ್ಪಟ್ಟುದ್ದಾಗಿ, ಅಲೆಗಳೆಂಬ ಕರಗಳಿಂದ ಕೂಲವನ್ನು ಅಪ್ಪಳಿಸುತ್ತಾ, ಕಪ್ಪದಲ್ಲಿ ಬಿದ್ದ ಕಾಡಾನೆಯಂತೆ ಘೋರವಾಗಿ ಅಬ್ಬರಿಸಿತು. ಆ ಹಿಂದೆ – ಕಡೆಯಲ್ಪಟ್ಟ ಕಡಲಿನಿಂದ ಪದ್ಮಾದೇವಿಯೊಂದಿಗೈತಂದ ಪಾರಿಜಾತವೃಕ್ಷದಂತೆ, ಒಬ್ಬ ಕನ್ಯೆಯನ್ನು ಮುಂದು ಮಾಡಿಕೊಂಡು, ಕುಮುದನೆಂಬ ಭುಜಂಗರಾಜನು ಆ ಮಡುವಿನಿಂದ ಬೇಗನೆ ಮೇಲಕ್ಕೆ ತಂದನು. ಪ್ರಜಾಪಾಲಕನಾದ ಕುಶನು – ತನ್ನ ಆಭರಣವನ್ನು ತನಗೇ ಒಪ್ಪಿಸಬೇಕೆಂದು ಕಯ್ಯಲ್ಲಿ ಹಿಡಿದು, ಇದಿರಿಗೆ ಬಂದು ನಿಂತ ಕುಮುದನನ್ನು ಕಂಡು, ಗಾರುತ್ಮತಾಸ್ತ್ರವನ್ನು ಹಿಮ್ಮೆಟ್ಟಿಸಿದನು. ಸಜ್ಜನರ ಸಿಟ್ಟು ತಗ್ಗಿದವವರಲ್ಲಿ ಮುಂಜರಿವುದಿಲ್ಲವೆಂಬುದು ದಿಟ. ಆಗ – ಗಾರುಡಾಸ್ತ್ರದ, ಮಹಿಮೆಯನ್ನು ಬಲ್ಲವನಾಗಿದ್ದ ಕುಮುದನು – ಬಹುಮಾನಕ್ಕೀಡಾದುದಾಗಿದ್ದರೂ ತನ್ನ ತಲೆಯನ್ನು ಮೂಲೋಕದೊಡೆಯನಾದ ಶ್ರೀರಾಮನ ಕುಮಾರ ನಾಗಿರುವ ಕುಶನಿಗೆ ತಗ್ಗಿಸಿ ಇಂತೆಂದನು:

ಎಲೈ ದೊರೆಯೇ! ಕಾರ್ಯವಿಶೇಷದಿಂದ ಮಾನುಷವೇಷವನ್ನು ತಾಳಿದ್ದ ವಿಷ್ಣುವಿನ ರೂಪಾಂತರವಾಗಿರುವ ನಿನ್ನನ್ನು ಚೆನ್ನಾಗಿ ಬಲ್ಲೆನು. ಈ ನಾನು – ನಿನ್ನ ಪ್ರೀತಿಗೆ ಎಂದಿಗೂ ಭಂಗವನ್ನುಂಟುಮಾಡತಕ್ಕವನಲ್ಲ. ಕೈಪೆಟ್ಟಿನಿಂದ ಪುಟನೆಗೆದು ಮೇಲಕ್ಕೆ ಹಾರಿದ ಚೆಂಡನ್ನು ಆಂತುಕೊಳ್ಳಲು ಕಯ್ಯನೆತ್ತಿ ನಿರುಕಿಸುತ್ತಲಿದ್ದ ಈ ಬಾಲೆಯು ಆಗಸದಿಂದ ಉದಿರುವ ನಕ್ಷತ್ರವನ್ನು ಹೇಗೋ ಹಾಗೆ, ಮಡುವಿನಿಂದ ಬೀಳುತ್ತಲಿರುವ ನಿನ್ನ ಈ ವಿಜಯಾಭರಣವನ್ನು ಕೌತುಕದಿಂದ ಪರಿಗ್ರಹಿಸಿದಳು. ಸೌಭಾಗ್ಯ, ಕಾರ್ಯನಿರ್ವಾಹ, ಬಲ ಇತ್ಯಾದಿಗಳಿಗೆ ಗಣಿಯೆನಿಸಿದ ಎಲೈ, ಅರಸೇ! ಮೊಳಕಾಲಿನವರೆಗೆ ನೀಳವಾದುದೂ, ಹೆದೆಯಪೆಟ್ಟಿನಿಂದುಂಟಾದ ಜಡ್ಡಿನ ಗುರುತುಗಳುಳ್ಳದ್ದೂ ಭೂಮಿಸಂರಕ್ಷಣೆಗೆ ಅಗುಳಿಯಂತಿರುವುದೂ, ಬಲಿತುದ್ದೂ ಆಗಿರುವ ನಿನ್ನಯ ತೋಳು–ಮರಳಿ ಈ ಆಭರಣದ ಯೋಗವನ್ನು ಪಡೆಯಲಿ. ಮತ್ತು–ಎಲೈ ಪಾರ್ಥಿವನೆ!

ತಾನೆಸಗಿದ ತಪ್ಪನ್ನು ನಿನ್ನ ಪಾದಸೇವೆಯಿಂದ ಪರಿಹರಿಸಿಕೊಳ್ಳಬೇಕೆಂದು ಬಹುಕಾಲದಿಂದ ಬಯಸುತ್ತಲಿರುವ ನನ್ನ ತಂಗಿಯಾದ ಈ ಕುಮುದ್ವತಿಯನ್ನು ಪ್ರೀತಿಪೂರ್ವಕವಾಗಿ ಪರಿಗ್ರಹಿಸಲು ನೀನು ತಕ್ಕವನೆನಿಸದೆಯಿಲ್ಲ ಎಂದು ಹೇಳುತ್ತಿರುವವನಾಗಿಯೆ ಕುಮುದನು ಆಭರಣವನ್ನು ತೆಗೆದುಕೊಟ್ಟುದಲ್ಲದೆ, ಕೂಡಲೆ ಎಲೈ ಕುಮುದನೆ! ನೀನು ಬಹುಮಾನ್ಯನು ಮತ್ತು ಬಂಧುವೆನಿಸಿದ್ದೀಯೆ?' ಎಂದು ಹೇಳುತ್ತಲಿರುವ ಕುಶಮಹಾರಾಜನಿಗೆ ತನ್ನ ಬಂಧುವರ್ಗದಿಂದೊಡಗೂಡಿ, ಕುಲಭೂಷಣವೆನಿಸಿರುವ ಕನ್ಯಾರೂಪವಾದ ಆಭರಣವನ್ನೂ ವಿಧಿಪ್ರಕಾರವಾಗಿ ಒಪ್ಪಿಸಿದನು. ಆಗಲಾ ಕುಶ ಕುವಲಯೇಶನು–ಪ್ರಜ್ವಲಿಸುತ್ತಲಿರುವ ಅಗ್ನಿಯ ಇದಿರಿನಲ್ಲಿ ಸಹಧರ್ಮಾಚರಣೆಗಾಗಿ ಊರ್ಣಾಮಂಗಳಸೂತ್ರದಿಂದ ಬೆಳಗುತ್ತಲಿರುವ ಕುಮುದ್ವತಿಯ ಪಾಣಿಯನ್ನು ಪರಿಗ್ರಹಿಸಿದನು ದಿವ್ಯಮಂಗಳವಾದ್ಯಧ್ವನಿಯು – ದಿಗಂತಗಳಲ್ಲಿ ಹರಡುತ್ತಲಿದ್ದಿತು. ಸುವಾಸನೆಯಿಂದ ಅಚ್ಚರಿಯೆನಿಸುವಂತೆ ಮೇಘಗಳು ಮಳೆಗರೆಯುತ್ತಲಿದ್ದುವು.

ಇಂತು ಕುಮುದನು ಮೂಲೋಕದೊಡೆಯನೆನಿಸಿದ ಶ್ರೀರಾಮನಿಗೆ ಔರಸಪುತ್ರನಾದ ಮೈಥಿಲೇಯನನ್ನೂ, ಕುಶಭೂಮಿಪಾಲನು – ತಕ್ಷಕನಿಗೆ ಐದನೆಯ ಮಗನಾದ ಕುಮುದನಾಗನನ್ನೂ ಬಂಧುವನ್ನಾಗಿ ಪಡೆದು, ಬಳಿಕ ಆ ಇಬ್ಬರಲ್ಲೊಬ್ಬನಾದ ಕುಮುದನು ತನ್ನ ತಂದೆಯ ಮೂಲಕ ಹಗೆಯಾದ ಗರುಡನಿಂದ ಭಯವಿಲ್ಲದಂತೆ ವೈಷ್ಣವಾಂಶನಾದ ಕುಶನಿಂದ ಅಭಯವನ್ನು ಹೊಂದಿ ಹೊರಟುಹೋದನು. ಎರಡನೆಯವನಾದ ಕುಶ ಭೂಪಾಲನೂ – ಕುಮುದನ ಅಪ್ಪಣೆಯಿಂದ ತನ್ನ ಭೂಮಿಯನ್ನು ಸರ್ಪಭಯವಿಲ್ಲದುದನ್ನಾಗಿ ಮಾಡಿಕೊಂಡು ಪುರಜನಪ್ರಿಯನೆನಿಸಿ ನಾಡಿನಾಳ್ವಿಕೆಗಾಗಿ ತೆರಳಿದನು.

****

ಹದಿನೇಳನೆಯ ಅಧ್ಯಾಯ

ಅತಿಥಿ ರಾಜ್ಯಭಾರ

ಕಂ॥ ಅತಿಥಿ ಕುಶನಾಗೆಯಿಂದ್ರಂ!
ಗತಿಥಿಯೆನಿಪ್ಪವನ ಪುತ್ರ ನೀ ವಸುಮತಿಯಂ ॥
ಅತುಳಯಶಂಬಡೆದಾಳ್ದಂ ।
ಕ್ರತುಗಳನೆಸಗುತ್ತೆ ತಣಿಸಿ ಸುರಭೂಸುರರಂ ॥

ರಾತ್ರಿಯ ಕೊನೆಯ ಭಾಗವಾದ ಬೆಳಗಿನಜಾವದಲ್ಲಿ ಬುದ್ಧಿಯು ಲವಲವಿಕೆಯನ್ನು ಪಡೆವಂತೆ ಕುಮುದ್ವತೀ ದೇವಿಯು ಆ ಕಕುತ್‌ಸ್ಥ ವಂಶೋತ್ಪನ್ನನಾದ ಕುಶಮಹಾರಾಜನಿಂದ ಅತಿಥಿ, ಎಂಬ ಸುಪುತ್ರನನ್ನು ಪಡೆದಳು. ಆ ಅತಿಥಿಯು ತಂದೆಯು ಸುಶಿಕ್ಷೆಯಲ್ಲಿ ಬಳೆದವನಾದ ಕಾರಣ ಮಹಾತೇಜೋರಾಶಿಯಾದ ಸೂರ್ಯನು ಪ್ರಪಂಚದ ಉತ್ತರ ಮತ್ತು ದಕ್ಷಿಣ ಭಾಗಗಳೆರಡನ್ನೂ ತನ್ನ ಕಿರಣಗಳಿಂದ ಪರಿಶುದ್ಧಿ ಮಾಡುವಂತೆ, ತನ್ನ ಸದಾಚಾರಮಹಿಮೆಯಿಂದ ತಂದೆಯ ಕುಲವನ್ನೂ, ತಾಯಿಯ ಕುಲವನ್ನೂ ಶುದ್ಧವಾಗಿ ಮಾಡಿದನು. ನೀತಿಶಾಸ್ತ್ರಸಂಪನ್ನನಾದ ಕುಶರಾಜನು ಮೊದಲು ತನ್ನ ಮಗನಿಗೆ ಕುಲವಿದ್ಯೆಯಾದ ಆನ್ವೀಕ್ಷೀತ್ರಯೀ, ವಾರ್ತಾ, ದಂಡನೀತಿ ಮೊದಲಾದ ಶಾಸ್ತ್ರಗಳನ್ನು ಚೆನ್ನಾಗಿ ಕಲಿಸಿ, ತರುವಾಯ ಕುಲೀನೆಯರಾದ ಕ್ಷತ್ರಿಯಕನ್ಯೆಯರನ್ನು ಪಾಣಿಗ್ರಹಣ ಮಾಡಿಸಿದನು. ಕುಲೀನನಾಗಿಯೂ, ಪರಾಕ್ರಮಿಯಾಗಿಯೂ, ಜಿತೇಂದ್ರಿಯನಾಗಿಯೂ ಇರುವ ಕುಶಮಹಾರಾಜನು, ಎಲ್ಲಾ ವಿಷಯದಲ್ಲಿಯೂ ತನ್ನಂತೆಯೇ ಇರುವ ಮಗನನ್ನು ನೋಡಿ, ಒಬ್ಬನಾಗಿದ್ದ ತನ್ನನ್ನು ಇಬ್ಬರೆಂದು ಭಾವಿಸಿದನು. ತರುವಾಯ ಕುಶನು, ತನ್ನವಂಶದ ರಾಜರೆಲ್ಲರಿಗೂ ಪೂರ್ವದಿಂದ ಬಂದಿರುವ ಸಂಪ್ರದಾಯದಂತೆ ಇಂದ್ರನಿಗೆ ಸಹಾಯಾರ್ಥವಾಗಿ ಸ್ವರ್ಗಕ್ಕೆ ತೆರಳಿ ದುರ್ಜಯನಾದ ದುರ್ಜಯನೆಂಬ ರಾಕ್ಷಸನನ್ನು ಯುದ್ಧದಲ್ಲಿ ಕೊಂದನು. ನಾಗರಾಜನಾದ ಕುಮುದನ ಪುತ್ರಿಯಾದ ಕುಮುದ್ವತಿಯು, ಲೋಕಕ್ಕೆ ಆಹ್ಲಾದಕರನಾಗಿಯೂ, ಕುಮುದಪುಷ್ಪಗಳಿಗೆ ಆನಂದದಾಯಕನಾಗಿಯೂ, ಇರುವ

ಚಂದ್ರನನ್ನು ಬೆಳ್ದಿಂಗಳು ಕೂಡಿರುವಂತೆ, ಕುಶನನ್ನು ಹಿಂಬಾಲಿಸಿ ತಾನೂ ಸ್ವರ್ಗಲೋಕಕ್ಕೆ ಹೋಗಿರಲು, ಕುಶನು ಯುದ್ಧದಲ್ಲಿ ಜಯಶಾಲಿಯಾದುದರಿಂದ, ದೇವೇಂದ್ರನ ಅರ್ಧಸಿಂಹಾಸನವನ್ನು ಪಡೆದನು. ಕುಮುದ್ವತಿಯು ಇಂದ್ರಪತ್ನಿಯಾದ ಶಚೀದೇವಿಯ ಸಖಿಯಾಗಿ ಪಾರಿಜಾತಾದಿ ಕಲ್ಪವೃಕ್ಷಗಳಲ್ಲಿ ಶಚಿಯಂತೆ ತಾನೂ ಭಾಗಕ್ಕೆ ಅರ್ಹಳಾದಳು.

ಕುಶನ ಮಂತ್ರಿಗಳು – ಬಹುಕಾಲವಾದರೂ ಯುದ್ಧಾರ್ಥವಾಗಿ ಸ್ವರ್ಗಕ್ಕೆ ಹೋಗಿರುವ ತಮ್ಮ ರಾಜದಂಪತಿಗಳು ಬಾರದೆ ಹೋದುದನ್ನು ಕಂಡು, ಕುಶನು ಮೊದಲೆ ಅಪ್ಪಣೆ ಮಾಡಿದ್ದಂತೆ ಆತನ ಪುತ್ರನಾದ ಅತಿಥಿಯನ್ನು ಪಟ್ಟಾಭಿಷಿಕ್ತನನ್ನಾಗಿ ಮಾಡಿ ರಾಜ್ಯದಲ್ಲಿ ನಿಲ್ಲಿಸಿದರು. ಪಟ್ಟಾಭಿಷೇಕ ಮಂಟಪವನ್ನು ಕಟ್ಟಿಸುವುದಕ್ಕಾಗಿ ಶಿಲ್ಪಶಾಸ್ತ್ರ ನಿಪುಣರನ್ನು ಕರೆಯಿಸಿ ಮಂತ್ರಿಗಳು ಆಜ್ಞೆಮಾಡಲು, ಅವರು ನಾಲ್ಕು ದಿವ್ಯಸ್ತಂಭಗಳಿಂದಲೂ, ದೊಡ್ಡದಾದ ಜಗುಲಿಯಿಂದಲೂ, ರಮ್ಯವಾಗಿರುವ ಭದ್ರಮಂಟಪವನ್ನು ನೂತನರೀತಿಯಿಂದ ನಿರ್ಮಿಸಿದರು. ಆ ಭದ್ರಮಂಟಪದಲ್ಲಿರುವ ವೇದಿಕೆಯಲ್ಲಿ ಭದ್ರಪೀಠದ ಮೇಲೆ ಅತಿಥಿಯನ್ನು ಕುಳ್ಳಿರಿಸಿ ಸುವರ್ಣಕುಂಭಗಳಲ್ಲಿ ತರಿಸಿರುವ ತೀರ್ಥೋದಕಗಳಿಂದ ಮಂತ್ರಿಗಳೆಲ್ಲರೂ ಅಭಿಷೇಕಮಾಡಿದರು. ಆ ಕಾಲದಲ್ಲಿ ಮೃದುಮಧುರ ಗಂಭೀರವಾಗಿ ಮೊಳಗುತ್ತಿದ್ದ ಪುಷ್ಕರವೇ ಮೊದಲಾದ ಶುಭವಾದ್ಯಗಳು ಅತಿಥಿಗೆ ಮುಂದೆ ಶುಭಪರಂಪರೆಗಳನ್ನು ಸೂಚಿಸುವಂತಿದ್ದುವು. ಗರಿಕೆ, ಯವಧಾನ್ಯದ ಮೊಳಕೆ, ಅರಳಿಯ ತೊಗಟೆ, ಎಳೆಯ ಚಿಗುರು, ಇಪ್ಪೆಯ ಹೂ, ಕಮಲಗಳು, ಮೊದಲಾದವುಗಳಿಂದ, ಜ್ಞಾತಿವೃದ್ಧರು ರಕ್ಷಾರ್ಥವಾಗಿಯೂ, ಮಂಗಳಾರ್ಥವಾಗಿಯೂ ಆರತಿಗಳನ್ನೆತ್ತಿದರು. ಪುರೋಹಿತರೇ ಮೊದಲಾದ ಬ್ರಾಹ್ಮಣರು– ಜಯಶೀಲಗಳಾದ, ಅಥರ್ವಣಮಂತ್ರಗಳಿಂದ ಆ ಜಯಶೀಲನಾದ ಅತಿಥಿಗೆ ಮೊದಲು ಅಭಿಷೇಕವನ್ನು ಮಾಡಿದರು.

ಅತಿಥಿಯ ತಲೆಯಮೇಲೆ ಸುರಿಯುತ್ತಿರುವ ಅಭಿಷೇಕ ಜಲರಾಶಿಯು– ತ್ರಿಪುರಸಂಹಾರಿಯಾದ ಪರಮೇಶ್ವರನ ಮಸ್ತಕದಲ್ಲಿರುವ ಗಂಗಾಪ್ರವಾಹದಂತೆ ಕಂಗೊಳಿಸುತ್ತಿದ್ದಿತು. ಆಗ ಸ್ತುತಿಪಾಠಕರು– ಬಿರುದಾವಳಿಗಳೊಡನೆ ಹೊಗಳುತ್ತಿರಲು, ವರ್ಷಾಕಾಲದಲ್ಲಿ ವಿಜೃಂಭಿಸುತ್ತಿರುವ ಮೇಘಮಂಡಲವನ್ನು ನೋಡಿ ಚಾತಕಪಕ್ಷಿಗಳು ಅಭಿನಂದಿಸುವಂತೆ, ಎಲ್ಲರ ನಿರೀಕ್ಷಣೆಗೂ ರಾಜಪುತ್ರನು ಪಾತ್ರನಾಗಿದ್ದನು. ದಿವ್ಯಮಂತ್ರಪೂತಗಳಾದ ಉದಕಗಳಿಂದ ಅಭಿಷಿಕ್ತನಾದ ಅತಿಥಿಯ ತೇಜಸ್ಸು, ಮಳೆಯು ಸುರಿಯುತ್ತಿರುವಾಗ ಮಿಂಚು ಹೆಚ್ಚಾಗಿ ಹುಟ್ಟಿ ಹೊಳೆಯುವಂತೆ ಮತ್ತಷ್ಟು ಅಭಿವೃದ್ಧಿಯನ್ನು ಹೊಂದುತ್ತಿತ್ತು. ಪಟ್ಟಾಭಿಷೇಕವಾದಮೇಲೆ ಬಹುಮಂದಿ ಗೃಹಸ್ಥಾಶ್ರಮಿಗಳಿಗೆ, ಅವರು ಬೇಕಾದಷ್ಟು ದಾನ ದಕ್ಷಿಣೆಗಳಿಂದ ಕೂಡಿದ ಯಜ್ಞವನ್ನು

ಮಾಡುವುದಕ್ಕೆ ಎಷ್ಟು ಹಣವು ಬೇಕಾಗುತ್ತದೆಯೋ ಅಷ್ಟು ದ್ರವ್ಯವನ್ನೂ ದಾನಮಾಡಿದನು. ಆಗ ಬ್ರಾಹ್ಮಣರು ಮಾಡಿದ ಆಶೀರ್ವಾದಗಳು ತತ್ಕಾಲ ಫಲಕಾರಿಗಳಾದುದರಿಂದ ಈ ಅತಿಥಿಯ ಜನ್ಮಾಂತರ ಪುಣ್ಯವಿಶೇಷಗಳಿಂದ ಉಂಟಾದ ರಾಜ್ಯಲಾಭ ಮೊದಲಾದ ಫಲಗಳನ್ನು ತಮ್ಮ ಮಹಿಮೆಯಿಂದ ತಿರಸ್ಕರಿಸುವಂತಿದ್ದವು.

ಆ ಕಾಲದಲ್ಲಿ ಅತಿಥಿಯು ಸಂತೋಷ ಸೂಚನಾರ್ಥವಾಗಿ ಕಾರಾಗೃಹದಲ್ಲಿ ನಿರ್ಬಂಧದಲ್ಲಿದ್ದವರನ್ನೆಲ್ಲಾ ಬಿಡಿಸಿದನು. ಮರಣದಂಡನೆಗೆ ಅರ್ಹರಾಗಿದ್ದವರನ್ನು ಮನ್ನಿಸಿ ಬಿಟ್ಟುಬಿಟ್ಟನು. ಭಾರವನ್ನು ಹೊತ್ತು ಜೀವಿಸುತ್ತಿದ್ದ ಎತ್ತು ಮೊದಲಾದ ಪ್ರಾಣಿಗಳು ಭಾರವನ್ನು ಹೊರುವುದನ್ನು ತಪ್ಪಿಸಿದನು. ಕರುಗಳಿಗೆ ತೃಪ್ತಿಯಾಗಲೆಂದು ಹಸುಗಳಲ್ಲಿ ಹಾಲನ್ನು ಕರೆಯದಂತೆ ಬಿಡಿಸಿದನು. ಪುರದಲ್ಲಿ ಕ್ರೀಡಾರ್ಥವಾಗಿ ಪಂಜರದಲ್ಲಿಟ್ಟುಕೊಂಡಿದ್ದ ಶುಕಶಾರಿಕಾಪಕ್ಷಿಗಳನ್ನು ಕೂಡ ಸ್ವೇಚ್ಛೆಯಾಗಿ ಹಾರಾಡುವಂತೆ ಬಿಡಲು ಅಪ್ಪಣೆಮಾಡಿದನು. ಅವು ಬಂಧಮೋಚನೆಯನ್ನು ಪಡೆದು ಮನಬಂದೆಡೆಗಳಲ್ಲಿ ಸಂಚರಿಸುತ್ತಿದ್ದವು. ಬಳಿಕ ಅತಿಥಿಯು ತನ್ನ ಪ್ರಸಾದದ ಒಂದು ಭಾಗದಲ್ಲಿದ್ದ ದಂತದ ಪೀಠದಮೇಲೆ ಅಲಂಕಾರಮಾಡಿಸಿಕೊಳ್ಳುವುದಕ್ಕಾಗಿ ಕುಳಿತುಕೊಂಡನು. ಅಲಂಕಾರಮಾಡತಕ್ಕವರು ಕೈಗಳನ್ನು ತೊಳೆದುಕೊಂಡು ಅನೇಕ ಸುವಾಸನಾಸಾಮಗ್ರಿಗಳಿಂದ ಆತನ ಕೇಶಪಾಶವನ್ನು ಶೋಧನೆಮಾಡಿ, ಗಂಧ, ಪುಷ್ಪಾದಿಗಳಿಂದ ಅವನಿಗೆ ಅಲಂಕಾರಮಾಡಿದರು. ಪುಷ್ಪಮಾಲಿಕೆಯನ್ನು ಕೂದಲಿನಲ್ಲಿ ಸೇರಿಸಿಕಟ್ಟಿ, ಅದಕ್ಕೆ ಮುತ್ತಿನಸರವನ್ನು ಸುತ್ತಿ – ಆತನ ಮಸ್ತಕವನ್ನು ದೇದೀಪ್ಯಮಾನವಾದ ಪದ್ಮರಾಗಮಣಿಯಿಂದ ಅಲಂಕರಿಸಿದರು. ಘಮಘಮಿಸುತ್ತಿರುವ ಕಸ್ತೂರಿಯ ಗಂಧದಿಂದ ಅಂಗಲೇಪವನ್ನು ಮಾಡಿ, ಗೋರೋಚನದಿಂದ ಪತ್ರರಚನೆಯನ್ನೂ ಮಾಡಿದರು. ನವರತ್ನಖಚಿತವಾದ ದಿವ್ಯಾಭರಣಗಳನ್ನೂ, ಪುಷ್ಪಮಾಲಿಕೆಯನ್ನೂ, ಹಂಸಪಕ್ಷಿಗಳ ಚಿತ್ರದಿಂದ ಹೊಳೆಯುತ್ತಿರುವ ದುಕೂಲವನ್ನೂ ಧರಿಸಿ, ರಾಜ್ಯಲಕ್ಷ್ಮೀರಮಣನಾಗಿ, ಮನೋಹರವಾಗಿರುವ ಆ ಅತಿಥಿಯನ್ನು ಎಲ್ಲರೂ ದರ್ಶನಮಾಡುವ ಕುತೂಹಲವುಳ್ಳವರಾಗಿದ್ದರು. ಸುವರ್ಣ ದರ್ಪಣದಲ್ಲಿ ತನ್ನ ಅಲಂಕಾರವನ್ನು ನೋಡಿಕೊಳ್ಳುತ್ತಿದ್ದ ಆ ಅತಿಥಿಗೆ ಆತನ ಪ್ರತಿಬಿಂಬವು – ಮೇರುಶಿಖರದಲ್ಲಿ ಉದಿತನಾದ ಸೂರ್ಯನಲ್ಲಿ ಪ್ರತಿಬಿಂಬಿಸುತ್ತಿರುವ ಕಲ್ಪವೃಕ್ಷದ ನೆರಳಿನೋಪಾದಿಯಲ್ಲಿ ಪ್ರಕಾಶಿಸುತ್ತಿತ್ತು.

ರಾಜಶ್ರೇಷ್ಠನಾದ ಅತಿಥಿಯು – ಛತ್ರಚಾಮರಾದಿ ರಾಜಚಿಹ್ನೆಗಳನ್ನು ತಮ್ಮ ಕೈಯಲ್ಲಿ ಹಿಡಿದುಕೊಂಡು ಉಭಯಪಾರ್ಶ್ವಗಳಲ್ಲಿಯೂ ಪರಾಕ್ ಎಂದು ಜಯಶಬ್ದಗಳನ್ನು ಹೇಳುತ್ತಿರುವ ದಾಸಿಯರೊಡನೆ ಬಂದು ದೇವೇಂದ್ರನ ಸುಧರ್ಮ ಎಂಬ ಸಭೆಗೆ ಸದೃಶವಾದ ಸಭೆಯನ್ನು ಹೊಕ್ಕನು. ಅಲ್ಲಿ ಅಧಿರಾಜರುಗಳು

ನಮಸ್ಕರಿಸುತ್ತಿರುವಾಗ ಅವರ ಕಿರೀಟದಲ್ಲಿ ಕೆತ್ತಿರುವ ರತ್ನಗಳು ತಗುಲಿತಗುಲಿ ಗುರುತಾಗಿರುವ ಕೆಳಭಾಗವುಳ್ಳದ್ದಾಗಿಯೂ ಮೇಲ್ಕಟ್ಟಿನಿಂದ ರಮ್ಯವಾಗಿಯೂ ಇರುವ ತಂದೆಯ ಸಿಂಹಾಸನವನ್ನು ಹತ್ತಿದನು. ಮಂಗಳಕ್ಕೆ ನೆಲೆಯಾಗಿಯೂ, ವಿಸ್ತಾರವಾಗಿಯೂ, ಶ್ರೀವತ್ಸವೆಂಬ ಮಚ್ಚೆಯ ಆಕಾರದಿಂದ ಪ್ರಕಾಶಮಾನವಾಗಿಯೂ ಇರುವ ಆ ಸಭಾಮಂದಿರವು, ಅತಿಥಿಯಿಂದೊಡಗೂಡಿ ಕೌಸ್ತುಭರತ್ನದ ಕಾಂತಿಯಿಂದ ವ್ಯಾಪ್ತವಾದ ಶ್ರೀವತ್ಸವೆಂಬ ಗುರುತುಳ್ಳ ಶ್ರೀಮಹಾವಿಷ್ಣುವಿನ ವಕ್ಷಸ್ಥಲದಂತೆ ಹೊಳೆಯುತ್ತಿದ್ದಿತು.

ಅತಿಥಿಗೆ ಬಾಲ್ಯವಾದುದರಿಂದ ಮೊದಲು ಯೌವರಾಜ್ಯವನ್ನು ಹೊಂದಿ ಬಳಿಕ ಅಧಿರಾಜ ಪದವಿಯನ್ನೂ ಹೊಂದಿದನು. ಆಗ ರೇಖೆಯು ಕಡಿಮೆಯಾಗಿರೋಣದರಿಂದ ಮೊದಲು ಅರ್ಧಚಂದ್ರತ್ವವನ್ನು ಪಡೆದು, ಬಳಿಕ ಪೂರ್ಣತ್ವವನ್ನೂ ಹೊಂದಿ ಪ್ರಕಾಶಿಸುವ ಚಂದ್ರನಂತೆ ಹೊಳೆಯುತ್ತಿದ್ದನು. ಕಳಕಳಿಸುತ್ತಿರುವ ಮುಖದಿಂದಲೂ, ನಗೆಯೊಡನೆ ಆಡುತ್ತಿರುವ ಮಾತಿನಿಂದಲೂ, ಅವನನ್ನು ಸೇವಕರೆಲ್ಲರೂ ವಿಶ್ವಾಸವೇ ಮೂರ್ತೀಭವಿಸಿರುವಂತೆ ತಿಳಿದರು. ಇಂದ್ರ ಸಂಪತ್ತುಳ್ಳ ಅತಿಥಿಯು – ಕಲ್ಪವೃಕ್ಷಸಮಾನಗಳಾದ ಧ್ವಜಗಳಿಂದ ಮನೋಹರವಾಗಿರುವ ಆ ಅಯೋಧ್ಯಾಪುರವನ್ನು ಐರಾವತದಂತಿರುವ ಆನೆಯಮೇಲೆ ಕುಳಿತು ಸಂಚರಿಸುತ್ತಾ ಸ್ವರ್ಗದಂತೆ ಮಾಡಿದನು. ದೊರೆಯ ತಲೆಯಮೇಲೆ ಛತ್ರವನ್ನೂ ಎತ್ತಿಹಿಡಿಯಲು ಆ ಶ್ವೇತಚ್ಛತ್ರದ ನೆಳಲು, ಸಕಲಜಗತ್ತಿಗೂ ಉಂಟಾಗಿದ್ದ ಕುಶರಾಜನ ವಿಯೋಗದುಃಖದ ಸಂತಾಪವನ್ನು ಪರಿಹರಿಸುವಂತಿತ್ತು, ಪ್ರಜೆಗಳೆಲ್ಲರೂ ನವೀನರಾಜನ ಏಳಿಗೆಯನ್ನು ನೋಡಿ ಪೂರ್ವರಾಜನ ವಿಯೋಗದುಃಖವನ್ನು ಮರೆತರು. ಬೆಂಕಿಯು ಹೊಗೆಯಾಡಿದ ಮೇಲೆ ಉರಿಹುಟ್ಟುವುದು, ಸೂರ್ಯನು ಉದಯಿಸಿದಮೇಲೆ ಕಿರಣಗಳು ಹೊರಡುವವು. ತೇಜಸ್ಸುಗಳ ಉತ್ಪತ್ತಿಯು ಈ ರೀತಿಯಾಗಿ ಲೋಕಪ್ರಸಿದ್ಧವಾಗಿದೆ. ಇಂಥ ತೇಜಸ್ಸಿನ ವೃತ್ತಿಯ ಸ್ವಭಾವವನ್ನೂ ಅತಿಕ್ರಮಿಸಿ ಆತಿಥಿಯು ಗುಣಗಳೊಡನೆಯೇ ಹುಟ್ಟಿದನು. ಇದು ಅಪೂರ್ವವಾದದ್ದು.

ಪೌರನಾರಿಯರು ಪ್ರೀತಿಸೂಚಕವಾದ ಪ್ರಸನ್ನದೃಷ್ಟಿಯಿಂದ ನೋಡುತ್ತಿರಲು, ಶರತ್ಕಾಲದಲ್ಲಿ ಥಳಥಳಸುತ್ತಿರುವ ನಕ್ಷತ್ರಗಳಿಂದ ರಾತ್ರಿಗಳು ಧ್ರುವಮಂಡಲವನ್ನು ನೋಡುವಂತಿತ್ತು. ಪ್ರಶಸ್ತವಾದ ದೇವಾಲಯಗಳಲ್ಲಿ ಪೂಜೆಯನ್ನು ಹೊಂದುತ್ತಿರುವ ಅಯೋಧ್ಯಾಪುರದ ದೇವತೆಗಳೆಲ್ಲವೂ, ತನ್ನ ಅನುಗ್ರಹಕ್ಕೆ ಪಾತ್ರನಾದ ಅತಿಥಿಗೆ ಆಯಾ ಪ್ರತಿಮೆಗಳಲ್ಲಿ ನೆಲಸಿರುವ ತಮ್ಮ ಸಾನ್ನಿಧ್ಯಬಲದಿಂದ ಅನುಗ್ರಹಮಾಡಿದವು. ಅತಿಥಿಗೆ ಪಟ್ಟಾಭಿಷೇಕ ಮಾಡಿದ ಜಲದಿಂದ ನೆನದಿರುವ ಭದ್ರವೇದಿಕೆಯು

ಒಣಗುವದರೊಳಗಾಗಿ ಅವನ ಅಶಕ್ಯವಾದ ಪ್ರತಾಪವು ದಿಗಂತಗಳನ್ನು ವ್ಯಾಪಿಸಿತು. ಗುರುವಾದ ವಸಿಷ್ಠಮಹರ್ಷಿಯ ಮಂತ್ರಾಲೋಚನೆಗಳೂ, ಮಹಾಪರಾಕ್ರಮಿಯಾದ ಅತಿಥಿಯ ಬಾಣಗಳು ಈ ಎರಡೂ ಸೇರಲು ಲೋಕದಲ್ಲಿ ಅಸಾಧ್ಯವಾದ ಕಾರ್ಯವುಂಟೇ? ಎಲ್ಲವು ಸಾಧ್ಯವೇ ಆಗುತ್ತಿತ್ತು. ಪಕ್ಷಪಾತವಿಲ್ಲದೆ ಸರ್ವತ್ರ ಸಮಬುದ್ಧಿಯುಳ್ಳ ಸಾಮಾಜಿಕರನ್ನು ತನ್ನ ಸಭೆಯಲ್ಲಿ ನೇಮಿಸಿಕೊಂಡಿರುವ ಆ ಅತಿಥಿಯು ಕಕ್ಷಿ ಪ್ರತಿಕಕ್ಷಿಗಳ ಸಾಲತರುವುದು ಕೊಡುವುದು ಮೊದಲಾದವುಗಳಲ್ಲಿ ಅನುಮಾನಾಸ್ಪದವಾದ ವಿವಾದಗಳನ್ನು ತಾನೇ ವಿಚಾರಿಸಿ ತೀರ್ಮಾನಮಾಡುತ್ತಿದ್ದನು. ವ್ಯವಹಾರಗಳನ್ನು ವಿಚಾರಿಸಿದ ತರುವಾಯ ಪ್ರಸನ್ನವಾದ ಮುಖದಿಂದಲೇ ಭೃತ್ಯರಿಗೆ ತಮ್ಮ ಯಜಮಾನನಿಂದ ಇಷ್ಟಾರ್ಥಸಿದ್ಧಿಯುಂಟಾಗುವುದೆಂಬ ಭಾವನೆಯನ್ನು ಸೂಚಿಸಲು, ಕೂಡಲೆ ಅವರು ಯಾಚಿಸಿ ತಮ್ಮ ತಮ್ಮ ಕೋರಿಕೆಗಳನ್ನು ನೆರವೇರಿಸಿಕೊಳ್ಳುತ್ತಿದ್ದರು.

ಪ್ರಜೆಗಳು – ಶ್ರಾವಣಮಾಸದಿಂದ ನದಿಗಳು ಹೆಚ್ಚುವಂತೆ ತಮ್ಮ ರಾಜನಿಂದ ಪೋಷಣೆಯನ್ನು ಹೊಂದಿ ಅಭಿವೃದ್ಧಿಯನ್ನು ಪಡೆಯಲು, ಆ ನದಿಗಳೇ ಭಾದ್ರಪದಮಾಸದಲ್ಲಿ ಹೆಚ್ಚಾದ ಅಭಿವೃದ್ಧಿಯನ್ನುಂಟುಮಾಡುವಂತೆ ಅತಿಥಿಯ ಏಳಿಗೆಯಲ್ಲಿ ಪ್ರಜೆಗಳೆಲ್ಲರೂ ಬದ್ಧಾಧರರಾಗಿದ್ದರೂ, ತಾನು ಆಡಿದ ಮಾತನ್ನು ಎಂದಿಗೂ ತಪ್ಪುತ್ತಿರಲಿಲ್ಲ. ಕೊಟ್ಟಪದಾರ್ಥವನ್ನು ಪುನಃ ಅಪಹರಿಸುತ್ತಿರಲಿಲ್ಲ. ಇಂತಹ ದೃಢವ್ರತನಾದ ಅತಿಥಿಯು ಶತ್ರುರಾಜರನ್ನು ನಿರ್ಮೂಲಮಾಡುವೆನೆಂದು ಹೇಳಿ ಅವರನ್ನು ಜಯಿಸಿದ ತರುವಾಯ ಪುನಃ ಅವರ ರಾಜ್ಯವನ್ನು ಕಿತ್ತುಕೊಳ್ಳದೆ ಕರುಣೆಯಿಂದ ಅವರಿಗೇ ಕೊಡುತ್ತಿದ್ದುದರಿಂದ, ಈ ವಿಷಯದಲ್ಲಿ ಮಾತ್ರವೇ ಆಡಿದ ಮಾತನ್ನು ತಪ್ಪಿಹೋಗಿ ವ್ರತಭಂಗವನ್ನು ಪಡೆಯುತ್ತಿದ್ದನು. ವಯಸ್ಸು, ರೂಪ, ಐಶ್ವರ್ಯ ಇವುಗಳಲ್ಲಿ ಒಂದೊಂದೂ ಗರ್ವಕ್ಕೆ ಕಾರಣವೆಂದು ಬಲ್ಲವರು ಹೇಳುವರು. ಈ ಮೂರೂ ಒಟ್ಟಿಗೆ ಈ ರಾಜನಲ್ಲಿದ್ದರೂ, ಅವನ ಮನಸ್ಸಿನಲ್ಲಿ ಗರ್ವವು ಹುಟ್ಟಲಿಲ್ಲ. ಆದಕಾರಣ ಅತಿಥಿಯು ಮಹಾ ಜಿತೇಂದ್ರಿಯನೆಂಬುದಕ್ಕೆ ಯಾವ ಸಂದೇಹವೂ ಇಲ್ಲ. ಈ ಪ್ರಕಾರವಾಗಿ ಪ್ರಜೆಗಳ ಅನುರಾಗವು ದೊರೆಯಲ್ಲಿ ದಿನೇದಿನೇ ಬೆಳೆಯುತ್ತಾ ಬರಲು, ಅತಿಥಿಯು ಹೊಸದಾಗಿ ರಾಜನಾದವನಾದರೂ ಚೆನ್ನಾಗಿ ಬೇರುಗಳನ್ನು ಊರಿಕೊಂಡಿರುವ ಮಹಾ ವೃಕ್ಷದಂತೆ ಎಲ್ಲರಿಗೂ ಅಸಾಧ್ಯನಾಗಿದ್ದನು. ಶತ್ರುರಾಜರು ಬಹು ದೂರದಲ್ಲಿರತಕ್ಕವರು, ಮತ್ತು ಸದಾದ್ವೇಷಿಗಳಾಗಿರದೆಯೂ ಇರುವರು. ಆದಕಾರಣ ಈ ಬಾಹ್ಯಶತ್ರುಗಳನ್ನು ಬಿಟ್ಟು ಸರ್ವದಾ ಶತ್ರುತ್ವವನ್ನು ಸಾಧಿಸುತ್ತಾ ತನ್ನಲ್ಲಿಯೇ ಆವರಿಸಿಕೊಂಡಿರುವ ಅಂತಶ್ಶತ್ರುಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಆರುಮಂದಿಗಳನ್ನು ಮೊದಲು ಜಯಿಸಿದನು. ಇಂತಹ ಅಂತಃಶತ್ರುಗಳನ್ನೇ ಜಯಿಸಿರುವಾಗ ಬಾಹ್ಯಶತ್ರುಗಳ ಜಯವು

ಕಿಂಚಿತ್ಕರವಲ್ಲವೇ! ಲಕ್ಷ್ಮಿಯು ಸ್ವಭಾವದಿಂದ ಚಂಚಲಳಾದರೂ ಆಕೆಯ ಅನುಗ್ರಹವನ್ನೇ ಎದುರುನೋಡುತ್ತಾ ಕೃಪೆಗೆ ಪಾತ್ರನಾದ ಆ ಅತಿಥಿಯಲ್ಲಿ, ಒರೆಗಲ್ಲಿನಲ್ಲಿ ಸುವರ್ಣರೇಖೆಯಂತೆ ಸ್ಥಿರವಾಗಿ ನೆಲಸಿರುವಳು.

ಶೌರ್ಯರಹಿತವಾದ ನೀತಿಯು ಭಯವನ್ನುಂಟುಮಾಡುವುದು, ನೀತಿರಹಿತವಾದ ಶೌರ್ಯವು ವ್ಯಾಘ್ರಾದಿ ಕ್ರೂರಜಂತುಗಳ ಚೇಷ್ಟೆಯಾಗುವುದು. ಆದಕಾರಣ ಆ ಆತಿಥಿಯು ಶೌರ್ಯ, ನೀತಿಗಳೆರಡನ್ನೂ ಉಪಯೋಗಿಸಿ ಕಾರ್ಯಸಿದ್ಧಿಯನ್ನು ಪಡೆಯುತ್ತಿದ್ದನು. ಅತಿಥಿಯು ಗೂಢಚಾರರೆಂಬ ಕಿರಣಗಳನ್ನು ತನ್ನ ದೇಶದಲ್ಲೆಲ್ಲಾ ಪ್ರಸರಿಸಿದ್ದದ್ದರಿಂದ ಮೋಡದಿಂದ ಆವರಿಸದ ಸೂರ್ಯನಂತೆ ಆತನ ದೇಶದಲ್ಲಿ ಆತನು ಕಾಣದ ಸಂಗತಿಗಳೇ ಇರಲಿಲ್ಲ. 'ರಾಜಾನಶ್ಚಾರಚಕ್ಷುಷಃ' ಎಂಬ ನೀತಿಯನ್ನನುಸರಿಸಿ ತನ್ನ ಕಣ್ಣುಗಳಂತಿರುವ ಗೂಢಚಾರರಿಂದ ಎಲ್ಲವನ್ನೂ ತಿಳಿಯುತ್ತಿದ್ದನು. ಹಗಲು ರಾತ್ರಿಗಳಲ್ಲಿ ಮಾಡಿರುವ ಕಾಲವಿಭಾಗಗಳಲ್ಲಿ ದೊರೆಯು ಯಾವಯಾವ ಕಾರ್ಯಗಳನ್ನು ಮಾಡಬೇಕೆಂದು ಮನ್ವಾದಿಸ್ಮೃತಿಗಳಲ್ಲಿ ಹೇಳಿದೆಯೋ ಅದೇ ಮೇರೆಗೆ ಅತಿಥಿಯು ರಾಜಕಾರ್ಯಗಳನ್ನು ಆಲಸ್ಯವಿಲ್ಲದೆ ಗೊತ್ತಾಗಿ ತಪ್ಪದೆ ನಡೆಯಿಸುತ್ತಿದ್ದನು. ಅವನು ಮಂತ್ರಿಗಳೊಡನೆ ಪ್ರತಿದಿನವೂ ಮಂತ್ರಾಲೋಚನೆಯನ್ನು ಮಾಡುತ್ತಿದ್ದನು. ಯಾವಾಗಲೂ ಆಲೋಚನೆಯನ್ನು ನಡೆಯಿಸುತ್ತಿದ್ದರೂ, ಆ ಭಾವಗಳು ಮುಖವಿಕಾರಾದಿಗಳಲ್ಲಿ ಕಾಣಬಾರದೆ ಇದ್ದುದರಿಂದ ಎಂದಿಗೂ ಯಾರಿಗೂ ಗೋಚರವಾಗದೆ, ಗೂಢವಾಗಿರುತ್ತಿತ್ತು. ಈ ಅತಿಥಿಯು ಕ್ಲುಪ್ತಕಾಲಕ್ಕೆ ಸರಿಯಾಗಿ ಮಲಗುತ್ತಿದ್ದರೂ, ಸ್ವಜನರಲ್ಲಿಯೂ, ಶತ್ರುಗಳಲ್ಲಿಯೂ ಮಂತ್ರಿ ಮೊದಲಾದ ಅಧಿಕಾರಿಗಳಲ್ಲಿಯೂ ಗುಟ್ಟಾಗಿ ಸಮಾಚಾರವನ್ನು ತಿಳಿದುಬರಲು ಒಬ್ಬರಿಗೊಬ್ಬರು ತಿಳಿಯದಂತೆ ಕಳುಹಿಸಿದ್ದ ಬೇಹುಗಾರರನ್ನು ವಿಚಾರಿಸುವದಕ್ಕಾಗಿ ಎಚ್ಚರವಾಗಿಯೇ ಇರುತ್ತಿದ್ದನು. ಶತ್ರುಗಳನ್ನು ನಿರ್ಬಂಧದಲ್ಲಿಟ್ಟುಕೊಂಡಿದ್ದವನಾಗಿದ್ದರೂ, ಶತ್ರುಭಯವು ಸ್ವಲ್ಪವಾದರೂ ಇಲ್ಲದಿದ್ದರೂ, ಜಯಿಸುವುದಕ್ಕೆ ಅಸಾಧ್ಯವಾದ ಕೋಟೆಗಳನ್ನಿಟ್ಟುಕೊಂಡಿದ್ದನು, ಆದರೇನು? ಆನೆಗಳನ್ನು ಧ್ವಂಸಮಾಡುವ ಸಾಮರ್ಥ್ಯವುಳ್ಳ ಸಿಂಹವು ಗುಹೆಯಲ್ಲಿ ಮಲಗಿದ್ದ ಮಾತ್ರಕ್ಕೆ ಶತ್ರುಭೀತಿಯಿಂದ ಹೊಕ್ಕಿರುತ್ತದೆಂದು ಹೇಳುವುದಕ್ಕಾದೀತೆ? ಮಂಗಳಕರಗಳಾಗಿಯೋ, ಜಾಗರೂಕತೆಯಿಂದ ಸರಿಯಾದ ಪ್ರಯತ್ನಗಳನ್ನು ಮಾಡುತ್ತಿರುವುದರಿಂದ ನಿರುಪಾಧಿಕಗಳಾಗಿಯೂ ಇರುವ ಆ ಅತಿಥಿಯ ಕಾರ್ಯಗಳು ಹೊಡೆಯಾದ ತೆನೆಗಳಲ್ಲಿ ಬತ್ತದ ಕಾಳು ಬಲಿತು ಫಲವನ್ನು ಕೊಡುವಂತೆ ಗುಟ್ಟಾಗಿ ಫಲಕಾರಿಗಳಾಗುತ್ತಿದ್ದವು. ಸಮುದ್ರದಲ್ಲಿ ನೀರು ಎಷ್ಟೇ ಹೆಚ್ಚಿದರೂ ನದೀಮುಖಗಳ ಮಾರ್ಗವಾಗಿಯೇ ಹೊರಕ್ಕೆ ಬರುವುದಲ್ಲದೆ ಬೇರೆ ಮಾರ್ಗದಿಂದ ಹೇಗೆ ನುಗ್ಗುವುದಿಲ್ಲವೋ ಹಾಗೆ ಅತಿಥಿಯು ಎಷ್ಟು ಅಭಿವೃದ್ಧಿಯನ್ನು ಪಡೆದರೂ ಸನ್ಮಾರ್ಗಪ್ರವರ್ತಕನಾಗಿದ್ದನೇ

ಹೊರತು ದುರ್ಮಾರ್ಗದಲ್ಲಿ ಪ್ರವರ್ತಿಸುತ್ತಿರಲಿಲ್ಲ. ಪ್ರಜೆಗಳು ಲೋಕವ್ಯವಹಾರಗಳಲ್ಲಿ ಅಭಿರುಚಿಯಿಲ್ಲದೆ ವೈರಾಗ್ಯವನ್ನು ಹೊಂದಿದರೂ ಆ ವೈರಾಗ್ಯವನ್ನು ತತ್‌ಕ್ಷಣದಲ್ಲಿಯೇ ಹೋಗಲಾಡಿಸುವ ಸಾಮರ್ಥ್ಯವುಳ್ಳವನಾದರೂ, ರಾಜ್ಯದ ಏಳಿಗೆಗೆ ಕುಂದನ್ನುಂಟುಮಾಡತಕ್ಕ ಆ ವೈರಾಗ್ಯವು ಪ್ರಜೆಗಳಲ್ಲಿ ತಲೆ ಹಾಕುವುದಕ್ಕೂ ಅವಕಾಶವಿಲ್ಲದಂತೆಮಾಡಿ ಎಲ್ಲರನ್ನೂ ಕುತೂಹಲವುಳ್ಳವರಾಗುವ ಹಾಗೆಮಾಡಿ ಪ್ರೋತ್ಸಾಹಪಡಿಸುತ್ತಿದ್ದನು.

ಎಲ್ಲವನ್ನೂ ಸುಡುವ ಸಾಮರ್ಥ್ಯವುಳ್ಳ ಕಾಳ್ಗಿಚ್ಚು ತನಗೆ ವಾಯುವಿನ ಸಹಾಯವಿದ್ದರೂ ನೀರನ್ನೂ ಹೇಗೆ ಸುಡುವುದಕ್ಕೆ ಅಪೇಕ್ಷಿಸುವುದಿಲ್ಲವೋ ಹಾಗೆ ಈ ಅತಿಥಿಯು ಬಲಿಷ್ಠನಾದರೂ ತನಗಿಂತ ಹೀನಬಲರಲ್ಲಿ ದಂಡಯಾತ್ರೆ ಮಾಡುತ್ತಿದ್ದನೇ ಹೊರತು, ತನಗಿಂತ ಶಕ್ತಿವಂತರಮೇಲೆ ಯುದ್ಧಕ್ಕೆ ಹೋಗುತ್ತಿರಲಿಲ್ಲ, ಧರ್ಮಾರ್ಥಕಾಮಗಳೆಂಬ ಮೂರು ಪುರುಷಾರ್ಥಗಳಲ್ಲಿಯೂ, ಸಮಾನವಾದ ಪ್ರವೃತ್ತಿಯುಳ್ಳವನಾಗಿದ್ದನಾದಕಾರಣ ಅರ್ಥಕಾಮಗಳಿಂದ ಧರ್ಮಕ್ಕೂ, ಧರ್ಮದಿಂದ ಅರ್ಥಕಾಮಗಳಿಗೂ, ಕಾಮದಿಂದ ಅರ್ಥಕ್ಕೂ, ಅರ್ಥದಿಂದ ಕಾಮಕ್ಕೂ ಬಾಧೆಯುಂಟಾಗದಂತೆ ಇತ್ತು. ಮಿತ್ರರು ಹೀನಸ್ಥಿತಿಯಲ್ಲಿದ್ದರೆ ತನಗೆ ಅವರಿಂದ ಯಾವ ಸಹಾಯವೂ ದೊರೆಯಲಾರದು, ಉನ್ನತಸ್ಥಿತಿಯಲ್ಲಿದ್ದರೆ ತನ್ನೊಡನೆ ವಿರೋಧವನ್ನು ಬೆಳೆಯಿಸಿ ಅಪಕಾರಮಾಡುತ್ತಾರೆ. ಆದಕಾರಣ ಈ ಮರ್ಮವನ್ನು ಬಲ್ಲ ಆ ಅತಿಥಿಯು ಮಧ್ಯಮಸ್ಥಿತಿಯಲ್ಲಿರತಕ್ಕವರನ್ನೇ ತನಗೆ ಮಿತ್ರರನ್ನಾಗಿ ಮಾಡಿಕೊಳ್ಳುತ್ತಿದ್ದನು.

ಶಕ್ತಿ, ದೇಶ, ಕಾಲ ಮೊದಲಾದವುಗಳಿಂದ ತನಗೂ ಶತ್ರುವಿಗೂ ಇರುವ ಬಲಾಬಲಗಳನ್ನು ನಿಶ್ಚಯಿಸಿ, ಶತ್ರುವಿಗಿಂತ ತಾನು ಬಲಿಷ್ಠನಾಗಿ ತೋರಿದರೆ ದಂಡಯಾತ್ರೆ ಮಾಡುತ್ತಿದ್ದನು. ಇಲ್ಲದಿದ್ದರೆ ಸುಮ್ಮನಾಗುತ್ತಿದ್ದನು. ತನ್ನನ್ನು ಎಲ್ಲರೂ ಆಶ್ರಯಿಸಿಕೊಂಡಿರಬೇಕೆಂಬ ಭಾವನೆಯಿಂದ ಭಂಡಾರವನ್ನು ಹೆಚ್ಚಿಸುತ್ತಿದ್ದನೇ ಹೊರತು ದುರಾಶೆಯಿಂದಲ್ಲ. ತಮಗೆ ಜೀವನವಾದ ನೀರನ್ನು ಇಟ್ಟುಕೊಂಡಿರುವುದರಿಂದಲ್ಲವೇ ಚಾತಕಗಳು ಮೇಘಗಳನ್ನು ಸೇವಿಸುತ್ತವೆ: ಶತ್ರುಗಳು ಯುದ್ಧಾನುಕೂಲಕ್ಕಾಗಿ ಮಾಡಿಕೊಳ್ಳುತ್ತಿರುವ ಸೇತುಬಂಧನ ವಾರ್ತಾಶ್ರವಣ ಮೊದಲಾದ ಕಾರ್ಯಗಳಿಗೆ ವಿಘಾತವನ್ನುಂಟುಮಾಡಿ ಸ್ವಕಾರ್ಯದಲ್ಲಿ ಸಂಪೂರ್ಣಪ್ರಯತ್ನವನ್ನು ಮಾಡುತ್ತಿದ್ದನು.

ಶತ್ರುಗಳಲ್ಲಿ ರಂಧ್ರಾನ್ವೇಷಣೆ ಮಾಡುತ್ತಾ ತನ್ನ ನ್ಯೂನತೆಯನ್ನು ಶತ್ರುಗಳಿಗೆ ಗೋಚರವಾಗದಂತೆ ನೋಡಿಕೊಳ್ಳುತ್ತಿದ್ದನು. ದಂಡನೀತಿಜ್ಞನಾದ ಆ ಅತಿಥಿಯು ಪ್ರತಿನಿತ್ಯವೂ ತಮ್ಮ ತಂದೆಯಿಂದ ಪೋಷಣೆಯನ್ನು ಹೊಂದಿದ್ದಾಗಿಯೂ,

ಶಸ್ತ್ರವಿದ್ಯೆಯಲ್ಲಿ ಸಮರ್ಥವಾಗಿಯೂ, ಯುದ್ಧಕ್ಕೆಸಿದ್ಧವಾಗಿಯೂ ಇರುವ ತನ್ನ ಸೈನ್ಯವನ್ನು ತನ್ನ ದೇಹದಂತೆಯೇ ಭಾವಿಸಿದ್ದನೇ ಹೊರತು ಬೇರಾಗಿ ತಿಳಿಯಲಿಲ್ಲ. ಈ ಅತಿಥಿಯಲ್ಲಿರುವ ಶಕ್ತಿತ್ರಯಗಳನ್ನು ಸರ್ಪದ ತಲೆಯಲ್ಲಿರುವ ರತ್ನದಂತೆ ಇತರರು ಅಪಹರಿಸಲಾರರು. ಶತ್ರುಗಳ ಶಕ್ತಿತ್ರಯವನ್ನು ಇವನು ಸೂಜಿಕಲ್ಲು ಕಬ್ಬಿಣವನ್ನು ಸೆಳೆಯುವಂತೆ ಎಳೆಯುತ್ತಿದ್ದನು. ಇವನ ದೇಶದಲ್ಲಿರುವ ವರ್ತಕರು ಬಾವಿಗಳಮೇಲೆ ಸಂಚರಿಸುವಂತೆ ನದಿಗಳಲ್ಲಿಯೂ ಉಪವನಗಳಂತೆ ಕಾಡುಗಳಲ್ಲಿಯೂ, ಮನೆಗಳಂತೆ ಬೆಟ್ಟಗಳಲ್ಲಿಯೂ, ವ್ಯಾಪಾರಕ್ಕಾಗಿ ನಿರ್ಭಯವಾಗಿ ಸಂಚರಿಸುತ್ತಿದ್ದರು. ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಗಳುಳ್ಳ ತಪಸ್ವಿಗಳ ತಪಸ್ಸನ್ನೂ ಬ್ರಾಹ್ಮಣಾದಿ ನಾಲ್ಕು ವರ್ಣಗಳುಳ್ಳ ಪ್ರಜೆಗಳಲ್ಲಿನ ದ್ರವ್ಯವನ್ನೂ, ಬಾಧೆಯಿಲ್ಲದೆ ಸಂರಕ್ಷಣೆ ಮಾಡುತ್ತಾ ಆ ತಪಸ್ಸಿನ ಮತ್ತು ಆ ದ್ರವ್ಯದ ಆರನೆಯ ಒಂದುಭಾಗಕ್ಕೆ ತಾನು ಭಾಗಿಯಾಗಿದ್ದನು. ಭೂಮಿಯು ಆತನು ಮಾಡಿದ ರಕ್ಷಣೆಗನುಸಾರವಾಗಿ, ಗಣಿಗಳಿಂದ ರತ್ನಗಳನ್ನೂ, ಕ್ಷೇತ್ರಗಳಿಂದ ಧಾನ್ಯವನ್ನೂ ವನಗಳಿಂದ ಆನೆಗಳನ್ನೂ ವೇತನವಾಗಿ ಕೊಡುತ್ತಿತ್ತು. ಆ ಅತಿಥಿಯು ಸಾಧಿಸಬೇಕಾದ ಕಾರ್ಯಗಳಲ್ಲಿ ತನಗಿರುವ ಸಂಧಿ, ವಿಗ್ರಹಾದಿ ಷಡ್ಗುಣಗಳನ್ನೂ ಮೂಲಭೃತ್ಯಾದಿ ಷಡ್ಬಲಗಳನ್ನೂ, ಆಯಾ ಸಂದರ್ಭಕ್ಕನುಸಾರವಾಗಿ ಯಾವಯಾವದನ್ನು ಉಪಯೋಗಿಸಬೇಕೋ ಅದನ್ನೇ ಪ್ರಯೋಗಿಸುತ್ತಿದ್ದನು. ಈ ಪ್ರಕಾರ ಕ್ರಮವಾಗಿ ಸಾಮ, ದಾನ, ಭೇದ, ದಂಡಗಳೆಂಬ ನಾಲ್ಕು ಉಪಾಯಗಳನ್ನೂ ದಂಡನೀತಿಗನುಸಾರವಾಗಿ ಪ್ರಯೋಗಿಸುತ್ತಿದ್ದದ್ದರಿಂದ ಮಂತ್ರಿ ಮೊದಲಾದ ಹದಿನೆಂಟುಮಂದಿ ಅಧಿಕಾರಿಗಳವರೆಗೂ ಆನೀತಿಗೆ ತಡೆಯಿಲ್ಲದೆ ಫಲವನ್ನು ಹೊಂದುತ್ತಿದ್ದನು. ಆ ಅತಿಥಿಯು ಕಪಟಯುದ್ಧವನ್ನು ಬಲ್ಲವನಾದರೂ ನ್ಯಾಯಮಾರ್ಗದಿಂದ ಯುದ್ಧಮಾಡುತ್ತಿದ್ದನು. ಜಯಲಕ್ಷ್ಮಿಯು ವೀರನನ್ನೇ ಸೇರುವ ಸ್ವಭಾವವುಳ್ಳವಳಾದುದರಿಂದ ಅಭಿಸಾರಿಕೆಯಾಗಿ ಇವನನ್ನು ಹುಡುಕಿಕೊಂಡುಬಂದು ಸೇರುತ್ತಿದ್ದಳು. ಶತ್ರುಗಳೆಲ್ಲರೂ ಇವನ ಪ್ರತಾಪದಿಂದಲೇ ಭಗ್ನರಾಗಿ ಹೋಗುತ್ತಿದ್ದುದರಿಂದ, ಮತ್ತಗಜದ ಮದಗಂಧದಿಂದಲೇ ಭಗ್ನಗಳಾಗಿರುವ ಶತ್ರುಗಜಗಳೊಡನೆ ಮದಗಜಕ್ಕೆ ಯುದ್ಧ ಪ್ರಸಕ್ತಿಯೇ ಇಲ್ಲದಿರುವಂತೆ ಅತಿಥಿಗೆ ಶತ್ರುಗಳೊಡನೆ ಯುದ್ಧವು ಲಭಿಸುವುದೇ ಅಪೂರ್ವವಾಗಿದ್ದಿತು. ಚಂದ್ರನೂ, ಸಮುದ್ರನೂ ಅಭಿವೃದ್ಧಿಯನ್ನು ಹೊಂದಿದಕೂಡಲೆ ಕ್ಷೀಣತೆಯನ್ನು ಪಡೆವರು, ಈ ಅತಿಥಿಯು ಹಾಗೆಯೇ ಅಭಿವೃದ್ಧಿಯನ್ನು ಪಡೆದರೂ ಅವರಂತೆ ಕ್ಷೀಣನಾಗದೆ ಅಭಿವೃದ್ಧನಾಗಿಯೇ ಇರುತ್ತಿದ್ದನು. ಬಹಳ ದರಿದ್ರರಾಗಿರುವ ಯಾಚಕರು ಅತಿಥಿಯ ಬಳಿಗೆ ಹೋಗಿ, ಸಮುದ್ರದ ಬಳಿಗೆ ಬಂದ ಮೇಘಗಳಂತೆ ಅವನ ಸಂಪೂರ್ಣ ದಾತೃಭಾವಕ್ಕೆ ಪಾತ್ರರಾಗುತ್ತಿದ್ದರು. ಸ್ತೋತ್ರಾರ್ಹವಾದ ಕಾರ್ಯಗಳನ್ನೇ ಮಾಡುತ್ತಿರುವನಾದುದರಿಂದ ಅನೇಕರು ಹೊಗಳುತ್ತಿದ್ದರು. ಅದರಿಂದ ಲಜ್ಜೆಪಟ್ಟು

ಸ್ತುತಿಮಾಡುವರನ್ನು ಅವನು ದ್ವೇಷಿಸುತ್ತಿದ್ದರೂ, ಆತನ ಕೀರ್ತಿಯು ಮತ್ತಷ್ಟು ಹೆಚ್ಚುತ್ತಿತ್ತು.

ಪ್ರಜೆಗಳಿಗೆ ದರ್ಶನಮಾತ್ರದಿಂದ ಪಾತಕಗಳನ್ನು ಪರಿಹರಿಸುತ್ತಲೂ, ನಿಶ್ಚಯವಾದ ವಸ್ತುಜ್ಞಾನವನ್ನುಂಟುಮಾಡೋದರಿಂದ ಅಂಧಕಾರಸದೃಶವಾದ ಅಜ್ಞಾನವನ್ನು ನಾಶಮಾಡುತ್ತಲೂ ಇರುವುದರಿಂದ ಅವರಿಗೆ ಸ್ವಾತಂತ್ರ್ಯವನ್ನು ಕಲ್ಪಿಸಿದನು. ಚಂದ್ರನ ಗುಣಗಳು ಕಮಲಗಳಲ್ಲಿಯೂ, ಸೂರ್ಯನ ಗುಣಗಳು ನೈದಿಲೆಗಳಲ್ಲಿಯೂ, ಪ್ರವೇಶಿಸಿ ಹಿತವನ್ನುಂಟುಮಾಡಲಾರವು. ಅತಿಥಿಯ ಗುಣಗಳು ಮಿತ್ರರಲ್ಲಿಯೂ, ಶತ್ರುಗಳಲ್ಲಿಯೂ ಹೃದಯಂಗಮವಾಗುತ್ತಿದ್ದವು. ಅಶ್ವಮೇಧಕ್ಕಾಗಿ ದಿಗ್ವಿಜಯವನ್ನಪೇಕ್ಷಿಸಿ ಮಾಡಿದ ಇವನ ಪ್ರಯತ್ನಗಳು ಪ್ರಾಯಶಃ ಪರರನ್ನು ವಂಚಿಸುವುದಕ್ಕಾಗಿಯೇ ಆಗಿದ್ದರೂ ಅದು ಅಧರ್ಮಪ್ರವರ್ತನೆಯಾಗಲಿಲ್ಲ. ಹೀಗೆ ಶಾಸ್ತ್ರೋಕ್ತವಾದ ಮಾರ್ಗದಿಂದ, ಪ್ರತಾಪದೊಡನೆ ಪ್ರಯತ್ನಿಸುತ್ತಿರುವ ಅತಿಥಿಯು ಇಂದ್ರನು ದೇವತೆಗಳಿಗೆ ದೇವನಾಗಿರುವಂತೆ, ರಾಜರಿಗೆ ರಾಜನಾಗಿದ್ದನು. ಈ ಅತಿಥಿಯಲ್ಲಿ ಲೋಕಪಾಲಕರಲ್ಲಿರುವ ಲೋಕರಕ್ಷಣಶಕ್ತಿಯೂ, ಪಂಚಭೂತಗಳಲ್ಲಿರುವ ಪರೋಪಕಾರಶಕ್ತಿಯೂ, ಕುಲಪರ್ವತಗಳಲ್ಲಿರುವ ಭೂಭಾರಧಾರಣಶಕ್ತಿಯೂ, ಇದ್ದುದರಿಂದ ಇವನನ್ನು ಐದನೆಯ ಲೋಕಪಾಲಕನೆಂತಲೂ, ಆರನೆಯ ಭೂತವೆಂತಲೂ, ಎಂಟನೆಯ ಕುಲಪರ್ವತವೆಂತಲೂ ಹೇಳುವರು. ಅತಿಥಿಯು ಬರೆದು ಕಳುಹಿಸಿದ ಶಾಸನಪತ್ರಿಕೆಯನ್ನು ರಾಜರೆಲ್ಲರೂ, ಇಂದ್ರನ ಆಜ್ಞೆಯನ್ನು ದೇವತೆಗಳು ಹೇಗೋ ಹಾಗೆ ತಮ್ಮ ಛತ್ರಗಳನ್ನು ದೂರವಾಗಿಟ್ಟು ಶಿರಸಾವಹಿಸುತ್ತಿದ್ದರು. ಧನದ ಎಂದರೆ ಧನವನ್ನು ಕೊಡುವವನು ಎಂಬ ಹೆಸರು ಕುಬೇರನಿಗೂ ತನಗೂ ಸಮಾನವಾಗಿರುವಂತೆ, ಅಶ್ವಮೇಧ ಯಾಗದಲ್ಲಿ ಋತ್ವಿಕ್ಕುಗಳಿಗೆ ದಾನದಕ್ಷಿಣೆಗಳನ್ನು ಕೊಟ್ಟನು. ಇಂದ್ರನು ಅತಿಥಿಯ ರಾಜ್ಯದಲ್ಲಿ ಸರಿಯಾಗಿ ಮಳೆಗರೆಸುತ್ತಿದ್ದನು. ಯಮನು ಪ್ರಜೆಗಳಿಗೆ ರೋಗಾದ್ಯುಪದ್ರವವನ್ನುಂಟುಮಾಡುತ್ತಿರಲಿಲ್ಲ. ವರುಣನು ನಾವಿಕರ ಸಂಚಾರಕ್ಕೆ ಅನುಕೂಲವಾಗಿ ಜಲಮಾರ್ಗಗಳನ್ನು ಸರಿಮಾಡಿಕೊಂಡಿರುವನು. ಕುಬೇರನು ಈ ಅತಿಥಿಯು ಪೂರ್ವರಾಜರಾದ ರಾಮಾದಿಗಳನ್ನು ಸ್ಮರಿಸಿಕೊಂಡು ಇವನ ಕೋಶವೃದ್ಧಿಯನ್ನುಂಟುಮಾಡುತ್ತಿದ್ದನು. ಈ ಪ್ರಕಾರವಾಗಿ ಲೋಕಪಾಲಕರೂ ಕೂಡ ಇವನಲ್ಲಿ ಶರಣಾಗತರಂತೆ ನಡೆದುಕೊಳ್ಳುತ್ತಿದ್ದರು.

****

ಹದಿನೆಂಟನೆಯ ಅಧ್ಯಾಯ

ವಂಶಾನುಕ್ರಮ

ಕಂ। ಅತಿಥಿ ಮೊದಲಾಗೆ ಪೃಥ್ವೀ।
ಪತಿಗಳ್ಕೆಲಬರ್ಸುದರ್ಶನಾಖ್ಯಂಬರೆಗಂ।
ಕ್ಷಿತಿಯಂ ಪರಿಪಾಲಿಸುತಂ ।
ವಿತತಮೆನಿಪ್ಪಮಳಕೀರ್ತಿಯಂ ತಳೆದೆಸೆದರ್ ॥

ಅತಿಥಿಯು ನಿಷಧರಾಜನಾದ ಅರ್ಥಪತಿ ಎಂಬುವನ ಮಗಳನ್ನು ಮದುವೆಮಾಡಿಕೊಂಡು ಆಕೆಯಲ್ಲಿ ನಿಷಧ ಪರ್ವತಕ್ಕೆ ಸಮಾನವಾದ ಬಲವುಳ್ಳ ನಿಷಧನೆಂಬ ಪುತ್ರನನ್ನು ಪಡೆದನು. ಮುಂದೆ ಪ್ರಜಾರಕ್ಷಣೆಗೆ ಯೋಗ್ಯನಾಗಿಯೂ, ಮಹಾ ಪರಾಕ್ರಮಿಯೂ, ಯೌವನಸ್ಥನಾಗಿಯೂ ಇರುವ ನಿಷಧನನ್ನು ನೋಡಿ, ತಂದೆಯು ಸುವೃಷ್ಟಿಯ ದೆಸೆಯಿಂದ ಸಂಪೂರ್ಣವಾಗಿ ಫಲಿಸಿರುವ ಸಸ್ಯವನ್ನು ಕಂಡ ಜನದಂತೆ ಹರ್ಷಗೊಳ್ಳುತ್ತಿದ್ದನು, ಅತಿಥಿಯು ಬಹುಕಾಲದಿಂದ ವಿಷಯಸುಖವನ್ನು ಅನುಭವಿಸಿ, ತನ್ನಪುತ್ರನಿಗೆ ರಾಜ್ಯಾಭಿಷೇಕವನ್ನು ಮಾಡಿ, ತಾನುಮಾಡಿದ ಅಶ್ವಮೇಧಾದಿಸತ್ಕರ್ಮಗಳಿಂದ ಸಂಪಾದಿಸಿದ್ದ ಸ್ವರ್ಗಲೋಕವನ್ನೈದಿದನು. ಕುಶನ ಮೊಮ್ಮಗನಾದ ನಿಷಧನು, ಅದ್ವಿತೀಯನಾಗಿಯೂ, ಸಮುದ್ರದಂತೆ ಗಂಭೀರವಾಗಿಯೂ, ಆಜಾನುಬಾಹುವಾಗಿಯೂ ಇದ್ದು, ಚತುಸ್ಸಮುದ್ರಮುದ್ರಿತವಾದ ಭೂಮಂಡಲವನ್ನು ಏಕಚ್ಛತ್ರಾಧಿಪತ್ಯದಿಂದ ಆಳುತ್ತಿದ್ದನು. ನಿಷಧನ ತರುವಾಯ ಅಗ್ನಿಯಂತೆ ತೇಜಸ್ವಿಯಾದ ನಳನೆಂಬ ಅವನ ಪುತ್ರನು ರಾಜನಾದನು. ಅವನು ಶತ್ರುಗಳ ಬಲವನ್ನು ಆನೆಗಳು ಹುಲ್ಲುಗಾವಲನ್ನು ತುಳಿದು ಹಾಕುವಂತೆ ಮುರಿದುಹಾಕಿದನು. ಆ ನಳನು ನಭಶ್ಚರರಿಗೆ ಸ್ತೋತ್ರಾರ್ಹನಾಗಿಯೂ, ನಭ ಶ್ಯಾಮಲಗಾತ್ರನಾಗಿಯೂ ಇರುವ ನಭಸ್ಸೆಂಬ ಪುತ್ರನನ್ನು, ಪ್ರಜೆಗಳು ಮನೋಹರವಾದ ನಭೋಮಾಸವನ್ನು ಪಡೆವಂತೆ ಪಡೆದನು, ಧರ್ಮಾತ್ಮನಾದ ನಳನು ಸಮರ್ಥನಾದ ನಭೋರಾಜನಿಗೆ ಉತ್ತರ ಕೋಸಲ ರಾಜ್ಯವನ್ನು ಕೊಟ್ಟು ಮುಪ್ಪಿನಲ್ಲಿ ಮಾಡಬೇಕಾದ

ಕಾರ್ಯವನ್ನು ನೆರವೇರಿಸುವುದಕ್ಕಾಗಿ, ಮೃಗಗಳಿಂದ ವ್ಯಾಪ್ತವಾದ ಅರಣ್ಯವನ್ನು ಪ್ರವೇಶಿಸಿ, ಪುನರ್ಜನ್ಮವಿಲ್ಲದಂತೆ ಮಾಡಿಕೊಳ್ಳಲು ತಪಸ್ಸನ್ನೂ ಮಾಡಲು ಉಪಕ್ರಮಿಸಿದನು, ಗಜಗಳಲ್ಲಿ ಶ್ರೇಷ್ಠವಾದ ಪುಂಡರೀಕವೆಂಬ ಗಜದಂತೆ, ಆ ನಭಸ್ಸಿಗೆ ಅಜಯ್ಯನಾದ ಪುಂಡರೀಕನೆಂಬ ಮಗನು ಹುಟ್ಟಿದನು, ನಭಸ್ಸು ಲೋಕಾಂತರವನ್ನೈದಲು ಪುಂಡರೀಕಹಸ್ತಳಾದ ಲಕ್ಷ್ಮಿಯು ಪುಂಡರೀಕಾಕ್ಷನನ್ನು ಆಶ್ರಯಿಸಿದಂತೆ ಇವನನ್ನು ಸೇರಿದಳು.

ಈ ಪುಂಡರೀಕನು ಕ್ಷಮಾಯುಕ್ತನಾಗಿಯೂ, ಪ್ರಜಾರಕ್ಷಣೆಯಲ್ಲಿ ದಕ್ಷನಾಗಿಯೂ, ಇರುವ ಕ್ಷೇಮಧನ್ವನೆಂಬ ತನ್ನ ಪುತ್ರನನ್ನು ರಾಜ್ಯದಲ್ಲಿ ನೆಲೆಗೊಳಿಸಿ, ವನಪ್ರವೇಶಮಾಡಿ ಕ್ಷಾಂತಿಯುಕ್ತನಾದ ತಪಸ್ಸನ್ನು ಮಾಡುತ್ತಿದ್ದನು. ಕ್ಷೇಮಧನ್ವನಿಗೆ ಅನೀಕಿನಿಯ ಅಗ್ರೇಸರನಾಗಿಯೂ ದೇವತೆಗಳಿಗೆ ಸದೃಶನಾದುದರಿಂದ ದೇವಲೋಕದಲ್ಲಿಯೂ ಪ್ರಖ್ಯಾತಿ ಪಡೆದವನಾಗಿಯೂ ಆತನ ದೇವಾನೀಕನೆಂಬ ಪುತ್ರನು ಹುಟ್ಟಿದನು. ಕ್ಷೇಮಧನ್ವನು ಪಿತೃಶುಶ್ರೂಷಾಪರನಾದ ದೇವಾನೀಕನೆಂಬ ಸುಪುತ್ರನನ್ನು ಪಡೆದುದರಿಂದ ಪುತ್ರವಂತನೆಂತಲೂ, ದೇವಾನೀಕನು ಪುತ್ರವಾತ್ಸಲ್ಯವುಳ್ಳ ಕ್ಷೇಮಧನ್ವನೆಂಬ ತಂದೆಯುಳ್ಳವನಾದುದರಿಂದ ಪಿತೃಮಂತನೆಂತಲೂ ಪ್ರಸಿದ್ಧರಾದರು. ಪುತ್ರತ್ವ, ಪಿತೃತ್ವಗಳು ಇವರಿಬ್ಬರಲ್ಲಿಯೆ ಫಲಿಸಿದಂತಿತ್ತು. ಗುಣನಿಧಿಯಾಗಿಯೂ, ಯಥಾವಿಧಿಯಾಗಿ ಆನೇಕಯಜ್ಞಗಳನ್ನು ಮಾಡಿದವನಾಗಿಯೂ ಇರುವ ಕ್ಷೇಮಧನ್ವನು ತನಗೆ ಸಮಾನವಾದ ಸಾಮರ್ಥ್ಯವು, ತನ್ನ ಪುತ್ರನಿಗೆ ಬಹುಕಾಲದಿಂದ ತಾನು ವಹಿಸಿದ್ದ ರಾಜ್ಯಭಾರವನ್ನು ಕೊಟ್ಟು ತಾನು ಸ್ವರ್ಗಕ್ಕೆ ತೆರಳಿದನು. ಸಮರ್ಥನಾದ ದೇವಾನೀಕನ ಮಗನಾದ ಅಹೀನಗು ಎಂಬುವನು ಆದರಪೂರ್ವಕವಾದ ಹಿತವಚನಗಳನ್ನೇ ಆಡುತ್ತಿದ್ದುದರಿಂದ ಮಿತ್ರರಂತೆಯೇ ಶತ್ರಗಳೂ ಇವನಲ್ಲಿ ಭೀತಿಯಿಲ್ಲದೆ, ಇಷ್ಟವುಳ್ಳವರಾಗಿದ್ದರು. ಜಿಂಕೆಗಳು ಇಂಪಾದ ಸಂಗೀತಧ್ವನಿಗೆ ಮೊದಲು ಹೆದರಿದರೂ ತರುವಾಯ ಬಂದು ಸುತ್ತಿಕೊಳ್ಳಲು ಸುಲಭವಾಗಿ ಹಿಡಿಯಬಹುದಲ್ಲವೆ? ಮಹಾಭುಜಪರಾಕ್ರಮಿಯಾದ ಅಹೀನಗುವು ನೀಚಸಹವಾಸ ಪರಾಙ್ಮುಖನಾಗಿದ್ದ ಕಾರಣ, ಯೌವನಸ್ಥನಾದರೂ ದ್ಯೂತಪಾನಾದಿ ದುರ್ವ್ಯಸನಗಳಿಂದುಂಟಾಗುವ ಅನರ್ಥ ಪರಂಪರೆಗಳಿಗೆ ದೂರನಾಗಿ ಭೂಮಂಡಲವನ್ನು ರಕ್ಷಿಸಿದನು.

ಇಂಗಿತಜ್ಞನಾಗಿಯೂ, ಮಹಾಚತುರನಾಗಿಯೂ, ಭೂಲೋಕದಲ್ಲವತರಿಸಿರುವ ವಿಷ್ಣುವೋ ಎಂಬಂತೆಯೂ ಇರುವ ಅಹೀನಗುವು ತನ್ನ ತಂದೆಯ ತರುವಾಯ ರಾಜ್ಯಕ್ಕೆ ಬಂದು ಸಾಮಾದಿ ನಾಲ್ಕು ಉಪಾಯಗಳನ್ನೂ, ನಿರರ್ಗಳವಾಗಿ ಉಪಯೋಗಿಸುತ್ತಾ ನಾಲ್ಕುದಿಕ್ಕುಗಳಿಗೂ ತಾನೇ ಅಧಿಪತಿಯಾಗಿದ್ದನು. ಈತನು ಪರಲೋಕವನ್ನೈದಿದ ಬಳಿಕ, ಪಾರಿಯಾತ್ರಪರ್ವತದಂತೆ ಉನ್ನತವಾದ

ಶಿರಸ್ಸುಳ್ಳವನಾಗಿಯೂ, ಶತ್ರುಸಂಹಾರಕನಾಗಿಯೂ, ಇರುವ ಅವನ ಮಗನಾದ ಪಾರಿಯಾತ್ರನಿಗೆ ರಾಜ್ಯಾಭಿಷೇಕವಾಯ್ತು, ಅವನ ತರುವಾಯ, ದಯಾಪರನಾಗಿಯೂ, ವಿಶಾಲಾಕ್ಷನಾಗಿಯೂ, ಕುಂದಪುಷ್ಪದಂತೆ ಶುಭ್ರವರ್ಣವುಳ್ಳವನಾಗಿದ್ದ ಅರಿಮಾತಂಗ ಸಿಂಹನಾಗಿಯೂ ಕುಲಪಾಲಕನಾಗಿಯೂ ಇರುವ ದಳನೆಂಬುವನು ಅರಸನಾದನು, ಅವನಿಗೆ ಉದಾರನಾಗಿಯೂ, ಶಿಲಾಪಟ್ಟದಂತೆ ವಿಶಾಲವಾದ ವಕ್ಷಸ್ಥಳ ವುಳ್ಳವನಾಗಿಯೂ ಇರುವ ಶಿಲನೆಂಬುವನು ಪುತ್ರನಾದನು. ಅವನು ರಾಜ್ಯಾಧಿಕಾರವನ್ನು ಪಡೆದು ಬಾಣಗಳಿಂದ ಶತ್ರುಗಳನ್ನು ಸಂಹರಿಸಿ ಹೊಗಳಿಕೆಯನ್ನು ಪಡೆದು ಸಾಧುವೆನ್ನಿಸಿ ಕೊಂಡಿದ್ದನು. ಇವನಿಗೆ ಯೌವರಾಜ್ಯ ಪದವಿಯನ್ನು ವಹಿಸಿ ಇವನ ತಂದೆಯು ನಿರಾತಂಕದಿಂದ ಸುಖವನ್ನನುಭವಿಸುತ್ತಿದ್ದನು. ರಾಜ್ಯಭಾರವನ್ನು ವಹಿಸಿರುವ ಕಾಲದಲ್ಲಿ ಪ್ರಜಾಪಾಲನಾದಿ ರೂಪಕಾರ್ಯಗಳು ಸುಖಪ್ರತಿಬಂಧಕ ಗಳಾಗಿರುವವು. ಆದಕಾರಣ ಆಗಿನ ವ್ಯಾಪಾರಗಳು ಕಾರಾಗೃಹಾದಿಗಳಂತೆ ಪ್ರತಿಬಂಧಕಗಳಾಗಿರುವುವು. ಭಾರವನ್ನು ಹೊತ್ತುಕೊಂಡಿರುವವನಿಗೆ ಸುಖವೆಲ್ಲಿಯದು? ಅನುರಾಗವನ್ನುಂಟುಮಾಡುವ ಇಂದ್ರಿಯಸುಖದಲ್ಲಿ ತೃಪ್ತನಾಗಿದ್ದರೂ, ಸ್ತ್ರೀಯರ ಸೌಂದರ್ಯಾತಿಶಯದಿಂದ ವಿಷಯೋಪಭೋಗಗಳನ್ನೂ ಅಪೇಕ್ಷಿಸುತ್ತಿದ್ದನು. ಜರೆಯು ರತಿಗೆ ಸಮರ್ಥಳಲ್ಲದಿದ್ದರೂ ವೃಥಾಮಾತ್ಸರ್ಯವುಳ್ಳವಳಾಗಿ ಅವನನ್ನು ವಶಮಾಡಿಕೊಂಡಳು. ಶಿಲನಿಗೆ ರಾಜಕುಲಪ್ರಧಾನನಾಗಿಯೂ ಮಹಾವಿಷ್ಣುವಿಗೆ ಸಮಾನನಾಗಿಯೂ, ಉನ್ನತನಾಭಿಯಾಗಿಯೂ ಇರುವ ಉನ್ನಾಭನೆಂಬ ಮಗನು ಹುಟ್ಟಿದನು.

ಅವನ ತರುವಾಯ ಮಹೇಂದ್ರಸದೃಶನಾಗಿಯೂ, ಯುದ್ಧದಲ್ಲಿ ಸಿಡಿಲಿನಂತೆ ಸಿಂಹನಾದ ಮಾಡುವವನಾಗಿಯೂ, ಇರುವ ಅವನ ಮಗನಾದ ವಜ್ರನಾಭನು ದೊರೆಯಾದನು. ಇವನೂ ಕೂಡ ತನ್ನ ಧರ್ಮಗಳಿಂದ ಆರ್ಜನೆ ಮಾಡಿದ್ದ ಪುಣ್ಯಲೋಕವನ್ನು ಸೇರಲು, ಚತುಸ್ಸಮುದ್ರಪರಿವೃತವಾದ ಭೂಮಿಯು ಗಣಿಗಳಲ್ಲಿರುವ ಅಮೂಲ್ಯವಾದ ರತ್ನಗಳ ಕಾಣಿಕೆಯನ್ನು ಕೊಟ್ಟು ಅವನ ಪುತ್ರನಾದ ಶಂಖಣನನ್ನು ಸೇವಿಸಿತು. ಅವನ ತರುವಾಯ ಸೂರ್ಯನಿಗೆ ಸಮಾನವಾದ ಕಾಂತಿಯುಳ್ಳವನಾಗಿಯೂ, ಅಶ್ವಿನೀದೇವತೆಗಳಂತೆ ರೂಪಸಂಪನ್ನನಾಗಿಯೂ ಇದ್ದ ವ್ಯುಷಿತಾಶ್ವನೆಂಬುವನು ರಾಜ್ಯಭಾರವನ್ನು ವಹಿಸಿದನು. ಸಮುದ್ರದಲ್ಲಿ ಸೇನೆಯನ್ನೂ ಕುದುರೆಗಳನ್ನು ಇಟ್ಟುಕೊಂಡಿದ್ದನಾದದುರಿಂದ ಇವನಿಗೆ ವ್ಯುಷಿತಾಶ್ವನೆಂಬುವುದು ಅನ್ವರ್ಥನಾಮವಾಯ್ತೆಂದು ಹಿರಿಯರು ಹೇಳುವರು. ಪುತ್ರಾರ್ಥಿಯಾಗಿ ಆ ವ್ಯುಷಿತಾಶ್ವನು ಕಾಶೀವಿಶ್ವೇಶ್ವರನನ್ನಾರಾಧಿಸಿ, ತನ್ನರೂಪವೇ ಆಗಿರುವ, ಭೂಮಂಡಲವನ್ನೆಲ್ಲವನ್ನೂ ರಕ್ಷಣೆಮಾಡುವ ಸಾಮರ್ಥ್ಯವುಳ್ಳ, ಸರ್ವಪ್ರಿಯನಾದ,

ವಿಶ್ವಸಹನೆಂಬ ಪುತ್ರನಂ ಪಡೆದನು. ಆ ವಿಶ್ವಸಹನಿಗೆ ವಿಷ್ಣುವಿನ ಅಂಶದಿಂದ ಹಿರಣ್ಯನಾಭನೆಂಬ ಮಗನು ಹುಟ್ಟಿದನು, ನೀತಿವಿಶಾರದನಾದ ಆ ವಿಶ್ವಸಹನು ವೃಕ್ಷಗಳಿಗೆ ವಾಯುಸಹಾಯಕವಾದ ಅಗ್ನಿಯೋಪಾದಿಯಲ್ಲಿ ಶತ್ರುಗಳಿಗೆ ಅಸಹ್ಯವಾಗಿದ್ದನು. ಇವನ ಪ್ರತಾಪವನ್ನು ಅವರು ತಡೆಯಲಾರದೆ ಹೋದರು. ಪುತ್ರಲಾಭದಿಂದ ಪಿತೃಋಣ ವಿಮುಕ್ತನಾದ ವಿಶ್ವಸಹನು– ತನ್ನ ಚರಮವಯಸ್ಸಿನಲ್ಲಿ ಶಾಶ್ವತಸುಖವನ್ನು ಪಡೆಯುವುದಕ್ಕೆ, ಆಜಾನುಲಂಬಬಾಹುವಾದ ತನ್ನ ಮಗನಿಗೆ ರಾಜ್ಯಾಭಿಷೇಕವನ್ನು ಮಾಡಿ, ಕೃತಕೃತ್ಯನಾಗಿ ತಪಸ್ವಿಯಾದನು. ಉತ್ತರಕೋಸಲಾಧಿಪತಿಯಾಗಿಯೂ, ಸೂರ್ಯವಂಶ ವಿಭೂಷಣನಾಗಿಯೂ, ಸೋಮಯಾಜಿಯಾಗಿಯೂ ಇರುವ ಈ ಹಿರಣ್ಯನಾಭನಿಗೆ ಚಂದ್ರನಂತೆ ಆಹ್ಲಾದಕರನಾಗಿಯೂ, ಅದ್ವಿತೀಯನಾಗಿಯೂ, ಇರುವ ಕೌಸಲ್ಯನೆಂಬ ಮಗನು ಹುಟ್ಟಿದನು. ಕೀರ್ತಿಯಿಂದ ಬ್ರಹ್ಮಸಭೆಯವರೆಗೂ ಪ್ರಸಿದ್ಧನಾದ ಕೌಸಲ್ಯನು ಬ್ರಹ್ಮಜ್ಞಾನಸಂಪನ್ನನಾದ ಬ್ರಹ್ಮಿಷ್ಠನೆಂಬ ತನ್ನ ಮಗನನ್ನು ತನ್ನ ಅಧಿಕಾರದಲ್ಲಿ ನೇಮಿಸಿ ತಾನು ಬ್ರಹ್ಮರೂಪನಾಗಿ ಸದ್ಗತಿಯನ್ನು ಪಡೆದನು. ಕುಲಶೇಖರನಾದ– ಆ ಬ್ರಹ್ಮಿಷ್ಠನು. ಸತ್ಸಂತಾನವುಳ್ಳವನಾಗಿ ಆಜ್ಞಾಚಿಹ್ನಿತವಾದ ಭೂಮಂಡಲವನ್ನು ನಿರುಪಾಧಿಕತೆಯಿಂದ ಬಹುಕಾಲ ಚೆನ್ನಾಗಿ ಆಳುತ್ತಿರಲು ಪ್ರಜೆಗಳೆಲ್ಲರೂ ಆನಂದಬಾಷ್ಪವನ್ನು ಸುರಿಸುತ್ತಾ ಅಭಿನಂದಿಸಿದರು. ಪಿತೃಶುಶ್ರೂಷಾದಿಗಳಿಂದ ಪರಿಶುದ್ಧನಾಗಿ, ವಿಷ್ಣುವಿಗೆ ಸಮಾನವಾದ ಆಕಾರವುಳ್ಳ, ಕಮಲದಳಲೋಚನನಾದ ಪುತ್ರನೆಂಬ ಹೆಸರುಳ್ಳ ಅವನ ಪುತ್ರನು ತಮ್ಮ ತಂದೆಯಾದ ಬ್ರಹ್ಮಿಷ್ಠನನ್ನು ಪುತ್ರವಂತರಲ್ಲಿ ಅಗ್ರಗಣ್ಯನನ್ನಾಗಿ ಮಾಡಿದನು. ಮುಂದೆ ಇಂದ್ರನ ಸಖನಾಗುವ ಆ ಬ್ರಹ್ಮಿಷ್ಠನು ಸುಪುತ್ರನಾದ ಪುತ್ರನಿಂದ ತನ್ನ ಕುಲಪ್ರತಿಷ್ಠೆಯನ್ನು ಪಡೆದು ವಿಷಯಸುಖಪರಾಙ್ಮುಖನಾಗಿ ಪುಷ್ಕರತೀರ್ಥದಲ್ಲಿ ಸ್ನಾನಮಾಡಿ ದೇವತ್ವವನ್ನು ಹೊಂದಿದನು. ಪುತ್ರನ ಹೆಂಡತಿಯು ಪುಷ್ಯರಾಗಕ್ಕೆ ಸಮಾನವಾದ ಕಾಂತಿಯುಳ್ಳ ಪುಷ್ಯ ಶುದ್ಧಪೌರ್ಣಮಿಯಲ್ಲಿ ಪ್ರಸವಿಸಿದಳು. ಎರಡನೆಯ ಪುಷ್ಯನಕ್ಷತ್ರದಂತೆ ಹುಟ್ಟಿದ ಆ ಪುಷ್ಯನನ್ನು ನೋಡಿ ಪ್ರಜೆಗಳೆಲ್ಲರೂ ವೃದ್ಧಿಯನ್ನು ಪಡೆದರು. ಮಹಾಶಯನಾದ, ಆ ಪುತ್ರನು ತನ್ನ ಮಗನಿಗೆ ರಾಜ್ಯಾಧಿಕಾರವನ್ನೊಪ್ಪಿಸಿ, ಜನ್ಮಭೀರುವಾಗಿ ಬ್ರಹ್ಮವಿದ್ಯಾವಿಶಾರದನಾದ ಜೈಮಿನಿಗೆ ಶಿಷ್ಯನಾಗಿ ಅವನಿಂದ ಯೋಗಶಾಸ್ತ್ರಾಭ್ಯಾಸಮಾಡಿ ಮುಕ್ತಿಯನ್ನು ಪಡೆದನು.

ತರುವಾಯ ಪುಷ್ಯನ ಮಗನಾದ, ಧ್ರುವೋಪಮನಾದ ಧ್ರುವಸಂಧಿಯೆಂಬುವನು ಭೂಭಾರವನ್ನು ವಹಿಸಿದನು. ಶ್ರೇಷ್ಠನಾಗಿಯೂ, ಸತ್ಯಸಂಧನಾಗಿಯೂ ಇರುವ ಈ ಧ್ರುವಸಂಧಿಯೊಡನೆ ಇವನನ್ನು ಸಮಾಧಾನ ಮಾಡಿಕೊಳ್ಳುವುದಕ್ಕಾಗಿ ಬರುವ ಪರರಾಜರಿಗೆ ಸಂಧಿಯು ಸ್ಥಿರವಾಗುತ್ತಿದ್ದುದರಿಂದ ಧ್ರುವಸಂಧಿ ಎಂಬ ನಾಮವು

ಅವನಿಗೆ ಅನ್ವರ್ಥವಾಗಿತ್ತು. ವಿಶಾಲನೇತ್ರನಾಗಿಯೂ, ಪುರುಷಶ್ರೇಷ್ಠನಾಗಿಯೂ ಇರುವ ಈ ಧ್ರುವಸಂಧಿಯು– ತನ್ನ ಮಗನಾದ ಪೂರ್ಣಚಂದ್ರನಂತೆ ಮನೋಹರನಾದ ಸುದರ್ಶನನೆಂಬುವನು– ಮಗುವಾಗಿದ್ದಾಗಲೇ ಈ ಧ್ರುವಸಂಧಿಯು ಬೇಟೆಗೆ ಹೋಗಿ ಅಲ್ಲಿ ಒಂದು ಸಿಂಹದಿಂದ ಮರಣವನ್ನು ಹೊಂದಿದನು. ಇದನ್ನು ತಿಳಿದು, ಮಂತ್ರಿಗಳೆಲ್ಲರೂ ಏಕಾಭಿಪ್ರಾಯವುಳ್ಳವರಾಗಿ, ಅನಾಥರಾಗಿಯೂ, ದೀನರಾಗಿಯೂ, ಇರುವ ಪ್ರಜೆಗಳನ್ನು ನೋಡಿ ಕುಲಾಧಾರನಾದ ಆ ಸುದರ್ಶನನೆಂಬ ಬಾಲಕನನ್ನು ಯಥಾವಿಧಿಯಾಗಿ ಸಾಕೇತರಾಜನನ್ನಾಗಿ ಮಾಡಿದರು. ಪ್ರೌಢರಾಜನಿಲ್ಲದೆ ಬಾಲರಾಜನಿಂದ ಯುಕ್ತವಾದ ಆ ರಘುವಂಶವು ಬಾಲಚಂದ್ರಯುಕ್ತನಾದ ಆಕಾಶದಂತೆಯೂ, ಸಿಂಹದ ಮರಿಯುಳ್ಳ ಅರಣ್ಯದಂತೆಯೂ, ಕಮಲದಮೊಗ್ಗಿನಿಂದ ಕೂಡಿದ ಸರೋವರದಂತೆಯೂ ರಮ್ಯವಾಗಿತ್ತು. ಈ ಸುದರ್ಶನನು ಕಿರೀಟ ಧಾರಣೆಯನ್ನು ಮಾಡಿಕೊಂಡಾಗ ನೋಡಿದ ಪ್ರಜೆಗಳು ಮುಂದೆ ಇವನು ತಂದೆಗೆ ಸಮಾನವಾದ ಸಾಮರ್ಥ್ಯವುಳ್ಳವನಾಗಿ ಆಳುವನೆಂದು ಊಹಿಸಿದರು. ಆನೆಯಷ್ಟು ಚಿಕ್ಕದಾಗಿರುವ ಮೇಘವು ಎದುರುಗಾಳಿಯ ಸಹಾಯದಿಂದ ದಶದಿಕ್ಕುಗಳನ್ನೂ ವ್ಯಾಪಿಸುವುದಲ್ಲವೇ? ಮಾವಟಿಗನು ಹಿಡಿದುಕೊಂಡಿರಲು, ದಿವ್ಯವಾದ ಅಲಂಕಾರದೊಡನೆ ಆನೆಯಮೇಲೆ ಕುಳಿತು ರಾಜಮಾರ್ಗದಲ್ಲಿ ಬರುತ್ತಿರುವ ಈ ಸುದರ್ಶನನು– ಆರುವರ್ಷದವನಾದರೂ ರಾಜ್ಯಾಧಿಕಾರವುಳ್ಳವನಾದುದರಿಂದ ಪ್ರಜೆಗಳೆಲ್ಲರೂ ತಂದೆಯಂತೆ ಗೌರವದಿಂದ ನೋಡುತ್ತಿದ್ದರು. ಈತನು ಬಾಲಕನಾದುದರಿಂದ ತಂದೆಯ ಸಿಂಹಾಸನವು ತುಂಬಿರುವಂತೆ ಕುಳಿತುಕೊಳ್ಳಲು ಶಕ್ತನಾಗಲಿಲ್ಲ. ಸುವರ್ಣಚ್ಛಾಯೆಯಂತೆ ಹೊರಡುತ್ತಿರುವ ಕಾಂತಿಯ ವ್ಯಾಪ್ತಿಯಿಂದ ವಿಸ್ತಾರವಾದ ದೇಹದಿಂದ ಕುಳಿತು ಆ ಸಿಂಹಾಸನದಲ್ಲಿ ಪೂರ್ಣಭಾಗ ವನ್ನಾಕ್ರಮಿಸುತ್ತಿದ್ದನು. ಆ ಸಿಂಹಾಸನದಿಂದ ಕೆಳಕ್ಕೆ ಆ ದೊರೆಯ ಗಿಡ್ಡಾದ ಕಾಲುಗಳು ಸ್ವಲ್ಪವೇ ಇಳಿಯುವುದರಿಂದ ಪಾದಗಳನ್ನಿಟ್ಟುಕೊಳ್ಳುವುದಕ್ಕಾಗಿ ಮಾಡಿಟ್ಟಿರುವ ಸುವರ್ಣಪೀಠವನ್ನು ಮುಟ್ಟದೆ ಹೋಗಿದ್ದರೂ ಅಲಕ್ತರಸದಿಂದ ಚಿತ್ರಿತವಾಗಿರುವ ಆ ಪಾದಗಳಿಗೆ ನೃಪರು ತಮ್ಮ ಉನ್ನತವಾದ ಕಿರೀಟಗಳಿಂದ ನಮಸ್ಕರಿಸುತ್ತಿದ್ದರು. ರತ್ನವು ಚಿಕ್ಕದಾಗಿದ್ದರೂ ತೇಜೋವಿಶೇಷದಿಂದ ಮಹಾನೀಲವೆಂಬ ಶಬ್ದವು ಹೇಗೆ ಸುಳ್ಳಾಗುವುದಿಲ್ಲವೋ, ಹಾಗೆ ಹುಡುಗನಾದರೂ ಮಹಾರಾಜನೆಂಬ ಪ್ರತೀತಿಯು ಈ ಸುದರ್ಶನನಲ್ಲಿ ಸರಿಯಾಗಿ ಅನ್ವಯಿಸಿತ್ತು. ಉಭಯಪಾರ್ಶ್ವಗಳಲ್ಲಿಯೂ ಚಾಮರವನ್ನು ಬೀಸುತ್ತಿರಲು, ಕಪೋಲಗಳಲ್ಲಿ ನೇಲುತ್ತಿರುವ ಕಾಕಪಕ್ಷಗಳುಳ್ಳ ಆ ಸುದರ್ಶನನ ಆಜ್ಞಾವಚನಕ್ಕೆ ಸಮುದ್ರಗಳ ಅಂಚಿನವರೆಗೆ ಎಲ್ಲಿಯೂ ಭಂಗ

ವುಂಟಾಗುತ್ತಿರಲಿಲ್ಲ. ಬಾಲಕನೆಂದು ನಿರಾಕರಿಸದೆ ಪ್ರಜೆಗಳೆಲ್ಲರೂ ಆಜ್ಞಾಬದ್ಧರಾಗಿ ನಡೆಯುತ್ತಿದ್ದರು.

ಸುವರ್ಣದ ಪಟ್ಟಿಯಿಂದ ರಮ್ಯವಾಗಿರುವ ಫಾಲಪ್ರದೇಶದಲ್ಲಿ ದಿವ್ಯವಾದ ಕಸ್ತೂರಿಯ ತಿಲಕವನ್ನು ಧರಿಸಿಕೊಂಡು ಸ್ಮೇರಮುಖನಾಗಿ ಇರತಕ್ಕ ಆ ಸುದರ್ಶನನು, ಶತ್ರುಸ್ತ್ರೀಯರ ಮುಖಗಳಲ್ಲಿ ತಿಲಕಗಳು ಅಳಿಸಿ ಹೋಗುವಂತೆ ಮಾಡುತ್ತಿದ್ದನು. ಶಿರೀಷಪುಷ್ಪಕ್ಕಿಂತಲೂ ಹೆಚ್ಚಾದ ಸೌಕುಮಾರ್ಯವುಳ್ಳ ಆ ಸುದರ್ಶನನು ಭೂಷಣಗಳಿಂದಲೂ ಆಯಾಸವನ್ನು ಹೊಂದುತ್ತಿದ್ದವನಾದರೂ, ಬಹುಭಾರವಾಗಿದ್ದ ಭೂಮಿಯನ್ನು ತನ್ನ ಸಾಮರ್ಥ್ಯಬಲದಿಂದ ಧರಿಸಿದನು. ಅಕ್ಷರಾಭ್ಯಾಸಕಾಲದಲ್ಲಿ ಎಲ್ಲಾ ಅಕ್ಷರಗಳನ್ನೂ ಕಲ್ತು ಕೇಳುವುದಕ್ಕಿಂತಲೂ ಮುಂಚೆಯೇ ದೊರೆಯು ವಿದ್ಯಾವಂತರ ಸಹವಾಸದಿಂದಲೇ ದಂಡನೀತಿಯ ಸಂಪೂರ್ಣಫಲವನ್ನು ಅನುಭವಿಸಿದನು. ಅನಂತರದಲ್ಲಿ ಆ ಶಾಸ್ತ್ರಾಭ್ಯಾಸವು ಅವನಿಗೆ ಸಂವಾದರೂಪವಾಗಿತ್ತು. ಸುದರ್ಶನನು–ಪ್ರೌಢನಾಗಿ ಬೆಳೆಯುವವರೆಗೂ ಆತನ ವಕ್ಷಸ್ಥಳವನ್ನು ಆಕ್ರಮಿಸಿ ನಿಲ್ಲುವದಕ್ಕವಕಾಶವಿಲ್ಲದ ಕಾರಣ ರಾಜ್ಯಲಕ್ಷ್ಮಿಯು ಲಜ್ಜಿತಳಾಗಿ ಛತ್ರಛಾಯೆ ಎಂಬ ನೆವದಿಂದ ಅವನ ದೇಹವನ್ನು ಆಲಿಂಗಿಸಿದಳು. ಮೌರ್ವೀಘರ್ಷಣೆಯಿಂದ ಜಡ್ಡುಗಟ್ಟಿದ ಗುರುತಿಲ್ಲದಿದ್ದರೂ, ಖಡ್ಗದ ಹಿಡಿಯನ್ನು ಸ್ಪರ್ಶಮಾಡದಿದ್ದರೂ, ನೊಗದಂತೆ ಕಠಿನವಾಗಿಯೂ ಉದ್ದವಾಗಿಯೂ ಇಲ್ಲದಿದ್ದರೂ ತೇಜೋವಿಶೇಷದಿಂದಲೇ ಅವನ ಭುಜವು ಭೂಮಿಯನ್ನು ಪಾಲಿಸುವದಕ್ಕೆ ಅರ್ಹವಾಗಿತ್ತು,

ಕೆಲವುಕಾಲವು ಕಳೆಯುತ್ತಾ ಬರಲು ಆತನ ಶರೀರಾವಯವಗಳು ಮಾತ್ರ ವೃದ್ಧಿಯಾಗಲಿಲ್ಲ. ಲೋಕಪ್ರಿಯಗಳಾಗಿಯೂ, ಪ್ರಾರಂಭದಲ್ಲಿ ಸ್ವಲ್ಪವಾಗಿಯೂ, ಅನಂತರ ವಂಶಯೋಗ್ಯಗಳಾಗಿಯೂ ಇರುವ ಶೌರ್ಯೌದಾರ್ಯಾದಿ ಗುಣಗಳೂ ವಿಸ್ತಾರವಾದವು. ಪೂರ್ವಜನ್ಮಗಳಲ್ಲಿ ಚೆನ್ನಾಗಿ ಅಭ್ಯಾಸಮಾಡಿದ್ದು ಈಗ ಅದನ್ನು ಸ್ಮರಿಸಿಕೊಂಡನೋ ಎಂಬಂತೆ, ಗುರುವಿಗೆ ಸ್ವಲ್ಪವೂ ಕಷ್ಟವಿಲ್ಲದಂತೆ ಧರ್ಮಾರ್ಥಕಾಮಗಳೆಂಬ ತ್ರಿವರ್ಗದ ಸಾಧನೆಗೆ ಮೂಲವಾದ ಆನ್ವೀಕ್ಷಕೀ, ದಂಡನೀತಿ, ವಾರ್ತಗಳೆಂಬ ಮೂರುವಿದ್ಯೆಗಳನ್ನೂ, ಪ್ರಜೆಗಳನ್ನೂ ಸ್ವಾಧೀನಮಾಡಿಕೊಂಡನು. ಅವನು ಧನುರ್ವಿದ್ಯಾಭ್ಯಾಸ ಮಾಡುವ ಕಾಲದಲ್ಲಿ ದೇಹದ ಮುಂಭಾಗವನ್ನು ಹಿಂದಕ್ಕೆ ಮಾಡಿಕೊಂಡು, ತಲೆಕೂದಲುಗಳನ್ನು ಮೇಲಕ್ಕೆತ್ತಿಕಟ್ಟಿ, ಎಡದ ಮೊಣಕಾಲನ್ನು ಸ್ವಲ್ಪ ಬಗ್ಗಿಸಿಕೊಂಡು ಕಿವಿಯವರೆಗೂ ಸೆಳೆದು ಹಿಡಿದಿರುವ ಬಾಣದಿಂದ ಕೂಡಿದ ಧನುಸ್ಸುಳ್ಳವನಾಗಿ ಪ್ರಕಾಶಿಸುತ್ತಿದ್ದನು. ಆ ಸುದರ್ಶನನು– ಸ್ತ್ರೀಯರು ನೇತ್ರಗಳಿಂದ ಪಾನಮಾಡುವುದಕ್ಕೆ ಯೋಗ್ಯವಾದ ಮಧುವಿನಂತೆಯೂ, ಅನುರಾಗವೆಂಬ

ಚಿಗುರುಗಳುಳ್ಳ ಮನ್ಮಥನೆಂಬ ವೃಕ್ಷದ ಪುಷ್ಪದಂತೆಯೂ, ಸರ್ವಾವಯವಗಳಿಗೂ ಸ್ವಾಭಾವಿಕವಾದ ಆಭರಣದಂತೆಯೂ. ಮೊದಲನೆಯ ವಿಲಾಸಸ್ಥಾನವಾಗಿಯೂ ಇರುವ ಯೌವನವನ್ನು ಪಡೆದು ಶೋಭಿಸುತ್ತಿದ್ದನು. ಅನುರೂಪೆಯರಾದ ಕುಲಕನ್ಯೆಯರನ್ನು ನೋಡಿಕೊಂಡು ಬರಬೇಕೆಂದು ಹೇಳಿ ಕಳುಹಿಸಿಕೊಟ್ಟಿದ್ದ ದೂತಿಯರು ಹೋಗಿ ನೋಡಿ, ಅವರ ಚಿತ್ರಪಟಗಳನ್ನು ಬರೆದು ತಂದು ತೋರಿಸಿದುದಕ್ಕಿಂತಲೂ ಹೆಚ್ಚಿನ ಸೌಂದರ್ಯವತಿಯರನ್ನು ಮಂತ್ರಿಗಳು ಹುಡುಕಿಕೊಂಡು ಬರಲು ಆ ಕನ್ಯೆಯರು ಈ ಸುದರ್ಶನನ್ನು ನೋಡಿ, ಆತನಿಗೆ ಮೊದಲು ಪತ್ನಿಯರಾಗಿದ್ದ ಶ್ರೀ ಭೂದೇವಿಯರಿಗೆ ತಾವು ಸಪತ್ನೀತ್ವವನ್ನು ಅಂಗೀಕರಿಸಿದರು.

****

ಹತ್ತೊಂಬತ್ತನೆಯ ಅಧ್ಯಾಯ

ಅಗ್ನಿವರ್ಣ ಶೃಂಗಾರ

ಕಂದ ॥ ವರ ಸಚಿವರೊಳಿಟ್ಟು ಮಹೀ ।
ಭರಮಂ ಪುಗುತಗ್ನಿವರ್ಣನಂತಃಪುರಮಂ
ಉರೆ ವಿಷಯಾಸ್ಪದನಾಗಿರೆ ।
ಪರಿಪರಿಯಂತರೆ ವಿಲಾಸಮೊಂದುತ್ತಿರ್ದಂ ॥

ಶಾಸ್ತ್ರಜ್ಞರಲ್ಲಿ ಅಗ್ರಗಣ್ಯನಾದ ಸುದರ್ಶನನು, ಜಿತೇಂದ್ರಿಯನಾದ ಕಾರಣ ಅಗ್ನಿಯಂತೆ ಪ್ರಕಾಶಮಾನವಾದ ಅಗ್ನಿವರ್ಣನೆಂಬ ತನ್ನ ಮಗನಿಗೆ ರಾಜ್ಯಾಭಿಷೇಕವನ್ನು ಮಾಡಿ ತನ್ನ ಮುಪ್ಪಿನಲ್ಲಿ ನೈಮಿಷಾರಣ್ಯವನ್ನು ಪ್ರವೇಶಿಸಿದನು. ಅಲ್ಲಿ ತೀರ್ಥಗಳಿಂದ ವಿಹಾರಯೋಗ್ಯಗಳಾದ ಸರಸ್ಸುಗಳನ್ನು, ದರ್ಭಾಸ್ತರಣಗಳಿಂದ ಹಂಸತೂಲಿಕಾ ತಲ್ಪವನ್ನೂ, ಪರ್ಣಶಾಲೆಯಿಂದ ಸೌಧವನ್ನೂ ಮರೆತು, ಫಲಾಪೇಕ್ಷಾರಹಿತವಾಗಿ ತಪಸ್ಸನ್ನು ಆರ್ಜಿಸುತ್ತಿದ್ದನು. ತನ್ನ ಭುಜಬಲದಿಂದ ಶತ್ರುನಿಗ್ರಹಮಾಡಿ ತನ್ನ ತಂದೆಯು ನಿಷ್ಕಂಟಕವಾಗಿ ಮಾಡಿದ್ದ ಭೂಮಿಯನ್ನು ಅಗ್ನಿವರ್ಣನು ಅನುಭವಿಸುವುದಲ್ಲದೆ ಕಂಟಕ ಶೋಧನಾದಿಗಳಿಂದ ಅನುಕೂಲಪಡಿಸಿಕೊಳ್ಳಬೇಕಾಗಿರಲಿಲ್ಲವಾಗಿ, ರಾಜ್ಯರಕ್ಷಣೆಯಲ್ಲಿ ಸ್ವಲ್ಪವೂ ಕಷ್ಟಪಡಲಿಲ್ಲ. ಇವನು ಕೆಲವು ವರ್ಷಗಳವರೆಗೆ ಕುಲೋಚಿತ ರಾಜ್ಯಭಾರನಿರ್ವಹಣ ಕಾರ್ಯದಲ್ಲಿದ್ದು ತರುವಾಯ ರಾಜ್ಯವನ್ನು ಮಂತ್ರಿಗಳಲ್ಲಿಟ್ಟು ಕಾಮುಕನಾಗಿ ವಿಷಯಾಸಕ್ತಿಯನ್ನು ಹೊಂದಿ ಸುಂದರಿಯರ ಅಧೀನವಾದ ಯೌವನವುಳ್ಳವನಾಗಿ ಅಂತಃಪುರದಲ್ಲಿ ಕಾಲವನ್ನು ಕಳೆಯುತ್ತಿದ್ದನು. ಸರ್ವದಾ ಕಾಮುಕನಾಗಿ ಕಾಮಿನಿಯರ ಸಹವಾಸದಲ್ಲಿಯೇ ನಿರತನಾದ ಅಗ್ನಿವರ್ಣನ, ಮೃದಂಗಾದಿ ವಾದ್ಯವಿಶೇಷಗಳಿಂದ ಶಬ್ದಾಯಮಾನವಾಗಿರುವ ಭವನಗಳಲ್ಲಿ, ಸಾಧನಸಂಸತ್ತಿಯಿಂದ ಅಭಿವೃದ್ಧಿಯನ್ನು ಹೊಂದುತ್ತಿದ್ದ, ರಾಜ್ಯಾಧಿಕಾರದಲ್ಲಿದ್ದ ಕಾಲದಲ್ಲಿ ಉಂಟಾಗುತ್ತಿದ್ದ ಉತ್ಸವಕ್ಕಿಂತ ಹೆಚ್ಚಿದ ಉತ್ಸವವುಂಟಾಗಿ ಉತ್ಸವಪರಂಪರೆಗಳು ವೃದ್ಧಿಯಾದವು.

ವಿಷಯಸುಖರಹಿತವಾದ ಒಂದು ಕ್ಷಣಕಾಲವನ್ನಾದರೂ ಸಹಿಸುವುದಕ್ಕೆ ಅಶಕ್ತನಾದ ಆ ಅಗ್ನಿವರ್ಣನು ಅಂತಃಪುರದಲ್ಲಿಯೇ ಸರ್ವದಾ ವಿಹರಿಸುತ್ತಿರುವನಾಗಿ, ದರ್ಶನಕುತೂಹಲದಿಂದ ಕಾದಿರುವ ಪ್ರಜೆಗಳ ಪ್ರಸಕ್ತಿಯನ್ನೇ ಅಪೇಕ್ಷಿಸಲಿಲ್ಲ. ಮಂತ್ರಿಗಳ ಮಾತಿನ ಗೌರವದಿಂದ ಯಾವಾಗಲಾದರೂ ಪ್ರಜೆಗಳ ಅಭಿಲಾಷೆಯಂತೆ ದರ್ಶನವನ್ನು ಕೊಟ್ಟರೂ ಕಿಟಕಿಯ ಸಂದಿಯಲ್ಲಿಟ್ಟಿರುವ ತನ್ನ ಪಾದಗಳನ್ನು ಕಾಣಿಸುತ್ತಿದ್ದನೇ ಹೊರತು ಮುಖಸಂದರ್ಶನಕ್ಕೆ ಅವಕಾಶವನ್ನು ಕೊಡುತ್ತಿರಲಿಲ್ಲ. ಆತನ ಆಶ್ರಿತರಾದ ಸೇವಕರು– ಮೃದುವಾದ ನಖಗಳ ಕೆಂಬಣ್ಣದಿಂದ ವ್ಯಾಪ್ತವಾದ ಕಾರಣ, ಬಾಲಸೂರ್ಯನ ಕಿರಣಗಳ ಸಂಸ್ಪರ್ಶದಿಂದ ಆಗತಾನೆ ಬಿರಿಯುತ್ತಿರುವ ಪದ್ಮಕ್ಕೆ ಸಮಾನವಾಗಿರುವ ಆತನ ಪಾದಕ್ಕೆರಗಿ ಸೇವಿಸುತ್ತಿದ್ದರು. ಕ್ರೀಡಾಸರಸ್ಸುಗಳಲ್ಲಿರುವ ಕಮಲಗಳು, ಯುವತಿಯರ ಉನ್ನತಸ್ತನಗಳ ಸಂಕ್ಷೋಭೆಯಿಂದ ತೂಗಾಡುತ್ತಿರಲು, ಆ ಸರಸ್ಸುಗಳ ನೀರಿನಿಂದ ಆವೃತವಾಗಿರುವ ಗುಪ್ತಸುರತಗೃಹಗಳಲ್ಲಿ ಸ್ತ್ರೀಯರೊಡನೆ ವಿಹರಿಸುತ್ತಿದ್ದನು. ಆ ಪುಷ್ಕರಿಣಿಗಳಲ್ಲಿ. ಜಲಮಜ್ಜನದಿಂದ ತಮ್ಮ ನೇತ್ರಾಂಜನವು ತೊಳೆದುಹೋಗಿರಲು, ಲಾಕ್ಷಾರಾಗಾದಿ ಲೇಪನಗಳಿಂದ ಪಾಟಲವರ್ಣವಾಗಿದ್ದ ಓಷ್ಠ್ಯಪುಟಗಳ ಬಣ್ಣವು ಕರಗಿಹೋಗಿರಲು, ವಿಲಾಸಿನಿಯರು ಸ್ವಾಭಾವಿಕವಾದ ರಕ್ತವರ್ಣವಾಗಿರುವ ತಮ್ಮ ಮುಖಗಳಿಂದ ಆ ಅಗ್ನಿವರ್ಣನನ್ನು ಮತ್ತಷ್ಟು ಮೋಹಿಸುವಂತೆ ಮಾಡುತ್ತಿದ್ದರು. ಅಗ್ನಿವರ್ಣನು ಮನೋಹರವಾದ ಮದ್ಯದ ಸೌರಭ್ಯದಿಂದ ಆಕರ್ಷಿಸುತ್ತಿರುವ ರಮ್ಯವಾದ ಪಾನಭೂಮಿಗೆ, ತನ್ನ ಸಹಚರಿಯರೊಡನೆ, ವಿಕಸಿತಕುಸುಮಗಳುಳ್ಳ ಕಮಲವನಕ್ಕೆ ಸಲಗವು ಹೋಗುವಂತೆ ಹೊಕ್ಕನು. ಅಂಗನೆಯರು ಅತಿಶಯವಾಗಿ ಮದಜನಕವಾದ ಆ ಅಗ್ನಿವರ್ಣನ ಮುಖಾಸವವನ್ನು ರಹಸ್ಯವಾಗಿ ಪಾನಮಾಡುವುದಕ್ಕೆ ಅಪೇಕ್ಷಿಸಿದರೂ ಕಾಮಿನೀಗಂಡೂಷ ಸೇಕಾಸವದಿಂದ ಬಕುಳವೃಕ್ಷಗಳು ಪುಷ್ಪಿತಗಳಾಗುವುವೆಂಬುದು ಶಾಸ್ತ್ರಸಿದ್ಧವಾದ ಕಾರಣ, ಆ ವೃಕ್ಷಗಳು– ಎಷ್ಟು ಆದರದಿಂದ ಗಂಡೂಷಸೇಕವನ್ನು ಸ್ವೀಕರಿಸುವುವೊ, ಅವಕ್ಕೆ ಸದೃಶವಾದ ಅಭಿಲಾಷೆಯಿಂದ ಆ ಸುಂದರಿಯರ ಮುಖಾಸವವನ್ನು ಪಾನಮಾಡುತಿದ್ದನು. ಮೃದುಮಧುರಧ್ವನಿಯುಳ್ಳ ವೀಣೆಯೂ, ಮನೋಹರವಾದ ಸಲ್ಲಾಪವುಳ್ಳ ಕಾಮಿನಿಯೂ, ಈ ಎರಡುವಸ್ತುಗಳೂ – ಆತನ ಉತ್ಸಂಗಭಾಗದಲ್ಲಿ ವಿಹಾರಕ್ಕೆ ಅರ್ಹಗಳಾಗಿದ್ದು, ಯಾವಾಗಲೂ ಆತನ ಅಂಕವನ್ನು ಅಶೂನ್ಯವಾಗಿ ಮಾಡಿದವು.

ತನ್ನ ತೊಡೆಯಲ್ಲಿ ಕುಳಿತಿರುವ ವೀಣೆಯ ವಾದ್ಯದಿಂದಲೂ, ವಾಮಲೋಚನೆಯ ಗಾನದಿಂದಲೂ, ಕ್ರೀಡಿಸುತ್ತಿದ್ದನು. ವಾದ್ಯದಲ್ಲಿ ಕುಶಲನಾದ ಅಗ್ನಿವರ್ಣನು– ನೇಲಾಡುತ್ತಿರುವ ಪುಷ್ಪಮಾಲಿಕೆಯಿಂದ ಮನೋಹರನಾಗಿ ಮೃದಂಗವನ್ನು ನುಡಿಸುತ್ತಾ

ತನ್ನ ಸಮೀಪದಲ್ಲಿರುವ ಭರತಶಾಸ್ತ್ರ ಶಿಕ್ಷಕರೆದುರಿಗೆ ನರ್ತನಮಾಡುತ್ತಾ, ಅಭಿನಯದಲ್ಲಿ ತಪ್ಪಿಹೋಗುತ್ತಿರುವ ನರ್ತಕಿಯರನ್ನು ಲಜ್ಜಿಸುವಂತೆ ಮಾಡುತ್ತಿದ್ದನು. ಮನೋಹರವಾದ ನಾಟ್ಯಾವಸಾನದಲ್ಲಿ, ಆಯಾಸದಿಂದುಂಟಾದ ಬೆವರಿನಿಂದ ನಶಿಸಿಹೋಗಿದ್ದ ತಿಲಕವುಳ್ಳ ಆ ನರ್ತಕಿಯರ ಮುಖವನ್ನು ಪ್ರೇಮಾತಿಶಯದಿಂದ ಬೀಸಿ, ತಾಪಪರಿಹಾರವನ್ನು ಮಾಡುತ್ತಿರುವ ವಾಯುವು, ಪಾನಮಾಡಿ, ಇಂದ್ರ ಕುಬೇರರರಿಗಿಂತ ಉತ್ಕೃಷ್ಟವಾದ ಜೀವನವನ್ನು ಪಡೆದಂತೆ ಭಾವಿಸುತ್ತಿದ್ದನು. ಅಗ್ನಿವರ್ಣನು ಬೇರೆಡೆಗಳಿಗೆ ಹೋಗಿ ತನಗೆ ಬೇಕಾದ ಹೊಸ ಹೊಸ ವಿಷಯ ಸುಖಗಳನ್ನೂ ಹುಡುಕಿ ಅನುಭವಿಸುತ್ತಿದ್ದನಾದ ಕಾರಣ ಸ್ತ್ರೀಯರು ಇವನ ಸಮಾಗಮದಲ್ಲಿ ಸಂಪೂರ್ಣ ಸಂಭೋಗಸುಖವನ್ನುಂಟುಮಾಡಿದರೆ ತೃಪ್ತನಾಗಿ ಅನ್ಯತ್ರ ದೃಷ್ಟಿಯುಳ್ಳವನಾಗುತ್ತಾನೆಂದು ಭಾವಿಸಿ ಅರ್ಧವಾದ ಸೌಖ್ಯವನ್ನು ತೋರಿಸುತ್ತಿದ್ದರೂ ಇವನು ಸುಂದರಿಯರನ್ನು ವಂಚಿಸಿ ಅನ್ಯತ್ರ ಹೋಗುವಾಗ ವಂಚಿತರಾದ ಸ್ತ್ರೀಯರು ಚಿಗುರಿನಂತೆ ಮೃದುವಾಗಿ ಹೊಳೆಯುತ್ತಿರುವ ಬೆರಳನ್ನು ಅಲ್ಲಾಡಿಸುತ್ತಾ ಇರಲಿ ಇರಲಿ ಎಂದು ಸಾಧನೆಮಾಡುತ್ತಾ ತರ್ಜಿಸುವುದು, ಹುಬ್ಬುಗಂಟಿಕ್ಕಿ ವಕ್ರದೃಷ್ಟಿಯಿಂದ ನೋಡುವುದು, ಬಾರಿಬಾರಿಗೂ ಕಾಂಚಿಯನ್ನು ನಡುವಿನಲ್ಲಿ ಬಿಗಿಯುವುದು ಮೊದಲಾದವುಗಳ ಮೂಲಕ ಅವನನ್ನು ದಂಡಿಸುತ್ತಿದ್ದರು. ಅಗ್ನಿವರ್ಣನು ಸರದಿಯ ಪ್ರಕಾರವಾಗಿ ಕಾಮಿನಿಯರ ಮನೆಗಳಿಗೆ ರಾತ್ರಿಯಲ್ಲಿ ದೂತಿಯರ ಹಿಂದೆಹೋಗುತ್ತಾ, ಅವರು ತನ್ನವಿಷಯದಲ್ಲಿ ಆತುರದಿಂದ ಹೇಳಿಕೊಳ್ಳುತ್ತಿರುವ ವಿಪ್ರಲಂಭವಚನಗಳನ್ನು ಕೇಳುತ್ತಿದ್ದನು. ಪಟ್ಟದರಸಿಯರ ಸಂಗದಲ್ಲಿಯೇ ಇರಬೇಕಾದ ಸಂದರ್ಭದಲ್ಲಿ, ಅವನು ದುರ್ಲಭವಾಗಿರುವ ವೇಶ್ಯಾಂಗನೆಯರ ಭಾವಚಿತ್ರವನ್ನು ಬರೆಯುತ್ತಾ ಇರುವಾಗ ಕೈ ಬೆವರಿನಿಂದ ಬಣ್ಣವನ್ನು ಬರೆವ ಕಡ್ಡಿಯು ಜಾರಿ ಬೀಳುತ್ತಿತ್ತು. ಸಪತ್ನಿಯರು ತಮ್ಮಲ್ಲಿ ಪ್ರಿಯನ ಅನುರಾಗ ಹೆಚ್ಚಾಗಿರುವುದೆಂದು ಮತ್ಸರವುಳ್ಳವರಾಗಲು, ಮನ್ಮಥವಿಕಾರವು ಹೆಚ್ಚಾಗಿರಲು ತಮ್ಮ ದೋಷವನ್ನು ಬಿಟ್ಟು ಮದನಮಹೋತ್ಸವವೆಂಬ ವ್ಯಾಜದಿಂದ ಅಗ್ನಿವರ್ಣನನ್ನು ನಿಲ್ಲಿಸಿಕೊಂಡು ತಮ್ಮ ಮನೋರಥಗಳನ್ನು ಪೂರಯಿಸಿಕೊಳ್ಳುತ್ತಿದ್ದರು. ಈತನು ಪ್ರಾತಃಕಾಲದಲ್ಲಿ ಪ್ರೇಯಸಿಯರು ಬಳಿಗೆ ಬರಲು ಅವರು ಈತನ ರೀತಿಯನ್ನು ನೋಡಿ ಸಂಭೋಗಚಿಹ್ನೆಗಳನ್ನು ಕಂಡು ಕೋಪಗೊಳ್ಳಲು ಅವರನ್ನು ಪ್ರಾಂಜಲಿಯಾಗಿ ಪ್ರಸನ್ನೆಯರನ್ನಾಗಿ ಮಾಡಿಕೊಳ್ಳಲು, ಅವರು ಈತನಲ್ಲಿರುವ ಪ್ರಣಯಾತಿಶಯದಿಂದಲೆ ತಮ್ಮ ಕೋಪವನ್ನು ಬಿಟ್ಟು, ತಾವು ಕೋಪಗೊಂಡದ್ದಕ್ಕಾಗಿ ಪರಿತಾಪಪಡುತ್ತಿದ್ದರು.

ಅಗ್ನಿವರ್ಣನು ಸ್ವಪ್ನದಲ್ಲಿ ತಮ್ಮ ಸವತಿಯರನ್ನು ಕನವರಿಸಿಕೊಳ್ಳಲು ಆ ವಿಷಯವನ್ನು ಅವನ ಸಂಗಡ ತಿಳಿಸದೆ ಮಗ್ಗುಲಹಾಸಿಗೆಯಲ್ಲಿ ಸುರಿಸುತ್ತಿರುವ

ಕಣ್ಣೀರಿನಿಂದಲೂ, ಕ್ರೋಧಾವೇಶದಿಂದ ಒಡೆದುಹೋಗುತ್ತಿರುವ ಕೈಬಳೆಗಳಿಂದಲೂ, ಕೂಡಿದವರಾಗಿ ಬೇರೆಮಗ್ಗಲಿಗೆ ತಿರುಗಿಕೊಳ್ಳೋಣದರಿಂದಲೇ ಪ್ರತೀಕಾರವನ್ನು ಮಾಡುತ್ತಿದ್ದರು. ದೂತಿಯರು ತೋರಿಸುತ್ತಿರುವ ಮಾರ್ಗದಲ್ಲಿ ಹೊರಟು, ಸಿದ್ಧಪಡಿಸಿರುವ ಪುಷ್ಪಶಯನವುಳ್ಳ ಲತಾಗೃಹಗಳನ್ನು ಹೊಕ್ಕು, ಅಂತಃಪುರಸ್ತ್ರೀಯರ ಭಯದಿಂದ ನಡುಗುತ್ತಾ, ದಾಸೀಜನರೊಡನೆ ಸಂಭೋಗವನ್ನು ಮಾಡುತ್ತಿದ್ದನು. ಅಗ್ನಿವರ್ಣನು ಸಮೀಪದಲ್ಲಿದ್ದ ಸುಂದರಿಯರನ್ನು ನೋಡಿ ಅವರನ್ನು ಅವರ ಹೆಸರಿನಿಂದ ಕರೆಯದೆ, ತನ್ನ ಪ್ರೇಮಕ್ಕೆ ಪಾತ್ರರಾದ ಬೇರೆ ಸ್ತ್ರೀಯರ ಹೆಸರಿನಿಂದ ಕರೆಯಲು, ಅವರು ನಿನ್ನ ಇಷ್ಟಸಖಿಯರ ಹೆಸರನ್ನು ನಾವು ಹೊಂದಿದೆವು. ಅವರ ಭಾಗ್ಯವನ್ನೂ ಹೊಂದಬೇಕೆಂಬ ಅಪೇಕ್ಷೆಯುಂಟಾಗುವುದು, ನಮ್ಮ ಮನಸ್ಸು ಲೋಲುಪನಾಗಿದೆ, ಏನು ಮಾಡೋಣ ಎಂದು ಹೆಸರನ್ನು ತಪ್ಪಿ ಕೂಗಿದ ಆತನನ್ನು ಅಪಹಾಸ್ಯದಿಂದ ಜರೆದರು.

ವಿಲಾಸವುಳ್ಳ ಆ ಅಗ್ನಿವರ್ಣನು ಮಲಗಿದ್ದು ಎದ್ದಮೇಲೆ, ಸ್ತ್ರೀಯ ತಿಲಕದ ಕುಂಕುಮಾದಿಗಳಿಂದ ಕೆಂಪುಬಣ್ಣವಾಗಿಯೂ, ಜಾರಿಬಿದ್ದಿರುವ ಪುಷ್ಪಮಾಲಿಕೆ ಯುಳ್ಳದ್ದಾಗಿಯೂ, ಕಿತ್ತುಬಿದ್ದಿರುವ ಮೇಖಲೆಯುಳ್ಳದ್ದಾಗಿಯೂ ಅಲಕ್ತಕರಸಚಿಹ್ನಿತ ವಾಗಿಯೂ ಇರುವ ಅವನ ಹಾಸಿಗೆಯು ಅವನು ಮಾಡಿದ ರತಿಕ್ರೀಡಾವಿಲಾಸ ಭೇದಗಳನ್ನು ಸ್ಪಷ್ಟವಾಗಿ ಸೂಚಿಸುತ್ತಿತ್ತು. ಅಗ್ನಿವರ್ಣನು ಸುಂದರಿಯರ ಪಾದಗಳಿಗೆ ಅಲಕ್ತಕರಸಲೇಪದಿಂದ ತಾನೇ ಚಿತ್ರವನ್ನು ಬರೆಯುತ್ತಿದ್ದನು. ಪ್ರಿಯನ ಹಸ್ತಸ್ಪರ್ಶದಿಂದ ಆ ಕಾಮಿನಿಯರ ನಡುವಿನಿಂದ ವಸ್ತ್ರವು ಜಾರಲು ಅವರ ನಿತಂಬಾದಿಪ್ರದೇಶವು ಇವನ ದೃಷ್ಟಿಯನ್ನಾಕರ್ಷಿಸಿದವು. ಅದರಿಂದ ಅವಧಾನತೆ ತಪ್ಪಿ ಚೆನ್ನಾಗಿ ರಸಲೇಪ ರಚನೆಯನ್ನು ಮಾಡಲಾರದೆ ಹೋದನು. ಚುಂಬನಕಾಲದಲ್ಲಿ ಓಷ್ಠ್ಯಪುಟವನ್ನು ತಿರುಗಿಸಿಕೊಳ್ಳುವುದು, ಮೇಖಲೆಯನ್ನು ಕಳಚುವಾಗ ಕೈಯನ್ನು ತಡೆಯುವುದು, ಹೀಗೆ ಎಲ್ಲದರಲ್ಲಿಯ ಆ ಅಗ್ನಿವರ್ಣನ ಇಚ್ಛಾ ವಿಘ್ನವನ್ನುಂಟುಮಾಡುತ್ತಿದ್ದಾಗ್ಯೂ, ಸ್ತ್ರೀರತ್ನವು ಅವನಿಗೆ ಕಾಮೋದ್ದೀಪಕವಾಗಿಯೇ ಇತ್ತೇ ಹೊರತು, ಉದ್ವೇಗಕಾರಿ ಯಾಗಲಿಲ್ಲ. ಕನ್ನಡಿಯನ್ನಿಟ್ಟುಕೊಂಡು ಸಂಭೋಗಚಿಹ್ನೆಗಳನ್ನು ನೋಡಿ ಕೇಳುತ್ತಿರುವ ಸ್ತ್ರೀಯರ ಹಿಂದೆಯೇ ಬಂದು ಹಾಸ್ಯಕ್ಕಾಗಿ ನಿಂತಿರಲು, ಇವನ ನಗೆಮೊಗದ ಪ್ರತಿಬಿಂಬವನ್ನು ನೋಡಿ ನಾಚಿಕೆಯಿಂದ ತಲೆಯನ್ನು ಬಗ್ಗಿಸಿಕೊಳ್ಳುತ್ತಿದ್ದರು.

ಆ ಸುಂದರಿಯರು ಹಾಸಿಗೆಯಿಂದ ಎದ್ದ ಅಗ್ನಿವರ್ಣನನ್ನು ತಮ್ಮೊಡನೆ ಆ ಶ್ಲೇಷವನ್ನು ಮಾಡಿಕೊಂಡು, ಮೆಟ್ಟಿಂಗಾಲಿಟ್ಟುಕೊಂಡು ರಾತ್ರಿಯ ಕೊನೆಯ ಭಾಗದಲ್ಲಿ ತಮ್ಮನ್ನು ಬಿಟ್ಟು ಹೋಗುವ ಕಾಲದ ಚುಂಬನವನ್ನೂ ಪ್ರಾರ್ಥಿಸುತ್ತಿದ್ದರು. ಅಗ್ನಿವರ್ಣನು

ಕನ್ನಡಿಯಲ್ಲಿ ಇಂದ್ರನಿಗಿಂತ ಮನೋಹರವಾದ ತನ್ನ ರಾಜಚಿಹ್ನೆಗಳನ್ನು ನೋಡಿ, ವ್ಯಕ್ತವಾಗಿ ತೋರುತ್ತಿರುವ ಸಂಭೋಗಚಿಹ್ನೆಯನ್ನು ನೋಡಿದಷ್ಟು ಹರ್ಷಗೊಳ್ಳುತ್ತಿರಲಿಲ್ಲ. ಮಿತ್ರವಾಕ್ಯವನ್ನು ವ್ಯಾಜಮಾಡಿಕೊಂಡು ಅಲ್ಲಿ ನಿಲ್ಲುವುದಕ್ಕೆ ಇಷ್ಟಪಡದೆ ಅನ್ಯತ್ರ ಹೊರಡುತ್ತಿರುವ ಮಿತ್ರನಾದ ಅಗ್ನಿವರ್ಣನನ್ನು ಎಲೈ ಶಠನೇ! ನೀನು ತಪ್ಪಿಸಿಕೊಂಡು ಹೋಗುವುದಕ್ಕಾಗಿ ಹೇಳುವ ನೆವಗಳನ್ನು ನಾವು ಬಲ್ಲೆವು ನಿಲ್ಲು, ಎಂದು ಅವನ ತಲೆಯ ಕೂದಲನ್ನು ಹಿಡಿದೆಳೆದು ನಿಲ್ಲಿಸಿಕೊಳ್ಳುತ್ತಿದ್ದರು. ಗಾಢಪ್ರೀತಿಯಿಂದುಂಟಾದ ಶ್ರಮವನ್ನು ಪರಿಹರಿಸಿಕೊಳ್ಳುವುದಕ್ಕಾಗಿ, ಸುಂದರಿಯರು ಕಂಠಸೂತ್ರವೆಂಬ ಆಲಿಂಗನ ಭೇದವನ್ನು ವ್ಯಾಜಮಾಡಿಕೊಂಡು, ತಮ್ಮ ಉನ್ನತಸ್ತನಗಳ ಘರ್ಷಣೆಯಿಂದ ಅಳಿಸಿಹೋಗಿರುವ ಚಂದನವುಳ್ಳ ಅವನ ವಿಸ್ತಾರವಾದ ವಕ್ಷಸ್ಥಲದಲ್ಲಿ ಮಲಗುತ್ತಿದ್ದರು. ಅಗ್ನಿವರ್ಣನು ಸ್ತ್ರೀಸಂಸರ್ಗಕ್ಕಾಗಿ ರಾತ್ರಿ ಗೂಢವಾಗಿ ಸಂಚರಿಸುತ್ತಿದ್ದದ್ದನ್ನು ಗೂಢಚಾರಿಣಿಯರು ಬಂದು ತಿಳಿಸಲು ಅಂಗನೆಯರು ಅವನೆದುರಿಗೆ ಬಂದು ಅಡ್ಡಗಟ್ಟಿ, ಎಲೈ ಕಾಮುಕನೆ! ಕತ್ತಲೆಯಲ್ಲಿ ತಲೆಯನ್ನು ಮರೆಯಿಸಿಕೊಂಡು ಎಲ್ಲಿಗೆ ಹೋಗುತ್ತೀಯೆ. ಎಂದು ಹಿಡಿದೆಳೆದು ತಮ್ಮ ಮನೆಗೆ ಕರೆತರುತ್ತಿದ್ದರು. ಆ ಅಗ್ನಿವರ್ಣನು ಚಂದ್ರಕಿರಣಗಳಂತೆ ಆಹ್ಲಾದಕರವಾಗಿರುವ, ನಾರಿಯರ ಸ್ಪರ್ಶಸುಖವನ್ನನು ಭವಿಸುವವನಾಗಿ, ರಾತ್ರಿಯಲ್ಲೆಲ್ಲಾ ಎಚ್ಚೆತ್ತಿದ್ದು, ಹಗಲು ನಿದ್ರಿಸುತ್ತಿದ್ದ ಕಾರಣ ಕುಮುದಾಕರವಾದ ಸರೋವರದ ಸಾಮ್ಯವನ್ನು ಪಡೆದನು. ದಂತಕ್ಷತದಿಂದ ಓಷ್ಠ್ಯವು ಬಾಧೆಪಡುತ್ತಿರುವುದರಿಂದ ವೇಣುವಾದ್ಯದಲ್ಲಿಯೂ, ನಖಕ್ಷತದಿಂದ ಉರೋಭಾಗವು ಬಾಧೆಪಡುತ್ತಿರುವುದರಿಂದ ವೀಣಾವಾದ್ಯದಲ್ಲಿಯೂ, ಬೇಸರವುಳ್ಳ ಗಾಯಿಕೆಯರು, ಆ ಅಗ್ನಿವರ್ಣನನ್ನು ಕುಟಿಲದೃಷ್ಟಿಯಿಂದ ಲೋಭಪಡಿಸುತ್ತಿದ್ದರು. ತನ್ನ ಪ್ರಿಯಸುಂದರಿಯರಲ್ಲಿ ರಹಸ್ಯವಾಗಿ, ಆಂಗಿಕ, ಸಾತ್ತ್ವಿಕ, ವಾಚಿಕವೆಂಬ ಮೂರು ಬಗೆಯ ಅಭಿನಯಗಳನ್ನು ಕಲಿತು, ತನ್ನ ಸ್ನೇಹಿತರೊಡನೆ ವಿನೋದವಾಗಿ ಕುಳಿತಿರುವಾಗ ಅವರೆದ್ದು ಈ ಅಭಿನಯಗಳನ್ನು ಮಾಡಿತೋರಿಸುತ್ತಾ, ಅಭಿನಯಶಾಸ್ತ್ರ ಶಿಕ್ಷಕರಾದ ಭರತಾಚಾರ್ಯರೊಡನೆ ಚರ್ಚಿಸಿ ಆಕ್ಷೇಪಣೆ ಮಾಡುತ್ತಿದ್ದನು. ಕೊರಳಲ್ಲಿ ಜೋಲುತ್ತಿರುವ ಅರ್ಜುನ ಮತ್ತು ಗಿರಿಮಲ್ಲಿಕಾ ಪುಷ್ಪಗಳ ಮಾಲಿಕೆಯುಳ್ಳವನಾಗಿಯೂ, ಕದಂಬಕುಸುಮಗಳ ಪರಾಗದ ಅಂಗರಾಗವುಳ್ಳವನಾಗಿಯೂ ಇರುವ ಆ ಅಗ್ನಿವರ್ಣನಿಗೆ, ವರ್ಷಾಕಾಲದಲ್ಲಿ ಕೃತಕಾಚಲಗಳ ಮೇಲೆ, ಮತ್ತಮಯೂರಗಳೊಡನೆ ವಿಹಾರವು ಸಂಭ್ರಮದಿಂದ ನಡೆಯುತ್ತಿದ್ದಿತು. ಆ ವರ್ಷಾಕಾಲದಲ್ಲಿ ಅಗ್ನಿವರ್ಣನು ಪ್ರಣಯಕಲಹದಿಂದ ತನ್ನಲ್ಲಿ ವಿಮುಖಿಯರಾದ ಸಖಿಯರನ್ನು ಸಮಾಧಾನ ಗೊಳಿಸುವುದಕ್ಕೆ ಆತುರಪಡುತ್ತಿರಲಿಲ್ಲ. ಗುಡುಗಿನ ಶಬ್ದಕ್ಕೆ ಹೆದರಿ ತನ್ನ ಭುಜಮಧ್ಯದಲ್ಲಿ ಅವಿತುಕೊಳ್ಳುವುದಕ್ಕಾಗಿ ತಾವಾಗಿ ಅಭಿಮುಖಿಯರಾಗಿ ಬರುವುದನ್ನೂ ಅಪೇಕ್ಷಿಸುತ್ತಿದ್ದನು.

ಅಗ್ನಿವರ್ಣನು ಹಿಮಬಾಧೆಯನ್ನು ಕಡಿಮೆಮಾಡುವದಕ್ಕಾಗಿ ಮೇಲ್ಕಟ್ಟುಗಳನ್ನು ಕಟ್ಟಿ ಅಲಂಕರಿಸಿರುವ ಉಪ್ಪರಿಗೆಗಳಲ್ಲಿ ಸುಂದರಿಯರಾದ ಸ್ತ್ರೀಯರೊಡನೆ ಕಾರ್ತಿಕಮಾಸದ ರಾತ್ರಿಗಳಲ್ಲಿ ಕ್ರೀಡಿಸುತ್ತಿದ್ದು, ಮೇಘಾವೃತವಾಗದಿರುವುದರಿಂದ ಸ್ವಚ್ಛವಾಗಿರುವ ಬೆಳ್ದಿಂಗಳಿನಲ್ಲಿ ಸುರತಶ್ರಮೆಯನ್ನು ಪರಿಹಾರಮಾಡಿಕೊಳ್ಳುತ್ತಿದ್ದನು. ಆ ಉಪ್ಪರಿಗೆಯ ಗವಾಕ್ಷಗಳಲ್ಲಿ ನೋಡುತ್ತಿರಲು, ಮೇಖಲೆಯಂತೆ ರಮ್ಯವಾಗಿರುವ ಹಂಸಪಕ್ಷಿಗಳಿಂದ ಕೂಡಿದ ಸರಯೂನದಿಯ ಪುಳಿನಪ್ರದೇಶಗಳು ಪ್ರಿಯೆಯರ ನಿತಂಬಗಳಂತೆ ರಮ್ಯವಾಗಿ ಕಾಣಬರುತ್ತಿರಲು ಆ ಪ್ರಿಯೆಯರ ವಿಲಾಸಸೂಚಕಗಳಾದ ಆ ಪುಳಿನಪ್ರದೇಶಗಳನ್ನು ಬಹುಸಂಭ್ರಮದಿಂದ ನೋಡುತ್ತಿದ್ದನು. ಕಾಮಿನಿಯರು ಹಿಮದ ಶೈತ್ಯವನ್ನು ಹೋಗಲಾಡಿಸುವುದಕ್ಕಾಗಿ ಅಗುರುಧೂಪದಿಂದ ಕಾಸಿರುವುದ ರಿಂದ ಗರಿಮುರಿಯಾಗಿರುವ ಸೀರೆಯನ್ನುಟ್ಟುಕೊಳ್ಳುವಾಗ, ಸ್ವರ್ಣಕಾಂಚಿಧಾಮಗಳನ್ನು ತೆಗೆದಿಟ್ಟು ನೀವಿಯನ್ನು ಬಂಧಿಸುವುದು, ಸಡಲಿಸುವುದು, ಇವುಗಳಲ್ಲಿ ಆದರಾತಿಶಯವುಳ್ಳ ಅಗ್ನಿವರ್ಣನನ್ನು, ಆ ವಸ್ತ್ರದ ಶಬ್ದದಿಂದ ಒಂದೆಡೆ ಆಕರ್ಷಿಸುತ್ತಿದ್ದರು. ಗರ್ಭಾಗಾರಗಳಲ್ಲಿ ವಾಯುಸಂಚಾರವಿಲ್ಲದುದರಿಂದ ನಿಶ್ಚಲವಾಗಿ ನಿಂತಿರುವ ದೀಪಗಳೆಂಬ ದೃಷ್ಟಿಗಳುಳ್ಳವುಗಳಾಗಿಯೂ, ನಾನಾವಿಧ ಸುರತಕ್ರಿಯಾ ಭೇದಗಳಿಗೆ ಅವಕಾಶವುಳ್ಳವುಗಳಾಗಿಯೂ, ಇರುವ ಹೇಮಂತಋತುವಿನ ರಾತ್ರಿಗಳು ಆ ಅಗ್ನಿವರ್ಣನಿಗೆ ಸಾಕ್ಷಿಗಳಾಗಿದ್ದವು. ಅಂಗನೆಯರು ದಕ್ಷಿಣಮಾರುತ ಸಂಚಾರದಿಂದ ವಿಕಸಿತವಾಗಿರುವ ಚೂತಮಂಜರಿಯನ್ನು ನೋಡಿ ಆ ಅಗ್ನಿವರ್ಣನ ದುಸ್ಸಹವಿಯೋಗವನ್ನು ಸಹಿಸಲಾರದೆ ತಾವಾಗಿ ಪ್ರಣಯಕೋಪಗಳನ್ನು ಬಿಟ್ಟು ಪ್ರಸನ್ನತೆಯನ್ನು ಹೊಂದಿದರು. ಪ್ರಿಯಸುಂದರಿಯರನ್ನು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು ತೂಗುಮಣೆಯಲ್ಲಿ ಕುಳಿತು, ಪರಿಜನರು ತೂಗಿಬಿಡಲು, ತಾನು ತೂಗುಮಣೆಯ ಹಗ್ಗಗಳು ಕಿತ್ತುಹೋಗುವಷ್ಟು ವೇಗವಾಗಿ ತೂಗುತ್ತಿದ್ದುದ್ದರಿಂದ ಬಿದ್ದು ಹೋದೇವೆಂಬ ಭಯವ್ಯಾಜದಿಂದ ಆ ಕಾಮಿನಿಯರು ಬಾಹುಗಳಿಂದ ಮಾಡುತ್ತಿರುವ ದೃಢವಾದ ಕಂಠಾಶ್ಲೇಷೆಗಳನ್ನು ಹೊಂದಿ ಸ್ಪರ್ಶಸುಖ ವನ್ನನುಭವಿಸುತ್ತಿದ್ದನು.

ಸ್ತನಗಳಲ್ಲಿ ಚಂದನಲೇಪ ಮಾಡಿಕೊಳ್ಳುವುದು, ಮುಕ್ತಾಮಣಿಗಳುಳ್ಳ ಭೂಷಣಗಳನ್ನು, ಮರಕತಾದಿ ರತ್ನಗಳುಳ್ಳ ಕಾಂಚೀ ಕಲಾಪವನ್ನು ಧರಿಸುವುದು, ಮೊದಲಾದ ಗ್ರೀಷ್ಮ ಕಾಲಕ್ಕೆ ತಕ್ಕ ಶೈತ್ಯ ಸಂಪಾದಕವೇಷಗಳಿಂದ ಯುವತಿಯರು ಆ ಅಗ್ನಿವರ್ಣನನ್ನು ಸೇವಿಸುತ್ತಿದ್ದರು. ಅಗ್ನಿವರ್ಣನು ಮಾವಿನ ಚಿಗುರು, ಪಾದರಿಹೂ, ಇವುಗಳನ್ನು ಸೇರಿಸಿ ಶೀತವಾಗಿರುವ ಮದ್ಯವನ್ನೂ ಪಾನಮಾಡಿದನು. ಆದಕಾರಣ

ವಸಂತಋತುವು ಕಳೆದ ತರುವಾಯ ಮಂದವೀರ್ಯನಾದ ಅವನ ಕಾಮವು ಪುನಃ ಹೊಸದಾದಂತೆ ಪ್ರಬಲವಾಯಿತು. ಹೇಗೆ ಅನಂಗಪ್ರೇರಿತನಾದ ಆ ಅಗ್ನಿವರ್ಣನು ಇತರ ಕಾರ್ಯಗಳಲ್ಲಿ ವಿಮುಖನಾಗಿ, ಇಂದ್ರಿಯಸುಖದಲ್ಲಿಯೇ ಮಗ್ನನಾಗಿ ಆಯಾಕಾಲಸೂಚನೆಗಳಿಂದ ತೋರಿಬರುತ್ತಿರುವ ಋತುಗಳ ಪರಂಪರೆಗಳನ್ನು ಕಳೆಯುತ್ತಿದ್ದನು. ಕಾಮಿನೀವ್ಯಸನನಾಗಿದ್ದರೂ ಶತ್ರುರಾಜರು ಪ್ರಭಾವಾತಿಶಯದಿಂದ ಆ ಅಗ್ನಿವರ್ಣನನ್ನು ಆಕ್ರಮಿಸಲಾರದೆ ಹೋದರು. ರತ್ಯಾಸಕ್ತಿಯಿಂದಾದ ರೋಗವು ದಕ್ಷಶಾಪವು ಚಂದ್ರನಿಗೆ ಕ್ಷಯರೋಗವನ್ನುಂಟುಮಾಡಿದಂತೆ ಇವನನ್ನು ಕ್ಷೀಣನನ್ನಾಗಿ ಮಾಡಿತು. ವೈದ್ಯರಮಾತನ್ನು ಸ್ವಲ್ಪವೂ ಲಕ್ಷ್ಯಮಾಡದೆ ಆ ಅಗ್ನಿವರ್ಣನು – ಸ್ತ್ರೀಮದ್ಯಾದಿ ಸಂಗವಸ್ತುಗಳಿಂದ ರೋಗೋತ್ಪತ್ತಿಯಾಗುವುದೆಂದು ಅವುಗಳನ್ನು ಬಿಡಲಿಲ್ಲ. ಇಂದ್ರಿಯಸಮೂಹವು ರುಚಿಕರಗಳಾದ ವಿಷಯಗಳಿಂದ ಆಕ್ರಾಂತವಾದರೆ ಅವುಗಳಿಂದ ಬಿಡಿಸಿಕೊಳ್ಳುವುದು ಅಸಾಧ್ಯವಲ್ಲವೇ! ಬಿಳುಪೇರಿದ ಮುಖವೂ, ಧರಿಸಲಶಕ್ತತೆಯಿಂದ ಅಲ್ಪಾಭರಣಧಾರಣೆಯೂ, ಪರರಹಸ್ತಾವಲಂಬನದಿಂದ ಸಂಚಾರವೂ, ಹೀನಸ್ವರವೂ ಇವೇ ಮೊದಲಾದ ಕ್ಷಯರೋಗ ಸಂಬಂಧವಾದ ಕ್ಷೀಣತೆಯು, ಅವನ ಕಾಮುಕಾವಸ್ಥೆಗೆ ತಕ್ಕಂತೆ ಇತ್ತು. ದೊರೆಯು ಹೀಗೆ ಕ್ಷಯರೋಗಗ್ರಸ್ತನಾಗಲು, ಆ ರಘುವಂಶವು, ಕೊನೆಯ ತಲೆಯೊಂದು ಮಾತ್ರವುಳ್ಳ ಚಂದ್ರನಿರುವ ಆಕಾಶದಂತೆಯೂ, ಕೆಸರುಮಾತ್ರ ಉಳಿದಿರುವ ಹೊಂಡದಂತೆಯೂ, ಸಣ್ಣಗೆ ಉರಿಯುತ್ತಿರುವ ಸೊಡರಿನಂತೆಯೂ, ಕಾಂತಿರಹಿತವಾಗಿತ್ತು. ಅಗ್ನಿವರ್ಣನ ಮಂತ್ರಿಗಳು, ದೊರೆಗೆ ಏನೋ ರೋಗವಿರಬಹುದೆಂದು ಅನುಮಾನಪಡುತ್ತಿದ್ದ ಪ್ರಜೆಗಳಿಗೆ ಆತನ ಮಂತ್ರಿಗಳು ರೋಗವನ್ನು ಮುಚ್ಚಿ, ದೊರೆಯು ಸಂತಾನಾಪೇಕ್ಷೆಯಿಂದ ಜಪಾದಿಗಳನ್ನು ಮಾಡುತ್ತಿರುವನೆಂದು ಹೇಳುತ್ತಿದ್ದರು. ಆ ಅಗ್ನಿವರ್ಣನು ಅನೇಕ ಪತ್ನಿಯರುಳ್ಳವನಾದರೂ ಮಕ್ಕಳಿಲ್ಲದವನಾಗಿ, ವೈದ್ಯರ ಪ್ರತಿಕ್ರಿಯೆಗೆ ತಗ್ಗದ ರೋಗವನ್ನು ಹೊಂದಿ, ದೊಡ್ಡದೀಪವು ವಾಯುವನ್ನು ಅತಿಕ್ರಮಿಸಲಾರದಂತೆ ಆ ರೋಗಬಾಧೆಯನ್ನು ಪರಿಹಾರ ಮಾಡಿಕೊಳ್ಳಲಾರದೆ ರೋಗವಶನಾದನು. ಮಂತ್ರಿಗಳು ಮೃತನಾದ ದೊರೆಯ ಕಳೇಬರವನ್ನು ಅಪರ ಪ್ರಯೋಗಜ್ಞನಾದ ಪುರೋಹಿತನ ಮೂಲಕ, ಉಪವನದಲ್ಲಿ ರೋಗಶಾಂತಿ ಎಂಬ ವ್ಯಾಜದಿಂದ ಗೂಢವಾಗಿ ದಹಿಸಿದರು. ಮಂತ್ರಿಗಳು–ಪ್ರಮುಖರಾದ ಪ್ರಜೆಗಳನ್ನು ಕರೆಯಿಸಿ, ಅಗ್ನಿವರ್ಣನ ಪತ್ನಿಯೊಬ್ಬಳು ಗರ್ಭಿಣಿಯಾಗಿರುವುದನ್ನು ಕಂಡು, ಆಕೆಗೆ ರಾಜ್ಯಪಟ್ಟವನ್ನು ಕಟ್ಟಿದರು. ಈ ಪ್ರಕಾರವಾಗಿ ರಾಜನು ಮೃತನಾದನೆಂಬ ದುಃಖದಿಂದ ಸುರಿಸಿದ ಕಣ್ಣೀರುಗಳಿಂದ ಮೊದಲು ತಾಪವನ್ನು ಹೊಂದಿದ್ದ ಆಕೆಯ ಗರ್ಭವು, ರಾಜ್ಯಾಭಿಷೇಕಕ್ಕಾಗಿ ಸುವರ್ಣ ಕುಂಭಗಳಿಂದ

ಸುರಿವ ಶೀತೋದಕದಿಂದ ತಾಪಶಾಂತಿಯನ್ನು ಹೊಂದಿತು. ರಾಣಿಗೆ ಪ್ರಸವಕಾಲವು ಯಾವಾಗ ಪ್ರಾಪ್ತವಾಗುವುದೋ ಎಂದು ನಿರೀಕ್ಷಿಸುತ್ತಿರುವ ಪ್ರಜೆಗಳ ಪುರೋಭಿವೃದ್ಧಿಗಾಗಿ, ಶ್ರಾವಣಮಾಸದಲ್ಲಿ ಬಿತ್ತಿದ ಬೀಜವನ್ನು ಭೂಮಿಯು ಹೇಗೆ ಗೋಪ್ಯವಾಗಿಟ್ಟುಕೊಂಡಿರುವುದೋ ಹಾಗೆ ಆ ಗರ್ಭವನ್ನು ಧರಿಸಿರುವ ರಾಣಿಯು, ಆಪ್ತರಾದ ವೃದ್ಧಮಂತ್ರಿಗಳೊಡನೆ ಸಿಂಹಾಸನವನ್ನು ಹೊಂದಿ, ಪತಿಯ ಆಜ್ಞಾನುಸಾರವಾಗಿ ಕ್ರಮವಾಗಿ ರಾಜ್ಯವನ್ನು ಆಳುತ್ತಿದ್ದಳು.

ಮುಗಿಯಿತು

ಅನುಬಂಧಗಳು

ಅನುಬಂಧ 1 : ಶಬ್ದಾರ್ಥಗಳು,

ಅನುಬಂಧ 2 : ಟಿಪ್ಪಣಿಗಳು

ಅನುಬಂಧ 3 : ರಘುವಂಶದ ಕನ್ನಡ ಅನುವಾದಗಳು

ಅನುಬಂಧ 4 : ಸಹಾಯಕಸಾಹಿತ್ಯ (ಕನ್ನಡ)

ಅನುಬಂಧ 5 : "ರಘುಕುಲ ಚರಿತಂ" ಮೊದಲ ಮುದ್ರಣದ ರಕ್ಷಾಪುಟಗಳು

ಅನುಬಂಧ-1
ಶಬ್ದಾರ್ಥಗಳು

ಅ

ಅಂಕೋಲೆ ಗಿಡಗಳು- ಸರಳಾ ಅಥವಾ ದೇವದಾರು ವೃಕ್ಷಗಳು
ಅಂತ್ಯೇಷ್ಟಿ- ಅಪರ ಕಾಯ, ಪಿಂಡಾಕಾಂಕ್ಷಿಗಳಾದವರಿಗೆ ಮಾಡುವ ಕಾಯ
ಅಕೋಲೆಯ ಗಿಡ- ಅಕ್ಷೋಟ(ಅಕ್ರೋಟು ಮರ)
ಅರ್ಜುನ ವೃಕ್ಷದ ಹೂಗಳು- ಇಂದ್ರದ್ರುಮ
ಅಡ್ಡ ವಿಡ್ಡೂರ- ಕಷ್ಟ ನಿಷ್ಠೂರ, ಅಡ್ಡಿ ಆತಂಕ
ಅರ್ಥ ವಿಜ್ಞಾನ- ಸರಿಯಾದ ಅರ್ಥವನ್ನು ನಿರ್ಧರಿಸಿ ಕೊಳ್ಳುವುದು
ಅನಶನ ವ್ರತ- ಉಪವಾಸವ್ರತ
ಅನಿರ್ವರ್ತ್ಯವಲ್ಲದ- ಬೇರೆಯವರಿಂದ ನಿವಾರಿಸಲಾಗದ
ಅನುವರ್ತಿಸು- ಅನುಸರಿಸು
ಅಭಿಸಾರಿಕೆ-ಪ್ರಿಯನನ್ನು ಕೂಡಲು ಸಂಕೇತಸ್ಥಾನಕ್ಕೆ ಹೋಗುವ ಪ್ರೇಯಸಿ
ಅಮರ್ದರ್ಕ್ಕೆಣೆಯಾದ ವರ್ಣಾವಳಿ - ಅಮೃತ ಸಮಾನವಾದ ಮಾತುಗಳು
ಅಮರಾಧಿಪತಿ- ಇಂದ್ರ
ಅಮೃತಂ-ಯಜ್ಞಶೇಷ, ದೇವತೆಗಳ ಆಹಾರ, ನೀರು, ಹಾಲು
ಅರೆಗಾವುದ ದೂರ - ಅರ್ಧಗಾವುದ ದೂರ. ಸುಮಾರು ಒಂದೂವರೆ ಮೈಲಿ ದೂರ
ಅರ್ಜುನವೃಕ್ಷ - ಇಂದ್ರದ್ರುಮ, ಕೆಂಪು ಮತ್ತಿಮರ
ಅಲಂಕಾರ- ವೇಷ
ಅಲಕೇಶ್ವರ- ಕುಬೇರ

ಅಷ್ಟದಿಕ್ಪಾಲಕರು-ಇಂದ್ರ, ಅಗ್ನಿ, ವಾಯು, ಯಮ, ನೈರುತ್ಯ, ವರುಣ,
ಕುಬೇರ, ಈಶಾನ

ಅಸಿಧಾರಾ ವ್ರತ-ಕಠಿಣ ವ್ರತ

ಅಸುರಾಂಗನೆ - ರಾಕ್ಷಸ ವನಿತೆ

ಅಸ್ತಾಭಿಮುಖವಾಯಿತು- ಪಶ್ಚಿಮ ಗಿರಿಗೆ ಸೂರ್ಯಪ್ರಭೆ ತೆರಳಿತು

ಆ

ಆಕಾರ - ರೂಪ

ಆಖೇಟ - ಬೇಟೆ

ಆಣೆ- ಆಜ್ಞೆ, ಅಪ್ಪಣೆ

ಆತ್ಮನ್-ಶರೀರ , ಮನಸ್ಸು ,ಬುದ್ದಿ , ಸ್ವರೂಪ,

ಆಪಗೆ - ನದಿ

ಆರಂಭ-ಮೊದಲು, ಕೈಕೊಂಡ ಕೆಲಸ

ಆಲಾನ - ಆನೆಯನ್ನು ಕಟ್ಟಿ ಹಾಕುವ ಗೂಟ

ಆಲೀಢ - ಬಿಲ್ಲಾಳುಗಳು ಬಾಣ ಬಿಡುವ ಭಂಗಿ

ಆಲೋಕ-ಬೆಳಕು, ನೋಡುವದು, ವಂದಿಗಳ ಹೊಗಳಿಕೆ

ಉ

ಉಕ್ಕುಳಿಸು- ಉಕ್ಕಿ ಬರುವ

ಉಜ್ಜುಗಿಸು- ತೊಡಗಿಸು

ಉತ್ಪಾತ ವಾತ- ಬಿರುಗಾಳಿ

ಉದಾಯುಧರು- ಆಯುಧಗಳಿಂದ ಸಜ್ಜಿತರು, ಆಯುಧಗಳನ್ನು ಎತ್ತಿರುವವರು

ಉಪಹಾರ- ಉಡುಗೊರೆ, ಕೊಡುಗೆ

ಉಪಾಯ-ಹತ್ತಿರಕ್ಕೆ ಬರುವದು, (ಸಾಧನ), ನೀತಿಯ ಉಪಾಯಗಳು

ಉಪಾಯನ- ಉಡುಗೊರೆ

ಉರುಚಿ- ಆರ್ಭಟ

ಉರ್ವರೀಶ– ಚಕ್ರವರ್ತಿ

ಊ

ಊಡಾಗು– ಆಧಾರವಾಗು

ಊರ್ಣ ಮಂಗಳಸೂತ್ರ– ಉಣ್ಣೇ ದಾರದ ತಾಳಿ

ಋ

ಋಕ್ಷ ವತ್– ಪರ್ವತ ಪ್ರಾಂತ

ಋಣತ್ರಯ – ಮೂರು ಋಣಗಳು: ದೇವ ಋಣ, ಋಷಿ ಋಣ, ಪಿತೃ ಋಣ,

ಎ

ಎಗ್ಗ– ದಡ್ಡ, ಮೂರ್ಖ ವಿಚಾರ ಮೂಢ

ಎಣ್ಣೆಯಿಲ್ಲದ ದೀವಿಗೆ– ಅಸ್ನೇಹ ದೀಪಿಕಾ

ಎರವಲು – ನ್ಯಾಸ

ಏ

ಏರಗಟ್ಟು– ಎತ್ತಿ ಕಟ್ಟು

ಒ

ಒತ್ತಾದ – ದಟ್ಟವಾದ

ಒಳ್ಗಜ್ಜ – ಸತ್ಕಾರ್ಯ

ಓ

ಓಷ್ಠ್ಯಪುಟ–ಮೇಲ್ತುಟಿ

ಕ

ಕಂದಳೀ ಕುಸುಮ– ಕರೇ ತಾವರೆ

ಕಕುಭ ವೃಕ್ಷ– ಕೆಂಪು ಮತ್ತಿ ಮರ

ಕಜ್ಜ– ಕಾರ್ಯ

ಕಟಕ– ತೋಳುಬಳೆ, ಚೈತ್ರಭೂಷಣವೆಂಬ ಆಭರಣ

ಕಟ್ಟು ಗೊತ್ತು– ಅಲಾನ, ಆನೆಯನ್ನು ಕಟ್ಟಿಹಾಕುವ ಗೂಟ

ಕರ್ಣಾಕರ್ಣಿಕೆ– ಕಿವಿಯಿಂದ ಕಿವಿಗೆ ತಲುಪುವ ಸುದ್ದಿ

ಕಣ್ಣಿ– ಹಸುವನ್ನು ಗೂಟಕ್ಕೆ ಕಟ್ಟುವ ಹಗ್ಗ

ಕನ್ನೆ ಗಡಸು– ಒಂಟಿ ಕರು ಹಾಕಿದ ಹಸು

ಕಪೋಲ– ಕೆನ್ನೆ

ಕಪ್ಪ– ಹೊಂಡ, ಖೆಡ್ಡಾ

ಕರರುಹ – ಕೋಮಲ ಹಸ್ತ

ಕರೇಣು– ಆನೆ

ಕಳತ್ರ ನಿಂದೆ–ಹೆಂಡತಿ ಮೇಲಿನ ನಿಂದೆ, ಜನಾಪವಾದ, ಅಪಕೀರ್ತಿ

ಕಾಂಭೋಜದೇಶ – ಆಫ್ಘಾನಿಸ್ಥಾನ, ಮಧ್ಯ ಏಷ್ಯಾಖಂಡದ ಭೂಭಾಗ.

ಕಾಕಾಸುರ– ಇಂದ್ರಪುತ್ರ, ಕಾಗೆ

ಕಾಚಿಯ ಹೂ– ಕಾಶ ದರ್ಭೆಗಳ ಹೂವು

ಕಾಟಿಕೆ– ಕಾಡಿಗೆ

ಕಾವು– ದಂಟು, ಕಾಂಡ

ಕಿಂಕರಿ –ಸೇವಕಿ

ಕಿಂ ವದಂತಿ– ಜನಶ್ರುತಿ, ಜನರಲ್ಲಿ ಹರಡಿರುವ ಸುದ್ದಿ

ಕುಲಕ – ಐದು ಶ್ಲೋಕಗಳಿಗೂ ಅನ್ವಯವಾಗುವ ಒಂದೇ ಕ್ರಿಯಾಪದ ಇರುವ ಶ್ಲೋಕಗುಚ್ಛದ ಹೆಸರು

ಕುಲಿಶ– ವಜ್ರಾಯುಧ

ಕೂರ ಮಿಕ– ಕ್ರೂರ ಮೃಗ

ಕೇಡಿಗೆ ದುರ್ಬುದ್ಧಿ – ವಿನಾಶಕಾಲೇ ವಿಪರೀತಬುದ್ಧಿ ಎಂಬ ಸೂಕ್ತಿಯ ಅನುವಾದ.

ಕೈಯ್ಯೂಡು ಮಾಡಿಕೊಂಡು– ಕೈಯಾಧಾರ ಮಾಡಿಕೊಂಡು

ಕೈವಾಡಗಾರರು– ಶಿಲ್ಪಿಗಳು

ಕೊಂಬು– ದಂತ

ಕೌಲೀನ– ಕಳಂಕದ ಸುದ್ದಿ, ಕುಲಕ್ಕೆ ಅಂಟಿದ ಅಪಕೀರ್ತಿ

ಕ್ರಥಕೈಶಿಕ– ವಿದರ್ಭ ರಾಜ್ಯ

ಕ್ಷುರಪ್ರ – ಕುದುರೆ ಲಾಳ ಕಾರದ ತುದಿಯಂತೆ ಇರುವ ಉಕ್ಕಿನ ಬಾಣ

ಗ

ಗಂದುಡಿ– ಪಟವಾಸಃ, ಗಂಧದ ಹುಡಿ

ಗಡಸು– ಪ್ರಪಾತ

ಗಡ್ಡೆಗೆ– ದಡಕ್ಕೆ

ಗುಜ್ಜಾರಿ–ಕುಳ್ಳ

ಗುಣ–ಹುರಿ, ಸಂಧಿ ನೀತಿಯ ಗುಣ, ಪದಾರ್ಥದ ಧರ್ಮ,

ಗುರು–ಉಪದೇಶಕ, ತಂದೆ , ಒಡೆಯ

ಗೂಟಾಡು – ಗುದ್ದಾಡು, ತಿವಿದಾಡು ದಂತಗಳಿಂದ

ಗೂಡಾರ– ಪಟಭವನ, ಕೃತಕ ಮಂದಿರ

ಗೇದಗೆ– ಕೇತಕೀ ಪುಷ್ಪ, ಆ ಕೇದಗೆಯ ಗರಿ

ಗೋ ಪ್ರತರಣ– ಗೋವುಗಳ ಹಾರಾಟ(ಗದ್ದಲ)

ಗೋ–ಎತ್ತು, ಹಸು, ನಕ್ಷತ್ರ , ಕಿರಣ, ಮಾತು, ಭೂಮಿ,

ಗೋತ್ರಾರಿ– ಇಂದ್ರ

ಘ

ಘಾತು ಜಂತು– ಕ್ರೂರ ಪ್ರಾಣಿ, ಹಿಂಸ್ರಪಶು

ಚ

ಚಮ್ಮಟಿಗೆ– ಸುತ್ತಿಗೆ, ಕೊಡತಿ

ಚಾಮೀಕರ ಜಾಲ – ಚಿನ್ನದ ಕಿಟಕಿ

ಚಿತ್ರಶಿಖಿ ನವಿಲು – ಬಣ್ಣದ ಜುಟ್ಟಿರುವ ಗಂಡು ನವಿಲು

ಚೀರಾಂಬರರು – ಮುನಿಗಳು, ನಾರುಡೆಯವರು

ಜ

ಜಕ್ಕವಕ್ಕಿ– ಚಕ್ರವಾಕ ಪಕ್ಷಿ

ಜಡೆ ಬಂಗಾರ– ಬಂಗಾರದ ಬಿಲ್ಲೆಯೊಂದಿಗೆ ಸಿಂಗರಿಸಿದ ಜಡೆ

ಜನಸ್ಥಾನ – ಅರಣ್ಯ, ಖರದೂಷಣರು ವಾಸಿಸುತ್ತಿದ್ದ ಸ್ಥಳ

ಜರೆ– ವೃದ್ಧಾಪ್ಯ , ಮುಪ್ಪು

ಜಲಗಾಡಿ– ಜಾಲಾಡಿ

ಜಲಧಾರಾ ಯಂತ್ರ – ನೀರು ಚಿಮುಕಿಸುವ ಯಂತ್ರ

ಜಳವೆ – ಮರಕುಟಕನ ಹಕ್ಕಿಗಳು ಬಿದಿರುಗಳಲ್ಲಿ ಕೊರೆದು ಮಾಡಿದ ರಂಧ್ರಗಳು

ಜಾತಕರ್ಮ –ಷೋಡಶಕರ್ಮಗಳಲ್ಲಿ ಒಂದು

ಜಾಲಿಕ– ಬೆಸ್ತ

ಜುಳುಪೇ ಕೂದಲಿನವನು– ಜುಟ್ಟು ಬಿಟ್ಟವನು

ಟ

ಟಂಕಿ – ಬಿಡಾರ, ಶಿಬಿರ, ವಸತಿ

ತ

ತರ್ಜನಿ– ಹೆಬ್ಬೆರಳಿನ ಪಕ್ಕದ ಬೆರಳು, ತೋರುಬೆರಳು

ತಣಿವಾರ– ತೃಪ್ತಿ ಹೊಂದುವಷ್ಟು (ಮನತಣಿಯುವವರೆಗೆ)

ತತ್ತ್ವಜ್ಞಾನ – ಇದಮಿತ್ತಂ ಎಂದು ತತ್ವ ನಿಶ್ಚಯ ಮಾಡುವುದು

ತನು– ತಂಪು, ತಣ್ಣಗೆ, ಶೀತ

ತನೂಭವ– ಮಗ

ತಟಾಬು – ತೂತು, ರಂಧ್ರ.

ತಲೆಯ ಪಾಗ – ರಾಜನ ಕಿರೀಟ (ಪೇಟ)

ತಾವು– ನೆಲೆ

ತಿಬ್ಬಳಿ– ತಿಳಿವಳಿಕೆ

ತೀರ್ಥ ಸ್ನಾನ – ಪುಣ್ಯಕ್ಷೇತ್ರಗಳ ತೀರ್ಥಸ್ನಾನ

ತುಂಗೆ ಗಡ್ಡೆಯ ಮೊಳಕೆಗಳು – ಮುಸ್ತೆಯ ಹುಲ್ಲಿನ ಚಿಗುರುಗಳು

ತುಂಗೆಯ ದಂಟು– ಹುಲ್ಲಿನ ಕಂತೆ ಅಥವಾ ಮುಲ್ಲಂಗಿ ಕಂತೆ

ತುರಂಗಮ– ಕುದುರೆ

ತೆರೆಯಾಣ್ಮ– ಭೂಪತಿ

ತೊಡವು– ಆಭರಣ

ತೋರ– ದಪ್ಪ

ತ್ರಿಕಾಲ ಸ್ನಾನ– ಮೂರು ಜಾವಗಳಲ್ಲಿ(ಬೆಳಿಗ್ಗೆ, ಮಧ್ಯಾಹ್ನ, ಸಂಜೆ)
ಮಾಡುವ ಸ್ನಾನ

ತ್ರಿಯಾಮ – ಮೂರು ಜಾವ

ದ

ದರ್ಭಾಸ್ತರಣ– ದರ್ಭೆ ಹುಲ್ಲಿನ ಹಾಸಿಗೆ

ದಶಗಳ– ದಶಕಂಠ, ರಾವಣ

ದಶರಥ – ದಶದಿಕ್ಕುಗಳಲ್ಲಿಯೂ ರಥವನ್ನು ನಡೆಸುವ ಸಾಮರ್ಥ್ಯವುಳ್ಳವನು.

ದಾಳ– ಧ್ವಜ, ದಂಡ

ದಿವೌಕಸರು– ದೇವತೆಗಳು

ದೀವಿಗೆ– ದೀವಟಿಗೆ, ಬೆಳಕಿನ ಪಂಜು

ದುರೋದರ – ದ್ಯೂತ, ಜೂಜು

ದೇವ ಹೊನ್ನೆಮರ– ನಮೇರು ಮರ, ಸುರ ಪುನ್ನಾಗ ವೃಕ್ಷ

ದೇವಋಣ, ಪಿತೃಋಣ, ಋಷಿಋಣ– ಗುಣತ್ರಯಗಳು

ದೊಂಬಿಯ ಕಾಳಗ– ಘೋರ ಯುದ್ಧ

ದೌವಾರಿಕ – ದ್ವಾರಪಾಲಕ

ದ್ವಾರಪಾಲಿಕೆ– ಅಂತಃಪುರದಲ್ಲಿ ಬಾಗಿಲು ಕಾಯುವವಳು

ದ್ವಿಪೇಂದ್ರ– ಆನೆಗಳಲ್ಲಿ ಶ್ರೇಷ್ಠ ಜಾತಿಯ ಆನೆ

ನ

ನಭೋಮಾಸ–.ಶ್ರಾವಣಮಾಸ

ನರೆ– ಬಿಳಿಕೂದಲು

ನಾಲ್ಕನೆಯ ಅಗ್ನಿ– ಅತಿಥಿ ಕೌತ್ಸ ಮುನಿ

ನಿಂತುಕೊಂಬನು– ನಿಂತುಕೊಳ್ಳುವನು

ನಿರ್ಬಂಧ– ಒತ್ತಾಯ

ನಿರ್ಮಾಲ್ಯ –ಪೂಜೆ ಮಾಡಿದ ಹೂವು

ನೀರಾಜನ – ಆರತಿ, ಆರತಿಯ ಸೊಡರು

ನೀವಾರ ಪಾಕಾದಿಗಳು –ಕಾಡಿನಲ್ಲಿ ಬೆಳೆಯುವ ಸಾವೆ ಮೊದಲಾದ ಕಾಳುಕಡಿಗಳು

ನೂಕಾಡು– ಕೋರೆ ದಂತಗಳಿಂದ ತಿವಿದಾಡು

ನೆಲ ಮೊಗ– ಬೋರಲು

ನೇಲು – ತೂಗಾಡು

ನೋಂಪಿ– ವ್ರತ

ನ್ಯಾಸ–ಇಡುವದು, ತ್ಯಾಗ, ಒಬ್ಬರಲ್ಲಿಟ್ಟಿರುವ ವಸ್ತು.

ಪ

ಪಂಚಭೂತ – ಆಕಾಶ, ಭೂಮಿ, ಆಪ್, ತೇಜ, ವಾಯು

ಪಂಚಾರತಿ– ನೀರಾಜನ ವಿಧಿಗಳಲ್ಲಿ ಒಂದು ಬಗೆ, ಐದು ಬತ್ತಿಯ ಆರತಿ

ಪಂದು ಹೊಳೆ– ಬಿರುಕುಗಳಿಂದ ಹಳಿವ ಝರಿಗಳು

ಪಟವಾಸ – ಗಂಧದ ಗುಡಿ, ಗಂದುಡಿ

ಪಣ– ಜೂಜಿನಲ್ಲಿಟ್ಟ ಮೇಜು, ಕೂಲಿ, ಧನ, ಕರಾರು.

ಪಯಸ್ವಿನಿಗೆ ಬಲವಂದು–ಕ್ಷೀರನಿಧಿಯಾದ ನಂದಿನಿಗೆ ಪ್ರದಕ್ಷಿಣೆ ಮಾಡಿ

ಪರ ಅಪೇಕ್ಷೆ– ಅನ್ಯರ ಸಹಾಯ ನಿರೀಕ್ಷಿಸುವುದು

ಪರಾಸು – ನಿಧನ

ಪವಳಿಸು– ಮಲಗು, ನಿದ್ರಿಸು

ಪಾಕ–ಅಡಿಗೆ, ಒಬ್ಬ ರಾಕ್ಷಸನ ಹೆಸರು(ಪಾಕಶಾಸನ)

ಪಾದೆ ಗಟ್ಟು– ಪಾತಿ ಕಟ್ಟು

ಪಾರಾವಾರ – ಸಮುದ್ರ

ಪಾರಿಜಾತ ವೃಕ್ಷ – ದೇವಲೋಕದ ವೃಕ್ಷ

ಪಾರಿಯಾತ್ರ

ಪಾವಸೆ– ಪಾಚಿ

ಪುಂಸವನ– ಸ್ತ್ರೀ ಗರ್ಭವತಿಯಾದ ಲಕ್ಷಣಗಳು ಕಂಡುಬಂದಾಗ ಪ್ರಪ್ರಥಮವಾಗಿ ಮಾಡತಕ್ಕ ಸಂಸ್ಕಾರ

ಪುಷ್ಪಪುರ– ಪಾಟಲಿಪುತ್ರ ನಗರ

ಪುರುಷ–ಗಂಡಸು , ಮನುಷ್ಯ, ಸೇವಕ, ಆತ್ಮ, ಪರಮಾತ್ಮ.

ಪ್ರಜಾವತಿ– ಗರ್ಭದಲ್ಲಿ ಪ್ರಜೆಯನ್ನು ಉಳ್ಳವಳು

ಪ್ರತ್ಯಯ–ವಿಶ್ವಾಸ, ಜ್ಞಾನ, ಶಪಥ; ವ್ಯಾಕರಣದಲ್ಲಿ ಪ್ರಕೃತಿಯ ಮುಂದೆ ಬರುವ ಅಕ್ಷರಗಳು, ಅಥವಾ ಪದ

ಪ್ರವರ – ವಂಶಕ್ರಮ

ಪ್ರಾಚೇತಸ– ವಾಲ್ಮೀಕಿ

ಬ

ಬಕುಳವೃಕ್ಷ – ಪಗಡೆ ಮರ

ಬಡಗಣ ದೆಸೆ– ಉತ್ತರ ದಿಕ್ಕು

ಬತ್ತಳಿಕೆ– ಬೆನ್ನಿಗೆ ಕಟ್ಟಿಕೊಂಡ ಬಾಣದ ಚೀಲ

ಬಲಗಾರ– ಬಲಿಷ್ಠ

ಬಲಿ ಭೋಜನ – ಕಾಗೆ(ಕಾಕಾಸುರ)

ಬಳಿದು– ಸೂರೆ ಮಾಡಿ

ಬಾಂದೊರೆ– ಆಕಾಶಗಂಗೆ

ಬಾಗೆಯ ಮರ– ಲೋಧ್ರ ದ್ರುಮ, ಕೆಂಪು ಹೂ ಬಿಡುವ ಮರ

ಬಾಪುರಿ– ಬಾಹುಬಳೆ, ತೋಳಬಂದಿ, ಭುಜಕೀತಿ ,ಆಭರಣ

ಬಾಹುಜ ವೀರ – ಕ್ಷತ್ರಿಯ, ಬಾಹುಗಳಿಂದ ಜನಿಸಿದ ಶೂರ

ಬೆಂಗದಿರ – ಸೂಯ

ಬೆಟ್ಟ ಮಲ್ಲಿಗೆ ಹೂವು–ಶಿರೀಶ ಕುಸುಮ, ಕಿವಿಯಲ್ಲಿ ಧರಿಸಿರುವ ಬಿಳಿ ಕೊಳವೆ ಹೂವು

ಬೆಳಗಂಡಿ– ಕಿಟಕಿ, ವಾತಾಯನ

ಬೇರು ಬೇರಾಗಿ– ಪ್ರತ್ಯೇಕವಾಗಿ

ಬ್ರಹ್ಮ–ಬ್ರಾಹ್ಮಣಜಾತಿ, ವೇದ, ಪರಮಾತ್ಮ.

ಬ್ರಹ್ಮಮಾನಸಪುತ್ರ– ವಶಿಷ್ಠಮಹರ್ಷಿ

ಭ

ಭದ್ರ– ಗೂಢಚಾರರ ಹೆಸರು

ಭುಜ ಪತ್ರ– ಭೂರ್ಜ ಪತ್ರ

ಭುಜಂಗಮ– ನಾಗರಾಜ, ಕುಮುದ

ಭೋಗಿನ್– ಅನುಭವಿಸುವ, ಸರ್ಪ

ಭ್ರಾತೃ ಜಾಯಾ– ಸೋದರರನ ಹೆಂಡತಿ, ಲಕ್ಷ್ಮಣನಿಗೆ ಅತ್ತಿಗೆ ಆದವಳು ಸೀತೆ

ಮ

ಮನೋಭವ– ಮನ್ಮಥ

ಮರದ ತಾಳು– ಮರದ ತೊಗಟೆ, ತಿಗಡು

ಮಹಾನದ – ಗಂಗಾನದಿ

ಮಹಾರಥ–ರಣದಲ್ಲಿ ಹತ್ತು ಸಾವಿರ ಮಂದಿಯನ್ನು ಏಕಾಂಗಿಯಾಗಿ ಕೊಲ್ಲಬಲ್ಲ ಶಸ್ತ್ರಪಂಡಿತ

ಮಹಿಷಿ–ಎಮ್ಮೆ, ಪಟ್ಟದ ರಾಣಿ .

ಮುಂಜರಿ– ಮುಂದಕ್ಕೆ ಸಾಗು

ಮುಕ್ಕುಳಿಸು – ಉಕ್ಕಿ ಹರಿ

ಮುಗುವಳಿ– ಮುಕ್ತಾಯ

ಮುರ ಮುರ– ಮರ್ಮರ ಶಬ್ದ

ಮೂರು ಅಗ್ನಿಗಳು– ಗಾರ್ಹಪತ್ಯ, ಆಹವನೀಯ, ದಕ್ಷಿಣಾಗ್ನಿ

ಮೃದ್ಭಾಂಡ– ಮಣ್ಣಿನ ಮಡಕೆ

ಮುಂಜರಿ–ಮುಂದೆ ಸಾಗು

ಮೈ ತೀಟೆ– ಮೈನವೆ

ಮೈಥಿಲಿ ಕುಮಾರ– ಸೀತಾಪುತ್ರ

ಮೋಡಿ– ಭಂಗಿ

ಯ

ಯದ್ಯಪಿ– ಒಂದು ವೇಳೆ

ಯವ– ಜವೆ ಗೋಧಿ ಮೊಳಕೆ

ಯವಾಂಕುರ – ದಂತ ಬೆಳಗುವ ಕಕೋಲ

ಯುಗ–(ಪುಲ್ಲಿಂಗವಾದರೆ) ನೊಗ, (ನಪುಂಸಕವಾದರೆ) ಜೊತೆ, ಕೃತ ಮುಂತಾದ ಕಾಲಗಣನೆ

ಯುಗ್ಮ – ಎರಡು ಶ್ಲೋಕಗಳಿಗೆ ಒಂದೇ ಕ್ರಿಯಾಪದ ಅನ್ವಯವಾಗುವ ಜೋಡಿ ಶ್ಲೋಕ

ಯೂಪಸ್ತಂಭ– ಬಲಿಕಂಬ

ಯೋಗ– ಸೈನ್ಯವನ್ನು ಸಿದ್ಧಗೊಳಿಸುವದು, ಉಪಾಯ, ಧ್ಯಾನ, ಸಂಬಂಧ

ಯೌವಕಸ– ದೇವತೆ

ರ

ರಸ–ವಾಸನೆ, ರಸ, ದ್ರವಸಾರ, ವೀರ್ಯ, ರುಚಿ, ವಿಷ, ಶೃಂಗಾರಾದಿಗಳು

ರಾಜರ್ಷಿ – ದಿಲೀಪ, ರಾಜನಾಗಿದ್ದರೂ ಋಷಿಯಂತಿರುವವನು

ರುರು ಮೃಗ– ರುರು ಜಾತಿಯ ಮೃಗ(ಜಿಂಕೆ)

ರೇವಾ ನದಿ– ನರ್ಮದಾ ನದಿ

ಲ

ಲೋಕಪಾಲರು– ಇಂದ್ರ, ವರುಣ ಕುಬೇರ ಯಮ 5ನೇ ಲೋಕಪಾಲಿ, ಅತಿಥಿರಾಜ

ಲೋಕಾಂತರವನ್ನೈದಿದನು– ನಿಧನನಾದನು

ವ

ವಂಗ– ಬಂಗಾಳಾದೇಶ

ವರುಣ– ದುಷ್ಟರನ್ನು ಶಿಕ್ಷಿಸುವ ಪಾಶುಧರನಾದ ವಸು, ವರುಣ

ವರ್ಣಾವಳಿ – ಪ್ರಶಸ್ತಿಯ ಅಕ್ಷರಸಮೂಹ

ವಾತಾಯನ– ಕಿಟಕಿ

ವಾನಪ್ರಸ್ಥ–ಮೂರನೆಯ ಆಶ್ರಮ. ತಪೋವನದ ತರುವಿನ ನೆರಳು

ವಾರಿದ– ಮೋಡ

ವಿಗ್ರಹ–ಯುದ್ಧ , ಶರೀರ, ವೃತ್ತಿಯನ್ನು ಬಿಡಿಸಿದ ವಾಕ್ಯ,

ವಿಡ್ಡೂರ – ಅಡ್ಡಿ ಆತಂಕ,

ವಿಭು–ಒಡೆಯ, ವ್ಯಾಪಕ, ಸರ್ವಶಕ್ತನಾದ ಪರಮಾತ್ಮ

ವಿರಾಧ–ಒಬ್ಬ ರಾಕ್ಷಸ

ವಿಶೇಷಕ – ಮೂರು ಶ್ಲೋಕಗಳಿಗೆ ಒಂದೇ ಕ್ರಿಯಾಪದ ಅನ್ವಯವಾಗುವ ತ್ರಿವಳಿ ಪದ್ಯಗಳು

ವಿಶ್ವಂಭರ ಅಧಿಪತಿ– ದಿಲೀಪ ಚಕ್ರವರ್ತಿ

ವೀತಾಸು – ನಿಧನ, ಪರಾಸು

ವೃಷಸ್ಯಂತಿ–ಶೂರ್ಪನಖಿ, ಕಾಮೇಚ್ಛೆಯುಳ್ಳವಳು, ರಾಮನಿಂದ ರತಿಸುಖ ಅಪೇಕ್ಷಿಸುವಳು

ವೇತ್ರವತಿ– ದಂಡ ಧಾರಿಣಿ

ವೈತಾಳಿಕರು – ಪರಾಕು ಹೇಳುವವರು

ವೈವಸ್ವತ– ಮನುಗಳಲ್ಲಿ ಒಬ್ಬ, ಒಂದು ಮನ್ವಂತರ

ವೈಶ್ರವ– ಕುಬೇರ

ಶ

ಶಕ್ತಿತ್ರಯ – ಪ್ರಭುಶಕ್ತಿ, ಉತ್ಸಾಹಶಕ್ತಿ, ಮಂತ್ರಶಕ್ತಿ ಎಂಬ ಮೂರು ರಾಜಬಲಗಳು

ಶತಮಖ– ಶತಕೃತು, ಇಂದ್ರ

ಶಲ್ಯ– ಶೂಲ

ಶಾಖೆ– ಮಂದ ಗೆಲ್ಲು, ಕೊಂಬೆ

ಶುದ್ಧಿಕರ್ಮ– ಜಾತಕರ್ಮವೇ ಮುಂತಾದ ಶುದ್ಧಿಕರ್ಮ,

ಶೂರ್ಪನಖೆ – ಮರದಂತೆ ಉಗುರುಗಳನ್ನು ಉಳ್ಳವಳು, ರಾವಣನ ತಂಗಿ

ಸ

ಸಂತಾನ –ದೇವಲೋಕದ ಕಲ್ಪವೃಕ್ಷಗಳಲ್ಲಿ ಒಂದು

ಸಂದು ಹೊಳೆ– ನೀರಿನ ಝರಿ

ಸಂಭಾರ – ಸಾಮಗ್ರಿ

ಸಂಸ್ಕಾರ–ಶುದ್ಧಿಗೊಳಿಸುವದು,

ಸಟೆ– ಸುಳ್ಳು

ಸಪ್ತ ಕುಲಗಿರಿಗಳು – ಮಹೇಂದ್ರ, ಮಲಯ, ಸಹ್ಯಾದ್ರಿ, ಶುಕ್ತಿಮಾನ್,
ಋಕ್ಷ, ವಿಂಧ್ಯ, ದಾರಿಯಾತ್ರ

ಸರಿತ್ತು – ನದಿ

ಸರ್ವಾತ್ಮನಾ – ಖಚಿತವಾಗಿ, ಸುತಾರಾಂ

ಸಾರ– ಬಲ, ಗಟ್ಟಿಯಾದ ಮುಖ್ಯಭಾಗ.

ಸಾರಸ ಪಕ್ಷಿಗಳು–ನೀರ ಹಕ್ಕಿಗಳು

ಸಾಸಿರಗಣ್ಣನಾದ ಬಿಸುಗಣ್ಣೊಡೆಯ– ಇಂದ್ರ

ಸುಧರ್ಮಾ – ದೇವೇಂದ್ರನ ಒಡ್ಡೋಲಗದ ಸಭೆಯ ಹೆಸರು

ಸುರಸುರಭಿ– ದೇವಲೋಕದ ಕಾಮಧೇನು

ಸುರಹೊನ್ನೆಯ ಹೂಗಳು– ಪುನ್ನಾಗ ಪುಷ್ಪಗಳು

ಸುಹ್ಮದೇಶ – ಬರ್ಮಾದೇಶದ ಪ್ರದೇಶ

ಸೆಬ್ಬೆ – ಒಣಗಿದ ಪೈರುಗಳಿಗೆ ಬರುವ ಮೊದಲ ಮಳೆ

ಸೇಸೆ– ಅಕ್ಷತೆ

ಸೈರಿಭ – ಕಾಡುಕೋಣ, ಮಹಿಶ

ಸ್ತನೋತ್ತರೀಯ – ಮೇಲುಹೊದಿಕೆ

ಹ

ಹಸ್ತಲಾಘವ – ಕೈಕುಲುಕುವುದು

ಹಾಲು ಮದ್ದು ಗಿಡ – ಸಾಲ ವೃಕ್ಷ, ಸಜ ವೃಕ್ಷ

ಹಾರೀತಪಕ್ಷಿ – ಮಧುಕಾರಂಡಕ ಪಕ್ಷಿ

******

ಅನುಬಂಧ –2
ಟಿಪ್ಪಣಿಗಳು

(ಮೂಲಗ್ರಂಥದ ಸರ್ಗ ಮತ್ತು ಶ್ಲೋಕ ಸಂಖ್ಯೆಗಳನ್ನು ಕೊಟ್ಟಿದೆ)

1. ಪ್ರಾರಂಭಿಕ ವಿಚಾರ

1. ರಘುವಂಶದ 11 ಪ್ರಾರಂಭದ ಶ್ಲೋಕವನ್ನು ಕಂದಪದ್ಯವನ್ನು ಆಗಿ ರಚನೆ ಮಾಡಿ ನಂತರದಲ್ಲಿ ಹಾಕಿದ್ದಾರೆ ಎರಡನೇ ಶ್ಲೋಕದಿಂದ ಅನುವಾದ ಪ್ರಾರಂಭಿಸಿದ್ದಾರೆ.

ಪ್ರತಿ ಅಧ್ಯಾಯದ ಪ್ರಾರಂಭದಲ್ಲಿ ಕನ್ನಡದ ಷಟ್ಪದಿಕಾವ್ಯಗಳಲ್ಲಿ ಕಂಡುಬರುವಂತೆ ಅಧ್ಯಾಯದ ಸಾರಾಂಶವನ್ನು ಸೂಚನಾ ಪದ್ಯ(ಕಂದ)ದಲ್ಲಿ ರಚಿಸಿದ್ದಾರೆ

ಉದಾಹರಣೆ : ಮೊದಲಸರ್ಗದ ಸೂಚನಾಪದ್ಯ ಹೀಗಿದೆ

ಸೂಚನೆ: ವೈವಸ್ವತ ಕುಲದೇಳ್ಗೆಗೆ
ಭೂ ವಲ್ಲಭನಾ ದಿಲೀಪನರಸಿತಿಯಿಂದಂ
ಭಾವಿಸಿ ಗುರುವಂ ವಿಪಿನದೆ
ಸೇವಿಸಿ ತಾಂ ಮುನಿಯ ಸುರಭಿಯಂ ಪೊರಮಟ್ಟಂ ॥–1–14॥

2. ಪ್ರತಿಪುಟದ ಶೀರ್ಷಿಕೆ

2. ಮೊದಲನೇ ಭಾಗದಲ್ಲಿ ಪ್ರತಿ ಪುಟದ ಮೇಲ್ಭಾಗದಲ್ಲಿ ರಘುಕುಲ ಚರಿತಂ ಎಂದಿದ್ದಾರೆ. ಎರಡನೇ ಭಾಗದಲ್ಲಿ ಪುಟದ ಮೇಲ್ಭಾಗದಲ್ಲಿ ಶ್ರೀಶಾರದಾ ಎಂದಿದೆ. ಪ್ರತಿ ಎಡಪುಟದ ಮೇಲ್ಭಾಗದಲ್ಲಿ ರಘುಕುಲ ಚರಿತಮ್ ಎಂದು ಪ್ರಕಟವಾಗಿದೆ.

3. ಪುಸ್ತಕದ ಬೆಲೆ

3. ನನ್ನ ಬಳಿ ಇರುವ ಪ್ರತಿ ಭಾಗ–1 ಎರಡನೇ ಮುದ್ರಣದ ಪ್ರತಿ (1923) ಭಾಗ–2 ಮೊದಲಮುದ್ರಣದ ಪ್ರತಿ(1913) ಈ ಎರಡು ಪುಸ್ತಕಗಳ ಕೊನೆಯಲ್ಲಿ ಕೊಟ್ಟಿರುವ ಲೇಖಕರ ಪುಸ್ತಕ ಪಟ್ಟಿಯಲ್ಲಿ ಬೆಲೆಗಳು ಎರಡನೇ ಮುದ್ರಣದಲ್ಲಿ ಹೆಚ್ಚಾಗಿದೆ.

ಉದಾಹರಣೆಗೆ ಮೊದಲ ಮೊದಲಾದ ಪ್ರತಿಯಲ್ಲಿ ಸುಂದರಕಾಂಡ ಅತ್ಯುತ್ತಮ ನಾಲ್ಕು ರೂ ಇದ್ದರೆ , ಎರಡನೆಯ ಮುದ್ರಣದಕಾಲಕ್ಕೆ ಅದು ಐದು ರೂಪಾಯಿ ಆಗಿದೆ.

4. ಅನುವಾದದಲ್ಲಿ ಸಾತತ್ಯ

ಬಿಡಿಬಿಡಿಯಾಗಿ ಶ್ಲೋಕಗಳನ್ನು ಅನುವಾದಿಸಿದ ಹಿಂದಿನ ಶ್ಲೋಕದ ಅನುವಾದಕ್ಕೂ ಮುಂದಿನ ಶ್ಲೋಕ ಅನುವಾದಕ್ಕೂ ಸಂಬಂಧವಿರುವಂತೆ ಸಣ್ಣ ವಿವರಣೆಗಳನ್ನು ಸೇರಿಸಿ ಶ್ಲೋಕಗಳನ್ನು ಅನುವಾದ ಮಾಡುತ್ತಾರೆ. ಹೀಗಾಗಿ ಓದುಗನಿಗೆ ಗದ್ಯ, ಕಾದಂಬರಿಯಂತೆ ಉದ್ದಕ್ಕೂ ಓದಿಸಿಕೊಂಡು ಹೋಗುತ್ತದೆ.

ಉದಾಹರಣೆ: ಬೇಟೆಗಾರನಂತೆ ಬಿಲ್ಲು ದಾರಿಯಾಗಿ ಹೋಗುತ್ತಿದ್ದ ದಿಲೀಪನು ದಿಲೀಪ ಮಹಾರಾಜನು ಸಾಧಾರಣ ಚಕ್ರವರ್ತಿ ಅಲ್ಲವೇ ತನ್ನ ಮಹಿಮೆಯು ಲೋಕದಲ್ಲೆಲ್ಲಾ ಹರಡಿಕೊಂಡಿದ್ದಿತು. ಆ ಮಹಾರಣ್ಯದಲ್ಲಿಯೂ ಗಿಡಮರ ಪಶುಪಕ್ಷಿ ಪ್ರಾಣಿಗಳು ಮೊದಲಾದುವು ಆತನಿಗೆ ರಾಜೋಪಚಾರವನ್ನು ಮಾಡುವಂತೆ ಕಾಣಬಂದವು. ಹೀಗೆ ಹೇಳಿ ನಂತರ 2–10 ಶ್ಲೋಕವನ್ನು ಅನುವಾದಿಸುತ್ತಾರೆ." ವರುಣನಿಗೆಣೆಯೆನಿಸಿದ ಅರಣ್ಯ ದಾರಿಯುದ್ದಕ್ಕೂ ಬರುತ್ತಲ್ಲಿ ಇರುವಾಗ ಹತ್ತಿರದಲ್ಲಿ ಹೊಗಳುಭಟ್ಟರು ಇರಲಿಲ್ಲ. ಇಕ್ಕೆಲದ ಮರಗಳು ತಮ್ಮಲ್ಲಿ ಕುಳಿತು ಕೊಬ್ಬಿ ಕೂಗುತಲಿರುವ ಹಕ್ಕಿಗಳ ದನಿಯ ನೆಪದಿಂದ ಮಹಾರಾಜನಿಗೆ ಜಯವಾಗಲಿ ಪರಾಕು" ಎಂದೀ ಪ್ರಕಾರ ತಾಳಿ ಕೆಲಸವನ್ನು ಮಾಡುತ್ತಿದ್ದವು.

ಅಧ್ಯಾಯ 1

5. ಯುಗ್ಮ– ವಿಶೇಷಕ

ಎರಡು ಶ್ಲೋಕಗಳಿಗೂ ಒಂದೇ ಕ್ರಿಯಾಪದವಿದ್ದರೆ ಎಂದರೆ ಒಂದೇ ಅನ್ವಯವಾದರೆ ಯುಗ್ಮವೆಂತಲೂ ಮೂರು ಶ್ಲೋಕಗಳಿಂದ ಒಂದೇ ಕ್ರಿಯಾಪದ ಅನ್ವಯವಾದರೆ ವಿಶೇಷಕ ಎಂತಲೂ ಭಾವಿಸಬೇಕು.

6. ಮಂಗಳಾಚರಣೆ

6. 1–1. ಈ ಶ್ಲೋಕದಲ್ಲಿ ಕಾಳಿದಾಸನು ಅರ್ಧನಾರೀಶ್ವರನ ರೂಪದಲ್ಲಿರುವ ಪಾರ್ವತೀಪರಮೇಶ್ವರರನ್ನು ಹೊಗಳಿ ಮಂಗಲಾಚರಣೆಯನ್ನು ಮಾಡಿರುತ್ತಾನೆ. ಈ ರೂಪದಲ್ಲಿ ಅರ್ಧದೇಹವು ಪಾರ್ವತಿ, ಅರ್ಧದೇಹವು ಪರಮೇಶ್ವರ– ಹೀಗಿರುವದು. ಪ್ರತಿಯೊಂದು ಶಬ್ದಕ್ಕೂ ತನ್ನ ಅರ್ಥವನ್ನು ಹೇಳುವ ಶಕ್ತಿಯು ಸ್ವಭಾವದಿಂದಲೇ ಇರುತ್ತಿರುವದೆಂದೂ ಶಬ್ದವು ವಾಚಕ, ಅರ್ಥವು ವಾಚ್ಯ– ಹೀಗೆ

ವಾಚ್ಯವಾಚಕಭಾವವೆಂಬ ಸಂಬಂಧವು ಶಬ್ದಕ್ಕೂ ಅದರ ಅರ್ಥಕ್ಕೂ ನಿತ್ಯವಾಗಿ ಇರುವದೆಂದೂ ಕರ್ಮಮೀಮಾಂಸಕರು ಹೇಳುತ್ತಾರೆ. ಕವಿಯು ಈ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟು, ಶಬ್ದಾರ್ಥಗಳು ಯಾವಾಗಲೂ ಕೂಡಿರುವ ಹಾಗೆ ಎಂದೆಂದಿಗೂ ಕೂಡಿಕೊಂಡಿರುವ ದೇಹವುಳ್ಳ ಪಾರ್ವತೀಪರಮೇಶ್ವರರಿಗೆ ನಮಸ್ಕಾರ ಮಾಡುತ್ತೇನೆ ಎಂದು ಹೇಳಿರುತ್ತಾನೆ.

7. ಹರಿಗೋಲು

7. 1–2 ರಘುವಂಶವನ್ನು ಮಹಾಸಮುದ್ರಕ್ಕೆ ಹೋಲಿಸಿರುವದರಿಂದ 2, ಅದನ್ನು ವರ್ಣಿಸುವ ತನ್ನ ಕಾವ್ಯದ ಹೆಚ್ಚಿಗೆಯನ್ನು ಹೇಳಿಕೊಂಡಂತೆ ಆಯಿತು. ಉಡುಪ(ಹರಿಗೋಲು) ಎಂದರೆ ಬುಟ್ಟಿಯ ಆಕಾರದಲ್ಲಿ ಕಟ್ಟಿಗೆಯಿಂದ ಮಾಡಿ ಅದರ ಮೇಲೆ ಚಕ್ಕಳವನ್ನು ಹೊದ್ದಿಸಿರುತ್ತಾರೆ.

8. ತ್ರಯಾಗ್ನಿಗಳು

8. 1–6 ಗಾರ್ಹಪತ್ಯ, ಆಹವನೀಯ ಮತ್ತು ದಕ್ಷಿಣ – ಎಂದು ಅಗ್ನಿಗಳು ಮೂರು. ಈ ಮೂರು ಅಗ್ನಿಗಳನ್ನೂ ಈ ರಾಜರು ಸೇವಿಸುತ್ತಿದ್ದರು.

9. ನಾಲ್ಕು ಆಶ್ರಮಗಳು

9. 1–8 ರಘುವಂಶದ ರಾಜರು ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸಂನ್ಯಾಸ–ಎಂಬ ನಾಲ್ಕು ಆಶ್ರಮವನ್ನೂ ಕ್ರಮವಾಗಿ ಸೇವಿಸುತ್ತಿದ್ದರೆಂದು ಈ ಶ್ಲೋಕದಲ್ಲಿ ಹೇಳಿದೆ. ಇದರಿಂದ ಇಹಲೋಕದ ಸುಖವನ್ನೂ ಪರಲೋಕದ ಸುಖವನ್ನೂ ಅವರು ಚೆನ್ನಾಗಿ ಅನುಭವಿಸಿದವರೆಂದು ಹೇಳಿದಂತೆ ಆಯಿತು.

10. ಶ್ಲೋಕಗಳ ವರ್ಗೀಕರಣ

10. 1–9 ಎರಡು ಶ್ಲೋಕಗಳು ಸೇರಿ ಒಂದು ವಾಕ್ಯವಾದರೆ ಯುಗ್ಮವೆಂದು ಹೆಸರು; ಮೂರು ಶ್ಲೋಕ ಸೇರಿದರೆ ವಿಶೇಷಕ; ನಾಲ್ಕು ಶ್ಲೋಕ ಸೇರಿದರೆ ಕಲಾಪಕ; ಐದು ಶ್ಲೋಕ ಸೇರಿದರೆ ಕುಲಕ. 2. ರಘುವಂಶದ ರಾಜರ ಗುಣಗಳನ್ನು ಕವಿಯು ವರ್ಣಿಸಿರುವದನ್ನು ನೆನಪಿಡಬೇಕು.

11. ಕಥಾ ಪ್ರಾರಂಭ

11. 1–10 ವೈವಸ್ವತನೆಂಬವನು ಸೂರ್ಯನ ಮಗನು. ಹದಿನಾಲ್ಕು ಜನ ಮನುಗಳಲ್ಲಿ ಇವನೊಬ್ಬನು. ಇವನು ಮನುಷ್ಯರಿಗೆಲ್ಲ ಮೂಲಪುರುಷನೆಂದೂ ಇವನೆ ವರ್ಣಾಶ್ರಮವ್ಯವಸ್ಥೆಯನ್ನು ತಿಳಿಸುವ ಶಾಸ್ತ್ರವನ್ನು ಮಾಡಿ ಅದರಂತೆ ಜನರನ್ನು ಆಳಿದ ಮೊದಲನೆಯ ರಾಜನೆಂದೂ ಪುರಾಣಗಳಲ್ಲಿದೆ. ಯಾವ ವೇದವನ್ನು ಹೇಳಬೇಕಾದರೂ ಮೊದಲು ಓಂಕಾರವನ್ನುಚ್ಚರಿಸುವ ಸಂಪ್ರದಾಯವಿದೆ; ಇದರಂತೆ

ರಘುವಂಶದ ರಾಜರ ಕಥೆಯನ್ನು ಪ್ರಾರಂಭಿಸಬೇಕಾದರೆ ಮೂಲಪುರುಷನಾದ ಮನುವಿನಿಂದ ಪ್ರಾರಂಭಿಸಬೇಕಾಗುತ್ತದೆ ಎಂದು ಕವಿಯು ವರ್ಣಿಸಿರುತ್ತಾನೆ.

12. ಮೇರು ಪರ್ವತ ಮತ್ತು ದಿಲೀಪ

12. 1–15. ಮೇರುವೆಂಬ ಪರ್ವತವು ಭೂಮಧ್ಯದಲ್ಲಿ ಹಾದುಹೋಗಿರುವದೆಂದೂ ಇದರಲ್ಲಿ ಅತ್ಯಂತ ಉತ್ತಮವಾದ ಸಾರವಸ್ತುಗಳಿವೆ ಎಂದೂ ಇದರ ಕಾಂತಿಯು ಮಿಕ್ಕ ಎಲ್ಲಾ ವಸ್ತುಗಳ ಕಾಂತಿಯನ್ನೂ ಮಂಕುಗೊಳಿಸುವಂತಿದೆಯೆಂದೂ ಇದು ಎಲ್ಲಾ ಪರ್ವತಗಳಿಗಿಂತಲೂ ಎತ್ತರವಾದದ್ದೆಂದೂ ಪುರಾಣಗಳಲ್ಲಿ ವರ್ಣಿಸಿರುತ್ತದೆ. ಕವಿಯು ದಿಲೀಪನ ಶರೀರವನ್ನು ಮೇರುವಿಗೆ ಹೋಲಿಸಿ ಈ ವಿಶೇಷಣಗಳನ್ನೆಲ್ಲ ಅದಕ್ಕೂ ಹೊಂದಿಸಿರುತ್ತಾನೆ. ದಿಲೀಪನ ಶರೀರವು ಎಲ್ಲರ ಶರೀರಕ್ಕಿಂತಲೂ ಬಲವಾಗಿಯೂ ಎತ್ತರವಾಗಿಯೂ ತನ್ನ ತೇಜಸ್ಸಿನಿಂದ ಮಿಕ್ಕವರೆಲ್ಲರನ್ನೂ ಮಂಕುಗೊಳಿಸುವದಾಗಿಯೂ ಇತ್ತು; ಈ ಶರೀರದ ಸಹಾಯದಿಂದ ಅವನು ಭೂಮಿಯನ್ನೆಲ್ಲ ಗೆದ್ದಿದ್ದನು. ರಾಜನು ಅಷ್ಟದಿಕ್ಪಾಲಕರ ಅಂಶದಿಂದ ನಿರ್ಮಿತನಾಗಿರುವದರಿಂದ ಅವನ ಕಾಂತಿಯು ಎಲ್ಲರನ್ನೂ ಮಂಕುಗೊಳಿಸುವದೆಂದು ಮನುಸ್ಮೃತಿಯಲ್ಲಿ ಹೇಳಿರುತ್ತದೆ.

13. ಅದೃಶ್ಯ–ಅಭಿಗಮ್ಯ ಗುಣಗಳು

13. 1–16 ರಾಜನು ತೀರ ಮೃದುವಾಗಿದ್ದರೆ ಜನರು ಸಲುಗೆಯನ್ನು ತೆಗೆದುಕೊಂಡು ರಾಜಕಾರ್ಯವನ್ನು ಹಾಳುಮಾಡುವರು; ಆದ್ದರಿಂದ ಭೀತಿಯನ್ನು ಹುಟ್ಟಿಸುವ ಗುಣಗಳು ಅವನಲ್ಲಿರಬೇಕು. ಇವಕ್ಕೆ ಅದೃಶ್ಯಗುಣಗಳೆಂದು ಹೆಸರು. ರಾಜನು ತೀರ ಭಯಂಕರನಾಗಿದ್ದರೆ ಜನರು ಅವನ ಹತ್ತಿರಕ್ಕೆ ಬರಲಾರದೆ ಹೋಗುವರು; ಆದ್ದರಿಂದ ಅವನಲ್ಲಿ ಮನೋಹರವಾದ ಗುಣಗಳೂ ಇರಬೇಕು. ಇವು ಅಭಿಗಮ್ಯಗುಣಗಳು.

14. ಸಂಸ್ಕಾರಗಳು

14. 1–20 ಪೂರ್ವಜನ್ಮದಲ್ಲಿ ಮಾಡಿದ ಕರ್ಮಗಳು ತಮ್ಮ ಸಂಸ್ಕಾರಗಳನ್ನು ಚಿತ್ರದಲ್ಲಿ ಬಿಟ್ಟಿರುವವೆಂದೂ ಈ ಸಂಸ್ಕಾರಗಳು ಸಂದರ್ಭಾನುಸಾರವಾಗಿ ವ್ಯಕ್ತವಾಗಿ ಫಲವನ್ನು ಕೊಡುವವೆಂದೂ ಯೋಗಶಾಸ್ತ್ರದಲ್ಲಿ ಹೇಳಿದೆ.

15. ಜ್ಞಾನವೃದ್ಧತ್ವ

15. 1–23 ವೃದ್ಧತ್ವವು ಜ್ಞಾನವೃದ್ಧತ್ವ(ತಿಳಿವಳಿಕೆಯಿಂದ ದೊಡ್ಡವನೆನಿಸಿಕೊಳ್ಳುವದು), ವಯೋವೃದ್ಧತ್ವ (ವಯಸ್ಸಿನಿಂದ ದೊಡ್ಡವನಾಗಿರುವದು ಎಂದು ಎರಡು ಬಗೆ; ದಿಲೀಪನು ಜ್ಞಾನವೃದ್ಧನಾಗಿದ್ದನು" – ಹೀಗೆಂದು ಒಬ್ಬ ವ್ಯಾಖ್ಯಾನಕಾರರು

ಬರೆದಿರುತ್ತಾರೆ. ವೈರಾಗ್ಯವೃದ್ಧತ್ವ, ವಿದ್ಯಾವೃದ್ಧತ್ವ, ಶೀಲ ವೃದ್ಧತ್ವ, ವಯೋವೃದ್ಧತ್ವ-ಎಂದು ವೃದ್ಧತ್ವವು ನಾಲ್ಕು ಬಗೆಯೆಂದೂ ಮೊದಲನೆಯ ಮೂರೂ ದಿಲೀಪನಲ್ಲಿದ್ದವೆಂಬುದು ಶ್ಲೋಕದ ಅಭಿಪ್ರಾಯವೆಂದೂ ಮತ್ತೆ ಕೆಲವರು ಬರೆದಿದ್ದಾರೆ.

16. ತ್ರಿವರ್ಗ ಪುರುಷಾರ್ಥ

16. 1–24 ಧರ್ಮ, ಅರ್ಥ, ಕಾಮ- ಇವುಗಳಿಗೆ ತ್ರಿವರ್ಗವೆಂದು ಹೆಸರು. ಮೂರೂ ಬೇರೆ ಬೇರೆ ಪುರುಷಾರ್ಥಗಳಾದರೂ ದಿಲೀಪರಾಜನು ಧರ್ಮವನ್ನೆ ಮುಖ್ಯವಾಗೆಣಿಸಿ ಅದಕ್ಕೆ ಅರ್ಥಕಾಮಗಳನ್ನು ಎರಡನೆಯವಾಗಿ ಎಣಿಸಿದ್ದನೆಂದು ಈ ಶ್ಲೋಕದಲ್ಲಿ ವರ್ಣಿಸಿದೆ.

17. ಕಳ್ಳತನವಿರಲಿಲ್ಲ

17. ಕಳ್ಳತನಕ್ಕೆ ವಿಷಯವು ಮತ್ತೊಬ್ಬರ ಸ್ವತ್ತು; ಆದರೆ ದಿಲೀಪನು ಜನರ ಸ್ವತ್ತನ್ನು ಚೆನ್ನಾಗಿ ಕಾಪಾಡಿಕೊಂಡು ಬರುತ್ತಿದ್ದನಾದ್ದರಿಂದ ಅದನ್ನು ಕದಿಯುವದು ಯಾರಿಂದಲೂ ಆಗುತ್ತಿರಲಿಲ್ಲ; ಇದರಿಂದ ಅವನ ಕಾಲದಲ್ಲಿ ಕಳ್ಳತನವೆಂಬ ಮಾತೇ ಕಳವಾಗಿ ಹೋಯಿತು. ಈ ಕಾರಣದಿಂದ ಅವನ ಮುಂದಿನ ರಾಜರು ಕಳ್ಳತನವನ್ನು ನಿಲ್ಲಿಸಬೇಕಾದ ಅವಶ್ಯಕತೆಯೇ ಬೀಳಲಿಲ್ಲ; ಇದರಿಂದಲೆ ಅವರಿಗೆ ಅವನಂತೆ ಕೀರ್ತಿಯೂ ಬರುವದಕ್ಕವಕಾಶವಾಗಲಿಲ್ಲವೊ ಏನೊ ಎಂದು ಕವಿಯು ಇಲ್ಲಿ ಉತ್ಪ್ರೇಕ್ಷೆ ಮಾಡಿರುತ್ತಾನೆ. ಪ್ರಜೆಗಳ ಸ್ವತ್ತನ್ನು ದಿಲೀಪನ್ನು ಬಲುಚೆನ್ನಾಗಿ ಕಾಪಾಡುತ್ತಾ ಇದ್ದನೆಂಬುದು ಭಾವಾರ್ಥವು.

18. ಹಾವು ಕಚ್ಚಿದ ಬೆರಳು

18. 1–28 ಹಾವು ಕಚ್ಚಿದ ಬೆರಳು ತನ್ನದೇ ಆಗಿದ್ದರೂ ದೇಹದ ಮಿಕ್ಕ ಭಾಗಕ್ಕೆ ವಿಷವು ಏರದೆ ಇರಲೆಂದು ಜನರು ಹಿಂದುಮುಂದೆ ನೋಡದೆ ಕತ್ತರಿಸಿ ಹಾಕುತ್ತಾರಲ್ಲವೆ? ಅದರಂತೆ ತನ್ನ ಕಡೆಯವರಾದರೂ ದುಷ್ಟರೆಂದು ತಿಳಿದರೆ ಕೂಡಲೆ ದಿಲೀಪನು ದಂಡಿಸುತ್ತಿದ್ದನು ಎಂಬುದು 'ಹಾವು ಕಚ್ಚಿದ ಬೆರಳಿನಂತೆ" ಎಂಬ ಉಪಮಾನದಿಂದ ಹೊರಡುವದು.

19. ಪಂಚ ಮಹಾಭೂತಗಳು

19. 1–29 ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ-ಇವು ಪಂಚ ಮಹಾಭೂತಗಳು. ಇವುಗಳ ಗುಣಗಳು ಗಂಧ, ರಸ, ರೂಪ, ಸ್ಪರ್ಶ, ಶಬ್ದ. ಶಬ್ದಸ್ಪರ್ಶಾದಿಗುಣಗಳು ತಮ್ಮ ಪ್ರಯೋಜನಕ್ಕಾಗಿ ಇರುವುದಿಲ್ಲ; ತಮಗಿಂತ ಬೇರೆಯಾಗಿರುವ ಪುರುಷರಿಗೆ ಎಂದರೆ ಆತ್ಮರಿಗೆ ಅನುಭವವನ್ನು ಉಂಟುಮಾಡುವದಕ್ಕಾಗಿ ಹುಟ್ಟಿರುತ್ತವೆ-ಎಂದು ಸಾಂಖ್ಯರು ಹೇಳುತ್ತಾರೆ.

ಮಹಾಭೂತಗಳ ಗುಣಗಳು ತಮಗಿಂತ ಬೇರೆಯವರಿಗೋಸ್ಕರವಾಗಿ ಇರುವಂತೆ ದಿಲೀಪನ ಗುಣಗಳು ಮತ್ತೊಬ್ಬರಿಗಾಗಿಯೇ ಇರುತ್ತಿದ್ದವು ಎಂದರೆ ಪರೋಪಕಾರಕ್ಕಾಗಿಯೇ ಆತನು ಕಷ್ಟಪಡುತ್ತಿದ್ದನೇ ಹೊರತು ಅವನಲ್ಲಿ ಸ್ವಾರ್ಥತೆ ಇರಲಿಲ್ಲ ಎಂದು ಭಾವ.

20. ಮಗಧ ದೇಶ

20. 1–31 ಮಗಧವೆಂಬುದು ಈಗಿನ ದಕ್ಷಿಣಬಿಹಾರ್ ದೇಶಕ್ಕೆ ಪೂರ್ವದಲ್ಲಿದ್ದ ಹೆಸರು. ಭರತಖಂಡದ ಅನೇಕರಾಜರು ಇಲ್ಲಿ ಆಳುತ್ತಿದ್ದರು. ಈ ದೇಶಕ್ಕೆ ಕೀಕಟವೆಂದು ಮತ್ತೊಂದು ಹೆಸರು.

21. ಐರಾವತ

21. 1–36 ಐರಾವತವೆಂದರೆ ಒಂದು ಮೋಡದ ಮೇಲೆ ಏರಿರುವ ಮತ್ತೊಂದು ಮೋಡವೆಂದು ಒಬ್ಬ ವ್ಯಾಖ್ಯಾನಕಾರರು ಬರೆದಿರುತ್ತಾರೆ. ಐರಾವತವೆಂಬುದು ಇಂದ್ರನ ಆನೆಯೆಂದೂ ಇದು ಮೋಡಗಳಲ್ಲಿಯೆ ಸಂಚರಿಸುತ್ತಿರುವದರಿಂದ ಇದಕ್ಕೆ 'ಅಭ್ರಮಾತಂಗ' (ಮೋಡದ ಆನೆ) ಎಂಬ ಹೆಸರೂ ಇರುವದೆಂದೂ ಇನ್ನು ಕೆಲವರು ವ್ಯಾಖ್ಯಾನಕಾರರು ಹೇಳುತ್ತಾರೆ. ಇಲ್ಲಿ ರಥವನ್ನು ಮೋಡಕ್ಕೂ ಸುದಕ್ಷಿಣೆಯನ್ನು ಮಿಂಚಿಗೂ ದಿಲೀಪನನ್ನು ಐರಾವತಕ್ಕೂ ಕವಿಯು ಹೋಲಿಸಿರುತ್ತಾನೆ.

22. ಗಾಳಿಯ ಮೂರು ಗುಣ

22. 1–38 ಗಾಳಿಯು ತಂಪಾಗಿಯೂ ಸುವಾಸನೆಯಾಗಿಯೂ ಮೆಲ್ಲಗೆ ಬೀಸುವದಾಗಿಯೂ ಇದ್ದರೆ ಹಿತಕರವು. ಈ ಮೂರು ಗುಣಗಳನ್ನು ವರ್ಣಿಸುವದು ಕವಿಸಮಯ. ಇಲ್ಲಿ 'ಶಾಲಮರದ ಹಾಲಿನ ವಾಸನೆಯುಳ್ಳ', 'ಹೂವಿನ ಧೂಳನ್ನು ಎರಚುವ'–ಎಂಬ ವಿಶೇಷಣಗಳು ಸುವಾಸನೆಯನ್ನು ಸೂಚಿಸುತ್ತವೆ; 'ಕಾಡಿನ ಮರಗಳನ್ನು ಸ್ವಲ್ಪ ಅಲ್ಲಾಡಿಸಿರುವ' ಎಂಬುದು ಮೆಲ್ಲಗೆ ಬೀಸುವದೆಂಬ ಗುಣವನ್ನು ತಿಳಿಸುತ್ತದೆ.

23. ನವಿಲಿನ ಕೇಕಾರವ

23. 1–39 ಷಡ್ಜ ಸ್ವರವು ಆರು ಸ್ಥಾನಗಳನ್ನು ಮುಟ್ಟಿ ಹುಟ್ಟುತ್ತದೆ ಆದ್ದರಿಂದ ಷಡ್ಜ (ಆರು ಸ್ಥಾನಗಳಿಂದ ಹುಟ್ಟಿದ್ದು) ಎಂಬ ಹೆಸರು ಬಂತು. ನವಿಲುಗಳ ಧ್ವನಿಯು ಷಡ್ಜದ ಹಾಗೆ ಇರುವದೆಂದೂ ಷಡ್ಜದಲ್ಲಿ ಶುದ್ಧ, ವಿಕೃತ ಇಲ್ಲದಿದ್ದರೆ ಚ್ಯುತ, ಅಚ್ಯುತ–ಎಂಬದಾಗಿ ಎರಡು ಬಗೆಯೆಂದೂ ಸಂಗೀತಗಾರರು ಹೇಳುತ್ತಾರೆ. ನವಿಲುಗಳಲ್ಲಿ ಗಂಡು ಹೆಣ್ಣು ಬೇರೆ ಬೇರೆ ಬಗೆಯಾಗಿ ಕೂಗುತ್ತವೆ; ಆದ್ದರಿಂದ ಎರಡು ಬಗೆಯಾದ ಕೇಕಾಧ್ವನಿಗಳು ಎಂದು ಕವಿಯು ವರ್ಣಿಸಿರುತ್ತಾನೆ.

24. ಷಡ್ಜಸ್ವರ

24. (1–39) ಷಡ್ಜಸ್ವರ – ಮೂಗು. ಕೊರಳು. ಎದೆ, ದವಡೆ, ನಾಲಗೆ, ಹಲ್ಲು ಎಂಬು ಆರು ಸ್ಥಾನಗಳ ಸಂಬಂಧದಿಂದ ಹುಟ್ಟುವ ಸ್ವರವು ಷಡ್ಜ ಎಂದು ಹೇಳುತ್ತಾರೆ.

ನವಿಲು ಷಡ್ಜವನ್ನು ವೃಷಭವು ಋಷಭವನ್ನು, ಕುರಿ ಮೇಕೆಗಳು ಗಾಂಧಾರವನ್ನು ಕೊಕ್ಕರೆಯು ಮಧ್ಯಮವನ್ನು, ಕೋಗಿಲೆಯು ಪಂಚಮವನ್ನು ಕುದುರೆಯು ದೈವತವನ್ನು, ಆನೆಯು ನಿಷಾದವನ್ನು ಸ್ವರದಲ್ಲಿ ಹೋಲುವುವು ಎಂದು ಸ್ವರಶಾಸ್ತ್ರದಲ್ಲಿ ಹೇಳಿದೆ.

25. ತೋರಣಮಾಲೆ

25. 1–41 ತೋರಣಮಾಲೆಯ ಎರಡು ಕೊನೆಯಲ್ಲಿಯೂ ಕಂಬಗಳನ್ನು ನೆಟ್ಟಿರುತ್ತಾರಷ್ಟೆ; ಹಕ್ಕಿಗಳ ಮಾಲೆಗೆ ಅದಿಲ್ಲವಾದ್ದರಿಂದ ಕಂಬವಿಲ್ಲದ ತೋರಣಮಾಲೆಯನ್ನು ಹಕ್ಕಿಗಳು ಕಟ್ಟಿವೆಯೋ ಎನ್ನುವಂತಿತ್ತು–ಎಂದು ಕವಿಯು ಉತ್ಪ್ರೇಕ್ಷೆ ಮಾಡಿರುತ್ತಾನೆ.

26. ಶುಭಶಕುನದ ಲಕ್ಷಣ

26. 1–42 ಪ್ರಯಾಣದ ಮೇಲೆ ಹೊರಡುವಾಗ ಒಳ್ಳೆಯ ವಾಸನೆ ಬಂದರೆ, ಒಳ್ಳೆಯ ಶಬ್ದವು ಕೇಳಿದರೆ ಅಥವಾ ಗಾಳಿಯು ತಾನು ಹೊರಡುವ ಕಡೆಗೇ ಬೀಸುತ್ತಿದ್ದರೆ ಹೊರಟ ಕಾರ್ಯವು ಕೈಗೂಡುವದು–ಎಂದು ಶಕುನಶಾಸ್ತ್ರದಲ್ಲಿ ಹೇಳಿದೆ.

27. ಸಮಾನದೃಷ್ಟಿಯ ದಿಲೀಪ

27. 1–45 ದಿಲೀಪನಲ್ಲಿ ಬ್ರಾಹ್ಮಣರು ಮಾತ್ರವೇ ಅಲ್ಲದೆ ಹಳ್ಳಿಯ ದನಕಾಯುವ ಜನರು ಕೂಡ ರಾಜಭಕ್ತಿಯುಳ್ಳವರಾಗಿದ್ದರೆಂಬುದನ್ನೂ ರಾಜನು । ಎಲ್ಲರನ್ನೂ ಅವರವರ ಯೋಗ್ಯತೆಗೆ ತಕ್ಕಂತೆ ಆದರದಿಂದ ಕಾಣುತ್ತಿದ್ದನೆಂಬುದನ್ನೂ ಕವಿಯು ಇಲ್ಲಿ ಸೂಚಿಸಿರುತ್ತಾನೆ.

28. ಪ್ರಿಯಪತ್ನಿ

28. (1–47) ಪ್ರಿಯಪತ್ನಿ = ಯಾವ ಸತಿಗೆ ಪತಿಯೊಡನೆ ಯಜ್ಞಕರ್ಮದಲ್ಲಿ ಸಂಬಂಧವುಂಟಾಗುತ್ತದೋ ಅಂಥವಳಿಗೆ ಪತಿಶಬ್ದದ ಮುಂದೆ ನಕಾರವು ಬಂದು ಪತ್ನಿ ಎಂಬುದಾಗಿ ಹೆಸರಾಗುತ್ತದೆ (ದೊ. ಪು 95)

29. ಅಗ್ನಿಗಳ ಸ್ವಾಗತ

29. 1–49 ಅಗ್ನಿಯನ್ನಿಟ್ಟು ಹೋಮಮಾಡುವವರು ಹೊರಗೆ ಹೋಗಿ ಹಿಂತಿರುಗಿದಾಗ ತಂದೆಯನ್ನು ಮಕ್ಕಳು ಎದುರುಗೊಳ್ಳುವ ಹಾಗೆ ಅಗ್ನಿಗಳು ಅವರನ್ನು ಎದುರುಗೊಳ್ಳುತ್ತವೆಯೆಂದು ವೇದದಲ್ಲಿದೆ.

30. ಅತಿಥಿ ಯಾರು?

30. (1–53) ಅತಿಥಿ=ಒಂದು ದಿವಸ ಪೂರ್ತಿಯಾಗಿ ಒಂದು ಸ್ಥಳದಲ್ಲಿ ಉಳಿಯದವನಿಗೆ ಅತಿಥಿ ಎಂದು ಹೆಸರು. ಇಲ್ಲಿ ಅತಿಥಿ ರಾಜನ ಹೆಸರು

31. ನಮಸ್ಕಾರ ಯಾವಾಗ ಮಾಡಬಾರದು?

31. 1–57 ಸಮಿತ್ತು, ಹೂವು, ದರ್ಭೆ, ಬೆಂಕಿ, ನೀರು, ಮೃತ್ತಿಕೆ, ಅನ್ನ, ಅಕ್ಷತೆ–ಇವುಗಳನ್ನು ಕೈಯಲ್ಲಿಟ್ಟುಕೊಂಡಿರುವಾಗಲೂ ಜಪಹೋಮಗಳನ್ನು ಮಾಡುತ್ತಿರುವಾಗಲೂ ಬ್ರಾಹ್ಮಣನಿಗೆ ನಮಸ್ಕಾರ ಮಾಡಬಾರದು–ಎಂದು ಶಾಸ್ತ್ರವಚನವಿದೆ. ಆದ್ದರಿಂದ 'ಸಾಯಂಕಾಲದ ಕರ್ಮಾನುಷ್ಠಾನವಾದ ಬಳಿಕ ಕಂಡನು? ಎಂದು ವರ್ಣಿಸಿರುತ್ತಾನೆ. 'ಅಗ್ನಿಯಂತೆ ಇರುವ' ಎಂಬ ಹೋಲಿಕೆಯಿಂದ ವಸಿಷ್ಠ ಮಹರ್ಷಿಗಳು ತೇಜಸ್ವಿಗಳೂ ಪರಿಶುದ್ಧರೂ ಆಗಿದ್ದರೆಂದು ಹೇಳಿದಂತೆ ಆಯಿತು.

32. ಕುಶಲ ಪ್ರಶ್ನೆ

32. 1–58 ಬ್ರಾಹ್ಮಣನನ್ನು ಕುಶಲವೆ? ಎಂದೂ ಕ್ಷತ್ರಿಯನನ್ನು ಅನಾಮಯವೆ (ಯಾವ ತೊಂದರೆಯೂ ಇಲ್ಲವಷ್ಟೆ)? ಎಂದೂ ವೈಶ್ಯನನ್ನು ಕ್ಷೇಮವೆ (ಸಂಪಾದಿಸಿದ್ದು ಸುರಕ್ಷಿತವೆ)? ಎಂದು ಶೂದ್ರನನ್ನು ಆರೋಗ್ಯವೆ? ಎಂದೂ ಕೇಳಬೇಕು; ಇಲ್ಲಿ ದಿಲೀಪನನ್ನು ಕುಶಲ ಪ್ರಶ್ನೆಯನ್ನು ಕೇಳಿರುವದರಿಂದ ಅವನು ಇತರ ಕ್ಷತ್ರಿಯರಿಗಿಂತಲೂ ಮೇಲಾದವನೆಂದು ಹೇಳಿದಂತೆ ಆಯಿತು; ಆದ್ದರಿಂದಲೆ ರಾಜ್ಯವೆಂಬ ಆಶ್ರಮದಲ್ಲಿ ದಿಲೀಪನು ಮುನಿಯಾಗಿದ್ದನ್ನು ಎಂದು ಹೇಳಿರುತ್ತದೆ.

33. ಆಪತ್ತುಗಳು

33. 1–60 1. ರಾಜನು, ಮಂತ್ರಿ, ಸ್ನೇಹಿತರಾಜ, ಕೋಶ, ರಾಷ್ಟ್ರ, ದುರ್ಗ, ಸೈನ್ಯ–ಇವು ರಾಜ್ಯದ ಸಪ್ತಾಂಗಗಳು. 2. ಆಪತ್ತುಗಳನ್ನು ಕಾಮನ್ದಕನೀತಿಶಾಸ್ತ್ರದಲ್ಲಿ ವಿಂಗಡಿಸಿ ಹೇಳಿರುವದು ಹೇಗೆಂದರೆ:–ದೈವಿಕವಾದ ಆಪತ್ತುಗಳು– 1 ಅಗ್ನಿಭಯ (ಬೆಂಕಿ ಸುರಿಯುವುದು) 2 ಜಲಭಯ (ಅತಿವೃಷ್ಟಿ) 3 ಮಾರಕಾ ಮೊದಲಾ ಉಪದ್ರವ 4 ಕ್ಷಾಮ 5 ಅಕಾಲ ಮರಣ ಈ 5 ಮನುಷ್ಯರಿಗೆ ದೇವತೆಗಳಿಂದ ಉಂಟಾಗುತ್ತವೆ. ಆದ್ದರಿಂದ ಇವು ದೈವಿಕಗಳು.

ಅಧಿಕಾರಿಗಳು, ಕಳ್ಳರು, ಶತ್ರುಗಳು, ಅರಸನಿಗೆ ಬೇಕಾದವರು–ಇವರಿಂದ ಆಗುವ ವಿಪತ್ತುಗಳೂ ರಾಜನ ದುರಾಶೆಯಿಂದ ಆಗುವ ವಿಪತ್ತು–ಇದೂ ಮಾನುಷ ವಿಪತ್ತುಗಳು.

34. ಕುಲಗುರು

34. (1–60) ಕುಲಗುರು (ಪುರೋಹಿತ) = ವೇದತ್ರಯುವನ್ನೂ ದಂಡನೀತಿಯನ್ನು ಅಥರ್ವವೇದವನ್ನು ಬಲ್ಲ ಶಾಂತಿ ಪುಷ್ಟಿ ಕರ್ಮಕುಶಲವುಳ್ಳವನು ಪುರೋಹಿತನಾಗಲು ಅರ್ಹನೆಂದು – ಕಾಮಂದಕ ಹೇಳುತ್ತಾನೆ.

35. ಈತಿಬಾಧೆಗಳು

35. 1–63 ಈತಿಬಾಧೆಗಳು: 1 ಬಲು ಮಳೆಯು ಸುರಿಯುವುದು 2 ಮಳೆಯೇ ಬರದೆ ಕ್ಷಾಮ ಬರುವುದು 3 ಮಿಡತೆಗಳು ದಂಡಾಗಿ ಬಂದು ಬೆಳೆಯನ್ನು ಹಾಳುಮಾಡುವುದು 4 ಹೀಗೆಯೇ ಗಿಳಿಗಳು ಹಿಂಡು ಧಾಳಿ ಮಾಡುವುದು 5 ಅರಸರು ಯಾವಾಗಲೂ ಊರುಊರುಗಳಲ್ಲಿ ಅಲೆದು ಪ್ರಜೆಗಳನ್ನು ಸುಲಿಯುವುದು 6 ಇಲಿ ಹೆಗ್ಗಣಗಳು ಹೆಚ್ಚಿ ಬೆಳೆಯನ್ನು ಕೆಡಿಸುವುದು ಈ ಆರು ಈತಿಬಾಧೆಗಳು ಎನ್ನಿಸುವುವು (ಕಾಮಂದಕ ನೀತಿಶಾಸ್ತ್ರದಲ್ಲಿ ಹೇಳಿದೆ) (ದೊ ಪು 127)

36. ಶ್ರಾದ್ಧ

36. (1–66) ಶ್ರಾದ್ಧ – ದೇವತೆಗಳನ್ನು ಉದ್ದೇಶಿಸಿಮಾಡುವ ಹವಿರ್‌ದಾನಕ್ಕೆ ಸ್ವಾಹಾ ಎಂತಲೂ ಪಿತೃಗಳನ್ನು ಉದ್ದೇಶಿಸಿ ನೀಡುವ ಹವಿರ್ದಾನಕ್ಕೆ ಸ್ವಧಾ ಎಂತಲೂ ಹೆಸರು. ಪಿತೃಗಳಿಗೆ ಕೊಡುವ ದಾನಕ್ಕೆ ನಿವಾಪಃ ಎಂತಲೂ ಎಂತಲೂ ಶಾಸ್ತ್ರಾನುಸಾರವಾಗಿ ಪಿತೃಗಳನ್ನು ಉದ್ದೇಶಿಸಿ ಮಾಡುವ ಕರ್ಮಕ್ಕೆ ಶ್ರಾದ್ಧಂ ಎಂತಲೂ ಹೆಸರು.

37. ಚಕ್ರವಾಲ ಪರ್ವತ

37. 1–68 ಚಕ್ರವಾಲವೆಂಬ ಪರ್ವತದ ಒಳಗಡೆಯಲ್ಲಿ ಮಾತ್ರ ಸೂರ್ಯನ ಬೆಳಕು ಇರುವದರಿಂದ ಅದು ಒಳಗಡೆ ಪ್ರಕಾಶವಾಗಿಯೂ ಹೊರಗಡೆ ಕತ್ತಲೆ ಕವಿದುಕೊಂಡದ್ದಾಗಿಯೂ ಇರುವದೆಂದು ಪುರಾಣಗಳಲ್ಲಿ ವರ್ಣಿಸಿರುತ್ತದೆ.

38. ಋಣತ್ರಯ

38. 1–71 1 ದೇವಋಣ, ಋಷಿಋಣ, ಪಿತೃಋಣ–ಎಂದು ಋಣಗಳು ಮೂರು.

39. ಋಣ ತೀರಿಸುವಿಕೆ

39. 1–71 ದೇವಋಣ– ಯಾಗದಿಂದ ದೇವಋಣ ತೀರಿಸಬೇಕು

ಋಷಿಋಣ– ದಾನಕರ್ಮದಿಂದ ತೀರಿಸಬೇಕು

ಪಿತೃಋಣ– ಮಕ್ಕಳನ್ನು ಪಡೆದು ತೀರಿಸಬೇಕು

ಈ ಋಣತ್ರಯ ತೀರಿಸಿದ ಬಳಿಕ ಸಂನ್ಯಾಸ ಸ್ವೀಕರಿಸಬೇಕು ಎಂದು ಧರ್ಮಶಾಸ್ತ್ರ ಹೇಳುತ್ತದೆ

40. ಪಂಚ ತಂದೆಯರು

40. (1–72) ಮೂಲಶ್ಲೋಕದಲ್ಲಿ ತಾತ=ತಂದೆ ಎಂಬ ಮಾತಿಗೆ ಇಲ್ಲಿ ಅನುವಾದದಲ್ಲಿ ಪೂಜ್ಯನೆಂದು– ವಶಿಷ್ಠನನ್ನು ಕರೆಯಲಾಗಿದೆ. ತಂದೆ ಎಂದಿರಬೇಕು. ಏಕೆಂದರೆ 1 ಹಡೆದವನು 2 ಉಪನಯನ ಮಾಡಿದವನು 3 ದಾನ ಮಾಡಿದವನು 4 ಕನ್ಯಾದಾತನು 5 ಆಪತ್ತಿನಿಂದ ಪಾರು ಮಾಡಿದವನು ಈ ಪ್ರವರವನ್ನು ತಂದೆಯರೆಂದು ವ್ಯವಹಾರವುಂಟೆಂದು ಧರ್ಮಶಾಸ್ತ್ರ ಹೇಳುತ್ತದೆ. ಇಲ್ಲಿ ಪಿತೃಋಣ ತೀರಿಲಾಗದ ಆಪತ್ತನ್ನು ಪರಿಹರಿಸುವವನು ವಿಶಿಷ್ಟನಾಗಿರುವುದರಿಂದ ದಿಲೀಪ ಅವನನ್ನು ತಾತ (ತಂದೆ) ಎಂದು ಸಂಬೋಧಿಸಿದ್ದಾನೆ.

41. ತ್ರಿಕಾಲಜ್ಞಾನ

41. 1–74 ಹಿಂದೆ ನಡೆದದ್ದು ಮುಂದೆ ನಡೆಯುವದು ಈಗ ಎಲ್ಲಾ ಕಡೆಯಲ್ಲಿಯೂ ನಡೆಯುತ್ತಿರುವದು–ಈ ಮೂರೂ ಯೋಗಿಗಳಿಗೆ ತಿಳಿಯುವದೆಂದು ಹೇಳುತ್ತಾರೆ.

42. ಅತಿಥಿ ಸತ್ಕಾರ

42. 1–76 ಮಂಗಲದ್ರವ್ಯಗಳೂ ದೇವರು, ಬ್ರಾಹ್ಮಣರು ಮುಂತಾದವರು ದಾರಿಯಲ್ಲಿ ಕಂಡರೆ ಪ್ರದಕ್ಷಿಣ ನಮಸ್ಕಾರವೇ ಮುಂತಾದವುಗಳಿಂದ ಸತ್ಕರಿಸಬೇಕಾದದ್ದು ಯುಕ್ತವು. ದಿಲೀಪನು ಬೇರೆ ಯೋಚನೆಯಲ್ಲಿದ್ದದ್ದರಿಂದ ಈ ಕೆಲಸವನ್ನು ಮರೆತುಬಿಟ್ಟನು.

43. ಅಷ್ಟದಿಗ್ಗಜಗಳು

43. 1–78 ಒಂದೊಂದು ದಿಕ್ಕಿಗೂ ಒಂದೊಂದು ಆನೆಯಂತೆ ಎಂಟು ದಿಗ್ಗಜಗಳು ಭೂಮಿಯನ್ನು ಹೊತ್ತಿರುವವೆಂದು ಪುರಾಣಗಳಲ್ಲಿ ವರ್ಣಿಸುವದುಂಟು. ಐರಾವತ, ಪುಂಡರೀಕ, ವಾಮನ, ಕುಮುದ, ಅಂಜನ, ಪುಷ್ಪದಂತ, ಸಾರ್ವಭೌಮ, ಸುಪ್ರತೀಕ ಇವೇ ಆ ಅಷ್ಟದಿಗ್ಗಜಗಳು.

44. ಶ್ರೇಯಸ್ಸಿಗೆ ಅಡ್ಡಿ

39. 1–79 ಗೌರವಿಸಬೇಕಾದವರನ್ನು ಅನಾದರ ಮಾಡುವದೂ ಅಯೋಗ್ಯರನ್ನು ಗೌರವಿಸುವದೂ ಧರ್ಮವಿರುದ್ಧವಾದದ್ದು ; ಇದರಿಂದ ತನಗೆ ಆಗಬೇಕಾದ ಶ್ರೇಯಸ್ಸಿಗೆ ಅಡ್ಡಿಯಾಗುವುದು. ಎಂದು ಧರ್ಮಶಾಸ್ತ್ರ ವಚನವಿದೆ.

1–80 ದೀರ್ಘಸತ್ರವೆಂಬ ಯಾಗಕ್ಕೆ ಒಂದು ವರ್ಷವು ತೀರ ಕಡಿಮೆಯ ಕಾಲವು; ಒಂದು ಸಾವಿರ ವರ್ಷದವರೆಗೂ ಇದಕ್ಕೆ ಕಾಲವುಂಟೆಂದು ಹೇಳುತ್ತಾರೆ.

45. ತೀರ್ಥಸ್ನಾನ

45. 1–85 ಗೋಧೂಳಿಯು ಮೈಮೇಲೆ ಬಿದ್ದರೆ ವಾಯವ್ಯಸ್ನಾನವೆಂಬ ಒಂದು ಸ್ನಾನವಾದಂತೆ ಎಂದು ಮನುಸ್ಮೃತಿಯಲ್ಲಿ ಹೇಳಿದೆ; ಆದ್ದರಿಂದಲೆ ಕವಿಯು ಇಲ್ಲಿ ಇದನ್ನು ತೀರ್ಥಸ್ನಾನಕ್ಕೆ ಹೋಲಿಸಿರುತ್ತಾನೆ.

46. ಕುಲಪತಿ

46. 1–95 ಹತ್ತು ಸಾವಿರ ಮುನಿಗಳಿಗೆ ಅನ್ನಾದಿಗಳನ್ನು ಕೊಟ್ಟು ಅಧ್ಯಯನ ವನ್ನೂ ಮಾಡಿಸುವ ಬ್ರಹ್ಮರ್ಷಿಗೆ ಕುಲಪತಿಯೆಂದು ಹೆಸರು. ಸ್ತುತಿಗಳಿಂದಲೂ ವಾದ್ಯಗಳಿಂದಲೂ ಎಚ್ಚರಿಸಲ್ಪಡುತ್ತಿದ್ದ ರಾಜನು ಈ ದಿನ ಕುಲಪತಿಗಳಾದ ವಸಿಷ್ಠರ ಸಾವಿರಾರು ಶಿಷ್ಯರ ಅಧ್ಯಯನದ ಶಬ್ದವನ್ನು ಕೇಳುತ್ತಾ ಎಚ್ಚತ್ತನೆಂದು ಕವಿಯು ಸೂಚಿಸಿರುತ್ತಾನೆ.

47. ಹದಿನಾಲ್ಕು ಮನುಗಳು

47. ಹದಿನಾಲ್ಕು ಮನುಗಳು : –ಸ್ವಾಯಂಭುವ, ಸ್ವಾರೋಚಿಷ, ಉತ್ತಮ ರೈವತ, ಚಾಕ್ಷುಷ, ವೈವಸ್ವತ, ಸಾವರ್ಣಿ, ದಕ್ಷಸಾವರ್ಣಿ, ಬ್ರಹ್ಮಸಾವರ್ಣಿ, ಧರ್ಮಸಾವರ್ಣಿ, ರುದ್ರಸಾವರ್ಣಿ, ದೇವಸಾವರ್ಣಿ, ಇಂದ್ರಸಾವರ್ಣಿ

48. ಚತುರ್ದಶ ವಿದ್ಯೆಗಳು

48. ವಿದ್ಯೆಗಳು : ವೇದಗಳು ನಾಲ್ಕು, ವೇದಾಂಗಗಳು ಆರು, ಮೀಮಾಂಸಾ, ನ್ಯಾಯ, ಧರ್ಮಶಾಸ್ತ್ರ, ಪುರಾಣ–ಹೀಗೆ ಹದಿನಾಲ್ಕು; ಅಥವಾ, ಆಕ್ಷಿಕೀ, ದಂಡನೀತಿ, ವಾರ್ತಾ, ದಂಡನೀತಿ– ಹೀಗೆ ನಾಲ್ಕು.

49. ಸಪ್ತಸಮುದ್ರಗಳು

49. ಸಪ್ತಸಮುದ್ರಗಳು : ಲವಣ, ಇಕ್ಷು, ಸುರಾ, ಸರ್ಪಿಸ್, ದಧಿ, ಕ್ಷೀರ, ಶುದ್ಧ ಜಲ–ಹೀಗೆ ಏಳು.

ಅಧ್ಯಾಯ 2

50. ದ್ವಿಪೇಂದ್ರನಂತೆ ದಿಲೀಪ

50. 2–14, ದ್ವಿಪೇಂದ್ರ – ಆನೆಗಳಲ್ಲಿ ಶ್ರೇಷ್ಠ ಜಾತಿ ಆನೆ, ಕೊಬ್ಬಿದ ಮದದಾನೆ, ಭದ್ರ ಎಂಬ ಉತ್ತಮ ಜಾತಿಯ ಆನೆಯು ತನ್ನಲ್ಲಿ ಉತ್ಪತ್ತಿಯಾಗುವ ಮದ

ಜಲವನ್ನುತನ್ನ ದೇಹದೊಳಗೆಯೇ ಲಯಗೊಳಿಸಿ ಅಡಗಿಸಿಕೊಳ್ಳುವುದು. ಆನೆಯು ಮದ ಜಲವು ಹರಿದು ಹೊರಗೆ ಪ್ರಕಟವಾಗದು. ಹಾಗೆ ರಾಜಾಲಂಕಾರಗಳು ಇಲ್ಲದಿದ್ದರೂ ತನ್ನ ತೇಜೋ ವಿಶೇಷದಿಂದ ದಿಲೀಪನು ರಾಜಸ ಕಳೆಯಿಂದ ಕೂಡಿದ್ದನು.(ಗೋ -69)

51. ದ್ವಿಪೇಂದ್ರ ಲಕ್ಷಣ

51. 2–8 ದ್ವಿಪೇಂದ್ರ – ಆನೆ ಮೊದಲು ಸೊಂಡಿಲಿನಿಂದ ನೀರು ತೆಗೆದುಕೊಂಡು ಆಮೇಲೆ ಬಾಯಿಂದ ಕುಡಿಯುತ್ತದೆ ಆದ್ದರಿಂದ ದ್ವಿಪೇಂದ್ರ ಎಂದು ಕರೆಯುತ್ತಾರೆ.

52. ಕಾಳ್ಗಿಚ್ಚಿನಿಂದ ಬೆಳೆವೃದ್ಧಿ

52. 2–14 ಕಾಳಿದಾಸ ಇಲ್ಲಿ ಕಾಳ್ಗಿಚ್ಚು ಉರಿದು ಆರಿದ ಮೇಲೆ ಮರ ಗಿಡ ಬಳ್ಳಿಗಳ ಬೆಳೆ ಹುಲುಸಾಗುತ್ತಿತ್ತು ಎಂದು ಬರೆದಿರುವುದು ಹೊರನೋಟಕ್ಕೆ ಒಂದಕ್ಕೊಂದು ಸಂಬಂಧವಿದೆಯೇ ಎನಿಸುತ್ತದೆ .ಆದರೆ ಕಾಳಿದಾಸನ ಮಾತು ಸರಿಯಾಗಿದೆ. ಕಾಳ್ಗಿಚ್ಚು ಆರಿದ ಮೇಲೆ ಉಳಿಯುವ ಗಿಡ–ಮರಗಳ ಬೂದಿ ಉತ್ತಮ ಗೊಬ್ಬರವಾಗಿ ಇದು ಬೆಳೆದ ಗಿಡಮರಗಳನ್ನು ಹುಲುಸಾಗಿ ಬೆಳೆಯಲು ಕಾರಣವಾಗುತ್ತದೆ ಇದು ರೈತರಿಗೆ ತಿಳಿದ ವಿಚಾರ. (ಸಿಎವೆಂ ಪುಟ 19. ಟಿಪ್ಪಣಿ ರಘುವಂಶ ಸಾರ)

ಅಧ್ಯಾಯ 3

53. ಅನುವಾದಿಸದ ಶ್ಲೋಕ

53. 3–8. ದಿನೇಷು ಗಚ್ಚತ್ಸು ನಿತಾಂತ ಪೀವರಂ .. ಎಂಬ ಶ್ಲೋಕವನ್ನು ದೊಡ್ಡಬೆಲೆ ಅನುವಾದಿಸಿಲ್ಲ. ಬಹುಶಃ ಇಲ್ಲಿಯ ಶೃಂಗಾರದ ವರ್ಣನೆ ವಿದ್ಯಾರ್ಥಿಗಳಿಗೆ ತಕ್ಕದ್ದಲ್ಲ ಎಂದು ತಿಳಿದಿರಬೇಕು.

54. ಗೋದಾನ ವಿಧಿ

3–33. ಗೋದಾನ ವಿಧಿ– ಗೋದಾನ ವಿಧಿಯ ನಂತರ ಕ್ಷತ್ರಿಯರು ವಿವಾಹ ದೀಕ್ಷೆಯನ್ನು ನೀಡಬೇಕು (ಮದುವೆ ಮಾಡಬೇಕು)

55. 28 ಜನರ ವಿವಾಹ

55. ರಘು ಅನೇಕ ರಾಜಪುತ್ರಿಯರನ್ನು 28 ಜನರನ್ನು ಮದುವೆಯಾದ . ದಕ್ಷಪ್ರಜಾಪತಿಯ ಪುತ್ರಿಯರಲ್ಲಿ 27ನಕ್ಷತ್ರಪುಂಜಗಳು ಮತ್ತು ಉಮೆ(ದಾಕ್ಷಾಯಿಣಿ

ದೊಡ್ಡ ಮಗಳು) ಸೇರಿ 28 ಜನರು ದಕ್ಷಪುತ್ರಿಯರು. ಇವರಲ್ಲಿ ದಕ್ಷನು 27 ಜನ ನಕ್ಷತ್ರ ಪುತ್ರಿಯರನ್ನು ಚಂದ್ರನಿಗೂ ದಾಕ್ಷಾಯಿಣಿಯನ್ನು ಶಿವನಿಗೂ ಕೊಟ್ಟು ಮದುವೆ ಮಾಡುತ್ತಾನೆ.

56. ಬಾಲ ಚಿಕಿತ್ಸೆ

56. 3–12 ಬಾಲ ಚಿಕಿತ್ಸೆಗಳನ್ನು ಬಲ್ಲ ಜಾಣರಾದ ಭಿಷಗ್ವರರು ಗರ್ಭವು ಸುಖವಾಗಿ ಬೆಳೆಯುವಂತೆ ಚಿಕಿತ್ಸೆಗಳನ್ನು ಆಚರಿಸಿದರು.

ಬಾಲ ಚಿಕಿತ್ಸೆಗಳು– ಕುಮಾರ ಭೃತ್ಯಾ ಎಂಬ ವೈದ್ಯಶಾಖೆಯ ಚಿಕಿತ್ಸೆಗೆ ಸಂಬಂಧಿಸಿದ ಪ್ರತ್ಯೇಕ ಶಿಶುವೈದ್ಯ ತಜ್ಞರು ಇರುತ್ತಿದ್ದರು" ಹೆರಿಗೆಗೆ ಮುಂಚಿನ ತಿಂಗಳುಗಳಲ್ಲಿ ಗರ್ಭಿಣಿಯರ ಸ್ಥಿತಿಯನ್ನು ಎಚ್ಚರಿಕೆಯಿಂದ ನೋಡಿಕೊಳ್ಳುವ ವ್ಯವಸ್ಥೆಯು (ಪ್ರಿ–ನೇಟಲ್ ಕೇರ್) ಪಾಶ್ಚಾತ್ಯ ದೇಶಗಳಲ್ಲಿ ಈಚೆಗೆ ಏರ್ಪಟ್ಟಿದೆ. ಕಾಳಿದಾಸನ ಕಾಲದಲ್ಲಿ ಇದೇ ಒಂದು ವೈದ್ಯಶಾಸ್ತ್ರದ ಶಾಖೆಯಂತೆ ಆಯುರ್ವೇದ ಶಾಸ್ತ್ರದಲ್ಲಿ ಪ್ರಸಿದ್ಧವಾಗಿತ್ತು ಎಂದು ತಿಳಿದುಬರುತ್ತದೆ. ((ಸಿಕವೆಂ ಪುಟ 33 ಟಿಪ್ಪಣಿ ರಘುವಂಶ ಸಾರ)

57. ಜನನಕಾಲ ವಿಚಾರ

57 (ಸುದಕ್ಷಿಣೆಯು) ಹೆರಲು 10ನೇ ತಿಂಗಳು ಬಂದಿತು. ಸೂರ್ಯನೇ ಮೊದಲಾದ ಐದು ಗ್ರಹಗಳು ಅಸ್ತಮಯವನ್ನು ಪಡೆಯದೆ ತಮ್ಮ ಸ್ಥಾನಗಳಲ್ಲಿದ್ದು ಭೂಪಾಲ ಪುತ್ರನ ಭಾಗ್ಯ ಸಂದರ್ಭವನ್ನು ಸೂಚಿಸುತ್ತಿತ್ತು" " ಜನನ ಕಾಲದಲ್ಲಿ ಒಂದು ಗ್ರಹವು ಉಚ್ಚವಾಗಿದ್ದರೆ ಸೌಖ್ಯವೆಂದೂ, ಎರಡು ಗ್ರಹಗಳು ಉಚ್ಚವಾಗಿದ್ದರೆ ಗೌರವ ಲಾಭವೆಂದೂ ಮೂರು ಕಾಲಗಳು ಉಚ್ಚವಾಗಿದ್ದರೆ ರಾಜ ಪ್ರತಿರೂಪ ಸ್ಥಾನವೆಂದೂ ನಾಲ್ಕು ಗ್ರಹಗಳು ಉಚ್ಚವಾಗಿದ್ದರೆ ರಾಜ್ಯ ಸಿದ್ಧಿ ಎಂದೂ ಐದು ಗ್ರಹಗಳು ಉಚ್ಚವಾಗಿದ್ದರೆ ದೇವತಾ ಪುರುಷ ಆಗುವನೆಂದೂ ಜ್ಯೋತಿಷ್ಕರ ಫಲ ನಿರೂಪಣೆ. ((ಸಿಕೆವೆಂ ಪುಟ 34 ಟಿಪ್ಪಣಿ ರಘುವಂಶ ಸಾರ)

58. ತ್ರಿಸಾಧನಗಳು

58. 3–13. ಪ್ರಭು ಮಂತ್ರೋತ್ಸಾಹಗಳೆಂಬ ಸಾಧನೆಗಳನ್ನು ಒಳಗೊಂಡಿರುವ ಶಕ್ತಿಯು–

ತ್ರಿಸಾಧನವಾದ ಎಂದರೆ ಪ್ರಭುಶಕ್ತಿ ಉತ್ಸಾಹ ಶಕ್ತಿ ಮತ್ತು ಮಂತ್ರಾಲೋಚನ ಶಕ್ತಿಗಳ ಸಮುಚ್ಚಯ ಎಂದರ್ಥ ಕೋಶ ದಂಡ ಸಂಪತ್ತು ಇವುಗಳು ಪ್ರಭುಶಕ್ತಿ ಎಂದು ಪರಾಕ್ರಮ ಸಂಪತ್ತು ಉತ್ಸಾಹ ಶಕ್ತಿಯನ್ನು ಮತ್ತು ವಿಜ್ಞಾನ ಸಂಪತ್ತು ಮತ್ತು ಶಕ್ತಿಯೆಂದು ಶಾಸ್ತ್ರಕಾರರ ಮತ. (ಸಿಕವೆಂ ಪುಟ 34 ಅಡಿಟಿಪ್ಪಣಿ ರಘುವಂಶ ಸಾರ).

59. ಪುಂಸವನ

59. 3.13. ಪುಂಸವನ– ಸ್ತ್ರೀ ಗರ್ಭಿಣಿಯಾದ ಲಕ್ಷಣಗಳು ಕಂಡುಬಂದಾಗ ಪ್ರಥಮವಾಗಿ ಮಾಡತಕ್ಕ ಸಂಸ್ಕಾರ ಕ್ರಿಯೆಗಳು.

60. ರಾಜನ ಅವಿಭಾಜ್ಯ ಅಂಗಗಳು

60. 3–16. ಚಂದಿರನಂತೆಸೆವ ಶ್ವೇತಚ್ಛತ್ರ ಮತ್ತು ಚಾಮರದ್ವಯಗಳನ್ನು ಮಾತ್ರ ಕೊಡಲಿಕ್ಕೆ ಆಗಲಿಲ್ಲ– – ಅವು ರಾಜನಿಗೆ ಅವಿಭಾಜ್ಯ ಅಂಗಗಳು. ಅವುಗಳನ್ನು ಬಿಟ್ಟು ಉಳಿದೆಲ್ಲ ಅಷ್ಟೈಶ್ವರ್ಯವನ್ನೂ ದಾನ ಮಾಡಿದನು.

61. ರುರು ಜಿಂಕೆಯ ಲಕ್ಷಣ

61. 3–30. 3–30 ರುರು ಮೃಗದ ಪಾವನವಾದ ಚರ್ಮವನ್ನು ಹೊದೆದು ಮಂತ್ರ ವಿದ್ಯೆಯನ್ನೆಲ್ಲ ಸಹಿತಮಾಗಿ ತನ್ನ ತಂದೆಯಿಂದಲೇ ಕಲಿತನು.–

ರುರು ಮೃಗಎಂದರೆ 12 ಜಾತಿಯ ಜಿಂಕೆಯ ಪೈಕಿ ಒಂದು ಪ್ರಭೇದ. ಇದರ ಲಕ್ಷಣವೆಂದರೆ ರುರು ಎಂಬ ಶಬ್ದದಿಂದ ವಿಶೇಷವಾಗಿ ಕೂಗುತ್ತದೆ. ಇದು ಕಪ್ಪಾದ ಗುಪ್ಪೆಯನ್ನು ಮಚ್ಚೆಗಳನ್ನು ಉಳ್ಳದ್ದು. ಅಸ್ತ್ರ ವಿದ್ಯೆ ಕಲಿಯಲು ರುರು ಚರ್ಮವನ್ನು ಧರಿಸಲಾಗುತ್ತಿತ್ತು(ಗುರುಬಾಲ ಪ್ರಬೋಧಕ, ಪುಟ 366)

62. ಧೀಗುಣ

62. 3–29. ರಘುವುಪೂರ್ಣ ಗುಣಗಳಿಂದನಾಲ್ಕು ಕಡಲು ಗಳಿಗೆ ಎಣೆಯಾದ ನಾಲ್ಕು ವಿದ್ಯೆಗಳನ್ನು ದಾಟಿದನು – ಧೀ ಗುಣಗಳೆಂದುಮೂಲದಲ್ಲಿಹೇಳಿರುವುದನ್ನು ದೊಡ್ಡಬೆಲೆ ಯವರುಬುದ್ಧಿಯಪೂರ್ಣ ಗುಣಗಳೆಂದು ಅನುವಾದಿಸಿದ್ದಾರೆ. ಬುದ್ಧಿಂಉಸಪ್ತ ಗುಣಗಳು ಎಂದಿದ್ದರೆಸ್ಪಷ್ಟವಾಗುತ್ತಿತ್ತು. ಏಕೆಂದರೆ ಕಾಮಂದಕನೀತಿಶಾಸ್ತ್ರದಲ್ಲಿ ಇರುವ ಇದೇ ಗುಣಗಳು ಇವು: 1. ಶುಶ್ರೂಷಾ– ಕೇಳುವ ಅಭಿಲಾಷೆ. 2. ಶ್ರವಣ– ಆಲಿಸಿ ಕೇಳುವುದು. 3. ಗ್ರಹಣ– ಕೇಳಿದ್ದನ್ನು ಗ್ರಹಿಸುವುದು. 4. ಧಾರಣ– ಗುರು ಉಪದೇಶವನ್ನು ಮನಸ್ಸಿನಲ್ಲಿ ಧರಿಸಿ ಆಲೋಚಿಸುವುದು. 5. ಊಹಾಪೋಹ –ಚರ್ಚಿಸುವುದು. 6. ಅರ್ಥವಿಜ್ಞಾನ– ಸರಿಯಾದ ಅರ್ಥವನ್ನುನಿರ್ಧರಿಸಿ ಕೊಳ್ಳುವುದು. 7.ತತ್ವಜ್ಞಾನ – ಇದಮಿತ್ಥಂ ಎಂದು ತತ್ವ ನಿಶ್ಚಯ ಮಾಡುವುದು.

63. ವಿವಿಧ ಆಲೀಢಗಳು

63. 3–52 1. ಆಲೀಢವೆಂದರೆ ಬಲ ಹೆಜ್ಜೆಯನ್ನು ಸ್ವಲ್ಪ ಬಾಗಿಸಿ ಮುಂದಕ್ಕೆ ಇಟ್ಟು ಎಡ ಹೆಜ್ಜೆಯನ್ನು ಹಿಂದಕ್ಕೆ ಬಾಗಿಸಿ ಸೆಡೆತು ನಿಲ್ಲುವ ಭಂಗಿ. 2. ವೈಶಾಖ–

ಕಾಲುಗಳನ್ನು ಸಮನಾಗಿ ಅಗಲಿಸಿ ನಿಲ್ಲುವುದು 3. ಮಂಡಲ– ಬಿಲ್ಲಿನಂತೆ ಎರಡು ಕಾಲುಗಳನ್ನು ಬಾಗಿಸಿ ನಿಲ್ಲುವುದು. 4. ಪ್ರತ್ಯಾಲೀಢ– ಎಡಗಾಲನ್ನು ಮುಂದಿಟ್ಟು ಬಲಗಾಲನ್ನು ಸ್ವಲ್ಪ ಬಾಗಿಸಿ ನಿಂತ ಭಂಗಿ. (ಆಲೀಢಕ್ಕೆ ಪ್ರತಿಯಾದ ಭಂಗಿ)

ರಭಸ ಎಂಬ ವ್ಯಾಖ್ಯಾನಕಾರ ವೈಷ್ಣವ ಎಂಬ ಇನ್ನೊಂದು ಪ್ರಭೇದ ಸೇರಿಸಿ ಒಟ್ಟು 6 ಬಾಣ ಬಿಡುವ ವ್ಯಕ್ತಿಯ ಭಂಗಿಗಳನ್ನು ಹೇಳುತ್ತಾನೆ.

ಅಧ್ಯಾಯ 4

64. ಇಂದ್ರಧ್ವಜ

64. 4–3. ಇಂದ್ರಧ್ವಜ– ಹಿಂದಿನ ಕಾಲದಲ್ಲಿ ಮಳೆ ಮುಂತಾದವುಗಳಿಂದ ಸುಭಿಕ್ಷೆ ಉಂಟಾಗಲು ರಾಜದ್ವಾರದಲ್ಲಿ ಧ್ವಜಾಕಾರದ ಉನ್ನತ ಮರವನ್ನು ನೆಟ್ಟು ಪೂಜಿಸುತ್ತಿದ್ದರು ಇದಕ್ಕೆ ಇಂದ್ರಧ್ವಜ ಎಂದು ಕರೆಯುತ್ತಿದ್ದರು (ಪುರುಹೂತ ಧ್ವಜ) ಉನ್ನತವಾದ ಆ ಇಂದ್ರಧ್ವಜವನ್ನು (ಕಾಮನಬಿಲ್ಲನ್ನು ನೋಡುವಂತೆ) ನೋಡಿ ಪ್ರಜೆಗಳು ಆನಂದಿಸುತ್ತಿದ್ದರು.

65. ಮದಜಲಧಾರೆಯ ಸಪ್ತಾಂಗಗಳು

65. 4–23. ಆನೆಗಳು ಮೈಯಲ್ಲಿನ ಏಳು ಅವಯುವಗಳಿಂದ ಮದಜಲಧಾರೆಯನ್ನು ಸುರಿಸುತ್ತವೆ. ಸೊಂಡಿಲಿನ ತುದಿಯಲ್ಲಿ ಇರುವ ಎರಡು ಹೊಳ್ಳೆಗಳು, ಎರಡು ಕಪೋಲಗಳು, ಎರಡು ಕಣ್ಣುಗಳು, ಒಂದು ಜನನಾಂಗ ಒಟ್ಟು ಏಳು ಅಂಗಗಳು.

66. ಅಗಸ್ತ್ಯ ನಕ್ಷತ್ರ

66. 4–21. ಅಗಸ್ತ್ಯ ನಕ್ಷತ್ರ – ಶರದೃತುವಿನಲ್ಲಿ ಬೆಳಗಿನ ಜಾವದಲ್ಲಿ ಪ್ರಶಸ್ತ ಅಗಸ್ತ್ಯ ನಕ್ಷತ್ರ ಉದಯವಾಗುವುದು. ಮಹಾಮಹಿಮರಾದ ಅಗಸ್ತ್ಯ ಮಹರ್ಷಿಗಳು ನಕ್ಷತ್ರರೂಪದಿಂದ ದಕ್ಷಿಣ ದಿಕ್ಕಿನಲ್ಲಿ ಪ್ರತಿಷ್ಠಿತರಾಗಿರುವವರು ಎಂಬುದು ಪ್ರತೀತಿ.

67. ರಾಜನ ಷಡ್ಬಲ

67. 4–26. ರಾಜನು ದಿಗ್ವಿಜಯವನ್ನು ಬಯಸಿ ಹೊರಟವನು ಎಂಬಲ್ಲಿ ಮೂಲದಲ್ಲಿ ಷಡ್ಬಲದೊಡನೆ (ಷಡ್ವಿಧ ಬಲಂ) ಎಂದಿದೆ. ಅನುವಾದದಲ್ಲಿ ಆ ಮಾತು ಬಿಟ್ಟಿದೆ. ಈ ಮಾತಿಲ್ಲದಿದ್ದರೆ ಒಬ್ಬನೇ ಮಿತ ಪರಿವಾರದೊಂದಿಗೆ ಹೊರಟ ಎಂದಾಗುತ್ತದೆ.

ಷಡ್ವಿಧ ಬಲ– 1. ಮೂಲಬಲ(ಮೌಲ), 2. ಭೃತ್ಯ ಬಲ(ಭೃತ್ಯ), 3. ಮಿತ್ರ ಬಲ(ಶ್ರೇಣಿ), 4. ಪೌರಬಲ(ದ್ವಿಷತ್), 5. ಶತ್ರು ಬಲ(ಸಂಹೃತ್), 6. ಬೇಡರ ಬಲ(ಆಟ ವಿಕ). ಇವು ದಿಗ್ವಿಜಯ ಕಾಲದಲ್ಲಿ ರಾಜನ ಜೊತೆಗಿರುವ ಷಡ್ಬಲಗಳು.(ಕೌಟಿಲ್ಯನ ಅರ್ಥಶಾಸ್ತ್ರ)

68. ಕಣ್ತಪ್ಪಿದ ಶ್ಲೋಕ

68. 4.29– ನಾಲ್ಕನೇ ಸರ್ಗದ 29ನೇ ಶ್ಲೋಕವನ್ನು ದೊಡ್ಡಬೆಲೆಯವರು ಅನುವಾದ ಮಾಡಿಲ್ಲ. ಆದರೆ ಈ ಶ್ಲೋಕದಲ್ಲಿ ರಘುವಿನ ದಂಡಯಾತ್ರೆಯ ವಿವರಗಳಿವೆ. ರಘುವಿನ ದಂಡಯಾತ್ರೆಯಿಂದ ಆಕಾಶ–ಭೂಮಿ ಆಯಿತು. ರಥ ಚಕ್ರಗಳಿಂದ ಮೇಲೆದ್ದ ಧೂಳು ಗಗನಕ್ಕೆ ಸೇರಿ ಭೂಮಿ ತುಂಬಾ ಧೂಳು ತುಂಬಿದಂತೆ, ಆಕಾಶದಲ್ಲಿ ಚತುರಂಗ ಸೇನೆ ಚಲಿಸಿದಂತೆ ಆಯಿತು. ಭೂಮಿಯಲ್ಲಿ ಗಜಸೇನೆ ಕಪ್ಪಾದ ಮೋಡಗಳಂತೆ ಚಲಿಸಿದ್ದರಿಂದ ಆಕಾಶದಂತೆ ಮೋಡಗಳಿಂದ ತುಂಬಿದಂತಾಯಿತು. ಹೇಗೆ ಭೂಮಿ ಆಕಾಶ ಆಕಾಶವೇ ಭೂಮಿ ಆಯಿತು ಉತ್ಪ್ರೇಕ್ಷಾಲಂಕಾರ ಶ್ಲೋಕವನ್ನು ಏಕೆ ಅನುವಾದಿಸಲಿಲ್ಲವೋ ತಿಳಿಯದು ಈ ಶ್ಲೋಕ ಅವರ ಕಣ್ತಪ್ಪಿಸಿರಬಹುದು.

69. ಚತುಸ್ಕಂಧ(ಚಮೂ)

69. 4.30– ಚಲಿಸುತ್ತಿರುವ ರಘು ಸೇನೆ ಚತುಸ್ಕಂಧವಾಗಿ(ನಾಲ್ಕು ಭಾಗವಾಗಿ) ಚಲಿಸಿತು. ರಘುವಿನ ಕೀರ್ತಿ, ಸಾಹಸವೆಂಬ, ಅಗ್ನಿ , ಪ್ರಭಾವ(ಪ್ರತಾಪ) ಅನಂತರ ಸೈನಿಕರ ಆರ್ಭಟ (ಶಬ್ದ)ಆಮೇಲೆ ಪರಾಗ ಸೇನೆಯ ರಸಗಳಿಂದ ಎದ್ದ ಧೂಳು, ಆನಂತರ ರಥಾದಿಗಳ ಭೀಕರ ಕಾಳಗ (ಧೂಳಾ ಧೂಳಿ)ಹೀಗೆ (ಚತುಸ್ಕಂಧ) ನಾಲ್ಕು ಸೇನಾ ವ್ಯೂಹಗಳ ರಚನೆಯಿಂದ ಕೂಡಿದ ಚತುರಂಗಬಲ ಮುಂದೆ ಸಾಗಿತ್ತು ಎಂದು ಕಾಳಿದಾಸ ಹೇಳಿದ್ದಾನೆ. (ಪ್ರಕಾಶಿಕ ಟೀಕಾ ಗ್ರಂಥ)

4–30. 729 ರಸ್ತೆಗಳು 729 ಆನೆಗಳು 2187 ಕುದುರೆಗಳು 3645 ಪದಾರ್ಥಗಳನ್ನು ಒಳಗೊಂಡ ಸೇನೆಯನ್ನು ಚತುಸ್ಕಂಧ ಎನ್ನಲಾಗಿದೆ. ಇದನ್ನು ಸೇನಾ ವರ್ಗೀಕರಣದಲ್ಲಿ ಚ ಮೂ ಎಂದು ಕರೆಯುತ್ತಾರೆ.

70. ನಾಲ್ಮೊಗದ ರಚನೆ

70. ನಾಲ್ಮೊಗದ ರಚನೆ 4–30 1. ತಿರೆಯಾಣ್ಮನ ಪೌರುಷದ ಹೆಸರುವಾಸಿ

2. ದಂಡಿನ ಕೋಲಾಹಲ, 3. ಸೇನೆಯ ಧೂಳು , 4. ಚತುರಂಗಸೇನೆ.

ದೊಡ್ಡಬೆಲೆಯವರು ಇದನ್ನು ನಾಲ್ಮೊಗದ ಸೇನೆ ಎಂದಿದ್ದಾರೆ.

71. ಸುಹ್ಮದೇಶ

71. 4.35 ಸುಹ್ಮದೇಶ– ಬರ್ಮಾ ದೇಶದ ಪಶ್ಚಿಮ ಬಂಗಾಳದ ಸಮುದ್ರತೀರದ ಬಳಿಯ ಪ್ರದೇಶ.

72. ಉತ್ಕಲದೇಶ

72. 4–38, ಉತ್ಕಲ– ಆಧುನಿಕ ಒರಿಸ್ಸಾ ದೇಶದ ದಕ್ಷಿಣ ಭಾಗ

73. ವಂಗದೇಶ

73. ವಂಗ– ಪೂರ್ವ ಬಂಗಾಳ

74. ಮಹೇಂದ್ರ ಪರ್ವತ

74. 4.39 ಮಹೇಂದ್ರ ಪರ್ವತ – ಮಹಾನದಿ ಗೋದಾವರಿ ನದಿಗಳ ನಡುವೆ ಭಾರತದ ಪೂರ್ವ ಭಾಗದಲ್ಲಿ ಇರುವ ಪರ್ವತ ಪ್ರದೇಶ. ಸಪ್ತ ಕುಲ ಪರ್ವತಗಳಲ್ಲಿ ಮಹೇಂದ್ರ ಪರ್ವತವು ಮೊದಲನೆಯದು. 1. , ಮಹೇಂದ್ರ, 2. ಮಲಯ, 3. ಸಹ್ಯ, 4. ಶಕ್ತಿಮಾನ್, 5. ಋಕ್ಷ, 6. ವಿಂಧ್ಯ, 7. ಪಾರಿಯಾತ್ರ.

75. ಮಂಗಳಸ್ನಾನ

75. 4–41– ಮಂಗಳಸ್ನಾನ– ಮಹಾಪುರುಷರನ್ನು ದರ್ಶಿಸುವ ಮುನ್ನ ಅಥವಾ ಪೂಜ್ಯರಿಂದ ಕಾಣಿಕೆಗಳನ್ನು ಸ್ವೀಕರಿಸುವ ಮುನ್ನ ಮಾಡುವ ಸ್ನಾನಕ್ಕೆ ಮಂಗಳಸ್ನಾನ ಎಂದು ಹೆಸರು.

ರಘು ಕಳಿಂಗರಾಜನ ಬಾಣದ ಮಳೆಯಲ್ಲಿ ಮುಳುಗಿ ಸ್ಯೆರಿಸಿ ಯಾಗದಲ್ಲಿ ಜಯಲಕ್ಷ್ಮಿಯ ಕೈಹಿಡಿದು ಮಂಗಳ ಸ್ನಾನ ಮಾಡಿದನಂತೆ.

76. ಕಕುಸ್ಥ

76. 4–41. ಎತ್ತಿನ ಡುಬ್ಬದ ಮೇಲೆ ಕುಳಿತವನು ಕಕುಸ್ಥನೆನಿಸುವನು. ರಾಕ್ಷಸರನ್ನು ಜಯಿಸಿದ ಪುರಂ ಜಯಂ ಎಂಬ ದೊರೆಗಳ ಪರವಾಗಿ ಹೋರಾಡುವಾಗ ಎತ್ತಿನ ರೂಪ ಧರಿಸಿದ ಇಂದ್ರನ ಮೇಲೆ ಕುಳಿತಿದ್ದನು ಹಾಗಾಗಿ ಅವನು ಕಕುಸ್ಥನೆನಿಸಿಕೊಂಡನು.

77. ತ್ರಿಕೂಟ ಗಿರಿ

77. ತ್ರಿಕೂಟ ಗಿರಿ– ತಿರುವನಂತಪುರದ ತ್ರಿಕೂಟಾಚಲ ವನ್ನು ಗಿರಿ ಎಂದು ಕರೆಯುತ್ತಾರೆ. ಶ್ರೀಲಂಕಾದಲ್ಲೂ ಒಂದು ತ್ರಿಕೂಟ ಗಿರಿ ಇದೆ ಅದನ್ನು ಸವೇಲಾ ಪರ್ವತ ಎನ್ನುತ್ತಾರೆ.

78. ಗಜಲಿಖಿತ ಪ್ರಶಸ್ತಿ

78. ಉತ್ತರ ಪರಾಂತ ಪ್ರಾಂತವನ್ನು ರಘು ಗೆದ್ದಾಗ ಅವನ ಮದ್ದಾನೆಗಳು ಬಂಡೆಗಳ ಮೇಲೆ ಗೀರಾಡಿ ರಘುವಿನ ಪ್ರಶಸ್ತಿಯನ್ನು ಬರೆದವು. (ಬಂಡೆಗಳ ಮೇಲೆ ದಂತಗಳಿಂದ ಆನೆಗಳು ಕೊರೆದಿದ್ದರಿಂದ ರಾಜಾದೇಶಗಳು ಅಕ್ಷರಗಳಲ್ಲಿ ಕಾಣಿಸಿಕೊಂಡವು.)

79. ಸಾಗರ ಪ್ರಯಣ ನಿಷಿದ್ಧ

79. 4–60. ಹಡಗಿನಿಂದ ಕಡಲಿನ ಮೇಲಣ ಹಾದಿ– ಸಮುದ್ರದ ಪಕ್ಕದ ಭೂಮಾರ್ಗದಲ್ಲಿ ರಘು ಸೇನೆಯೊಡನೆ ಚಲಿಸಿದರು. ಏಕೆಂದರೆ ಆ ಕಾಲದಲ್ಲಿ ಸಮುದ್ರ ಪ್ರಯಾಣ ನಿಷಿದ್ಧ ವೆನಿಸಿತ್ತು.

80. ಕಾಂಭೋಜ ದೇಶ

80. 4–69. ಕಾಂಭೋಜ ದೇಶ– ಆಫ್ಘಾನಿಸ್ತಾನ ಮಧ್ಯೆ ಏಷ್ಯಾಖಂಡದ ಭೂಭಾಗ.

81. ಅಸ್ನೇಹ ದೀಪಿಕಾ

81. 4–75. ಅಸ್ನೇಹ ದೀಪಿಕಾ – ಆನೆಗಳ ಬಂಗಾರದ ಸರಪಳಿಗಳಲ್ಲಿ ಪ್ರತಿಫಲಿಸಿದ ಜ್ಯೋತಿರ್ಲತೆಗಳ (ಬೆಳಕಿನ ಬಳ್ಳಿಗಳ) ಕಾಂತಿಯ ದೀವಟಿಗೆ ಹೊಳೆಯಿತು.

83. ಪಟವಾಸ

83. ಪಟವಾಸ– ಕಾಳಿದಾಸನ ಕಾಲದಲ್ಲಿ ಗಂಡಸರು ತಮ್ಮ ಉಡುಪುಗಳಿಗೆ ಸುವಾಸನೆ ಉಂಟಾಗುವಂತೆ ಪಟವಾಸ ಚೂರ್ಣ ಬಳಸುತ್ತಿದ್ದರೆಂದು ತಿಳಿಯುತ್ತದೆ. ಪಟವಾಸವೆಂದರೆ ಉಡುಪುಗಳಿಗೆ ವಾಸನೆ ಕಟ್ಟುತ್ತಿದ್ದ ಸುವಾಸನಾ ಚೂರ್ಣವೆಂದು, ಅನೇಕ ವಿಧಗಳಲ್ಲಿ ಅದನ್ನು ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಸಾಮಾನ್ಯರು ಸಾಮಾನ್ಯವಾದ ಚೂರ್ಣವನ್ನು ಧನಿಕರು ಕಸ್ತೂರಿ ಮುಂತಾದವನ್ನು ಬಳಸಿ ಸಿದ್ಧಗೊಳಿಸುತ್ತಿದ್ದ ಚೂರ್ಣವನ್ನು ಬಳಸುತ್ತಿದ್ದರು (ಸಿಕವೆಂ ಪುಟ 55. ಅಡಿಟಿಪ್ಪಣಿ ರಘುವಂಶ ಸಾರ). ಎಂದು ಹೇಳಲು ಸಾಕಷ್ಟು ಪ್ರಮಾಣಗಳಿವೆ. ಬೃಹತ್ ಸಂಹಿತೆಯಲ್ಲಿ ಇದರ ಬಗ್ಗೆ ವಿವರಗಳಿವೆ.

84. ತಾಳೆಯ ಮರಗಳ ಸದ್ದು

84. 4–56. ಆ ಪ್ರಾಂತದ ತಾಳೆಯ ಮರಗಳು ಪಶ್ಚಿಮ ಕರಾವಳಿಯ ಮಲಬಾರ್ ಪ್ರದೇಶದಲ್ಲಿ ವಿಪುಲವಾಗಿ ಬೆಳೆಯುತ್ತದೆ ತಾಳೆ ಮರಗಳಲ್ಲಿ ರಾಜತಾಳೆ, ಜಲತಾಳೆ

ಎಂದು ಎರಡು ವಿಧಗಳಿವೆ. ಎಲೆಗಳು ಗಾಳಿ ಬೀಸಿದಾಗ ಮರ ಮರ ಎಂದು ಜೋರಾಗಿ ಶಬ್ದ ಮಾಡುತ್ತದೆ ಮುರುಮುರು ಎಂದು ದೊಡ್ಡಬೆಲೆಯವರು ಹೇಳಿದ್ದಾರೆ. (ಇದು ಅನುಕರಣ ಶಬ್ದ. ಹೀಗೇ ಎಂದು ಅದರ ಧ್ವನಿಯನ್ನು ಏನೂ ಹೇಳಲಾಗದು) ರಾಜತಾಳೆಗಳ ಭಾರಿ ಮರವು ರಘುವಿನ ವಾಜಿಸೇನೆಯ ಕುದುರೆ ಜೀನು ಮೊದಲಾದವುಗಳಿಂದ ಖುರಪುಟಗಳಿಂದ ಬರುತ್ತಿದ್ದ ಶಬ್ದದಿಂದ ಅಡಗಿತ್ತು ಎಂದು ಕಾಳಿದಾಸ ವರ್ಣಿಸಿದ್ದಾನೆ.

85. ಲೌಹಿತ್ಯ ನದಿ

85. 4–81. ಲೌಹಿತ್ಯ ನದಿ– ಬ್ರಹ್ಮಪುತ್ರ ನದಿಗೆ ಒಂದು ಹೆಸರು. ಬ್ರಹ್ಮಪುತ್ರ ನದಿಗೆ ಲೌಹಿತ್ಯ ಸರೋವರ ಉದ್ಭವ ಮೂಲ ಆಗಿರುವುದರಿಂದ ಈ ಹೆಸರು ಬಂದಿದೆ.

86. ಪ್ರಾಗ್ಜ್ಯೋತಿಷಪುರ

86. ಪ್ರಾಗ್ಜ್ಯೋತಿಷಪುರ, – ಪಶ್ಚಿಮ ಭೂತಾನ ಅಸ್ಸಾಮಿನ ಮೇಲ್ಭಾಗ ಒಳಗೊಂಡ ಪ್ರದೇಶ ಕೆಲವು ಸಲ ಕಾಮರೂಪ ದೇಶವೆಂದು ಕರೆದುದುಂಟು.

87. ಕಾಮರೂಪ ದೇಶ

4–83. ಕಾಮರೂಪ ದೇಶ –ಪೂರ್ವದ ತುದಿಯ ದೇಶ. ಉತ್ತರಕ್ಕೆ ಹಿಮಾಲಯವೇ ಸೀಮಾ ಪ್ರದೇಶವಾಗಿದೆ.

88. ರಘುವಿನ ಅಡಿದಾವರೆಗಳು

88. 4–86. ಛತ್ರ ಧ್ವಜ ಚಾಮರ ರೇಖೆಗಳಿಂದ ಕೂಡಿದ ರಘುವಿನ ಅಡಿದಾವರೆಗಳಿಗೆ ಎರಗಿದರು. ಚಕ್ರವರ್ತಿ ಆದವನಿಗೆ ಕೈಕಾಲುಗಳಲ್ಲಿ (ಹಸ್ತ ಪಾದಗಳಲ್ಲಿ) ಧ್ವಜ, ವಜ್ರಾಯುಧ, ಛತ್ರಿ ಅಥವಾ ಧ್ವಜ ಕುಲಿಶ ಛತ್ರಿಗಳ ರೇಖಾರೂಪಗಳು ಇರುತ್ತವೆ , ಎಂದು ಸಾಮುದ್ರಿಕಶಾಸ್ತ್ರ ಹೇಳುತ್ತದೆ. ಅಂತಹ ಪಾದಗಳುಳ್ಳ ರಘುವಿಗೆ ಸಾಮಂತರಾಜರು ನಮಿಸಿದರು. ಬೇರೆ ಗ್ರಂಥಗಳಲ್ಲಿ ಧ್ವಜ, ಛತ್ರಿ ಕುಲಿಶ ಗಳೆಂದಿದ್ದರೆ ದೊಡ್ಡಬೆಲೆಯವರು ಛತ್ರ ಚಾಮರಗಳೆಂದು ಕುಲಿಶ ಬದಲು ಚಾಮರ ಹೇಳಿದ್ದಾರೆ.

89. ವಿಶ್ವಜಿತ್ ಯಾಗ

89. ವಿಶ್ವಜಿತ್ ಯಾಗ– ಜಗತ್ತನ್ನೇ ಗೆದ್ದ ಚಕ್ರವರ್ತಿ ಮಾಡುವ ಯಾಗ. ಈ ಯಾಗದಲ್ಲಿ ತಾನು ರಾಜರನ್ನು ಗೆದ್ದು ಅವರಿಂದ ಸಂಗ್ರಹಿಸಿದ ಸಕಲ ಐಶ್ವರ್ಯವನ್ನು ಅವರವರಿಗೇ ದಾನ ಮಾಡುತ್ತಾನೆ. (ಮೋಡಗಳು ಸಾಗರದಿಂದ ನೀರನ್ನು ಸಂಗ್ರಹಿಸಿ ಮಳೆ ರೂಪದಲ್ಲಿ ಸುರಿಸಿದ ಹಾಗೆ)

90. ಪಟವಾಸ ಚೂರ್ಣ

4–55 ಶ್ಲೋಕ: (ಟಿಪ್ಪಣಿ 83 ನೋಡಿ)

(ಮುರಲಾ ನದಿಯ ಗಾಳಿಯಿಂದ ಹಾರಿಸಲ್ಪಟ್ಟ ಕೇತಕಿಗೀತಗಳ ಧೂಳಿಯ ಆ ರಘು ರಾಜನ ಅಂಗಿಗಳಿಗೆ ಪ್ರಯತ್ನವಿಲ್ಲದೆ ಸಾಧ್ಯವಾದ ಚೂರ್ಣವಾಗಿ ಪರಿಣಮಿಸಿತು.)(ಗೋ. ಪುಟ – 200)

(ಮುರಲಾ ನದಿಯ ಕಡೆಯಿಂದ ಸಿದ್ದ ತಂಗಾಳಿಯಿಂದ ಉತ್ಥಾಪಿತವಾದ ಕೇತಕಿ ರಜವು(ತಾಳೆದಳಗಳಿಂದ ಹಾರಿಬಂದ ಸುವಾಸನೆಯ ಧೂಳು) ಸೈನಿಕರ ಉಡುಪುಗಳಿಗೆ ಅವರ ಪ್ರಯತ್ನವಿಲ್ಲದೆಯೇ ನೈಸರ್ಗಿಕವಾಗಿ ಸುವಾಸನೆ ಉಂಟುಮಾಡುವ ಪಟವಾಸ ಚೂರ್ಣವಾಯಿತು .

(ಅಲ್ಲಿಗೆ ಹತ್ತಿರದಲ್ಲಿ ಹರಿಯುತ್ತಿದ್ದ ಮುರಳಿ ನದಿಯ ಮೇಲಿನ ತಂಗಾಳಿಯು ಮನೆಯ ಕಿರಣ ಕೇದಗೆಗಳ ಮೇಲೆ ಬೀಸುತ್ತ ಇದ್ದಿತು ಹೂಗಳಿಂದ ರಜವು ಹುಡುಗಿ ಗಳಲ್ಲಿ ಬಿದ್ದು ಸಜ್ಜು ಗೊಂಡ ಗಂದುಡಿ (ಗಂಧದ ಹುಡಿ – ಗಂದುಡಿ) ಆಯಿತು.

ಮೂಲದಲ್ಲಿಯ ಪಟವಾಸ ಚೂರ್ಣ ಪದಕ್ಕೆ ಗೋಪಾಲರಾವ್ ಅವರು ಸುಗಂಧದ್ರವ್ಯದ ಚೂರ್ಣವೆಂದು ಸಿಕೆವೆಂ ಅವರು ಪಟವಾಸ ಚೂರ್ಣವೆಂದು ದೊಡ್ಡಬೆಲೆಯವರು ಗಂದುಡಿ ಎಂದು ಬಳಸಿದ್ದಾರೆ.

91. ಮುರಲಾ ನದಿ (ಟಿಪ್ಪಣಿ 82 ನೋಡಿ)

4–54. ಕಾಳಿನದಿಗೆ ಕಾಳಿದಾಸನ ಕಾಲದಲ್ಲಿ ಮುರಲಾ ನದಿಯೆಂದು ಹೆಸರಿದ್ದಿತೆಂದು ವಿದ್ವಾಂಸರು ನಿರ್ಧರಿಸಿದ್ದಾರೆ.

92. ಏಳೆಲೆ ಬಾಳೆಗಿಡ

92. 4–23. ಏಳೆಲೆ ಬಾಳೆಗಿಡ– ಏಳೆಲೆ ಬಾಣಗಳ ಗುಂಪಿಗೆ ಮನಸೋತ ಮದಗಜಗಳು ಆನೆಗಳು ತಮ್ಮ ಮೈಯೊಳಗೆ ಮದಧಾರೆ ಸುರಿಸಿದವು. ಆನೆಗಳು ಮೈಯಲ್ಲಿನ ಏಳು ಅವಯವಗಳಿಂದ ಮದಜಲಧಾರೆಯನ್ನು ಸುರಿಸುತ್ತವೆ.

ಸೊಂಡಿಲಿನ ತುದಿಯಲ್ಲಿ ಇರುವ ಎರಡು ಹೊಳ್ಳೆಗಳು, ಎರಡು ಕಪೋಲಗಳು, ಎರಡು ಕಣ್ಣುಗಳು, ಒಂದು ಜನನಾಂಗ ಒಟ್ಟು ಏಳು ಅಂಗಗಳು. ಸಪ್ತ ವರ್ಣಗಳ ಪುಷ್ಪಗಳು ಎಂದರೆ ಏಳಲೇ ಬಾಳೆ ಗಿಡಗಳ ಹೂವುಗಳು ಆನೆಗಳ ಮದಜಲದಂತೆಯೇ ವಾಸನೆಯನ್ನು ಬೀರುತ್ತವಂತೆ.

ಅಧ್ಯಾಯ 5

94. ನೀವಾರ ಧಾನ್ಯ

94. 5–15. ಅವಶಿಷ್ಟಃ ನೀವಾರ ಇವ– ಉಳಿದಿರುವ ನೀವಾರ ನವಣೆ ಧಾನ್ಯದ ಸಸಿಯಂತೆ ಎಂಬ ಮಾತನ್ನು ಗಂಟೆಯಿಂದ ಮಾತ್ರವೇ ನಿಂತಿರುವ ಪೈರಿನ ಹಾಗೆ ಅನುವಾದಿಸಿದ್ದಾರೆ ನೀವಾರ ಧಾನ್ಯದ ಉಲ್ಲೇಖ ಇರಬೇಕಿತ್ತು.

95. ಜಾನುವಾರು ಹಾವಳಿ

95. 5–19. ಅತಿಥಿಗಳ ಸತ್ಕಾರಕ್ಕೆ ಒಳಗೊಂಡು ಎಂದರೆ ಯೋಗ್ಯ ಕಾಲದಲ್ಲಿ ಬಂದ ಅತಿಥಿಗಳಿಗೆ ಸತ್ಕಾರ ಮಾಡಲು ತೆಗೆದಿಟ್ಟ ಭಾಗವನ್ನು ತೃಣಧಾನ್ಯ, (ನವಣೆ, ಜೋಳ) ನೀವಾರ ಧಾನ್ಯ ಬೆಳೆಯನ್ನು ಅಲೆಮಾರಿ ಜಾನುವಾರುಗಳು ತಿಂದು ಹೋಗುತ್ತಿಲ್ಲವಷ್ಟೇಎಂದು ಅವನನ್ನು ರಘು ಕೌತ್ಸನನ್ನುಕೇಳಿದನು.

96. ಅತಿಥಿಗೆ ಆಹಾರದಾನ

96. ಸಕಾಲದಲ್ಲಿ ಬರುವ ಅತಿಥಿಗೆ ತೆಗೆದಿಟ್ಟ ಭಾಗ – (ನೀವಾರ ಧಾನ್ಯ)ತಾವು ಊಟ ಮಾಡುವ ಮುನ್ನ ಯಾರಾದರೂ ಅತಿಥಿ ಬಂದರೆ ಎಂದು ಕಾದಿದ್ದು ಬಂದವರಿಗೆ ಆಹಾರ ನೀಡಿ ಆತ ಉಂಡ ಮೇಲೆ ತಾವು ಉಣ್ಣುತ್ತಿದ್ದರು. ಪ್ರಸಿದ್ಧ ಕಾದಂಬರಿಕಾರರಾದ ಗಳಗನಾಥರು ಬಡತನದಲ್ಲಿ ಇದ್ದರೂ ಬೆಂಗಳೂರಿಗೆ ಬಂದಾಗ ಬಾಂದುನವರ ರಸ್ತೆಯಲ್ಲಿ (ಎಚ್ ಬಿ ಸಮಾಜ ರಸ್ತೆ)– ಈಗ ಎ ಆರ್ ಕೃಷ್ಣಶಾಸ್ತ್ರಿಗಳ ರಸ್ತೆ–ಅಲ್ಲಿದ್ದಾಗ ಮಧ್ಯಾಹ್ನ ಕಾಲದಲ್ಲಿ ಊಟಕ್ಕೆ ಮುಂಚೆ ಅತಿಥಿಗಾಗಿ ಕಾಯುತ್ತಿದ್ದರು.

97. ಬಿಟ್ಟ ಶ್ಲೋಕಗಳು

97. 4.51 ದೊಡ್ಡಬೆಲೆಯವರು ವಿದ್ಯಾರ್ಥಿಗಳಿಗಾಗಿ ಸಿದ್ಧಪಡಿಸಿದ ಪಠ್ಯವಾದುದರಿಂದ ಅಥವಾ ಓದುಗರಲ್ಲಿ ವೈವಿಧ್ಯವಿರುತ್ತದೆ. ಅವರಲ್ಲಿ ಶೃಂಗಾರರಸ ಪ್ರಸ್ತಾಪ ಅಷ್ಟು ಸೂಕ್ತವಲ್ಲವೆಂದೋ ಶೃಂಗಾರದ ಮಾತುಗಳನ್ನು ಹಾರಿಸಿದ್ದಾರೆ. ನಿದರ್ಶನಕ್ಕೆ ಶ್ಲೋಕ 4–.52 , 4:–53 ನೋಡಬಹುದು.

ಬಳಿಕ ಧೀರನಾದರೆ ತರುಗಳಿಂದ ತುಂಬಿ ತೆಂಕಲ ದೆಸೆಗೆ ಅಲಂಕಾರವಾಗಿದ್ದ ಮನೆಯ ದುರ್ದುರಗಳೆಂಬ ಬೆಟ್ಟಗಳಲ್ಲಿ ಸುಖವಾಗಿ ತಂಗಿದ್ದನು. (4–51)

ಕಡಲಿಗೆ ಸ್ವಲ್ಪ ದೂರದಲ್ಲಿರುವ ಬಯಲನ್ನು ದಾಟಿದನು(4–52) ಎಂಬುದಾಗಿ ಸಂಕ್ಷಿಪ್ತವಾಗಿ ಅನುವಾದಿಸಿದ್ದಾರೆ.

ಈ ಎರಡು ಮೂಲ ಶ್ಲೋಕಗಳ ಅರ್ಥ ಹೀಗಿದೆ :

4–51. ಆರುಗುರು ತಪ್ಪಲು ಪ್ರದೇಶಗಳಲ್ಲಿ ಹಾಕಿಸಿದ ಗಂಧ ಉಳ್ಳ ಗಂಧದ ಮನೆಗಳಿರುವ ದಕ್ಷಿಣದಿಕ್ಕಿನ ಮಲಯ ದುರ್ದುರ ಪರ್ವತಗಳು ಎಂಬ ಸ್ತನಗಳನ್ನು ಯಥೇಚ್ಛವಾಗಿ ಭೋಗಿಸಿ ವಿಹರಿಸಿದರು.

4–52. ಅಸಾಧ್ಯ ಪರಾಕ್ರಮ ಉಳ್ಳ ಸಮುದ್ರದಿಂದ ದೂರದಿಂದಲೇ ದೂರೀಕರಿಸಿದ ಜಾರಿಹೋದ ವಸ್ತುಗಳುಳ್ಳ ಭೂಮಿಯಲ್ಲಿ ನಿತಂಬದಂತೆ ಇದ್ದ ಸಹ್ಯಾದ್ರಿಯನ್ನು ಅತಿಕ್ರಮಿಸಿದನು.

ಈ ಎರಡು ಶ್ಲೋಕಗಳಲ್ಲಿ ಸ್ಥನ ನಿತಂಬಗಳ ಹೋಲಿಕೆಗಳನ್ನು ಭೂಪ್ರದೇಶಗಳಿಗೆ ಕೊಟ್ಟಿದ್ದನ್ನು ಅನುವಾದದಲ್ಲಿ ಕೈಬಿಡಲಾಗಿದೆ.

ಅಧ್ಯಾಯ 6

98. ರಾಜಪುತ್ರನ ಲಕ್ಷಣಗಳು

98. 5–33. ರಾಜನ ಉಪಸ್ಥಿತನ ಲಕ್ಷಣಗಳು(ರಘು ಮಹಾರಾಜನ ಲಕ್ಷಣಗಳು)

ಒಳ್ಳೆಯ ನಡತೆಯಲ್ಲಿರುವ ಅನಾಥನಾದ ನಿನಗೆ ಇರುತ್ತೆ ಚಿತ್ತಸ್ಯ ಪ್ರಜಾನಾಂ ಅಧಿಪತಿ– ಕರ್ತವ್ಯದಲ್ಲಿದ್ದ ಆಸಕ್ತರಾಗಿರುವ ಪ್ರಜೆಗಳಿಗೆ ಒಡೆಯನಾದ ರಾಜನಿಗೆ ರಾಜನ ಕರ್ತವ್ಯಗಳನ್ನು ರಾಜ ವೃತ್ತ ಎಂದು ಕರೆಯುತ್ತಾರೆ ಎಂದು ಕಾಮಂದಕ ಹೇಳುತ್ತಾನೆ.

ಸತ್ಪಾತ್ರ ಪ್ರತಿಪತ್ ಇಷ್ಟ ರಾಜವೃತ್ತಂ ಚತುರ್ವಿಧಂ (1. ನ್ಯಾಯವಾದ ರೀತಿಯಲ್ಲಿ ಧನವನ್ನು ಆರಿಸುವುದು. 2) ವೃದ್ಧಿ ಪಡಿಸುವುದು 3)ಪಾಲಿಸುವುದು 4)ಸತ್ಪಾತ್ರ ನಲ್ಲಿ ದಾನ ಮಾಡುವುದು ಈ ನಾಲ್ಕು ಸೇರಿ ರಾಜ ವೃತ್ತ (ರಾಜನ ಕರ್ತವ್ಯಗಳು) ಎನಿಸುತ್ತವೆ.

ಹೇಮಚಂದ್ರ ಹೇಳುವ ಪ್ರಕಾರ :

ಗುರೋಃ ಪೂಜಾ ಘೃಣಾ ಶೌಚಂ ಸತ್ಯಮಿಂದ್ರಿಯನಿಗ್ರಹಃ

ಪ್ರವರ್ತನಂ ಹಿತಾನಾಂ ತತ್ಸರ್ವಂ ವೃತ್ತಮುಚ್ಯತೇ॥

(ಗುರುಪೂಜೆ, ದಯೆ, ಶೌಚ, ಸತ್ಯಶೀಲತೆ, ನಿಗ್ರಹಾಚರಣೆ ರಾಜವೃತ್ತ ಎನಿಸುತ್ತದೆ.)

ದೊಡ್ಡಬೆಲೆಯವರು ಮೇಲ್ಕಂಡ ಶ್ಲೋಕಗಳ ಆಧಾರದ ಮೇಲೆ, – ಅಯ್ಯಾ ದೊರೆ ಅರ್ಜುನ ಧರ್ಮಪರಿಪಾದನೆ ಇವೇಮೊದಲಾದ ಒಳ್ಳೆಯನಡತೆಯುಳ್ಳ

ನಿನಗೆ ಇಳೆಯು ಕೇಳಿದ್ದನ್ನೆಲ್ಲ ಕೊಡುವುದು ಆಶ್ಚರ್ಯವಲ್ಲ- ಎಂಬುದಾಗಿ ಅನುವಾದಿಸಿದ್ದಾರೆ ಎಂದು ಹೇಳಬಹುದು.

99. ಕ್ರಥ ಕೈಶಿಕಾ ಪ್ರದೇಶ

99. 5-39. ಕ್ರಥ ಕೈಶಿಕಾ ಪ್ರದೇಶ ವಿಂಧ್ಯ ಪರ್ವತ ಮತ್ತು ನರ್ಮದಾ ನದಿಯ ಗೋದಾವರಿ ಅಥವಾ ಕೃಷ್ಣಾನದಿಯ ದಕ್ಷಿಣದಲ್ಲಿತ್ತು . ಕೆಲವರ ಪ್ರಕಾರ ವಿದರ್ಭ ದೇಶದ ಭಾಗ ಕಥೆ ಕ್ರಥ ಕೈಶಿಕಾ ಆಗಿತ್ತು. ವಿದರ್ಭ ಎಂದರೆ ದರ್ಭೆ ಬೆಳೆಯುವ ದೇಶ ಎಂದರ್ಥ . ಋಷಿಯೊಬ್ಬದರ್ಭೆಯಿಂದ ಸಾವನ್ನಪ್ಪಿದ್ದರಿಂದ ಕೊಟ್ಟ ಶಾಪದಿಂದ ವಿದರ್ಭ ಹೆಸರು ಬಂದಿತು.

100. ಹದಿನಾಲ್ಕು ವಿದ್ಯೆಗಳು

100. 5-21 ಹದಿನಾಲ್ಕು ವಿದ್ಯೆಗಳು : ಶಿಕ್ಷಾ, ವ್ಯಾಕರಣ, ಛಂದಸ್ಸು, ಜ್ಯೋತಿಷ (ಆರು ವೇದಾಂಗಳು), ಋಕ್, ಯಜುರ್, ಸಾಮ ಮತ್ತು ಅಥರ್ವಣ (ನಾಲ್ಕು ವೇದಗಳು) ಧರ್ಮಶಾಸ್ತ್ರ, ಪುರಾಣಗಳು, ಮೀಮಾಂಸಾ, ತರ್ಕ(ನಾಲ್ಕು ಶಾಸ್ತ್ರಗಳು ಒಟ್ಟು ಹದಿನಾಲ್ಕು ವಿದ್ಯೆಗಳು ಪ್ರಸಿದ್ಧವಾಗಿವೆ.

101. ವನಾಯು ದೇಶ

100. 5-73. ವನಾಯು ದೇಶ : ಪರ್ಷಿಯ ಅಥವಾ ಸಿಂಧೂ ದೇಶ. ಇಲ್ಲಿ ಅಶ್ವಗಳು ಬಲಿಷ್ಠವೂ ಗಾತ್ರ ಪೂರ್ಣವೂ ಆಗಿರುತ್ತವೆ. ಕೆಲವರು ಬಾಹ್ಲಿಕ ದೇಶವೆಂದರೆ ವನಾಯು ದೇಶ ಎನ್ನುತ್ತಾರೆ. ಉತ್ತರಪಶ್ಚಿಮ ಗಡಿಪ್ರದೇಶವಿದು. ಇಲ್ಲಿ ಕುದುರೆಗಳಿಗೆ ಅವು ಬಲಿಷ್ಠವಾಗಿರಲು ಬೆಳಗಿನ ಹೊತ್ತು ಉಪ್ಪು ತಿನ್ನಿಸುವರಂತೆ.

101. ರಘುವಿನ ಹಿರಿಮೆ

101. 5-16. ನೀನು ಇದಿರಾಳಿಲ್ಲದ ಅರಸೆನಿಸಿ ವಿಶ್ವಜಿತ್ ಯಾಗದಲ್ಲಿ ಮಾಡಿದ ಭೂರಿ ದಾನದಿಂದ ಉಂಟಾಗಿರುವ ಹೆಚ್ಚಿನ ಬಡತನವನ್ನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯಪಾದ್ಯಗಳ ಆತಿಥ್ಯವನ್ನು ನೀಡಿರುವೆ.

ಅಮೃತ ಕಲಾನಿಧಿಯಾದ ಚಂದ್ರನ ಕಲೆಗಳನ್ನು ಕೃಷ್ಣ ಪಕ್ಷದ 15ದಿನಗಳಲ್ಲಿ ದೇವತೆಗಳು ಕುಡಿದು ಕಲಾಕ್ಷಯವನ್ನು ಉಂಟುಮಾಡಿದರೂ ಅವನು ಶುಕ್ಲಪಕ್ಷದ ಅವಧಿಯಲ್ಲಿ ಪುನಃ ಶೋಭಾಯಮಾನವಾಗಿ ಬೆಳಗುವನು. ಕಲಾಭಿವೃದ್ಧಿಯ ಅವಸ್ಥೆಗಿಂತಲೂ ಶ್ಲಾಘ್ಯವಾಗಿರುವನು .

ಪ್ರಥಮ ದಿನ- ಅಗ್ನಿ

ಎರಡನೇ ದಿನ- ರವಿ

ಮೂರನೇ ದಿನ – ವಿಶ್ವೇ ದೇವರು

ನಾಲ್ಕನೇ ದಿನ– ವರುಣ

ಐದನೇ ದಿನ –ವಷಟ್ಕಾರ

ಆರನೇ ದಿನ– ಇಂದ್ರ

ಏಳನೇ ದಿನ– ಯಮೃಶಯಃ

ಎಂಟನೇ ದಿನ– ಏಕ ಪಾತ

ಒಂಬತ್ತನೇ ದಿನ– ಯಮ

ಹತ್ತನೇ ದಿನ– ವಾಯು

ಹನ್ನೊಂದನೇ ದಿನ– ಉಮೆ

ಹನ್ನೆರಡನೇ ದಿನ– ಪಿತೃ ದೇವತೆಗಳು

ಹದಿಮೂರನೇ ದಿನ– ಕುಬೇರ

ಹದಿನಾಲ್ಕನೇ ದಿನ– ಪಶುಪತಿ

ಹದಿನೈದನೇ ದಿನ– ಪ್ರಜಾಪತಿ

ಇವರು ಕ್ರಮವತ್ತಾಗಿ ಕಲೆಗಳನ್ನು ಪಾನ ಮಾಡುತ್ತಲಿರುವರು.

ಹೀಗೆ ಶ್ರೇಷ್ಠರಾದ ದೇವಾದಿದೇವತೆಗಳಿಗೆ ಪ್ರಿಯವಾದ ಅಮೃತವನ್ನು ದಾನ ಮಾಡಿ ತಾನು ಕ್ಷೀಣಿಸಿದರೂ ಕೃಷ್ಣಪಕ್ಷ ಬಂದರೂ ಅಮೃತಕರೆಗಳನ್ನು ವೃದ್ಧಿಗೊಳಿಸಿಕೊಂಡು ಶುಕ್ಲಪಕ್ಷದಲ್ಲಿ ಶ್ಲಾಘ್ಯವೆನಿಸಿಕೊಳ್ಳುವುದಕ್ಕಿಂತ ಅಧಿಕ ಶ್ಲಾಘ್ಯವೆನಿಸಿಕೊಳ್ಳುತ್ತಾನೆ. (ಗೋಪಾಲರಾವ್ ರಘು 05–16)

ಹಾಗೆಯೇ ನೀನು ಸತ್ಪಾತ್ರರಿಗೆ ದಾನ ಮಾಡಿ ದಾರಿದ್ರ್ಯ ಹೊಂದಿದರೂ ಶೋಭಿಸುತ್ತಿರುವೆ.

102. ನಾಲ್ಕನೆಯ ಅಗ್ನಿ

102. 5–25. ಆಹವನೀಯ, ಗಾರ್ಹಪತ್ಯ, ದಕ್ಷಿಣ ಅಗ್ನಿ ಇವು ಮೂರು ಅಗ್ನಿಗಳು ನೀನು ನಾಲ್ಕನೇ ಅಗ್ನಿದೇವನಾಗಿ ನಮ್ಮ ಅರಮನೆಯಲ್ಲಿರು ಎಂದು ಕೌತ್ಸನಿಗೆ ರಘು ಹೇಳಿದನು.

103. ದಾನಿ– ಯಾಚಕರ ಲಕ್ಷಣ

103. 5–31. ಆದರ್ಶ ದಾನಿ– ಯಾಚಕರ ಲಕ್ಷಣ : ದಾನಿ ಯಾಚಕ ಹೇಗಿರಬೇಕು ಎಂಬುದನ್ನು ಸೊಗಸಾಗಿ ಶ್ಲೋಕದಲ್ಲಿ ಹೇಳಲಾಗಿದೆ. ಸುರಿಸಿದ ಚಿನ್ನದ ಮಳೆಯನ್ನು

ಕೊಂಡು ಹೋಗು ಎಂದು ರಘು ಮಹಾರಾಜ ಹೇಳಿದಾಗ ಕೌತ್ಸ ನನ್ನ ಗುರು ಕೇಳಿರುವುದು 14 ಕೋಟಿ. ಅಷ್ಟನ್ನೇ ನಾನು ತೆಗೆದುಕೊಳ್ಳುವುದು ಎಂದು ಹೇಳಿದನು. ಅಯೋಧ್ಯೆಯ ಜನ ಇವರಿಬ್ಬರ ಅತಿಥಿ ಅತಿಥೇಯ ದಾನಿ– ಯಾಚಕ ಗುಣಗಳನ್ನು ಕೊಂಡಾಡಿದರು ನೀಡುವವನು ಧಾರಾಳವಾಗಿ ಕೇಳಿದ್ದಕ್ಕಿಂತ ಹೆಚ್ಚಿಗೆ ಕೊಡಬೇಕು. ಬೇಡುವವನು ತನ್ನ ಅಗತ್ಯವಿದ್ದಷ್ಟೇ ಸ್ವೀಕರಿಸಬೇಕು ಎಂದು ಸಂಪ್ರದಾಯ ಹೇಳುತ್ತದೆ. ಇದು ಉತ್ತಮ ದಾನದ ಲಕ್ಷಣವಾಗಿದೆ.

ಅಧ್ಯಾಯ 7

104. ಏಳು ಜನ ರಾಜಕುಮಾರರ ವರ್ತನೆ

104. 6–13ರಿಂದ 6–19 ಸ್ವಯಂವರ ವರ್ಣನೆ(ಆರನೆಯ ಅಧ್ಯಾಯದಲ್ಲಿ) ಅಜನು ಮತ್ತು ಇತರ ಅರಸರು ಇಂದುಮತಿಯನ್ನು ವರಿಸಲು ಸ್ವಯಂವರ ಮಂಟಪದಲ್ಲಿ ಕುಳಿತಿರುವಾಗ ಇಂದುಮತಿ ಸಭಾಭವನ ಪ್ರವೇಶಿಸುತ್ತಾಳೆ. ಆಗ ಅವಳ ಮನಸೆಳೆಯಲು ವಿವಿಧಭಂಗಿಗಳಲ್ಲಿ ಇದ್ದ ರಾಜರ ವರ್ಣನೆ ಬರುತ್ತದೆ.

ಮಹಾರಾಜರ ಅಂಗಚೇಷ್ಟೆಗಳನ್ನು ಕಾಳಿದಾಸ ಸುಮನೋಹರವಾಗಿ ವರ್ಣಿಸಿದ್ದಾನೆ.

ದೊಡ್ಡಬೆಲೆ ಅವರು ಕೇವಲ ರಾಜರ ಅಂಗ ಚೇಷ್ಟೆಗಳನ್ನು ಮೂಲದಲ್ಲಿ ಇದ್ದಂತೆ ಅನುವಾದಿಸುವುದರ ಜೊತೆಗೆ ಅವರ ಚೇಷ್ಟೆಯ ಇಂಗಿತ ಏನು, ಆ ಬಗ್ಗೆ ಇಂದುಮತಿಯ ಅಭಿಪ್ರಾಯವೇನು ಎಂಬುದನ್ನು ಕ್ರಮವಾಗಿ ವರ್ಣಿಸುತ್ತಾ ಹೋಗುವುದು ಓದುಗರ ಮನ ಸೆಳೆಯುತ್ತದೆ. ಕೇವಲ ಮೂಲದ ಯಥಾ ಯಾಂತ್ರಿಕ ಅನುವಾದವಲ್ಲ ದೊಡ್ಡಬೆಲೆ ಅವರದು. ರಸಪೂರ್ಣ ಭಾವಾನುವಾದ ಎಂಬುದನ್ನು ಈ ಭಾಗದ ಅನುವಾದ ತಿಳಿಸುತ್ತದೆ.

ಇದಕ್ಕೆ ಒಂದೆರಡು ನಿದರ್ಶನಗಳನ್ನು ನೀಡಬಹುದು:

"ಅವರೊಳಗೊಬ್ಬ ರಾಜಕುಮಾರನು ಅಂದವಾಗಿರುವ ಒಂದು ತಾವರೆ ಹೂವನ್ನು ಕಾವಿನಲ್ಲಿ ಹಿಡಿದು ವಿನೋದಕರವಾಗಿ ಸುತ್ತಾಡಿಸುತ್ತಲಿದ್ದನು. ಅದರ ಎಸಳುಗಳು ಮೇಲೆ ಹಾರಾಡುತ್ತಿರುವ ದುಂಬಿಗೆ ತಾಗುತ್ತಿದ್ದವು ಹೂವಿನ ಒಳಗಡೆಯ ರಜವು ಮಂಡಲಾಕಾರವಾಗಿ ನಿಲ್ಲುತಲಿದ್ದಿತು. "

ಇಲ್ಲಿ ಶ್ಲೋಕದ ಭಾವಾರ್ಥವನ್ನಷ್ಟೆ ಸೂಚಿಸಿದೆ. ಆದರೆ ದೊಡ್ಡಬೆಲೆಯವರು ರಾಜರ ಇಂಗಿತ ಏನು, ಅದಕ್ಕೆ ಇಂದುಮತಿಯ ಪ್ರತಿಕ್ರಿಯೆ ಏನು, ಅದನ್ನು

ಮಾರ್ಮಿಕವಾಗಿ ವಿವರಿಸಿದ್ದಾರೆ. ಇದೇ ರೀತಿ ಸಭಾಭವನದ ರಾಜರ ವರ್ತನೆಗಳನ್ನು ದೊಡ್ಡಬೆಲೆ ಅವರು ಅರ್ಥೈಸಿದ್ದಾರೆ.

105. ಮಹಾಕಾಲ

104. 6–34. ಮಹಾಕಾಲ– ಉಜ್ಜಯಿನಿಯಲ್ಲಿರುವ ಪ್ರಸಿದ್ಧ ಶಿವಾಲಯದಲ್ಲಿರುವ ಶಿವಮೂರ್ತಿಯನ್ನು ಮಹಾಕಾಲನೆಂದು ಕರೆಯುವರು.

106. ಆವಂತಿ ನಾಥ

105. 6–34 ಆವಂತಿ ನಾಥ– ಆವಂತಿ ರಾಜ್ಯವು ದಕ್ಷಿಣದಲ್ಲಿ ನರ್ಮದೆಯನ್ನು, ಪಶ್ಚಿಮದಲ್ಲಿ ಮಾಹೆಯನ್ನು, ಉತ್ತರದಲ್ಲಿ ಚರ್ಮಣವತಿಯನ್ನು, ಗಡಿಯಾಗಿ ಉಳ್ಳ ರಾಜ್ಯ. ಅದಕ್ಕೆ ಆದಿದೈವ ಶಿವ.

107. ಸುನಂದೆ

106. 6–35. ಸುನಂದೆ–ಸ್ವಯಂವರದಲ್ಲಿ ರಾಜರನ್ನು ಪರಿಚಯಿಸುತ್ತಿದ್ದ ಆಪ್ತಸಖಿ ಇವಳು. ಮಾತಿನಲ್ಲಿ ಬಲುಜಾಣೆ.

108. ಅನೂಪದೇಶ

107. 6–37. ಅನೂಪದೇಶ– ಜೌಗುನೆಲದ ದೇಶ. ನರ್ಮದಾ ನದಿಯಿಂದ ಆವರಿಸಿದ ದೇಶ ಮಾಹಿಷ್ಮತಿ ಅದರ ರಾಜಧಾನಿ(ಈಗಿನ ಜಬ್ಬಲ್ಪುರದ ಹತ್ತಿರದಲ್ಲಿದೆ)

109. ಹದಿನೆಂಟು ದ್ವೀಪಗಳು

108. 6–38. ಹದಿನೆಂಟು ದ್ವೀಪಗಳು: ರಮ್ಯಕ, ರಮಣಕ, ದ್ವಾರಕ, ಸಿಂಹಳ, ಕೈವಲ್ಯ, ಮಲಯ, ಅಶ್ವಪ್ರದ, ಕೇತು, ಗೋಬಿ, ಮಾಲ್ಯವಂತ, ಪುಷ್ಕರ, ಋಷಭ, ರೈವತ, ನಿಮ್ಲೋಚನ, ನಿಯಾಮ್ಯ, ಪಾರಾವಾರ, ಚೌರಕೃತ, ಮಾಲ್ಯ. (ಪಾರಿಭಾಷಿಕ ಪದಕೋಶ 1992, ಸಂಪಾದಕರು: ಆಚಾರ್ಯ ತುಂಗಾ ಸೋಮಸುಂದರಂ)

ಅಧ್ಯಾಯ 8

110. ಶಚೀದೇವಿಯ ಪೂಜಾ ಮಹಿಮೆ

110. 7–3. ವಿವಾಹ ಕಾಲದಲ್ಲಿ ಈ ದೇವಿಯ ಪೂಜೆಯನ್ನು ಮಾಡುವ ಪದ್ಧತಿ ಇತ್ತು. ರಾಜನು ಇಂದ್ರಾಣಿಪೂಜೆಯನ್ನು ಇಂದುಮತಿ ವಿವಾಹಕಾಲದಲ್ಲಿ ಮಾಡಿಸಿದ್ದನು. ವಿವಾಹಕಾಲದಲ್ಲಿ ಇಂದ್ರಾಣಿಯಾದ ಶಚಿಯ ಪೂಜೆ ಮಾಡಿದರೆ

ಸಕಲ ವಿಘ್ನಗಳು ನಿವಾರಣೆಯಾಗುತ್ತವೆ ಎಂದು ನಾರದ ಸಂಹಿತೆಯಲ್ಲಿ ಹೇಳಿದೆ. ಶಚಿ ಪೂಜೆಯ ಕಾಲದಲ್ಲಿ

ದೇವೇಂದ್ರಾಣಿ ನಮಸ್ತುಭ್ಯಂ ದೇವೇಂದ್ರ ಪ್ರಿಯ ಭಾಮಿನಿ।

ವಿವಾಹ ಭಾಗ್ಯಮಾರೋಗ್ಯಂ ಪುತ್ರ ಲಾಭಂ ಚ ದೇಹಿಮೆ॥

(ಪ್ರಯೋಗ ರತ್ನಾಕರ)

ಎಂಬುದಾಗಿ ಪ್ರಾರ್ಥಿಸುವರು. ಶಚಿದೇವಿಯ ಪೂಜೆಯ ಫಲವಾಗಿ ಸ್ವಯಂವರದಲ್ಲಿ ಸೋತ ರಾಜಕುಮಾರರು ಇಂದುಮತಿ ಸ್ವಯಂವರದ ಕಾಲದಲ್ಲಿ ಏನೂ ಅಡ್ಡಿ ಉಂಟುಮಾಡಲಾಗಲಿಲ್ಲ.

111. ಅನುವಾದದ ವೈಖರಿ

111. 7.3. ದೊಡ್ಡಬೆಲೆಯವರು ಗದ್ಯಾನುವಾದದಲ್ಲಿ ಹತ್ತಾರು ಕಡೆ ಮಲ್ಲಿನಾಥನ ವ್ಯಾಖ್ಯಾನ ಅನುಸರಿಸಿ ಅರ್ಥೈಸಿದ್ದಾರೆ. ಅಜನು ಇಂದುಮತಿಯನ್ನು ಕುರಿತು ಹೇಳುವ, ಮೂಲ ಶ್ಲೋಕದಲ್ಲಿರುವ ಶುಚಿಸ್ಮಿತೆ ಎಂಬ ಪದವನ್ನು ಬೆಳ್ನಗೆ ಹೆಣ್ಣೇ ಎಂದು ಅನುವಾದಿಸಿದ್ದಾರೆ. ಮಲ್ಲಿನಾಥ ತನ್ನ ವ್ಯಾಖ್ಯೆಯಲ್ಲಿ ಶುಚಿಸ್ಮಿತೆಗೆ ಧವಳಹಸಿತೆ ಎಂದಿದ್ದಾನೆ. ಧವಳಹಸಿತೆ ಎಂದರೆ ಶುಭ್ರ ದಂತಪಂಕ್ತಿಗಳು ಇದ್ದುದರಿಂದ ಬೆಳ್ನಗೆ ಹೆಣ್ಣು ಎಂದರ್ಥ. ಇದನ್ನನುಸರಿಸಿ ಬೆಳ್ನಗೆಯ ಹೆಣ್ಣೇ ಎಂದಿದ್ದಾರೆ ದೊಡ್ಡಬೆಲೆಯವರು.

ಮೂಲಪದ ಶುಚಿಸ್ಮಿತೆ ಪದದ ಅರ್ಥ ನಿಷ್ಕಪಟವಾದ ನಗುವಿನಿಂದ ಕೂಡಿದವಳು ಎಂದರ್ಥ.

ಸಿಕೆವೆಂ ಹೇಳುವಂತೆ ಈ ಅರ್ಥವೂ ಹೊಂದಿಕೆಯಿಂದ ಕೂಡಿ ಸರಿಹೋಗುತ್ತದೆ

ಮೂಲಶ್ಲೋಕ 8–49 : [ಶುಚಿಸ್ಮಿತದಿಂದ ಬೆಳಗುತ್ತಿದ್ದ ಇಂದುಮತಿ ಕಪಟ (ಕೃತಕ) ಪ್ರೇಮವನ್ನು ತೋರಿಸುತ್ತಿದ್ದ ಶಠನೆಂದೇ ಭಾವಿಸಿದ್ದೀಯೆ ಎಂದು ತೋರುತ್ತದೆ. ಆದಕಾರಣವೇ ನೀನು ನನಗೆ ತಿಳಿಸದೆಯೇ ಪರಲೋಕಕ್ಕೆ ತೆರಳಿ ಮತ್ತೆ ನನ್ನಲ್ಲಿಗೆ ಬಾರದಂತಹ ಪರಿಸ್ಥಿತಿಯನ್ನು ಕಲ್ಪಿಸಿಕೊಂಡಿರುವೆ] (ಸಿಕೆಎಂ ಅನುವಾದ: ರಘುವಂಶ ಸಾರ ಪುಟ 122)

ಅಧ್ಯಾಯ 9

112. ಸುಭಾಷಿತ ಸೇರ್ಪಡೆ

112. ಅಜನು ಮಹಾರಾಜನ ಧನವನ್ನು ಪರೋಪಕಾರಕ್ಕೆ ಬಳಸುವುದರ ಜೊತೆಗೆ ಪೌರುಷ ಶಾಸ್ತ್ರಜ್ಞಾನ ಹೇಗೆ ಉಪಕೃತಿಗಳಿಗಾಗಿಯೇ ವೆಚ್ಚವಾಗುಗುತ್ತಿದ್ದವೋ ಹಾಗೆ ಪೌರುಷವನ್ನು ಆಪತ್ತಿಗೆ ಸಿಕ್ಕಿದವರ ಭಯ ನಿವಾರಣೆಗೆ ಶಾಸ್ತ್ರ ಜ್ಞಾನವನ್ನು ವಿದ್ಯಾವಂತರನ್ನು ಸತ್ಕರಿಸಲು ಬಳಕೆ ಮಾಡುತ್ತಿದ್ದರು ಎಂಬುದಕ್ಕೆ

ವಿದ್ಯಾ ವಿವಾದಾಯ ಧನಂ ಮದಾಯ

ಮುಕ್ತಿಃ ಪರೇಶಂ ಪರಪೀಡನಾಯ

ಖಲಸ್ಯ ಸಾಧೋರ್ದ್ವಿಪರೀತಮೇತತ್

ಜ್ಞಾನಾಯ ದಾನಾಯ ಚ ರಕ್ಷಣಾಯ ॥

[ನೀಚನ ವಿದ್ಯೆ ವಿವಾದಕ್ಕೂ ಹಣವು ಹೆಮ್ಮೆಗೂ ಬಲವು ಹೆರರನ್ನು ಹಿಂಸಿಸಲೂ ಯೋಗ್ಯವಾಗುವುದು.]

ಇದು ಸಾಧುವಿನ ವಿಷಯದಲ್ಲಿ ತಲೆಕೆಳಗಾಗುವದು. ಹೇಗೆಂದರೆ : ಸಜ್ಜನನ ವಿದ್ಯೆಯು ಜ್ಞಾನಕ್ಕೂ, ದ್ರವ್ಯವು ಕಾಲದೇಶವನ್ನರಿತು ಸತ್ಪಾತ್ರರಲ್ಲಿ ದಾನಕ್ಕೂ ಶಕ್ತಿಯು ಅಶಕ್ತರ ಸಂರಕ್ಷಣೆಗೂ ಮಾದಕವಾಗುವುದು ಹಾಗೆ ಹೇಳುವ ಹಿರಿಯರ ಮಾತು ಸಟೆಯಲ್ಲ] ಎಂದು ಸೇರಿಸಿದ ಈ ಸುಭಾಷಿತಕ್ಕೆ ನಿದರ್ಶನವಾಗಿ ದೊಡ್ಡ ಬೆಲೆಯವರು ಅಜನ ಸುಗುಣಗಳನ್ನು ಸೂಚಿಸಿದ್ದಾರೆ.

113. ಔರ್ಧ್ವ ದೈಹಿಕ ಕರ್ಮ

113. 8–26. ಔರ್ಧ್ವ ದೈಹಿಕ ಕರ್ಮ– ತಿಲ, ಪಿಂಡದಾನ ಆದಿ ಅಪರ ಕ್ರಿಯೆಗಳನ್ನು ನಿರೀಕ್ಷಿಸದೆ ಯೋಗರೂಪವಾದ ಮಾರ್ಗದಲ್ಲಿ ತನುವನ್ನು ತ್ಯಜಿಸಿ ಮುಮುಕ್ಷುಗಳು ಹೋಗುವ ಅರ್ಜಿರಾದಿ ಮಾರ್ಗ. ಮರಣಾನಂತರ ಮಾಡುವ ಕ್ರಿಯೆ.

8–25. ಅಂತ್ಯೇಷ್ಟಿ– ಅಪರ ಕಾರ್ಯ– ಪಿಂಡಾಕಾಂಕ್ಷಿಗಳಾದವರಿಗೆ ಮಾಡುವ ಕ್ರಿಯೆ.

114. ಕಾವ್ಯಮಯ ಶೈಲಿ

114. 8–66. ಕೆಲವೆಡೆ ಕಾವ್ಯಮಯ ಶೈಲಿಯಲ್ಲಿ ಪದ್ಯಗಂಧಿ ಶೈಲಿಯಲ್ಲಿ ಅನುವಾದಿಸಿದ್ದಾರೆ ಅಲ್ಲಲ್ಲಿ "ಎಲೈ ಭಾಮಿನಿ, ಈಗ ಧೀರತೆಯ ಹಾರಿತು. ಪ್ರೀತಿಯು

ಗತಿಸಿತು, ಆಟವು ಮೋಟಾಯಿತು. ಗೀತವು ಸೋತಿತು, ಹಬ್ಬವು ಮಬ್ಬಾಯಿತು. ಒಡವೆಯು ಕಡೆಗಂಡಿತು. ಶಯನವು ಬಯಲಾಯಿತು."

115. ಋಣತ್ರಯ ಪರಿಹಾರ

115. 8–30. ಋಣತ್ರಯ– ಪಿತೃಋಣ ಋಷಿಋಣ ದೇವಋಣ. ಕ್ರಮವತ್ತಾಗಿ ಸುಸಂತಾನ ಪಡೆಯುವುದರಿಂದ ಪಿತೃಋಣ ಪರಿಹಾರ. ಯಜ್ಞಯಾಗಾದಿಗಳನ್ನು ಮಾಡುವುದರಿಂದ ದೇವ ಋಣ ಪರಿಹಾರ. ವೇದಾಧ್ಯಯನ ಸ್ವಾಧ್ಯಾಯ, ಸಂಧ್ಯಾವಂದನ ನದಿಗಳಿಂದ ಋಷಿಋಣ ಪರಿಹಾರ.

116. ಸುಂದರ ಸಂಬೋಧನೆಗಳು (ಮೂಲದಲ್ಲಿಲ್ಲ)

116. 8–48. ಇಂದುಮತಿ ಮರಣಿಸಿದಾಗ ಅಜನು ತೊಡೆಯ ಮೇಲೆ ಪವಡಿಸಿದ ಇಂದುಮತಿಯನ್ನು ಬಿಡದೆ ಬಲವಾಗಿ ಹಿಡಿದು ರೋಧಿಸಿದ ಶೋಕವನ್ನು ಅಜನು ಅಭಿವ್ಯಕ್ತಿಗೊಳಿಸುವಾಗ ದೊಡ್ಡಬೆಲೆ ಇಂದುಮತಿಯನ್ನು ಕುರಿತು ವಿಶೇಷಣಗಳನ್ನು ಬಳಸಿರುವುದು ಮನೋಹರವಾಗಿ ಅರ್ಥವತ್ತಾಗಿದೆ. (ಈ ವಿಶೇಷಣಗಳು ಮೂಲದಲ್ಲಿಲ್ಲ)

ಓ ಪ್ರಿಯ ವಲ್ಲಭೆಯೇ(8–48), ಎಲೆ ಬೆಳ್ನಗೆಯ ಹೆಣ್ಣೇ(8–49), ಅಯ ಸುಂದರಿ (8–53)ಎಲೆ ಪ್ರಿಯಳೇ (8–54) ಎಲೆ ದಯಿತೆ(8–59), ಅಯ್ಯೋ ಎಲೆ ಪ್ರಿಯೆ (8–56), ಎಲೆ ಕಿನ್ನರ ಕಂಠಿ(8–64), ಎಲೆ ಸಹೃದಯೇ (8–65), ಎಲೆ ಭಾಮಿನಿ, ಓ ನನ್ನ ಸರ್ವಸ್ವವೇ, ಎಲೆ ಲಲಿತೆ, ಎಲೆ ಮಂದಾರಲೋಚನೆ, ಎಲೆ ಸುಮಂಗಲಿ!

117. ಪುರುಷ ಸಹಗಮನ ಇಲ್ಲ

117. 8–72. ಇಂದುಮತಿಯ ಶೋಕದಲ್ಲಿ ಮಡದಿಯೊಡನೆ ಮಡಿದು ಹೋದನು, ಶೋಕಾತುರನಾಗಿ ವಿವೇಚನೆ ಕಳೆದುಕೊಂಡನು ಎಂಬ ಅಪಖ್ಯಾತಿಗೆ ಒಳಗಾಗದಿರಲು ಅವಳೊಡನೆ ಅಜ ಸಹಗಮನ ಮಾಡಲಿಲ್ಲ ಅಷ್ಟೆ ಹೊರತು, ತಾನಿನ್ನೂ ಬದುಕಿರಬೇಕೆಂಬ ದೇಹಮೋಹದಿಂದ ಅಲ್ಲ ಎಂಬ ಮಾತು ರೋಚಕವಾಗಿದೆ. ಪುರುಷರು ಸ್ತ್ರೀಯರೊಂದಿಗೆ ಸಹಗಮನ ಮಾಡುವ ಪದ್ಧತಿ ಇಲ್ಲದ್ದನ್ನು ಕವಿ ಚಮತ್ಕಾರಿಕವಾಗಿ ಇಲ್ಲಿ ಹೇಳಿದ್ದಾನೆ.

ಅಧ್ಯಾಯ 10

118. ಕೇಕಯ ದೇಶ

118. 9–17. ಕೇಕಯ ದೇಶದ ಪುತ್ರಿ ಕೈಕೇಯಿ (ಕೇಕಯ ರಾಜನ ಪುತ್ರಿ)

ಕೇಕಯ ದೇಶ ಸಿಂಧೂ ದೇಶದ ಅಂಚಿನಲ್ಲಿವೆ. ಗಿರಿವ್ರಜ ಅದರ ರಾಜಧಾನಿ. (ಗಿರಿವ್ರಜ ವನ್ನು ಗಿರಿವ್ರಜಕ್ ಎಂದು ಈಗ ಕರೆಯುತ್ತಾರೆ) ಜೀಲಂ ಇಂದ ಸಿಂಧೂ ನದಿವರೆಗಿರುವ ಉಪ್ಪಿನ ಪರ್ವತಶ್ರೇಣಿಗೆ ವ್ಯಾಪಿಸಿರುವ ಪ್ರದೇಶವಾಗಿದೆ. ಮಗಧ ದೇಶದ ರಾಜಪುತ್ರಿ ಸುಮಿತ್ರೆ.

119. ಕೋಸಲ

119. ಕೋಸಲ– ದಕ್ಷಿಣ ಕೋಸಲ ಪ್ರದೇಶ, ಕೋಸಲ ದೇಶದ ರಾಜನ ಮಗಳು ಕೌಸಲ್ಯೆ. ಉತ್ತರ ಕೋಸಲ ಪ್ರದೇಶವನ್ನು ದಶರಥನೇ ಆಳುತ್ತಿದ್ದನು.

120. ಮೃಗಶೃಂಗ

120. 9–21. ಮೃಗಶೃಂಗ– ಜಿಂಕೆಯ ಕೊಂಬು. ಯಜ್ಞದ ವೇಳೆ ತುಪ್ಪದ ಹೊಗೆಯಿಂದ ಮೈ ಬೆನ್ನುಗಳಲ್ಲಿ ಕೆರೆತ ಉಂಟಾದಾಗ ಉಗುರಿನಿಂದ ಕೆರೆದು ಕೊಳ್ಳಬಾರದು. ಏಕೆಂದರೆ ಉಗುರನ್ನು ಆಯುಧವನ್ನಾಗಿ ಪರಿಗಣಿಸಲಾಗುತ್ತದೆ.

121. ನಖಾಯುಧ

121. ನಖಾಯುಧ– ನರಸಿಂಹಾವತಾರದಲ್ಲಿ ಉಗುರನ್ನು ಆಯುಧದಂತೆ ಬಳಸಿ ಹಿರಣ್ಯಕಶಿಪುವಿನ ಉದರವನ್ನು ಬಗೆಯಲಾಯಿತು ಆದ್ದರಿಂದ ಉಗುರನ್ನು ಬಳಸದೆ ಯಜ್ಞದವೇಳೆ ರುರು ಮೃಗದ ಕೊಂಬನ್ನು ಮೈ ಕೆರೆತಕ್ಕೆ ಬಳಸುತ್ತಾರೆ.

122. ಬಲಸೂದನ

122. 9–4. ಸಮಯಾನುಸಾರ ಮಳೆಗರೆದ ಮಹೇಂದ್ರ– ಇಂದ್ರ. ಮೂಲದಲ್ಲಿ ಬಲಸೂದನ ಎಂದು ಇಂದ್ರನನ್ನು ಕರೆಯಲಾಗಿದೆ (ಬಲನೆಂಬ ರಾಕ್ಷಸನನ್ನು ಕೊಂದವನು).

123. ದುಂಬಿಗಳ ಮಧುಪಾನ

123. 9–30. ಬಕುಲದ ತರುವಿನ ಮೇಲೆ ಸಾಲಾಗಿ ದುಂಬಿಗಳ ಗುಂಪು ಕುಳಿತು ಮಧುಪಾನ ಮಾಡುತ್ತಿದ್ದವು. ಕಾಂತೆಯರಲ್ಲಿ ಆಸಕ್ತರಾಗಿ ಅವರ ಬಾಯಿಯ ಮದ್ಯ ಹೀರುತ್ತ ಚುಂಬಿಸುವ ಪತಿಯಂತೆ.

124. ಮುತ್ತುಗದ ಹೂಗಳು

124. 9–31. ಲಜ್ಜೆಯನ್ನು ತೊರೆದು ನಲ್ಲನ ದೇಹದ ಮೇಲೆ ಮಾಡಿದ ಕೆಂಗಾಯ ಗಳಂತೆ ಚೆಲುವಾದ ಮುತ್ತುಗದ ಹೂಗಳು ಬಿರಿದಿದ್ದವು.

125. ಅನುವಾದಿಸದ ಶ್ಲೋಕಗಳು

9–42.9–43. 9–44 ಈ ಪದ್ಯಗಳನ್ನು, ವಿಲಾಸಿನಿಯರ ಶೃಂಗಾರ ಚೇಷ್ಟೆಗಳು ವರ್ಣಿತವಾಗಿವೆ ಎಂಬ ಕಾರಣಕ್ಕೆ ದೊಡ್ಡಬೆಲೆಯವರು ಅನುವಾದಿಸಿಲ್ಲ.

126. ಸಪ್ತ ವ್ಯಸನಗಳು

126. 9–49. ಏಳು ಬಗೆಯಾದ ವ್ಯಸನಗಳು: ಸ್ತ್ರೀ, ಅಕ್ಷ, ಮೃಗಯಾ, ಪಾನ, ವಾಕ್ ಪೌರುಷ್ಯ, ದಂಡ ಪೌರುಷ್ಯ, ಅರ್ಥದೂಷಣೆ. (ಶ್ರೀವತ್ಸ ನಿಘಂಟು)

127. ರುರುಮೃಗ

9–71. ರುರುಮೃಗ – ಕಪ್ಪು ಮಚ್ಚೆಯಿಂದ ಕೂಡಿದ ಕಡಹ(ಜಿಂಕೆ)

ಜಿಂಕೆಯ ಜಾತಿಗಳು ಹಲವಾರಿವೆ. ಸಾರಂಗ, ಹರಿಣ, ಕೃಷ್ಣ ಸಾರ, ಗೋಕರ್ಣ, ಶಂಬರ, ರಂಕು, ನ್ಯಂಕು, ಇತ್ಯಾದಿ. ಆ ಪೈಕಿ ರುರು ಒಂದು ಜಾತಿಯ ಜಿಂಕೆ.

128. ಬಾಲತಪಸ್ವಿ

128. ದ್ವಿಜೇತರ ತಪಸ್ವಿಸುತಮ್ – ಬ್ರಾಹ್ಮಣೇತರ ತಾಪಸ ಕುಮಾರ ಎಂದು ದೊಡ್ಡಬೆಲೆ ಮೂಲವನ್ನು ಅನುವಾದಿಸಿದ್ದಾರೆ. ಮೂಲದ ಮಾತಿನಲ್ಲಿ ಉಪನಯನ ಸಂಸ್ಕಾರವುಳ್ಳ ಮೂರು ವರ್ಣಗಳಿಗೆ ಬ್ರಾಹ್ಮಣ ಕ್ಷತ್ರಿಯ ವೈಶ್ಯ ವರ್ಗಕ್ಕೆ ಸೇರದ ತಪಸ್ವಿ ಬಾಲ ಎಂದರೆ ಶೂದ್ರ ವರ್ಣದ ತಪಸ್ವಿ ಎನ್ನುತ್ತಾರೆ. ಎಂದರೆ ಅಲ್ಲದವನು ಎಂಬರ್ಥ ಬರುವುದಿಲ್ಲ.

ಅಧ್ಯಾಯ 10

129. ಪಾಕಶಾಸನ ಹೆಸರು

129. 10–1. ಪಾಕನೆಂಬ ದೈತ್ಯನನ್ನು ಕೊಂದದ್ದರಿಂದ ಪಾಕಶಾಸನನೆಂಬ ಹೆಸರು ಬಂತೆಂದು ಕೆಲವರು ಹೇಳುತ್ತಾರೆ; ಅದಿತಿಯ ಗರ್ಭವನ್ನು ಕತ್ತರಿಸಿದ್ದರಿಂದ ಆ ಹೆಸರು ಬಂತೆಂದು ಮತ್ತೆ ಕೆಲವರೆನ್ನುವರು; ಬಾಲಕರಿಗೆ ಎಂದರೆ ಅಜ್ಞರಿಗೆ ತಿಳಿವಳಿಕೆಯನ್ನು ಹೇಳುವದರಿಂದ ಆ ಹೆಸರು ಬಂದಿದೆಯೆಂದು ಬೇರೆ ಕೆಲವರು ಹೇಳುತ್ತಾರೆ. ಯಾವ ಅರ್ಥವೇ ಇರಲಿ ಪಾಕಶಾಸನ ಎಂಬ ಮಾತಿನ

ಅವಯವಾರ್ಥವೇನೂ ಇಲ್ಲಿ ಬೇಕಿರುವದಿಲ್ಲ. 2. ಹತ್ತು ಸಾವಿರ ವರ್ಷಗಳೆಂದರೆ ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ಋಷಿಯ ಶಾಪವು ಬಂದಂದಿನಿಂದ ಎಂದು ಲೆಕ್ಕಹಾಕಬೇಕು, ಹುಟ್ಟಿದಂದಿನಿಂದ ಅಥವಾ ರಾಜ್ಯಾಭಿಷೇಕವಾದಂದಿನಿಂದ ಎಂದು ಲೆಕ್ಕಹಾಕಬಾರದು; ಅದು ರಾಮಾಯಣಕ್ಕೆ ವಿರೋಧವಾಗುವದು ಎಂದು ವ್ಯಾಖ್ಯಾನಕಾರರು ಬರೆದಿದ್ದಾರೆ. ಮನುಷ್ಯನಿಗೆ ನೂರು ವರ್ಷವೇ ಪೂರ್ಣಾಯುಸ್ಸೆಂದು ಶ್ರುತಿಯಲ್ಲಿದ್ದರೂ ಜನರು ಸಾವಿರಾರು ವರ್ಷಗಳು ಬದುಕಿದ್ದಂತೆ ಪುರಾಣಾದಿಗಳಲ್ಲಿ ವರ್ಣಿಸಿರುತ್ತದೆ.

130. ಅಮೃತಮಥನ

130. 10–3. ಕ್ಷೀರಸಮುದ್ರವನ್ನು ದೇವತೆಗಳೂ ಅಸುರರೂ ಅಮೃತಕ್ಕಾಗಿ ಮಂದರಪರ್ವತದಿಂದ ಕಡೆಯಲು ಅನೇಕ ಶ್ರೇಷ್ಠವಸ್ತುಗಳು ಹುಟ್ಟಿದವು ಎಂದು ಪುರಾಣಕಥೆ. ಈ ಕಥೆಯನ್ನು ಭಾರತ, ರಾಮಾಯಣ, ವಿಷ್ಣುಪುರಾಣ, ಭಾಗವತ – ಇವುಗಳಲ್ಲಿ ವಿಸ್ತಾರವಾಗಿ ಹೇಳಿದೆ.

131. ಋಷ್ಯಶೃಂಗನ ಕಥೆ

131. 10–5 ಋಷ್ಯಶೃಂಗನೇ ಮೊದಲಾದವರು ಎಂದರೆ ಸುಯಜ್ಞ, ವಾಮದೇವ, ಜಾಬಾಲಿ, ಕಾಶ್ಯಪ, ವಸಿಷ್ಠ; ಇವರೆಲ್ಲರೂ ಇಷ್ಟಿಯನ್ನು ಮಾಡಿದರು. (ರಾಮಾಯಣ, ಬಾಲಕಾಂಡ 12) 2. ಇಷ್ಟಿಯೆಂದರೆ 'ಚರು'ವಿನಿಂದ ಮಾಡುವ ಯಾಗವೆಂದು ಹೇಳುತ್ತಾರೆ. ಪುತ್ರಕಾಮೇಷ್ಟಿಯಲ್ಲಿ ಪುರೋಡಾಶವೆಂಬ ಅಕ್ಕಿಯ ಹಿಟ್ಟನ್ನು ಎಂಟು ಕಪಾಲಗಳೆಂಬ ಹಂಚಿನ ಪಿಲಿಕೆಗಳಲ್ಲಿ ಬೇಯಿಸಿ ಒಂದಾನೊಂದು ಮಂತ್ರದಿಂದ ಅಗ್ನಿದೇವತೆಗೆ ಅರ್ಪಿಸುತ್ತಾರೆ. 3. ದಶರಥನ ಮಗಳಾದ ಶಾಂತಾದೇವಿಯನ್ನು ಲೋಮಪಾದನೆಂಬ ಅಂಗರಾಜನು ಸಾಕಿದ್ದನು; ಅವಳನ್ನು ಋಷ್ಯಶೃಂಗನು ಮದುವೆಯಾಗಿದ್ದನು. ವಿಭಾಂಡಕನೆಂಬ ಋಷಿಗೆ ಒಂದು ಹೆಣ್ಣು ಜಿಂಕೆಯಲ್ಲಿ ಈತನು ಹುಟ್ಟಿದನೆಂದೂ ತನ್ನ ತಂದೆಯ ಹೊರತು ಮನುಷ್ಯ ಪ್ರಾಣಿಯನ್ನೇ ಅವನು ಬಹುಕಾಲ ನೋಡಿರಲಿಲ್ಲವೆಂದೂ ಲೋಮಪಾದನು ಬ್ರಾಹ್ಮಣರ ಆಜ್ಞೆಯಂತೆ ಅವನನ್ನು ಸುಂದರಿಯರಾದ ಸ್ತ್ರೀಯರ ಮೂಲಕ ಬರಮಾಡಿಕೊಂಡದ್ದರಿಂದ ಆತನ ರಾಜ್ಯದಲ್ಲಿ ಅನಾವೃಷ್ಟಿಯು ಹೋಗಿ ಸುಭಿಕ್ಷವಾಯಿತೆಂದೂ ರಾಮಾಯಣದಲ್ಲಿ ಕಥೆ ಇದೆ.

132. ಪುಲಸ್ತ್ಯಕುಲದ ರಾವಣ

132. 10–5. ಪುಲಸ್ತ್ಯನೆಂಬ ಋಷಿಯು ಬ್ರಹ್ಮನ ಮಾನಸಪುತ್ರರಲ್ಲಿ ಒಬ್ಬನು. ಇವನು ರಾವಣನೇ ಮೊದಲಾದ ರಾಕ್ಷಸರಿಗೆ ಮೂಲಪುರುಷನು. ರಾವಣನು

ವಿಶ್ರವಸ್ಸು ಎಂಬಾತನಿಂದ ನಿಕಷಾ ಎಂಬ ಅವನ ಹೆಂಡತಿಯ ಹೊಟ್ಟೆಯಲ್ಲಿ ಹುಟ್ಟಿದವನು. ರಾಮಾಯಣದಲ್ಲಿ ದೇವತೆಗಳಲ್ಲಿ ದೂರು ಹೇಳಿಕೊಂಡರೆಂದಿದೆ. ಕವಿಯು ಬೇರೆ ಯಾವದೋ ಪುರಾಣ, ಆಧಾರದಿಂದ ವಿಷ್ಣುವಿನಲ್ಲಿಗೇ ನೇರವಾಗಿ ಹೋದದ್ದಾಗಿ ಬರೆದಿರಬೇಕೆಂದು ತೋರುವದು.

133. ಶ್ರೀವತ್ಸ ಚಿಹ್ನೆ

133. 10–10 ಶ್ರೀವತ್ಸವೆಂಬುದು ವಿಷ್ಣುವಿನ ಎದೆಯ ಮೇಲಿರುವ ಒಂದಾನೊಂದು ಮಚ್ಚೆ, ದೇವತೆಗಳಲ್ಲಿ ಯಾರು ಶ್ರೇಷ್ಠರೆಂದು ನಿರ್ಣಯಿಸಬೇಕೆಂಬ ಋಷಿಗಳ ಅನುಜ್ಞೆಯಿಂದ ಭೃಗುಋಷಿಯು ವಿಷ್ಣುವಿನ ಎದೆಯನ್ನು ಒದ್ದನೆಂದೂ ವಿಷ್ಣುವು ಕೂಡಲೇ ಎದ್ದು ವಿನಯದಿಂದ ಅವನ ಪಾದಸೇವೆಯನ್ನು ಮಾಡಿದ್ದಲ್ಲದೆ, ತಮ್ಮ ಹೆಜ್ಜೆಯ ಗುರುತು ನನ್ನ ಎದೆಯ ಮೇಲೆ ಯಾವಾಗಲೂ ಇರಲಿ' ಎಂದು ಹೇಳಿದನೆಂದೂ ಭಾಗವತ (10–89–1ರಿಂದ12)ದಲ್ಲಿ ಹೇಳಿದೆ. ಶಿವನ ಶೂಲದ ಗುರುತು ತಪಸ್ಸು ಮಾಡುತ್ತಿದ್ದ ನಾರಾಯಣನ ಎದೆಯ ಮೇಲೆ ಆಯಿತೆಂದೂ ಅದಕ್ಕೆ ಶ್ರೀವತ್ಸವೆಂದು ಹೆಸರೆಂದೂ ಭಾರತದ ಶಾಂತಿಪರ್ವದಲ್ಲಿದೆ. 2.ಕೌಸ್ತುಭವೆಂಬುದು ಕ್ಷೀರಸಾಗರದಲ್ಲಿ ಹುಟ್ಟಿದ ರತ್ನವು.

134. ಪಾರಿಜಾತ ವೃಕ್ಷ

134. 10–11. ಮಂದಾರ, ಪಾರಿಜಾತ, ಸಂತಾನ, ಕಲ್ಪವೃಕ್ಷ ಹರಿಚಂದನ–ಇವು ಐದೂ ದೇವಲೋಕದಲ್ಲಿರುವ ವೃಕ್ಷಗಳು. ಇವುಗಳಲ್ಲಿ ಪಾರಿಜಾತವೇ ಎಲ್ಲಕ್ಕೂ ಹೆಚ್ಚಿನದು. ಪಾರಿಜಾತವೂ ಸಮುದ್ರಮಥನ ಕಾಲದಲ್ಲಿ ಹುಟ್ಟಿತು. ಪಾರಿಜಾತಕ್ಕೆ ಅನೇಕ ಕೊಂಬೆಗಳಿವೆ, ಸುವಾಸನೆಯ ಅನೇಕ ಪುಷ್ಪಗಳಿವೆ, ಅದು ಕೇಳಿದ್ದನ್ನು ಕೊಡುವದು; ವಿಷ್ಣುವಿಗೆ ನಾಲ್ಕು ಕೈಗಳು, ಅನೇಕ ದಿವ್ಯಾಭರಣಗಳಿವೆ, ಭಕ್ತರು ಕೇಳಿದ್ದನ್ನು ಕೊಡುವನು ಎಂಬುದನ್ನು ತಿಳಿಸುವದಕ್ಕೆ ಕವಿಯು ಈ ಹೋಲಿಕೆಯನ್ನು ಕೊಟ್ಟಿರುತ್ತಾನೆ.

135. ವಿಷ್ಣುವಿನ ಚತುರಾಯುಧಗಳು

135. 10–13 ವಿಷ್ಣುವಿನ ಚಕ್ರಕ್ಕೆ ಸುದರ್ಶನವೆಂದೂ ಶಂಖಕ್ಕೆ ಪಾಂಚಜನ್ಯವೆಂದೂ ಗದೆಗೆ ಕೌಮೋದಕಿಯೆಂದೂ ಕತ್ತಿಗೆ ನಂದಕವೆಂದೂ ಧನುಸ್ಸಿಗೆ ಶಾರ್ಙ್ಗವೆಂದೂ ಹೆಸರು. ಈ ಆಯುಧಗಳ ಅಭಿಮಾನದೇವತೆಗಳೇ ತಮ್ಮೊಡೆಯನನ್ನು ಜಯಜಯವೆಂದು ಹೊಗಳುತ್ತಿದ್ದರೆಂದು ಕವಿಯು ವರ್ಣಿಸಿರುತ್ತಾನೆ.

136. ಗರುಡನ ಗರ್ವಭಂಗ

136. ಗರುಡನ ತಾಯಿಯಾದ ವಿನುತೆಯು ಕದ್ರುವೆಂಬ ತನ್ನ ಸವತಿಗೆ

ಒಂದಾನೊಂದು ಜೂಜಿನಲ್ಲಿ ಸೋತು ದಾಸಿಯಾಗಿದ್ದಳು. ಅವಳನ್ನು ಬಿಡುಗಡೆ ಮಾಡುವದಕ್ಕಾಗಿ ಗರುಡನು ಕದ್ರುವಿನ ಅಪ್ಪಣೆಯಂತೆ ದೇವತೆಗಳಲ್ಲಿದ್ದ ಅಮೃತವನ್ನು ತರುತ್ತಿರುವಾಗ ಇಂದ್ರನು ಅವನನ್ನು ವಜ್ರಾಯುಧದಿಂದ ಹೊಡೆದನು. ಇದೇ ಸಂದರ್ಭದಲ್ಲಿಯೇ ಕದ್ರುವಿನ ಮಕ್ಕಳಾದ ಸರ್ಪಗಳಿಗೂ ಗರುಡನಿಗೂ ನಿತ್ಯವೈರವುಂಟಾಯಿತು. 2. ಗರುಡನು ಅಮೃತವನ್ನು ತಂದ ಮೇಲೆ ವಿಷ್ಣುವಿಗೆ ಸ್ನೇಹಿತನಾಗಿ ಅವನ ವಾಹನವಾಗಿರುವದಕ್ಕೆ ಒಪ್ಪಿಕೊಂಡನು. ಮುಂದೆ ಇಂದ್ರನ ಸಾರಥಿ ಯಾದ ಮಾತಲಿಯು ತನ್ನ ಮಗಳಾದ ಗುಣಕೇಶಿಗೆ ಸುಮುಖನೆಂಬ ಒಬ್ಬ ನಾಗನನ್ನು ಗಂಡನಾಗುವಂತೆ ಒಪ್ಪಿಸಿದನು. ಆದರೆ ಗರುಡನು ಸುಮುಖನ ತಂದೆಯನ್ನು ಮೊದಲೇ ತಿಂದುಹಾಕಿದ್ದನು. ಅವನನ್ನು ಒಂದು ತಿಂಗಳಲ್ಲಿ ತಿನ್ನುವದಾಗಿ ಪ್ರತಿಜ್ಞೆಮಾಡಿದ್ದನು. ಆದ್ದರಿಂದ ಮಾತಲಿಯು ಸುಮುಖನನ್ನು ಇಂದ್ರಲೋಕಕ್ಕೆ ಕರೆದುಕೊಂಡು ಬಂದು ವಿಷ್ಣುವಿನ ಅನುಮತಿಯಂತೆ ಅವನಿಗೆ ದೀರ್ಘಾಯುಸ್ಸನ್ನು ಇಂದ್ರನಿಂದ ಕೊಡಿಸಿದನು. ಗರುಡನು ಇದನ್ನೆಲ್ಲ ಕೇಳಿ ಸಿಟ್ಟುಗೊಂಡು ಇಂದ್ರನನ್ನೂ ವಿಷ್ಣುವನ್ನೂ ನಿಂದಿಸುತ್ತಾ ತನ್ನ ಪರಾಕ್ರಮವನ್ನು ಮತ್ತೆ ಮತ್ತೆ ಕೊಚ್ಚಿಕೊಂಡನು. ವಿಷ್ಣುವು "ಹಾಗಾದರೆ ನನ್ನ ಎಡಗೈಯಿನ ಒಂದು ಬೆರಳನ್ನು ಇಡುತ್ತೇನೆ, ಅದರ ಭಾರವನ್ನು ತಡೆದುಕೊಂಡರೆ ನೀನು ನಿಜವಾಗಿಯೂ ಬಲಿಷ್ಠನೇ ಸರಿ" ಎಂದು ಇಡ ಹೋಗಲು ಅದರ ಭಾರವನ್ನು ತಡೆದುಕೊಳ್ಳಲಾರದೆ ಗರುಡನು ತನ್ನ ಗರ್ವವನ್ನಳಿದು ವಿನೀತನಾದನೆಂದು ಭಾರತದಲ್ಲಿದೆ. ಇದೇ ಕಥೆಯನ್ನು ದೊಡ್ಡಬೆಲೆಯವರು ಸಂಕ್ಷಿಪ್ತವಾಗಿ ಹೀಗೆ ಹೇಳಿದ್ದಾರೆ:–

ಹರಿಯು ವಿಶೇಷವಾಗಿ ತಗ್ಗಿ ಸಮೀಪದಲ್ಲಿ ಅಂಜಲಿಬದ್ಧನಾಗಿ ನಿಂತಿರುವ ಗರುತ್ಮಂತನ ಸೇವೆಯನ್ನು ಕೈಗೊಳ್ಳುತ್ತಿದ್ದನು.(ಪೂರ್ವಕಥೆ) ಪೂರ್ವದಲ್ಲಿ ಇಂದ್ರನಿಂದ ಪ್ರಾರ್ಥಿಸಲ್ಪಟ್ಟ ಭಗವಂತನು ಮಾತಲಿಯ ತಂಗಿಯಾದ ಗುಣಕೇಶಿಗೆ ಪತಿಯಾಗಿದ್ದ ನಾಗನಿಗೆ ಭಯವಿಲ್ಲದಂತೆ ಅಭಯ ಪ್ರದಾನ ಮಾಡಿದನು. ಗರುಡ, ತನ್ನ ವಾಹನನಾಗಿದ್ದರೂ ತನ್ನ ಶತ್ರುಪಕ್ಷವನ್ನು ಶ್ರೀಹರಿ ರಕ್ಷಿಸಿದನೆಂದು ಗರುಡನಿಗೆ ಸಿಟ್ಟು ಹತ್ತಿತು. ಆಗ ಹರಿಯು ತನ್ನ ಕಾಲ ಕಿರುಬೆರಳಿನ ಭಾರದಿಂದ ಕೊಬ್ಬಿದ್ದ ಗರುತ್ಮಂತನ ಹೆಮ್ಮೆಯನ್ನು ತಗ್ಗಿಸಿದನು ಎಂದು ಭಾರತ ಕಥೆ.

137. ಸಪ್ತಬ್ರಹ್ಮರು

137. 10–14. ಭೃಗು, ಮರೀಚಿ. ಅತ್ರಿ, ಪುಲಸ್ತ್ಯ, ಪುಲದ, ಕ್ರತು, ವಶಿಷ್ಠ ಈ ಸಪ್ತರ್ಷಿಗಳನ್ನು ಸಪ್ತಬ್ರಹ್ಮರೆಂದು ಕರೆಯುತ್ತಾರೆ. ಇವರನ್ನೇ ದೊಡ್ಡಬೆಲೆಯವರು ಭೃಗು ಮೊದಲಾದವರು ಎಂದಿದ್ದಾರೆ.

138. ನಿರ್ಗುಣನಾದರೂ ಸಗುಣ

138. 10–15. ಪರಮಾತ್ಮನು ನಿರ್ಗುಣನಾದ್ದರಿಂದ ಅವನು ಮಾತುಗಳಿಂದ ವರ್ಣಿಸುವದಕ್ಕಾಗಲಿ ಮನಸ್ಸಿನಿಂದ ತಿಳಿಯುವದಕ್ಕಾಗಲಿ ಆಗದವನೆಂದು ಶ್ರುತಿಯಲ್ಲಿದೆ. ವರ್ಣಿಸುವದಕ್ಕಾಗದ ಸ್ವರೂಪವನ್ನು ಹೊಗಳಿದರು ಎಂಬುದು ವಿರೋಧವಾದರೂ ಅವನ ಸಗುಣರೂಪವನ್ನೇ ಹೊಗಳಿದರೆಂಬ ತಾತ್ಪರ್ಯವಿರುವದರಿಂದ ಯಾವ ವಿರೋಧವೂ ಇಲ್ಲ.

139. ವೇದಾಂತಿಗಳ ಮತ

139. 10–17. ನೆಲದಲ್ಲಿರುವ ವಸ್ತುಗಳ ರುಚಿಯಿಂದ ನೀರಿನ ರುಚಿಯು ಬೇರೆ ಯಾಗುವಂತೆ ಗುಣಗಳೆಂಬ ಉಪಾಧಿಯಿಂದ ಪರಮಾತ್ಮನು ಬ್ರಹ್ಮವಿಷ್ಣು ರುದ್ರರೆಂಬ ರೂಪಗಳನ್ನು ಹೊಂದುವನು ಎಂಬುದಕ್ಕೆ ಮಾತ್ರ ದೃಷ್ಟಾಂತವನ್ನು ತೆಗೆದುಕೊಳ್ಳ ಬೇಕು. ಪರಮಾತ್ಮನು ಅಸಂಗನಾದ್ದರಿಂದ ಅವನಲ್ಲಿ ಗುಣಗಳ ಸಂಬಂಧವು ನಿಜವಾಗಿ ಆಗುವದಿಲ್ಲ. 2. ಸತ್ವ, ರಜಸ್ಸು, ತಮಸ್ಸು–ಎಂಬ ಮೂರು ಗುಣ ಗಳಿಂದ ಪ್ರಕೃತಿಯೆಂಬ ಮೂಲಕಾರಣವಾಗಿದೆ ಎಂದು ಸಾಂಖ್ಯರು ಹೇಳುತ್ತಾರೆ; ಈ ಪ್ರಕೃತಿಯನ್ನು ತನ್ನ ವಶದಲ್ಲಿಟ್ಟುಕೊಂಡು ಪರಮಾತ್ಮನು ಸೃಷ್ಟಾದಿಗಳನ್ನು ಮಾಡುತ್ತಾನೆಂದು ವೇದಾಂತಿಗಳು ಹೇಳುವರು. ಕಾಳಿದಾಸನು ವೇದಾಂತಿಗಳ ಮತವನ್ನು ಇಲ್ಲಿ ಅನುಸರಿಸಿರುತ್ತಾನೆ.

140. ಸಾಂಖ್ಯರ ಮತ

140. 10–18. ಸಾಂಖ್ಯರು ಪ್ರಕೃತಿಗೆ ಅವ್ಯಕ್ತವೆಂದು ಹೆಸರಿಟ್ಟಿರುತ್ತಾರೆ. ಪ್ರಕೃತಿಗಿಂತಲೂ ಅವ್ಯಕ್ತನಾಗಿರುವದರಿಂದ ಪರಮಾತ್ಮನನ್ನು ವೇದಾಂತಿಗಳು ಅವ್ಯಕ್ತನೆನ್ನುವರು.

141. ಪರಮಾತ್ಮನ ಅಲೌಕಿಕ ಮಹಿಮೆ

141. 10–19. (ಹೊಟ್ಟೆಕಿಚ್ಚಿನವನು, ದಯೆಯುಳ್ಳವನು, ತೃಪ್ತಿಯಿಲ್ಲದವನು, ಸಿಡುಕನು, ಅಂಜುಪುರುಕನು, ಮತ್ತೊಬ್ಬರ ಸಂಪತ್ತನ್ನನುಭವಿಸುವನು – ಇವರು ಆರು ಜನರೂ ನಿತ್ಯದುಃಖಿಗಳು)– ಎಂಬ ಭಾರತವಚನದಂತೆ ದಯೆಯಿರುವವನಿಗೆ ದುಃಖವಿರಲೇಬೇಕು. ಏಕೆಂದರೆ ಮತ್ತೊಬ್ಬರ ದುಃಖವನ್ನು ನೋಡಿ ತಡೆಯಲಾರದೆ ಇರುವ ದುಃಖವೇ ದಯೆಯು, ಆದರೆ ಪರಮಾತ್ಮನಿಗೆ ಮಾತ್ರ ಯಾವ ದುಃಖವೂ ಇಲ್ಲ, ಆದರೂ ದಯೆಯುಳ್ಳವನಾಗಿರುವನು. ಎಷ್ಟು ಹೆಚ್ಚು ಕಾಲ ಪ್ರಾಣಿಗಳು ಬದುಕಿರುವವೋ ಅಷ್ಟು ಮುಪ್ಪಾಗುವವು; ಪರಮಾತ್ಮನು ಹಾಗಲ್ಲ, ಅವನಿಗೆ ಕಾಲದಿಂದ ಯಾವ ವಿಕಾರವೂ ಆಗುವದಿಲ್ಲ. ಒಂದಕ್ಕೊಂದು ವಿರೋಧವಾಗಿರುವ ಗುಣಗಳು

ಪರಮಾತ್ಮನಲ್ಲಿವೆ ಎಂದು ವರ್ಣಿಸಿದ್ದರಿಂದ ಪರಮಾತ್ಮನಲ್ಲಿ ಅಲೌಕಿಕ ಮಹಿಮೆಯಿದೆ ಎಂದು ಹೇಳಿದಂತೆ ಆಯಿತು.

142. ಸಪ್ತಾಗ್ನಿ ಜಿಹ್ವೆಗಳು

10–21. 1. ರಥಂತರ, ಬೃಹತ್ಸಾಮ, ವಾಮದೇವ್ಯ, ವೈರೂಪ್ಯ, ಪಾವಮಾನ, ವೈರಾಜ, ಚಾಂದ್ರಮಸ–ಇವು ಏಳು ಸಾಮಗಳು. 2.ಲವಣ (ಉಪ್ಪು), ಇಕ್ಷು(ಕಬ್ಬಿನ ರಸ), ಸುರಾ (ಹೆಂಡ), ಸರ್ಪಿಸ್ (ತುಪ್ಪ), ದಧಿ (ಮೊಸರು), ಕ್ಷೀರ (ಹಾಲು), ಶುದ್ಧ ಜಲ (ಸಿಹಿನೀರು)–ಇವು ಏಳು ಸಮುದ್ರಗಳು. 3.ಕಾಲೀ ಕರಾಲೀ ಮನೋಜವಾ ಸುಲೋಹಿತಾ ಸುಧೂಮ್ರವರ್ಣಾ ಸ್ಫುಲಿಂಗಿನೀ ವಿಶ್ವರುಚೀ – ಇವು ಅಗ್ನಿಯ ನಾಲಗೆಗಳೆಂದು ಮುಂಡಕೋಪನಿಷತ್ತಿನಲ್ಲಿದೆ.

143. ಯೋಗಿಗಳ ಅನ್ವೇಷಣೆ

143. 10–23. 1. ಯೋಗಕ್ಕೆ ಅಭ್ಯಾಸವೆಂದೂ ವೈರಾಗ್ಯವೆಂದೂ ಎರಡು ಅಂಗಗಳಿರುವವು. ಅಭ್ಯಾಸವೆಂದರೆ ಮನಸ್ಸನ್ನು ಪರಮಾತ್ಮನಲ್ಲಿಯೆ ಮತ್ತೆ ಮತ್ತೆ ಇಟ್ಟು ಅತ್ತಿತ್ತ ಹೋಗದಂತೆ ಮಾಡುವ ಪ್ರಯತ್ನವು; ವೈರಾಗ್ಯವೆಂದರೆ ಹೊರಗಿನ ವಿಷಯಗಳಲ್ಲಿ ದೋಷವನ್ನು ಕಂಡು ಅವುಗಳ ಕಡೆಗೆ ಮನಸ್ಸು ಹಾಕದೆ ಇರುವದು. 2. ಪರಮಾತ್ಮನು ಎಲ್ಲೆಲ್ಲಿಯೂ ಇರುವನಾದರೂ ನಮ್ಮ ಹೃದಯದಲ್ಲಿ ಅವನನ್ನು ಧ್ಯಾನಮಾಡಿದರೆ ಬೇಗ ಅವನ ಸ್ವರೂಪವನ್ನು ಗೊತ್ತುಮಾಡಿಕೊಳ್ಳಬಹುದೆಂದು ಶಾಸ್ತ್ರದಲ್ಲಿ ಹೇಳಿದೆ. 3. ಪರಮಾತ್ಮನು ಜ್ಯೋತಿರ್ಮಯನೆಂದರೆ ದೀಪ, ಸೂರ್ಯ ಪ್ರಕಾಶ ಮುಂತಾದವುಗಳಂತೆ ಎಂದು ಅರ್ಥವಲ್ಲ. ಬೆಳಕು ಹೊರಗಿನ ಪದಾರ್ಥವನ್ನು ಬೆಳಗುವದಕ್ಕೂ ಸಾಧನವಾಗಿ ತಾನೂ ಬೆಳಗುವಂತೆ –ಜ್ಞಾನವು ಎಲ್ಲವನ್ನೂ ತಿಳಿಸುವದು, ತನ್ನನ್ನು ತಿಳಿಸುವದಕ್ಕೆ ಮತ್ತೇನನ್ನೂ ಬಯಸದೆ ತಾನೇ ತೋರಿಕೊಳ್ಳುವದು. ಆದ್ದರಿಂದ ಜ್ಞಾನವನ್ನು ಜ್ಯೋತಿಯೆಂದು ಶಾಸ್ತ್ರದಲ್ಲಿ ಅಲ್ಲಲ್ಲಿ ಕರೆದಿರುತ್ತದೆ.

144. ಯೋಗನಿದ್ರೆಯ ಪರಮಾತ್ಮ

144. 10–24. 1. ಪರಮಾತ್ಮನ ನಿಜವಾದ ಸ್ವರೂಪಕ್ಕೆ 'ನಿರ್ಗುಣ'ವೆಂದು ಹೆಸರು; ವ್ಯವಹಾರದಲ್ಲಿ ಅವನಲ್ಲಿ ಆರೋಪಿಸಿರುವ ರೂಪವನ್ನು 'ಸಗುಣ'ವೆನ್ನುತ್ತಾರೆ. ನಿರ್ಗುಣರೂಪದಲ್ಲಿ ಪರಮಾತ್ಮನು ಹುಟ್ಟುವದಿಲ್ಲ, ಯಾವ ಕೆಲಸವನ್ನೂ 2) ಮಾಡುವದಿಲ್ಲ, ಅವನಿಗೆ ನಿದ್ರೆ ಮುಂತಾದ ಅವಸ್ಥೆಗಳಿಲ್ಲ. ಆದರೆ ಸಗುಣರೂಪದಲ್ಲಿ ಪರಮಾತ್ಮನು ಆಗಾಗ್ಗೆ ಅವತಾರವಾಡಿ ದೈತ್ಯರನ್ನು ಕೊಲ್ಲುತ್ತಾನೆಂದೂ ಕ್ಷೀರಸಮುದ್ರದಲ್ಲಿ ಆದಿಶೇಷನ ಮೇಲೆ ಯೋಗನಿದ್ರೆಯನ್ನು ಅನುಭವಿಸುತ್ತಾ

ಮಲಗಿರುವನೆಂದೂ ಪುರಾಣಗಳಲ್ಲಿ ವರ್ಣಿಸಿರುತ್ತದೆ. ಕವಿಯು ಇದನ್ನು ವಿರೋಧಾಭಾಸವಾಗುವಂತೆ ವರ್ಣಿಸಿರುತ್ತಾನೆ.

145. ನಿರ್ಲಿಪ್ತರೂಪಿ ಭಗವಂತ

145. 10–25. 1.ಹಿಂದಿನ ಶ್ಲೋಕದಂತೆಯೇ ಇಲ್ಲಿಯೂ ವಿರೋಧಾಭಾಸದಿಂದ ಪರಮಾತ್ಮನನ್ನು ವರ್ಣಿಸಿದೆ. ಕೃಷ್ಣಾದಿರೂಪಗಳಿಂದ ವಿಷಯಭೋಗವನ್ನು ಮಾಡುತ್ತಾನೆಂದೂ ನರನಾರಾಯಣಾದಿರೂಪದಿಂದ ತಪಸ್ಸು ಮಾಡುತ್ತಾನೆಂದೂ ತಾತ್ಪರ್ಯದಲ್ಲಿ ಹೇಳಿರುವದರಲ್ಲಿ ಮಲ್ಲಿನಾಥವ್ಯಾಖ್ಯಾನವನ್ನು ಅನುಸರಿಸಿದೆ. ಆದರೆ ಬೇರೆಬೇರೆ ಜೀವರ ರೂಪದಿಂದ ವಿಷಯಭೋಗವನ್ನನುಭವಿಸುವದು, ತಪಸ್ಸು ಮಾಡುವದು, ರಾಜ್ಯಭಾರವನ್ನು ಮಾಡುವದು– ಮುಂತಾದ ಕೆಲಸಗಳನ್ನು ಮಾಡುತ್ತಿದ್ದರೂ ಪರಮಾರ್ಥದೃಷ್ಟಿಯಿಂದ ಪರಮಾತ್ಮನು ಈ ಯಾವ ಕ್ರಿಯೆಯನ್ನೂ ಮಾಡುವದಿಲ್ಲವೆಂಬ ಅಭಿಪ್ರಾಯವನ್ನು ಕವಿಯು ವರ್ಣಿಸಿರುತ್ತಾನೆಂದು ತೋರುವದು. 2. ಶಬ್ದ, ಸ್ಪರ್ಶ, ರೂಪ, ರಸ, ಗಂಧ– ಇವುಗಳಿಗೆ ವಿಷಯಗಳೆಂದು ಹೆಸರು.

146. ಪರಮಾತ್ಮನೊಬ್ಬನೇ ಗುರಿ

146. 10–26 ಬೇರೆ ಬೇರೆ ಶಾಸ್ತ್ರಗಳಲ್ಲಿ ಹೇಳಿರುವ ಜ್ಞಾನ, ಭಕ್ತಿ, ಕರ್ಮ, ಯೋಗ–ಎಂಬ ಮೋಕ್ಷಮಾರ್ಗಗಳು ಬೇರೆ ಬೇರೆಯಾಗಿದ್ದರೂ ಇವೆಲ್ಲಕ್ಕೂ ಪರಮಾತ್ಮನೊಬ್ಬನೇ ಗುರಿಯೆಂಬುದು ವೈದಿಕಧರ್ಮದಲ್ಲಿ ಮತ್ತೆ ಮತ್ತೆ ಹೇಳಿರುವ ಒಂದು ವಿಶೇಷವಾದ ಉಪದೇಶವು. ಇದನ್ನು ತಿಳಿದುಕೊಂಡವರಿಗೆ ಮತಸಂಬಂಧವಾದ ಜಗಳಕ್ಕೆ ಕಾರಣವಿರುವುದಿಲ್ಲ. 2. ಬೇರೆ ಬೇರೆ ನದಿಗಳು ಸಮುದ್ರಕ್ಕೆ ಹೋಗುವಂತೆ ಎಂಬ ಉಪಮಾನವು ಬಹು ಪ್ರಸಿದ್ಧವಾದದ್ದು. ಮೋಕ್ಷಮಾರ್ಗಗಳನ್ನು ಒಂದೇ ನದಿಯ ಕವಲುಗಳಿಗೆ ಹೋಲಿಸಿರುವದು ಕಾಳಿದಾಸನ ಉಪಮಾನದಲ್ಲಿರುವ ವಿಶೇಷವು. 3. ಆಗಮವೆಂದರೆ ಗುರುಪರಂಪರೆಯಿಂದ ಬಂದಿರುವ ಶಾಸ್ತ್ರದರ್ಶನ. ಇವು ಬಹು ವಿಧವಾಗಿರುವವು.

147. ಪರಮಾತ್ಮನೊಬ್ಬನೇ ಸಾಧನ

147. 10–27. 1.ಬ್ರಹ್ಮಲೋಕದವರೆಗೆ ಹೋದರೂ ಮತ್ತೆ ಸಂಸಾರದಲ್ಲಿ ಬೀಳು ವದುಂಟು ಆದರೆ ಪರಮಾತ್ಮನನ್ನು ಸೇರಿದವರಿಗೆ ಹಿಂತಿರುಗುವದೆಂಬುದಿಲ್ಲ – ಎಂದು ವೇದದಲ್ಲಿದೆ. ಪರಮಾತ್ಮನನ್ನು ಪಡೆಯುವದಕ್ಕೆ ಪರಮಾತ್ಮನೇ ಸಾಧನನಾಗುತ್ತಾನೆಂಬುದು ಶ್ಲೋಕದ ಭಾವಾರ್ಥವು.

148. ಮೂರು ಪ್ರಮಾಣಗಳು

148. 10–28. 1.ಪ್ರತ್ಯಕ್ಷ, ಅನುಮಾನ, ಶಬ್ದ–ಎಂಬ ಮೂರು ಪ್ರಮಾಣಗಳನ್ನು

ಕವಿಯು ತಿಳಿಸಿರುತ್ತಾನೆ. ಪ್ರತ್ಯಕ್ಷವೆಂದರೆ ಇಂದ್ರಿಯಗಳಿಂದ ವಿಷಯವನ್ನು ಅರಿಯುವದು; ಅನುಮಾನವೆಂದರೆ ಪ್ರತ್ಯಕ್ಷದಿಂದ ತಿಳಿದ ಒಂದು ಹೆಗ್ಗುರುತಿನಿಂದ ಅದಕ್ಕೆ ಸಂಬಂಧಪಟ್ಟ ಮತ್ತೊಂದನ್ನು ಊಹಿಸುವದು; ಶಬ್ದವೆಂದರೆ ತಿಳಿದವರು ಹೇಳುವ ಮಾತಿನಿಂದ ಅಥವಾ ವೇದದಿಂದ ತಿಳಿಯುವದು. 2. ಪರಮಾತ್ಮನು ಸೃಷ್ಟಿ ಮಾಡಿರುವ ಭೂಮಿಯೇ ಮುಂತಾದದ್ದು ನಮಗೆ ಪ್ರತ್ಯಕ್ಷವಾಗಿ ಕಾಣುತ್ತದೆಯಾದರೂ ಅದರ ಸ್ವರೂಪವೆಲ್ಲ ನಮಗೆ ಇಷ್ಟೆಂದು ಗೊತ್ತಾಗಿಲ್ಲ. ಇದಕ್ಕೆ ಕಾರಣವಾಗಿರುವ ಪರಮಾತ್ಮನನ್ನು ವೇದದಿಂದಲೂ ಅದಕ್ಕೆ ಅನುಸಾರವಾದ ಯುಕ್ತಿಯಿಂದಲೂ ತಿಳಿಯಬೇಕಾಗಿರುವದರಿಂದ ಅವನ ಸ್ವರೂಪವನ್ನು ಇಷ್ಟೊಂದು ಗೊತ್ತುಮಾಡಿ ಹೇಳುವದಕ್ಕೆ ಆಗುವದಿಲ್ಲವೆಂಬುದು ಸ್ಪಷ್ಟವೇ ಆಗಿದೆಯೆಂದು ಭಾವ. 3. 'ಯಾವದರಿಂದ ಈ ಭೂತಗಳು ಹುಟ್ಟುತ್ತವೆಯೋ ಏತರಿಂದ ಹುಟ್ಟಿ ಇದ್ದುಕೊಂಡಿರುತ್ತವೆಯೋ ಕೊನೆಗೆ ಯಾವದನ್ನು ಸೇರಿ ಅಡಗುತ್ತವೆಯೋ ಅದೇ ಬ್ರಹ್ಮವು' ಎಂಬ ತೈತ್ತಿರೀಯಶ್ರುತಿಯೇ ಮುಂತಾದ ವೇದವಾಕ್ಕು ಪರಮಾತ್ಮನನ್ನು ತಿಳಿಸುತ್ತದೆ. ಭೂಮಿಯೇ ಮುಂತಾದಕ್ಕೆ ಒಬ್ಬ ಕರ್ತನಿರಬೇಕು, ಏಕೆಂದರೆ ಗಡಿಗೆ ಮುಂತಾದ್ದರಂತೆ ಅದೂ ಹೊಸದಾಗಿ ಉಂಟಾದ ಕಾರ್ಯವಾಗಿರುತ್ತದೆ, ಎಂಬುದೇ ಮೊದಲಾದದ್ದು ಪರಮಾತ್ಮನನ್ನು ಊಹಿಸುವದಕ್ಕೆ ಅನುಮಾನಪ್ರಮಾಣವು. ಇವೆರಡರಿಂದ ಪರಮಾತ್ಮನನ್ನು ತಿಳಿದುಕೊಳ್ಳಬೇಕೇ ಹೊರತು ಪ್ರತ್ಯಕ್ಷವಾಗಿ ತಿಳಿಯುವದಕ್ಕೆ ಆಗುವದಿಲ್ಲ, ಏಕೆಂದರೆ ಅವನಲ್ಲಿ ಶಬ್ದ, ಸ್ಪರ್ಶ–ಮುಂತಾದ ಇಂದ್ರಿಯಕ್ಕೆ ಸಿಕ್ಕುವ ಗುಣವಿಲ್ಲ – ಎಂದು ವೇದಾಂತಿಗಳು ಹೇಳುತ್ತಾರೆ

149. ಅಗಣಿತಗುಣಗಣಿ ಪರಮಾತ್ಮ

149. 10–32. ಪರಮಾತ್ಮನ ಗುಣಗಳು ಲೆಕ್ಕವಿಲ್ಲದಷ್ಟು ಇರುವದರಿಂದ ಅವುಗಳನ್ನು ಪೂರ ಹೊಗಳಿ ಮುಗಿಸುವದು ಯಾರಿಂದಲೂ ಅಗುವದಿಲ್ಲವೆಂದು ಕವಿಯು ವರ್ಣಿಸುತ್ತಾನೆ. ಭಾಗವತದಲ್ಲಿಯೂ ಇಂಥ ವರ್ಣನೆಯೇ ಇದೆ. (ವಿಷ್ಣುವಿನ ವೀರ್ಯದ ಲೆಕ್ಕವನ್ನು ಯಾರು ಮಾಡುವನೆಂದರೆ, ಭೂಮಿಯಲ್ಲಿ ಧೂಳಿನ ಕಣಗಳ ಲೆಕ್ಕವನ್ನು ಮಾಡಬಲ್ಲಂಥ ಜಾಣನು.) ಪುಷ್ಪದಂತನ ಮಹಿಮ್ನ ಸ್ತೋತ್ರದಲ್ಲಿಯೂ ಇದನ್ನೇ ಹೇಳಿದೆ. (ಅಂಜನಗಿರಿಯಷ್ಟು ಕಾಡಿಗೆಯು ಸಮುದ್ರವೆಂಬ ಮಷಿಕುಡಿಕೆಯಲ್ಲಿದ್ದರೆ, ಕಲ್ಪ ವೃಕ್ಷದ ಕೊಂಬೆಯ ಲೇಖನಿಯಾದರೆ, ಭೂಮಿಯೇ ಕಾಗದವಾದರೆ, ಶಾರದೆಯೇ ಯಾವಾಗಲೂ ಬರೆಯುತ್ತಿದ್ದರೆ, ಎಲೈ ಈಶ್ವರನೆ, ಆಗಲೂ ನಿನ್ನ ಗುಣಗಳ ಕಡೆಹಾಯುವದಾಗುವದಿಲ್ಲ.)

150. ಸರಸ್ವತೀ ವಾಣೀಸ್ವರೂಪ

150. 10–36. 1. ಎದೆ, ಕಂಠ, ತಲೆ, ನಾಲಗೆಯ ಬುಡ, ಹಲ್ಲು, ಮೂಗು, ತುಟಿ, ದವಡೆ–ಇವು ಎಂಟು ವರ್ಣಗಳು ಹುಟ್ಟುವ ಸ್ಥಾನಗಳು. ಇಂಥಿಂಥ ಸ್ಥಾನಗಳಲ್ಲಿ ವರ್ಣಗಳನ್ನು ಉಚ್ಚರಿಸಬೇಕೆಂದೂ ಹೀಗೆಹೀಗೆಯೆ ಉಚ್ಚರಿಸಬೇಕೆಂದೂ ನಿಯಮವುಂಟು. ವೇದವನ್ನು ಮೊದಲು ಉಚ್ಚರಿಸಿದ್ದ ವಿಷ್ಣುವು ಈಗ ಆಡಿದ್ದರಿಂದ ಮಾತಿಗೆ ಹೆಚ್ಚಿನ ಸಾಫಲ್ಯವು ಬಂತು ಎಂದು ಭಾವ. 2.ಪರಾ, ಮಧ್ಯಮಾ, ಪಶ್ಯಂತೀ, ವೈಖರೀ–ಎಂದು ನಾಲ್ಕು ಸ್ಥಿತಿಯಲ್ಲಿ ಮಾತು ಇರುವದೆಂದೂ ಅದು ಕ್ರಮವಾಗಿ ಮೂಲಾಧಾರ, ನಾಭಿ, ಹೃದಯ, ಮುಖ– ಎಂಬ ನಾಲ್ಕು ಸ್ಥಾನಗಳಲ್ಲಿ ತೋರಿಕೊಳ್ಳುವದೆಂದೂ ಆಗಮಿಕರು ಹೇಳುತ್ತಾರೆ. ಪರಮಾತ್ಮನು ಆಡಿದ ಮಾತು ಕ್ರಮವಾಗಿ ಈ ಹೆಚ್ಚಾಗಿ ನಾಲ್ಕು ಸ್ಥಿತಿಗಳನ್ನು ಪಡೆದು ಕೊನೆಗೆ ದೇವತೆಗಳಿಗೆ ಕೇಳಬಂತು ಎಂದೂ ಅರ್ಥಮಾಡಿಕೊಳ್ಳಬಹುದಾಗಿದೆ.] 3.ಪರಮಾತ್ಮನನ್ನು 'ಪುರಾಣಕವಿ'ಎಂದು ವರ್ಣಿಸಿರುವದರಿಂದ ವೇದವು ಈಶ್ವರವಾಕ್ಯವೆಂದು ಹೇಳುವ ನೈಯಾಯಿಕರ ಮತವನ್ನು ಕಾಳಿದಾಸನು ಒಪ್ಪಿದ್ದರೂ ಒಪ್ಪಿರಬಹುದೆಂದು ತೋರುತ್ತದೆ; ಅಥವಾ "ಆದಿಯಲ್ಲಿ ವೇದವನ್ನು ಉಚ್ಚರಿಸಿದವನು' ಎಂಬುದಿಷ್ಟೇ ತಾತ್ಪರ್ಯವಿದ್ದರೂ ಇರಬಹುದು. ಏಕೆಂದರೆ ತನ್ನ ಸ್ತುತಿಯಲ್ಲಿ ವೇದಾಂತಿಗಳ ಮತವನ್ನೇ ಅನುಸರಿಸಿರುವ ಕವಿಯು ವೇದವು ಅಪೌರುಷೇಯವೆಂಬ ಮತವನ್ನೆ ಒಪ್ಪಿರುವನೆಂದು ಇಟ್ಟುಕೊಳ್ಳುವದು ಹೆಚ್ಚು ಯುಕ್ತವಾಗಿದೆ.

151. ಗಂಗಾವಾಹಿನಿಯ ಕಥೆ

151. 10–37. 1. ಶಿವನ ಗಾನವನ್ನು ಕೇಳಿದ ವಿಷ್ಣುವಿನ ಶರೀರವು ಕರಗಿ ಗಂಗೆಯು ಹುಟ್ಟಿದಳೆಂದೂ ಗಂಗೆಯನ್ನು ಕಂಡು ವಿಷ್ಣುವು ಮೋಹಿತನಾಗಲು ಲಕ್ಷ್ಮಿಯು ಅಸೂಯಾಗ್ರಸ್ತಳಾದಳೆಂದೂ ಆಗ ಗಂಗೆಯು ವಿಷ್ಣುವಿನ ಪಾದದಲ್ಲಿ ಅಡಗಿಕೊಂಡಳೆಂದೂ ದೇವತೆಗಳು ವಿಷ್ಣುವನ್ನೂ ಲಕ್ಷ್ಮಿಯನ್ನೂ ಪ್ರಾರ್ಥಿಸಲು ವಿಷ್ಣುವಿನ ಎಡಹೆಬ್ಬೆಟ್ಟಿನಿಂದ ಮತ್ತೆ ಉದ್ಭವಿಸಿದಳೆಂದೂ ಪುರಾಣದ ಕಥೆ. 2.ಗಂಗೆಗೆ ಕಣ್ಣಿಗೆ ಕಾಣಿಸುವ ರೂಪವುಂಟು. ಕಣ್ಣಿಗೆ ಕಾಣಿಸುವ ರೂಪವಿಲ್ಲದ ವಿಷ್ಣುವಿನ ವಾಕ್ಕು ಇದರ ಹಾಗೆ ಶುಭ್ರವಾಗಿತ್ತೆಂದು ವರ್ಣಿಸಿರುವದು ಒಂದು ವಿಶೇಷವಾದ ಉತ್ಪ್ರೇಕ್ಷೆ.

152. ತಮೋಗುಣದ ರಾವಣ

10–38 1.ಪ್ರಾಣಿಗಳಲ್ಲಿ ಸತ್ತ್ವ, ರಜಸ್ಸು, ತಮಸ್ಸು–ಎಂಬ ಮೂರು / ಗುಣಗಳಿರುವವೆಂದೂ ಇವುಗಳಲ್ಲಿ ಒಂದೊಂದು ಹೆಚ್ಚಿದಾಗ ಮಿಕ್ಕ ಎರಡೂ ಅದಕ್ಕೆ ವಶವಾಗಿರುವವೆಂದೂ ಸಾಂಖ್ಯಶಾಸ್ತ್ರದಲ್ಲಿ ವರ್ಣಿಸಿದೆ; ತಮೋಗುಣವು ಹೆಚ್ಚಿದಾಗ ಅದಕ್ಕೆ ಸತ್ತ್ವಗುಣವೂ ರಜೋಗುಣವೂ ವಶವಾಗಿಬಿಡುವಂತೆ ರಾವಣನಿಗೆ

ನಿಮ್ಮ ಮನಸ್ಸಿನ ಪ್ರಭಾವವೂ ಶರೀರದ ಪರಾಕ್ರಮವೂ ವಶವಾಗಿರುವವೆಂಬುದನ್ನು ನಾನು ಬಲ್ಲೆನು ಎಂದು ಭಗವಂತನು ಹೇಳಿದ್ದಾನೆ. 2.ಅನುಭಾವವು ಸತ್ವದ ಫಲವಾದ ಮನಸ್ಸಿನ ಗುಣವು; ಪರಾಕ್ರಮವು ರಜಸ್ಸಿನ ಫಲವಾದ ಶರೀರದ ಗುಣವು; ಆದ್ದರಿಂದ ರಾವಣನನ್ನು ತಮಸ್ಸಿಗೆ ಹೋಲಿಸಿರುವದು ಇಲ್ಲಿ ಬಹು ಚೆನ್ನಾಗಿ ಒಪ್ಪುತ್ತದೆ.

153. ರಾವಣನ ದುಷ್ಟತನ

153. 10–39. ರಾವಣನು ಅಧರ್ಮಕ್ಕೆ ಹೆದರದೆ ಕಂಡವರ ಹೆಂಡಿರನ್ನು ಹಿಡಿದು ಭೋಗಿಸುತ್ತಿದ್ದನು; ದೇವತೆಗಳನ್ನು ಸೋಲಿಸಿ ಅವರ ವನವನ್ನು ಹಾಳುಮಾಡಿ ಅವರ ಹೆಂಡತಿಯರನ್ನು ಸೆರೆಹಿಡಿದಿದ್ದನು; ಋಷಿಗಳ ಕರ್ಮಕ್ಕೆ ಕಂಟಕನಾಗಿ ಅವರನ್ನು ಹಿಂಸಿಸುತ್ತಿದ್ದನು; ಸೂರ್ಯಾದಿಗಳು ಕೂಡ ಅವನಿಗೆ ಹೆದರುತ್ತಿದ್ದರು.

154. ಅಧರ್ಮನಾಶ – ದೇವನ ಗುರಿ

154. 10–40. ತಿಳಿದವರು ತಮ್ಮ ಕೆಲಸಕ್ಕೆ ಮತ್ತೊಬ್ಬರಿಂದ ಹೇಳಿಸಿಕೊಳ್ಳುವುದಿಲ್ಲ. ತಾವೇ ಪ್ರವೇಶಿಸುತ್ತಾರೆ ಎಂಬ ಅಭಿಪ್ರಾಯವನ್ನು ಚೆನ್ನಾಗಿ ತೋರಿಸುವದಕ್ಕೆ ವಾಯುವಿನ ದೃಷ್ಟಾಂತವನ್ನು ಕೊಟ್ಟಿರುತ್ತದೆ. ಪರಮಾತ್ಮನಿಗೆ ನಿಜವಾಗಿ ಆಗಬೇಕಾದ ಸ್ವಕಾರ್ಯವೇನೂ ಇಲ್ಲದಿದ್ದರೂ ಅಧರ್ಮವನ್ನು ನಾಶಗೊಳಿಸಿ ಧರ್ಮವನ್ನು ಸ್ಥಾಪನೆ ಮಾಡುವದು ಅವನಿಗೆ ಸ್ವಭಾವವು. 24, 31ನೆಯ ಶ್ಲೋಕಗಳನ್ನು ನೋಡಿ, ಇಂದ್ರನು ಬಯಸುವ ರಾವಣನ ವಧೆಯು ಧರ್ಮ ಕಾರ್ಯವಾದ್ದರಿಂದ 'ನಮ್ಮಿಬ್ಬರಿಗೂ ಒಂದೇ ಕಾರ್ಯವಿದೆ' ಎಂದಿದ್ದಾನೆ.

155. ರಾಮನಿಗೆ ಮೀಸಲಾಗಿದೆ ರಾವಣವಧೆ

155. 10–41. 1. 1.ರಾವಣನು ಗೋಕರ್ಣದಲ್ಲಿ ಹತ್ತು ಸಾವಿರ ವರ್ಷಗಳು ಪಂಚಾಗ್ನಿಗಳ ನಡುವೆ ಇದ್ದುಕೊಂಡು ಉಗ್ರ ತಪಸ್ಸನ್ನು ಮಾಡಿ ತನ್ನ ತಲೆಯನ್ನು ಸಾವಿರ ವರ್ಷಕ್ಕೊಂದೊಂದಾಗಿ ಹೋಮಮಾಡುತ್ತ ಬಂದನು. ಹತ್ತನೆಯ ತಲೆಯನ್ನು ಕತ್ತರಿಸಲು ಯತ್ನಿಸುವದಕ್ಕೆ ಹೋಗುವ ಹೊತ್ತಿಗೆ ಬ್ರಹ್ಮನು ಪ್ರಸನ್ನನಾಗಿ ಅವನಿಗೆ ಕೇಳಿದ ವರವನ್ನು ಕೊಟ್ಟನು– ಎಂದು ರಾಮಾಯಣದ ಉತ್ತರಕಾಂಡದಲ್ಲಿದೆ, ಈಶ್ವರನನ್ನು ಕುರಿತು ತಪಸ್ಸುಮಾಡಿದನೆಂದು ಮಲ್ಲಿನಾಥ ವ್ಯಾಖ್ಯಾನದಲ್ಲಿದೆ. ಇದೂ ಬೇರೆ ಪುರಾಣದಲ್ಲಿರಬಹುದು; ಆದರೆ ಮುಂದೆ 42, 43ರಲ್ಲಿ ಬ್ರಹ್ಮನ ವಿಷಯವನ್ನೇ ತಿಳಿಸಿದೆ. 2.ರಾವಣನು ತನ್ನ ತಲೆಯನ್ನು ತಾನೇ ಕಡಿದುಕೊಳ್ಳದೆ ನನ್ನ ಚಕ್ರಕ್ಕಾಗಿ ಅದನ್ನು ಮೀಸಲು ಕಟ್ಟಿರುತ್ತಾನೆಂದು ಇಲ್ಲಿ ವಿಷ್ಣುವು ಹೇಳಿರುವನು. ಇದರಿಂದ ನಾನು ಅವನನ್ನು ನಿಶ್ಚಯವಾಗಿ ಕೊಂದೇ ಕೊಲ್ಲುವೆನು'– ಎಂದು ಹೇಳಿದಂತೆ ಆಯಿತು.

156. ಎಂಟು ಬಗೆಯ ದೈವಸೃಷ್ಟಿ

156. 10–43. ರಾವಣನು ಮನುಷ್ಯರಿಂದ ತನಗೆ ಯಾವ ಅಪಾಯವೂ ಆಗಲಾರದೆಂಬ ಒಣನಂಬಿಕೆಯಿಂದ ಅವರನ್ನು ಅನಾದರಮಾಡಿ ದೇವಸೃಷ್ಟಿಯಲ್ಲಿ ಹುಟ್ಟಿರುವವರಿಂದ ತನಗೆ ಮರಣವಾಗದ ಹಾಗೆ ಬ್ರಹ್ಮನಿಂದ ವರವನ್ನು ಪಡೆದು ಕೊಂಡಿದ್ದನು. ಆದ್ದರಿಂದ ಅವನಿಗೆ ಮನುಷ್ಯರಿಂದಲೆ ಮರಣವಾಗಬೇಕಾಯಿತು. 2. ದೈವಸೃಷ್ಟಿಯಿಂದ ಹುಟ್ಟಿರುವವರು ಎಂಟು ಬಗೆ:– (1) ವಿಬುಧರು ಎಂದರೆ ದೇವತೆಗಳು (2) ಪಿತೃಗಳು (3) ಅಸುರರು (4) ಗಂಧರ್ವರು, ಅಪ್ಸರರು (5) ಯಕ್ಷರು, ರಾಕ್ಷಸರು (6) ಭೂತಪ್ರೇತಪಿಶಾಚಾದಿಗಳು (7) ಸಿದ್ಧ ಚಾರಣವಿದ್ಯಾಧರರು (8) ಕಿನ್ನರರೇ–ಮುಂತಾದವರು. ಹೀಗೆಂದು ಭಾಗವತದಲ್ಲಿದೆ.

157. ರಾವಣನ ಶಿರವೇ ಪುಷ್ಪ

157. 10–44. 'ಪೂಜೆಗೆ ಹೂಗಳು ಬೇಕಾಗಿರುವದರಿಂದ ರಾವಣನ ತಲೆಗಳನ್ನು ಹೂಗಳೆಂದು ವರ್ಣಿಸಿರುತ್ತದೆ.

158. ನಳಕೂಬರ ಕೊಟ್ಟ ಶಾಪ

158. 10–47. ಪೂರ್ವದಲ್ಲಿ ರಂಭೆಯು ಕುಬೇರನ ಮಗನಾದ ನಲಕೂಬರನಲ್ಲಿಗೆ ಸಂಕೇತದಂತೆ ಹೋಗುತ್ತಿರುವಲ್ಲಿ ಕೈಲಾಸಪರ್ವತದಲ್ಲಿ ತನ್ನ ಶಿಬಿರವನ್ನು ಬಿಟ್ಟಿದ್ದ ರಾವಣನು ಅವಳನ್ನು ಕಂಡು ಮೋಹಗೊಂಡು ಅವಳು ವಿಷಯವನ್ನು ತಿಳಿಸಿದರೂ ಕೇಳದೆ ಅವಳ ಮೇಲೆ ಅತ್ಯಾಚಾರವನ್ನು ನಡೆಸಿದನು. ಇದನ್ನು ಕೇಳಿ ನಲಕೂಬರನು ಇನ್ನು ಮೇಲೆ ಬಲಾತ್ಕಾರದಿಂದ ಸ್ತ್ರೀಯರ ಮೇಲೆ ಬಿದ್ದರೆ ರಾವಣನ ತಲೆ ನೂರು ಹೋಳಾಗಲಿ' ಎಂದು ಶಾಪವನ್ನು ಕೊಟ್ಟನಂತೆ. ಈ ಕಥೆಯು ಭಾರತದಲ್ಲಿದೆ. 2.ಪತಿವ್ರತಾಸ್ತ್ರೀಯರು ತಮ್ಮ ಪತಿಗಳನ್ನು ಅಗಲಿರುವಾಗ ಜಡೆಯನ್ನು ನೀಳವಾಗಿ ಬಿಡದೆ ತಲೆಯ ಕೂದಲನ್ನು ಗಂಟು ಹಾಕಿಕೊಂಡಿರುತ್ತಿದ್ದರು. ಈ ಪದ್ಧತಿಯನ್ನು ಕವಿಯು ಇಲ್ಲಿ ಸೂಚಿಸಿರುತ್ತಾನೆ.

159. ರಾಮಾಯಣದ ವ್ಯಕ್ತಿಗಳ ಜನ್ಮಾಂತರಗಳು

159. 10–49. ಇಂದ್ರ, ಸೂರ್ಯ–ಮುಂತಾದ ದೇವತೆಗಳು ತಮ್ಮ ಒಂದೊಂದಂಶ ದಿಂದ ವಾಲಿ, ಸುಗ್ರೀವ–ಮುಂತಾದ ರೂಪದಿಂದ ಹುಟ್ಟಿದರು. ಯಾರು ಯಾರು ಯಾವ ಅಂಶದಿಂದ ಹುಟ್ಟಿದರೆಂಬುದನ್ನು ರಾಮಾಯಣದಲ್ಲಿ ವಿಸ್ತಾರವಾಗಿ ತಿಳಿಸಿದೆ.

160. ನಾಲ್ಕು ಬಗೆಯ ಕರ್ಮಗಳು

160. 10–50. 1.ಕರ್ಮಗಳು– ನಿತ್ಯ, ನೈಮಿತ್ತಿಕ, ಕಾಮ್ಯ, ಪ್ರಾಯಶ್ಚಿತ್ತ –ಎಂದು ನಾಲ್ಕು ಬಗೆ. (ಅ) ನಿತ್ಯವೆಂದರೆ ದಿನದಿನವೂ ಅವಶ್ಯವಾಗಿ ಮಾಡ ಬೇಕಾದ

ಸಂಧ್ಯಾವಂದನೆಯೇ ಮುಂತಾದವು. (ಆ) ನೈಮಿತ್ತಿಕವೆಂದರೆ ಗ್ರಹಣವೇ ಮುಂತಾದ ನಿಮಿತ್ತಗಳಿಂದ ಮಾಡಬೇಕಾದ ಕರ್ಮಗಳು. (ಇ) ಕಾಮ್ಯವೆಂದರೆ ಏನಾದರೊಂದು ಫಲವನ್ನು ಉದ್ದೇಶಿಸಿ ಮಾಡುವ ಕರ್ಮಗಳು (ಈ) ಪ್ರಾಯಶ್ಚಿತ್ತವೆಂದರೆ ದೋಷಪರಿಹಾರಕ್ಕಾಗಿ ಮಾಡಿಕೊಳ್ಳುವ ಕರ್ಮಗಳು.

161. ಚರು ಎಂದರೇನು?

161. 10–51. ವಿಷ್ಣುವಿನ ಹೊಟ್ಟೆಯಲ್ಲಿ ಹದಿನಾಲ್ಕು ಲೋಕಗಳೂ ಇರುವದರಿಂದ ಅವನು ಹೊಕ್ಕಿರುವ ಪಾಯಸ ಅಷ್ಟು ಭಾರವಾಗಿತ್ತೆಂದು ಭಾವ. 3.ಬಸಿಯದೆ ಇರುವದಾಗಿಯೂ ಆವಿಯಿಂದ ಬೇಯಿಸಲ್ಪಟ್ಟದ್ದಾಗಿಯೂ ಇರುವ ಅನ್ನಕ್ಕೆ 'ಚರು'ವೆಂಬ ಹೆಸರನ್ನು ಯಾಜ್ಞಿಕರು ಕೊಟ್ಟಿರುತ್ತಾರೆ. (ಚರು) ಎಂಬುದು ಬೇಯಿಸುವ ತಪ್ಪಲೆಗೆ ಹೆಸರೆಂದು ಅದರಲ್ಲಿರುವದರಿಂದ ಗೌಣವಾಗಿ ಅನ್ನಕ್ಕೂ ಈ ಹೆಸರು ಬಂದಿದೆಯೆಂದೂ ಕೆಲವರ ಮತ.

162. ಪಾಯಸದ ವಿಚಾರ

162. 10–52. 1. ಸಮುದ್ರವನ್ನು ದೇವತೆಗಳು ಕಡೆದಾಗ ಕೊನೆಗೆ ಹುಟ್ಟಿದ ಅಮೃತವನ್ನು ಒಂದು ಪಾತ್ರೆಯಲ್ಲಿಟ್ಟುಕೊಂಡು ಧನ್ವಂತರಿಯೆಂಬ ಒಬ್ಬ ದಿವ್ಯಪುರುಷನು ತಂದನೆಂದು ಪುರಾಣದ ಕಥೆ. ಅಮೃತವನ್ನು ನೇರವಾಗಿ ಅವನ ಕೈಯಿಂದ ಇಂದ್ರನು ತೆಗೆದುಕೊಂಡನೆಂದು ಭಾರತದಲ್ಲಿಯಾಗಲಿ ವಿಷ್ಣು ಪುರಾಣದಲ್ಲಿಯಾಗಲಿ ಇರುವದಿಲ್ಲ. ಕಾಳಿದಾಸನು ಮತ್ತೆ ಯಾವದೋ ಬೇರೆ ಪುರಾಣವನ್ನು ಅನುಸರಿಸಿ ಹೀಗೆಂದು ಬರೆದಿರಬೇಕು. ಅಥವಾ ದೇವತೆಗಳಿಗೆ ಅಮೃತವು ಸೇರಿದ್ದರಿಂದ ದೇವತೆಗಳ ಒಡೆಯನಾದ ಇಂದ್ರನು ತೆಗೆದುಕೊಂಡನೆಂದು ಹೇಳಿದ್ದರೂ ಹೇಳಿರಬಹುದು. 2.ಪ್ರಾಜಾಪತ್ಯನೆಂದರೆ ಬ್ರಹ್ಮನ ಮಗನಾದ ವಸಿಷ್ಠನೆಂದು ಕೆಲವು ವ್ಯಾಖ್ಯಾನಕಾರರು ಬರೆದಿರುತ್ತಾರೆ; ಅದರೆ ಇದು ರಾಮಾಯಣಕ್ಕೆ ವಿರೋಧವಾಗಿರುತ್ತದೆ.

163. ಪಾಯಸದ ಹಂಚಿಕೆ

163. 10–55. ರಾಜನು ಕೌಸಲ್ಯೆಗೂ ಕೈಕೇಯಿಗೂ ಪಾಯಸವನ್ನು ಕೊಟ್ಟು ಅವರಿಬ್ಬರಿಂದ ಸುಮಿತ್ರೆಗೆ ಕೊಡಿಸಿದನೆಂದು ಇಲ್ಲಿ ವರ್ಣಿಸಿದೆಯಷ್ಟೆ; ಆದರೆ ರಾಮಾಯಣದಲ್ಲಿ ಹೀಗಿಲ್ಲ; ರಾಜನೇ ಮೂರು ಜನ ಹೆಂಡತಿಯರಿಗೂ ಹಂಚಿದನೆಂದು ಹೇಳಿದೆ. ಕವಿಯು ರಾಮಾಯಣದ ಕ್ರಮವನ್ನು ಬಿಟ್ಟು ಬೇರೆ ವಿಧವಾಗಿ ವರ್ಣಿಸಿರುವದಕ್ಕೆ ಒಬ್ಬೊಬ್ಬರು ಒಂದೊಂದು ವಿಧವಾಗಿ ತಾತ್ಪರ್ಯವನ್ನು ಕಲ್ಪಿಸುತ್ತಾರೆ. ರಾಜನು ಕೌಸಲ್ಯೆಗೂ ಕೈಕೇಯಿಗೂ ಮೊದಲು ಕೊಟ್ಟು ಅವರಿಗೆ ಸಂತೋಷಪಡಿಸಿದ ಮೇಲೆ ಅವರಿಂದಲೆ ಸುಮಿತ್ರೆಗೆ ಕೊಡಿಸಿದ್ದರಿಂದ ಅವಳಿಗೆ

ಅವರಿಬ್ಬರಿಗಿಂತಲೂ ಹೆಚ್ಚಾಗಿಯೆ ಬಂದಂತಾಯಿತು ಎಂದು ಕೆಲವರು ಹೇಳುತ್ತಾರೆ. ಮತ್ತೆ ಕೆಲವರು ಸುಮಿತ್ರೆಯ ತಾಯಿ ವೈಶ್ಯಳಾದ್ದರಿಂದ ಅವಳು ನಿಜವಾಗಿ ಪತ್ನಿ ಎಂಬ ಶಬ್ದಕ್ಕೆ ಅರ್ಹಳಲ್ಲ. ಪತ್ನಿಯೆಂದರೆ ಯಜ್ಞದಲ್ಲಿ ಗಂಡ ನೊಡನೆ ಭಾಗಿನಿಯಾಗುವದಕ್ಕೆ ತಕ್ಕವಳು. ಆದರೂ ಅವರು ತನ್ನ ಅಭಿಪ್ರಾಯವನ್ನು ಅರಿತು ಸುಮಿತ್ರೆಗೂ ಒಂದು ಅಂಶವನ್ನು ಕೊಡುವರೆಂಬ ನಂಬಿಕೆಯಿಂದ ಅವರಿಗೆ ಕೊಟ್ಟು ರಾಜನು ತನ್ನ ಜಾಣತನವನ್ನು ತೋರಿಸಿರುತ್ತಾನೆಂದು ಹೇಳುವರು. ಸುಮಿತ್ರೆಯು ಸಂಕರಜಾತಿಯವಳೆಂಬ ವಿಷಯವನ್ನು ರಾಮಾಯಣ ವ್ಯಾಖ್ಯಾನ ದಲ್ಲಿಯೂ ಹೇಳಿದೆ.

164. ಇತರ ರಾಮಾಯಣಗಳಲ್ಲಿ ಪಾಯಸದ ಹಂಚಿಕೆ

164. 10–56. ಇಲ್ಲಿರುವ ಪಾಯಸವಿಭಾಗಕ್ರಮಕ್ಕೂ ರಾಮಾಯಣದಲ್ಲಿರುವದಕ್ಕೂ ಸರಿಯಾಗುವದಿಲ್ಲ. ಅಚ್ಚಾಗಿರುವ ರಾಮಾಯಣಪ್ರತಿಗಳಲ್ಲಿ ಕೌಸಲ್ಯೆಗೆ ಅರ್ಧವೂ ಕೈಕೇಯಿಗೆ ಎಂಟನೆಯಂಶವೂ ಸುಮಿತ್ರೆಗೆ ಎಂಟನೆಯ ಮೂರಂಶವೂ ಬಂತೆಂದು ಅಭಿಪ್ರಾಯವಾಗುವ ಶ್ಲೋಕಗಳಿವೆ. ಕೌಸಲ್ಯೆಗೆ ಅರ್ಧವನ್ನೂ ಕೈಕೇಯಿಗೆ ಉಳಿದ ಅರ್ಧದಲ್ಲಿ ಅರ್ಧವನ್ನೂ ಎಂದರೆ ಕಾಲುಪಾಲನ್ನೂ ಉಳಿದ ಕಾಲುಪಾಲನ್ನು ಎರಡು ಪಾಲುಮಾಡಿ ಸುಮಿತ್ರೆಗೂ ಕೊಟ್ಟನು ಎಂದಿದೆ. ಈ ಎರಡನೆಯ ರಾಮಾಯಣಪಾಠವನ್ನು ಮಲ್ಲಿನಾಥವ್ಯಾಖ್ಯಾನದಲ್ಲಿ ಅಂಗೀಕರಿಸಿದೆ. ಆದರೆ ಈ ಎರಡು ಪಾಠಕ್ಕೂ ಕವಿಯು ಹೇಳಿರುವದು ವಿರೋಧವಾಗಿದೆ. "ಕೌಸಲ್ಯೆಯೂ ಕೈಕೇಯಿಯೂ ತಮ್ಮ ತಮ್ಮ ಭಾಗದಲ್ಲಿ ಒಂದೊಂದಂಶವನ್ನು ಕೊಟ್ಟರು" ಎಂಬ ನರಸಿಂಹಪುರಾಣಾನುಸಾರವಾಗಿ ಕವಿಯು ವರ್ಣಿಸಿರುತ್ತಾನೆಂದು ಮಲ್ಲಿನಾಥವ್ಯಾಖ್ಯಾನದಲ್ಲಿ ಈ ವಿರೋಧಕ್ಕೆ ಸಮಾಧಾನವನ್ನು ಹೇಳಿರುತ್ತದೆ. ನಾಲ್ಕು ಜನ ಮಕ್ಕಳಿಗೂ ನಾಲ್ಕು ಸಮಾಂಶಗಳು ಬರುವಂತೆ ಕೌಸಲ್ಯೆಗೆ ಕಾಲುಪಾಲು, ಸುಮಿತ್ರೆಗೆ ಅರ್ಧ, ಕೈಕೇಯಿಗೆ ಕಾಲುಪಾಲು–ಹೀಗೆ ಪಾಯಸಾನ್ನವನ್ನು ಕವಿಯು ಹಂಚಿರುತ್ತಾನೆಂದೂ ಕಲ್ಪಿಸಬಹುದಾಗಿದೆ. ಈ ಕಲ್ಪನೆಯು ಅಧ್ಯಾತ್ಮರಾಮಾಯಣಕ್ಕೆ ಹೊಂದುತ್ತದೆ.

165. ಮಳೆ ವಿಚಾರ

165. 10–58. ಮಳೆ, ಹಿಮ–ಇವುಗಳನ್ನು ಬಿಡುವದಕ್ಕೆ ಸೂರ್ಯನ ಕಿರಣಗಳುಅನಂತವಾಗಿರುವವೆಂದೂ ಅವುಗಳಿಗೆ ಅಮೃತವೆಂದು ಹೆಸರೆಂದು ವರ್ಣಿಸುವದು ವಾಡಿಕೆ. ಸೂರ್ಯನ ಉಷ್ಣದಿಂದಲೆ ನೀರು ಆವಿಯಾಗಿ ಮಳೆಯಾಗುವದೆಂಬುದು ಪ್ರಸಿದ್ಧವು.

166. ವಿಷ್ಣುವಿನ ಚತುರಾಯುಧಗಳು

166. 10–60. ವಿಷ್ಣುವು ಅವರ ಗರ್ಭದಲ್ಲಿದ್ದಾನೆಂಬುದನ್ನು ಸೂಚಿಸುವುದಕ್ಕೆ ವಿಷ್ಣು ಸಾರೂಪ್ಯವನ್ನು ಹೊಂದಿದ ಅಂಗರಕ್ಷಕರು ಕನಸಿನಲ್ಲಿ ಅವರಿಗೆ ಕಾಣಿಸಿಕೊಳ್ಳುತ್ತಿದ್ದರೆಂದು ಭಾವ. 2. ವಿಷ್ಣುವಿನ ಆಯುಧಗಳ ಹೆಸರು ಗಳು:–(1) ಶಂಖ–ಪಾಂಚಜನ್ಯ, (2) ಕತ್ತಿ–ನಂದಕ, (3) ಗದೆ–ಕೌಮೋದಕಿ, (4) ಧನುಸ್ಸು–ಶಾರ್ಙ್ಗ, (5) ಚಕ್ರ–ಸುದರ್ಶನ.

167. ಕನಸಿನ ಅರ್ಥ

167. 10–61. ಈ ಗರುಡನು ವಿಷ್ಣುವಿನ ವಾಹನವಾದ್ದರಿಂದ ಅವರ ಗರ್ಭದಲ್ಲಿರುವ ವಿಷ್ಣುವಿನ ಸೇವೆಗೆ ನಿಂತನೆಂಬುದನ್ನು ಈ ಕನಸು ಸೂಚಿಸಿತು.

168. ಕೌಸ್ತುಭ– ಕಮಲ

168. 10–62. 1. ಕೌಸ್ತುಭವೆಂಬುದು ವಿಷ್ಣುವಿನ ಕೊರಳಲ್ಲಿರುವ ರತ್ನವು. ಅದನ್ನು ಹಾಕಿಕೊಂಡಿರೆಂದು ವಿಷ್ಣುವು ಲಕ್ಷ್ಮಿಯಲ್ಲಿ ನ್ಯಾಸವಾಗಿ ಕೊಟ್ಟಿದ್ದನೆಂದು ಇಲ್ಲಿ ವರ್ಣಿಸಿರುತ್ತದೆ. 2.ಲಕ್ಷ್ಮಿಯು ಕಮಲದಲ್ಲಿ ಹುಟ್ಟಿದವಳೆಂದೂ ಉದ್ದನೆಯ ಕಮಲವನ್ನು ಕೈಯಲ್ಲಿ ಹಿಡಿದಿರುವಳೆಂದೂ ರೂಢಿಯಾಗಿ ವರ್ಣಿಸುವರು.

169. ಸಪ್ತರ್ಷಿಗಳ ವಿಚಾರ

169. 10–63. ಇಲ್ಲಿ ಹೇಳಿರುವ ಏಳು ಜನ ಬ್ರಹ್ಮರ್ಷಿಗಳು ಯಾರೆಂಬ ವಿಷಯದಲ್ಲಿ ಮತಭೇಧಗಳಿವೆ. ಕಶ್ಯಪ್ಪನೇ ಮುಂತಾದವರೆಂದು ಮಲ್ಲಿನಾಥ ವ್ಯಾಖ್ಯಾನದಲ್ಲಿದೆ. ಈ ಸರ್ಗದ 16ನೆಯ ಶ್ಲೋಕದ ವಿಚಾರದಲ್ಲಿ ಹೇಳಿರುವ ಭ್ರಗು, ಮರೀಚಿ, ಅತ್ರಿ, ಪುಲಸ್ಯ, ಪುಲಹ, ಕ್ರತು, ವಸಿಷ್ಠ– ಇವರೇ ಆಗಿದ್ದರೂ ಆಗಿರಬಹುದು. ಕುಮಾರಸಂಭವದಲ್ಲಿ ಕವಿಯು ಬರೆದಿರುವ ಸಪ್ತರ್ಷಿಗಳಲ್ಲಿ ಅಂಗಿರಸ್ಸು' ಎಂಬಾತನು ಒಬ್ಬನಾಗಿದ್ದಾನೆಂದು ತಿಳಿದುಬರುವದು. (ಕು.ಸಂ. 6–65ನೆಯ ಶ್ಲೋಕವನ್ನು ನೋಡಿ.). ಆ ಋಷಿಗಳನ್ನೆ ಇಲ್ಲಿ ಇಟ್ಟುಕೊಳ್ಳುವುದಾದರೆ ಮರೀಚಿ, ಅತ್ರಿ, ಅಂಗಿರಸ್ಸು, ಪುಲಸ್ಯ, ಪುಲಹ, ಕ್ರತು, ವಸಿಷ್ಠ–ಎಂಬ ಏಳು ಜನಗಳನ್ನು ಇಟ್ಟುಕೊಳ್ಳಬೇಕು. ಇವರನ್ನು ಮಹಾಭಾಗರತದಲ್ಲಿಯೂ ಹೇಳಿದೆ. ಒಬ್ಬ ವ್ಯಾಖ್ಯಾನಕಾರರೂ ಈ ಏಳು ಜನರನ್ನು ಕೊಟ್ಟಿರುತ್ತಾರೆ.

170. ಬ್ರಹ್ಮರ್ಷಿಗಳು ಯಾರು?

170. 10–63. 2. ಬ್ರಹ್ಮರ್ಷಿಗಳೆಂದರೆ:–ಬ್ರಹ್ಮ (ವೇದ) ವನ್ನು ಮೊದಲು ಹೇಳಿಕೊಟ್ಟ ಸಂಪ್ರದಾಯ ಪ್ರವರ್ತಕರು, ಅಥವಾ ಸಪ್ತರ್ಷಿಗಳಿಗೆ ಸಪ್ತಬ್ರಹ್ಮರೆಂದೂ ಹೆಸರುಂಟು. ಆದ್ದರಿಂದ ಬ್ರಹ್ಮರಾದ ಋಷಿಗಳು ಎಂದೂ ಅರ್ಥಮಾಡಬಹುದು.

3. ಪರಬ್ರಹ್ಮವೆಂದರೆ ವೇದವೆಂದು ಮಲ್ಲಿನಾಥವ್ಯಾಖ್ಯಾನಾನುಸಾರವಾಗಿ ಅರ್ಥವನ್ನು ಕೊಟ್ಟಿರುತ್ತದೆ. ಪರಮಾತ್ಮನೆಂದೂ ಅರ್ಥಮಾಡಬಹುದು.

171. ಜ್ಯೋತಿರ್ಲತೆ ವಿಚಾರ

171. 10–66. ರಾತ್ರೆಯ ಕಾಲದಲ್ಲಿ ಓಷಧಿಯೆಂಬ ಒಂದಾನೊಂದು ಗಿಡವು ದೀಪದಂತೆ ಬೆಳಕುಕೊಡುವದಂತೆ; ಸೂರ್ಯನು ಅಗ್ನಿಯಲ್ಲಿಯೂ ಓಷಧಿಗಳಲ್ಲಿಯೂ ತನ್ನ ಬೆಳಕನ್ನು ಇಟ್ಟು ಅಸ್ತವಾಗುತ್ತಾನೆಂದು ವರ್ಣಿಸುತ್ತಾರೆ. ರಾತ್ರಿಯಾಗುತ್ತಲೂ ಓಷಧಿಗೆ ಹೇಗೆ ಬೆಳಕು ಬರುವದೋ ಅದರಂತೆ ನವಮಾಸವು ತುಂಬುತ್ತಲೂ ಕೌಸಲ್ಯೆಗೆ ಸತ್ಪುತ್ರೋತ್ಪತ್ತಿಯಾಯಿತು ಎಂಬುದು ಉಪಮಾನದ ಭಾವ. ಓಷಧಿ ಗಿಡವನ್ನು ದೊಡ್ಡಬೆಲೆಯವರು ಜ್ಯೋತಿರ್ಲತೆ ಎಂದು ಹೇಳಿದ್ದಾರೆ.

172. ಪ್ರಥಮ ಮಂಗಳನಾಮ

172. 10–67. 1.ಪ್ರಥಮ ಎಂಬ ಮಾತಿಗೆ 'ಶ್ರೇಷ್ಠವಾದ' 'ಮೊದಲನೆಯ'ಎಂಬ ಎರಡು ಅರ್ಥಗಳುಂಟು. ಆದ್ದರಿಂದ 'ಪ್ರಥಮಮಂಗಲಮ್' ಎಂದರೆ ಅತ್ಯಂತ ಮಂಗಲವಾದ ಎಂದಾಗಲಿ, ಮೊದಲನೆಯ ಮಂಗಲವೆಂದಾಗಲಿ ಅರ್ಥವಾಗುವದು. ಎರಡನೆಯ ಅರ್ಥವನ್ನು ಇಟ್ಟುಕೊಂಡರೆ ಅಭಿರಾಮವಾಗಿದ್ದ ಶರೀರದಿಂದ ಬಂದ ಮೊದಲನೆಯ ಮಂಗಲಕರವಾದ ಹೆಸರು, ಮುಂದೆ ಸೀತಾಪತಿ, ರಾವಣಾರಿ/ ಮುಂತಾದ ಇನ್ನೂ ಎಷ್ಟೋ ಮಂಗಲಕರವಾದ ಹೆಸರುಗಳು ಬಂದಿವೆ ಎಂಬ ಭಾವವು ಹೊರಡುವದು.

173. ಪ್ರದೀಪ ನಾಮವಿಶೇಷ

173. 10–68. 1.ದೊಡ್ಡ ದೀಪವಿರುವ ಕಡೆಯಲ್ಲಿ ಸಣ್ಣ ದೀಪಗಳು ಮಂಕಾಗುವಂತೆ ಈ ಹುಡುಗನ ತೇಜಸ್ಸಿನ ಮುಂದೆ ದೀಪಗಳ ಬೆಳಕೇನೂ ತೋರಲಿಲ್ಲ–ಎಂದು ವರ್ಣಿಸುವದಕ್ಕಾಗಿ 'ಪ್ರದೀಪ' ಎಂಬ ವಿಶೇಷಣವನ್ನು ಹಾಕಿರುತ್ತಾನೆ. 2. ರಘುವಂಶ ಪ್ರದೀಪ–ಎಂಬ ವಿಶೇಷಣದಿಂದ ಈ ಕಾವ್ಯಕ್ಕೆ ರಾಮನೇ ಮುಖ್ಯನಾಯಕನೆಂಬುದನ್ನು ಸೂಚಿಸಿರುತ್ತದೆ.

174. ರಕ್ಷಾಗೃಹ

174. 3. ಹೆರಿಗೆಯ ಮನೆಯಲ್ಲಿ ರಕ್ಷಾರ್ಥವಾಗಿ ಕಾತ್ಯಾಯನಿ, ಸ್ಕಂದ–ಮುಂತಾದ ದೇವತೆಗಳನ್ನು ಪೂಜಿಸುತ್ತಾರೆಂಬುದರ ಮೇಲೆ ಅದಕ್ಕೆ ರಕ್ಷಾಗೃಹ (ಸೂತಿಕಾಗೃಹ) ವೆಂಬ ಹೆಸರು ಬಂದಿರುವದು.

175. ಶರತ್ಕಶಾ ಕೌಸಲ್ಯೆ

175. 10–69. ಮಗ್ಗಲುಹಾಸಿಗೆಯುನ್ನು ನದಿಯು ಮಳಲುದಡಕ್ಕೆ

ಹೋಲಿಸಿರುವದರಿಂದ ಅದು ಅತಿಸ್ವಚ್ಛವಾಗಿತ್ತೆಂದೂ ಮಗುವನ್ನು ಕಮಲಕ್ಕೆ ಹೋಲಿಸಿರುವದರಿಂದ ಅದು ಕೋಮಲಶರೀರವುಳ್ಳದ್ದಾಗಿತ್ತೆಂದೂ ಕೌಸಲ್ಯೆಯನ್ನು ಗಂಗೆಗೆ ಹೋಲಿಸಿದ್ದರಿಂದ ಆಕೆಯು ಪವಿತ್ರಳಾಗಿದ್ದಳೆಂದೂ ತಿಳಿಸಿದಂತಾಯಿತು. 2. ಮಳೆಗಾಲದಲ್ಲಿ ಪ್ರವಾಹವು ತುಂಬಿರುವ ಗಂಗೆಯು ಶರತ್ಕಾಲದಲ್ಲಿ ಮೊದಲಿನಂತೆ ಕುಗ್ಗಿಕೊಳ್ಳುವುದು;. ಗರ್ಭಿಣಿಯಾಗಿದ್ದ ಕೌಸಲ್ಯೆಯು ಕೂಸನ್ನು ಹಡೆದ ಮೇಲೆ ಕೃಶಳಾದಳೆಂದು ತಿಳಿಸುವದಕ್ಕೆ 'ಶರತ್ಕಶಾ'ಎಂಬ ವಿಶೇಷಣವನ್ನು ಕೊಟ್ಟಿದೆ.

176. ಚತುರ್ಮೂರ್ತಿವಿಷ್ಣು

176. 10–73. ಪೂರ್ವಕ್ಕೆ ಇಂದ್ರ, ದಕ್ಷಿಣಕ್ಕೆ ಯಮ, ಪಶ್ಚಿಮಕ್ಕೆ ವರುಣ, ಉತ್ತರಕ್ಕೆ ಕುಬೇರ–ಇವರೇ ಪಾಲಕರು. ವಿಷ್ಣುವು ನಾಲ್ಕುಮೂರ್ತಿಗಳುಳ್ಳವನಾಗಿ ಅವತರಿಸಿದ್ದಕ್ಕೆ ನಾಲ್ಕು ದಿಕ್ಕುಗಳನ್ನು ಕಾಪಾಡುವದೇ ಪ್ರಯೋಜನವೆಂದು ಭಾವವು.

177. ರಾವಣನ ಕಿರೀಟಗಳು

177. 10–75. 1.ರಾವಣನು ಹತ್ತು ತಲೆಗಳ ಮೇಲೂ ಕಿರೀಟವನ್ನು ಧರಿಸಿದ್ದನೆಂಬುದನ್ನು ಸೂಚಿಸುವದಕ್ಕೆ 'ಕಿರೀಟೇಭ್ಯಃ' ಎಂಬ ಬಹುವಚನವನ್ನು ಉಪಯೋಗಿಸಿದೆ. 2.ಮುಂದೆ ರಾಕ್ಷಸರಿಗೆ ತೊಂದರೆಯಾಗುವದೆಂಬುದನ್ನು ಕಿರೀಟದ ರತ್ನಗಳು ಉದುರಿದವೆಂಬ ದುಃಶಕುನವು ಸೂಚಿಸಿತೆಂದು ಭಾವ.

178. ನಾಲ್ವರ ಗೆಳೆತನದ ಸ್ವರೂಪ

178. 10–82. ವಾಯುವಹ್ನಿಗಳ ಉಪಮಾನದಿಂದ ರಾಮಲಕ್ಷ್ಮಣರೂ ಭರತ ಶತ್ರುಘ್ನರೂ ಒಂದೇ ಕಾರ್ಯದಲ್ಲಿ ಸೇರಿದ್ದರೆಂಬ ಅರ್ಥವನ್ನು ಚಂದ್ರಸಮುದ್ರಗಳ ಉಪಮಾನದಿಂದ ಸಮಾನದುಃಖವುಳ್ಳವರಾಗಿದ್ದರೆಂಬುದನ್ನೂ ತಿಳಿಸಿರುತ್ತದೆ.

179. ದಶರಥನ ಕಣ್ಣಲ್ಲಿ ನಾಲ್ವರು

179. 10–86. ಮೇಲುಬಿದ್ದ ದೈತ್ಯರ ಕತ್ತಿಗಳ ಅಲುಗನ್ನು ಮೊಂಡುಮಾಡಿರುವ ಚೌದಂತಗಳಿಂದೊಪ್ಪುವ ಐರಾವತದಂತೆಯೂ ಕಾರ್ಯಸಿದ್ಧಿಯಿಂದ ಹೊರತೋರುವ ನಾಲ್ಕು ಉಪಾಯಗಳಿಂದೊಪ್ಪುವ ರಾಜನೀತಿಯಂತೆಯೂ ಉದ್ದನೆಯಾಗಿ ತೋರುವ ನಾಲ್ಕು ತೋಳುಗಳಿಂದೊಪ್ಪುವ ವಿಷ್ಣುವಿನಂತೆಯೂ ವಿಷ್ಣುವಿನ ಅಂಶದಿಂದ ಉತ್ಪನ್ನರಾಗಿರುವ ರಾಮನೇ ಮುಂತಾದ ನಾಲ್ಕು ಮಕ್ಕಳಿಂದ ದಶರಥನು ಒಪ್ಪುತ್ತಿದ್ದನು.

180. ಐರಾವತ

180. 10–86. ಐರಾವತವು ಇಂದ್ರನ ಪಟ್ಟದಾನೆಯಾದ್ದರಿಂದ ದೈತ್ಯರ ಸಂಗಡ ಯುದ್ಧ ಮಾಡುವಾಗ ಅದರ ನಾಲ್ಕು ದಂತಗಳ ಮೇಲೆಯೂ ಕತ್ತಿಯ ಏಟುಗಳು

ಬೀಳುತ್ತಿದ್ದವು; ಅದರೆ ಕತ್ತಿಯ ಅಲುಗೇ ಮೊಂಡಾಗುತ್ತಿತ್ತೇ ಹೊರತು ಆನೆಗೇನೂ ಬಾಧೆಯಾಗುತ್ತಿರಲಿಲ್ಲ. 2.ಸಾಮ, ದಾನ, ಭೇದ, ದಂಡ–ಇವು ನಾಲ್ಕು ರಾಜನೀತಿಯ ಉಪಾಯಗಳು. 3. ಪಣಬದ್ಧವೆಂಬ ಶಬ್ದಕ್ಕೆ 'ಧನದ ಸಿದ್ಧಿ' ಎಂದು ಅಕ್ಷರಾರ್ಥವು; ಕಾರ್ಯಸಿದ್ಧಿ ಎಂದು ಮಲ್ಲಿನಾಥ ವ್ಯಾಖ್ಯಾನದಂತ ತಾತ್ಪರ್ಯವನ್ನು ಹೇಳಿದೆ.

ಅಧ್ಯಾಯ 11

181. ತಾಟಕಿಯ ಪೂರ್ವಕಥೆ

181. 11–14. ತಾಟಕಿಯ ಅಗಸ್ತ್ಯರಿಂದ ಶಾಪಗ್ರಸ್ತೆಯಾಗಿ ಅವನದ ಪ್ರದೇಶವನ್ನು ಹಾಳುಮಾಡುತ್ತಿದ್ದಾಳೆ ಎಂಬ ವೃತ್ತಾಂತವನ್ನು ತಿಳಿದು ರಾಮಲಕ್ಷ್ಮಣರು(ಸುಕೇತು ಪುತ್ರಿಯ ವೃತ್ತಾಂತವನ್ನು ಕೇಳಿದ ಬಳಿಕ)

ಆ ತರುಣರು ಈರ್ವರು ಬಿಲ್ಲಿನ ತುದಿಗಳನ್ನು ನೆಲದ ಮೇಲಿಟ್ಟು ಮೋಡಿಯಿಂದ ಹೆದೆಯೇರಿಸಿ ಟಂಕಾರಗೈದರು. ಎಂಬ ಗದ್ಯಾನುವಾದದಲ್ಲಿ ಆರಂಭದಲ್ಲಿ ಮುನಿಶಾಪ ವೃತ್ತಾಂತವನ್ನು ಸೇರಿಸಿದ್ದಾರೆ

ಪೂರ್ವಕಥೆ ಸೇರ್ಪಡೆ: "ಆಗಲಲ್ಲಿ ಹಿಂದೆ ಅಗಸ್ತ್ಯಮುನಿಯು– ಸುಕೇತು ವೆಂಬ ಯಕ್ಷನ ಮಗಳಾದ ತಾಟಕಿಯ ಕೆಟ್ಟ ನಡತೆಯನ್ನು ಕಂಡು, –ನಗೆ ಈ ಅಂದವಾದ ರೂಪವು ತೊಲಗಲಿ ಘೋರವಾದವಿಕಾರ ರೂಪವನ್ನು ತಾಳಿ ಮಾನುಷ ಮಾಂಸಾಹಾರಿಯಾಗಿ ಸಂಚರಿಸು–ಎಂದು ಅವಳನ್ನುಶಪಿಸಿದನು"

ಹೀಗೆ ಅನುವಾದವನ್ನು ಯಥಾವತ್ತಾಗಿ ಮಾಡುವುದರ ಜೊತೆಗೆ ಪೂರ್ವವೃತ್ತಾಂತ ಕಥೆಯನ್ನು ದೊಡ್ಡಬೆಲೆಯವರು ಸಂಕ್ಷಿಪ್ತವಾಗಿ ಸೇರಿಸಿದ್ದಾರೆ.

182. ಅಹಲ್ಯೆಯ ಪೂರ್ವಕಥೆ

182. 11–34. " ದೀರ್ಘ ತಪನಾದ ಗೌತಮಮುನಿಯ ಕಳತ್ರ ಇಂದ್ರನಿಗೆ ಕ್ಷಣಕಾಲ ಮಾತ್ರ ಕಳತ್ರವೆನಿಸಿ ಪತಿಯ ಸಿಟ್ಟಿನ ಬಿರುನುಡಿಯಿಂದ ಶಿಲೆಯಾಗಿ ಅದೃಶ್ಯ ಆಗಿ ಬಿದ್ದಿದ್ದು ಅಲ್ಲಿಯೇ" ಎಂದು ಅಹಲ್ಯೆಯ ಶಾಪದ ಪೂರ್ವಕಥೆಯನ್ನು ಅತಿ ಸಂಕ್ಷಿಪ್ತವಾಗಿ ಸೇರಿಸಿದ್ದಾರೆ ದೊಡ್ಡಬೆಲೆ ಅವರು.

183. ರಜಸ್ವಲೆ ವಿಚಾರ

183. 11–60. ರಜಸ್ವಲೆಯರಾದ ದಿಗ್ವನಿತೆಯರ ವರ್ಣನೆಯಲ್ಲಿ ದೊಡ್ಡಬೆಲೆಯವರು ರಜಸ್ವಲೆ ಕಲ್ಪನೆಯನ್ನು ಬಿಟ್ಟಿದ್ದಾರೆ.

184. ಪರಶುರಾಮನ ಕಥೆ

184. 11.61. ಪರಶುರಾಮನ ಕಥೆಯನ್ನು ಒಂದೇ ಸಾಲಿನಲ್ಲಿ ಕವಿ ಹೇಳಿದ್ದಾನೆ. ಕ್ಷತ್ರಿಯರನ್ನೆಲ್ಲ ಇರಿದು ರಕ್ತದ ಹೊಳೆಯಲ್ಲಿ ಮಿಂದು ಪಿತೃ ತರ್ಪಣ ನೆರವೇರಿಸಿದ ಭಾರ್ಗವರಾಮ.

ಅಧ್ಯಾಯ 14

185. ಭದ್ರನ ವಿಚಾರ

185. 14–31. ಭದ್ರ– ಗೂಢಚಾರನ ಹೆಸರು. ರಾಮನಿಗೆ ಸುದ್ದಿ ತಂದ ಈ ಗೂಢಚಾರನ ಹೆಸರು ಭವಭೂತಿಯ ಉತ್ತರರಾಮಚರಿತದಲ್ಲಿ ದುರ್ಮುಖ ಎಂದೂ ಆಧ್ಯಾತ್ಮ ರಾಮಾಯಣದಲ್ಲಿ ವಿಜಯ ಎಂದೂ ಹೇಳಲಾಗಿದೆ.

186. ಅವಿಚಾರಣೀಯ ವಿಚಾರ

186. 14.46– ಅವಿಚಾರಣೀಯ–ಸಕಾರಣವಿರಲಿ ಅಕಾರಣವಿರಲಿ ವಿಚಾರ ಮಾಡದೆ ಅನುಸರಿಸತಕ್ಕದ್ದು ಗುರುವಾಜ್ಞೆಯನ್ನು(ಹಿರಿಯರ ಅಪ್ಪಣೆಯನ್ನು ಇಲ್ಲಿ ಗುರು ಸಮಾನರಾದ ಅಣ್ಣನ ಆದೇಶವನ್ನು) ಪ್ರಶ್ನಿಸದೆ ಒಪ್ಪಿಕೊಳ್ಳತಕ್ಕದ್ದು ಎಂಬುದು ಲಕ್ಷ್ಮಣನ ನಿರ್ಧಾರ.

187. ಅಸಿಪತ್ರ ವೃಕ್ಷ

187. 14–48. ಅಸಿಪತ್ರ ವೃಕ್ಷ – ಕತ್ತಿಗಳಂತೆ ವಾದ ಎಲೆಗಳುಳ್ಳ ಮರ. ಯಮಲೋಕದಲ್ಲಿ ಪಾಪಿಗಳಿಗೆ ಶಿಕ್ಷೆ ನೀಡಲು ಇರುವ ಮರ. ರಾಮ–ಸೀತೆಯರ ಪಾಲಿಗೆ ಕೇಳಿದ್ದನ್ನು ಕೊಡುವ ಕಲ್ಪವೃಕ್ಷ ವಾಗುವ ಬದಲು ಇಲ್ಲಿ ಹತ್ತಿರ ಬಂದವರನ್ನು ಕತ್ತರಿಸುವ ಅಸಿಪತ್ರ ವೃಕ್ಷವಾದನು ಎಂದು ಭಾವ.

188. ಅಪಶಕುನ

188. 14–49. ಸವ್ಯೇತರ – ಬಲಗಣ್ಣು(ಎಡಗಣ್ಣು ಅಲ್ಲದ್ದು) ಅದುರಿದ್ದರಿಂದ ಅದು ಅಪಶಕುನವಾದ್ದರಿಂದ ಜಾನಕಿಗೆ ವಿಷಾದ ಉಂಟಾಯಿತು. ಹೆಂಗಸರಿಗೆ ಬಲಭುಜ ಅಥವಾ ಬಲಗಣ್ಣು ಅದುರಿದರೆ ಅಪಶಕುನ ಕೆಡುಕಾಗುತ್ತದೆ ಎಂದು ಶಕುನಶಾಸ್ತ್ರ ಹೇಳುತ್ತದೆ. ಅನುವಾದದಲ್ಲಿ ಎಡಗಣ್ಣು ಎಂದು ತಪ್ಪಾಗಿದೆ . ಬಲಗಣ್ಣು ಎಂದಿರಬೇಕು.

189. ಇಂದ್ರ – ಉಪೇಂದ್ರ

14–59. ಇಂದ್ರನಿಂದ ಉಪೇಂದ್ರನಂತೆ ಎಂದೂ ನಿಮ್ಮಣ್ಣನಿಂದ ನೀನು ಪರತಂತ್ರನೇ ಆಗಿರು– ಮಹಾವಿಷ್ಣು ದೇವೇಂದ್ರ ಅಣತಿಯಂತೆ ನಡೆದುಕೊಂಡನು. ನೀನು ನಿಮ್ಮಣ್ಣನು ಹೇಳಿದಂತೆ ಕೇಳಬೇಕಾಗಿದೆ ಎಂದು ಸೀತೆ ಲಕ್ಷ್ಮಣನಿಗೆ ಹೇಳಿದಳು. ಈ ಮಾತಿಗೆ ಹಿನ್ನೆಲೆ ಕಥೆ ಹೀಗಿದೆ: ವಿಷ್ಣು ವಾಮನಾವತಾರದಲ್ಲಿ ವಾಮನನಾಗಿ ಕಶ್ಯಪ –ಅದಿತಿಯರಿಗೆ ಮಗನಾಗಿ ಹುಟ್ಟಿದನು. ವಿಷ್ಣುವಿಗೆ ಇಂಥ ಮುಂಚಿತವಾಗಿ ಇಂದ್ರನು ಅದಿತಿ– ಕಶ್ಯಪರಿಗೆ ಮಗನಾಗಿ ಹುಟ್ಟಿದನು. ಹಾಗಾಗಿ ಇಂದ್ರ ಅಣ್ಣ ನಾದನು ತಮ್ಮನಾಗಿ ವಿಷ್ಣು ಉಪೇಂದ್ರನಾದನು. ಆದ್ದರಿಂದ ವಿಷ್ಣು ಅಣ್ಣನಾದ ಇಂದ್ರನ ಮಾತನ್ನು ಕೇಳಬೇಕಾಯಿತು. ವಿಷ್ಣುವಿಗೆ ಬೇರೆ ಸ್ವಾತಂತ್ರ್ಯವಿರಲಿಲ್ಲ. ಹಾಗೆಯೇ ನೀನು ರಾಮನ ಆಜ್ಞೆಯನ್ನು ಪಾಲಿಸಬೇಕಾಗಿದೆ ಎಂದಳು ಸೀತೆ.

190. ಶ್ಲೋಕ – ಶೋಕ

190. 14–70. ಅನುವಾದದಲ್ಲಿ ಟಿಪ್ಪಣಿಗಳನ್ನು ಸಾಮಾನ್ಯವಾಗಿ ದೊಡ್ಡಬೆಲೆಯವರು ಕೊಡುವುದಿಲ್ಲ. ಅಪರೂಪಕ್ಕೆ ಅಲ್ಲೊಂದು ಇಲ್ಲೊಂದು ಟಿಪ್ಪಣಿಯನ್ನು ಕೊಡುತ್ತಾರೆ. ಉದಾಹರಣೆಗೆ ಪುಟ 87 ರಲ್ಲಿ ಶ್ಲೋಕ 14 –70ರಲ್ಲಿ ಲೋಕವು ಶ್ಲೋಕ ರೂಪವನ್ನು ಪಡೆಯಿತೇ ಆ ಮಹಾನುಭಾವನ ವಾಲ್ಮೀಕಿ ಮುನಿ ಎಂಬಲ್ಲಿ ಮಾನಿಷಾದ ಪ್ರತಿಷ್ಠಾಂ.. ಶ್ಲೋಕವನ್ನು ಟಿಪ್ಪಣಿಯಾಗಿ ಉಲ್ಲೇಖಿಸಿದ್ದಾರೆ.

* **ಮಾನಿಷಾದ ಪ್ರತಿಷ್ಠಾಂತ್ವಂ ಆಗಮಃ ಶಾಶ್ವತೀಸ್ಸಮಾಃ ।**
ಯತ್ಕ್ರೌಂಚ ಮಿಥುನಾದೇಕಮವಧೀಃ ಕಾಮ ಮೋಹಿತಂ ॥
(ಇದೇ ಮುನಿಮುಖದಿಂದ ಹೊರಟ ಶೋಕವು ಶ್ಲೋಕವಾದುದು)

ಅಧ್ಯಾಯ 15

191. ಲವಣಾಸುರನ ಕಥೆ

191. 15–4. ತಪಸ್ವಿಗಳು ತಮ್ಮ ತಪಃಶಕ್ತಿಯನ್ನು ವ್ಯರ್ಥಮಾಡಬಾರದು. ಕ್ಷತ್ರಿಯರು ಧರ್ಮಕ್ಕನುಸಾರವಾಗಿ ಶತ್ರು ನಾಶಕ್ಕೆ ಸಮರ್ಥರಿರುವಾಗ ಅವರನ್ನು ಮೊರೆಹೋಗಬೇಕು. ರಾಜನಾದವನು ದುಷ್ಟರ ನಾಶದ ಕಾರ್ಯವನ್ನು ಕೈಗೊಳ್ಳದಿದ್ದರೆ ತಮ್ಮ ತಪೋಶಕ್ತಿಯನ್ನು ಬಳಸಿ ಶಾಪಾನುಗ್ರಹದಿಂದ ದುಷ್ಟದಮನ ಮಾಡಬೇಕು.

ಹೀಗೆ ಲೋಕಕಲ್ಯಾಣಕ್ಕೆ ರಾಜರು ಮುನಿಗಳು ಪರಸ್ಪರ ಪೂರಕವಾಗಿರಬೇಕು ಎಂದು ಶಾಸ್ತ್ರಗಳು ಹೇಳುತ್ತವೆ. ಹಾಗಾಗಿ ತಾವೇ ನಿಗ್ರಹಿಸಬಹುದಾದ ಶಕ್ತಿಯನ್ನು ಹೊಂದಿದ್ದರೂ ರಕ್ಷಕನಾದ ರಾಮನನ್ನು ಲವಣಾಸುರನ ವಧೆಗಾಗಿ ಪ್ರಾರ್ಥಿಸಿದರು.

ಅಧ್ಯಾಯ 16

192. ಗೊಂಬೆಗಳ ಮೇಲುಹೊದಿಕೆ

192. 16–17. ಸ್ತನೋತ್ತರೀಯಾಣಿ ಭವಂತಿ– ಗೊಂಬೆಗಳ ಮೊಲೆಯ ಮೇಲು ದದವೋಲು ಎಂಬುದನ್ನು ದೊಡ್ಡಬೆಲೆಯವರು ಹೊದಿಕೆಗಳನ್ನಾಗಿ ಎಂದಷ್ಟೇ ಅನುವಾದಿಸಿದ್ದಾರೆ. ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಅನುವಾದ ಮಾಡಿರಬಹುದು.

193. ಬಿಟ್ಟ ಶ್ಲೋಕಗಳು

193. 16–60. ಮತ್ತು 16–65ನೆಯ ಶ್ಲೋಕಗಳನ್ನು ಅನುವಾದಿಸದೆ ಬಿಟ್ಟಿದ್ದಾರೆ ಅವುಗಳು ಶೃಂಗಾರದ ಶೈಲಿಯಲ್ಲಿದ್ದು, ಕುಚ ನಿತಂಬಗಳ ಪ್ರಸ್ತಾಪವಿದೆ.

ಅಧ್ಯಾಯ 17

194. ಸುಧರ್ಮಾ

194. 17–27. ಸುಧರ್ಮಾ – ದೇವೇಂದ್ರನ ಒಡ್ಡೋಲಗದ ಸಭೆಯ ಹೆಸರು

195. 18 ಮಂದಿ ಅಧಿಕಾರಿಗಳು

195. 17–68. 18 ಮಂದಿ ಅಧಿಕಾರಿಗಳು ಇವರು : 1. ಮಂತ್ರಿ 2. ಪುರೋಹಿತ 3. ಯುವರಾಜ, ಸೇನಾಪತಿ, ದ್ವಾರಪಾಲ, ಅಂತರ್ದೇಶಿಕ, ಕಾರ್ಯಾಧ್ಯಕ್ಷ, ಕೋಶಾಧ್ಯಕ್ಷ, ಅರ್ಥ ವಿನಿಯೋಗಿ, ಪ್ರವೇಷ್ಟಾ, ನಗರಾಧ್ಯಕ್ಷ, ಕಾರ್ಯನಿರ್ಮಾಣ ಕೃತ್, ಧರ್ಮಾಧ್ಯಕ್ಷ, ಸಭಾಧ್ಯಕ್ಷ, ದಂಡ ಪಾಲ, ದುರ್ಗ ಪಾಲ, ರಾಷ್ಟ್ರಾಂತ ಪಾಲ, ಅಟವೀ ಪಾಲ.

196. ಷಡ್ಗುಣ – ಷಡ್ಬಲ

196. 17–67. ಷಡ್ಗುಣ(ರಾಜ್ಯ ಆಡಳಿತಕ್ಕೆ ಸಂಬಂಧಿಸಿದಂತೆ) ಸಂಧಿ, ವಿಗ್ರಹ ಯಾನ, ಅಸನ, ದ್ವೇಧ, ಆಶ್ರಯ.

17–67ಷಡ್ಬಲ–(ಸೈನಿಕ ಬಲಕ್ಕೆ ಸಂಬಂಧಿಸಿದಂತೆ) ಮೌಲ, ಧೃತ, ಸುಹೃತ್ , ಕ್ಷೌಣಿ, ದ್ವಿಪದ, ಆಟವಿಕ.

197. ಲೋಕಪಾಲ್ವರು ನಾಲ್ವರು

197. 17–77, ನಾಲ್ವರು ಲೋಕ ಪಾಲಕರು: ಇಂದ್ರ, ವರುಣ, , ಕುಬೇರ, ಯಮ. 5ನೇ ಲೋಕಪಾಲ ಅತಿಥಿ ರಾಜ.

ಪಂಚಭೂತಗಳು: ಆಕಾಶ, ಭೂಮಿ, ಅಪಃ, ತೇಜ, ವಾಯು. 6ನೇ ಭೂತ ಅತಿಥಿ ರಾಜ.

ಸಪ್ತಕುಲ ಪರ್ವತಗಳು– ಮಹೇಂದ್ರ, ಮಲಯ, ಸಹ್ಯಾದ್ರಿ, ಶಕ್ತಿಮಾನ್, ಋಕ್ಷ, ವಿಂಧ್ಯ, ಪಾರಿಯಾತ್ರ. 8ನೇ ಕುಲ ಪರ್ವತ ಅತಿಥಿ ರಾಜ.

ಅಧ್ಯಾಯ 18

198. ಅನೀಕಿನಿ ಸೇನಾಗಾತ್ರ

198. 18–10. ಅನೀಕಿನಿ– 2187 ಆನೆ 6561 ಕುದುರೆ 10 935 ಕಾಲಾಳು ಇರುವ ಸೇನೆ ಹೆಸರು. ಇವಕ್ಕೆ ಮೂರು ಚಮೂಗಳು ಸಮ.

ಪಾರಿಯಾತ್ರ– ಪರ್ವತ: ಪಶ್ಚಿಮ ವಿಂಧ್ಯ ಪರ್ವತ ಸಾಲಿಗೆ ಸೇರಿದ ಅರಾವಳಿ ಪರ್ವತ ಶ್ರೇಣಿಗೆ ಪಾರಿಯಾತ್ರ ಎಂದು ಕರೆಯುವರು.

199. ದಶದಿಕ್ಕುಗಳು

199. 18–38. ದಶದಿಕ್ಕು: ಪೂರ್ವ, ಪಶ್ಚಿಮ, ಉತ್ತರ. ದಕ್ಷಿಣ, ಈಶಾನ್ಯ, ನೈರುತ್ಯ, ವಾಯುವ್ಯ, ಆಗ್ನೇಯ, ಊರ್ಧ್ವದೆಸೆ, ಅಧೋದೆಸೆ .

200. ಕಾಕಪಕ್ಷ

200. 18–43. ಕಾಕಪಕ್ಷ: ದೀರ್ಘವಾಗಿ ಬೆಳೆದಿರುವ ಬಾಲಕರ ಕೇಶ. ಜುಲ್ಫಿ ಕೂದಲು, ಬಾಲಕರ ಜುಟ್ಟು, ಕೆನ್ನೆಯಲ್ಲಿ ಜೋಲುವ ಕೂದಲು.

ಅಧ್ಯಾಯ 19

201. ಚಂದ್ರನ ಕ್ಷಯಾಭಿವೃದ್ಧಿಗಳು

201. 19– 48. ದಕ್ಷ ಶಾಪವು ಚಂದ್ರನಿಗೆ ಕ್ಷಯರೋಗವನ್ನು ಮಾಡಿದಂತೆ. ಹಿಂದೂ ಪುರಾಣಗಳ ಪ್ರಕಾರ ದಕ್ಷ ಎನ್ನುವ ರಾಜನಿಗೆ 27 ಜನ ಹೆಣ್ಣುಮಕ್ಕಳಿರುತ್ತಾರೆ. ಅವನು ಚಂದ್ರನನ್ನು ಭೇಟಿಯಾಗಿ ತನ್ನ ಪುತ್ರಿಯರನ್ನು ಮದುವೆಯಾಗುವಂತೆ ಕೇಳಿಕೊಳ್ಳುತ್ತಾನೆ. ದಕ್ಷನ ಮಾತಿಗೆ ಇಲ್ಲ ಎನ್ನದೆ ಚಂದ್ರನು ಎಲ್ಲರನ್ನೂ ಮದುವೆಯಾಗುತ್ತಾನೆ. ಆದರೆ 27 ಹೆಂಡತಿಯರಲ್ಲಿ ಚಂದ್ರನಿಗೆ ರೋಹಿಣಿಯೆಂದರೆ ತುಂಬ ಪ್ರೀತಿ. ಆಕೆಯ ಜೊತೆಗೇ ಚಂದ್ರನು ಹೆಚ್ಚು ಸಮಯ ಕಳೆಯಲು ಶುರು ಮಾಡುತ್ತಾನೆ. ಹೊಟ್ಟೆಉರಿ ತಾಳಲಾರದೆ ಮಿಕ್ಕ 26 ಚಂದ್ರನ ಪತ್ನಿಯರು ದಕ್ಷನ ಬಳಿ ತಮ್ಮ ಅಳಲು ತೋಡಿಕೊಂಡರು. ಇವರ ಮಾತಿನಿಂದ ಕುದ್ದುಹೋದ ದಕ್ಷನು ಚಂದ್ರನನ್ನು ಮತ್ತೆ ಸಂಧಿಸಿ 27 ಹೆಂಡತಿಯರಿಗೆ ಸಮನಾಗಿ ಸಮಯ ಮೀಸಲಿಡಬೇಕು ಎಂದು ಕೇಳಿದ. ಇದಕ್ಕೆ ಒಪ್ಪದ ಚಂದ್ರನು ತನಗೆ ರೋಹಿಣಿ ಎಂದರೆ ಇಷ್ಟ. ಆಕೆಯ ಜೊತೆಗೇ ಹೆಚ್ಚು ಸಮಯ ಕಳೆಯುವುದಾಗಿ ಹೇಳಿದ. ಇದರಿಂದ ಕೋಪಗೊಂಡ ದಕ್ಷನು ಚಂದ್ರನ ಗಾತ್ರ ಕ್ಷೀಣಿಸುತ್ತಾ ಹೋಗುವಂತೆ ಶಾಪ ಕೊಟ್ಟ. ಇದನ್ನು ಕಂಡ ದೇವಾದಿ ದೇವತೆಗಳಲ್ಲರೂ ಸಭೆ ಸೇರಿ ದಕ್ಷನೊಂದಿಗೆ ರಾಜಿ ಮಾತುಕತೆಗೆ ಕುಳಿತರು. ಚಂದ್ರನು ಎಲ್ಲರೊಂದಿಗೂ ಸಮಯ ಕಳೆಯುತ್ತಾನೆ. ಅವನಿಗೆ ಕೊಟ್ಟಿರುವ ಶಾಪವನ್ನು ವಾಪಸ್ ಪಡೆಯುವಂತೆ ಕೋರಿದರು. ಅದು ಶಾಪವಾದ ಕಾರಣ ಪೂರ್ಣ ಪ್ರಮಾಣದಲ್ಲಿ ಮರಳಿ ಪಡೆಯಲು ಸಾಧ್ಯವಿಲ್ಲ ಎಂದು ಹೇಳಿದ ದಕ್ಷನು ಅದರ ಪರಿಮಾಣವನ್ನು ಕಡಿಮೆ ಮಾಡಿದ. ಅಲ್ಲಿಂದೀಚೆಗೆ ಚಂದ್ರನು ಪೂರ್ಣಿಮೆ ಹತ್ತಿರವಾಗುತ್ತಿದ್ದಂತೆ ಹಿಗ್ಗುತ್ತಾ, ಅಮಾವಾಸ್ಯೆ ಹತ್ತಿರವಾಗುತ್ತಿದ್ದಂತೆ ಕುಗ್ಗುತ್ತಾ ಹೋಗುತ್ತಾನೆ. ಅಲ್ಲದೆ ಪ್ರತೀ ತಿಂಗಳು 27 ನಕ್ಷತ್ರಗಳಿಗೂ ಭೇಟಿ ನೀಡಿ ಮುಂದುವರೆಯುತ್ತಾನೆ ಎಂದು ಭಾರತೀಯ ಪೌರಾಣಿಕ ಕತೆಗಳು ಹೇಳುತ್ತವೆ. (ಪುರಾಣಭಾರತಕೋಶ)

****

ಅನುಬಂಧ–3

ರಘುವಂಶದ ಕನ್ನಡ ಅನುವಾದಗಳು

(ಕೃತಿಗಳು ಮತ್ತು ಅನುವಾದಗಳು)

1. **ರಘುವಂಶ ಸಾರ(ಒಂದನೇ ಭಾಗ, 1ರಿಂದ 9 ಸರ್ಗಗಳು)** ಗದ್ಯಾನುವಾದ 1951 ಲೇಖಕ : ಸಿ. ಕೆ ವೆಂಕಟರಾಮಯ್ಯ, ಪ್ರಕಟಣೆ : ಸ್ವತಂತ್ರ ಕರ್ನಾಟಕ ಪವರ್ ಪ್ಲಸ್, ಬೆಂಗಳೂರು, ಮುದ್ರಣ 1951

2. **ರಘುವಂಶ (ಒಂದನೇ ಸರ್ಗ)** ಮೂಲ ಕನ್ನಡ ಇಂಗ್ಲಿಷ್ ಅನುವಾದ ಟಿಪ್ಪಣಿ. ಅನುವಾದ: ಪ್ರೊ. ಎಸ್ಸಾರ್ ಸುಬ್ರಹ್ಮಣ್ಯಂ(ಮುಖ್ಯಸ್ಥರು ಸಂಸ್ಕೃತ ವಿಭಾಗ, ಸಿಂಧಿ ಕಾಲೇಜು ಕೆಂಪಾಪುರ ಬೆಂಗಳೂರು, ಪ್ರಕಾಶನ: ಬೆಂಗಳೂರು ನಗರ ವಿಶ್ವವಿದ್ಯಾಲಯ ಸೆಂಟ್ರಲ್ ಕಾಲೇಜು ಬೆಂಗಳೂರು, ಮುದ್ರಣ 2021, ಪುಟ 120

3. **ರಘುವಂಶ ಕಾವ್ಯ**(ಮೂಲ ಅನುವಾದ ವಿವರಣೆ) ಲೇಖಕ: ಬಿ ಗೋಪಾಲ ರಾವ್, ಮಂಡ್ಯ ರಾಮಕೃಷ್ಣನಗರ ಮೈಸೂರು. ಪ್ರಕಾಶನ: ಶೈಲಶ್ರೀ ಸಾಹಿತ್ಯ ಪ್ರಕಾಶನ ಮೈಸೂರು 57 0023 ಮುದ್ರಣ: 1995(1) ಪುಟಗಳು–1030

4. **ಕನ್ನಡ ಕಾಳಿದಾಸ ಮಹಾಸಂಪುಟ**(ರಘುವಂಶ ಮತ್ತು ಕಾಳಿದಾಸನ ಇತರ ಕಾವ್ಯ ನಾಟಕಗಳ ಸಮಗ್ರಪದ್ಯಾನುವಾದ ಮೂಲಸಹಿತ) ಎಸ್ ವಿ ಪರಮೇಶ್ವರ ಭಟ್ಟ, ಪ್ರಕಟಣೆ: ಸ್ನಾತಕೋತ್ತರ ಕೇಂದ್ರ, ಮಂಗಳಗಂಗೋತ್ರಿ, ಕೊಣಾಜೆ, ಮಂಗಳೂರು ದಕ್ಷಿಣ ಕನ್ನಡ. 1972, ಪುಟಗಳು–1200, ಬೆಲೆ 35/– ರೂಗಳು.

5. **ರಘುವಂಶ**(ಸರ್ಗ1 ಮತ್ತು 10) (ಮೂಲ ಅನ್ವಯ ತಾತ್ಪರ್ಯ, ಟಿಪ್ಪಣಿ) ಅನುವಾದಕರು ಸಚ್ಚಿದಾನಂದೇಂದ್ರಸರಸ್ವತಿ ಸ್ವಾಮಿ, ಹೊಳೆನರಸೀಪುರ. ಪ್ರಕಟಣೆ 1930, ಅಧ್ಯಾತ್ಮಪ್ರಕಾಶ ಕಾರ್ಯಾಲಯ, ಬೆಂಗಳೂರು.

6. **ರಘುವಂಶ**(ಭಾಮಿನಿ ಷಟ್ಪದಿ) ನರಹರಿ ರಾಮಚಂದ್ರರಾವ್, ಕನಮಡಿ(1882), ಪ್ರಕಟಣೆ : ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ.

7. ರಘುವಂಶ (1875) ಕಾವ್ಯ, ಅನುವಾದ ರಾಮಚಂದ್ರ ಶ್ರೀನಿವಾಸ ನರೇಗಲ್ಲ

8. ದಿಲೀಪ ಚರಿತ್ರೆ (ರಘುವಂಶ) (ಕುಸುಮಷಟ್ಪದಿ), 1897, ಅನುವಾದ ಎಸ್ ಜಿ ನರಸಿಂಹಾಚಾರ್, ಪ್ರಕಟಣೆ: ಕರ್ನಾಟಕ ಗ್ರಂಥಮಾಲೆ, ಮೈಸೂರು.

9. ಅಜನೃಪ ಚರಿತೆ(ರಘುವಂಶ) ಷಟ್ಪದಿ ಕಾವ್ಯ, ಎಸ್ ಜಿ ನರಸಿಂಹಾಚಾರ್ಯ, ಪ್ರಕಟಣೆ: ಕರ್ನಾಟಕ ಗ್ರಂಥ ಮಾಲೆ, ಮೈಸೂರು.

10. ಶ್ರೀರಾಮ ಚರಿತ್ರೆ(ಆರುಸಂಧಿಗಳ ಕುಸುಮಷಟ್ಪದಿ ಕಾವ್ಯ) 1, 913, ಅನುವಾದ ಎಂ ಕೃಷ್ಣಪ್ಪ, ಪ್ರಕಟಣೆ ಕರ್ನಾಟಕ ಗ್ರಂಥಮಾಲೆ – 62, ಮೈಸೂರು.

11. ರಘುವಂಶ (2ನೇ ಸರ್ಗ, ಪದ್ಯರೂಪ) ಅನುವಾದಕರು–ಶಾಂತಕವಿ(1856–1920)

12. ರಘುಕುಲ ಚರಿತಂ (ಎರಡು ಭಾಗಗಳು, ಸರ್ಗ 1ರಿಂದ 8, ಸರ್ಗ 9ರಿಂದ 15

ಅನುವಾದಕ : ದೊಡ್ಡಬೆಲೆ ನಾರಾಯಣಶಾಸ್ತ್ರಿ 1913(1), 1923(2), ಪುಟ–113_143, ಪ್ರಕಟಣೆ: ಶಾರದೆ ಆಫೀಸ್ ಬೆಲೆ ಸೀಗೇಬೇಲಿ, ಬೆಂಗಳೂರು

13, ರಘುಪತಿ ಚರಿತಂ, 1918, ಅನುವಾದಕರು ಕೆಆರ್ ನರಸಿಂಹಯ್ಯ, ಪ್ರಕಟಣೆ: ಕರ್ನಾಟಕ ಗ್ರಂಥಮಾಲೆ– 81, ಓರಿಯಂಟಲ್ ಪ್ರೆಸ್, ಮೈಸೂರು.

14. ರಘುವಂಶ, 1950, ಕೆ ನರಸಿಂಹಾಚಾರ್ಯ, ಪ್ರಕಟಣೆ: ಬೆಂಗಳೂರು ಎಲೆಕ್ಟ್ರಿಕ್ ಮುದ್ರಾಕ್ಷರ ಶಾಲೆ, ಬೆಂಗಳೂರು.

15. ರಘುವಂಶ ರಹಸ್ಯ ಅಥವಾ ಸೂರ್ಯವಂಶದ ಅರಸರು, 1 931, ಲೇಖಕ ಬಸವರಾಜ ಶಾಸ್ತ್ರಿ, ಮಲ್ಲಿನಾಥ ಶಾಸ್ತ್ರಿ ಕೋಡಿಕೊಪ್ಪ ಮಠ, ಪ್ರಕಟಣೆ: ಹಿತಚಿಂತಕ ಪ್ರಿಂಟಿಂಗ್ ಪ್ರೆಸ್ ಬಿಜಾಪುರ

16. ಮಹಾಕವಿ ಕಾಳಿದಾಸನ ರಘುವಂಶ, (ಒಂದು ಅಧ್ಯಯನ, ಒಂಬತ್ತು ವಿಮರ್ಶಾ ಲೇಖನಗಳು, ವಿವಿಧ ಲೇಖಕರು) ಪ್ರಕಟಣೆ ಸಂಸ್ಕೃತ ವಿಭಾಗ ಆದರ್ಶ ಮಹಾವಿದ್ಯಾಲಯ, ಆರ್ ಟಿ ನಗರ, ಬೆಂಗಳೂರು–32, ಮುದ್ರಣ: 1994,ಪುಟ 62.

17. ರಘುವಂಶ(ಸರ್ಗ 1), ಮೂಲ ಅನ್ವಯ ತಾತ್ಪರ್ಯ, 1969, ಲೇಖಕ: ಕೆ ನರಸಿಂಹಾಚಾರ್, ಪ್ರಕಟಣೆ ಎಸ್ ವಿ ಭೀಮ ಭಟ್ಟರು, ಚಾಮರಾಜೇಂದ್ರ ಸಂಸ್ಕೃತ ಮಹಾ ಪಾಠಶಾಲಾ, ಬೆಂಗಳೂರು. ಪುಟ 34, 1969.

18. ರಘುವಂಶ ಸಾರಸಂಗ್ರಹ, ಐರೋಡಿ ಶಿವರಾಮಯ್ಯ ಸುಬ್ರಾಯ,

19. ರಘುವಂಶ(ಕಾವ್ಯ) ಅನುವಾದಕರು : ಎಚ್ ಎಸ್ ವೆಂಕಟೇಶಮೂರ್ತಿ, ಪ್ರಕಟಣೆ ಋಜುವಾತು ಮತ್ತು ಕನ್ನಡಪ್ರಭಗಳಲ್ಲಿ ಪ್ರಕಟಿತ. ಪ್ರಕಟಣೆ (1923?)

20. ರಘುವಂಶ(ಷಟ್ಪದಿ) 1932, ಲೇಖಕ: ವೈ ನಾಗೇಶಶಾಸ್ತ್ರಿ, ಪ್ರಕಟಣೆ : ಬಳ್ಳಾರಿ(?)

21. ಕನ್ನಡ ರಘುವಂಶ(ಕಾವ್ಯಾನುವಾದ) ಪಠ್ಯ ಆವೃತ್ತಿ –1955, ಲೇಖಕ ಎಸ್ ವಿ ಪರಮೇಶ್ವರ ಭಟ್ಟ ಪ್ರಕಟಣೆ ಶಾರದಾ ಮಂದಿರ ಮೈಸೂರು.

22. ರಘುವಂಶ(ಷಟ್ಪದಿ) ಅನುವಾದಕರು: ಬುರುಗನಹಳ್ಳಿ ಭೀಮಸೇನ ಶರ್ಮ, ಪ್ರಕಟಣೆ ಲೇಖಕ, ಎನ್ ಆರ್ ಕಾಲೋನಿ ಬೆಂಗಳೂರು.

ರಘುವಂಶವನ್ನು ಕುರಿತ ಲೇಖನಗಳು

1. ರಘುವಂಶದಲ್ಲಿ ರಾಮಾಯಣ(1996) (ಪುಟ 141– 148), ಲೇಖಕ: ಶ್ರೀರಾಮ ಭಟ್ಟ, ಗ್ರಂಥ: ಶ್ರೀರಾಮ ಸಂಭವ(ಲೇಖನಗಳು) ಸಂಪಾದಕರು: ಪ್ರೊ. ಜಿ ವೆಂಕಟಸುಬ್ಬಯ್ಯ ಮತ್ತು ಶ್ರೀ ರಾಮಚಂದ್ರಯ್ಯ. ಪ್ರಕಟಣೆ: ಶ್ರೀ ಜಯರಾಮ ಸೇವಾ ಮಂಡಳಿ, 8ನೇ ಬ್ಲಾಕ್, ಜಯನಗರ ಬೆಂಗಳೂರು.

2. ರಘುವಂಶದ ನಾಯಕರು (ಅದೇ, ಪುಟ 149–170)

3. ರಘುವಂಶವು ಪೂರ್ಣವಾಗಿದೆಯೇ: (ಪುಟ 149–170) ಲೇಖಕರು : ಪ್ರೊ. ಕೆ ಟಿ ಪಾಂಡುರಂಗಿ, ಗ್ರಂಥ: ಸಂಸ್ಕೃತ ಕವಿ–ಕಾವ್ಯ ದರ್ಶನ, 1999, ಪ್ರಕಟಣೆ: ಮನೋಹರ ಗ್ರಂಥಮಾಲಾ, ಧಾರವಾಡ.

4. ರಘುವಂಶ (ಕೃತಿ ಪರಿಚಯ) (ಪುಟ 21–32) ಲೇಖಕ ಎಸ್ ರಾಮಚಂದ್ರರಾವ್, ಗ್ರಂಥ: ಕಾಳಿದಾಸನ ಕಾವ್ಯಗಳು, 1966, ಪ್ರಕಟಣೆ ಮೈಸೂರು ವಿಶ್ವವಿದ್ಯಾನಿಲಯ, ಪ್ರಚಾರೋಪನ್ಯಾಸಮಾಲೆ, ಮೈಸೂರು. ಪುಟ 64, ಬೆಲೆ 0.25 ರೂ.

5. ರಘುವಂಶ ಪಾತ್ರಗಳು (ಪುಟ 18–222) 1979, ಲೇಖಕ ಕೆಪಿ ಮುತ್ತಣ್ಣ. ಗ್ರಂಥ: ವಿಲಿಯಂ ಶೇಕ್ಸ್ಪಿಯರ್ ಮತ್ತು ಮಹಾಕವಿ ಕಾಳಿದಾಸ. ಪ್ರಕಟಣೆ ಕೆ ಪಿ ಮುತ್ತಣ್ಣ ಬಲಮುರಿ ಹಳ್ಳಿ ಕೊಡಗು.

6. **ರಘುವಂಶ (ಕಾವ್ಯ ಪರಿಚಯ,** (ಪುಟ 304– 353), ಗದ್ಯ, ಲೇಖಕ ಎಂ.ಲಕ್ಷ್ಮೀನರಸಿಂಹಯ್ಯ, ಗ್ರಂಥ: ಕಾಳಿದಾಸ(ಜೀವನ– ಕೃತಿ ಪರಿಚಯ) 1 955,

ಪ್ರಕಟಣೆ ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ– 31, ಪುಟ 360, ಬೆ ಲೆ ರೂ.2/–

7. **ರಘುವಂಶ ಕೃತಿ ಪರಿಚಯ** (ಪುಟ–54–59) , ಲೇಖಕ ಪಂಡಿತ ಸಿಆರ್ ಹೊಸಳ್ಳಯ್ಯ, ಗ್ರಂಥ: ಸಂಸ್ಕೃತಿ(ಸಂಸ್ಕೃತ ಸಾಹಿತ್ಯ ಚರಿತ್ರೆ) ಪ್ರಕಟಣೆ: ಪಂಡಿತ ಸಿಆರ್ ಹೊಸಳ್ಳಯ್ಯ, ಸರ್ಕಾರಿ ಬಾಲಕರ ಹೈಸ್ಕೂಲು, ತಿಪಟೂರು. ಬೆಲೆ 2/– ರೂ., 1 956

ಅನುಬಂಧ – 4

ಸಹಾಯಕ ಸಾಹಿತ್ಯ

(ಕನ್ನಡ)

1. **ಕನ್ನಡ ಮಾರ್ಗಕಾವ್ಯದ ಮೇಲೆ ಕಾಳಿದಾಸನ ಪ್ರಭಾವ**(ಮಹಾಪ್ರಬಂಧ), 1 995, ಲೇಖಕ: ಡಾ. ಶ್ರೀರಾಮ ಭಟ್ಟ, ಪ್ರಕಟಣೆ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ , ಬೆಂಗಳೂರು ಪುಟಗಳು 251

2. **ಕುಮಾರಸಂಭವ ಹಾಗೂ ಗಿರಿಜಾಕಲ್ಯಾಣ**(ಮಹಾಪ್ರಬಂಧ) ಲೇಖಕ ಡಾ. ಪ್ರಮೀಳಾ ಮಾಧವ್, 2001, ಪುಟ 283, ಪ್ರಕಟಣೆ: ಪ್ರಿಯದರ್ಶಿನಿ ಪ್ರಕಾಶನ, ವಿಜಯನಗರ, ಬೆಂಗಳೂರು 40.

3. **ಕಾಳಿದಾಸನ ಚರಿತ್ರೆ(ಜೀವನ ಚರಿತ್ರೆ),** ಲೇಖಕ ಗುರುನಾಥ ವೆಂಕಟೇಶ ಕಿತ್ತೂರ, 1912(1), 1985(2). ಪುಟ – 66, ಪ್ರಕಟಣೆ ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

4. **ಸಂಸ್ಕೃತಿ** ಲೇಖಕ : ಪಂಡಿತ ಸಿಆರ್ ಹೊಸಳ್ಳಯ್ಯ, ಪ್ರಕಟಣೆ : ಸಿಆರ್ ಹೊಸಳ್ಳಯ್ಯ, ಸರ್ಕಾರಿ ಬಾಲಕರ ಹೈಸ್ಕೂಲು, ತಿಪಟೂರು.

5. **ಕಾಳಿದಾಸ(ಜೀವನ ಕೃತಿಗಳ ಪರಿಚಯು)** 1955. ಲೇಖಕ ಎಂ.ಲಕ್ಷ್ಮೀನರಸಿಂಹಯ್ಯ, , ಪ್ರಕಟಣೆ ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ– 31, ಪುಟ136,

6. **ಕನ್ನಡ ಕಾಳಿದಾಸ ಮಹಾಸಂಪುಟ**(ಕಾಳಿದಾಸನ ಸಮಗ್ರ ಕಾವ್ಯ ಮತ್ತುನಾಟಕಗಳು. (ಸಮಗ್ರ ಪದ್ಯಾನುವಾದ ಮೂಲ ಸಹಿತ) ಎಸ್ ವಿ ಪರಮೇಶ್ವರ ಭಟ್ಟ, ಪ್ರಕಟಣೆ: ಸ್ನಾತಕೋತ್ತರ ಕೇಂದ್ರ, ಮಂಗಳಗಂಗೋತ್ರಿ ಕೊಣಾಜೆ ಮಂಗಳೂರು ದಕ್ಷಿಣ ಕನ್ನಡ. ಪುಟಗಳು–1200.

7. **ಸಂಸ್ಕೃತ ನಾಟಕ**(ಸಾಹಿತ್ಯ ಚರಿತ್ರೆ) 1955, ಲೇಖಕ ಡಾ ಎ. ಆರ್ . ಕೃಷ್ಣಶಾಸ್ತ್ರಿ, ಪ್ರಕಟಣೆ : ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

8. **ಕಾಳಿದಾಸನ ನಾಟಕಗಳು**(ಪರಿಚಯ) 1962, ಲೇಖಕ : ಡಾ. ಕೆ ಕೃಷ್ಣಮೂರ್ತಿ, ಪ್ರಕಟಣೆ ಪ್ರಚಾರ ಪುಸ್ತಕ ಮಾಲೆ, ಪುಟಗಳು –100., ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

9. **ಆರ್ಯಧರ್ಮ**(ಹಿಂದೂ ಧರ್ಮ ಪರಿಚಯ) 1955, ಲೇಖಕ ಸಿ. ಎನ್. ಶಾಸ್ತ್ರಿ, ಅಡ್ವೋಕೇಟ್, ಸನ್ನಿಧಿ ರಸ್ತೆ, ಬೆಂಗಳೂರು. ಪುಟ– 130, ಪ್ರಕಟಣೆ : ಲೇಖಕರು ಬೆಂಗಳೂರು.

10. **ಶ್ರೀರಾಮ ಸಂಭವ** (ಲೇಖನಗಳು) ಸಂಪಾದಕರು: ಶ್ರೀರಾಮ ಭಟ್ಟ, ಪ್ರೊ. ಜಿ ವೆಂಕಟಸುಬ್ಬಯ್ಯ ಮತ್ತು ಶ್ರೀ ರಾಮ ಚಂದ್ರಯ್ಯ. ಪ್ರಕಟಣೆ: ಶ್ರೀ ಜಯರಾಮ ಸೇವಾ ಮಂಡಳಿ, 8ನೇ ಬ್ಲಾಕ್, ಜಯನಗರ ಬೆಂಗಳೂರು.

10. **ಕನ್ನಡ ರಾಮಾಯಣ ಗ್ರಂಥಸೂಚಿ,** 1998, ಲೇಖಕ : ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ, ಪ್ರಕಟಣೆ ಶ್ರೀ ಪ್ರೇಮಸಾಯಿ ಪ್ರಕಾಶನ ನಾಲ್ಕನೇ ಮುಖ್ಯರಸ್ತೆ, ವಿಜಯನಗರ ಬೆಂಗಳೂರು. ಪುಟ್ಟ 108.

11. **ಗುರು ಬಾಲ ಪ್ರಬೋಧಿಕಾ.** (ಸಂಸ್ಕೃತ– ಕನ್ನಡ) ಅಮರಕೋಶ(ಮೂಲ, ಅನ್ವಯ, ಟೀಕೆ), 1888: ಅನುವಾದಕರು: ದೊಡ್ಡಬೆಲೆ ನಾರಾಯಣಶಾಸ್ತ್ರಿ ಮತ್ತು ಇತರರು. ಪರಿಷ್ಕರಣ ಡಿ ಗಣಪತಿ ಶಾಸ್ತ್ರಿ, ಎರಡನೇ ಮುದ್ರಣ: 2011, ಪುಟ– 1099 , ಪ್ರಕಟಣೆ : ಪುಸ್ತಕ ಶಕ್ತಿ ಪ್ರಕಾಶನ, ಮೂರನೇ ಮುಖ್ಯರಸ್ತೆ ಟಾಟಾ ಸಿಲ್ಕ್ ಫಾರ್ಮ್, ಬಸವನಗುಡಿ, ಬೆಂಗಳೂರು.

12. **ರಘುವಂಶಂ**(1–19 ಸರ್ಗಗಳು) (ಸಂಸ್ಕೃತ)2002, ಸಂಪಾದಕರು: ನಾರಾಯಣರಾಮ ಆಚಾರ್ಯ, ಕಾವ್ಯತೀರ್ಥ, 600 ಪುಟಗಳು. ಪ್ರಕಟಣೆ: ಚೌಕಾಂಬ ಪಬ್ಲಿಷರ್ಸ್, ವಾರಾಣಸಿ.

13. **ರಘುವಂಶ**(ಸರ್ಗ 5)(ಮೂಲ+ಇಂಗ್ಲಿಷ್ ಅನುವಾದ) 1929. ಅನುವಾದಕರು: ರಾಮಕೃಷ್ಣ ಶುಕ್ಲ, ಪ್ರಕಟಣೆ ರಾಮನಾರಾಯಣ ಲಾಲ್, ಪಬ್ಲಿಷರ್ಸ್ ಮತ್ತು ಬುಕ್ ಸೆಲ್ಲರ್ಸ್, ಅಲಹಾಬಾದ್.

14. **ರಘುವಂಶ ಆಫ್ ಕಾಳಿದಾಸ**(ಸರ್ಗ 1–5) (ಇಂಗ್ಲಿಷ್)1925, ಲೇಖಕ: ಆರ್ ಡಿ ಕರ್ಮರ್ಕರ್ . ಪ್ರಕಟಣೆ ಚೌಕಾಂಬ ಸಂಸ್ಕೃತ ಪ್ರತಿಷ್ಠಾನ, ದೆಹಲಿ.

15. ರಘುವಂಶ ಆಫ್ ಕಾಳಿದಾಸ(ಸರ್ಗ 6–9) (ಇಂಗ್ಲಿಷ್)2003, ಲೇಖಕ: ಆರ್ ಡಿ ಕರ್ಮರ್ಕರ್ . ಪ್ರಕಟಣೆ ಚೌಕಾಂಬ ಸಂಸ್ಕೃತ ಪ್ರತಿಷ್ಠಾನ, ದೆಹಲಿ.

16. **ರಘುವಂಶ ಆಫ್ ಕಾಳಿದಾಸ**(ಸರ್ಗ 11–14) (ಇಂಗ್ಲಿಷ್)2003, ಲೇಖಕ: ಆರ್ ಡಿ ಕರ್ಮರ್ಕರ್ . ಪ್ರಕಟಣೆ : ಚೌಕಾಂಬ ಸಂಸ್ಕೃತ ಪ್ರತಿಷ್ಠಾನ, ದೆಹಲಿ.

17. **ಕಾಳಿದಾಸ** (ವಿಮರ್ಶೆ) (ಇಂಗ್ಲಿಷ್) ಲೇಖಕ: ಆರ್ ಡಿ ಕರ್ಮರ್ಕರ್ , 1960(1), 1971(2), ಪುಟ – 240, ಪ್ರಕಟಣೆ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

18. **ರಘುವಂಶ ಮಹಾಕಾವ್ಯಂ (ಪ್ರಕಾಶಿಕಾ ಮತ್ತು ಪದಾರ್ಥದೀಪಿಕಾ** ಎಂಬ ಎರಡು ಸಂಸ್ಕೃತ ವ್ಯಾಖ್ಯಾನಗಳ ಸಹಿತ), 2008, ಸಂಪಾದಕರು : ಪ್ರೊ. ರೇವಾಪ್ರಸಾದ್ ದ್ವಿವೇದಿ. ಪ್ರಕಟಣೆ: ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ–210 002, ಪುಟ–893

ಅನುಬಂಧ – 5

ರಘುವಂಶ ಕನ್ನಡ ಅನುವಾದದ ಮೊದಲ ಮುದ್ರಣದ ಮುಖಪುಟಗಳು

[illegible]

[illegible]

[illegible]

[illegible]

[illegible]

[illegible]

ಶ್ರೀ.

ಶ್ರೀ ಶಾರದಾಮ್ಬಾಯೈನಮಃ.

ಮಹಾಕವಿ ಕಾಳಿದಾಸಕೃತ ರಘುವಂಶ ಮಹಾಕಾವ್ಯವ

ಈ

ರ ಘು ಕು ಲ ಚ ರಿ ತಂ

(೧ನೆಯ ಭಾಗ—೧ಸರ್ಗ)

ಶ್ರೀ ಶಿವಗಂಗಾ ಮಠದ
ಶ್ರೀ "ಶಾರದಾ" ಮಾಸಪತ್ರಿಕಾ ಸಂಪಾದಕರಿಂದ
ಬ ರೆ ಯ ಲ್ಪ ಟ್ಟಿ

ಕೆ. ಎಸ್. ಕೃಷ್ಣಯ್ಯರ್ ಬಿ. ಎ., ಯವರ "ಬ್ರಿಟಿಷ್" ಮುದ್ರಾಲಯದಲ್ಲಿ
ಮುದ್ರಣಗೊಂಡು ಪ್ರಕಟವಾದುದು.

1913:

ಜಿಸ್ಟರ್ಡ್ ಕಾಪಿರೈಟ್]   ಬೆಂಗಳೂರು.   [ಕ್ರಯ ೩ ಆಣೆ.

ಶ್ರೀಃ

ಶ್ರೀ ಶಾರದಾಂಬಾಯೈನಮಃ.

ಮಹಾಕವಿ ಕಾಳಿದಾಸಕೃತ ರಘುವಂಶ ಮಹಾಕಾವ್ಯವೇ

ಈ

ರಘುಕುಲ ಚರಿತಂ

(೨ನೆಯ ಭಾಗ—೯ರಿಂದ ೧೧ ಸರ್ಗ)

ಶ್ರೀ ಶಿವಗಂಗಾ ಮಠದ
ಶ್ರೀ "ಶಾರದಾ" ಮಾಸಪತ್ರಿಕಾ ಸಂಪಾದಕರಿಂದ
ಬರೆಯಲ್ಪಟ್ಟು,

ಎಸ್. ಕೃಷ್ಣಯ್ಯರ್ ಬಿ. ಎ, ಯವರ "ಬ್ರಿಟಿಷ್" ಮುದ್ರಾಲಯದಲ್ಲಿ
ಮುದ್ರಣಗೊಂಡು ಪ್ರಕಟವಾದುದು.

1913.

 ಬೆಂಗಳೂರು. [ಕ್ರಯ [illegible]

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಕಾಳಿದಾಸ ಮಹಾಕವಿಗೆ ಇರುವ ಸ್ಥಾನ ಏನು ಎನ್ನುವುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಜಗತ್ತಿನಲ್ಲಿಯೇ ಪ್ರಸಿದ್ಧನಾದ ಕವಿ ಕಾಳಿದಾಸ. ಅವನು ರಚಿಸಿದ್ದೆಲ್ಲವೂ ಮಹಾನ್ ಕೃತಿಗಳೇ. ರಘುವಂಶವು ಸೂರ್ಯವಂಶದ ಮಹಾರಾಜರ ಚರಿತ್ರೆಯನ್ನು ಹೇಳುವ ಕಾವ್ಯ. ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ದೊಡ್ಡ ವಿದ್ವಾಂಸರಾಗಿದ್ದವರು. ಸಂಸ್ಕೃತದ ಪರಿಚಯ ಅಷ್ಟಾಗಿ ಇಲ್ಲದವರಿಗೆ ಕನ್ನಡ ಗದ್ಯಾನುವಾದವೇ ಸೂಕ್ತ. ಕಾಳಿದಾಸನ ರಘುವಂಶವನ್ನು ಗದ್ಯಾನುವಾದ ಮಾಡಿ ಕಾಳಿದಾಸನನ್ನು ಜನಮನಕ್ಕೆ ಹತ್ತಿರವಾಗಿಸಿದವರು ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು.

ಡಾ. ಅಜಕ್ಕಳ ಗಿರೀಶ ಭಟ್
ಅಧ್ಯಕ್ಷರು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ ಅಂಚೆ
ಮಲ್ಲತ್ತಹಳ್ಳಿ, ಬೆಂಗಳೂರು-೫೬೦೦೫೬

KUVEMPU BHASHA BHARATHI PRADHIKARA
KBBP 0483 PRICE Rs. 220/-
9 789391 812225
ರಘುಕುಲ ಚರಿತಂ